

.4·814 3

KAT ನ91
ಗ್ರಂಥ ಸ್ವಾಮ್ಯ ವಿಭಾಗ

ಶಾತವಾಹನ ಅವರ

# ಸಮ್ಮೋಹನಾಸ್ತ್ರ

( ಕಾದಂಬರಿ )

ಅನುವಾದ:
ಆರ್. ವಿ. ಕಟ್ಟೀಮನಿ

ರಚನಾ ಪ್ರಕಾಶನ
ಸಿಂಧನೂರು: ೫೮೪ ೧೨೮

ವಿತರಣೆ:
ಸಾಹಿತ್ಯ ಪ್ರಕಾಶನ
ಸಿಟಿ ಕ್ಲಿನಿಕ್ ಸಂಕೀರ್ಣ; ದಾಜೀಬಾನ್ ಪೇಟೆ
ಹುಬ್ಬಳ್ಳಿ: ೫೮೦ ೦೨೮

META ENTERED

ರಚನಾ ಪ್ರಕಾಶನ
ವ್ಯವಸಾಯ ಸೇವಾ ಸಹಕಾರ ಸಂಘದ ಹತ್ತಿರ
ಸಿಂಧನೂರು: ೫೮೪ ೧೨೮

894.814 3
KAT N91

ವಿತರಣೆ:
ಸಾಹಿತ್ಯ ಪ್ರಕಾಶನ
ಸಿಟಿ ಕ್ಲಿನಿಕ್ ಸಂಕೀರ್ಣ, ದಾಜಿಬಾನ್‌ಪೇಟೆ
ಹುಬ್ಬಳ್ಳಿ: ೫೮೦ ೦೨೮

49307

*SAMMOHANAASTRA : Kannada translation of Satavahana's Telugu novel by: R. V. Kattimani; Published by: Rachana Prakashana, Sindhanur:584 128.*

ಹಕ್ಕುಗಳು: ಆರ್. ವಿ. ಕಟ್ಟೀಮನಿ
ಮೊದಲ ಮುದ್ರಣ: 1991 ಪುಟಗಳು: iv+248 ಬೆಲೆ: 35-00
ಮುದ್ರಣ: ಭಾರತಿ ಪ್ರಿಂಟಿಂಗ್ ಪ್ರೆಸ್, ಗದಗ-ಬೆಟಗೇರಿ

# ಮುನ್ನುಡಿ

"ಸಮ್ಮೋಹನಾಸ್ತ್ರ" ಕಾದಂಬರಿ ಇತ್ತೀಚೆಗೆ ಬ್ರಿಟನ್‌ನಲ್ಲಿ ಹಗರಣವೆಬ್ಬಿಸಿದ ಭಾರತೀಯ ಸಂಜಾತೆ ಪಮೇಲಾ ಬೋರ್ಡೆಸ್ ಮತ್ತು ಅರವತ್ತರ ದಶಕದಲ್ಲಿ ಬ್ರಿಟನ್‌ನ ರಾಜಕಾರಣದಲ್ಲಿ ಬಿರುಗಾಳಿಯೆಬ್ಬಿಸಿದ 'ಪ್ರೊಫ್ಯೂಮೋ' ಸ್ಕ್ಯಾಂಡಲ್‌ನಲ್ಲಿ ಖ್ಯಾತಳಾದ ಕ್ರಿಸ್ಟೀನ್ ಕೀಲರ್‌ಗಳಿಂದ ಸ್ಫೂರ್ತಿ ಪಡೆದು ರಚಿತವಾದುದು. ಹಾಗೆಂದು ಇದು ಅವರುಗಳ ಜೀವನ ಚರಿತ್ರೆಯಲ್ಲ.

ಈ ಕಾದಂಬರಿಯನ್ನು ಅನುವಾದಿಸಲು ಒಪ್ಪಿಗೆ ಕೊಟ್ಟ ಮೂಲ ಲೇಖಕ ಶ್ರೀ ಶಾತವಾಹನರಿಗೂ, ತಮ್ಮ ವಾರಪತ್ರಿಕೆಯಲ್ಲಿ ೨೯ ವಾರಗಳ ಕಾಲ ಧಾರಾವಾಹಿಯಾಗಿ ಪ್ರಕಟಿಸಿದ ಸಂಪಾದಕ ಶ್ರೀ ಬಿ. ವಿ. ವೈಕುಂಠರಾಜುರವರಿಗೂ, ರಚನಾ ಪ್ರಕಾಶನದ ಮೂಲಕ ಹೊರತರುತ್ತಿರುವ ಮಿತ್ರ ಶ್ರೀ ಎಂ. ಕೃಷ್ಣಮೂರ್ತಿಯವರಿಗೂ ನನ್ನ ಕೃತಜ್ಞತೆಗಳು.

ಈ ಕಾದಂಬರಿಗೆ ಅಂದವಾದ ಮುಖಚಿತ್ರವನ್ನು ರಚಿಸಿಕೊಟ್ಟ ಶ್ರೀ ಚಂದ್ರನಾಥ್ ಹಾಗೂ ಚೊಕ್ಕವಾಗಿ ಮುದ್ರಿಸಿಕೊಟ್ಟ ವಿರುಪಾಕ್ಷಪ್ಪ ಪರಗಿಯವರಿಗೆ ನನ್ನ ಧನ್ಯವಾದಗಳು.

ಎಂದಿನಂತೆ ಈ ಕಾದಂಬರಿಯು ಹಸ್ತಪ್ರತಿಯಿರುವಾಗಲೇ ಓದಿ ಸಲಹೆ ಸೂಚನೆಗಳನ್ನಿತ್ತು ಸಹಕರಿಸಿದ ಕಿರಿಯ ಸೋದರ ಜೆ. ವಿ. ಪಾಟೀಲ, ಮಾವನಾದ ಶ್ರೀ ವೀರಭದ್ರಪ್ಪ ಭಾವಿಕಟ್ಟಿ, ಶ್ರೀ ಬಿ. ಎ. ಪಾಟೀಲ, ಅಳಿಯನಾದ ಶ್ರೀ ಶಶಿಕಾಂತ್ ಎಂ. ಭಾವಿಕಟ್ಟಿ, ಇವರಿಗೆ ನನ್ನ ನೆನಕೆಗಳು.

ಕೊನೆಯದಾಗಿ, ಓದುಗರ ಆದರವನ್ನು ಕೋರುತ್ತಾ,

**ಆರ್. ವಿ. ಕಟ್ಟೀಮನಿ**

ಪೋ: ತಡಕಲ್
ಬಳಗಾನೂರು ಮೂಲಕ
584 138

DEPARTMENT OF PUBLIC LIBRARIES

# ಅರ್ಪಣೆ

ಭಾವನವರಾದ
ಶ್ರೀ ಹೇಮುದ್ರೇಗೌಡ ಎಚ್. ಕ್ಯಾದಿಗ್ಗೇರಿ
ಕಲ್ಲೂರು, ಇವರಿಗೆ–

ಆರ್. ವಿ. ಕಟ್ಟೇಮನಿ

# ೧

## 1982 ಜೂನ್ 21.....................

ಆಕಾಶ ಮೇಘಾವೃತವಾಗಿತ್ತು. ರಾತ್ರಿ............ನಿಶ್ಯಬ್ದವಾಗಿತ್ತು. ದೂರದ ಮೇಘಗಳಲ್ಲಿ ಘರ್ಷಣೆ ಉಂಟಾಗಿ ಜೋರಾಗಿ ಗುಡುಗಿತು. ಕೊಂಚ ಹೊತ್ತು ಕಳೆದರೆ ಆಕಾಶದಲ್ಲಿ ಮೇಘಗಳು ಸಮುದ್ರಗಳಾಗುತ್ತವೆ. ಆಕಾಶದಲ್ಲಿನ ಸಮುದ್ರಗಳು ಜಲಪಾತಗಳಾಗುತ್ತವೆ. ಆಕಾಶದಲ್ಲಿನ ಜಲಪಾತಗಳು ನೆಲಕ್ಕೆ ಧುಮ್ಮಿಕ್ಕುತ್ತವೆ......... ಕೊಂಚ ಹೊತ್ತು ಕಳೆದರೆ ಭೂಮಿ ವರ್ಷಧಾರೆಯಲ್ಲಿ ಮೀಯುತ್ತದೆ........ ಅಂತಹ ರಾತ್ರಿಯಲ್ಲಿ ಆ ನಗರದ ಹೊರಭಾಗದ ಚಿಕ್ಕ ಕಾಲನಿಯ ಚಿಕ್ಕ ಮನೆಯೊಂದರಲ್ಲಿ ವ್ಯಕ್ತಿಯೊಂದು ಸಾವು ಬದುಕಿನ ಜೊತೆಗೆ ಹೋರಾಟ ನಡೆಸುತ್ತಾ ಬಳಲಿತ್ತು. ಆ ಮನೆ ಮಧ್ಯಮ ದರ್ಜೆ ಕುಟುಂಬ ವಾಸಿಸಲು ಸಾಧ್ಯವಾಗುವಂತೆ ಕಟ್ಟಲಾಗಿತ್ತು. ಸದ್ಯಕ್ಕೆ ಮುಚ್ಚಿರುವ ಆ ಮನೆಯ ಬಾಗಿಲುಗಳನ್ನು ತೆರೆದು ನೋಡಿದರೆ ಯಾವುದೇ ಬೆಲೆ ಬಾಳುವ ವಸ್ತು ಅಲ್ಲಿ ಕಣ್ಣಿಗೆ ಬೀಳುತ್ತಿಲ್ಲ. ಮುಂದಿನ ಕೋಣೆಯಲ್ಲಿ ಎರಡು ಹಳೆಯ ಬೆತ್ತದ ಕುರ್ಚಿಗಳು, ಬರೆಯಲೆಂದು ಒಂದು ಕಾಲು ಮುರಿದು ಹೋದ ಮೇಜು,ಕೋಣೆಯ ಮೂಲೆಗೆ ಒಂದು ಕಡೆ ಸವೆದುಹೋಗಿರುವ ಎರಡು ಜೊತೆ ಹವಾಯಿ ಚಪ್ಪಲಿ, ಗೂಡಿನಲ್ಲಿ ಹೈಸ್ಕೂಲು ಪುಸ್ತಕಗಳು– ಮುಂದಿನ ಕೋಣೆಯನ್ನು ದಾಟಿ ಒಳಗೆ ಹೋದರೆ ಕೋಣೆಯಲ್ಲಿ ಒಂದು ಕಬ್ಬಿಣದ ಪೈಪಿನ ಮಂಚ. ಆ ಮಂಚದ ಮೇಲೆ ಹಾಸಿದ ಒಂದು ಹಳೆಯ ದುಪ್ಪಟಿ. ಆ ದುಪ್ಪಟಿಯ ಮೇಲೆ ಸಾವು ಬದುಕಿನ ನಡುವೆ ಒದ್ದಾಡುತ್ತಿದ್ದ ಒಂದು ಜೀವಚ್ಛವ !

ಆ ಜೀವಚ್ಛವ ಒಂದೊಮ್ಮೆ ತುಂಬಾ ಅಂದವಾಗಿತ್ತು. ಒಳಕ್ಕಿಳಿದ ಆ ಕಣ್ಣುಗಳು ಒಂದೊಮ್ಮೆ ಜೀವಕಳೆಯಿಂದ ಥಳಥಳನೆ ಹೊಳೆಯುತ್ತಿದ್ದುವು. ಬತ್ತಿಹೋದ ಆ ಕೆನ್ನೆಗಳು ಒಂದೊಮ್ಮೆ ತುಂಬಿಕೊಂಡು ತುಂಬಾ ಆಕರ್ಷಣೀಯವಾಗಿದ್ದುವು.

ಕಾಲ........! ಕಾಲನ ಕ್ರೂರ ಹಸ್ತ ಅವೆಲ್ಲವನ್ನೂ ನಿರ್ದಯವಾಗಿ ಆ ಜೀವಚ್ಛವದಿಂದ ಕಿತ್ತುಕೊಂಡಿತು. ಆ ಮಂಚದ ಮೇಲಿದ್ದ ಆ ಜೀವಚ್ಛವದ ಮಕ್ಕಳಿಬ್ಬರೂ ಅತ್ತಿತ್ತ ಕುಳಿತುಕೊಂಡಿದ್ದರು ಒಬ್ಬ ಮಗಳು, ಒಬ್ಬ ಮಗ! ಆ ಹುಡುಗನಿಗೆ ಎಂಟು ವರ್ಷಗಳಿರಬಹುದು. ಆ ಹುಡುಗಿಗೆ ಹದಿನೈದು ವರ್ಷಗಳಿರಬಹುದು. ಆ ಹುಡುಗಿ ಸುಂದರಿ ಎಂದು ಹೇಳಿದರೆ ಅವಳನ್ನು ವರ್ಣಿ

ಸಿದಂತಾಗುವುದಿಲ್ಲ. ಹಾಗೆಂದು ಬರೀ ಶಬ್ದಗಳಲ್ಲಿ ಎಷ್ಟು ವರ್ಣಿಸಿದರೂ ಅವಳ ಸೌಂದರ್ಯದ ವರ್ಣನೆ ಸರಿಯಾಗಿ ಮಾಡುವುದು ಕಷ್ಟ. ಸೌಂದರ್ಯಕ್ಕೇ ಅಂದವನ್ನು ಕೊಡುವಂತಹ ಸೌಂದರ್ಯವತಿ ಅವಳು. ಕಪ್ಪನೆಯ ವಿಶಾಲ ನೇತ್ರಗಳು ಶೋಕಸಮುದ್ರದಲ್ಲಿ ಈಜಾಡುತ್ತಿರುವಮೀನುಗಳಂತಿದ್ದವು.ನಡುವಿನ ವರೆಗೆ ಇದ್ದ ತಿಳಿಗುಲಾಬಿ ಬಣ್ಣದ ಬ್ಲೌಜು, ಮೊಣಕಾಲಿನ ಕೆಳಗಿನವರೆಗಿದ್ದ ಲಂಗಾ ಧರಿಸಿದ್ದಳು.

ಮಂಚದ ಮೇಲಿದ್ದ ಜೀವಪಕ್ಷಿ ಅಲುಗಾಡಿತು. ಆಕೆಯ ಒಣಗಿದ ತುಟಿಗಳು ಮೆಲ್ಲಗೆ ಚಲಿಸಿದವು. ಬಾವಿಯೊಳಗಿಂದ ಹೊರಬಂದಂತೆ ಮಾತುಗಳು ಕ್ಷೀಣವಾಗಿ ಹೊರಬಿದ್ದವು. "ಮೇಖಲಾ... ಮಣಿಮೇಖಲಾ....? ನೀನು ಎಲ್ಲಿದೀಯ ?".

ಆ ಹುಡಗಿ ಉಕ್ಕಿ ಬರುತ್ತಿರುವ ದುಃಖವನ್ನು ತಡೆದುಕೊಳ್ಳುತ್ತಾ ಅವಳ ಕೈಯನ್ನು ಮೃದುವಾಗಿ ಸ್ಪರ್ಶಿಸಿದಳು. "ಇಲ್ಲಿಯೇ ಇದೀನಮ್ಮಾ. ಎಲ್ಲೂ ಹೋಗಿಲ್ಲ".

"ಇದೀಯಾ? ಇಲ್ಲಿಯೇ ಇದೀಯಾ? ಪಟ್ಟೆಲಂಗ ಉಟ್ಕೊಂಡಿದೀಯಾ?"

"ಉಟ್ಕೊಂಡಿದ್ದೀನಮ್ಮ ! ಇದೋ....!"

ಆಕೆ ಭಾರವಾಗಿ ತಲೆ ಹೊರಳಿಸಿ ಮಸುಕಾಗುತ್ತಿರುವ ಕಣ್ಣು ಸಂಕುಚಿಸುತ್ತಾ ಮಗಳ ಕಡೆ ನೋಡಿದಳು. "ಎಲ್ಲಿ....! ಎದ್ದು ನಿಂತ್ಕೋ"

ಆ ಯುವತಿ ಎದ್ದು ನಿಂತಳು. ಆಕೆ ಮಗಳ ಕಡೆ ತುಂಬಾ ಹೊತ್ತು ತದೇಕವಾಗಿ ನೋಡುತ್ತಿದ್ದಳು. ಸಂತೃಪ್ತಿಯಿಂದ ಕೂಡಿದ ಸಣ್ಣ ಬೆಳಕೊಂದು ಬಲಹೀನವಾಗಿ ನೋಡುತ್ತಿದ್ದ ಆಕೆಯ ಕಣ್ಣುಗಳಲ್ಲಿ ಮೂಡಿತು. ತುಟಿಗಳು ಮತ್ತೆ ಚಲಿಸಿದವು. "ನಿಮ್ಮ ತಂದೆಯವರೇನಾದರೂ ಇದ್ದಿದ್ದರೆ...." ಆಯಾಸ ಪಡುತ್ತಾ ಮಾತನ್ನು ಮಧ್ಯದಲ್ಲಿಯೇ ನಿಲ್ಲಿಸಿದಳು.

ಆ ಯುವತಿ ಮತ್ತೆ ತಾಯಿಯ ಪಕ್ಕದಲ್ಲಿ ಕುಳಿತುಕೊಂಡಳು "ಈಗದೆಲ್ಲಾ ಯಾಕೆ ಬಿಡಮ್ಮಾ!" ಎಂದಳು ನಿಧಾನವಾಗಿ.

ಆಕೆ ಅಸ್ಪಷ್ಟವಾಗಿ ತಲೆ ಅಡ್ಡವಾಗಿ ಆಡಿಸಿದಳು. "ಇಲ್ಲ....! ನಿಮ್ಮ ತಂದೆಯವರೇನಾದರೂ ಇದ್ದಿದ್ದರೆ....! ಅವರು ಹೋಗಿ ಎಷ್ಟು ವರ್ಷ ಆಯ್ತು....? ಆರು ವರ್ಷ....ಹೌದು ಆರು ವರ್ಷ ! ಆರು ವರ್ಷಗಳ ಹಿಂದೆ ನೀನಿನ್ನೂ ಚಿಕ್ಕ ಹುಡುಗಿ. ಈಗ....ಈಗ...." ಆಯಾಸಪಡುತ್ತಾ ಮತ್ತೊಂದು ಸಲ ಮಾತು ನಿಲ್ಲಿಸಿದಳು.

ಆ ಯುವತಿ ಮೌನವಹಿಸಿದಳು. ತಾನು ಮಾತಾಡಿದರೆ ತಾಯಿಯನ್ನು

ಮತ್ತಷ್ಟು ಮಾತಾಡಿಸಿದಂತಾಗುತ್ತದೆ. ತಾಯಿ ಮಾತಾಡಿದರೆ ಮತ್ತಷ್ಟು ಆಯಾಸಪಡುತ್ತಾಳೆ. ಆಕೆ ಆಯಾಸಪಡುತ್ತಲೇ ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೆ ನುಡಿದಳು. "ಆರು ವರ್ಷಗಳ ಹಿಂದೆ ನೀನು ಚಿಕ್ಕ ಹುಡುಗಿ! ಈಗ....ಈಗ....ಚಿನ್ನದ ಪುತ್ಥಳಿ. ನಿಮ್ಮ ತಂಯವರೇನಾದರೂ ಇದ್ದಿದ್ದರೆ ನಿನ್ನನ್ನು ನೋಡಿ....!"

"ಅಮ್ಮಾ! ಇನ್ನು ಸಾಕು! ಹೆಚ್ಚು ಮಾತಾಡ್ಬೇಡ ಆಯಾಸವಾಗುತ್ತೆ!"

ಆಕೆ ಮೌನವಹಿಸಿ ಮತ್ತೊಂದು ಸಲ ಮಗಳನ್ನು ಕಣ್ತುಂಬಾ ನೋಡಿದಳು, ಮಣಿಮೇಖಲೆ ತೊಟ್ಟುಕೊಂಡಿದ್ದ ಪಟ್ಟೆ ಲಂಗ ತುಂಬಾ ಹಳೆಯದು. ತಂದೆ ಬದುಕಿದ್ದಾಗ ಅವಳ ಹುಟ್ಟು ಹಬ್ಬಕ್ಕೆ ಹೊಲಿಸಿದ್ದು. ಆಗ ಅದು ತುಂಬಾ ದೊಡ್ಡದಾಗಿ ನೆಲ ಬಳಿಯುತ್ತಿತ್ತು. ಈ ಆರು ವರ್ಷಗಳಲ್ಲಿ ಅವಳು ತುಂಬಾ ಬೆಳೆದಿದ್ದಳು. ಈಗ ಆ ಚಿಕ್ಕಂದಿನ ಪಟ್ಟೆ ಲಂಗ ಮೊಣಕಾಲಿನ ಕೆಳಗಿನವರೆಗೆ ಮಾತ್ರ ಬರುತ್ತಿತ್ತು. ಅದರ ಮೇಲಿನ ಮ್ಯಾಚಿಂಗ್ ಬ್ಲೌಜು ಯಾವಾಗಲೋ ಚಿಂದಿಯಾಗಿ ಹೋಗಿತ್ತು. ಈಗ ತೊಟ್ಟುಕೊಂಡಿದ್ದ ಬ್ಲೌಜು ಕೂಡ ಬಣ್ಣ ಮಾಸಿದ ಸ್ಥಿತಿಯಲ್ಲಿತ್ತು. ಈ ದಿನ ಮಣಿಮೇಖಲೆ ಹುಟ್ಟಿದ ಹಬ್ಬ ತಾಯಿಯ ಕೋರಿಕೆಯಂತೆ ಆ ಹಳೆಯ ಪಟ್ಟೆ ಲಂಗ ತೆಗೆದು ಉಟ್ಟುಕೊಂಡಿದ್ದಳು. ಸದ್ಯ ಇರುವ ಪರಿಸ್ಥಿತಿಯಲ್ಲಿ ಮತ್ತೆ ಅಂತಹುದೇ ಕೊಂಡುಕೊಳ್ಳಬೇಕೆಂದರೆ ಅಸಾಧ್ಯ.

ವಯಸ್ಸಿನೊಂದಿಗೇ ಮಣಿಮೇಖಲೆಯ ಶರೀರದಲ್ಲಿ ಪುಷ್ಕಳವಾಗಿ ಬದಲಾವಣೆಗಳು ಬಂದಿದ್ದವು. ಅವಳು ಯೌವನಕ್ಕೆ ಅಡಿಯಿಟ್ಟಿದ್ದಳು. ಸ್ತನಗಳು ನಿಧಾನವಾಗಿ ಆಕಾರ ಪಡೆದುಕೊಂಡಿದ್ದವು. ನಿತಂಬ ಸೌಂದರ್ಯ ಇಮ್ಮಡಿಸಿತ್ತು. ನಡು ಮತ್ತಷ್ಟು ಸಣ್ಣಗಾಗಿತ್ತು. ನಡಿಗೆ ನಿಧಾನಗೊಂಡು ಹಂಸಗಮನದಂತಾಗಿತ್ತು. ಹದಿನೈದರ ವಯಸ್ಸಿಗೇ ಅವಳ ಪಾದಗಳಿಗೆ ತಮ್ಮ ಹೃದಯವನ್ನರ್ಪಿಸಲು ಯುವಕರು ಹಾತೊರೆಯುವಂತಹ ಅದ್ಭುತ ಸೌಂದರ್ಯ ಅವಳದು.

ಕವಿಗಳು ಅವಳ ಸೌಂದರ್ಯವನ್ನು ನೋಡಿದರೆ ಕಾವ್ಯ ರಚಿಸುತ್ತಿದ್ದರು. ಚಿತ್ರಕಾರನ ಕುಂಚ ಪ್ರಾಣ ಪಡೆದುಕೊಳ್ಳುತ್ತಿತ್ತು. ಸಂಗೀತಗಾರನ ಧ್ವನಿ ಮತ್ತಷ್ಟು ಮಧುರವಾಗುತ್ತಿತ್ತು.ಅವಳ ಸೌಂದರ್ಯದಲ್ಲಿ ಮಾರ್ದವತೆಯಷ್ಟೇ ಅಲ್ಲ. ರಸಿಕ ಶಿಖಾಮಣಿಗಳನ್ನು ಹುಚ್ಚೆಬ್ಬಿಸಿ ನಾಲಿಗೆ ಚಪ್ಪರಿಸುವಂತೆ

ಮಾಡುವ ಗುಣ ಕೂಡ ಇತ್ತು. ಅವಳ ಸೌಂದರ್ಯ ಗುಲಾಬಿ ಹೂವಷ್ಟೇ ಅಲ್ಲ, ಹೃದಯವನ್ನು ಸೀಳಿಕೊಂಡು ಹೋಗುವ ಸಮ್ಮೋಹನಾಸ್ತ್ರ ಕೂಡ. ಅವಳನ್ನು ನೋಡಿದರೆ ಗಂಡಸರಿಗಷ್ಟೇ ಅಲ್ಲ, ಹೆಂಗಸರಿಗೂ ಮೋಹ ಉಂಟಾಗುತ್ತಿತ್ತು.

ಪ್ರಪಂಚವನ್ನೇ ಜಯಿಸಬಲ್ಲ ಸೌಂದರ್ಯ ಅವಳದು. ಆದರೆ....ಇನ್ನೂ ಕೆಲವು ಕಾಲ ತಡೆಯಬೇಕು ! ಇನ್ನೂ ಕೆಲವು ಕಾಲ ಎದುರು ನೋಡಬೇಕು ! ಅವಳ ಸೌಂದರ್ಯ ಮತ್ತಷ್ಟು ತೀಕ್ಷ್ಣಗೊಳ್ಳಬೇಕು ! ಆ ವಿಶಾಲವಾದ ಕಣ್ಣುಗಳಲ್ಲಿ ಅಮಾಯಕತೆಯ ಸ್ಥಾನದಲ್ಲಿಯೇ ತುಂಟತನ ಬರಬೇಕು. ಚುರುಕುತನ ಮೂಡಬೇಕು.

ಇನ್ನೂ ಕೆಲವು ಕಾಲ ತಡೆಯಬೇಕು ! ಇನ್ನೂ ಕೊಂಚ ಕಾಲ ಕಾಯಬೇಕು ! ಆದರೆ.... ಆದರೆ.... ಈಗ ಮಾತ್ರ ಏನು ? ಹಳೆಯದಾದ ಆ ಬಟ್ಟೆಗಳಲ್ಲಿಯೇ ಅವಳು ಭುವನೈಕ ಸೌಂದರ್ಯವತಿಯಂತೆ ಕಂಗೊಳಿಸುತ್ತಿದ್ದಳು.

ಯಾರು ನೋಡು ಪಂಕದ ನಡುವೆ  
ಸ್ವರ್ಣಕಾಂತಿಯಲಿ ಹೊಳೆಯುತಿರುವುದು ?!  
ಮಸಿ ಹಿಡಿದ ಮಾಣಿಕ್ಯದಂತೆ ಹೊಳೆಯುತ್ತಿರುವುದು  
ಯಾರು ನೋಡು ?

ಯಾರು ನೋಡು ಆ ಕನ್ಯೆ ?!  
ಆ ಮಾನಿನಿ....ಆ ಮನೋಹರಿ....  
ಆ ಸಮ್ಮೋಹನಾಸ್ತ್ರ ಯಾರು ನೋಡು ?!

ಪ್ರಕೃತಿ ಭಯಂಕರವಾಗಿ ಗರ್ಜಿಸಿತು ಆಕಾಶ ಹೃದಯ ಬಿರಿವಂತೆ ಗರ್ಜಿಸಿತು. ಈ ಭೀಕರ ಗುಡುಗಿನ ಶಬ್ದಕ್ಕೆ ಮಂಚದ ಇನ್ನೊಂದು ಕಡೆ ಕುಳಿತಿದ್ದ ಎಂಟು ವರ್ಷದ ಹುಡುಗ ಚಿಗುರೆಲೆಯಂತೆ ಕಂಪಿಸಿದ. "ಅಮ್ಮಾ" ಎನ್ನುತ್ತಾ ತಾಯಿಯ ಎದೆಯ ಮೇಲೆ ವಾಲಿದ.

ಹೊರಗೆ ಜೋರಾಗಿ ಮಳೆ ಪ್ರಾರಂಭವಾಯ್ತು. ಮುಸಲಧಾರೆ. ಆ ಮಗುವನ್ನು ಸಂತೈಸುವ ಶಕ್ತಿ ಆ ತಾಯಿಗಿರಲಿಲ್ಲ. ಆಯಾಸಪಡುತ್ತಾ, ಮಗಳ ಕಡೆ ನಿಸ್ಸಹಾಯಕಳಾಗಿ ನೋಡಿದಳು.

ಅಸಹಾಯಕತೆಯನ್ನು ಬಿಟ್ಟರೆ ಆಕೆಯಲ್ಲಿ ಇನ್ನೇನು ಉಳಿದಿದೆ ? ಒಂದೊಮ್ಮೆ ಆಕೆಯದು ಚೆನ್ನಾಗಿ ಬಾಳಿ ಬದುಕಿದ ಕುಟುಂಬ. ಆಕೆಯ ಗಂಡ ಮಿಲಿಟರಿ ಕಮಾಂಡರ್. 1971ರ ಪಾಕಿಸ್ತಾನ ಯುದ್ಧದಲ್ಲಿ ಅದ್ಭುತ

ವಾದ ಧೈರ್ಯ, ಸಾಹಸಗಳನ್ನು ಪ್ರದರ್ಶಿಸಿ ಮಹಾವೀರಚಕ್ರ ಪದಕ ಪಡೆದಿದ್ದ. ಆದರೇನು ?! ಈ ದೇಶದಲ್ಲಿ ಮೂರ್ಖರಿಗೇ ಹೊರತು ಮೇಧಾವಿಗಳಿಗೆ ಸ್ಥಾನವಿಲ್ಲ. ಈ ದೇಶದಲ್ಲಿ ಕಲ್ಲುಗಳಿಗೂ, ಗುಂಡುಗಳಿಗೂ ಬಿಟ್ಟರೆ ಮನುಷ್ಯರಿಗೆ ಬೆಲೆಯಿಲ್ಲ. ಈ ದೇಶದಲ್ಲಿ ಲಂಚಕೋರರಿಗೆ, ಮೋಸಗಾರರಿಗೇ ಹೊರತು ಪ್ರಾಮಾಣಿಕರಿಗೆ ಗೌರವವಿಲ್ಲ. ಈ ದೇಶದ ಸಿನಿಮಾ ಸ್ಟಾರ್‌ಗಳಿಗೆ, ಕ್ರಿಕೆಟ್ ಪ್ಲೇಯರ್‌ಗಳಿಗೆ ಹೊರತು ನಿಜವಾದ ಹೀರೋಗಳಿಗೆ ಮನ್ನಣೆಯಿಲ್ಲ.

ಈ ದೇಶದಲ್ಲಿ ಪ್ರಜೆಗಳು ಯಾವ ಸಿನಿಮಾದಲ್ಲಿ ಯಾವ ಹೀರೋ ಯಾವ ಹಾಡು ಹಾಡಿದನೋ, ಯಾವ ಟೆಸ್ಟ್ ಮ್ಯಾಚ್‌ನಲ್ಲಿ ಯಾವ ಪ್ಲೇಯರ್ ಸೆಂಚುರಿ ಹೊಡೆದನೋ ಕೇಳಿದ ತಕ್ಷಣ ಹೇಳಬಲ್ಲರಾದರೂ, ಕ್ವಿಟ್ ಇಂಡಿಯಾ ಮೂವ್‌ಮೆಂಟ್ ಯಾವಾಗ ಪ್ರಾರಂಭವಾಯ್ತೋ, ಭಗತ್‌ಸಿಂಗ್‌ನನ್ನು ಯಾಕೆ ನೇಣು ಹಾಕಿದರೋ ಎಂದು ಕೇಳಿದರೆ ಹೇಳಲಾರರು. ಈ ದೇಶದ ಧ್ವಜ ತಲೆಯೆತ್ತಿ ನಿಲ್ಲಲು, ಈ ದೇಶದ ಪ್ರಜೆಗಳ ಸ್ವಾತಂತ್ರ್ಯ ಕಾಪಾಡಲು ಪ್ರಾಣ ಭಯ ತೊರೆದು, ಯುದ್ಧ ಭೂಮಿಯಲ್ಲಿ ಹೋರಾಡಿದ ಮಹಾವೀರರು ಯಾರ್ಯಾರೆಂದು ಕೇಳಿದರೆ ಹೇಳಲಾರರು. ಅವರ ಹೆಸರುಗಳು ಜನರಲ್ ನಾಲೆಡ್ಜ್ ಪುಸ್ತಕಗಳಲ್ಲಿ, ಪ್ರಶ್ನೆಗಳ ಬ್ಯಾಂಕುಗಳಲ್ಲಿ ಹೊರತುಪಡಿಸಿ ಮತ್ತೆಲ್ಲಿಯೂ ಕಾಣಿಸುವುದಿಲ್ಲ, ಕೇಳಿಸುವುದಿಲ್ಲ.

ಭಾರತ ವೃಕ್ಷ ಸ್ವಾತಂತ್ರ್ಯ ಬಂದ ನಂತರ ಹೇಗೆ ರಣಹದ್ದು, ಗೂಬೆಗಳಿಗೆ ಆಶ್ರಯ ಕೊಟ್ಟಿತು. ಆಕೆಯ ಗಂಡ ಯುದ್ಧದಲ್ಲಿ ಎರಡೂ ಕಾಲುಗಳನ್ನು ಕಳೆದುಕೊಂಡು ಮಿಲಿಟರಿಯಿಂದ ಡಿಸ್‌ಚಾರ್ಜ್ ಆದ. ಸರಕಾರ ಕೊಟ್ಟ ದುಡ್ಡಿನಿಂದ ಚಿಕ್ಕ ವ್ಯಾಪಾರ ಪ್ರಾರಂಭಿಸಿದ. ಆದರೆ ಆ ವ್ಯಾಪಾರ ಸರಿಯಾಗಿ ನಡೆಯಲಿಲ್ಲ. ನಷ್ಟಕ್ಕೆ ಗುರಿಯಾಗಿ ದಿವಾಳಿಯೆದ್ದಿತು. ಅದಕ್ಕೆ ಕಾರಣ ಆತನ ಪ್ರಾಮಾಣಿಕ ಮನಸ್ಥಿತಿಯೇ. ಅದಕ್ಕೆ ಜೊತೆಯಾಗಿ ಆತನ ಆರೋಗ್ಯ ಹಠಾತ್ತನೆ ಹದಗೆಟ್ಟಿತು. ಹೃದಯದಲ್ಲಿ ದೋಷವುಂಟಾಗಿ ಓಪನ್ ಹಾರ್ಟ್‌ಸರ್ಜರಿ ಮಾಡಬೇಕಾಗಿ ಬಂತು. ಅದಕ್ಕೆ ತುಂಬಾ ದುಡ್ಡಿನ ಅವಶ್ಯಕತೆಯಿತ್ತು. ಧನ ಸಹಾಯಕ್ಕಾಗಿ ಸರಕಾರಕ್ಕೆ ಮೊರೆಯಿಡುತ್ತಾ ಅರ್ಜಿಯ ಮೇಲೆ ಅರ್ಜಿ ಹಾಕಿದ. ಮೊದಮೊದಲು ಸರಕಾರ ಆತನ ಬೇಡಿಕೆಯನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ನಂತರ ಆಗ ಈಗ ಎಂದಿತು. ಧನಸಹಾಯ ಮಾತ್ರ ಮುಟ್ಟಲೇ ಇಲ್ಲ. ಕೊನೆಗೆ ಆತ ಆ ಹೃದ್ರೋಗಕ್ಕೇ ಬಲಿಯಾದ.

ಮಹಾವೀರಚಕ್ರ ಪದಕ ಪಡೆದ ಮಹಾವೀರನಿಗೆ ದೇಶ ಪ್ರಸಾದಿಸಿದ ವರ ಅನಾಮಕವಾದ ಮರಣ. ದೇಶ ರಕ್ಷಣೆಯಲ್ಲಿ ಕಾಲು ಕಳೆದುಕೊಂಡ ಸೈನಿಕನಿಗೆ

ಈ ದೇಶ ಕೊಟ್ಟ ಕಾಣಿಕೆ ಹೃದಯಾಘಾತ. ಈ ದೇಶದಲ್ಲಿ ಒಬ್ಬ ಸಿನಿಮಾ ಸೂಪರ್ ಸ್ಟಾರ್ ಗಾಯಗೊಂಡರೆ ವಿದೇಶ ಯಾತ್ರೆಯಲ್ಲಿದ್ದ ಪ್ರಧಾನಮಂತ್ರಿಗೆ ಹಾರ್ಟ್‌ಲೈನ್ ಕಾಲ್ಸ್ ಹೋಗುತ್ತವೆ. ಪ್ರಧಾನಮಂತ್ರಿಯ ಪ್ರತ್ಯೇಕ ದೂತ ಸ್ಪೇಷಲ್ ವಿಮಾನದಲ್ಲಿ ಬಂದು ಆರೋಗ್ಯ ವಿಚಾರಿಸಿಕೊಂಡು ಹೋಗುತ್ತಾನೆ. ಈ ದೇಶದಲ್ಲಿ ಒಬ್ಬ ಕ್ರಿಕೆಟ್ ಸ್ಟಾರ್ ಬ್ಯಾಟಿಂಗ್‌ಗಿಳಿದರೆ ಅವನು ಸೆಂಚುರಿ ಮಾಡಲೆಂದು ಹರಕೆ ಕಟ್ಟಲಾಗುತ್ತದೆ ಈ ದೇಶದಲ್ಲಿ ಒಬ್ಬ ಹೀರೋ ನಟಿಸಿದ ಸಿನಿಮಾ ಬಿಡುಗಡೆಯಾದರೆ ಅದು ಹಿಟ್ ಆಗಲೆಂದು ದೇವರ ಎದುರಿಗೆ ತೆಂಗಿನ ಕಾಯಿಗಳನ್ನು ಒಡೆಯಲಾಗುತ್ತದೆ. ಈ ದೇಶಗಲ್ಲಿ ಒಬ್ಬ ಸ್ವಾಮೀಜಿ, ಒಬ್ಬ ಬಾಬಾ ಚಿಟಿಕೆ ಹಾಕಿ ಬೂದಿ ತರಿಸಿದರೆ ಆ ಸ್ವಾಮೀಜಿಗೆ, ಆ ಬಾಬಾನಿಗೆ ಕನಕಾಭಿಷೇಕದೊಂದಿಗೆ ಪೂಜೆಗಳು ನಡೆಯುತ್ತವೆ.

ಆದರೆ.... ಈ ದೇಶದಲ್ಲಿ ಒಬ್ಬ ಸ್ವಾತಂತ್ರ್ಯ ಸಮರಯೋಧ ಮರಣಿಸಿದರೆ ಯಾರಿಗೂ ನೋವಿಲ್ಲ. ಈ ದೇಶದಲ್ಲಿ ವಿಜ್ಞಾನಿಗಳೂ, ಮೇಧಾವಿಗಳೂ ಬೇಸತ್ತು ವಿದೇಶಗಳಿಗೆ ವಲಸೆ ಹೋಗುತ್ತಿದ್ದರೆ ಯಾರಿಗೂ ನೋವಿಲ್ಲ. ಈ ದೇಶದಲ್ಲಿ ಟೆರ್ರರಿಸ್ಟ್‌ಗಳೆನ್ನುವ ನೆಪದಲ್ಲಿ ಅಮಾಯಕ ಪ್ರಜೆಗಳನ್ನು ಪೋಲಿಸರು ಹಿಂಸಿಸುತ್ತಿದ್ದರೆ ಯಾರಿಗೂ ನೋವಿಲ್ಲ. ಈ ದೇಶದಲ್ಲಿ ದೇಶ ರಕ್ಷಣೆಗೆ ಸರ್ವವನ್ನೂ ತ್ಯಾಗ ಮಾಡಿದ ಮಹಾವೀರ ಮರಣಿಸಿದರೆ ಯಾರಿಗೂ ನೋವಿಲ್ಲ. ಈ ದೇಶದಲ್ಲಿ ಏನು ನಡೆದರೂ ಯಾರಿಗೂ ನೋವಿಲ್ಲ.

ಅಂತಹ ಈ ದೇಶದಲ್ಲಿ ಯಾರೋ ಮಾಜಿ ಸೈನಿಕ, ಯಾವಾಗಲೋ 1971 ರಲ್ಲಿ ಮಹಾವೀರಚಕ್ರ ಪದಕ ಪಡೆದುಕೊಂಡವನು ಏನಾದರೆ ಯಾರಿಗೇನು ನೋವು ? ಯಾರಿಗೆ ಸ್ಪಂದನ ? ಯಾರಿಗೆ ಬೇಕು ಆ ಜೀವನ ಚರಿತ್ರೆ ? ಯಾರಿಗಿದೆ ಅಷ್ಟು ಸಮಯ ? ಯಾರ ಬಳಿ ಆ ವ್ಯಕ್ತಿಯ ಮರಣಕ್ಕಾಗಿ ಸಹಾನುಭೂತಿಯ ಎರಡು ಕಣ್ಣೀರ ಹನಿಗಳಿವೆ ? ಈ ದೇಶ ನಿದ್ದೆ ಮಾಡುತ್ತಿರುವ ಒಂದು ಐರಾವತ. ಇದನ್ನು ನಿದ್ದೆಯಿಂದ ಎಬ್ಬಿಸಬೇಕೆಂದರೆ ಅಂಕುಶವಿಲ್ಲ, ಆವೇಶ ಬೇಕು.

ಮಣಿಮೇಖಲೆಯ ತಂದೆ ಕೆಲಸ ಮಾಡಿದ ರೆಜಿಮೆಂಟಿನಲ್ಲಿಯೇ ಅವಳ ತಾಯಿ ಮಿಲಿಟರಿ ನರ್ಸ್ ಆಗಿದ್ದಳು ಅಲ್ಲಿಯೇ ಅವರಿಬ್ಬರಿಗೂ ಪರಿಚಯ ಉಂಟಾಗಿತ್ತು. ಪರಿಚಯ ಪ್ರೇಮಕ್ಕೆ,ಪ್ರೇಮ ಮದುವೆಗೆ ದಾರಿ ಮಾಡಿತ್ತು. ಇಬ್ಬರೂ ಸೇವಾಗುಣ ಇದ್ದವರೇ. ಅವರಿಬ್ಬರ ಜೀವನಗಳು ಒಬ್ಬರಿಗೋಸ್ಕರ ಒಬ್ಬರು ಎನ್ನುವಂತೆ ಸಾಗಿದವು. ಯುದ್ಧದಲ್ಲಿ ಆತ ಎರಡೂ ಕಾಲು ಕಳೆದುಕೊಂಡಿದ್ದರೂ ಅವರ ಅನ್ಯೋನ್ಯತೆಗೆ ಎಂತಹುದೇ ಭಂಗವಾಗಿರಲಿಲ್ಲ.

ಮೃತ್ಯುವನ್ನು ಬಿಟ್ಟರೆ ಬೇರೆ ಯಾವ ಶಕ್ತಿಯಿಂದಲೂ ಅವರನ್ನು ಬೇರ್ಪಡಿಸಲಾಗಲಿಲ್ಲ. ಗಂಡನ ಮರಣದ ನಂತರ ಆಕೆ ಪೂರ್ತಿ ಕುಗ್ಗಿಬಿಟ್ಟಳು. ದಿಗಿಲಿನಿಂದ ಆರೋಗ್ಯವನ್ನು ಹಾಳು ಮಾಡಿಕೊಂಡಳು. ಅದರ ಫಲವಾಗಿ ಈಗ ಮೃತ್ಯು ಮಂದಿರದ ಬಾಗಿಲಿನಲ್ಲಿ ನಿಂತುಕೊಂಡಿದ್ದಳು. ಆ ತಾಯಿಗೆ ತಾನೇ ನಾಗಲಿರುವಳೆಂಬುದಕ್ಕೆ ಕಿಂಚಿತ್ತೂ ನೋವಿರಲಿಲ್ಲ. ತಂದೆ ಇಲ್ಲದ ಮಕ್ಕಳು. ತಾನು ಕೂಡ ಇಲ್ಲದಂತಾದರೆ ಅವರೇನಾಗುತ್ತಾರೋ ಎಂಬುದೇ ಚಿಂತೆ. ಹೇಗಿರಬೇಕಾದ ಮಕ್ಕಳು ಹೇಗಾಗಿ ಬಿಟ್ಟರು ?! ಮುಂದೆ ಇನ್ನೂ ಹೇಗಾಗುತ್ತಾರೆ ?

ಹಠಾತ್ತನೆ ಆಕೆಯ ಹೃದಯದಲ್ಲಿ ಏನೋ ಕಳವಳ ಉಂಟಾಯ್ತು. ಆಕೆಯ ಹೃದಯದಲ್ಲಿ ಎದ್ದ ಕಳವಳ ಆಕೆಯನ್ನು ಸ್ಥಿಮಿತವಾಗಿ ಮಲಗಲು ಬಿಡಲಿಲ್ಲ. ತನ್ನಲ್ಲಿನ ಸರ್ವಶಕ್ತಿಗಳನ್ನೂ ಒಗ್ಗೂಡಿಸಿಕೊಂಡು ತಡಬಡಿಸುತ್ತಾ ಮಂಚದ ಮೇಲೆ ಎದ್ದು ಕುಳಿತುಕೊಂಡಳು.

"ಅಮ್ಮಾ! ಯಾಕಮ್ಮಾ ಎದ್ದೆ ? ಎಲ್ಲಿಗೆ ?" ಮಣಿಮೇಖಲೆ ಆತಂಕದಿಂದ ಕೇಳಿದಳು.

ಆಕೆ ಉತ್ತರಿಸಲಿಲ್ಲ. ಗುಡುಗಿಗೆ ಭಯಪಟ್ಟ ಆಕೆಯ ಮಗ ಇನ್ನೂ ಆಕೆಯನ್ನು ಅಪ್ಪಿಕೊಂಡಿದ್ದ. ಬಲಹೀನನಾಗಿ ಅವನನ್ನು ಪಕ್ಕಕ್ಕೆ ಸರಿಸುತ್ತಾ ತಡಬಡಿಸುತ್ತಲೇ ಎದ್ದು ನಿಂತಳು. ಎರಡು ಕಾಲುಗಳ ಮೇಲೆ ನಿಲ್ಲಲಾಗದೆ ತೂಲಿದಳು.

ಮಣಿಮೇಖಲೆ ಗಾಬರಿಯಿಂದ ಓಡಿಬಂದು ಆಕೆಯನ್ನು ಬೀಳದಂತೆ ಹಿಡಿದುಕೊಂಡಳು. "ಅಮ್ಮಾ! ಎಲ್ಲಿಗಮ್ಮಾ ? ಏನು ಬೇಕಮ್ಮಾ ? ನನಗೆ ಹೇಳು- ನಾನು ತಂದು ಕೊಡ್ತೀನಿ!" ಉಕ್ಕಿಬರುತ್ತಿರುವ ದುಃಖವನ್ನು ನಿಯಂತ್ರಿಸಿಕೊಳ್ಳುತ್ತಾ ನುಡಿದಳು.

ಆಕೆ ಮಗಳಿಗೆ ಆಗ ಕೂಡ ಉತ್ತರಿಸಲಿಲ್ಲ. ಕೈ ಅಡ್ಡವಿಟ್ಟು ತಳ್ಳಲು ಪ್ರಯತ್ನಿಸುತ್ತಾ, ಮುಂದಿನ ಕೋಣೆಯ ಕಡೆ ಕ್ಷಣ ಕ್ಷಣಕ್ಕೆ ಸ್ವಾಧೀನ ತಪ್ಪುತ್ತಿರುವಂತಿದ್ದ ಕಾಲುಗಳಿಂದ ನಡುಗುತ್ತಾ ನಾಲ್ಕೈದು ಅಡಿ ಇಟ್ಟು ಮುಂದಿನ ಕೋಣೆಯ ಬಾಗಿಲಿಗೆ ಬೆನ್ನಾನಿಸಿ ಕುಸಿದು ಕುಳಿತಳು. ವಿಪರೀತವಾಗಿ ಆಯಾಸ ಪಡುತ್ತಾ ತನ್ನ ಶಕ್ತಿಯನ್ನೆಲ್ಲಾ ಒಂದುಗೂಡಿಸಿಕೊಳ್ಳುತ್ತಾ ಮತ್ತೊಂದು ಸಲ ಚಲಿಸಿ ಮುಂದಿನ ಕೋಣೆಯೊಳಗೆ ಹೋದಳು.

"ಅಮ್ಮಾ! ಇರಮ್ಮಾ ನಾನು ಬರ್ತಿದೀನಿ!" ಮಣಿಮೇಖಲೆ ಆಕೆಯ ಹಿಂದೆಯೇ ಓಡಿದಳು. ಅಕ್ಕನ ಬೆನ್ನಂಟಿಕೊಂಡೇ ತಮ್ಮನೂ ಮುಂದಿನ ಕೋಣೆಗೆ

ಓಡಿದ. ಆಕೆ ನೇರವಾಗಿ ಹೋಗಿ ಮುಂದಿನ ಕೋಣೆಯಲ್ಲಿದ್ದ ಮರದ ಮೇಜಿನ ಮುಂದೆ ಕುಳಿತಳು. ನಡುಗುತ್ತಿರುವ ಕೈಗಳಿಂದ ಅತಿ ಕಷ್ಟದಿಂದ ಮೇಜಿನ ಅರೆಯನ್ನು ಎಳೆಯಲು ಪ್ರಯತ್ನಿಸಿದಳು.

"ಇರಮ್ಮಾ ! ಅರೆಯನ್ನು ನಾನು ತಗೀತೀನಿ!" ಮಣಿಮೇಖಲೆ ಸರಸರನೆ ಅರೆಯನ್ನು ಎಳೆದು ತಾಯಿಯ ಮುಂದಿಟ್ಟಳು.

ಯಾವ್ಯಾವುದೋ ಹಳೆಯ ಪತ್ರಗಳೂ, ಕೆಲಸಕ್ಕೆ ಬಾರದ ಕಾಗದ ಪತ್ರಗಳೂ, ಇನ್ನೂ ಕೆಲವು ವಸ್ತುಗಳೂ ಆ ಅರೆಯ ತುಂಬಾ ಇದ್ದವು. ಆಕೆ ಹುಚ್ಚಿಯಂತೆ ಆ ಕಾಗದಗಳನ್ನು ಹೊರಗೆಳೆಯುತ್ತಾ ಅರೆಯನ್ನೆಲ್ಲಾ ಕೆದಕಲಾರಂಭಿಸಿದಳು. ಏನು ಬೇಕೋ ತಾನು ತೆಗೆದುಕೊಡುತ್ತೇನೆಂದು ಮಣಿಮೇಖಲೆ ಹೇಳಿದರೂ ಆಕೆ ಕೇಳಿಸಿಕೊಳ್ಳಲಿಲ್ಲ. ಆಕೆಗೆ ಬೇಕಾದ ವಸ್ತು ಅರೆಯ ಅಂಚಿನಲ್ಲಿ ಬಿದ್ದಿತ್ತು. ಆರ್ತತೆಯಿಂದ ಆತುರದಿಂದ ಆವೇದನೆಯಿಂದ ಆಕೆ ಆ ವಸ್ತುವನ್ನು ಕೈಗೆತ್ತಿಕೊಂಡಳು. ಆ ವಸ್ತುವನ್ನು ನೋಡಿದೊಡನೆಯೇ ಆಕೆಯ ಮನಸ್ಸು ಪ್ರಶಾಂತಗೊಂಡಿತು. ಅಲ್ಲಿಯವರೆಗೆ ನೀರಿನಿಂದ ಹೊರಬಿದ್ದ ಮೀನಿನಂತೆ ಒದ್ದಾಡಿದ ಆಕೆ ಆ ಮೀನು ತಿರುಗಿ ನೀರೊಳಗೆ ಹೋದಷ್ಟು ಹಾಯಾಗಿ ಉಸಿರೆಳೆದುಕೊಂಡಳು. ಆ ವಸ್ತುವನ್ನು ಎದೆಗಪ್ಪಿಕೊಂಡಳು. ಆ ವಸ್ತು....ಯುದ್ಧದಲ್ಲಿ ತೋರಿಸಿದ ಸಾಹಸಕ್ಕೆ ಗುರುತಾಗಿ ಅವಳ ಗಂಡ ಸಾಧಿಸಿದ ಮಹಾವೀರಚಕ್ರ ಪದಕ. ಅದಕ್ಕೆ ಕಟ್ಟಲಾಗಿದ್ದ ರಿಬ್ಬನ್ ಹಳೆಯದಾಗಿ ಸುಕ್ಕುಸುಕ್ಕಾಗಿ ದೀನವಾಗಿ ನೋಡುತ್ತಿರುವ ದೇಶಮಾತೆಯ ಪದಕದಂತಿತ್ತು. ಆ ಪದಕವನ್ನು ನೋಡುತ್ತಲೇ ಮಣಿಮೇಖಲೆಯ ಎಳೆಯ ಹೃದಯ ದಹಿಸಿದಂತಾಯ್ತು. ಒಂದೇ ಸಾರಿಗೆ ಹೃದಯದಲ್ಲಿ ಮೂಡಿದ ಅಸಹನೆಯಿಂದ, ಅಸಹ್ಯದಿಂದಾಗಿ ತಾಯಿಯ ಕೈಯಿಂದ ಪದಕವನ್ನು ಕಿತ್ತುಕೊಂಡಳು. ಮಗಳ ಚರ್ಯೆಗೆ ಆಕೆ ಶಾಕ್ ಹೊಡೆಸಿಕೊಂಡವಳಂತೆ ನೋಡಿದಳು.

ಬಲಹೀನವಾಗಿ ಆಕೆ ಕೊರಳೆತ್ತುತ್ತಿರುವಂತೆಯೇ ಮಣಿಮೇಖಲೆ ರೊಚ್ಚಿನಿಂದ ನುಡಿದಳು, "ಈ ಪದಕ ಯಾವ ಸೌಭಾಗ್ಯಕ್ಕೆ ? ಯಾರಿಗೆ ಉಪಯೋಗವಾಯ್ತು ? ಅಪ್ಪನಿಗೆ ಆಪರೇಷನ್ ಮಾಡಿಸಿತೆ ? ನಿನ್ನ ರೋಗ ಗುಣಪಡಿಸಿತೆ ?" ಅವಳ ಮುಖ ಅಸಹ್ಯದಿಂದ ಕಂದಿತು...."ಮಹಾವೀರ ಚಕ್ರ! ಈ ಪದಕ ಯಾವ ಉಪಯೋಗಕ್ಕೆ ?" ಅವಳು ಆ ಪದಕವನ್ನೆತ್ತಿ ಕಿಟಕಿಯ ಮೂಲಕ ಹೊರಗೆಸೆದಳು.

ಅಷ್ಟೇ! ಅವಳ ಕೆನ್ನೆ ಚುರ್ರೆಂದಿತು. ಎಲ್ಲಿಂದ ಬಂತೋ ಆ ಶಕ್ತಿ, ಆ ಆವೇಶ! ಅವಳ ತಾಯಿ ಕೋಪದಿಂದ ತೂರಾಡುತಾ ಮತ್ತೊಂದು ಸಲ ಅವಳ

ಕೆನ್ನೆಗೆ ಬಾರಿಸಿದಳು. "ಎಂತಹ ಕೆಲಸ ಮಾಡಿದೆಯಲ್ಲೇ ದರಿದ್ರದವಳೆ !" ಆವೇಶದಿಂದ ನಡುಗುತ್ತಾ, ಆಯಾಸದಿಂದ ಏದುಸಿರು ಬಿಡುತ್ತಾ ಹುಚ್ಚಿಯಂತೆ ಕಿರುಚಿದಳಾಕೆ. ಆಕೆಯ ಶರೀರ ತೀವ್ರವಾಗಿ ನಡುಗತೊಡಗಿತು. "ಅದನ್ನ ಏನಂದ್ಕೊಂಡೆ ? ಏನಂದ್ಕೊಂಡು ಅದನ್ನ ಎಸೆದೆ ?".

ಹಠಾತ್ತನೆ ಆಕೆಯ ಪರಿಸ್ಥಿತಿಯಲ್ಲಿ ಪ್ರಮಾದಕಾರಿಯಾದ ಮಾರ್ಪಾಡು ಕಾಣಿಸಿದ್ದರಿಂದ ಮಣಿಮೇಖಲೆ ಗಾಬರಿಯಾದಳು. ಅವಳ ಮನಸ್ಸಿನಲ್ಲಿ ಆವೇಶ, ಅಸಹ್ಯದ ಸ್ಥಾನದಲ್ಲಿಯೇ ಆತಂಕ ತುಂಬಿಕೊಂಡಿತು. "ಅಮ್ಮಾ !" ತಾಯಿಯ ಎರಡೂ ಭುಜಗಳನ್ನು ಹಿಡಿದುಕೊಂಡು ತಡೆಯಲು ಪ್ರಯತ್ನಿಸಿದಳು. ಆಕೆ ಮಗಳ ಕೈ ದೂರ ಜಾಡಿಸಿದಳು.

"ಮುಟ್ಟಬೇಡ ನನ್ನ"ಗರ್ಜಿಸಿದಳು."ದೇಶಕ್ಕೋಸ್ಕರ ನಿಮ್ಮ ತಂದೆ ಮಾಡಿದ ತ್ಯಾಗಕ್ಕೆ, ತೋರಿಸಿದ ಸಾಹಸಕ್ಕೆ ಸಂಕೇತ ಕಣೆ ಅದು! ನಮ್ಮ ವಂಶ ತಲ ತಲಾಂತರದವರೆಗೆ ಕಾಪಾಡಿಕೊಂಡು ಗರ್ವ ಪಡಬೇಕಾದ ವಸ್ತು ಅದನ್ನು ಎಸೀತೀಯಾ ? ನಿನಗೆಷ್ಟು ಸೊಕ್ಕು !" ಹಠಾತ್ತನೆ ಹಿಡಿಸಲಾರದ ಆವೇಶದಿಂದ ಆಕೆ ಮಗಳು ಜುಟ್ಟು ಹಿಡಿದುಕೊಂಡು ಹಿಂದಕ್ಕೆ ಬಾಗಿಸುತ್ತ ಆ ಕೆನ್ನೆ ಈ ಕೆನ್ನೆಗೆ ಮತ್ತೊಂದು ಸಲ ಬಾರಿಸಿದಳು. ಆವೇಶದಿಂದ ಆಕೆ ಮಗಳ ಕೆನ್ನೆಗೆ ಬಾರಿಸುತ್ತಲೇ ಇದ್ದಳು.

"ಅಮ್ಮಾ........! ಅಮ್ಮಾ....!" ಮಣಿಮೇಖಲೆ ಎರಡೂ ಕೈಗಳನ್ನು ಮುಖಕ್ಕೆ ಅಡ್ಡವಿಟ್ಟುಕೊಂಡಳೇ ಹೊರತು, ತಾಯಿಯ ಹಿಡಿತದಿಂದ ತಪ್ಪಿಸಿ ಕೊಳ್ಳಲು ಪ್ರಯತ್ನಿಸಲಿಲ್ಲ. ತನ್ನ ತಾಯಿ ತಮ್ಮಿಬ್ಬರನ್ನು ಯಾವಾಗಲೂ ಹೊಡೆದದ್ದಿಲ್ಲ. ಹೀಗಿರುವಾಗ ಈ ಸಮಯದಲ್ಲಿ ತಾಯಿಯ ಮಹೋಗ್ರರೂಪ ವನ್ನು ನೋಡಿ ಮಣಿಮೇಖಲೆಯ ತಮ್ಮ ಹೆದರಿ, ಭಯದಿಂದ ಅಳತೊಡಗಿದ.

ಕ್ರಮೇಣ ಆಕೆಯ ಶಕ್ತಿಗುಂದಿತು. ಹಿಸ್ಟೀರಿಕ್ ಆಗಿ ಅಳುತ್ತಾ ಇದ್ದಕ್ಕಿ ದ್ದಂತೆ ಎದ್ದು ನಿಂತಳು. "ಏನ್ರೀ! ನಾನೂ ಬರ್ತಿದೀನಿ!" ಎಂದು ಕೂಗುತ್ತಾ ಬೀದಿ ಬಾಗಿಲ ಕಡೆ ಓಡಿದಳು. ಮಕ್ಕಳಿಬ್ಬರೂ "ಅಮ್ಮಾ!" ಎಂದು ಕೂಗುತ್ತಾ ತಾಯಿಯ ಹಿಂದೆ ಓಡಿದರು. ಆದರೆ ಅಷ್ಟು ಹೊತ್ತಿಗೆ ತಡ ವಾಯ್ತು. ಬೀದಿಯ ಬಾಗಿಲು ತಲುಪುತ್ತಲೇ ಅವಳ ತಾಯಿ ಕುಸಿದುಬಿದ್ದಳು. ಕಾಲು, ಕೈ ಬಡಿದುಕೊಳ್ಳುತ್ತಾ ಕಣ್ಣು ತೇಲು ಹಾಕತೊಡಗಿದಳು.

ಫಿಟ್ಸ್! ಅದಕ್ಕೆ ಮುಂಚೆ ಆಕೆಗೆ ಯಾವಾಗಲೂ ಫಿಟ್ಸ್ ಬಂದಿರಲಿಲ್ಲ. ಆ ಮಕ್ಕಳಿಬ್ಬರೂ ಅದಕ್ಕೆ ಮುಂಚೆ ತಾಯಿಯನ್ನು ಆ ಸ್ಥಿತಿಯಲ್ಲಿ ನೋಡಿರಲಿಲ್ಲ. ಅಂತಹ ಪರಿಸ್ಥಿತಿ ಎದುರಾದರೆ ಏನು ಮಾಡಬೇಕೆಂದು ಅವರಿಬ್ಬರಿಗೂ

ತಿಳಿದಿರಲಿಲ್ಲ. ತಾಯಿಯನ್ನು ಆ ಸ್ಥಿತಿಯಲ್ಲಿ ನೋಡುತ್ತಲೇ ಮಣಿಮೇಖಲೆಯ ಹೃದಯ ಬಿರಿದಂತಾಯ್ತು. "ಅಮ್ಮಾ, ಏನಾಯ್ತಮ್ಮಾ?" ತಾಯಿಯ ಭುಜಗಳನ್ನು ಹಿಡಿದು ಅಲುಗಾಡಿಸುತ್ತಾ ಅರಚಿದಳು. ಆಕೆ ಉತ್ತರಿಸಲಿಲ್ಲ. ಉತ್ತರಿಸುವ ಸ್ಥಿತಿಯಲ್ಲಿ ಆಕೆ ಇರಲಿಲ್ಲ. ಕೈ ಕಾಲು ಬಡಿದುಕೊಳ್ಳುತ್ತಲೇ ಇದ್ದಳು.

"ಅಮ್ಮಂಗೇನಾಯ್ತಕ್ಕಾ ?" ಈ ಹುಡುಗ ಅಕ್ಕನ ಕೈಹಿಡಿದು ಅಲುಗಾಡಿಸುತ್ತಾ ಕೇಳಿದ. ಅವಳು ಆಸರೆಗೆನ್ನುವಂತೆ ತಮ್ಮನನ್ನು ಪಕ್ಕಕ್ಕೆ ಕರೆದುಕೊಂಡಳು. ಭಯದಿಂದ ಅವಳ ತುಟಿಗಳು ಒಣಗತೊಡಗಿದ್ದವು. "ಅಕ್ಕಾ! ಅಮ್ಮನಿಗೇನಾಯ್ತಕ್ಕಾ ?" ತಲೆ ಮೇಲೆತ್ತಿ ನೋಡುತ್ತಾ ಮತ್ತೊಂದು ಸಲ ಅಮಾಯಕವಾಗಿ ಪ್ರಶ್ನಿಸಿದ ಆ ಹುಡುಗ.

ಏನಾಗಿದೆ ? ಏನಾಗಿದೆಯೆಂದು ಅವಳು ಹೇಳುತ್ತಾಳೆ ? ಅವಳಿಗಾದರೂ ಏನು ಗೊತ್ತು ? ಏನೋ ಮಾಡಬೇಕು ! ಏನಾದರೂ ಮಾಡಲೇಬೇಕು ! ತಾಯಿಯನ್ನು ಉಳಿಸಿಕೊಳ್ಳಬೇಕು ! ಹೇಗಾದರೂ ಸರಿ ! ತಾಯಿಯನ್ನು ಆ ಸ್ಥಿತಿಯಲ್ಲಿ ನೋಡಿ ಕೆಲವು ಕ್ಷಣಗಳು ಕೆಲಸ ಮಾಡುವುದನ್ನು ಬಿಟ್ಟ ಅವಳ ಮೆದುಳು ಮತ್ತೆ ಕೆಲಸ ಮಾಡತೊಡಗಿತು. ಆಗ ಅವಳಿಗೊಂದು ಹೆಸರು ನೆನಪಾಯ್ತು. ಆ ಹೆಸರು ನೆನಪಾದೊಡನೆಯೇ ಅವಳು ತಟಕ್ಕನೆ ಎದ್ದು ನಿಂತಳು. "ಮಹೇಶ್! ನೀನು ಅಮ್ಮನ ಹತ್ತಿರ ಇರು! ನಾನೀಗ್ಲೇ ಬರ್ತೀನಿ!" ಉತ್ತರಕ್ಕೋಸ್ಕರ ಕಾಯದೆ ಹೊರಗೋಡಿದಳು.

"ಅಕ್ಕಾ! ನಾನೂ ಬರ್ತೀನಿ! ನನಗೆ ಭಯವಾಗ್ತಿದೆ" ಹಿಂದಿನಿಂದ ಕೂಗಿದ ಮಹೇಶ್. ಅವಳು ಕೇಳಿಸಿಕೊಳ್ಳಲಿಲ್ಲ. ಸುಳಿಗಾಳಿಯಂತೆ ಮನೆಯಿಂದ ಹೊರಗೋಡಿದಳು.

"ಅಕ್ಕಾ !" ಎಂದು ಕೂಗುತ್ತಾ ಮಹೇಶ್ ಕೂಡ ಅವಳ ಹಿಂದೆಯೇ ಓಡಿದ.

ಆಕಾಶ ಜೋರಾಗಿ ಗುಡುಗಿತು. ಆಕಾಶದಲ್ಲಿನ ಮೇಘಗಳೆಲ್ಲವೂ ಕರಗಿ, ಮಳೆ ಬೀಳಲಾರಂಭವಾಯಿತು. ಮುಸಲಧಾರೆ, ಜೊತೆಗೆ ಬಿರುಗಾಳಿ.

ಅವನು ತನ್ನ ಬಂಗಲೆಯ ವರಾಂಡದಲ್ಲಿ ಎರಡೂ ಕೈಗಳನ್ನು ಹಿಂದಕ್ಕೆ ಕಟ್ಟಿಕೊಂಡು ಅಸಹನೆಯಿಂದ ಶತಪಥ ಹಾಕುತ್ತಿದ್ದ. ಮಾತುಮಾತಿಗೂ ಎಡಗೈ

ಎತ್ತಿ ಟೈಮ್ ನೋಡಿಕೊಳ್ಳುತ್ತಿದ್ದ. ಒಂದೊಂದೇ ಕ್ಷಣ ಕಳೆಯುತ್ತಿರುವಂತೆ ಅವನ ಮನಸ್ಸಿನಲ್ಲಿ ಅಸಹನೆ ಏರುತ್ತಿತ್ತು. ಆತುರ ತೀವ್ರಗೊಳ್ಳುತ್ತಿತ್ತು. ಎಷ್ಟು ಹೊತ್ತಾದರೂ ಇವರು ಬರುತ್ತಿಲ್ಲವಲ್ಲ ? ತಾನು ಎಷ್ಟು ಹೊತ್ತು ನಿರೀಕ್ಷಿಸಬೇಕು ? ಅಸಹನೆಯಿಂದ ಕಾಲನ್ನು ನೆಲಕ್ಕೆ ತಾಡಿಸಿ, ಕುರ್ಚಿಯಲ್ಲಿ ಕುಸಿದು ಕುಳಿತ. ಭುಜದ ಸುತ್ತಲೂ ಹೊದ್ದುಕೊಂಡಿದ್ದ ಶಾಲನ್ನು ಸರಿಪಡಿಸಿ ಕೊಂಡು ಹಲ್ಲು ಕಚ್ಚಿ ಮತ್ತೆ ಎದುರು ನೋಡತೊಡಗಿದ. ಕೊಂಚ ಹೊತ್ತಿನ ಮುಂಚೆಯೇ ಕರೆಂಟ್ ಹೋಗಿತ್ತು. ಮನೆಯಲ್ಲಿದ್ದ ಜನರೇಟರ್ ಆನ್ ಮಾಡಿದ. ವರಾಂಡದ ಒಂದು ಮೂಲೆಯಿಂದ ಜನರೇಟರ್ ಸಪ್ಪಳ ಮಾಡುತ್ತಾ ಅವನ ಅಸಹನೆಯನ್ನು ಮತ್ತಷ್ಟು ಹೆಚ್ಚಿಸಿತು. ಮತ್ತೊಮ್ಮೆ ಎಡಗೈ ಎತ್ತಿ ಟೈಮ್ ನೋಡಿಕೊಂಡ. ಅಲ್ಲಿಗೆ ಅದು ನೂರಾಹತ್ತನೇ ಸಲ. ಯಾವ ಕ್ಷಣದಲ್ಲಿ ಯಾದರೂ ಟೆಲಿಫೋನ್ ಬರಬಹುದು. ಅಷ್ಟರೊಳಗಾಗಿ ತಾನು ಕಳುಹಿಸಿದ ವ್ಯಕ್ತಿಗಳು ತಿರುಗಿ ಬರಬೇಕು. ಇಲ್ಲದಿದ್ದರೆ ಅಂದುಕೊಂಡಿದ್ದೆಲ್ಲಾ ತಲೆಕೆಳಗಾ ಗುತ್ತದೆ. ಜನರೇಟರ್ ಸಹಾಯದಿಂದ ಪ್ರಕಾಶಮಾನವಾಗಿ ಬೆಳಗುತ್ತಿದ್ದ ಮರ್ಕ್ಯುರಿ ಡೂಮ್‌ಲೈಟ್ ಬೆಳಕಿನಲ್ಲಿ ಆಕಾಶದಿಂದ ಬೀಳುತ್ತಿದ್ದ ಮಳೆಯ ಧಾರೆ ಬೆಳ್ಳಿಯ ಧಾರೆಯಂತೆ ಕಾಣಿಸುತ್ತಿತ್ತು. ಮುಚ್ಚಿದ್ದ ಗೇಟು ತೆರೆದು ಕೊಳ್ಳುವ ಕ್ಷಣಕ್ಕೋಸ್ಕರ ಎದುರು ನೋಡುತ್ತಾ ಆ ಕಡೆಯೇ ದೃಷ್ಟಿ ಇಟ್ಟು ಕೊಂಡು ಕುಳಿತಿದ್ದ. ಒಂದೊಂದು ಕ್ಷಣವೂ ಭಾರವಾಗಿ ಕಳೆಯುತ್ತಿತ್ತು. ಜುಬ್ಬಾದ ಜೇಬು ತಡವುತ್ತಾ ಸಿಗರೇಟ್ ಪ್ಯಾಕ್ ಹೊರತೆಗೆದ. ಸಿಗರೇಟ್ ತೆಗೆದು ತುಟಿಗಳ ನಡುವೆ ಸಿಕ್ಕಿಸಿಕೊಂಡ. ಲೈಟರ್ ತೆಗೆದು ಸಿಗರೇಟ್ ಹೊತ್ತಿಸಿ ಕೊಳ್ಳಲು ನೋಡಿದ.

ಹಠಾತ್ತನೆ ಗೇಟಿನ ಹತ್ತಿರ ಶಬ್ದ ಕೇಳಿಸಿತು. ತಲೆಯೆತ್ತಿ ನೋಡಿದ. ಅವನು ಕಳುಹಿಸಿದ ವ್ಯಕ್ತಿಗಳು ತಿರುಗಿ ಬರುತ್ತಿದ್ದರು. ಹೊತ್ತಿಸಿಕೊಳ್ಳಲಿದ್ದ ಸಿಗರೇಟ್ ಅನ್ನು ನೆಲಕ್ಕೆಸೆದು ಥಟ್ಟನೆದ್ದು ಒಂದೇ ಹೆಜ್ಜೆಗೆ ಅವರನ್ನು ಸಮೀಪಿಸಿದ. ಕೊಡೆಗಳನ್ನು ಮಡಿಸಿಕೊಂಡು ಒಳಗೆ ಬರುತ್ತಿದ್ದ ಅವರ ಶರೀರಗಳು ಮಳೆಗೆ ಪೂರ್ತಿ ತೊಯ್ದು ಹೋಗಿದ್ದವು. ಜೋರಾಗಿ ಬೀಸುತ್ತಿದ್ದ ಗಾಳಿಯಿಂದಾಗಿ ಅವರ ಕೊಡೆಗಳು ಪ್ರಯೋಜನಕ್ಕೆ ಬಂದಿರಲಿಲ್ಲ. ಅವು ಹಾರಿ ಹೋಗದಿರಲೆಂದು ಅವುಗಳನ್ನು ಮಡಚಿ ಕಂಕುಳಲ್ಲಿಟ್ಟುಕೊಂಡೇ ಬಂದಿದ್ದರು. ತಲೆಯ ಕೂದಲಿನಿಂದ ಎಲ್ಲರ ಮುಖಗಳ ಮೇಲೂ ನೀರು ಧಾರಾ ಕಾರವಾಗಿ ತೊಟ್ಟಿಕ್ಕುತ್ತಿತ್ತು.

"ಏನಾಯ್ತು ? ಹೋದ ಕೆಲಸ ಆಯ್ತಾ ?" ಆತುರದಿಂದ ಕೇಳಿದ.

ಒಳ ಬಂದವರಲ್ಲಿ ಒಬ್ಬ ಮುಖದ ಮೇಲಿನ ನೀರನ್ನು ಅಂಗೈನಿಂದ ಒರೆಸಿ ಕೊಳ್ಳುತ್ತಾ ಅಡ್ಡವಾಗಿ ತಲೆಯಾಡಿಸಿದ. "ಇಲ್ಲ ಯಜಮಾನ್ರೆ! ನೀವು ಕೇಳಿದಂತಹ ವ್ಯಕ್ತಿ ಸಿಗೋದು ಮೊದ್ಲೇ ಕಷ್ಟ.ಅಂಥಾದ್ರಲ್ಲಿ ಈ ಮಳೆ-ಗಾಳೀಲಿ ಯಾರೂ ಬರೋಕೆ ಒಪ್ಪೋಲ್ಲ. ಸಿಟಿ ಎಲ್ಲಾ ಸುತ್ತು ಹಾಕಿದ್ವಿ. ಆದ್ರೂ....."

ಮಾತು ಪೂರ್ತಿಯಾಗುವುದರೊಳಗೆ ಅವನ ಕೆನ್ನೆ ಚುರ್ರೆಂದಿತು.

"ನೀವೆಲ್ಲಾ ಯಾವ ಕೆಲಸಕ್ಕೂ ಉಪಯೋಗವಿಲ್ಲದವರು. ಬರೀ ಕೈಲಿ ಹಿಂದಿರುಗಿ ಬರಕೂಡದೆಂದು ಮೊದಲೇ ಹೇಳಿದ್ನೋ ಇಲ್ವೋ........" ಕೋಪದಿಂದ ಕೆಂಪೇರಿದ ಕಣ್ಣುಗಳಿಂದ, ಬುಸುಗುಡುತ್ತಾ ಅರಚುತ್ತಿದ್ದವನು ಥಟ್ಟನೆ ನಿಂತ. ಒಳಗೆ ಟೆಲಿಫೋನ್ ಮೊಳಗತೊಡಗಿತು. ಅಪ್ರಯತ್ನವಾಗಿ ಎಡಗೈ ಎತ್ತಿ ಟೈಮ್ ನೋಡಿಕೊಂಡ. "ಮೈ ಗಾಡ್! ಟೈಮಾಗಿದೆ! ಅವರಿಂದಲೇ ಟೆಲಿ ಫೋನ್! ಈಗೇನು ಮಾಡಬೇಕು?" ಅವನು ತಲೆ ಜಾಡಿಸಿ ಆ ವ್ಯಕ್ತಿಗಳ ಕಡೆ ಇಮ್ಮಡಿ ಕೋಪದಿಂದ ನೋಡಿದ. "ನಿಮ್ಮನ್ನ ನಂಬಿದ್ರೆ ನನ್ನ ಕೆಲಸಗಳೆಲ್ಲಾ ಸರ್ವನಾಶವಾಗೋ ಹಾಗಿವೆ. ಹೋಗಿ ಮತ್ತೆ ಹುಡುಕಿ. ಈ ಸಲ ಕೆಲಸ ಆಗ್ಲಿಲ್ಲಾಂತ ವಾಪಸ್ ಬರಕೂಡದು ಗೊತ್ತಾಯ್ತಾ. ಗೆಟ್‌ಲಾಸ್ಟ್!" ಎಂದು ಕಿರುಚಿ, ಸರಕ್ಕನೆ ಹಿಂದಿರುಗಿ ಟೆಲಿಫೋನ್ ಇದ್ದ ಕೋಣೆಯೊಳಗೆ ಹೋದ. ಟೆಲಿಫೋನ್ ರಿಸೀವರ್ ಎತ್ತುವ ಮೊದಲು ಒಂದು ಸಲ ಗಂಟಲು ಸರಿಪಡಿಸಿ ಕೊಂಡ. ಅತೀವ ಪ್ರಯತ್ನದಿಂದ ತನ್ನಲ್ಲಿ ಆತುರವನ್ನು ಅಡಗಿಸಿಕೊಂಡ. ಸೌಮ್ಯವಾಗಿ ಕೋಲೆಬಸವನಂತೆ ಮಾರ್ಪಟ್ಟ. "ಹಲೋ! ನಾನು ದಯಾಕರ ರಾವ್ ಮಾತಾಡ್ತಿದೀನಿ".

"ನಾನಯ್ಯಾ, ತಾರಕನಾಮ ಮಾತಾಡ್ತಿದೀನಿ!"

ದಯಾಕರರಾವ್ ಉಗುಳು ನುಂಗಿದ. "ಹೇಳಿ ತಾರಕನಾಮರವರೆ!" ಇಲ್ಲದ ಗಾಂಭೀರ್ಯವನ್ನು ತಂದುಕೊಳ್ಳುತ್ತಾ ನುಡಿದ.

ಈ ತಾರಕನಾಮ ಜಾರು ಬಂಡೆಯಂತಹವನು. ಎಚ್ಚರಿಕೆಯಿಂದಿರದಿದ್ದರೆ ಎಂತಹವನಾದರೂ ಇವನ ದೆಸೆಯಿಂದ ಮೇಲಿನಿಂದ ಜಾರಿ ಕೆಳಗೆ ಬೀಳುತ್ತಾನೆ. ಇವನೊಂದಿಗೆ ಮಾತಾಡುವಾಗ ಎಚ್ಚರಿಕೆಯಿಂದಿರಬೇಕು. ರಾಜಕೀಯದಲ್ಲಿ ಇಂತಹವರ ಅಗತ್ಯ ನಾಯಕರಿಗೆ ಯಾವಾಗಲೂ ಇರುತ್ತದೆ. ಇವರು ಪದವಿಗಳ ಬ್ರೋಕರ್‌ಗಳು, ಇವರಿಗೆ ಪ್ರತ್ಯೇಕವಾಗಿ ಪಾರ್ಟಿಯಲ್ಲಿ ಪ್ರತ್ಯೇಕ ಸ್ಥಾನ ಗಳೇನೂ ಇರುವುದಿಲ್ಲ. ಆದರೂ ಅಧಿಕಾರ ಯಂತ್ರದ ಸ್ವಿಚ್ ಇವರ ಕೈಯಲ್ಲಿ ಇರುತ್ತದೆ. ಎಲ್ಲ ಕೆಲಸಗಳೂ ತಮ್ಮಿಂದಲೇ ಆಗಿರುವಂತೆ ಗಡಿಬಿಡಿಯಿಂದ ಓಡಾಡು ತ್ತಿರುತ್ತಾರೆ! ನಾಲಿಗೆಯ ಬಲದಿಂದ ಬದುಕುತ್ತಿರುತ್ತಾರೆ. ಈ ತಾರಕನಾಮನ

ವೈಶಿಷ್ಟ್ಯವೇನೆಂದರೆ ಪಾರ್ಟಿ ಸೆಕ್ರೆಟರಿಗೆ ಚೆನ್ನಾಗಿ ಕಾಕಾ ಹಿಡಿದು ಅವನ ನೆರಳಲ್ಲಿರುವುದು.

"ಏನು ಹೇಳುವುದು ?" ರಾಗ ಎಳೆದ ತಾರಕನಾಮ. "ಪಾರ್ಟಿ ಸೆಕ್ರೆಟರಿಯವರು ನಿನಗೋಸ್ಕರ ಎದುರು ನೋಡ್ತಾ ಕೂತಿದಾರಯ್ಯ! ಹೇಳಿದ ಕೆಲಸ ಏನಾಯ್ತು ?"

ದಯಾಕರರಾವ್ ಒಳಗೊಳಗೇ ಅವಡು ಕಚ್ಚಿದ. ಅವನನ್ನು ಯಾರೂ ಏಕವಚನದಲ್ಲಿ ಸಂಬೋಧಿಸುತ್ತಿದ್ದುದಿಲ್ಲ. ಸಂಬೋಧಿಸುವ ಸಾಹಸ ಮಾಡುತ್ತಿದ್ದುದಿಲ್ಲ. ಕೆಲವರು ಭಯದಿಂದ, ಕೆಲವರು ಗೌರವದಿಂದ. ದಯಾಕರರಾವ್‌ನ ನೈಜಗುಣ ತಿಳಿದವರು ಭಯದಿಂದ ಅವನನ್ನು ಗೌರವಿಸುತ್ತಿದ್ದರು. ತಿಳಿಯದವರು ಗೌರವದಿಂದ ಅವನನ್ನು ಗೌರವಿಸುತ್ತಿದ್ದರು. ದಯಾಕರರಾವ್ ಆ ನಗರದಲ್ಲಿ 'ಹೆಸರುವಾಸಿ'ಯಾದ ಸಮಾಜ ಸೇವಕ. ಪ್ರಸ್ತುತ ಅವನ ದೃಷ್ಟಿ ರಾಜಕೀಯದ ಮೇಲಿತ್ತು. ಬರಲಿರುವ ಚುನಾವಣೆಗಳಲ್ಲಿ ಲೋಕಸಭೆಯ ಸೀಟಿಗೋಸ್ಕರ ಆರು ತಿಂಗಳ ಮುಂಚಿನಿಂದಲೇ ಪ್ರಯತ್ನಿಸುತ್ತಿದ್ದ.

"ದಯವಿಟ್ಟು ಸೆಕ್ರೆಟರಿಯವರಿಗೆ ಫೋನ್ ಕೊಡ್ತೀರಾ ?" ಅದೇ ಗಾಂಭೀರ್ಯದಿಂದ ಕೇಳಿದ. ತಾರಕನಾಮನೊಂದಿಗೆ ಆ ವಿಷಯ ಮಾತಾಡುವುದು ದಯಾಕರರಾವ್‌ನಿಗೆ ಇಷ್ಟವಿರಲಿಲ್ಲ.

"ಸಾಧ್ಯವಿಲ್ಲಯ್ಯಾ!" ತಾರಕನಾಮ ಖಂಡಿತವಾಗಿ ಹೇಳಿಬಿಟ್ಟ. "ಸೆಕ್ರೆಟರಿಯವರು ಬಿಜಿಯಾಗಿದ್ದಾರೆ. ಅವರಿಗೆ ನಿಂದೊಂದೇ ಕೆಲಸಾನಾ ? ನೂರೆಂಟು ಬೇರೆ ಕೆಲಸ. ಅದೂ ಅಲ್ದೆ ಇಷ್ಟು ಚಿಕ್ಕ ವಿಷಯಕ್ಕೆ ಅವರೊಂದಿಗೆ ನೇರವಾಗಿ ಮಾತಾಡ್ತೀನಿ ಅಂತಿದ್ದೀಯಲ್ಲ ? ಇಷ್ಟಕ್ಕೂ ಕೆಲಸ ಮಾಡ್ತೀಯಾ ? ಇಲ್ವಾ?"

ದಯಾಕರರಾವ್ ನಿಟ್ಟುಸಿರಿಟ್ಟ. ಇಲ್ಲಿಯವರೆಗೆ ಪಾರ್ಟಿ ಸೆಕ್ರೆಟರಿ ತನಗೋಸ್ಕರ ಎದುರು ನೋಡುತ್ತಿದ್ದಾನೆಂದು ಹೇಳಿದ ತಾರಕನಾಮ, ಈಗ ಆತ ತುಂಬಾ ಬಿಜಿಯಾಗಿದ್ದಾನಂತ ಹೇಳುತ್ತಿದ್ದಾನೆ. ತಾರಕನಾಮನಂತಹ ವ್ಯಕ್ತಿಗಳು ಅಷ್ಟು ಸುಲಭವಾಗಿ ತಮ್ಮ ಪ್ರಾಧಾನ್ಯ ಬಿಟ್ಟು ಕೊಡುವುದಿಲ್ಲ. ಇಂತಹ ಬ್ರೋಕರೇಜ್ ಕೆಲಸಗಳಿಂದಲೇ ತಮ್ಮ ಸ್ಥಾನ ಉಳಿಸಿಕೊಳ್ಳುತ್ತಾ ಬರುತ್ತಾರೆ. ಇಂತಹವರಿಗೇ ಒಂದು ಹೆಸರಿದೆ "ಚಮಚಾ"! ತಾರಕನಾಮನಂತಹ ಚಮಚಾಗಳನ್ನು ತನ್ನ ಬಳಿಯಿಟ್ಟುಕೊಂಡ ಪಾರ್ಟಿ ಸೆಕ್ರೆಟರಿಯ ಮೇಲೆ ದಯಾಕರರಾವ್‌ನಿಗೆ ಕೋಪ ಬಂತು. ಆದರೂ ಸುಧಾರಿಸಿಕೊಂಡ. ತಾನು ನಿಸ್ಸಹಾಯಕ. ವಿನಯದಿಂದ ಕೆಲಸ ಸಾಧಿಸಿಕೊಳ್ಳಬೇಕಾದವನು. ಸದ್ಯಕ್ಕೆ ಹಿಡಿತ ತಾರಕನಾಮನ ಕೈಯಲ್ಲಿಯೇ ಇದೆ ಎಂದುಕೊಂಡು "ತಾರಕನಾಮರವರೇ

ಸೆಕ್ರೆಟರಿಯವರು ಕೊಂಚ ತಡೆದುಕೊಳ್ಳಬೇಕು! ಹಠಾತ್ತನೆ ಅವರು ಕೇಳಿ ದಂತಹ ವ್ಯಕ್ತಿಯನ್ನು ಹಿಡಿದು ತರುವುದು ಕೊಂಚ ಕಷ್ಟದ ಕೆಲಸ! ಅದರಲ್ಲೂ ಈ ಮಳೆಯಲ್ಲಿ........!"

"ಆಂ........! ಅತ್ತಲಿಂದ ತಾರಕನಾಮನ ಧ್ವನಿ ಕೇಳಿಸಿತು. "ಅಂದ್ರೆ ಕೆಲಸ ಆಗೋದಿಲ್ಲಾಂತೀಯಾ ?"

ಕೆಲಸ ಆಗೋದಿಲ್ಲಾಂತ ನಾನ್ಯಾವಾಗಹೇಳ್ದೆ ?" ತನ್ನ ಗಾಂಭೀರ್ಯ ವನ್ನು ತಾರಕನಾಮನ ಮುಂದೆ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಾ ನುಡಿದ ದಯಾಕರರಾವ್."ಸೆಕ್ರೆಟರಿಯವರು ಕೊಂಚ ತಡ್ಕೋಬೇಕು ಅಂತ ಹೇಳ್ತಿದೀನಿ. ಇಷ್ಟು ಮಳೆಯಲ್ಲಿ ಅವರ ಕೆಲಸ ನಡೆಸೋದು ಕಷ್ಟಾನೇ. ಕನಿಷ್ಟ ನಾಳೆ ಯಾದ್ರೂ ನಾನು ತಪ್ಪದೆ...."

"ಏನು! ನಾಳೇನಾ ? ಅಂದ್ರೆ ಈ ರಾತ್ರಿ ಸೆಕ್ರೆಟರಿಯವರು ಒಂಟಿಯಾಗಿ ಮಲಕ್ಕೋಬೇಕೆಂದಾಯ್ತು! ನಾಳೆ ಯಾವನಿಗೆ ಬೇಕಯ್ಯಾ?" ತಾರಕನಾಮ ನಿಗೆ ಎದುರಿನವರನ್ನು ಗೋಳಾಡಿಸುವುದೆಂದರೆ ಮೋಜು! "ನೋಡು ದಯಾಕರ ರಾವ್! ನಿನಗೇ ಪಾರ್ಟಿ ಟಿಕೆಟ್ ಬೇಕು ಅಂತಿದ್ರೆ ಯಜಮಾನ್ರು ಹೇಳಿದ ಕೆಲಸ ಥಟ್ಟನೆ ಮಾಡ್ಕೊಡು. ಇಲ್ದಿದ್ರೆ ಅಷ್ಟೇ ಮತ್ತೆ!"

ದಯಾಕರರಾವ್ ತಾರಕನಾಮನ ಮುಂದೆ ಮೊದಲ ಸಲ ಶರಣಾದ. "ತಾರಕನಾಮರವರೆ! ನೀವೇ ಹಾಗಂದ್ರೆ ಹೇಗೆ ?" ಎಂದ.

ದಯಾಕರರಾವ್ ಸೋಲುತ್ತಿದ್ದಾನೆಂದು ತಾರಕನಾಮ ಸ್ಪಷ್ಟವಾಗಿ ಗುರುತು ಹಿಡಿದ. ಎದುರಿನವನ ದೌರ್ಬಲ್ಯದ ಮೇಲೆ ಪೆಟ್ಟುಕೊಟ್ಟು ಶರಣಾ ಗತನನ್ನಾಗಿಸುವುದು ಅವನ ವೈಶಿಷ್ಟ್ಯ. ದಯಾಕರರಾವ್ ಬಿಳಿ ಧ್ವಜ ಎತ್ತುವ ಲಕ್ಷಣಗಳು ಕಾಣಿಸಿದ್ದರಿಂದ ತಾರಕನಾಮ ಮತ್ತೂ ಜೋರಾದ. "ಹೇಗೆ ಅಂದ್ರೆ ಏನಯ್ಯಾ ನನ್ನ ಪಿಂಡ ? ಯಜಮಾನ್ರು ಹೇಳಿದ ಕೆಲಸ ಮಾಡು. ಪಾರ್ಟಿ ಟಿಕೆಟ್ ನಿಂದೇ ಆಗುತ್ತೆ. ಇಲ್ದಿದ್ರೆ ತೆಪ್ಪಗಿರು. ಪಾರ್ಟಿ ಟಿಕೆಟ್ಟಿಗೋಸ್ಕರ ಈಗಾಗಲೇ ಸವಾಲಕ್ಷ ಜನ ಕ್ಯೂನಲ್ಲಿ ನಿಂತಿದಾರೆ. ನೀನೇನೋ ಒಳ್ಳೆಯವನು, ಸಮರ್ಥ ಅಂತ ಯಜಮಾನ್ರು ನಿನ್ನನ್ನ ಆರಿಸಿದ್ದಾರೆ. ಅದಿರ್ಲಿ, ನನಗೆ ತಿಳೀದೆ ಕೇಳ್ತಿದೀನಿ– ಇಷ್ಟು ಚಿಕ್ಕ ಕೆಲಸ ಮಾಡೋಕಾಗ್ದಿದ್ದವನು, ನಾಳೆ ಪಾರ್ಟಿ ಟಿಕೆಟ್ ನಿನಗೆ ಕೊಟ್ರೆ ಏನು ಮಾಡ್ತೀಯಾ, ಹೇಳು ? ಎಲೆಕ್ಷನ್ ಅಂದ್ರೆ ಹುಡುಗಾಟಾನಾ ! ಎಷ್ಟು ಜನರನ್ನ ಕೂಡಿಸ್ಬೇಕು, ಎಷ್ಟು ಜನರಿಗೆ ಸಾರಾಯಿ ಕುಡಿಸಬೇಕು, ಎಷ್ಟು ಜನರಿಗೆ ದುಡ್ಡು ಹಂಚಬೇಕು, ಎಷ್ಟು ರಿಗ್ಗಿಂಗ್ ಮಾಡಬೇಕು, ಅಗತ್ಯ ಬಿದ್ರೆ ಕೊಲೆ ಕೂಡ ಮಾಡಿಸ್ಬೇಕು. ಇಷ್ಟು

ಚಿಕ್ಕ ಕೆಲಸವೇ ನಿನ್ನಿಂದ ಮಾಡೋಕ್ಕಾಗ್ದಿದ್ಮೇಲೆ ಅಂಥಂತಹ ದೊಡ್ಡ ದೊಡ್ಡ ಕೆಲಸ ಹೇಗೆ ಮಾಡಬಲ್ಲೆ ? ಹೇಗೆ ಮಾಡಬಲ್ಲೆ ಅಂತ!”.

“ಅದಲ್ಲಾರಿ....” ದಯಾಕರರಾವ್ ಏನೋ ಹೇಳಲು ಹೋದ.

“ಅದೇನೂ ಹೇಳ್ಬೇಡಯ್ಯಾ ! ನಿನಗೆ ಮತ್ತೊಂದು ಗಂಟೆ ಟೈಮ್ ಕೊಡ್ತೀನಿ.ಈ ಗಂಟೆ ಹೊತ್ತಿನಲ್ಲಿ ಯಜಮಾನ್ರು ಹೇಳಿದ್ದನ್ನ ನಡೆಸು. ಇಲ್ದಿದ್ರೆ ಪಾರ್ಟಿ ಟಿಕೆಟ್‌ನ ವಿಷಯ ಮರೆತ್ಬಿಡು ಅಷ್ಟೆ!”.

ಟೆಲಿಫೋನ್ ಡಿಸ್‌ಕನೆಕ್ಟ್ ಆದ ಶಬ್ದ ಕೇಳಿಸಿತು. ದಯಾಕರರಾವ್‌ನ ಮುಖ ಕರ್ರಗೆ ಬಾಡಿ ಹೋಯಿತು. ಕೆಲವು ಕ್ಷಣ ಕೈಯಲ್ಲಿನ ರಿಸೀವರ್ ಕಡೆ ಹುಚ್ಚನಂತೆ ನೋಡಿ ಕ್ರೆಡಲ್ ಮೇಲೆ ಎಸೆದ.

ಒಂದು ಗಂಟೆ! ಒಂದು ಗಂಟೆಯಲ್ಲಿ ಪಾರ್ಟಿ ಸೆಕ್ರೆಟರಿ ಕೇಳಿದ ಕೆಲಸ ಮಾಡಿಕೊಡಬೇಕು. ಒಂದು ಗಂಟೆ ದಾಟಿ ಹೋದರೆ ರಾಜಕೀಯದಲ್ಲಿ ತನ್ನ ಭವಿಷ್ಯ ಅಂತ್ಯವಾಗುತ್ತದೆ. ಟು ಹೆಲ್ ವಿತ್ ಪಾಲಿಟಿಕ್ಸ್!.

ಅವನು ಆ ರೀತಿ ಆಲೋಚಿಸುತ್ತಿರುವಂತೆ ಮನೆಯ ಹೊರಗಿನ ಗೇಟನ್ನು ಯಾರೋ ತೆರೆಯುತ್ತಿರುವ ಶಬ್ದ ಕೇಳಿಸಿತು. ಸರಕ್ಕನೆ ಹಿಂದಿರುಗಿ ವರಾಂಡದೊಳಕ್ಕೆ ಹೋಗಿ ನೋಡಿದ. ಜೋರಾಗಿ ಬೀಳುತ್ತಿದ್ದ ಮಳೆಯಲ್ಲಿ ಪೂರ್ತಿಯಾಗಿ ತೊಯ್ದು ಹೋದ ಎರಡು ಆಕಾರಗಳು ಗೇಟು ತೆರೆದು ಒಳಗೆ ಬರುತ್ತಿದ್ದವು. ಆ ಆಕಾರಗಳನ್ನು ನೋಡುತ್ತಲೇ ಅವನ ಹುಬ್ಬು ಗಂಟಿಕ್ಕಿತು. ನೋಡುತ್ತಿರುವಂತೆಯೇ ಅವರಿಬ್ಬರೂ ಮಳೆಯಲ್ಲಿ ತೊಯ್ಯುತ್ತಾ ಓಡುತ್ತಾ ಮೆಟ್ಟಿಲು ಹತ್ತಿ ವರಾಂಡದೊಳಕ್ಕೆ ಬಂದು, ಅವನ ಎದುರಿಗೆ ನಿಂತರು. ಯಾರೋ, ಏನೋ ಅವರು ವಿಪರೀತವಾಗಿ ನಡುಗುತ್ತಿದ್ದರು. ಹಲ್ಲು ಕಟಕಟ ವೆನ್ನುತ್ತಿದ್ದವು. ಮಳೆಯಲ್ಲಿ ತೊಯ್ದಿದ್ದರಿಂದ ಬಟ್ಟೆಗಳಿಂದ ಸೋರುತ್ತಿದ್ದ ನೀರು ವರಾಂಡದಲ್ಲಿನ ಪಾಲಿಶ್ಡ್‌ಸ್ಟೋನ್‌ಫ್ಲೋರಿಂಗ್ ಮೇಲೆ ಮಡುಗಟ್ಟತೊಡಗಿತ್ತು. ಏಕೋ, ಏನೋ ಆ ಯುವತಿಯ ಕಣ್ಣುಗಳು ಭಯ ವಿಹ್ವಲತೆಯಿಂದ ನೋಡುತ್ತಿದ್ದವು. ಏಕೋ ಏನೋ ಅವಳ ಭುಜಗಳು ಹಾರಿ ಬೀಳುತ್ತಿದ್ದವು. ಅವಳು ಅಳುತ್ತಿದ್ದಾಳೆಂದೂ, ಆದ್ದರಿಂದಲೇ ಅವಳ ಭುಜಗಳು ಹಾರಿ ಬೀಳುತ್ತಿವೆಯೆಂದೂ ಕಣ್ಣಿಂದ ಜಾರುತ್ತಿರುವ ನೀರು ಮಳೆಯ ನೀರಿನಲ್ಲಿ ಬೆರೆಯುತ್ತಿದೆಯೆಂದು ಅವನಿಗೆ ನಿಧಾನವಾಗಿ ಅರ್ಥವಾಯ್ತು. ಅವನ ನೋಟ ಅಪ್ರಯತ್ನವಾಗಿ ಅವಳ ವಕ್ಷಸ್ಥಳದ ಮೇಲೆ ಬಿತ್ತು. ಮರುಕ್ಷಣ ಅವನಿಗೆ ಎಲೆಕ್ಟ್ರಿಕ್ ಶಾಕ್ ಹೊಡೆದಂತಾಯಿತು. ಹೃದಯ ಝಲ್ಲೆಂದಿತು. ಹದಿನೈದರ ಪ್ರಾಯದಲ್ಲಿನ ಯೌವನ ಕಲಶಗಳು, ತೊಯ್ದು ಮೈಗಂಟಿಕೊಂಡ ಅವಳ ಬ್ಲೌಜ್

ನೊಳಗಿಂದ ಅಸ್ಪಷ್ಟವಾಗಿ ಮೇಘಗಳ ಹಿಂದೆ ಅಡಗಿಕೊಂಡ ಎರಡು ತುಂಬು ಚಂದ್ರನಂತೆ ಕಾಣಿಸುತ್ತಿದ್ದವು. ಒಂದೇ ಸಲಕ್ಕೆ ಯಾವುದೋ ಹರಿತವಾದ ಬಾಣ ಹೃದಯದಿಂದ ನುಗ್ಗಿ ಹೋದ ಅನುಭವವಾಗಿ ಸ್ತಂಭೀಭೂತನಾಗಿ ಕಣ್ಣರಳಿಸಿ ಅವಳನ್ನು ನೋಡುತ್ತಾ ನಿಂತುಬಿಟ್ಟ.

ಅದೇ ಸಮಯದಲ್ಲಿ ಆಕಾಶ ಭಯಂಕರವಾಗಿ ಗುಡುಗಿತು. ಕಣ್ಣು ಕೋರೈಸುವಂತೆ ಮಿಂಚಿತು. ಜನರೇಟರ್ ಶಕ್ತಿಯಿಂದ ಬೆಳಗುತ್ತಿದ್ದ ಮರ್ಕ್ಯುರಿ ಡೂಮ್ ಲೈಟ್‌ಗಳ ಕಾಂತಿಯನ್ನು ಪರಿಹಾಸ ಮಾಡುವಂತೆ ಮಿಂಚಿದ ಆ ಮಿಂಚಿನ ಬೆಳಕಲ್ಲಿ ಅವಳು ದೇದೀಪ್ಯಮಾನವಾಗಿ ಪ್ರಕಾಶಿಸುವ ಸೌಂದರ್ಯ ದಿಂದ ಒಂದೇ ಸಾರಿಗೆ ಕಣ್ಣೆದುರು ಪ್ರತ್ಯಕ್ಷವಾದ ದೇವ ಕನ್ಯೆಯಂತೆ ಕಾಣಿಸಿ ದಳು. ಒಂದೇ ಸಲಕ್ಕೆ ಸಂಧಿಸಿ ಬಿಟ್ಟ ಸಮ್ಮೋಹನಾಸ್ತ್ರ ತಗುಲಿದ ಅವನ ಹೃದಯ ಗಾಯಗೊಂಡ ಪಾರಿವಾಳದಂತೆ ವಿಲವಿಲನೆ ಒದ್ದಾಡಿತು. ಅವನ ನೋಟ ಅರೆಕ್ಷಣದಲ್ಲಿ ಆಪಾದಮಸ್ತಕ ಅವಳ ಶರೀರವನ್ನಳೆಯಿತು. ಭಯ ವಿಹ್ವಲತೆಯಿಂದ ಗಾಯಗೊಂಡ ಜಿಂಕೆಯಂತೆ ನೋಡುತ್ತಿದ್ದರೂ ಅವಳ ಕಣ್ಣು ಗಳಲ್ಲಿ ಹೃದಯವನ್ನು ಹಿಂಡುವ ಮಹತ್ತರವಾದ ಶಕ್ತಿ ಯಾವುದೋ ಇತ್ತು. ಚಿಗುರೆಲೆಯಂತೆ ಕಂಪಿಸುತ್ತಿದ್ದರೂ ಅವಳ ಶರೀರದಲ್ಲಿ ಮಿಂಚಿನ ಬಳ್ಳಿಯಲ್ಲಿ ಕಾಣಿಸುವ ಪ್ರಕಂಪನಗಳು ಯಾವವೋ ಇದ್ದವು. ಏನೋ ಏನೇನೋ ಇದ್ದವು. ನಕ್ಷತ್ರ ಲೋಕಗಳ ನಿಕ್ಷಿಪ್ತ ರಹದಾರಿಗಳು.... ಪ್ರತ್ಯಕ್ಷ ಸ್ವರ್ಗಗಳ ಸೌಂದರ್ಯ ಶಿಖರಗಳು.... ಲಾವಣ್ಯ ಕುಸುಮಗಳ ಮಕರಂದ ಪಾತ್ರೆಗಳು.... ನವಯೌವನ ಸಮುದ್ರಗಳ ಶೃಂಗಾರ ರಸ ಮನ್ಮಥ ತೀರಗಳು.... ತಾನಿದ್ದ ಪರಿಸ್ಥಿತಿಯಲ್ಲಿ ಅವಳು ಅವನ ನೋಟ ಗ್ರಹಿಸದೇ ಹೋದಳು. ಆಯಾಸದಿಂದ ಅವಳ ಎದೆ ಹಾರಿ ಹಾರಿ ಬೀಳುತ್ತಿತ್ತು.

ಒಬ್ಬ ಯುವತಿಯನ್ನು— ಅದರಲ್ಲೂ ಹದಿನೈದು ವರ್ಷದ ಅರೆ ಮಾಗಿ ದವಳನ್ನು ಆ ರೀತಿ ಕಣ್ಣರಳಿಸಿ ನೋಡುವದು ಸಭ್ಯತೆಯ ಲಕ್ಷಣವಲ್ಲವೆಂದು ಯಾವುದೋ ಚಿಂತೆಯಿಂದ, ಯಾವುದೋ ಭಯದಿಂದ ತನ್ನ ಹತ್ತಿರ ಓಡಿ ಬಂದ ನಿಸ್ಸಹಾಯಕಳನ್ನು ಆ ರೀತಿ ನೋಡುವುದು ನೀಚತನವೆಂದೂ ಅವನಿಗೆ ನೆನಪಾಗಲಿಲ್ಲ. ಕಣ್ಣಿಗೆ ತುಂಬಿಕೊಂಡು ಕಾಣಿಸುತ್ತಿದ್ದ ಅವಳ ಪರಿಪೂರ್ಣ ಪಯೋಧರಗಳನ್ನು ಕಣ್ಣರಳಿಸಿ ನೋಡುತ್ತಿದ್ದ ಅವನ ನೋಟ ಕೆಳಗೆ ಜಾರಿತು. ಮಳೆಯಲ್ಲಿ ತೊಯ್ದು ಮೈಗಂಟಿ ಹೋದ ಅವಳ ಪಟ್ಟೆ ಲಂಗ, ತೊಡೆಯ ಸೌಂದರ್ಯವನ್ನು ಎತ್ತಿ ತೋರಿಸುತ್ತಿತ್ತು. ಮೊಣಕಾಲ ಕೆಳಗೆ ನಗ್ನವಾಗಿ ಕಾಣಿಸುತ್ತಿದ್ದ ಅವಳ ಮೀನಖಂಡಗಳನ್ನು ನೋಡುತ್ತಿದ್ದರೆ ಅವನ ನರಗಳು

ಜಿಸ್ತೀಂದವು. ತಾನೊಬ್ಬ ಮನುಷ್ಯನೆಂದೂ, ಪ್ರತಿ ಮನುಷ್ಯನಿಗೂ ಕೆಲವು ಸಭ್ಯತೆ, ಸಂಸ್ಕಾರಗಳಿರಬೇಕೆಂಬುದನ್ನು ಅವನು ಮರೆತು ಬಿಟ್ಟ. ತಾನು ಯಾರೆಂಬುದನ್ನು ಮರೆತು ಬಿಟ್ಟ. ಅವಳು ಯಾರೆಂಬುದನ್ನು ಮರೆತು ಬಿಟ್ಟ.

"ಅಂಕಲ್!"

ಅವಳ ಕೂಗು ಕೇಳುವವರೆಗೂ ಅವನು ಈ ಲೋಕಕ್ಕೆ ಬರಲಿಲ್ಲ. ಅವಳ ಕೂಗು ಕೇಳಿದೊಡನೆಯೇ ಬೆಚ್ಚಿಬಿದ್ದು ಅವಳ ಕಡೆ ನೋಡಿದ."ಆ! ಮೇಖಲೆ.... ಮಣಿಮೇಖಲೆ ಅಲ್ವಾ ನಿನ್ನ ಹೆಸರು! ಸ್ವರಾಜ್ಯ ಲಕ್ಷ್ಮಿಯ ಮಗಳು". ಅವಳು ಹೌದೆನ್ನುವಂತೆ ತಲೆಯಾಡಿಸಿದಳು. ದಯಾಕರರಾವ್ ಅವಳನ್ನು ತುಂಬಾ ಸಲ ನೋಡಿದ್ದ. ಅವಳ ತಾಯಿ ಒಂದೊಮ್ಮೆ ನರ್ಸ್ ಆಗಿ ಕೆಲಸ ಮಾಡಿದವಳಾದ್ದರಿಂದ, ಗಂಡ ಸತ್ತ ನಂತರ ಪೂರ್ತಿಯಾಗಿ ಆರೋಗ್ಯ ಕೆಡುವವರೆಗೆ ಯಾವುದಾದರೂ ಒಂದು ಪ್ರಜಾ ಸೇವಾ ಕಾರ್ಯಕ್ರಮದಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಿದ್ದಳು. ಆ ರೀತಿ ಆಕೆ ದಯಾಕರರಾವ್‌ನಿಗೆ ಪರಿಚಯ. ಎರಡು ಮೂರು ಬಾರಿ ಮಣಿಮೇಖಲೆಯನ್ನು ಆಕೆ ದಯಾಕರರಾವ್‌ನ ಹತ್ತಿರ ಕಳುಹಿಸಿದ್ದಳು. ನಿಜವಾದ ಪ್ರಜಾ ಸೇವಕನೆಂದು ದಯಾಕರರಾವ್‌ನನ್ನು ಆಕೆ ಪೂರ್ತಿಯಾಗಿ ನಂಬಿದ್ದಳು.

ದಯಾಕರರಾವ್ ನಿಜಕ್ಕೆ ಒಬ್ಬ ಕುಹಕ ಪ್ರಜಾ ಸೇವಕ. ತನಗೇನಾದರೂ ಲಾಭ ಸಿಗದ ಹೊರತು ಅವನು ಯಾರಿಗೂ ಯಾವ ಸಹಾಯವನ್ನೂ ಮಾಡುವವನಾಗಿರಲಿಲ್ಲ. ಆದರೆ ಮಣಿಮೇಖಲೆಯ ತಾಯಿಯ ವಿಷಯದಲ್ಲಿ ಶ್ರದ್ಧೆ ವಹಿಸಿದ್ದ. ಅದಕ್ಕೆ ಕಾರಣ ಆಕೆಯ ಸೌಂದರ್ಯ. ದಯಾಕರರಾವ್ ಸಾಮಾನ್ಯನೇನಲ್ಲ. ಹೆಣ್ಣಿನ ಹುಚ್ಚು ವಿಪರೀತ. ಸ್ವರಾಜ್ಯ ಲಕ್ಷ್ಮಿಯನ್ನು ಮೊದಲ ಸಾರಿ ನೋಡಿದಾಗಲೇ ಅವನ ಕಣ್ಣು ಆಕೆಯ ಮೇಲೆ ಬಿದ್ದಿತ್ತು. ಗಂಡ ವಿಕಲಾಂಗ, ಹೆಂಡತಿ ಅಸಾಧಾರಣ ಸುಂದರಿ. ಆಕೆಯ ಮೇಲೆ ವಿಶೇಷ ಶ್ರದ್ಧೆ ತೋರಿಸಲು ಅಂತಹ ನೀಚನಿಗೆ ಇನ್ನೇನುಬೇಕು ? ಗಂಡ ಸತ್ತ ನಂತರ ದಯಾಕರರಾವ್ ಮೊಸಳೆ ಕಣ್ಣೀರು ಸುರಿಸುತ್ತಾ ಸ್ವರಾಜ್ಯ ಲಕ್ಷ್ಮಿಗೆ ತುಂಬಾ ಹತ್ತಿರವಾಗಲು ಪ್ರಯತ್ನಿಸಿದನಾದರೂ ಉತ್ತರೋತ್ತರದಲ್ಲಿ ಆಕೆಯ ಆರೋಗ್ಯ ಪೂರ್ತಿ ಕ್ಷೀಣಿಸಿದ್ದರಿಂದ ಅವನಿಗೆ ಆಕೆಯ ಮೇಲಿನ ಆಸಕ್ತಿ ಕುಂದಿತು.

ದಯಾಕರರಾವ್ ಮಣಿಮೇಖಲೆಯನ್ನು ಕೊನೆಯಬಾರಿ ನೋಡಿ ತುಂಬಾ ಕಾಲವಾಗಿತ್ತು. ಈಗ ಅವಳಲ್ಲಿ ತುಂಬಾ ಮಾರ್ಪಾಡು ಉಂಟಾಗಿತ್ತು. ಮುಖ್ಯವಾಗಿ ನವಯೌವನ ಅವಳ ಶರೀರದಲ್ಲಿ ಗೆಜ್ಜೆ ಕಟ್ಟಿಕೊಂಡು ನಾಟ್ಯವಾಡುತ್ತಿತ್ತು. ಒಬ್ಬ ವ್ಯಕ್ತಿಯೊಂದಿಗೆ ಒಂದು ಸಲ ಪರಿಚಯ ಏರ್ಪಟ್ಟ

ಮೇಲೆ ಆ ವ್ಯಕ್ತಿಯನ್ನು ಮರೆಯದೇ ಜ್ಞಾಪಕ ಇಟ್ಟುಕೊಳ್ಳುವುದು ದಯಾಕರರಾವ್‌ನವೈಶಿಷ್ಟ್ಯ.ಹೆಸರಿನೊಂದಿಗೆ ಜ್ಞಾಪಕವಿಟ್ಟುಕೊಳ್ಳುತ್ತಿದ್ದುದು ಇನ್ನೂ ವಿಶೇಷ.

"ಅರೆರೆ! ಎಷ್ಟು ಕಾಲ ಆಯ್ತು ನಿನ್ನನ್ನು ನೋಡಿ ? ಎಷ್ಟು ಬೆಳೆದಿದ್ದೀಯಾ ? ಚೆನ್ನಾಗಿದೀಯಾ ? ನಿಮ್ಮ ತಾಯಿ ಹೇಗಿದ್ದಾರೆ ?" ಇಲ್ಲದ ಆಸಕ್ತಿಯನ್ನು ಪ್ರದರ್ಶಿಸುತ್ತಾ ಕೇಳಿದ. ಅವನ ಕಣ್ಣುಗಳು ಮಾತ್ರ ಅವಳ ಶರೀರದ ಉಬ್ಬು-ತಗ್ಗುಗಳ ಮೇಲೆ ಹರಿದಾಡುತ್ತಿದ್ದುವು. ಅವನ ಪ್ರಶ್ನೆ ಕೇಳಿದೊಡನೆಯೇ ಅವಳಿಗೆ ಮತ್ತಷ್ಟು ಕಣ್ಣೀರು ಉಕ್ಕಿ ಬಂತು ಧ್ವನಿ ಗದ್ಗದವಾಯ್ತು.

"ಅಮ್ಮಂಗೆ ಏನೋ ಆಗಿದೆ ಅಂಕಲ್" ಬಿಕ್ಕಿಬಿಕ್ಕಿ ಅಳುತ್ತಾ ಹೇಳಿದಳು. "ಕೆಳಗೆ ಬಿದ್ದು ಕೈಕಾಲು ಬಡಿಮಕೊಳ್ಳುತ್ತಾ ಕಣ್ಣು ತೇಲಿಸುತ್ತಿದ್ದಾಳೆ. ದುಡ್ಡಿಲ್ಲಾಂತ ಹೋದ ಸಲ ಹೋದಾಗಲೇ ಡಾಕ್ಟರ್ ಬರೋದಿಲ್ಲ ಅಂದ್ರು. ಅಮ್ಮನ್ನ ನೋಡ್ತಿದ್ರೆ ನಂಗೆ ಭಯವಾಗ್ತಿದೆ ಅಂಕಲ್. ನೀವು ಡಾಕ್ಟರ್ನ ಕಳಿಸೋಲ್ವಾ!".

"ಅರೆರೆ! ಹಾಗಾ ? ಯಾವಾಗಾಯ್ತು ?" ಇಲ್ಲದ ಆತುರ ಪ್ರದರ್ಶಿಸುತ್ತಾ ಕೇಳಿದ. ಅವಳು ಹೇಳಿದ್ದನ್ನು ಕೇಳಿದೊಡನೆಯೇ ಅವನ ಮನಸ್ಸಿನಲ್ಲಿ ಏನೇನೋ ಆಲೋಚನೆಗಳು ಮೂಡತೊಡಗಿದವು.

"ಅದಕ್ಕೇನಾ ಬಂದಿದ್ದು ? ಈ ಮಳೇಲಿ ಇಷ್ಟೊತ್ನಲ್ಲಿ ಇವಳ್ಯಾಕೆ ಬಂದಳಪ್ಪಾ ಅಂತ ಯೋಚಿಸ್ತಿದ್ದೆ ಬಾ ಬಾ! ಪಾಪ ಮಳೇಲಿ ತೊಯ್ದಿದೀಯ ಮೊದಲು ತಲೆ ಒರೆಸಿಕೊ. ಈ ಹುಡುಗ ನಿನ್ನ ತಮ್ಮ ಅಲ್ವಾ? ಒಳಗೆ ನಡೆ!" ಎಂದ.

"ಇಲ್ಲ ಅಂಕಲ್! ಮೊದ್ಲು ಡಾಕ್ಟರನ್ನ ಕಳ್ಸಿ! ಪ್ಲೀಜ್ ಅಂಕಲ್! ನಮ್ಮ ತಾಯಿಯ ಪರಿಸ್ಥಿತಿ...."

"ಡಾಕ್ಟರ್ ತಾನೆ! ನಾನೀಗ್ಲೇ ಫೋನ್ ಮಾಡಿ ಡಾಕ್ಟರ್ ಜೊತೆ ಮಾತಾಡ್ತೀನಿ. ಬೇಕಾದ್ರೆ ನಾನೇ ಕಾರ್ನಲ್ಲಿ ಕರಕೊಂಡು ಹೋಗ್ತೀನಿ. ನೀನು ಮೊದ್ಲು ಒಳಗೆ ಬಾ, ನೆಗಡಿಯಾಗುತ್ತೆ!"

ಅವಳು ಅವನ ಕಡೆ ಅನಿಶ್ಚಿತವಾಗಿ ನೋಡಿ ಅಸ್ಪಷ್ಟವಾಗಿ ತಲೆಯಾಡಿಸಿದಳು. "ಮೊದಲು ಡಾಕ್ಟರ್‌ಗೆ ಫೋನ್ ಮಾಡಿ ಅಂಕಲ್!".

"ಮಾಡ್ತೀನಿ! ನನ್ನ ಕೋಣೆಯೊಳಗೆ ಹೋಗೋಣ ಬಾ!"

ಅವಳು ತಮ್ಮನ ಕೈ ಹಿಡಿದುಕೊಂಡು ಅವನನ್ನು ಹಿಂಬಾಲಿಸಿದಳು.

ದಯಾಕರರಾವ್ ತನ್ನ ಕೋಣೆಯೊಳಗೆ ಹೋಗಿ ಟೇಬಲ್‌ಹಿಂದಿನ ರಿವಾಲ್ವಿಂಗ್ ಛೇರ್‌ನಲ್ಲಿ ಆರಾಮವಾಗಿ ಕುಳಿತುಕೊಂಡ. ಅವನ ಅನುಮತಿಯಿಲ್ಲದೆ ಆ ಕೋಣೆಯೊಳಗೆ ಯಾರೂ ಬರುತ್ತಿರಲಿಲ್ಲ.

"ಡಾಕ್ಟರ್‌ಗೆ ಫೋನ್ ಮಾಡಿ ಅಂಕಲ್!" ಮೊತ್ತೊಂದು ಸಲ ಬೇಡಿಕೊಂಡಳು.

"ಮಾಡೋಣ,ನೀನು ಏನೋ ಹೇಳಿದ್ಯಲ್ಲ? ಡಾಕ್ಟರ್ ನಿಮ್ಮ ತಾಯೀನ ನೋಡೋದಿಕ್ಕೆ ಬರೋದಿಲ್ಲಾ ಅಂತ ಹೇಳಿದ್ನಾ ? ಯಾಕೆ ?" ಕೇಳಿದ.

"ನಮ್ಮ ಬಳಿ ದುಡ್ಡಿಲ್ಲಾಂತ"

"ಹಾಗೇನು ? ಪಾಪ!"

ಅವನು ಡೆಸ್ಕ್ ಎಳೆದ ಅದರಲ್ಲಿ ಕರೆನ್ಸಿ ನೋಟುಗಳನ್ನು ಕಟ್ಟು ಕಟ್ಟಾಗಿ ಜೋಡಿಸಲಾಗಿತ್ತು. ಅವುಗಳಲ್ಲಿ ಎರಡು ಕಟ್ಟುಗಳನ್ನು ತೆಗೆದು ಟೇಬಲ್ ಮೇಲಿಟ್ಟ. "ಇದೋ ದುಡ್ಡು! ಈ ದುಡ್ಡಿನಿಂದ ಎಂತಹ ಡಾಕ್ಟರನ್ನಾದರೂ ನಾವು ಕರೆಸಬಹುದು. ತಗೋ!"

"ನನಗೆ ದುಡ್ಡು ಬೇಡ ಅಂಕಲ್. ಮೊದಲು ಡಾಕ್ಟರ್‌ಗೆ ಫೋನ್ ಮಾಡಿ".

"ದುಡ್ಡು ನಿನಗೆ ಬೇಕಿಲ್ಲದಿರಬಹುದು ಆದರೆ ಡಾಕ್ಟರ್‌ಗೆ ಬೇಕಲ್ಲ. ಅವನ ಮುಖಕ್ಕೆಸೆಯೋಣ. ನಿನ್ನ ತಾಯೀನ ಪೂರ್ತಿ ಗುಣಪಡಿಸ್ತೀನಿ. ಮೊದ್ಲು ದುಡ್ಡು ತೊಗೋ. ನಂತರ ಡಾಕ್ಟರ್‌ಗೆ ಫೋನ್ ಮಾಡ್ತೀನಿ ಏನಂತೀಯಾ ?"

ಅವಳು ಅಮಾಯಕವಾಗಿ ತಲೆಯಾಡಿಸಿ ಆ ದುಡ್ಡು ತೆಗೆದುಕೊಳ್ಳಲು ಹೋದಳು.

"ಒಂದು ಕ್ಷಣ!"

ಅವಳು ನಿಂತಳು.

"ಈ ದುಡ್ಡು ಪೂರ್ತಿ ನೀನೇ ತಗೋಬಹುದು. ಆಮೇಲೆ ಡಾಕ್ಟರ್‌ಗೆ ಫೋನ್ ಮಾಡಬಹುದು. ಅಗತ್ಯವಾದರೆ ಅಂಬುಲೆನ್ಸ್ ತರಿಸ್ಕೋಬಹುದು. ಆದರೆ ನನಗೋಸ್ಕರ ನೀನು ಒಂದು ಕೆಲಸ ಮಾತ್ರ ಮಾಡಿಕೊಡಬೇಕು. ಮತ್ತೇನಿಲ್ಲ, ನಾನು ಹೇಳಿದ ಸ್ಥಳಕ್ಕೆ ನೀನು ಬರಬೇಕು. ಈ ರಾತ್ರಿಯೆಲ್ಲಾ ಅಲ್ಲಿಯೇ ಇರಬೇಕು. ಬೆಳಗಾದ ಮೇಲೆ ನಾನೇ ನಿನ್ನನ್ನು ಕಾರಿನಲ್ಲಿ ಮನೆಗೆ ಕರೆದೊಯ್ದು ಬಿಡ್ತೀನಿ, ಏನಂತಿಯಾ ?".

ಹಠಾತ್ತನೆ ಅವಳ ಕಣ್ಣುಗಳಲ್ಲಿ ಅನುಮಾನ ಪ್ರವೇಶಿಸಿತು. "ಎಲ್ಲಿಗೆ ಅಂಕಲ್ ?" ಎಂದು ಕೇಳಿದಳು.

"ಎಲ್ಲಿಗೆ ಅಂತ ಕೇಳಕೂಡದು! ಏನು ಅಂತ ಕೇಳಕೂಡದು! ಏಕೆ ಅಂತ ಕೇಳಕೂಡದು! ಕರೆದುಕೊಂಡು ಹೋದ ಸ್ಥಳಕ್ಕೆ ಬರಬೇಕು. ಹೇಳಿದ ಕೆಲಸ ಮಾಡಬೇಕು. ಹಾಗೆ ಮಾಡಿದೆ ಅಂತಿಟ್ಕೋ. ಈ ದುಡ್ಡೆಲ್ಲಾ ನಿಂದೇ. ಇದೇ ಅಲ್ಲ, ಇದಕ್ಕೆ ಹತ್ತುಪಟ್ಟು ಕೊಡ್ತೀನಿ. ನಿಮ್ಮ ತಾಯಿಗೆ ಪೂರ್ತಿಯಾಗಿ ಗುಣವಾಗುವವರೆಗೆ ನಾನೇ ಟ್ರೀಟ್‌ಮೆಂಟ್ ಕೊಡಿಸ್ತೀನಿ, ನಿಮ್ಮ ಮನೇನ ದುಡ್ಡಿನಿಂದ ತುಂಬಿಸ್ತೀನಿ.ಈ ಒಂದು ರಾತ್ರಿ ಅಷ್ಟೇ! ಈ ಒಂದು ರಾತ್ರಿ ನಾನು ಹೇಳಿದ ಕೆಲಸ ನೀನು ಮಾಡೋದೊಂದೇ ನನಗೆ ಬೇಕಿರೋದು".

ಅವಳು ತಲೆ ಅಡ್ಡವಾಗಿ ಆಡಿಸಿದಳು. "ಕೆಲಸ ಏನೂಂತ ಹೇಳದೆ ನಾನು ಬರೋದಿಲ್ಲ".

ದಯಾಕರರಾವ್ ಅವಳ ಕಣ್ಣುಗಳನ್ನು ಕೆಲವು ನಿಮಿಷ ಪರೀಕ್ಷೆಯಿಂದ ನೋಡಿದ.

"ಏನು ಅಂಕಲ್ ?" ಮಣಿಮೇಖಲೆ ಮತ್ತೊಮ್ಮೆ ಕೇಳಿದಳು.

"ಹೇಳ್ತೀನಿ, ಆದರೆ ಹೇಳಿದ ನಂತರ ನೀನು ಆ ಕೆಲಸ ಮಾಡೋದಿಲ್ಲಾಂದ್ರೆ ಮಾತ್ರ ನಾನು ಒಪ್ಪಿಕೊಳ್ಳೋದಿಲ್ಲ. ಮಾಡಿಯೇ ತೀರಬೇಕು" ಆ ಕೋಣೆಯಲ್ಲಿ ಎರಡು ಮೂರು ಸಲ ಶತಪಥ ಹಾಕಿ ಅವಳ ಮುಂದೆ ನಿಂತ. "ನೀನಿನ್ನೂ ಚಿಕ್ಕೋಳು. ಇಂತಹ ವಿಷಯಗಳು ನಿನಗೆ ಹೇಳಿದ್ರೂ ಅರ್ಥವಾಗೋದಿಲ್ಲ. ಆದ್ರೂ ಹೇಳ್ತೀನಿ. ಅರ್ಥ ಮಾಡ್ಕೊಳ್ಳೋಕಾದ್ರೆ ಮಾಡ್ಕೋ!" ಎಂದು ಮತ್ತೆ ಕೆಲವು ಕ್ಷಣ ಮೌನವಹಿಸಿ ತಿರುಗಿ ತನ್ನ ಕುರ್ಚಿಯಲ್ಲಿ ಕುಳಿತುಕೊಂಡ. "ಕೂತ್ಕೊ ! ನಿನ್ನ ತಮ್ಮನನ್ನೂ ಕೂತ್ಕೋ ಅಂತ ಹೇಳು !" ಎಂದು ನುಡಿದ.

ಅವಳು ಮತ್ತೊಂದು ಸಲ ತಲೆ ಅಡ್ಡವಾಗಿ ಆಡಿಸಿದಳು. ಮನೆಯ ಬಳಿ ತಾಯಿಗೆ ಹೇಗಿದೆಯೋ, ಏನಾಗಿದೆಯೋ ಎನ್ನುವ ಕಾತರ. ಡಾಕ್ಟರ್‌ಗೆ ಫೋನ್ ಮಾಡ್ತೀನಂತ ಮನೆಯೊಳಗೆ ಕರೆದುಕೊಂಡು ಬಂದ ಈ ದೊಡ್ಡ ಮನುಷ್ಯ, ಕಾಲಹರಣ ಮಾಡುತ್ತಿದ್ದಾನಲ್ಲ ಎಂದು ಅಸಹನೆ. ಏನು ಮಾಡಬೇಕೆಂದು ಹೇಳುತ್ತಾನೋ ಎನ್ನುವ ಅನುಮಾನ. ಹೃದಯದಾಳದಿಂದ ಬರುತ್ತಿರುವ ದುಃಖ ಅವಳನ್ನು ಕಕ್ಕಾಬಿಕ್ಕಿಗೊಳಿಸುತ್ತಿತ್ತು. ದಯಾಕರರಾವ್ ಹೇಳತೊಡಗಿದ. "ಇಲ್ಲೀವರೆಗೆ ನಾನು ಎಷ್ಟೋ ಪ್ರಜಾ ಸೇವೆ ಮಾಡಿದ್ದೀನಿ, ಮಾಡ್ತಾನೇ ಇದೀನಿ. ಆದರೆ ಅಧಿಕಾರ ಇಲ್ಲದೆ ನಿಜವಾದ ಪ್ರಜಾ ಸೇವೆ ಮಾಡೋಕೆ ಸಾಧ್ಯವಾಗೋಲ್ಲ. ಅದಕ್ಕೇ ನಾನು ಬರೋ ಚುನಾವಣೇಲಿ ಪಾರ್ಲಿಮೆಂಟಿಗೆ ಸ್ಪರ್ಧಿಸಬೇಕು ಅಂತಿದ್ದೀನಿ. ಪಾರ್ಲಿಮೆಂಟ್ ಮೆಂಬರ್ ಆದ್ರೆ ಇನ್ನೂ ಚೆನ್ನಾಗಿ

ಕೆಲಸ ಮಾಡಬಹುದು. ಏನಂತೀಯಾ ?" ಎಂದು ನಕ್ಕ. ಅವಳ ಉತ್ತರಕ್ಕಾಗಿ ಎದುರು ನೋಡದೆ ಮುಂದುವರೆಸಿದ........ "ಈ ಸಲ ಪಾರ್ಲಿಮೆಂಟ್ ಎಲೆಕ್ಷನ್ ನಲ್ಲಿ ಅನೇಕ ಪಾರ್ಟಿಗಳು ಸ್ಪರ್ಧಿಸುತ್ತವೆ. ಅದರಲ್ಲಿ ಈ ಪ್ರದೇಶದಲ್ಲಿ ಗೆಲ್ಲುವ ಅವಕಾಶ ಒಂದು ಪಾರ್ಟಿಗಷ್ಟೇ ಇದೆ. ನಾನು ಪ್ರಜಾ ಸೇವೆ ಮಾಡಬೇಕೆಂದರೆ ಈ ಪಾರ್ಟಿಯ ಟಿಕೆಟ್ ನನಗೆ ಬೇಕು. ಆ ಪಾರ್ಟಿ ಟಿಕೆಟ್ ನನಗೆ ಸಿಗ ಬೇಕೆಂದರೆ ಪಾರ್ಟಿ ಸೆಕ್ರೆಟರಿಯನ್ನು ನಾನು ಮೆಚ್ಚಿಸಬೇಕು.

"ಮೊನ್ನೆ ಈ ನಗರದಲ್ಲಿ ನಡೆದ ಮತೀಯ ಗಲಭೆಗಳ ಬಗೆಗೆ ವಿಚಾರಣೆ ನಡೆಸಲು ಪಾರ್ಟಿ ಸೆಕ್ರೆಟರಿ ಕೆಲವು ಮಿನಿಸ್ಟರ್‌ಗಳ ಜೊತೆ ಇಲ್ಲಿಗೆ ಬಂದಿದ್ದಾನೆ. ಆತನನ್ನು ಮೆಚ್ಚಿಸಬೇಕು ಅಂದ್ರೆ ಒಂದೇ ದಾರಿ. ಆಫ್‌ಕೋರ್ಸ್, ಬೇರೆದನ್ನೂ ಕೂಡ ಕೊಡ್ತೀನಿ ಅಂತಿಟ್ಕೋ! ಅದು ಬೇರೆ ವಿಷಯ!

"ಪಾರ್ಟಿಯ ಸೆಕ್ರೆಟರಿಗೆ ಹುಡುಗಿಯರ ಹುಚ್ಚು ಬಹಳ. ಆತನ ವಯ ಸ್ಸೆಷ್ಟು ಗೊತ್ತಾ ? ಅರವತ್ತಾರು ವರ್ಷಗಳು! ಮಾಗಿಯೂ ಮಾಗದ ಹೆಣ್ಣು ಗಳೆಂದರೆ ಆತ ಬಿದ್ದು ಸಾಯುತ್ತಾನೆ. ನಿನ್ನಂತಹವಳು ಅಂದ್ರೆ".

"ಅಂಕಲ್!" ತಡೆಯಲಾಗದೆ ಕಿರುಚಿದಳು.

ದಯಾಕರರಾವ್ ಹೇಳುವುದನ್ನು ನಿಲ್ಲಿಸಲಿಲ್ಲ. "ನಿನ್ನ ವಯಸ್ಸಿನ ಕಾಲ್ ಗರ್ಲ್‌ಗೋಸ್ಕರ ನಾನು ತುಂಬಾ ಹುಡುಕಿದೆ ದುರದೃಷ್ಟಕ್ಕೆ ಯಾರೂ ಸಿಗ ಲಿಲ್ಲ. ಈ ಮಳೆ-ಗಾಳೀಲಿ ಸಿಕ್ತಾರೆ ಅನ್ನೋ ಆಸೇನೂ ಇಲ್ಲ. ನನಗೆ ಒಂದು ಗಂಟೆಯ ಸಮಯ ಇದೆ. ಒಂದು ಗಂಟೆ! ಈ ಒಂದು ಗಂಟೇಲಿ ನಾನೊಬ್ಬ ಹುಡುಗಿಯನ್ನು ಸೆಕ್ರೆಟರಿ ಹತ್ತಿರ ಕಳಿಸಬೇಕು. ಕಳಿಸದಿದ್ದರೆ ನನಗೆ ಪಾರ್ಟಿ ಟಿಕೆಟ್ ದಕ್ಕೋದಿಲ್ಲ. ಪಾರ್ಟಿ ಟಿಕೆಟ್ ಸಿಗದಿದ್ದರೆ ಪ್ರಜಾ ಸೇವೆ ಹೇಗೆ ಮಾಡೋದು ಅದಕ್ಕೇ.... ನಿನ್ನಂತಹ ಸುಂದರ ಹುಡುಗಿ ತಾನೇ ತಾನಾಗಿ ನನ್ನ ಹತ್ತಿರ ಬಂದದ್ದು ನನ್ನ ಅದೃಷ್ಟ. ನನಗೆ ಪಾರ್ಟಿ ಟಿಕೆಟ್ ನೀನೇ ಸಂಪಾದಿಸಿ ಕೊಡ್ತಿದೀಯ. ಇದೋ ದುಡ್ಡು. ಇನ್ನೂ ಬೇಕಾದ್ರೆ ತಗೋ". ಡೆಸ್ಕಿನೊಳಗಿಂದ ಮತ್ತಷ್ಟು ನೋಟುಗಳ ಕಟ್ಟುಗಳನ್ನು ತೆಗೆದು ಅವಳ ಮುಂದೆ ಹಾಕಿದ. ನಿಶ್ಚೇಷ್ಟಿತಳಾಗಿ ಅವಳು ಅವನನ್ನು ನೋಡುತ್ತಿದ್ದಳು. 'ಮನುಷ್ಯರು ಇಷ್ಟು ಕೆಳ ಮಟ್ಟಕ್ಕಿಳಿಯಬಲ್ಲರೆ?' ಮನುಷ್ಯರಲ್ಲಿ ಇಷ್ಟು ನೀಚತ್ವ ಇದೆಯಾ?! ತಾಯಿಯ ಪ್ರಾಣ ಕಾಪಾಡೆಂದು ಓಡಿ ಬಂದ ಹುಡುಗಿ ಯನ್ನು ತಲೆ ಹಿಡಿದು ಪ್ರಜಾ ಸೇವೆ ಮಾಡುವೆನೆಂದು ಈ ದೊಡ್ಡ ಮನುಷ್ಯ ಹೇಳುತ್ತಿದ್ದಾನೆ. ಮನುಷ್ಯರಲ್ಲಿ ಇಂಥವರು ಕೂಡಾ ಇರುತ್ತಾರಾ?!' ಅವಳಿಗೆ ಕ್ರೋಧ ಉಕ್ಕೇರಿತು. ಕಣ್ಣೆದುರಿಗಿದ್ದ ಕರೆನ್ಸಿಯ ಕಟ್ಟುಗಳನ್ನೆತ್ತಿ ಅವನ

ಮುಖಕ್ಕೆ ಬೀಸಿ ಹೊಡೆದಳು. ಮರುಕ್ಷಣ ಸರಕ್ಕನೆ ಹಿಂದಿರುಗಿ ತಮ್ಮನ ಕೈ ಹಿಡಿದುಕೊಂಡು ಆ ಕೋಣೆಯಿಂದ ಹೊರಗೋಡಿದಳು. "ನಿಲ್ಲು!" ದಯಾಕರ ರಾವ್ ಜೋರಾಗಿ ಅರಚಿದ. ಅವಳು ಕೇಳಿಸಿಕೊಳ್ಳಲಿಲ್ಲ. ಪ್ರಾಣ ಭೀತಿಯಿಂದ ಓಡುವ ಜಿಂಕೆಯಂತೆ ಅಲ್ಲಿಂದ ಓಡಿದಳು. ಅವಳು ಆ ಕೋಣೆಯಿಂದ ಹೊರಗೋಡಿದೊಡನೆ ದಯಾಕರರಾವ್ ಹುಲಿಯಂತೆ ಕುರ್ಚಿಯಿಂದ ಎದ್ದ. ಒಂದೇ ಹೆಜ್ಜೆಗೆ ಬಾಗಿಲ ಬಳಿ ಬಂದ. "ನಿಲ್ಲು!" ಮತ್ತೊಂದು ಸಲ ಗರ್ಜಿಸಿದ. ಅವಳು ನಿಲ್ಲಲಿಲ್ಲ. ಅವನು ವರಾಂಡದೊಳಕ್ಕೆ ಹೋಗುವಷ್ಟರಲ್ಲಿ ಅವಳು ಗೇಟಿನ ತನಕ ಹೋಗಿದ್ದಳು. "ಹಿಡಿಯಿರಿ" ದಯಾಕರರಾವ್ ಕೂಗಿದ. ಅವಳು ಸರಿಯಾಗಿ ಗೇಟನ್ನು ಸಮೀಪಿಸುವ ಸಮಯದಲ್ಲಿಯೇ ಕಾಲ್‌ಗರ್ಲ್‌ಗೋಸ್ಕರ ಹೋಗಿದ್ದ ದಯಾಕರರಾವ್‌ನ ಕಡೆಯವರು ಮುಖ ಬಾಡಿಸಿಕೊಂಡು ತಿರುಗಿ ಬರುತ್ತಿದ್ದರು. ದಯಾಕರರಾವ್‌ನ ಕೂಗಿನಿಂದ ಬೆಚ್ಚಿಬಿದ್ದ ಅವರು ತಲೆ ಮೇಲೆತ್ತಿ ನೋಡಿದರು. "ಹಿಡ್ಕೊಳ್ರೋ, ಕೈಲಾಗದ ಹೇಡಿಗಳೆ!" ಉದ್ವೇಗದಿಂದ ಅರಚಿದ ದಯಾಕರ ರಾವ್. "ಅವಳು ಹೊರಗೆ ಹೋಗೋದಿಕ್ಕೆ ಬಿಡ್ಬೇಡಿ!".

ಅವನ ಕೂಗು ಕೇಳುತ್ತಲೇ ಅವರು ಮಿಂಚಿನಂತೆ ಚಲಿಸಿದರು. ಅವಳು ಗೇಟು ತೆರೆದುಕೊಂಡು ಹೊರಗೋಡಿ ತಪ್ಪಿಸಿಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವಂತೆಯೇ ತೋಳಗಳಂತೆ ಮೇಲೆ ಹಾರಿದರು. ಅವಳು ಅರಚುತ್ತಾ ಅಪ್ರಯತ್ನವಾಗಿ ಹಿಂದೆ ಹಿಂದೆ ಹೋಗತೊಡಗಿದಳು. ಹಠಾತ್ತನೆ ಅವಳ ಮೆದುಳು ಮರಗಟ್ಟಿದಂತಾಯಿತು! ಹೃದಯ ಯಾವ ಕ್ಷಣದಲ್ಲಿಯಾದರೂ ಬಿರಿಯುವಂತಿತ್ತು. ಹಿಂದೆ ಬಾಯಿ ತೆರೆದು ನುಂಗಲು ಸಿದ್ಧವಾಗಿದ್ದ ಹೆಬ್ಬಾವು,ಎದುರುಗಡೆ ಕೈಚಾಚಿ ಮೈ ಮೇಲೆ ಬರುತ್ತಿರುವ ನಾಲ್ಕು ಪಿಶಾಚಿಗಳು. ಅವಳ ಪರಿಸ್ಥಿತಿ ಸುಳಿಯಲ್ಲಿ ಸಿಕ್ಕು ಬಿದ್ದಂತಾಯಿತು. ಅಳುತ್ತಿದ್ದಳು, ಬಿಕ್ಕಿಬಿಕ್ಕಿ ಅಳುತ್ತಿದ್ದಳು. ತಾನು ಅಳುತ್ತಿರುವೆನೆಂದು ಅವಳಿಗೇ ತಿಳಿಯದು. ತಾನೆಲ್ಲಿದ್ದೇನೆ, ಏನು ಮಾಡುತ್ತಿದ್ದೇನೆ, ಏನಾಗುತ್ತಿದೆ ಎಂದು ಕೂಡ ಅವಳಿಗೆ ತಿಳಿಯುತ್ತಿಲ್ಲ. ಭಯ.... ಶೋಕ.... ಕ್ರೋಧ.... ನಿಸ್ಸಹಾಯಕತೆ-ಅಬಲತೆ ಎಲ್ಲವೂ ಒಟ್ಟುಗೂಡಿ ಅವಳ ಕುತ್ತಿಗೆ ಹಿಸುಕುತ್ತಿದ್ದವು. ಕೂಗಬೇಕೆಂದರೂ ಧ್ವನಿ ಗಂಟಲಿನಿಂದ ಹೊರಬರುತ್ತಿಲ್ಲ. ಕ್ರಮೇಣ ಅವಳ ಹೆಜ್ಜೆಗಳು ಹಿಂದೆ ಸರಿಯುತ್ತಿದ್ದುವು. ಹೆದರಿಕೊಂಡ ಅವಳ ತಮ್ಮ ಅವಳ ಕಾಲಿಗಂಟಿಕೊಂಡು ಜೋರಾಗಿ ಅಳುತ್ತಿದ್ದ. ಹಠಾತ್ತನೆ ಅವಳ ಭುಜದ ಮೇಲೆ ಎರಡು ಕೈಗಳು ಬಿದ್ದವು. ಅವಳ ಹೃದಯ ಕ್ರಿಯೆ ನಿಂತಂತಾಯಿತು. ಭಯದಿಂದ ಕಿರುಚಿದಳು. ಅವಳ ಕೂಗು ಗುಡುಗಿನ ಶಬ್ದದಲ್ಲಿ ಬೆರೆತು ಹೋಯಿತು. ಕ್ಷಣ-ಕ್ಷಣಕ್ಕೂ ಮಿಂಚುತ್ತಿರುವ ಮಿಂಚಿನ

ಬೆಳಕಲ್ಲಿ ದಯಾಕರರಾವ್ ಮುಖ ವಿಕೃತವಾಗಿ ಕಾಣಿಸಿತು. ಅಷ್ಟೇ! ಅವಳು ಹುಚ್ಚಳಂತೆ ಮತ್ತೊಂದು ಸಲ ಕೂಗಿದಳು. ಆಕಾಶ ತಿರುಗುತ್ತಿತ್ತು, ಭೂಮಿ ತಿರುಗುತ್ತಿತ್ತು. ಮೂರು ಲೋಕಗಳೂ ಗಿರ್ರೆಂದು ತಿರುಗುತ್ತಿದ್ದವು. ತನ್ನ ಸುತ್ತಲೂ ಇರುವ ಪ್ರಪಂಚವೆಲ್ಲ ಬುಗುರಿಯಂತೆ ಗಿರಗಿರನೆ ತಿರುಗಿದಂತಾಗುತ್ತಿತ್ತು. ಅವಳು ತೂರಾಡಿದಳು. ಜ್ಞಾನ ತಪ್ಪಿ ನೆಲದ ಮೇಲೆ ಕುಸಿದು ಬಿದ್ದಳು. ಕೆಳ ಬೀಳುತ್ತಿದ್ದ ಅವಳ ಭುಜಗಳನ್ನು ದಯಾಕರರಾವ್‌ನ ಕಬಂಧ ಬಾಹುಗಳು ಬಿಗಿಯಾಗಿ ಹಿಡಿದುಕೊಂಡವು. ಅವಳನ್ನು ಮುಟ್ಟಿದೊಡನೆಯೇ ಅವನ ಹೃದಯದಲ್ಲಿ ಕಂಪನ ಉಂಟಾಯಿತು. ಬಯಕೆ ಹೆಡೆಬಿಚ್ಚಿ ಬುಸುಗುಟ್ಟಿತು. ಅಲ್ಲಿಯೇ ಆ ಕ್ಷಣದಲ್ಲಿಯೇ ಅವನಲ್ಲಿನ ಪಶುತ್ವ ನಿದ್ದೆಯಿಂದೆದ್ದಿತು. ಮನುಷ್ಯತ್ವ ಕಳೆದುಕೊಂಡಿತು. ಸಭ್ಯತೆ ನಶಿಸಿತು. ನಿಸ್ತೇಜವಾಗಿ, ನಿಸ್ಸಹಾಯಕಳಾಗಿ ತನ್ನ ಕೈಯಲ್ಲಿರುವ ಆ ಅಮಾಯಕ ಹುಡುಗಿಯ ಶರೀರದ ಸುತ್ತಲೂ ಅವನ ಕೈಗಳು ಹೆಬ್ಬಾವಿನಂತೆ ಸುತ್ತಿಕೊಂಡವು. ಆಕಾಶ ಕರಗಿ ಬೀಳುತ್ತಿರುವಂತೆ, ಸುರಿಯುತ್ತಾ ತಮ್ಮಿಬ್ಬರನ್ನೂ ತೊಯ್ಯಿಸುತ್ತಿದ್ದ ಮಳೆ ಅಗ್ನಿ ವರ್ಷದಂತಿತ್ತು. ಮಳೆಯಲ್ಲಿ ತೊಯ್ಯುತ್ತಿದ್ದರೂ ಬಯಕೆಯಿಂದಾಗಿ ಅವನ ಶರೀರ ಬಿಸಿಯೇರಿತ್ತು. ಅವಳ ಕೆನ್ನೆಯನ್ನೂ, ಭುಜವನ್ನೂ, ಕುತ್ತಿಗೆಯನ್ನೂ ಮುತ್ತಿಟ್ಟ ಕೈಗಳಿಂದ ಅವಳ ಉಬ್ಬು— ತಗ್ಗುಗಳನ್ನೆಲ್ಲಾ ಸವರಿದ. ಹಠಾತ್ತನೆ ಅವನ ಮೆದುಳು ಅವನನ್ನು ಎಚ್ಚರಿಸಿತು. ಕಾಲ ವೇಗವಾಗಿ ಸರಿಯುತ್ತಿದೆ. ಒಂದು ಗಂಟೆ! ತಾರಕನಾಮ ಇಟ್ಟ ಅವಧಿ ನೆನಪಾಯಿತು. ಒಂದು ಗಂಟೆ ದಾಟಿದರೆ ತನ್ನ ಶ್ರಮವೆಲ್ಲಾ ವ್ಯರ್ಥವಾಗುತ್ತದೆ. ಆ ವಿಷಯ ನೆನಪಾದೊಡನೆ ಬೆಂಕಿಯನ್ನುತಾಕಿದವನಂತೆ ಅವನು ಅವಳನ್ನು ದೂರ ತಳ್ಳಿದ. ಎದುರಿಗೆ ನಿಂತು ಅವನ ವಿಕೃತ ಚೇಷ್ಟೆಗಳನ್ನು ವಿಚಿತ್ರವಾಗಿ ಗಮನಿಸುತ್ತಿದ್ದ ಅವನ ಅನುಚರನೊಬ್ಬ ಛಟ್ಟನೆ ಮುಂದೆ ಬಂದು, ಅವಳನ್ನು ಕೆಳಗೆ ಬೀಳದಂತೆ ಹಿಡಿದುಕೊಂಡ. "ಇವಳನ್ನು ಕಾರಿನಲ್ಲಿ ಹಾಕಿಕೊಂಡು ಗೆಸ್ಟ್ ಹೌಸ್‌ಗೆ ಒಯ್ಯಿರಿ" ಸಂತೃಪ್ತಿ ಪಡೆಯದ ಕೋರಿಕೆಯಿಂದ ಏದುಸಿರು ಬಿಡುತ್ತಾ ಆಜ್ಞಾಪಿಸಿದ. ಆಗಲೇ ಅವನಲ್ಲಿನ ಪಶು ನಿದ್ದೆ ಹೋಗದು. ಮೊದಲು ಪಾರ್ಟಿಯ ಸೆಕ್ರೆಟರಿ ಅವಳನ್ನು ಯಥೇಚ್ಛವಾಗಿ ಅನುಭವಿಸಬೇಕು. ನಂತರ ಗೆಸ್ಟ್ ಹೌಸ್‌ನಲ್ಲಿ ಠಿಕಾಣಿ ಹಾಕಿದ ಪಾರ್ಟಿಯ ಇತರ ಪ್ರಮುಖರು ಕೂಡ ಅವಳೊಂದಿಗೆ ಮೋಜು ಅನುಭವಿಸಬೇಕು. ಆ ನಂತರವೇ ತನ್ನ ಸರದಿ! ಅವನ ಹೃದಯ ಅಸೂಯೆಯಿಂದ ನರಳುತ್ತಿತ್ತು. ಆದರೂ ಏನೂ ಮಾಡಲಾಗದು! ತನ್ನ ಕೈಗೆ ಸಿಕ್ಕಿದ ತಾಜಾ ಹಣ್ಣನ್ನು ಕೈಯಾರೆ ತಾನೇ ಬೇರೆ ಯಾರಿಗೋ ಒಪ್ಪಿಸ

ಬೇಕು ಅನಿವಾರ್ಯ. "ನೋಡ್ತಿದ್ದೀರಲ್ರೋ? ಅವಳನ್ನೆತ್ತಿಕೊಂಡು ಹೋಗಿ ಕಾರಿನಲ್ಲಿ ಹಾಕಿ!" ಅರಚಿದ.

ಅವಳನ್ನು ಹಿಡಿದುಕೊಂಡಿದ್ದ ಅವನ ಅನುಚರ ಅವಳನ್ನು ಸುನಾಯಾಸ ವಾಗಿ ಕೈಗಳಲ್ಲಿ ಎತ್ತಿಕೊಂಡ. ಸರಿಯಾಗಿ ಅದೇ ಸಮಯದಲ್ಲಿ ಭಯದಿಂದ ನಡುಗುತ್ತಾ ಜೋರಾಗಿ ಅಳುತ್ತಿದ್ದ ಅವಳ ತಮ್ಮ ಉಡಮಂತೆ ಅವನ ಕಾಲು ಹಿಡಿದುಕೊಂಡ. "ಬಿಡು, ನಮ್ಮಕ್ಕನ್ನ ಬಿಡು!" ಎನ್ನುತ್ತಾ ಅವನ ಸೊಂಟದ ಸುತ್ತ ಕೈ ಬಿಗಿದು ನೇತಾಡತೊಡಗಿದ.

"ಇವನ್ಯಾರೋ ದರಿದ್ರ!" ಅಸಹನೆಯಿಂದ ನುಡಿದ ದಯಾಕರರಾವ್. "ಎಳೆದು ಬಿಸಾಕಿ. ಈ ಶನಿ ಇಲ್ಲಿ ಬೇಡ".

ಯಜಮಾನ ಆಜ್ಞಾಪಿಸಿದೊಡನೆಯೇ ಕೋಣಗಳಂತಿದ್ದ ಇಬ್ಬರು ಅನು ಚರರು ಮುಂದೆ ಬಂದು ಆ ಹುಡುಗನನ್ನು ಜೋರಾಗಿ ಎಳೆದರು.

"ಅವನನ್ನು ಗೇಟಿನಾಚೆ ಎಸೀರಿ!" ಎಂದ ದಯಾಕರರಾವ್.

ಆ ಎರಡು ಕೋಣಗಳಲ್ಲಿ ಒಬ್ಬ ಆ ಹುಡುಗನ ಎರಡು ಕೈಗಳನ್ನು ಹಿಡಿದುಕೊಂಡ. ಇನ್ನೊಬ್ಬ ಕಾಲುಗಳನ್ನು ಹಿಡಿದುಕೊಂಡ. ಇಬ್ಬರೂ ಕೂಡಿ ಉಯ್ಯಾಲೆ ತೂಗುತ್ತಿರುವಂತೆ ಅವನನ್ನು ಒಂದು ಸಲ ಅತ್ತ-ಇತ್ತ ತೂಗಾಡಿ ಹುಪ್ ಎನ್ನುತ್ತಾ ಮೇಲಕ್ಕೆಸೆದರು. ಆ ಹುಡುಗ ಚೆಂಡಿನಂತೆ ಗಾಳಿಯಲ್ಲಿದ್ದ. ಮಾನವ ರೂಪದ ಆ ಪಿಶಾಚಿಗಳು ಎಸೆದ ಜೋರಿಗೆ ಪ್ರಹರೀ ಗೋಡೆಯಿಂದ ದಾಟಿ ಹೋಗಿ ರಸ್ತೆಯ ಪಕ್ಕಕ್ಕೆ ಬಿದ್ದ. ನೇರವಾಗಿ ಬೀಳಲಿಲ್ಲ– ತಲೆಕೆಳಗಾಗಿ ಬಿದ್ದ. ಆ ರಸ್ತೆಯ ಪಕ್ಕದಲ್ಲಿಯೇ ಒಂದು ದೊಡ್ಡ ಡ್ರೈನೇಜ್ ಇತ್ತು. ಮುನ್ಸಿಪಾಲಿಟಿಯವರ ನಿರ್ಲಕ್ಷ್ಯದ ಸಂಕೇತವಾಗಿ ಆ ಡ್ರೈನೇಜ್ ಮೂರು ದಿನ ಗಳಿಂದ ತೆರೆದುಕೊಂಡೇ ಇತ್ತು. ಗೋಡೆಯ ಮೇಲಿನಿಂದ ಚೆಂಡಿನಂತೆ ಹಾರಿ ಬಂದ ಆ ಹುಡುಗ ತಲೆಕೆಳಗಾಗಿ ಸೀದಾ ಆ ಡ್ರೈನೇಜ್‌ನಲ್ಲಿಯೇ ಬಿದ್ದ.

ಕೆಳ ಬೀಳುತ್ತಾ ಪ್ರಾಣ ಭಯದಿಂದ ಅವನು ಹಾಕಿದ ಕೂಗು ಗುಡುಗಿನ ಶಬ್ದದಲ್ಲಿ ಬೆರೆತು ಹೋಯಿತು. ಯಾರೂ ಆ ಕೂಗು ಕೇಳಿಸಿ ಕೊಳ್ಳಲಿಲ್ಲ. ಯಾರೂ ಆ ಹುಡುಗನನ್ನು ಗಮನಿಸಲಿಲ್ಲ. ಗಮನಿಸಲು ಆ ಮಳೆಯಲ್ಲಿ ರಸ್ತೆಯ ಮೇಲೆ ಯಾರೂ ಇರಲಿಲ್ಲ. ಡ್ರೈನೇಜ್ ಬೀಳುತ್ತಲೇ ಆ ಹುಡುಗ ತಲೆಕೆಳಗಾಗಿ ಸೊಂಟದವರೆಗೆ ಹೂತು ಹೋದ. ಸೊಂಟದಿಂದ ಕೆಳಗೆ ಹೊರ ಗುಳಿದ ಅವನ ಕಾಲುಗಳು ಕೊಂಚ ಹೊತ್ತು ವಿಲಿವಿಲಿ ಒದ್ದಾಡಿದವು. ನಂತರ ನಿರ್ಜೀವವಾಗಿಬಿಟ್ಟವು. ಆಕಾಶ ಈ ಘಟನೆಯನ್ನು ನೋಡಿ ಜೋರಾಗಿ ಅಳುತ್ತಿ ರುವುದೇನೋ ಎನ್ನುವಂತೆ ಮಳೆ ಜೋರಾಯ್ತು. ಸೃಷ್ಟಿ ಮೂಕವಾಯಿತು.

ಅವರು ನಾಲ್ವರೂ ಅವಳನ್ನೆತ್ತಿಕೊಂಡು ಮುಂದೆ ನಡೆದರು. ಆ ಮನೆಯ ಆವರಣಪಲ್ಲಿ ಒಂದು ಕಡೆ ದಯಾಕರರಾವ್‌ನ ಕಾರು ನಿಂತಿತ್ತು. ಬಾಗಿಲು ತೆರೆದು ಮಣಿಮೇಖಲೆಯನ್ನು ಹಿಂದಿನ ಸೀಟಿನಲ್ಲಿ ಮಲಗಿಸಿದರು. ಕಾರು ಸ್ಟಾರ್ಟ್ ಆಗಿ ಮುಂದೆ ನುಗ್ಗಿತು. ಕೆಲ ಹೊತ್ತಿನಲ್ಲಿಯೇ ನಡೆಯಲಿರುವ ಅಮಾನುಷ ಕಾಂಡಕ್ಕೆ ನಾಂದಿಯೆನ್ನುವಂತೆ ಮೇಘದ ಗರ್ಜನೆ ಕೇಳಿಸುತ್ತಲೇ ಇತ್ತು. ಈ ಘೋರ ಕೃತ್ಯಕ್ಕೆ ಸಾಕ್ಷಿಯಾದ ಪ್ರಕೃತಿ ಮೂಕವಾಗಿತ್ತು........

## 1988 ಡಿಸೆಂಬರ್ 31....

ಮಧ್ಯರಾತ್ರಿ ಹನ್ನೆರಡು ಗಂಟೆಯಾಗಲು ಇನ್ನೂ ಕೆಲವು ಕ್ಷಣಗಳಿದ್ದುವು. ಹಳೆಯ ವರ್ಷ ಕಾಲಗರ್ಭದಲ್ಲಿ ಬೆರೆತು ಹೋಗಿ ಹೊಸ ವರ್ಷ ಬರಲು ಸಿದ್ಧವಾಗಿತ್ತು. ಇಡೀ ಪ್ರಕೃತಿ ಕಪ್ಪು ಮುಸುಕು ಧರಿಸಿತ್ತು—ಮುಸುಕಿನ ತುಂಬಾ ಬಿಳಿಯ ನಕ್ಷತ್ರಗಳು ಥಳ ಥಳನೆ ಹೊಳೆಯುತ್ತಿದ್ದುವು. ಆಕಾಶದಂತೆ ಪೆಸಿಫಿಕ್ ಮಹಾಸಾಗರದ ನೀರು ಕೂಡ ಕಪ್ಪಾಗಿತ್ತು. ಥಳಥಳನೆ ಹೊಳೆಯುತ್ತಿದ್ದ ಬಿಳಿಯ ನಕ್ಷತ್ರಗಳು ಸಮುದ್ರದ ನೀರಿನಲ್ಲಿ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಾ ಪ್ರತಿಬಿಂಬಿಸುತ್ತಿದ್ದುವು. ಪೂರ್ವ-ಪಶ್ಚಿಮ-ಉತ್ತರ-ದಕ್ಷಿಣ ಎತ್ತ ನೋಡಿದರೂ ನಕ್ಷತ್ರಗಳು. ಆಕಾಶವೇ ನೆಲಕ್ಕಿಳಿದು ದುಪ್ಪಟಿಯಂತೆ ಹರಡಿಕೊಂಡಿದೆಯೇನೋ ಎನ್ನುವಂತಹ ದೃಶ್ಯ. ಇಡೀ ಸೃಷ್ಟಿ ನಕ್ಷತ್ರಗಳಿಂದ ತುಂಬಿ ಹೋಗಿ ಒಂದೇ ಒಂದು ದೊಡ್ಡ ಗೋಲಾಕಾರದ ಅಂತರ್ಭಾಗದಂತೆ ಕಾಣಿಸುತ್ತಿತ್ತು. ಆ ಗೋಲಾಕಾರದ ನಡುವೆ ಒಂದು ಸರಳ ರೇಖೆಯಲ್ಲಿ ಕೆಲವು ಕೆಂಪು ದೀಪಗಳು ಸ್ಥಿರವಾಗಿ ಮುಂದೆ ಸಾಗಿ ಹೋಗುತ್ತಿದ್ದುವು. ಆ ಕೆಂಪು ದೀಪಗಳು ಅತ್ಯಂತ ಆಧುನಿಕವಾದ ಒಂದು ಜೆಟ್ ವಿಮಾನಕ್ಕೆ ಸಂಬಂಧಿಸಿದುವು. ವಿಮಾನದ ಒಳಭಾಗದಲ್ಲಿ ನಾಲ್ವರು ವ್ಯಕ್ತಿಗಳು ಎದುರೆದುರಾಗಿ ಕುಳಿತುಕೊಂಡಿದ್ದರು. ಸಾಮಾನ್ಯರು ಯಾರಾದರೂ ಆ ವಿಮಾನದ ಒಳಭಾಗದಲ್ಲಿ ಅಡಿಯಿಟ್ಟರೆ ಅದು ವಿಮಾನ ಎನ್ನುವ ಸಂಗತಿಯನ್ನು ಪೂರ್ತಿ ಮರೆತು ಬಿಡುತ್ತಾರೆ. ಮರೆಯುವುದಿಲ್ಲ, ಅದು ವಿಮಾನವೆಂದರೆ ನಂಬುವುದಿಲ್ಲ.

ವಿಮಾನದ ಒಳಭಾಗ– ಅಲ್ಲ, ಅತ್ಯಂತ ಆಧುನಿಕವಾದ ಭವನದ ಒಳಭಾಗ! ಆಕಾಶದಲ್ಲಿ ತೇಲಿಹೋಗುವ ರಮ್ಯ ಮರ್ಹಹರ್ಮ್ಯ. ಯಾವಾಗಲೂ

ಮೇಘಗಳ ಮೇಲೆ ರಾಜಹಂಸನಂತೆ ವಿಹರಿಸುವ ಮಹಾರಾಜ ಮಂದಿರ.

ಆ ಜೆಟ್ ವಿಮಾನದ ಬೆಲೆ ಐದು ಕೋಟಿ ಅಮೇರಿಕನ್ ಡಾಲರ್. ಖರೀದಿ ಮಾಡುವಾಗಿನ ಅದರ ಬೆಲೆ ನಾಲ್ಕು ಕೋಟಿ ಡಾಲರ್. ಮತ್ತೊಂದು ಕೋಟಿ ಡಾಲರ್ ಖರ್ಚಿನಲ್ಲಿ ಅದರ ಒಳಭಾಗದಲ್ಲಿ ಪ್ರತ್ಯೇಕವಾದ ಏರ್ಪಾಡುಗಳನ್ನು ಮಾಡಲಾಗಿತ್ತು. ಅದರಲ್ಲಿ ಎರಡು ದೊಡ್ಡ ಹಾಲ್‌ಗಳಿದ್ದವು. ಮೂರು ಬೆಡ್ ರೂಮುಗಳಿದ್ದವು. ಒಂದು ಕಾನ್‌ಫರೆನ್ಸ್ ಕೋಣೆಯಿತ್ತು. ಒಂದು ವಿಶಾಲವಾದ ಅಡಿಗೆ ಕೋಣೆ, ನಾಲ್ಕು ಬಾತ್‌ರೂಮುಗಳೂ, ನಾಲ್ಕು ಟಾಯ್‌ಲೆಟ್‌ಗಳೂ ಇದ್ದುವು. ಪ್ರತಿ ಬೆಡ್ ರೂಮಿನಲ್ಲೂ ಹತ್ತು ಚದರಡಿ ಅಗಲದ ಕಿಂಗ್‌ಸೈಜ್ ಮಾಸ್ಟರ್ ಬೆಡ್ ಇದ್ದವು. ಎರಡು ಮೇನ್ ಹಾಲ್‌ಗಳಲ್ಲೂ ದೊಡ್ಡ ದೊಡ್ಡ ಸೋಫಾಗಳೂ, ಟೀಪಾಯ್‌ಗಳೂ, ಎರಡು ಬಾರ್‌ಗಳೂ, ಎರಡು ಲೈಬ್ರರಿಗಳೂ, ಅಂದವಾದ ಅಕ್ವೇರಿಯಮ್‌ಗಳೂ, ಅವುಗಳಲ್ಲಿ ಮೀನುಗಳು ಬದುಕಲು ಸಾಧ್ಯವಾಗುವಂತೆ ಆಕ್ಸಿಜನ್ ಸಿಲಿಂಡರ್‌ಗಳೂ ಇದ್ದುವು. ಅದರಲ್ಲಿನ ಕಾನ್‌ಫರೆನ್ಸ್ ಕೋಣೆ ಒಂದು ದೊಡ್ಡ ಗಾಜಿನ ಗೋಳದಲ್ಲಿ ಏರ್ಪಾಡಾಗಿತ್ತು. ಪ್ರಪಂಚವಿಡೀ ಖ್ಯಾತಿ ಪಡೆದ ಎಲ್ಲಾ ಪ್ರಸಿದ್ಧ ಕಂಪನಿಗಳ ಸಿಗರೇಟುಗಳೂ, ಸಿಗಾರ್‌ಗಳೂ, ಡೈಮಂಡ್ ಆ್ಯಷ್ ಟ್ರೇಗಳೂ ಒಂದೇನು ವೈಭವಯುತ ಜೀವನಕ್ಕೆ ಬೇಕಾದ ಸೌಕರ್ಯಗಳೆಲ್ಲವೂ ಅದರಲ್ಲಿದ್ದುವು. ಇವೆಲ್ಲಾ ಅಲ್ಲದೆ ಆ ವಿಮಾನದಲ್ಲಿ ಮತ್ತೊಂದು ಪ್ರತ್ಯೇಕವಾದ ಕೋಣೆ ಕೂಡ ಇತ್ತು. ಆ ಕೋಣೆಯಲ್ಲಿ ಜೇಕೇಯ ವಿ. ಐ. ಪಿ. ಗೆಸ್ಟ್‌ಗಳಿಗೆ ಮಾತ್ರವೇ ಪ್ರವೇಶ. ಪೈಲಟ್ ಅಲ್ಲದೆ 259 ಜನ ಪ್ರಯಾಣಿಸಲು ಸಾಧ್ಯವಿದ್ದ ಆ ವಿಮಾನ ಕೇವಲ ಒಬ್ಬನೇ ಒಬ್ಬ ವ್ಯಕ್ತಿಯ ಸ್ವಂತದ ಆಸ್ತಿ..

ಆ ವಿಮಾನ ಸೌದಿ ಅರೇಬಿಯಾಕ್ಕೆ ಸೇರಿದ ಜಿಂದಾನ್ ಕರ್ವಾಲಿಯದು. ಅವನನ್ನು ಎಲ್ಲರೂ ಜೇಕೇ ಎಂದು ಕರೆಯುತ್ತಿದ್ದರು. ಜೇಕೇ ಕೋಟ್ಯಧೀಶ ಕಮಿಷನ್ ಏಜೆಂಟ್. ಅವನ ಲೇವಾದೇವಿ ಆಯುಧಗಳನ್ನು ತಯಾರು ಮಾಡುವ ಕಂಪನಿಗಳೊಂದಿಗೂ, ರೋಲ್ಸ್‌ರಾಯ್ಸ್‌ನಂತಹ ಲಕ್ಸುರಿ ಕಾರುಗಳ ಮ್ಯಾನುಫ್ಯಾಕ್ಚರರ್‌ಗಳೊಂದಿಗೂ ಶಿಪ್ಪಿಂಗ್ ಕಂಪನಿಗಳೊಂದಿಗೂ ಕೋಟ್ಯನುಗಟ್ಟಲೆ ಡಾಲರ್‌ಗಳಲ್ಲಿ ಹೊರತು ವ್ಯಾಪಾರ ಮಾಡದ ಬೃಹತ್ ಸಂಸ್ಥೆಗಳೊಂದಿಗೂ ಇತ್ತು. ರಾಜರು, ಚಕ್ರವರ್ತಿಗಳು, ಯುವರಾಜರು, ಹಾಲಿವುಡ್ ನಟ-ನಟಿಯರು ವಿವಿಧ ದೇಶಗಳ ಅಧ್ಯಕ್ಷರು, ಪ್ರಧಾನಮಂತ್ರಿಗಳು ಅವನ ಮಿತ್ರರು. ಸೌದಿ ಅರೇಬಿಯಾ ರಾಜ ಕುಟುಂಬದೊಂದಿಗೆ ಅವನಿಗೆ ಸಂಬಂಧ, ಬಾಂಧವ್ಯಗಳಿದ್ದುವು. ಅವನಿಗೆ ಅಂತಹವೇ ಮತ್ತೆರಡು ಜೆಟ್ ವಿಮಾನಗಳಿ

ಡ್ಡುವು. ನಾಲ್ಕು ಹಡಗುಗಳಿದ್ದುವು. ರೋಲ್ಸ್‌ರಾಯ್ಸ್ ಕಾರುಗಳೂ, ಮರ್ಸಿಡಿಸ್ ಬೆಂಜ್‌ಗಳೂ, ಲಿಮೋಸಿನ್‌ಗಳೂ ಒಟ್ಟು ಎಷ್ಟಿವೆಯೋ ಅವನಿಗೇ ಲೆಕ್ಕವಿಲ್ಲ. ಪ್ರಪಂಚದ ನಾಲ್ಕು ಮೂಲೆಗಳಲ್ಲೂ ಅನೇಕ ಪ್ರಧಾನ ನಗರಗಳಲ್ಲಿ ಅವನಿಗೆ ಎಸ್ಟೇಟ್‌ಗಳೂ, ಭವನಗಳೂ ಇದ್ದುವು. ಅವನ ಜೀವನ ನಿರ್ವಹಣೆಯ ಖರ್ಚು ಒಂದು ದಿನಕ್ಕೆ 40 ಲಕ್ಷ ಡಾಲರ್.

ನೂತನ ಸಂವತ್ಸರದ ಆರಂಭಕ್ಕೆ ಅವನು ಕೇವಲ ಮೂವರು ವ್ಯಕ್ತಿಗಳಿಗೆ ತನ್ನ ಜೆಟ್ ವಿಮಾನದಲ್ಲಿ ಪಾರ್ಟಿ ಕೊಡುತ್ತಿದ್ದ. ಇಷ್ಟು ಕಡಿಮೆ ಜನರೊಂದಿಗೆ ಅವನು ಪಾರ್ಟಿ ಮಾಡುವುದು ತುಂಬಾ ವಿರಳವೆಂದೇ ಹೇಳಬೇಕು. ಸಾಮಾನ್ಯವಾಗಿ ಅವನು ಕೊಡುವ ಪಾರ್ಟಿಗಳು ತುಂಬಾ ಗ್ರ್ಯಾಂಡ್ ಆಗಿರುತ್ತವೆ. ಒಂದೊಂದು ಪಾರ್ಟಿಗೂ ಲಕ್ಷಗಟ್ಟಲೆ ಡಾಲರ್ ಖರ್ಚಾಗುತ್ತವೆ ಅವನ ಪಾರ್ಟಿಗಳಿಗೆ ಹಾಲಿವುಡ್ ನಟ-ನಟಿಯರಿಂದ ರಾಷ್ಟ್ರ ನಾಯಕರವರೆಗೆ ಹಾಜರಾಗುತ್ತಾರೆ. ಈ ಸಲ ಅವನು ಏರ್ಪಡಿಸಿದ ಚಿಕ್ಕ ಪಾರ್ಟಿ ವ್ಯಾಪಾರಕ್ಕೆ ಸಂಬಂಧಿಸಿದುದು.

ಅವನೆದುರಿಗೆ ಕುಳಿತಿದ್ದ ಮೂವರು ವ್ಯಕ್ತಿಗಳಲ್ಲಿ ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ವಿಶಿಷ್ಟರಾದವರು.

ಅವನ ಬಲಗಡೆ ಕುಳಿತಿದ್ದ ವ್ಯಕ್ತಿ ಒಬ್ಬ ಭಾರತೀಯ ಸ್ವಾಮೀಜಿ. ಅವನ ಹೆಸರು ಮುನೀಂದ್ರ ಸ್ವಾಮಿ. ಹೆಸರಿಗೆ ಸ್ವಾಮೀಜಿಯಾದರೂ ಕೋಟ್ಯಂತರ ಡಾಲರ್‌ಗಳಿಗೆ ಒಡೆಯ. ಬೃಂದಾವನದಲ್ಲೂ, ಕಾಶ್ಮೀರದಲ್ಲೂ, ಕೆಂಟಕಿಯಲ್ಲೂ, ನ್ಯೂಯಾರ್ಕ್‌ನಲ್ಲೂ, ಕ್ಯಾಲಿಫೋರ್ನಿಯಾದಲ್ಲೂ ಯುರೋಪ್‌ನಲ್ಲಿನ ಅನೇಕ ಪ್ರದೇಶಗಳಲ್ಲೂ ಆತ ಸ್ಥಾಪಿಸಿದ ಆಶ್ರಮಗಳು ದಿನವೂ ಲಕ್ಷಗಟ್ಟಲೆ ಡಾಲರ್‌ಗಳ ಆದಾಯವನ್ನು ತಂದುಕೊಡುತ್ತಿದ್ದುವು. ರಾಜಕೀಯವಾಗಿ ಕೂಡ ಮುನೀಂದ್ರ ಸ್ವಾಮಿಗೆ ತುಂಬಾ ಆಸೆ, ಆಕಾಂಕ್ಷೆಗಳಿದ್ದುವು. ಎಂದಾದರೂ ಭಾರತ ದೇಶದ ಪ್ರಧಾನಮಂತ್ರಿಯಾಗಬೇಕೆನ್ನುವುದು ಅವನ ಆಸೆ. ಅವನು ಕೂಡ ಜೇಕೇಯಂತೆಯೇ ಕಮಿಷನ್ ಏಜೆಂಟ್. ಆದರೆ ಜೇಕೇಯಂತೆ ಬಹಿರಂಗವಾಗಿಯಲ್ಲದೆ ಕಾಷಾಯದ ಮರೆಯಲ್ಲಿ ತನ್ನ ವ್ಯಾಪಾರ ನಡೆಸುತ್ತಿದ್ದ. ಆಯುಧಗಳ ವ್ಯವಹಾರದಲ್ಲಿ ಮಧ್ಯವರ್ತಿಯ ಪಾತ್ರ ವಹಿಸುವುದರಲ್ಲಿ ಪರಿಣತಿಯನ್ನು ಸಾಧಿಸಿದ್ದ. ಆದರೆ ಜೇಕೇಗಿದ್ದಷ್ಟು ಜನ ಗಿರಾಕಿಗಳು ಮುನೀಂದ್ರ ಸ್ವಾಮಿಗಿರಲಿಲ್ಲ. ಅದಕ್ಕೆ ಜೇಕೇಯೊಂದಿಗೆ ಸ್ನೇಹ ಮಾಡಿದ್ದ. ಆ ಸಮಯದಲ್ಲಿ ಆಯುಧಗಳ ಮಾರಾಟದ ಬಗೆಗಿನ ವ್ಯವಹಾರ ಆ ವಿಮಾನದಲ್ಲಿ ತುಂಬಾ ರಹಸ್ಯವಾಗಿ ನಡೆಯುತ್ತಿತ್ತು. ಅದಕ್ಕೇ ಜೇಕೇ ಅಷ್ಟು ಕಡಿಮೆ ಜನರಿಗೆ

ಪಾರ್ಟಿ ಏರ್ಪಡಿಸಿದ್ದ.

ಜೇಕೇ ಎಡಗಡೆ ಕುಳಿತಿದ್ದ ವ್ಯಕ್ತಿ ಒಬ್ಬ ಸಿ. ಐ. ಎ. ಏಜೆಂಟ್. ಅಲ್ಲಿ ನಡೆಯುತ್ತಿರುವ ಆಯುಧಗಳ ವ್ಯವಹಾರದಲ್ಲಿ ಅವನಿಗೆ ಸಿ. ಐ. ಎ.ನ ಪರವಾಗಿ ಆಸಕ್ತಿ ಇತ್ತು

ಜೇಕೇಗೆ ಎದುರಾಗಿ ಕುಳಿತಿದ್ದ ವ್ಯಕ್ತಿ ಜರ್ಮನಿಗೆ ಸೇರಿದ ಒಂದು ಆಯುಧ ಕಾರ್ಖಾನೆಯ ಪ್ರತ್ಯೇಕ ದೂತ.

ಪಾಕಿಸ್ತಾನದ ಅಧ್ಯಕ್ಷ ಮರಣಿಸಿದ ನಂತರ ಸುಮಾರು ಒಂದೂವರೆ ದಶಕಗಳ ನಂತರ ಅಲ್ಲಿ ಮತ್ತೆ ಪ್ರಜಾಪ್ರಭುತ್ವ ಏರ್ಪಟ್ಟಿತು. ಆದರಿಂದಾಗಿ ಅಲ್ಲಿಯವರೆಗೆ ಅತ್ತ ಅಫ್‌ಘಾನಿಸ್ತಾನದಲ್ಲೂ, ಇತ್ತ ಇಂಡಿಯಾದಲ್ಲೂ ಚುರುಕಾಗಿದ್ದ ಉಗ್ರಗಾಮಿಗಳಿಗೆ ಆಯುಧಗಳ ಸರಬರಾಜು ಹೆಚ್ಚೂ ಕಡಿಮೆ ನಿಂತು ಹೋಗುವ ಪರಿಸ್ಥಿತಿ ಉಂಟಾಯಿತು. ತಮ್ಮ ನೆರೆಯ ದೇಶಗಳಲ್ಲಿ ಶ್ರದ್ಧೆವಹಿಸಿ ಉಗ್ರಗಾಮಿಗಳ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಪಾಕಿಸ್ತಾನಕ್ಕೆ ಅಷ್ಟಾಗಿ ಇಷ್ಟವಿಲ್ಲ. ಆದರಿಂದಾಗಿ ಅಮೆರಿಕನ್ ಸಿ.ಐ.ಎ. ರಂಗಕ್ಕಿಳಿಯಿತು. ದಕ್ಷಿಣ ಏಶಿಯಾದಲ್ಲಿ ಶಾಂತಿ,ಸ್ಥಿರತೆ ನೆಲೆಗೊಳ್ಳುವುದು ಅಮೆರಿಕನ್‌ಸಾಮ್ರಾಜ್ಯವಾದಿಗಳಿಗೆ ಇಷ್ಟವಿರಲಿಲ್ಲ. ಆದ್ದರಿಂದ ಏನಾದರೂ ಮಾಡಿ ದಕ್ಷಿಣ ಏಶಿಯಾದಲ್ಲಿ ಉಗ್ರಗಾಮಿ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುವುದು ಅಮೆರಿಕಾದ ಉದ್ದೇಶ.

ಸಿ.ಐ.ಎ.ಗೆ ಮುನೀಂದ್ರ ಸ್ವಾಮಿ ತುಂಬಾ ಹತ್ತಿರದವನು. ಸಿ. ಐ. ಎ. ತಮ್ಮ ಏಜೆಂಟ್‌ನನ್ನು ಕಳುಹಿಸಿ ಮುನೀಂದ್ರ ಸ್ವಾಮಿಯ ಮೂಲಕ ಜೇಕೇಯನ್ನು ಸಂಪರ್ಕಿಸಿತು. ಜೇಕೇಗೆ ಅಮೆರಿಕನ್ ರಾಜಕೀಯ ಕಾರ್ಯ ಕಲಾಪಗಳಲ್ಲಾಗಲೀ, ಮತ್ಯಾವ ದೇಶದ ರಾಜಕೀಯ ಕಾರ್ಯಕಲಾಪಗಳಲ್ಲಾಗಲೀ ಆಸಕ್ತಿಯಿರಲಿಲ್ಲ. ಅವನಿಗೆ ಆಸಕ್ತಿ ಇದ್ದುದು ತನಗೆ ಬರಬೇಕಾದ ಕಮಿಷನ್ನಿನ ಮೇಲೆ ಮಾತ್ರ. ಗಿರಾಕಿಗಳು ಯಾರಾದರೂ ಸರಿ, ತನಗೆ ಬರಬೇಕಾದ ಕಮಿಷನ್ ಬಂದರೆ ಸರಿ ಕೆಲಸ ಮಾಡಿಕೊಡುತ್ತಿದ್ದ.

ಜೇಕೇ ತನ್ನ ಕಸ್ಟಮರ್ ಆದ ಜರ್ಮನ್ ಆಯುಧಗಳ ಕಂಪನಿಯನ್ನು ಸಂಪರ್ಕಿಸಿ ಆ ಹೊತ್ತು ವಿಮಾನದಲ್ಲಿ ಆ ಚಿಕ್ಕ ಪಾರ್ಟಿ ಏರ್ಪಾಡು ಮಾಡಿದ್ದ. ವ್ಯಾಪಾರ ಕೆಲವು ಕ್ಷಣಗಳ ಹಿಂದೆ ಕುದುರಿತ್ತು. ಆಯುಧ ಕಂಪನಿಗಳಿಗೆ ಜೇಕೇಯ ಕೈಗಳ ಮುಖಾಂತರ ಅಡ್ವಾನ್ಸ್ ಮುಟ್ಟಿಸಲಾಗುತ್ತದೆ.ಮುನೀಂದ್ರ ಸ್ವಾಮಿಯ ಮೂಲಕ ಆಯುಧಗಳು ಉಗ್ರಗಾಮಿ ತಂಡಗಳಿಗೆ ತಲುಪುತ್ತವೆ. ವ್ಯಾಪಾರ ಕುದುರಿದ್ದಕ್ಕೆ ಜೇಕೇಗೆ ಶೇಕಡಾ ಇಪ್ಪತ್ತರಷ್ಟು ಕಮಿಷನ್‌ಕೊಡಲು

ಆಯುಧಗಳ ಕಂಪನಿ ಒಪ್ಪಿಕೊಂಡಿತ್ತು. ಶೇಕಡಾ ಇಪ್ಪತ್ತು ಕಮಿಷನ್ ಅಂದರೆ ಕೆಲವು ಕೋಟಿ ಡಾಲರ್‌ಗಳು. ಈ ವ್ಯವಹಾರಕ್ಕೆ ಫೈನಾನ್ಸ್ ಮಾಡಲು ಸಿ.ಐ.ಎ. ಮೊದಲೇ ಸಿದ್ಧವಾಗಿತ್ತು. ಮಧ್ಯರಾತ್ರಿಯಾಗಲು ಕೆಲವು ಕ್ಷಣಗಳ ಮುಂಚೆ ವ್ಯಾಪಾರ ಕುದುರಿದೊಡನೆ ಅಲ್ಲಿ ಕುಳಿತಿದ್ದ ನಾಲ್ವರ ದೃಷ್ಟಿ ಎದುರಿಗಿದ್ದ ಗಡಿಯಾರದ ಮೇಲೆ ಬಿತ್ತು. ಸೆಕೆಂಡ್‌ನ ಮುಳ್ಳು ವಿರಾಮವಿಲ್ಲದೆ ಮುಂದೆ ಓಡುತ್ತಿತ್ತು ಮಧ್ಯರಾತ್ರಿಯಾಗಲು ಇಪ್ಪತ್ತು ಸೆಕೆಂಡ್‌ಗಳಿದ್ದುವು. ಒಂದು, ಎರಡು, ಮೂರು ಸೆಕೆಂಡ್‌ನ ಮುಳ್ಳು ಓಡುತ್ತಲೇ ಇತ್ತು. ಹದಿನೆಂಟು........... ಹತ್ತೊಂಬತ್ತು........ ಇಪ್ಪತ್ತು........... ಅಷ್ಟೇ ! ಸೆಕೆಂಡ್‌ಗಳ ಮುಳ್ಳು, ನಿಮಿಷಗಳ ಮುಳ್ಳು ಸರಿಯಾಗಿ ಹನ್ನೆರಡರ ಮೇಲೆ ಒಂದಾದವು.

ಸರಿಯಾಗಿ ಅದೇ ಸಮಯದಲ್ಲಿ ಆ ಗಡಿಯಾರದೊಂದಿಗೆ ಕನೆಕ್ಟ್ ಮಾಡಲಾಗಿದ್ದ ಲೆಡ್‌ಬಾಲ್ ಗನ್ ಆಟೋಮ್ಯಾಟಿಕ್ ಆಗಿ ಟಿಪ್ ಎನ್ನುತ್ತಾ ಲೆಡ್ ಬಾಲ್ ಅನ್ನು ರಿಲೀಜ್ ಮಾಡಿತು. ಲೆಡ್‌ಬಾಲ್ ನುಗ್ಗಿ ಹೋಗಿ ಸೀಲಿಂಗ್‌ಗೆ ಕಟ್ಟಿದ್ದ ವಿಧವಿಧವಾದ ಬಲೂನ್‌ಗಳ ನಡುವೆ ಇದ್ದ ಕೆಂಪು ಬಲೂನ್ ಅನ್ನು ತಾಕಿತು. ಢಾಂ! ಎನ್ನುವ ಶಬ್ದದೊಂದಿಗೆ ಬಲೂನ್ ಸಿಡಿಯಿತು. ಹಳೆಯ ವರ್ಷ ಕಳೆದು ಹೊಸ ವರ್ಷ ಆ ಕ್ಷಣದಿಂದ ಬಂದಿತೆನ್ನುವುದಕ್ಕೆ ಅದು ಚಿಹ್ನೆ.

ಮರುಕ್ಷಣ ಸಿ ಐ.ಎ. ಏಜೆಂಟ್‌ನ ಕೈಯಲ್ಲಿದ್ದ ಶಾಂಪೇನ್ ಬಾಟಲ್‌ನ ಕಾರ್ಕ್ ಹೆಚ್ಚೂ ಕಡಿಮೆ ಅದೇ ಶಬ್ದದೊಂದಿಗೆ ಗಾಳಿಯಲ್ಲಿದ್ದಿತು. ಬಾಟಲಿನಿಂದ ಘಾಟಾದ ದ್ರವ ಜಿಲ್ಲೆಂದು ಮೇಲೆ ಹಾರಿತು.

"ಚೀರ್ಸ್!" ಎಂದ ಸಿ.ಐ.ಎ. ಏಜೆಂಟ್.

"ವೆಲ್‌ಕಮ್ ಟು 1989" ಎಂದ ಜರ್ಮನ್.

ಟೇಬಲ್ ಮೇಲಿದ್ದ ಬೆಳ್ಳಿ ಗಾಬ್ಲೆಟ್ಸ್ ಸರಸರನೆ ಶಾಂಪೇನ್‌ನಿಂದ ತುಂಬಿ ಹೋದುವು. "ಚೀರ್ಸ್!"— ಬೆಳ್ಳಿ ಗಾಬ್ಲೆಟ್ಸ್ ಕ್ಷಣಗಳಲ್ಲಿ ಖಾಲಿಯಾದುವು.

"ಜೇಕೇ ಬಗೆಗೆ ನಾನು ತುಂಬಾ ಕೇಳಿದೀನಿ!" ಎರಡನೇ ಸಲ ಬೆಳ್ಳಿ ಗಾಬ್ಲೆಟ್ ಎತ್ತಿಕೊಳ್ಳುತ್ತಾ ನುಡಿದ ಜರ್ಮನ್. "ಹೊಸ ವರ್ಷವನ್ನು ಕೇವಲ ಪೆಟ್‌ಪಾರ್ಟಿಯೊಂದಿಗೇ ಮುಗಿಸುತ್ತಾರೆಂದು ಊಹಿಸಿರಲಿಲ್ಲ!" ಆ ಮಾತಿಗೆ ಜೇಕೇ ಭುಜಗಳು ಕುಣಿಯುವಂತೆ ಜೋರಾಗಿ ನಕ್ಕ. ಅವನು ನಗುವುದನ್ನು ನಿಲ್ಲಿಸಿ ಏನೋ ಹೇಳಲಿರುವಾಗ ಮುನೀಂದ್ರ ಸ್ವಾಮಿ ನಡುವೆ ಬಾಯಿ ಹಾಕಿದ.

"ಜೇಕೇ ಬಗೆಗೆ ನೀವು ಕೇಳಿದ್ದರಲ್ಲಿ ತಪ್ಪೇನೂ ಇಲ್ಲ! ಸೀಕ್ರೆಟ್ ಡೀಲ್ ಆದ್ದರಿಂದ ಇಷ್ಟು ಚಿಕ್ಕ ಪಾರ್ಟಿ ಕೊಡಬೇಕಾಯಿತು. ಹೋದ ಸಲ ಅವರು

ಪಾರ್ಟಿ ಕೊಟ್ಟಾಗ ಎರಡೂವರೆ ಮಿಲಿಯನ್ ಡಾಲರ್ ಖರ್ಚು ಮಾಡಿದರು".

"ಹೌದಾ!" ಜರ್ಮನ್ ನಂಬಲಾಗದವನಂತೆ ನೋಡಿದ.

"ಓಹ್! ಅದೇನೂ ದೊಡ್ಡದಲ್ಲ" ಎಂದ ಜೇಕೇ. ಬರುವ ತಿಂಗಳು ನನಗೆ ಐವತ್ತು ತುಂಬುತ್ತೆ. "ನನ್ನ ಹುಟ್ಟು ಹಬ್ಬದಂದು ನಾನು ಕೊಡಲಿರುವ ಪಾರ್ಟಿಗೆ ಸುಮಾರು ಆರು ಮಿಲಿಯನ್ ಡಾಲರ್ ಖರ್ಚಾಗುತ್ತೆ. ರೊನಾಲ್ಡ್ ರೇಗನ್ ಅವರನ್ನು ಆ ಪಾರ್ಟಿಗೆ ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಲಿದ್ದೇನೆ. ಸಿಲ್ವೆಸ್ಟರ್ ಸ್ಟೆಲೋನ್, ಬೋಡೆರೆಕ್‌ನೊಂದಿಗೆ ಇತರ ಹಾಲಿವುಡ್ ತಾರೆಯರು ಬಹಳ ಜನ ಆ ದಿನ ಪಾರ್ಟಿಗೆ ಬರುತ್ತಾರೆ! ಇನ್ನು ಇತರ ಪ್ರಮುಖರ ಬಗೆಗೆ ಹೇಳಬೇಕಾದ ಅಗತ್ಯವಿಲ್ಲ. ಅದಕ್ಕೇ ಅಷ್ಟು ಖರ್ಚು!"

ಜರ್ಮನ್ ವ್ಯಕ್ತಿ ಬಾಯಿ ತೆರೆದ.

"ಆರು ಮಿಲಿಯನ್ ಡಾಲರ್ ಅವರಿಗೆ ತುಂಬಾ ಚಿಕ್ಕ ಮೊತ್ತ". ಸಿ. ಐ. ಎ. ನಿಧಾನವಾಗಿ ಶಾಂಪೇನ್ ಹೀರುತ್ತಾ ನುಡಿದ— "ಒಂದು ದಿನಕ್ಕೆ ಅವರ ವೈಯಕ್ತಿಕ ಖರ್ಚು ಸುಮಾರು ಐದು ಮಿಲಿಯನ್ ಡಾಲರ್!"

"ಅದು ಯಾವ ಮಹಾ ಬಿಡಿ". ಜೇಕೇ ನಕ್ಕ. ಅವನಿಗೆ ತನ್ನ ಸಂಪತ್ತಿನ ಬಗೆಗೆ ಇತರರು ಹೊಗಳುತ್ತಿದ್ದರೆ ಕೇಳುವುದು ತುಂಬಾ ಇಷ್ಟ. ಪ್ರಪಂಚದಲ್ಲಿಯೇ ಎಲ್ಲಕ್ಕಿಂತಲೂ ಚುರುಕಾದ ಇಂಟೆಲಿಜೆನ್ಸ್ ಏಜನ್ಸಿಯಿಂದ ಬಂದ ಏಜೆಂಟ್‌ಗೆ ಅಷ್ಟು ಖಚಿತವಾಗಿ ವಿವರಗಳು ತಿಳಿದಿರುವುದು ಆಶ್ಚರ್ಯವೇನಲ್ಲ!"

ಜರ್ಮನ್ ಕಣ್ಣರಳಿಸಿ ನೋಡುತ್ತಿದ್ದ. ಒಬ್ಬ ವ್ಯಕ್ತಿಯ ದಿನದ ಖರ್ಚು ಐವತ್ತು ಲಕ್ಷ ಡಾಲರ್! ಅವನಿಗೆ ಹಸಿವಿನಿಂದ ವಿಲಿವಿಲಿ ಒದ್ದಾಡಿ ಮೃತ್ಯು ದೇವತೆಗೆ ಬಲಿಯಾಗುತ್ತಿರುವ ಆಫ್ರಿಕಾದ ಮಕ್ಕಳು, ಚಿಲ್ಲರೆ ದುಡ್ಡಿಗೋಸ್ಕರ ಹೊಡೆದಾಡಿ ಸಾಯುತ್ತಿರುವ ದರಿದ್ರರೂ, ಹೆಂಡತಿ ಮಕ್ಕಳಿಗೆ ಹೊಟ್ಟೆ ತುಂಬಾ ಅನ್ನ ಹಾಕಲಾಗದೆ ಆತ್ಮಹತ್ಯೆ ಮಾಡಿಕೊಳ್ಳುವ ಅಸಹಾಯಕರೂ ನೆನಪಾಗಿ ತಲೆ ಜಾಡಿಸಿದ. ಐದು ಮಿಲಿಯನ್ ಡಾಲರ್! ಮೈಗಾಡ್! ಅವನ ಮುಖದಲ್ಲಿ ಆಶ್ಚರ್ಯವನ್ನು ಗಮನಿಸಿದ ಜೇಕೇ ಕಣ್ಣುಗಳು ಗಂಭೀರವಾದವು. ಮೌನ ವಾಗಿ ಕೋಟಿನ ಜೇಬಿನಲ್ಲಿ ಕೈ ಹಾಕಿ ಸಾವಿರ ರಿಯಾಲ್‌ಗಳ ನಾಣ್ಯವೊಂದನ್ನು ಹೊರತೆಗೆದ.

"ನನ್ನ ಸ್ವಂತ ಖರ್ಚಿನ ವಿಷಯ ಕೇಳಿ ನಿಮಗೆ ತುಂಬಾ ಆಶ್ಚರ್ಯ ವುಂಟಾಗಿರುವಂತಿದೆ. ಆ ವಿಷಯವನ್ನು ನಿಮ್ಮ ಕಣ್ಣುಗಳೇ ಹೇಳುತ್ತಿವೆ. ಇಷ್ಟು ಖರ್ಚು ನಾನು ಯಾಕೆ ಮಾಡಬೇಕಾಗಿ ಬರುತ್ತದೆ ಎನ್ನುವುದನ್ನು ವಿವರಿಸ್ತೀನಿ. ಈ ನಾಣ್ಯ ನೋಡಿ!" ಎಂದು ಹೇಳಿ, ಮರುಕ್ಷಣ ಟಾಸ್

ಮಾಡುತ್ತಿರುವವನಂತೆ ಆ ನಾಣ್ಯವನ್ನು ಮೇಲೆ ಹಾರಿಸಿದ. ನಾಣ್ಯ ಟೇಬಲ್ ಮೇಲೆ ಬಿದ್ದು ಝಣ ಝಣ ಶಬ್ದ ಮಾಡಿತು. ಅವನು ನಾಣ್ಯವನ್ನು ಮತ್ತೆ ಕೈಗೆತ್ತಿಕೊಂಡು ಮತ್ತೊಂದು ಸಲ ಮೇಲೆ ಹಾರಿಸಿದ. ಈ ಸಲ ನಾಣ್ಯ ವಿಮಾನದ ಫ್ಲೋರಿಂಗ್ ಮೇಲಿನ ತಿವಾಸಿಯ ಮೇಲೆ ನಿಶ್ಯಬ್ದವಾಗಿ ಬಿತ್ತು. ಎಲ್ಲರೂ ಹಿಪ್ನಟೈಸ್ ಆದವರಂತೆ ನೋಡುತ್ತಿದ್ದರು. ಜೇಕೇ ನಿರ್ಲಕ್ಷ್ಯದಿಂದ ಆ ನಾಣ್ಯವನ್ನು ಬಿದ್ದಲ್ಲಿಯೇ ಬಿಟ್ಟು, ನಗುತ್ತಾ ನೋಡಿದ. "ಈಗ ಅರ್ಥ ವಾಯಿತಾ ?" ಎನ್ನುವಂತಿತ್ತು ಅವನ ಧೋರಣೆ. ಎಲ್ಲರ ಕಡೆಯೂ ಪರಿಶೀಲನೆ ಯಿಂದ ನೋಡುತ್ತಿದ್ದ. ಯಾರಿಗೂ ಏನೂ ಅರ್ಥವಾಗಲಿಲ್ಲ— ಅವನು ಮುಗುಳ್ನಗುತ್ತಾ ನುಡಿದ. "ಆ ನಾಣ್ಯವನ್ನು ನೋಡಿದಿರಲ್ಲ. ಅದು ಒಂದೇ ನಾಣ್ಯ ಎರಡು ಸ್ಥಳಗಳಲ್ಲಿ ಎರಡು ರೀತಿಯಾಗಿ ಬಿತ್ತು. ಟೇಬಲ್ ಮೇಲೆ ಬಿದ್ದಾಗ ಝಣ ಝಣ ಎಂದು ಸಪ್ಪಳ ಮಾಡಿತು. ತಿವಾಸಿಯ ಮೇಲೆ ಸಪ್ಪಳ ಮಾಡದೆ ಸುಮ್ಮನಿತ್ತು. ಒಂದೇ ನಾಣ್ಯ ಎರಡು ಕೆಲಸಗಳನ್ನು ಮಾಡಿತು. ನಾಣ್ಯ ಕೆಳಗೆ ಬಿದ್ದು ಝಣ ಝಣ ಎಂದಾಗ ಎಲ್ಲರ ದೃಷ್ಟಿಯೂ ಅದರ ಕಡೆ ಹೊರಳುತ್ತದೆ. ಅದೇ ನಿಶ್ಯಬ್ದವಾಗಿ ಕೆಳಗೆ ಬಿದ್ದಾಗ ಯಾರೂ ಅದನ್ನು ನೋಡುವುದಿಲ್ಲ. ಎರಡು ಸಲವೂ ಅದರ ಮೌಲ್ಯದಲ್ಲಿ ಬದಲಾವಣೆ ಯಾಗುವುದಿಲ್ಲ. ಆದರೆ ಮೊದಲ ಸಲ ಮಾತ್ರವೇ ಎಲ್ಲರೂ ಅದರ ಇರುವನ್ನು ಗುರುತಿಸುತ್ತಾರೆ. ಎರಡನೆ ಬಾರಿ ಅದರಷ್ಟಕ್ಕದೇ ಕಾಣಿಸದ ಹೊರತು,ಯಾರೂ ಅದನ್ನು ಗಮನಿಸುವುದಿಲ್ಲ.

"ಜೀವನದಲ್ಲೂ ಅಷ್ಟೇ. ನೀನು ಮಾಡುವ ಕೆಲಸವನ್ನು ಸಾಧ್ಯ ವಾದಷ್ಟು ಅಟ್ಟಹಾಸವಾಗಿ ಎಲ್ಲರ ದೃಷ್ಟಿಯೂ ನಿನ್ನ ಕಡೆಯೇ ಇರುವಂತೆ ಮಾಡು. ಆಗಲೇ ಹತ್ತು ಜನ ನಿನ್ನನ್ನು ಗಮನಿಸುತ್ತಾರೆ. ನಿನ್ನ ಬೆಲೆ ತಿಳಿದುಕೊಳ್ಳುತ್ತಾರೆ. ಅದೇ ಕೆಲಸವನ್ನು ನಿನ್ನಷ್ಟಕ್ಕೆ ನೀನೇ ನಿಶ್ಯಬ್ದವಾಗಿ ಮಾಡುತ್ತಾ ಹೋದರೆ ಯಾರೂ ನಿನ್ನನ್ನು ಗಮನಿಸುವುದಿಲ್ಲ. ನಿನ್ನ ಬೆಲೆ ಅಜ್ಞಾತವಾಗುಳಿಯುತ್ತದೆ. ಎರಡೂ ಸಲವೂ ನೀನು ಮಾಡುವ ಕೆಲಸ ಒಂದೇ ಆಗಿದ್ದರೂ, ಎರಡೂ ಸಲವೂ ನಿನ್ನ ಮೌಲ್ಯದಲ್ಲಿ ಮಾರ್ಪಾಡಿಲ್ಲದೆ ಹೋದರೂ ಹತ್ತು ಜನರ ದೃಷ್ಟಿಯನ್ನು ನೀನು ಆಕರ್ಷಿಸುವಂತಾದಾಗಲೇ ನೀನು ಮುಂದೆ ಬರಬಲ್ಲೆ. ಇಲ್ಲದಿದ್ದರೆ ಇದ್ದಲ್ಲಿಯೇ ಉಳಿದುಬಿಡುತ್ತೀಯ— ನಿನ್ನನ್ನು ಯಾರೂ ಗುರುತಿಸುವುದಿಲ್ಲ.

"ಅದಕ್ಕೇ ನಾನುಮಾಡುವ ಯಾವ ಕೆಲಸವನ್ನಾದರೂ ಸಾಧ್ಯವಾದಷ್ಟು ಅಟ್ಟಹಾಸವಾಗಿ ಮಾಡುತ್ತೇನೆ. ಇಪ್ಪತ್ನಾಲು ಗಂಟೆ ಎಲ್ಲರ ದೃಷ್ಟಿಯಲ್ಲೂ

ಇರುತ್ತೇನೆ. ಅಷ್ಟು ದೂರ ಏಕೆ ? ನಾನೇ ನನ್ನ ದುಬಾರಿ ಜೀವನ ವಿಧಾನದ ಮೂಲಕ ಎಲ್ಲರ ದೃಷ್ಟಿಯಲ್ಲೂ ಬೀಳದಿದ್ದರೆ— ನಿಮ್ಮ ಆಯುಧ ಗಳ ಕಂಪನಿ ನನ್ನನ್ನು ಗುರುತಿಸಿರುತ್ತಿತ್ತೆ ? ಇಷ್ಟು ದೊಡ್ಡ ವ್ಯಾಪಾರವನ್ನು ನನ್ನ ಕೈಗಳ ಮೇಲೆ ಜರುಗಿಸಲು ಸಿದ್ಧವಾಗುತ್ತಿತ್ತೆ ? ನೇರವಾಗಿ ಹೇಳುತ್ತೇನೆ. ನನ್ನ ಸಂಪತ್ತಿನ ಬಗೆಗೆ, ನನ್ನ ದುಬಾರಿ ಜೀವನದ ಬಗೆಗೆ ಯಾರಾದರೂ ಹೇಳಿ ಕೊಂಡರೆ—ಹೊಗಳಿಯಾದರೂ ಸರಿ, ವಿಮರ್ಶಿಸಿಯಾದರೂ ಸರಿ ನನಗೆ ತುಂಬಾ ಆನಂದ ಉಂಟಾಗುತ್ತದೆ. ಅದಕ್ಕೇ ನನಗಿಷ್ಟು ಖರ್ಚು. ಅದಕ್ಕೇ ನಾನಿಷ್ಟು ದುಡ್ಡು ಸಂಪಾದಿಸಬಲ್ಲವನಾಗಿದ್ದೇನೆ".

ಅವನು ಹೇಳುವುದನ್ನು ನಿಲ್ಲಿಸಿದೊಡನೆ ಅಲ್ಲಿ ನಿಶ್ಶಬ್ದ ಆವರಿಸಿತು. ಜೇಕೇ ಕೆಲವು ಕ್ಷಣ ಅವರೆಲ್ಲರ ಮುಖಗಳನ್ನು ಪರೀಕ್ಷೆಯಿಂದ ನೋಡಿ ಜೋರಾಗಿ ನಕ್ಕ. "ಅರೆ! ನನ್ನ ಜಮಾ ಖರ್ಚಿನ ವಿಷಯ ಇನ್ನು ಮರೆತುಬಿಡೋಣ. ಇದಕ್ಕೆ ಮೊದಲು ಏನೋ ಅಂದ್ರಲ್ಲ ? ಪೆಟ್ ಪಾರ್ಟಿಯೊಂದಿಗೇ ಸರಿ ಮಾಡ್ತಿದೀನಿ ಅಂತಾನಾ! ಚಿಂತಿಸ್ಬೇಡಿ— ಈ ಹೊಸ ವರ್ಷದ ದಿನ ಜೀವನವಿಡೀ ನೆನಪುಳಿಯು ವಂತಹ ಏರ್ಪಾಡು ಮಾಡಿಟ್ಟಿದೀನಿ. ಜೇಕೇ ತನ್ನ ಕಸ್ಟಮರ್ಸ್‌ಗಳನ್ನು ನಿರಾಶೆಗೊಳಿಸುವುದಿಲ್ಲ........ ಅತ್ತ ನೋಡಿ!"

ಅವನು ಆ ಮಾತು ಹೇಳುವುದರೊಂದಿಗೇ ಎಲ್ಲರ ದೃಷ್ಟಿಯೂ ಒಂದೇ ಸಲಕ್ಕೆ ಆ ಕಡೆ ಹೊರಳಿತು. ಜೇಕೇ ತನ್ನ ಪಕ್ಕದಲ್ಲಿಯೇ ಇದ್ದ ಚಿಕ್ಕ ರಿಮೋಟ್ ಕಂಟ್ರೋಲರ್ ಒಂದನ್ನು ಕೈಗೆತ್ತಿಕೊಂಡು ಒಂದು ಬಟನ್ ಒತ್ತಿದ ಅಷ್ಟೇ!

ಆ ನಂತರ ಅವರಿಗೆ ಕಾಣಿಸಿದ ದೃಶ್ಯ ನೋಡಿ ಒಂದೇ ಸಲಕ್ಕೆ ಷಾಕ್ ಹೊಡೆಸಿಕೊಂಡವರಂತೆ ನೋಡುತ್ತಿದ್ದುಬಿಟ್ಟರು.

## ೪

**ಜೇ**ಕೇ ರಿಮೋಟ್ ಕಂಟ್ರೋಲರ್ ಆಪರೇಟ್ ಮಾಡುವುದನ್ನು ಪ್ರಾರಂಭಿಸಿದೊಡನೆಯೇ ಎದುರಿಗಿದ್ದ ಬಾಗಿಲುಗಳು ಎಲೆಕ್ಟ್ರಾನಿಕ್ ಸಿಸ್ಟಮ್ ಮೂಲಕ ತೆರೆದುಕೊಂಡವು. ಅವು ತೆರೆದುಕೊಳ್ಳುತ್ತಿರುವಾಗ ಜಲತರಂಗ ವಾದ್ಯದ ಸಂಗೀತ ಕೇಳಿಸಿತು. ಆ ಸಂಗೀತ ಎಲ್ಲಿಂದ ಬರುತ್ತಿದೆಯೆಂದು ಆ ಪಾಶ್ಚಾತ್ಯರಿಬ್ಬರಿಗೂ ಅರ್ಥವಾಗಲಿಲ್ಲ. ಬಾಗಿಲುಗಳು ಪೂರ್ತಿ ತೆರೆದುಕೊಂಡೊ ಡನೆಯೇ ಸಂಗೀತ ಕೇಳಿಬರುವುದು ಥಟ್ಟನೆ ನಿಂತಿತು. ಬಾಗಿಲು

ತೆರೆದುಕೊಂಡೊಡನೆಯೇ ದ್ವಾರಕ್ಕೆ ಅಡ್ಡವಾಗಿ ತಿಳಿ ಗುಲಾಬಿ ಬಣ್ಣದ ಪರದೆಗಳು ಕಾಣಿಸಿದವು. ತುಂಬಾ ತೆಳುವಾಗಿದ್ದ ಆ ಪರದೆಗಳ ಅತ್ತ ಕಡೆ ಯಾರದೋ ಆಕಾರ ಛಾಯಾ ಮಾತ್ರವಾಗಿ ಗೋಚರಿಸುತ್ತಿತ್ತು. ಪಾಶ್ಚಾತ್ಯರಿಬ್ಬರೂ ಆ ಆಕಾರ ಯಾರದೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಕಣ್ಣು ಹಿಗ್ಗಿಸಿ ನೋಡಿದರು. ಅರ್ಥವಾಗಲಿಲ್ಲ.

ನೋಡುತ್ತಿರುವಂತೆಯೇ ಗುಲಾಬಿ ಬಣ್ಣದ ಪರದೆ ನಿಧಾನವಾಗಿ ಮೇಲೆದ್ದಿತು. ದ್ವಾರಕ್ಕೆ ಅಡ್ಡವಾಗಿದ್ದುದು ಅದೊಂದೇ ಪರದೆಯಲ್ಲ. ಅದಕ್ಕೆ ಅತ್ತ ಕಡೆ ಇನ್ನೊಂದು ಪರದೆ ಇತ್ತು. ಅದೂ ಕೂಡ ಗುಲಾಬಿ ಬಣ್ಣದ್ದು. ಮೊದಲಿನ ಪರದೆ ಸರಿದೊಡನೆಯೇ ಅತ್ತಲಿಂದ ಕಾಣಿಸುತ್ತಿದ್ದ ಆಕಾರ ಕೊಂಚ ಸ್ಪಷ್ಟವಾಗಿ ಕಾಣಿಸಿತು. ಒಂದು ಹೆಣ್ಣಿನ ಆಕಾರ! ಅವರು ಕಣ್ಣರಳಿಸಿ ನೋಡುತ್ತಿದ್ದರು.

ಆ ಪರದೆ ಕೂಡ ನಿಧಾನವಾಗಿ ಮೇಲೆದ್ದಿತು. ಪರದೆ ಹಿಂದೆ ಮತ್ತೊಂದು ಪರದೆ! ಒಟ್ಟು ನಾಲ್ಕು ಪರದೆಗಳು ತಮ್ಮಷ್ಟಕ್ಕೆ ತಾವೇ ಸರಿದು ಅವುಗಳ ಹಿಂದಿದ್ದ ದೃಶ್ಯ ಅವರ ಕಣ್ಣುಗಳ ಮುಂದೆ ಸಾಕ್ಷಾತ್ಕರಿಸಿತು. ಆ ದೃಶ್ಯವನ್ನು ನೋಡಿಯೇ ಅವರು ಷಾಕ್ ಹೊಡೆಸಿಕೊಂಡವರಂತೆ ನೋಡತೊಡಗಿದರು. ಗುಲಾಬಿ ಪರದೆಗಳ ಹಿಂದೆ ಅವರಿಗೆ ಕಾಣಿಸಿದ ಆಕಾರ ಒಬ್ಬ ಯುವತಿಯ ರೂಪ ತಾಳಿದ ಅದ್ಭುತ ಸೌಂದರ್ಯ! ಯಾವ ಕವಿಯೂ ವರ್ಣಿಸಲಾಗದ, ಯಾವ ಚಿತ್ರಕಾರನೂ ಚಿತ್ರಿಸಲಾಗದ, ದಿವ್ಯ ಸೌಂದರ್ಯ ರಾಶಿ! ಒಂದೇ ಸಲಕ್ಕೆ ಅಂತಹ ಸೌಂದರ್ಯ ತಮ್ಮ ಕಣ್ಣೆದುರು ಕಾಣಿಸಿದೊಡನೆ ಅವರು ಉಸಿರಾಡುವುದನ್ನೇ ಮರೆತವರಂತೆ ನೋಡಿದರು. ಅವರ ಮನಸ್ಸುಗಳು ಯಾವುದೋ ಅನಿರ್ವಚನೀಯ ಮೋಹಾವೇಶಕ್ಕೆ ಒಳಗಾದವು.

ಹಂಸತೂಲಿಕಾತಲ್ಪವನ್ನು ಜ್ಞಾಪಿಸುವಂತಿದ್ದ ಒಂದು ದುಂಡನೆಯ ಮೊಘಲ್ ಗಾದಿಯ ಮೇಲೆ ಅವಳು ವಿರಹೋತ್ಕಂಠಿತೆಯಂತೆ ಪವಡಿಸಿದ್ದಳು. ಅವಳು ಪವಡಿಸಿದ್ದ ರೀತಿ ನೋಡಿ ಅವರ ಹೃದಯ ತಂತುಗಳನ್ನು ಎಳೆದು ಬಿಟ್ಟಂತಾಯಿತು.

ಅವಳು ಮೊಘಲ್ ಗಾದಿಯ ಅಂಚಿನ ಮೇಲಿನಿಂದ ತಲೆಕೆಳಗೆ ವಾಲಿಸಿ ಅಂಗಾತವಾಗಿ ಮಲಗಿದ್ದಳು. ಕಾರ್ಮೋಡಗಳನ್ನು ಜ್ಞಾಪಿಸುವಂತಿದ್ದ ಅವಳ ಉದ್ದನೆಯ ಕೇಶರಾಶಿ ವಿಶ್ರಂಖಲವಾಗಿ ನೆಲಕ್ಕೆ ನೇತಾಡುತ್ತಿತ್ತು. ಗುಲಾಬಿ ಹೂಗಿಂತಲೂ ಮೃದುವಾಗಿ ಕಾಣಿಸುತ್ತಿದ್ದ ಅವಳ ಕೈ ಮುಖದ ಮೇಲೆ ಅಡ್ಡವಾಗಿದ್ದುದರಿಂದ ಮುಖ ಪೂರ್ತಿಯಾಗಿ ಅವರಿಗೆ ಕಾಣಿಸುತ್ತಿರಲಿಲ್ಲ.ಮತ್ತೊಂದು ಕೈ ಸಮುದ್ರದ ಅಲೆಗಳಂತೆ ಹಾರಿ ಹಾರಿ ಬೀಳುತ್ತಿದ್ದ ಅವಳ ವಕ್ಷಸ್ಥಳದ

ಮೇಲೆ ವಿಶ್ರಾಂತಿ ಪಡೆಯುತ್ತಿತ್ತು. ಮೊದಲೇ ಉನ್ನತವಾದ ಅವಳ ವಕ್ಷೋಜಗಳು ಅವಳು ಮಲಗಿಕೊಂಡ ರೀತಿಯಲ್ಲಿ ಮತ್ತಷ್ಟು ಉನ್ನತವಾಗಿ ಕಾಣಿಸುತ್ತಿದ್ದವು. ಒಂದು ಕಾಲನ್ನು ಮಡಚಿ ಮೇಲೆತ್ತಿದ್ದಳು.

ಇದುವರೆಗಿದ್ದ ಪರದೆಗಳಂತೆಯೇ ಮೊಘಲ್ ಗಾದಿಯ ಮೇಲೆ ಹರಡಿಕೊಂಡ ಮಖ್‌ಮಲ್ ದುಪ್ಪಟಿ ಕೂಡ ತಿಳಿ ಗುಲಾಬಿ ಬಣ್ಣದ್ದು. ಆ ಬಣ್ಣದೊಂದಿಗೆ ಬೆರೆಯುತ್ತಿದ್ದ ಮತ್ತೊಂದು ತೆಳ್ಳನೆಯ ವಸ್ತ್ರ ಅವಳ ಮೇಲೆ ಹರಡಿತ್ತು. ಆ ತೆಳ್ಳನೆಯ ತಿಳಿ ಗುಲಾಬಿ ವರ್ಣದ ವಸ್ತ್ರ ಅವಳ ಶರೀರವನ್ನು ಸಂಪೂರ್ಣವಾಗಿ ಮುಚ್ಚಿರಲಿಲ್ಲ. ಅದು ಇಲ್ಲದ ಸ್ಥಳದಲ್ಲೆಲ್ಲಾ ಆ ವಸ್ತ್ರದ ಬಣ್ಣದೊಂದಿಗೆ ಸ್ಪರ್ಧಿಸುತ್ತಿದ್ದ ಅವಳ ಶರೀರ ಕಾಂತಿ ಮತ್ತೇರಿಸುವಂತೆ ಬಹಿರ್ಗತಗೊಳ್ಳುತ್ತಿತ್ತು. ಆ ವಸ್ತ್ರ ನೆಲದ ಮೇಲೆ ತೂಗಾಡುತ್ತಿದ್ದ ಅವಳ ಕೇಶರಾಶಿಯೊಂದಿಗೆ ನೆಲದಲ್ಲಿ ಹರಡಿ ಅಲ್ಲಿಂದ ಸರ್ಪದಂತೆ ಮೇಲೆದ್ದು ಅವಳ ಬಲಭುಜದ ಮೇಲಿನಿಂದ ಹಿಮಾಲಯ ಪರ್ವತ ಶಿಖರವನ್ನು ನೆನಪಿಸುವಂತಿದ್ದ ಸ್ತನದ್ವಯದ ಮೇಲೆ ತೆವಳಿ ಸೊಂಟದವರೆಗೆ ಹರಡಿ ಎಡತೊಡೆಯ ಮೇಲಿನಿಂದ ಜಾರಿ ಹೋಗುತ್ತಾ ಅವಳಲ್ಲಿನ ಸೌಂದರ್ಯ ರಸಾಸ್ವಾದನೆ ಮಾಡಿ ಒಳಲಿ ಮತ್ತೆ ಗಾದಿಯ ಮೇಲಿನಿಂದ ಕೆಳಗೆ ಜಾರಿತ್ತು. ಶಂಖದಂತೆ ಉದ್ದವಾದ ಕತ್ತಿನ ಬಳಿಯಿಂದ ಅವಳ ಭುಜವೊಂದು ನಗ್ನವಾಗಿ ಕಾಣಿಸುತ್ತಿತ್ತು. ಮೇಲೆತ್ತಿದ್ದ ಕಾಲ ಮೇಲೆ ಎಂತಹುದೇ ಆಚ್ಛಾದನೆಯಿಲ್ಲದ್ದರಿಂದ ಗುಲಾಬಿ ವರ್ಣದ ಬಲತೊಡೆ ಕದಳೀ ವೃಕ್ಷಕಾಂಡದಂತೆ ಮನಮೋಹಕವಾಗಿ ಕಾಣಿಸುತ್ತಾ ಆವರ ಮನಸ್ಸನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿತ್ತು.

ಜರ್ಮನ್ ಅವಳ ಸೌಂದರ್ಯ ರಸಾಸ್ವಾದನೆಯಲ್ಲಿ ಮೈಮರೆತುಬಿಟ್ಟ.

ಅಮೆರಿಕನ್ ಏಜೆಂಟ್ ಮಾತ್ರ ಕ್ಷಣ-ಕ್ಷಣಕ್ಕೂ ಆ ಸೌಂದರ್ಯ ಪ್ರಭಾವದಿಂದ ಹೊರಬರಲು ಪ್ರಯತ್ನಿಸುತ್ತಿದ್ದ. ಏನಿದು ತಾನು ಹೀಗಾಗುತ್ತಿದ್ದೇನೆ! ತನಗೆ ಏನಾಗುತ್ತಿದೆ ? ವೃತ್ತಿಯಿಂದಾಗಿ ಅವನಿಗೆ ಎಷ್ಟೋ ಜನ ಸ್ತ್ರೀಯರೊಡನೆ ಪರಿಚಯವಿತ್ತು. ಸುಂದರ ಹೆಣ್ಣುಗಳ ವ್ಯಾಮೋಹದಲ್ಲಿ ಬೀಳದಿರುವಂತೆ ಅವನು ಪ್ರತ್ಯೇಕ ಶಿಕ್ಷಣ ಪಡೆದಿದ್ದ. ಅದು ಅವನ ವೃತ್ತಿಗೆ ತುಂಬಾ ಅಗತ್ಯ. ಯಾವ ಕೌಂಟರ್ ಏಜೆಂಟಾದರೂ ಸೌಂದರ್ಯದ ಬಲೆ ಬೀಸಿ ಅವನಿಂದ ರಹಸ್ಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬಹುದು. ಆದರೆ ಕೆಲವು ಸ್ತ್ರೀಯರೊಂದಿಗೆ ಪರಿಚಯವಿಟ್ಟುಕೊಳ್ಳುವುದೂ ಅವನ ವೃತ್ತಿಗೆ ಅಗತ್ಯ. ಮುಖ್ಯವಾಗಿ ಮಿಲಿಟರಿ ರಹಸ್ಯಗಳನ್ನು ತಿಳಿದುಕೊಳ್ಳಲು ಯಾವನಾದರೂ ಮೇಜರ್‌ನ ಹೆಂಡತಿಯನ್ನೋ ಕಮ್ಯಾಂಡರ್ ಜನರಲ್ ಇಟ್ಟು

ಕೊಂಡವಳನ್ನೋ, ಆಕರ್ಷಿಸಿ ಬುಟ್ಟಿಗೆ ಹಾಕಿಕೊಳ್ಳಬೇಕಾದ ಸಂದರ್ಭಗಳು ಅವನ ವೃತ್ತಿ ಜೀವನದಲ್ಲಿ ಸಾಕಷ್ಟಿದ್ದುವು. ಕೆಲವು ಸಲ ಆ ಪರಿಚಯಗಳು ಪರಿಚಯವಾಗಿಯೇ ಕೊನೆಗೊಳ್ಳುತ್ತಿದ್ದವು.ಅದಕ್ಕಿಂತಲೂ ಮುಂದುವರಿಯುವ ಆಗತ್ಯ ಉಂಟಾಗುತ್ತಿರಲಿಲ್ಲ. ಕೆಲವು ಸಲ ಆ ಪರಿಚಯಗಳು ಮಲಗುವ ಕೋಣೆಯವರೆಗೂ ಕರೆದೊಯ್ಯುತ್ತಿದ್ದರೂ ಅಂತಹ ಸಂದರ್ಭಗಳಲ್ಲೂ ಅವನು ವಿವೇಕವನ್ನು ಕಳೆದುಕೊಂಡಿರಲಿಲ್ಲ. ಅವನ ಮೆದುಳು ಆಕರ್ಷಣೆಗೆ ಒಳಗಾಗದೆ ನಿರ್ವಿಕಾರವಾಗಿ ಕೆಲಸ ಮಾಡುತ್ತಲೇ ಇತ್ತು. ಆದರೆ ಈಗ ಇದೇನು ತನಗೆ ಹೀಗಾಗುತ್ತಿದೆ ? ಯಾರೀ ಯುವತಿ! ಕೊಂಚ ಅರ್ಧ ನಗ್ನವಾಗಿ ಕಾಣಿಸುತ್ತಲೇ ತಾನು ಏಕೆ ಹೀಗೆ ಅವಳ ಕಡೆ ತೀವ್ರವಾಗಿ ಆಕರ್ಷಿತನಾಗುತ್ತಿದ್ದೇನೆ! ತನ್ನ ಶಿಕ್ಷಣವೆಲ್ಲಾ ಏನಾಯಿತು ? ತಾನು ಸೋಲಕೂಡದು, ಎಂದು ತನ್ನಲ್ಲೇ ಅಂದುಕೊಂಡ. ಅವಳ ಆಕರ್ಷಣೆಗೆ ಸೋಲುವುದರಿಂದ ಅವನಿಗೇನೂ ನಷ್ಟವಿಲ್ಲ. ಆದರೂ ಸೋಲಕೂಡದು. ಸೋತರೆ ತನ್ನ ಅನುಭವಕ್ಕೆ ಅವಮಾನ. ಅವನು ತನ್ನ ಕುಷನ್ ಚೇರ್‌ನಲ್ಲಿ ಇಬ್ಬಂದಿಯಿಂದ ಸರಿದಾಡಿದ.

ನೋಡುತ್ತಿರುವಂತೆಯೇ ಅವಳು ಗಾದಿಯ ಮೇಲೆ ನಿಧಾನವಾಗಿ ಎದ್ದು ಕುಳಿತುಕೊಂಡಳು. ನೆಲದ ಮೇಲೆ ಹರಡಿದ್ದ ಅವಳ ಶಿರೋಜಗಳು ಅವಳೊಂದಿಗೇ ಮೇಲೆದ್ದು ಅವಳ ಭುಜದ ಸುತ್ತಲೂ ವ್ಯಾಪಿಸಿದವು.ಅವಳು ಎರಡು ಕೈಗಳನ್ನೂ ಮೇಲೆತ್ತಿ ಮತ್ತಿನಿಂದ ಮೈಮುರಿದಳು. ಅಷ್ಟೇ! ಒಂದೇ ಸಲಕ್ಕೆ ಅವರ ಕಣ್ಣುಗಳು ಕೋರೈಸಿದವು. ಅವಳು ಆ ರೀತಿ ಕೈಗಳನ್ನು ಮೇಲೆತ್ತಿ ಮೈ-ಮುರಿದದ್ದರಿಂದ ಅವಳ ಶರೀರವನ್ನು ಮುಚ್ಚಿದ್ದ ಗುಲಾಬಿ ವಸ್ತ್ರ ವಕ್ಷಸ್ಥಲದ ಮೇಲಿನಿಂದ ಅರ್ಧ ಪಕ್ಕಕ್ಕೆ ಸರಿಯಿತು. ಮರುಕ್ಷಣ ವರ್ತುಲಾಕಾರದಲ್ಲಿ ಪೂರ್ಣ ಕುಂಭದಂತಿದ್ದ ಅವಳ ಎಡಸ್ತನ ಹೊರಬಿದ್ದಿತು. ನೋಡುತ್ತಿರುವವರ ನಾಲಿಗೆಗಳು ಒಣಗಿ ಅಂಗಳಕ್ಕಂಟಿಕೊಂಡವು. ಅವಳು ಅಷ್ಟಕ್ಕೇ ನಿಲ್ಲಿಸಲಿಲ್ಲ. ತಕ್ಷಣವೇ ಆಲಸಿಕೆಯಿಂದ ಮತ್ತೊಂದು ಸಲ ಮೈ ಮುರಿದುಕೊಂಡಳು. ಈ ಸಲ ಗುಲಾಬಿ ವಸ್ತ್ರ ಪೂರ್ತಿಯಾಗಿ ಅವಳ ಭುಜದ ಮೇಲಿನಿಂದ ಜಾರಿಬಿತ್ತು. ಅವರು ಸ್ತಂಭೀಭೂತವಾಗಿ ನೋಡುತ್ತಿದ್ದರು. ಜೆಟ್ ವಿಮಾನ ಪೆಸಿಫಿಕ್ ಮಹಾಸಮುದ್ರದ ಮೇಲಿನಿಂದ ಏಶಿಯಾ ಖಂಡದ ಕಡೆ ಹಾರಿ ಹೋಗುತ್ತಿತ್ತು. ಆಕಾಶಹರ್ಮ್ಯದಲ್ಲಿ ಸೌಂದರ್ಯ ದೌತಣ ಮಾಡಿದ ಅದ್ಭುತ ಆತಿಥ್ಯ. ಕ್ಷಣ-ಕ್ಷಣಕ್ಕೂ ಅವರ ಕಣ್ಣುಗಳು ದೊಡ್ಡದಾಗುತ್ತಿದ್ದುವು. ಅವಳ ಸೌಂದರ್ಯವನ್ನು ತುಂಬಿಕೊಳ್ಳಲು ಅವರ ಎರಡು ಕಣ್ಣುಗಳೂ ಸಾಲುತ್ತಿರಲಿಲ್ಲ.

ಅವಳು ಮೈ ಮುರಿದು ನಿಧಾನವಾಗಿ ಎದ್ದು ನಿಂತು ಒಂದು ಹೆಜ್ಜೆ

ಮುಂದಿಟ್ಟಳು. ಭಾರವಾದ ಅವಳ ವಕ್ಷಸಂಪದ ಮೇಲೂ ಕೆಳಗೂ ತೂಗಾಡಿತು. ಆ ಚಲನೆಗೆ ಅವರಿಗೆ ಮತಿಭ್ರಮಣೆಯಾದಂತಾಯಿತು. ಅವಳ ಸ್ತನಾಗ್ರಗಳು ನೆಟ್ಟಗೆ ನಿಗುರಿ ಅವರ ಕಡೆ ಆಹ್ವಾನಪೂರ್ವಕವಾಗಿ ನೋಡುತ್ತಿದ್ದುವು. ಅವಳು ಮತ್ತೊಂದು ಹೆಜ್ಜೆ ಮುಂದಿಟ್ಟಳು. ಗುಲಾಬಿ ವಸ್ತ್ರ ಇನ್ನೂ ಅವಳ ಸೊಂಟದಿಂದ ಮೊಣಕಾಲಿನವರೆಗೂ ಅಂಟಿಕೊಂಡಿತ್ತು. ಅವಳು ಒಂದೊಂದೇ ಹೆಜ್ಜೆ ಮುಂದಿಡುತ್ತಿರುವಂತೆ ಆ ಗುಲಾಬಿ ವಸ್ತ್ರ ಒಂದೊಂದೇ ಅಂಗುಲ ಕೆಳಕ್ಕೆ ಜಾರುತ್ತಿತ್ತು. ಅವಳು ನಿರ್ಲಕ್ಷ್ಯವಾಗಿ, ವಯ್ಯಾರವಾಗಿ, ಮಂದಗಮನೆಯಾಗಿ ಹಂಸದಂತೆ ನಡೆಯುತ್ತಾ ಬಂದಳು. ಅವಳ ಹೆಜ್ಜೆಗೆ ಅನುಗುಣವಾಗಿ ಅವಳ ಸ್ತನಗಳು ಲಯಬದ್ಧವಾಗಿ ತೂಗಾಡುತ್ತಿದ್ದುವು. ಸರಿಯಾಗಿ ಅವಳು ಅವರ ಎದುರಿಗೆ ಬರುವಷ್ಟರಲ್ಲಿ ಸೊಂಟಕ್ಕೆ ಸುತ್ತಿಕೊಂಡಿದ್ದ ಆ ಕೊಂಚ ಮಾತ್ರದ ಆಚ್ಛಾದನೆಯೂ ಪೂರ್ತಿಯಾಗಿ ಜಾರಿ ಕೆಳಗೆ ಬಿತ್ತು.

ಅವರ ಕಣ್ಣುಗಳು ಜಿಲ್ ಎಂದುವು. ಅವಳ ನಗ್ನ ಸೌಂದರ್ಯ ಆ ವಿಮಾನದ ಒಳಭಾಗವೆಲ್ಲವನ್ನೂ ದೇದೀಪ್ಯಮಾನವಾಗಿ ಪ್ರಕಾಶಿತಗೊಳಿಸುತ್ತಿರುವಂತೆ ಭಾಸವಾಯಿತು. ಅವಳು ಒಂದು ಕ್ಷಣ ಅವರ ಮುಂದೆ ನಗ್ನವಾಗಿ ನಿಂತು ಮುಗುಳ್ನಗೆ ಬೀರಿದಳು. ಅನಂತರ ತನಗೆ ಅವರ ಅಗತ್ಯವಿಲ್ಲವೆನ್ನುವಂತೆ ನಿರ್ಲಕ್ಷ್ಯವಾಗಿ ಅವರನ್ನು ದಾಟಿ ಮುಂದಕ್ಕೆ ನಡೆಯುತ್ತಾ ಹೋದಳು. ಅಯಸ್ಕಾಂತವನ್ನು ನೋಡಿ ಆಕರ್ಷಣೆಗೆ ಗುರಿಯಾದ ಕಬ್ಬಿಣದಂತೆ ಅವರ ಕಣ್ಣುಗಳು ಅವಳನ್ನೇ ಅನುಸರಿಸಿದವು. ಹಿಂದಿನಿಂದ ನೋಡುತ್ತಿದ್ದರೆ ಅವಳ ಸಣ್ಣ ಸೊಂಟ, ಲಯಬದ್ಧವಾಗಿ ಚಲಿಸುತ್ತಿತ್ತು. ಅವಳ ದುಂಡನೆಯ ತುಂಬು ನಿತಂಬಗಳು ಲಯಕ್ಕನುಗುಣವಾಗಿ ನಾಟ್ಯ ಮಾಡುತ್ತಿರುವಂತೆ ಚಲಿಸುತ್ತಿದ್ದವು.

ಜೇಕೇ ರಿಮೋಟ್ ಕಂಟ್ರೋಲರ್‌ನಲ್ಲಿದ ಮತ್ತೊಂದು ಬಟನ್ ಒತ್ತಿದ. ತಕ್ಷಣವೇ ಅವರ ಎದುರಿಗಿದ್ದ ಮತ್ತೆ ಕೆಲವು ಗುಲಾಬಿ ಬಣ್ಣದ ಪರದೆಗಳು ತಮ್ಮಷ್ಟಕ್ಕೆ ತಾವೇ ಪಕ್ಕಕ್ಕೆ ಸರಿದು ಅವಳಿಗೆ ದಾರಿ ಮಾಡಿಕೊಟ್ಟವು.

ಪರದೆಗಳು ತೊಲಗಿದ ತಕ್ಷಣ ವಿಮಾನದ ಮೇಲ್ಛಾವಣಿಯಿಂದ ವರ್ತುಲಾಕಾರದಲ್ಲಿ ಗುಡಾರದಂತಹುದು ಫ್ಲೋರಿಂಗ್ ಮೇಲೆ ಜಾರಿತು. ಅದರಲ್ಲಿ ಏನಿದೆಯೋ ನೋಡಬೇಕೆಂದು ಅವರು ಕಣ್ಣು ಹಿಗ್ಗಲಿಸಿ ನೋಡುವುದರೊಳಗೆ ಅದು ತನ್ನಷ್ಟಕ್ಕೆ ತಾನೇ ಮೇಲೆದ್ದಿತು.ಅದರಲ್ಲಿ ಕಾಣಿಸಿದ ದೃಶ್ಯ ಅವರ ಊಹೆಗೆ ನಿಲುಕದಂತಹುದು.

ಅರಳಿದ ಕಮಲದ ಆಕಾರದಲ್ಲಿ ಮಹಾದ್ಭುತವಾದ ಕೆತ್ತನೆಯುಳ್ಳ

ಕಾಣಿಸುತ್ತಿರುವ ಒಂದು ದೊಡ್ಡ ಗಾಜಿನ ತೊಟ್ಟಿ ಅವರ ದೃಷ್ಟಿಯನ್ನು ಆಕರ್ಷಿಸಿತು. ಅವಳು ಹಾಗೆಯೇ ವಯ್ಯಾರದಿಂದ ನಡೆಯುತ್ತಾ ಹೋಗಿ ಆ ಗಾಜಿನ ತೊಟ್ಟಿಯಲ್ಲಿ ಕಾಲಿಟ್ಟು ಒಂದು ಸಲ ಹಿಂದಕ್ಕೆ ತಿರುಗಿ ಅವರ ಕಡೆ ಮೋಹಕವಾಗಿ ನೋಡಿದಳು. ಅನಂತರ ತಲೆಯಾಡಿಸಿ ಎರಡನೇ ಕಾಲನ್ನು ಗಾಜಿನ ತೊಟ್ಟಿಯಲ್ಲಿಟ್ಟು, ಅದರ ನಡುವೆ ವಯ್ಯಾರವಾಗಿ ನಿಂತು ಎರಡೂ ಕೈಗಳನ್ನು ಕುತ್ತಿಗೆಯ ಹಿಂಭಾಗಕ್ಕೆ ಸೇರಿಸಿ, ಕೂದಲುಗಳನ್ನು ಸರಿಪಡಿಸಿ ಕೊಂಡಳು. ಆ ಭಂಗಿಯಲ್ಲಿ ಅವಳು ಸ್ವರ್ಗಲೋಕದಿಂದ ಆಗಷ್ಟೇ ಇಳಿದು ಬಂದ ಅಪ್ಸರೆಯನ್ನೂ ಮೀರಿಸುವಂತಿದ್ದಳು. ಅವಳ ಉದ್ದನೆಯ ಕೂದಲು ಸೊಂಟದವರೆಗೆ ವ್ಯಾಪಿಸುವಂತೆ ಕತ್ತರಿಸಲಾಗಿತ್ತು. ಇಲ್ಲದಿದ್ದರೆ ಆ ಕೂದಲು ಮನ್ಮಥನ ರಥಚಕ್ರಗಳಂತಿದ್ದ ದುಂಡು ನಿತಂಬಗಳನ್ನು ಪೂರ್ತಿಯಾಗಿ ಮುಚ್ಚಿ ರುತ್ತಿತ್ತು. ಅವಳು ಆ ರೀತಿ ಕೂದಲನ್ನು ಸರಿಪಡಿಸಿಕೊಳ್ಳುತ್ತಲೇ ನಿಧಾನ ವಾಗಿ ಮೊಣಕಾಲುಗಳ ಮೇಲೆ ಗಾಜಿನ ತೊಟ್ಟಿಯಲ್ಲಿ ಕುಳಿತುಕೊಂಡಳು. ನಂತರ ಕೂದಲಿನಿಂದ ಕೈತೆಗೆದು ಒಂದು ಬಾರಿ ತಲೆ ಅಲ್ಲಾಡಿಸಿದಳು. ಆ ಚರ್ಯೆಗೆ ಅವಳ ಕೂದಲುಗಳು ಮೇಘಗಳಂತೆ ಮೇಲೆದ್ದವು. ಅವಳಲ್ಲಿನ ಒಂದೊಂದು ಅಣುವೂ ಒಂದೊಂದು ಮಹಾಕಾವ್ಯ! ಅವಳ ಒಂದೊಂದು ಚಲನೆಯೂ ಒಂದೊಂದು ಮೋಹಕ ಸಂಕೇತ!

ಜೇಕೀ ಮತ್ತೊಂದು ಬಟನ್ ಒತ್ತಿದ. ತಕ್ಷಣವೇ ಆ ಗಾಜಿನ ತೊಟ್ಟಿ ಯಲ್ಲಿ ಕ್ರಮೇಣ ನೀರು ತುಂಬತೊಡಗಿತು. ಅದರಲ್ಲಿ ನೀರು ಹೇಗೆ ಬರುತ್ತಿ ದೆಯೋ ಅವರಿಗೆ ಅರ್ಥವಾಗಲಿಲ್ಲ. ಗಾಜಿನ ತೊಟ್ಟಿಯ ಅಡಿಯಲ್ಲಿ ತಮಗೆ ಕಾಣಿಸದ ರಂಧ್ರಗಳಿರಬೇಕು, ಆ ರಂಧ್ರಗಳ ಮೂಲಕ ನೀರು ಗಾಜಿನ ತೊಟ್ಟಿ ಯೊಳಕ್ಕೆ ಬರುತ್ತಿರಬೇಕು. ನೋಡುತ್ತಿರುವಂತೆಯೇ ಗಾಜಿನ ತೊಟ್ಟಿಯಲ್ಲಿ ನೀರು ಅವಳ ವಕ್ಷೋಜದವರೆಗೆ ಬಂದು ನಿಂತಿತು. ಅವಳು ಜಲಕನ್ಯೆಯಂತೆ, ಈಜುವವಳಂತೆ ಎರಡೂ ಕೈಗಳಿಂದ ಆ ನೀರನ್ನು ವೇಗವಾಗಿ ಕುಲುಕಿಸಿದಳು. ಕ್ಷಣಗಳಲ್ಲಿ ಆ ಗಾಜಿನ ತೊಟ್ಟಿಯಲ್ಲಿ ನೊರೆ ತೇಲತೊಡಗಿತು. ಅಂದರೆ ಆ ನೀರಿ ನಲ್ಲಿ ಮುಂಚೆಯೇ ಯಾವುದೋ ಲಿಕ್ವಿಡ್ ಸೋಪ್ ಬೆರೆಸಿರಬೇಕು. ಅವಳು ಕೈ ಆಡಿಸಿದೊಡನೆಯೇ ಅದರಲ್ಲಿನ ಲಿಕ್ವಿಡ್ ಸೋಪ್ ಪೂರ್ತಿಯಾಗಿ ಕರಗಿ ನೊರೆ ತೇಲುತ್ತಿರಬೇಕು. ಆ ನೀರಿನಲ್ಲಿ ಯಾವ ಸುಗಂಧ ಬೆರೆಸಿತ್ತೋ, ಏನೋ ವಿಮಾನದ ಒಳಭಾಗವೆಲ್ಲಾ ಮತ್ತೇರಿಸುವ ಪರಿಮಳದಿಂದ ತುಂಬಿಹೋಯಿತು. ಗಾಜಿನ ತೊಟ್ಟಿ ನೊರೆಯಿಂದ ತುಂಬಿದೊಡನೆಯೇ ಅವಳು ಮೈ ಉಜ್ಜಿಕೊಳ್ಳ ತೊಡಗಿದಳು. ಕೊಂಚ ಹೊತ್ತು ಕುಳಿತುಕೊಂಡು, ಕೊಂಚ ಹೊತ್ತು

ತೊಟ್ಟಿಯಲ್ಲಿ ಎದ್ದುನಿಂತು ವಿಧವಿಧವಾದ ಭಂಗಿಗಳಲ್ಲಿ ಅವಳು ಸ್ನಾನ ಮಾಡು ತ್ತಿದ್ದಳು. ಅಂತಹ ಉದ್ರಿಕ್ತ ದೃಶ್ಯವನ್ನು ಅವರು ತಮ್ಮ ಜೀವನದಲ್ಲಿ ಎಂದೂ ನೋಡಿರಲಿಲ್ಲ. ಜೇಕೇ ಬಟನ್ ಒತ್ತಿದೊಡನೆ ಗಾಜಿನ ತೊಟ್ಟಿಯಲ್ಲಿನ ನೀರು ಇಂಗಿಹೋಗಿ ಅದರ ಬದಲಾಗಿ ಹೊಸದಾಗಿ ಪರಿಶುಭ್ರವಾದ ನೀರು ತುಂಬಿ ಕೊಂಡಿತು. ಈ ಬಾರಿ ಆ ನೀರಿನಲ್ಲಿ ನೊರೆಯೇಳಲಿಲ್ಲ. ಆ ನೀರಿನಲ್ಲಿ ಅವಳು ಸ್ನಾನ ಮಾಡುವುದನ್ನು ಪೂರ್ಣ ಮಾಡಿ, ತೊಟ್ಟಿಯಿಂದ ಹೊರಬಂದಳು. ನಿಧಾನವಾಗಿ ಹೆಜ್ಜೆಯ ಮೇಲೆ ಹೆಜ್ಜೆಯಿಡುತ್ತಾ ಮಂದಗಮನದಿಂದ ಅವರ ಕಡೆ ಬರತೊಡಗಿದಳು.

ನೀರಿನ ಬಿಂದುಗಳು ಮುತ್ತಿನ ಹನಿಗಳಂತೆ ಅವಳ ಶರೀರದ ಮೇಲಿನಿಂದ ಜಾರಿ ಹೋಗುತ್ತಿದ್ದವು. ಸಂಪೂರ್ಣವಾದ ಅವಳ ನಗ್ನ ಸೌಂದರ್ಯದಲ್ಲಿ ಹುಡುಕಿ ನೋಡಬೇಕೆಂದರೆ ರವೆಯಷ್ಟಾದರೂ ಕೊಂಕಿರಲಿಲ್ಲ. ಅವಳ ಶರೀರದ ಮೇಲಿನಿಂದ ಜಾರಿ ಬೀಳುತ್ತಿದ್ದ ನೀರಿನ ಬಿಂದುಗಳಿಂದ ತಿವಾಸಿ ಒದ್ದೆಯಾಗಿ ಪುಳಕಗೊಳ್ಳುತ್ತಿತ್ತು. ಅವಳು ಅವರ ಮುಂದೆಯೇ ನಡೆಯುತ್ತಾ ಹೋಗಿ ಅದಕ್ಕೆ ಮುಂಚೆ ತಾನು ತಿವಾಸಿಯ ಮೇಲೆ ಬಿಟ್ಟ ಗುಲಾಬಿ ವಸ್ತ್ರವನ್ನು ಕೈಗೆತ್ತಿಕೊಂಡಳು. ಅವಳನ್ನು ನೋಡುತ್ತಿದ್ದರೆ ಇಂದ್ರಧನುಸ್ಸು ಬಾಗು ತ್ತಿದೆಯೇನೋ ಎಂದು ಭಾಸವಾಗುತ್ತಿತ್ತು. ಗುಲಾಬಿ ವಸ್ತ್ರದೊಂದಿಗೆ ಅವಳು ಯುವರಾಣಿಯಂತೆ ನಡೆಯುತ್ತಾ ಬಂದು ಸರಿಯಾಗಿ ಸಿ.ಐ.ಎ. ಏಜೆಂಟ್ ಮುಂದೆ ನಿಂತು ಮತ್ತೇರಿಸುವಂತೆ ನಕ್ಕಳು. ಹಾಗೆ ನಗುತ್ತಲೇ ಗುಲಾಬಿ ವಸ್ತ್ರವನ್ನು ಅವನ ಕಡೆ ಎಸೆದಳು.

"ನನ್ನ ಮೈ ಒರೆಸೋದಿಲ್ವಾ........ ಪ್ಲೀಸ್!"........

ಆ ಕಂಠಸ್ವರ ಕಿವಿಗೆ ಸೋಂಕಿದೊಡನೆಯೇ ಅವನ ಹೃದಯ ಹಕ್ಕಿಯಂತೆ ತೇಲಿತು. ಅವನು ಸೋತುಹೋದ. ಅವಳ ಸಮ್ಮೋಹನ ಶಕ್ತಿಯನ್ನು ಜಯಿಸ ಬೇಕೆಂಬ ಅವನ ಪ್ರಯತ್ನ ಪೂರ್ಣವಾಗಿ ವ್ಯರ್ಥವಾಯಿತು. ಅವಳ ಸೌಂದ ರ್ಯಕ್ಕೆ ದಾಸನಾಗಿಬಿಟ್ಟ.

"ಪ್ಲೀಸ್........ ನನ್ನ ಮೈ ಒರೆಸಿ!" ಮತ್ತೊಂದು ಸಲ ಮಧುರವಾಗಿ, ಜೇನಿಗಿಂತಲೂ ಮಧುರವಾಗಿ ಕೇಳಿದಳು. ಅವಳ ಶರೀರ ಪುಳಕಗೊಂಡಿತು. ಅವನು ತಾನಿದ್ದ ಪರಿಸರವನ್ನು ಪೂರ್ತಿಯಾಗಿ ಮರೆತ. ತಾನು ಇನ್ನೂ ಕೆಲವು ವ್ಯಕ್ತಿಗಳ ನಡುವೆ ಕುಳಿತಿರುವೆನೆಂಬ ವಿಷಯ ಅವನಿಗೆ ಕೊಂಚವೂ ನೆನಪಾಗ ಲಿಲ್ಲ. ಮೈಮರೆತು ಅವಳ ಕೈ ಹಿಡಿದು ತನ್ನೆಡೆಗೆ ಎಳೆದುಕೊಂಡ. ಅವಳು ಅಡ್ಡಿ ಮಾಡಲಿಲ್ಲ. ಎಂತಹುದೇ ಸಂಕೋಚವಿಲ್ಲದೆ ಅವನ ಮಡಿಲಲ್ಲಿ ಕುಳಿತು

ಕೊಂಡಳು. ಅವನು ಗುಲಾಬಿ ವಸ್ತ್ರದಿಂದ ಅವಳ ಮೈ ಒರೆಸುತ್ತಿದ್ದ. ಅವನ ಕೈಗಳು ಅವಳ ಶರೀರದ ಮೇಲೆ ಎಲ್ಲೆಲ್ಲೋ ಹರಿದಾಡತೊಡಗಿದ್ದವು. ಏನೇನೋ ತಡವುತ್ತಿದ್ದವು. ಮೋಹವನ್ನು ತಡೆದುಕೊಳ್ಳಲಾಗದೆ ಅವಳ ಮೈ ಒರೆಸುತ್ತಿರುವಂತೆಯೇ ಕೆನ್ನೆಗೆ ಮುತ್ತಿಟ್ಟ. ಅವಳು ನಗುತ್ತಾ ತಲೆ ತಿರುಗಿಸಿ ಜರ್ಮನ್‌ನ ಕಡೆ ತುಂಟತನದಿಂದ ನೋಡಿದಳು.

ಅವನು ಸಿ.ಐ.ಎ. ಏಜೆಂಟ್‌ನ ಕಡೆ ಈರ್ಷ್ಯೆಯಿಂದ ನೋಡುತ್ತಿದ್ದ. ಅವನು ಮೈ ಒರೆಸುವುದು ಪೂರ್ತಿಯಾದೊಡನೆ ಜರ್ಮನ್ ಕಡೆ ಹೋಗಲೆಂದು ಎದ್ದಳು. ಸಿ.ಐ.ಎ. ಏಜೆಂಟ್ ಕಳವಳದಿಂದ ಅವಳ ಕೈಹಿಡಿದು ಎಳೆಯಲು ಹೋದ. ಅವಳು ಮೃದುವಾಗಿ ಕೈಬಿಡಿಸಿಕೊಂಡು ಮುಂದೆ ಸಾಗಿದಳು. ಅವಳು ತನ್ನ ಕಡೆ ಬಂದೊಡನೆಯೇ ಉದ್ವೇಗದಿಂದ ಉಬ್ಬಿ ತಬ್ಬಿಬ್ಬಾಗುತ್ತಿದ್ದ ಜರ್ಮನ್ ಎರಡೂ ಕೈ ಚಾಚಿ ಅವಳನ್ನು ಹತ್ತಿರ ಎಳೆದುಕೊಳ್ಳಲು ಹೋದ. ಆದರೆ ಅವನು ಊಹಿಸಿದಂತೆ ಅವಳು ಅವನ ಮಡಿಲಲ್ಲಿ ಬೀಳಲಿಲ್ಲ. ಮೃದುವಾಗಿ ಅವನನ್ನು ನಿವಾರಿಸುತ್ತಾ ಕೆನ್ನೆಯ ಮೇಲೆ ಮುಟ್ಟಿಯೂ ಮುಟ್ಟದಂತೆ ಮುತ್ತಿಟ್ಟಳು. ಅವನ ಶರೀರವೆಲ್ಲಾ ಪುಳಕಗೊಂಡಿತು. ಅವಳು ಅಲ್ಲಿ ನಿಲ್ಲದೆ ಮುನೀಂದ್ರ ಸ್ವಾಮಿಯ ಕಡೆ ನಡೆದಳು.

ಜೇಕೇ ಮುಖ ಹಠಾತ್ತನೆ ಪೂರ್ಪಾಟಾಯಿತು. ಕಣ್ಣರಳಿಸಿ ಆಶ್ಚರ್ಯದಿಂದ ನೋಡಿದ. ಅವಳು ಕಳೆಯಬೇಕಾದುದು ಮುನೀಂದ್ರ ಸ್ವಾಮಿಯೊಂದಿಗಲ್ಲ. ಅವಳನ್ನು ಆ ಇಬ್ಬರು ಪಾಶ್ಚಾತ್ಯರಿಗೋಸ್ಕರವೇ ನಿಯಮಿಸಿದ್ದ. ಈಗ ಇದ್ದಕ್ಕಿದ್ದಂತೆ ಹೀಗೆ ವರ್ತಿಸುತ್ತಿದ್ದಾಳಲ್ಲ? ಎಂದುಕೊಂಡ. ಮುನೀಂದ್ರ ಸ್ವಾಮಿ ಕೂಡ ಅವಳನ್ನು ಆಶ್ಚರ್ಯದಿಂದ ನೋಡುತ್ತಿದ್ದ. ಅವಳು ಅವನು ಅರಿಯದವಳೇನಲ್ಲ.

ಅವಳು ನೇರವಾಗಿ ಹೋಗಿ ಅವನ ಮಡಿಲಲ್ಲಿ ಕುಳಿತುಕೊಂಡಳು. ಮುನೀಂದ್ರ ಸ್ವಾಮಿ ಏನೋ ಹೇಳಲು ಹೋದ. ಅವಳು ಅವನನ್ನು ಮಾತಾಡಲು ಬಿಡಲಿಲ್ಲ. ತಲೆ ಮುಂದೆ ಬಾಗಿಸಿ ತುಟಿಗಳ ಮೇಲೆ ಗಾಢವಾಗಿ ಮುತ್ತಿಟ್ಟಳು. ಮುನೀಂದ್ರ ಸ್ವಾಮಿ ವಿವಶನಾದ. ಅವಳ ವಿಚಿತ್ರ ಚೇಷ್ಟೆಗಳು ಅವನಿಗೆ ಕೊಂಚವೂ ಅರ್ಥವಾಗಲಿಲ್ಲ. ಆದರೂ ವಿವಶನಾದ. ಅವನ ಎರಡು ಕೈಗಳೂ ನಗ್ನವಾಗಿದ್ದ ಅವಳ ಬೆನ್ನಿನ ಮೇಲೆ ಸರ್ಪಗಳಂತೆ ಬಳಸಿದವು. ಅವಳು ಅವನ ಮೇಲೆ ಮೋಹಾವೇಶವುಳ್ಳವಳಂತೆ ವರ್ತಿಸುತ್ತಾ ಕ್ಷಣ-ಕ್ಷಣಕ್ಕೂ ಅವನನ್ನು ಉದ್ರೇಕಗೊಳಿಸುತ್ತಿದ್ದಳು. ಹಾಗೆ ಮಾಡುತ್ತಲೇ ಅವಳು ತನ್ನ ಅಂಗೈಯಲ್ಲಿ ರಹಸ್ಯವಾಗಿ ಅಡಗಿಸಿಕೊಂಡ ಯಾವುದೋ ವಸ್ತುವನ್ನು ಅವನ

ಕಾಷಾಯ ವರ್ಣದ ಜುಬ್ಬಾದ ಜೇಬಿನಲ್ಲಿ ಹಾಕಿದ್ದನ್ನು ಯಾರೂ ಗಮನಿಸಲಿಲ್ಲ. ಆ ನಂತರ ಅವಳು ಎರಡೂ ಕೈಗಳಿಂದ ಅವನ ಮುಖವನ್ನು ಹತ್ತಿರ ಎಳೆದುಕೊಂಡು ಮುತ್ತಿನ ಮಳೆ ಸುರಿಸುತ್ತಾ ತುಟಿಗಳನ್ನು ಮೆಲ್ಲಗೆ ಅವನ ಕಿವಿಯ ಹತ್ತಿರ ಒಯ್ದಳು.ಅವನ ಕಿವಿಗಳ ಮೇಲೆ ಮುತ್ತಿಡುತ್ತಿರುವವಳಂತೆ ನಟಿಸುತ್ತಾ ಅವನೊಂದಿಗೆ ಪಿಸುಮಾತಿನಲ್ಲಿ ಏನೋ ಹೇಳತೊಡಗಿದಳು.

ಅವಳು ಗುಸುಗುಸು ಹೇಳಿದ್ದನ್ನು ಕೇಳುತ್ತಿದ್ದ ಮುನೀಂದ್ರಸ್ವಾಮಿಯ ಕಣ್ಣುಗಳು ಹಠಾತ್ತನೆ ಸಂಕುಚಿತಗೊಂಡವು. ಅವನ ಹುಬ್ಬುಗಳು ಗಂಟಿಕ್ಕಿದವು. ಕ್ರಮೇಣ ಅವನ ಮುಖದಲ್ಲಿ ಆಶ್ಚರ್ಯ ಹರಡಿಕೊಳ್ಳತೊಡಗಿತು. ತಾನು ಹೇಳಬೇಕಾದುದನ್ನು ಅವನ ಕಿವಿಯಲ್ಲಿ ರಹಸ್ಯವಾಗಿ ಹೇಳಿಬಿಟ್ಟು ಅವಳು ಮುಗುಳ್ನಗುತ್ತಾ ಮೇಲೆದ್ದು ನಿಂತಳು. ಮುನೀಂದ್ರ ಸ್ವಾಮಿ ಆಶ್ಚರ್ಯದಿಂದ ತನ್ನ ಜೇಬಿನಲ್ಲಿ ಕೈ ಇಟ್ಟ. ಕೈಗೆ ಸಿಕ್ಕಿದ ವಸ್ತುವನ್ನು ಹಿಡಿದು ಹೊರಗೆ ತೆಗೆದ. ನೋಡುವುದಕ್ಕೆ ಅದು ಒಂದು ಐಡೆಂಟಿಫಿಕೇಶನ್ ಕಾರ್ಡ್. ಮುನೀಂದ್ರಸ್ವಾಮಿ ಆ ಐಡೆಂಟಿಫಿಕೇಶನ್ ಕಾರ್ಡ್ ತೆರೆದು ನೋಡಿದ.ತಕ್ಷಣವೇ ಷಾಕ್ ಹೊಡೆಸಿಕೊಂಡವನಂತೆ ಬೆಚ್ಚಿಬಿದ್ದ. ಕ್ಷಣಗಳಲ್ಲಿ ಅವನ ಕಣ್ಣುಗಳು ಕ್ರೋಧದಿಂದ ಕೆಂಪೇರಿದವು. ತಟಕ್ಕನೆ ತಲೆ ಎತ್ತಿ ಸಿ.ಐ.ಎ. ಏಜೆಂಟ್‌ನ ಕಡೆ ಕಿಡಿಕಾರುತ್ತಾ ನೋಡಿದ. ಆವೇಶದಿಂದ ಅವನ ತುಟಿಗಳು ವಿಕೃತ ರೀತಿಯಲ್ಲಿ ವಕ್ರವಾದವು. “ಯೂ ಚೀಟ್!” ಎಂದು ಕೂಗಿದ. ಮರುಕ್ಷಣ ಅವನ ಕೈಯಲ್ಲಿ ರಿವಾಲ್ವರ್ ಥಳಕ್ಕನೆ ಮಿಂಚಿತು ಅಕಸ್ಮಾತ್ತಾಗಿ ಆ ಕೋಣೆಯಲ್ಲಿ ಅಲ್ಲಿಯ ತನಕ ವ್ಯಾಪಿಸಿದ್ದ ನಿಶೆ ಕ್ರಮೇಣ ಇಳಿದು ಹೋಯಿತು. ಅದರ ಸ್ಥಾನದಲ್ಲಿ ಆತಂಕ ಕಾಣಿಸಿಕೊಂಡಿತು .ಮುನೀಂದ್ರಸ್ವಾಮಿ ರಿವಾಲ್ವರ್‌ನ ಸೇಫ್ಟಿ ಕ್ಯಾಚ್ ಕ್ಲಿಕ್ ಎನಿಸುತ್ತಾ ರಿಲೀಜ್ ಮಾಡಿದ. ಪ್ರತಿಯೊಬ್ಬರೂ ಅವನ ಕಡೆ ಆಶ್ಚರ್ಯದಿಂದ ನೋಡಿದರು. ಅವನ ಪಕ್ಕದಲ್ಲಿಯೇ ನಗ್ನವಾಗಿ ನಿಂತುಕೊಂಡು ವಿಲಾಸವಾಗಿ ಒಂದು ಕೈಯನ್ನು ಸೊಂಟದ ಮೇಲಿಟ್ಟುಕೊಂಡು ಮುಗುಳ್ನಗೆ ಬೀರುತ್ತಿದ್ದ ಅವಳೊಬ್ಬಳು ಮಾತ್ರ ಆಶ್ಚರ್ಯ ವ್ಯಕ್ತಪಡಿಸಲಿಲ್ಲ. “ಯೂ ಚೀಟ್!” ಮುನೀಂದ್ರ ಸ್ವಾಮಿ ಮತ್ತೊಂದು ಸಲ ಅರಚಿದ. ಅವನ ಕೈಯಲ್ಲಿಯ ರಿವಾಲ್ವರ್ ಸಿ.ಐ.ಎ. ಏಜೆಂಟ್‌ನ ಕಡೆ ಅಪಾಯಕಾರಿಯಾಗಿ ನೋಡುತ್ತಿತ್ತು.

ಸಿ.ಐ.ಎ. ಏಜೆಂಟ್ ಸುಧಾರಿಸಿಕೊಳ್ಳಲು ಕೊಂಚ ಹೊತ್ತು ಹಿಡಿಯಿತು “ಏನಿದು? ಏನಾಗುತ್ತಿದೆ?” ಥಟಕ್ಕನೆ ಎದ್ದು ನಿಂತ.

“ಅಲುಗಾಡಕೂಡದು”. ಎಚ್ಚರಿಸಿದ ಮುನೀಂದ್ರ ಸ್ವಾಮಿ.

ಒಂದು ಹೆಜ್ಜೆ ಮುಂದಿಡಲಿದ್ದ ಅವನು ಥಟಕ್ಕನೆ ನಿಂತುಬಿಟ್ಟ. ಏನು ನಡೆಯುತ್ತಿದೆ ? ಏನೀ ವೈಪರೀತ್ಯ!

"ನಿನ್ನ ಆಟ ಮುಗಿಯಿತು ಮಿಸ್ಟರ್ ಅಲೆಕ್ಸಿ ರೋಡಿನ್! ಅಲುಗಾಡಿದರೆ ನಿನ್ನ ಮೈ ಬುಲೆಟ್‌ಗಳಿಂದ ತೂತಾಗುತ್ತದೆ!" ಎಂದ ಮುನೀಂದ್ರ ಸ್ವಾಮಿ.

"ಅಲೆಕ್ಸಿ?........ಅಲೆಕ್ಸಿ ರೋಡಿನ್? ಯಾರವನು! ?"

"ಇನ್ನು ನಾಟಕ ಮಾಡೋ ಅಗತ್ಯ ಇಲ್ಲ ಕಾಮ್ರೇಡ್ ಅಲೆಕ್ಸಿ ರೋಡಿನ್! ನಿನ್ನ ನಾಟಕ ಬಯಲಾಯಿತು. ನೀನು ಸಿ. ಐ. ಎ. ಏಜೆಂಟ್ ಗ್ರೆಗರಿ ಸ್ಕಾಟ್‌ನಲ್ಲ. ನೀನು ರಷ್ಯನ್. ರಷ್ಯನ್ ಕೆ.ಜಿ.ಬಿ.ಯಿಂದ ಸ್ಕಾಟ್‌ನ ಮೇಲೆ ಕೌಂಟರ್ ಏಜೆಂಟ್ ಆಗಿ ಮಾಸ್ಕೋದಿಂದ ಬಂದಿದ್ದೀಯ. ಸ್ಕಾಟ್ ನಿನ್ನ ಕೈಗಳಲ್ಲಿ ಏನಾಗಿದ್ದಾನೋ ತಿಳಿಯದು. ಬಹುಶಃ ನೀನು ಅವನನ್ನು ಕೊಂದಿರಬೇಕು. ಇಲ್ಲವೆ ನಿನ್ನ ಕಡೆಯವರಿಂದ ರಷ್ಯನ್ ಗುಲಾಗ್‌ಗೆ ರವಾನ ಮಾಡಿಸಿರಬೇಕು. ಗುಲಾಗ್‌ನಲ್ಲಿ ಅವನು ಸದ್ಯಕ್ಕೆ ಚಿತ್ರಹಿಂಸೆ ಅನುಭವಿಸು ತ್ತಿರಬೇಕು. ನೀನು ಮಾತ್ರ ಇಂಡಿಯಾದಲ್ಲಿ ಅಮೆರಿಕನ್ ಸಿ. ಐ. ಎ. ಆಡುತ್ತಿರುವ ಆಟವೇನೆಂದು ತಿಳಿದುಕೊಳ್ಳಲು ಸ್ಕಾಟ್‌ನ ರೂಪದಲ್ಲಿ ಬಂದಿ ದ್ದೀಯ ನಿಜ ತಾನೆ ?"

"ನಾನ್‌ಸೆನ್ಸ್ ! ನಾನು ರಷ್ಯನ್ ಕೌಂಟರ್ ಏಜೆಂಟ್ ಅಂದ್ರೇನು ? ನಾನೇ ಗ್ರೆಗರಿ ಸ್ಕಾಟ್ !"

"ಕಿರುಚೋದ್ರಿಂದ ಪ್ರಯೋಜನ ಇಲ್ಲ ಅಲೆಕ್ಸಿ ! ಮುನೀಂದ್ರ ಸ್ವಾಮಿ ಯೊಂದಿಗೆ ತುಂಬಾ ಅಪಾಯಕಾರಿಯಾದ ಆಟ ಆಡಿದೀಯ! ಕಾಷಾಯ ಧರಿ ಸಿದ ಮಾತ್ರಕ್ಕೆ ಮುನೀಂದ್ರಸ್ವಾಮಿ ಅಹಿಂಸಾವಾದಿಯಲ್ಲ ಅಲೆಕ್ಸಿ ! ಅಗತ್ಯ ಬಿದ್ರೆ ಕಾಲಯಮನಾಗಬಲ್ಲ. ಇಂಡಿಯಾದಲ್ಲಿ ಉಗ್ರಗಾಮಿಗಳಿಗೆ ಆಯುಧ ಸಹಾಯ ಒದಗಿಸುತ್ತಿರುವವನೆಂದು ನನ್ನ ಹೆಸರು ಹೊರ ಬರಕೂಡದು. ಇಂದಿಗೆ ನಿನ್ನ ಕತೆ ಮುಗಿಯಿತು".

"ನಿಂತ್ಕೋ ಮುನೀಂದ್ರ ಸ್ವಾಮಿ! ನಾನು ಅಲೆಕ್ಸಿಯೆಂದು ಹೇಳಲು ನಿನ್ನ ಬಳಿ ಇರೋ ಆಧಾರ ಏನು ?"

"ಇದು!" ತನ್ನ ಇನ್ನೊಂದು ಕೈಯಲ್ಲಿದ್ದ ಕಾರ್ಡ್ ತೆರೆದು ಅವನ ಕಣ್ಣೆ ದುರು ಹಿಡಿದ ಮುನೀಂದ್ರ ಸ್ವಾಮಿ.

ಆ ಕಾರ್ಡನ್ನು ನೋಡುತ್ತಲೇ ಆ ವ್ಯಕ್ತಿ ನಿಶ್ಚೇಷ್ಟಿತನಾದ. "ಆ ಕಾರ್ಡು ನಿಜವಾದುದಲ್ಲ. ಯಾರೋ ತುಂಬಾ ಬುದ್ಧಿವಂತಿಕೆಯಿಂದ ಸೃಷ್ಟಿಸಿದ ಮಾಸ್ಟರ್ ಫೋರ್ಜರಿ! ನಿಲ್ಲು ಮುನೀಂದ್ರ ಸ್ವಾಮಿ! ಆ ಕಾರ್ಡು ಫೋರ್ಜರಿ!

ನಾನು ಅಲೆಕ್ಸಿಯಲ್ಲ! ಸ್ಕ್ಯಾಟ್! ಗ್ರೆಗರಿ ಸ್ಕ್ಯಾಟ್! ಬೇಕಾದ್ರೆ ಇದೋ ನನ್ನ ಐಡೆಂಟಿಫಿಕೇಶನ್!" ಎಂದು ಅವನು ಗಾಬರಿಯಿಂದ ಕೋಟಿನ ಜೇಬಿಗೆ ಕೈಹಾಕಲು ಹೋದ.

"ಡೋಂಟ್ ಮೂವ್!" ಮುನೀಂದ್ರ ಸ್ವಾಮಿ ಗರ್ಜಿಸಿದ!

"ಬೇಕಾದ್ರೆ ನೀನೇ ನನ್ನ ಅಸಲಿ ಐಡೆಂಟಿಫಿಕೇಶನ್ ಕಾರ್ಡ್ ತೆಗೆದು ನೋಡು".

ಮುನೀಂದ್ರ ಸ್ವಾಮಿ ತನ್ನ ಪಕ್ಕದಲ್ಲಿ ಸೊಂಟದ ಮೇಲೆ ಕೈ ಇಟ್ಟುಕೊಂಡು ನಿಂತಿದ್ದ ನಗ್ನ ಸುಂದರಿಯ ಕಡೆ ನೋಡಿದ. "ಆಲ್‌ರೈಟ್ ಹನಿ! ಅವನ ಜೇಬುಗಳನ್ನು ಚೆಕ್ ಮಾಡು". ಅವಳ ಮುಖದಲ್ಲಿ ಎಂತಹುದೇ ಬದಲಾವಣೆಯಿಲ್ಲ. ಮುಗುಳ್ನಗುತ್ತಾ ಆ ವ್ಯಕ್ತಿಯ ಪಕ್ಕಕ್ಕೆ ಹೋಗಿ ನಿಂತಳು. ಅಲ್ಲಿ ಹರಡಿದ್ದ ಆ ಭಯಂಕರವಾದ ಟೆನ್ಶನ್‌ನಲ್ಲಿ ಅವಳ ತುಟಿಗಳ ಮೇಲೆ ಸುಳಿದಾಡುತ್ತಿದ್ದ ಮುಗುಳ್ನಗೆ ಎಷ್ಟು ಸುಂದರವಾಗಿತ್ತೋ ಅಷ್ಟು ಅಪಾಯಕಾರಿಯಾಗಿಯೂ ಕಾಣಿಸುತ್ತಿತ್ತು. ಅದೇ ಅಪಾಯಕಾರಿ ಮುಗುಳ್ನಗೆಯೊಂದಿಗೆ ಅವಳು ಅವನ ಜೇಬುಗಳನ್ನು ಹುಡುಕಾಡಿ ಒಂದು ಚಿಕ್ಕ ರಿವಾಲ್ವರ್ ಅನ್ನು ಹೊರತೆಗೆದಳು. "ಇದನ್ನು ಬಿಟ್ಟರೆ ಇವನ ಜೇಬಿನಲ್ಲಿ ಬೇರೇನೂ ಇಲ್ಲ!" ಎಂದು ಆ ರಿವಾಲ್ವರ್ ಅನ್ನು ಎದುರಿಗಿದ್ದ ಟೀಪಾಯ್ ಮೇಲೆ ನಿರ್ಲಕ್ಷ್ಯವಾಗಿ ಬಿಸುಡಿದಳು. ಮುನೀಂದ್ರ ಸ್ವಾಮಿ ಆ ವ್ಯಕ್ತಿಯ ಕಡೆಯೇ ನೋಡುತ್ತಿದ್ದ. ಅವನ ಕಣ್ಣುಗಳು ಮತ್ತಷ್ಟು ಕಠಿಣವಾದವು. ಕೈಯಲ್ಲಿನ ರಿವಾಲ್ವರ್ ನಿಧಾನವಾಗಿ ಮೇಲೆದ್ದಿತು.

"ಮುನೀಂದ್ರ ಸ್ವಾಮಿ! ನನ್ನ ಮಾತು ಕೇಳು! ಮುನೀಂದ್ರ........" ಆ ವ್ಯಕ್ತಿ ಮಾತು ಪೂರ್ತಿಗೊಳಿಸುವ ಮೊದಲೇ ಮುನೀಂದ್ರ ಸ್ವಾಮಿಯ ಕೈಯಲ್ಲಿನ ರಿವಾಲ್ವರ್ ಸಿಡಿಯಿತು. ಸೈಲೆನ್ಸರ್ ಅಳವಡಿಸಿದ್ದರಿಂದ ಜೋರಾಗಿ ಶಬ್ದವೇನೂ ಆಗಲಿಲ್ಲ. ಆ ವ್ಯಕ್ತಿ ಮೆಲ್ಲಗೆ ಕೂಗು ಹಾಕಿ ಹಿಂದಕ್ಕೆ ಬಿದ್ದ. ಬುಲೆಟ್ ಸರಿಯಾಗಿ ಅವನ ಹೃದಯಕ್ಕೆ ತಗುಲಿತ್ತು. ಮರುಕ್ಷಣ ಅವನ ಪ್ರಾಣ ಗಾಳಿಯಲ್ಲಿ ಬೆರೆಯಿತು.

ಗೂಢಚಾರಿಯಾಗಿ ಆ ವ್ಯಕ್ತಿ ತನ್ನ ಜೀವನದಲ್ಲಿ ಮಾಡಿದ ಮೊಟ್ಟಮೊದಲ ತಪ್ಪು ಆ ಯುವತಿಯ ನಗ್ನ ಸೌಂದರ್ಯವನ್ನು ನೋಡಿ ಮೈಮರೆತಿದ್ದು. ಅವಳ ನಗ್ನ ಸೌಂದರ್ಯ ಒಂದು ಮಹಾ ಆಯುಧ. ಆ ಮಹಾ ಆಯುಧಕ್ಕೇ ಅವನು ಬಲಿಯಾದ. ವೃತ್ತಿಯಲ್ಲಿ ತಾನು ಮಾಡಿದ ಮೊಟ್ಟಮೊದಲ ತಪ್ಪಿಗೆ ತನ್ನ ಪ್ರಾಣವನ್ನೇ ಬೆಲೆಯಾಗಿ ತೆತ್ತ. ಅವಳ ಸೌಂದರ್ಯ

ಅವನನ್ನು ಕಾಳ ಸರ್ಪದಂತೆ ಕಾಡಿತು. ಅವನು ನೆಲಕ್ಕೊರಗಿದೊಡನೆ ಅಲ್ಲಿ ಭಯಂಕರವಾದ ನಿಶ್ಶಬ್ದ ವ್ಯಾಪಿಸಿತು.

ಜರ್ಮನ್‌ನ ಕಣ್ಣುಗಳಲ್ಲಿ ವಿಪರೀತ ಭಯ. ಅದಕ್ಕೆ ಮೀರಿದ ವಿಸ್ಮಯ ಬೆರೆತು ಅವನು ಹೆದರುತ್ತಾ ನೋಡುತ್ತಿದ್ದ. ಜೇಕೀಯ ಕಣ್ಣುಗಳಲ್ಲಿ ಬೇಸರ ಕಾಣಿಸುತ್ತಿತ್ತು. ಹಿಂಸಾತ್ಮಕ ಘಟನೆಗಳು ಅವನಿಗೆ ಹೊಸದೇನೂ ಅಲ್ಲ. ಆಯುಧಗಳ ವ್ಯವಹಾರ ಮಾಡುತ್ತಿರುವಾಗ ವಿಧವಿಧವಾದ ಗೂಢಚರ್ಯ ಏಜೆಂಟರಿಂದ ಇಂತಹ ಕಿರಿಕಿರಿ ಆಗಾಗ ಆಗುತ್ತವೆ. ನಿಜಕ್ಕೆ ಅವನಂತಹವನು ಇಂತಹ ಘಟನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಕೂಡದು. ಜೇಕೀ ಕೂಡ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಆದರೆ ಅವನಿಗೆ ಹಿಂಸಾತ್ಮಕ ಘಟನೆಗಳನ್ನು ನೋಡಿದರೆ ಬೇಜಾರು. ಪಾಯಸದಂತಹ ತನ್ನ ವೃತ್ತಿಯಲ್ಲಿ ಇಂತಹ ಘಟನೆಗಳು ಹುಳುಗಳಂತೆ ಅಡ್ಡವಾಗುತ್ತವೆಯೆಂದು ಬೇಸರಪಡುತ್ತಿದ್ದ.

ಮುನೀಂದ್ರ ಸ್ವಾಮಿಯ ಕಣ್ಣುಗಳು ನಿಧಾನವಾಗಿ ಆ ನಗ್ನ ಸುಂದರಿಯ ಕಡೆ ತಿರುಗಿದವು. "ಥ್ಯಾಂಕ್ಯೂ ಮೇಖಲೆ!" ಅಪ್ಯಾಯತೆಯಿಂದ ನೋಡುತ್ತಾ ನುಡಿದ. "ಇವನು ರಷ್ಯನ್ ಕೌಂಟರ್ ಏಜೆಂಟ್ ಅಂತ ಯಾವಾಗ ತಿಳಿದುಕೊಂಡೆ? ನೋಡೋದಿಕ್ಕೆ ಅಮೆರಿಕನ್‌ನಂತೆಯೇ ಇದ್ದಾನೆ! ಅಮೆರಿಕನ್ ಇಂಗ್ಲಿಷನ್ನೇ ಚೆನ್ನಾಗಿ ಮಾತನಾಡುತ್ತಿದ್ದಾನೆ. ಹೇಗೆ ಕಂಡು ಹಿಡಿದೆ?".

"ಅವನ ಕಣ್ಣು ನೋಡಿದರೆ ನನಗೆ ಯಾಕೋ ಅನುಮಾನ ಉಂಟಾಯಿತು". ನಿರ್ಲಕ್ಷ್ಯವಾಗಿ ನಗುತ್ತಾ ಉತ್ತರವಿತ್ತಳು. "ಅವನ ಮಡಿಲಲ್ಲಿ ಕುಳಿತುಕೊಂಡಾಗ ಅವನಿಗೆ ತಿಳಿಯದಂತೆ ಜೇಬಿನಿಂದ ಐಡೆಂಟಿಫಿಕೇಶನ್ ಕಾರ್ಡ್ ತೆಗೆದು ನಿಮಗೆ ಕೊಟ್ಟೆ".

"ಗುಡ್ ಗರ್ಲ್!" ಮುನೀಂದ್ರ ಸ್ವಾಮಿ ಜರ್ಮನ್‌ನ ಕಡೆ ತಿರುಗಿದ. "ಐ ಆ್ಯಮ್ ಸಾರಿ ಮಿಸ್ಟರ್ ಹ್ಯೂಬರ್! ಇದೆಲ್ಲಾ ಆಕಸ್ಮಿಕವಾಗಿ ನಡೆಯಿತು. ಇಂತಹ ಘಟನೆ ನಿಮ್ಮೆದುರಿಗೆ ನಡೆದದ್ದು ನಮಗೆ ತುಂಬಾ ನೋವುಂಟು ಮಾಡಿದೆ. ಇಂತಹ ರಹಸ್ಯ ವ್ಯವಹಾರಗಳಲ್ಲಿ ಕೆಲವು ಕಿರಿಕಿರಿಗಳು ಅನಿವಾರ್ಯ. ಈ ಘಟನೇನ ನೀವು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ. ನಿಮ್ಮೊಂದಿಗೆ ಕುದುರಿಸಿಕೊಂಡ ಒಪ್ಪಂದಕ್ಕೆ ಯಾವುದೇ ಅಡಚಣೆ ಬರುವುದಿಲ್ಲ. ಈ ಘಟನೆ ನೀವು ಮರೆಯೋದಿಕ್ಕೆ ನಮ್ಮ ಮೇಖಲೆ ನಿಮಗೆ ಸಂಪೂರ್ಣವಾಗಿ ಸಹಾಯ ಮಾಡುತ್ತಾಳೆ. ಕಮಾನ್! ಹ್ಯಾವ್ ಸಮ್ ಫನ್!" ಶಾಂಪೇನ್ ತುಂಬಿದ ಗಾಬ್ಲೆಟ್ ಎತ್ತಿ ಕೊಡುತ್ತಾ ನಗ್ನ ಸುಂದರಿಯ ಕಡೆ

ತಿರುಗಿ ಕಣ್ಣುಗಳಿಂದಲೇ ಸನ್ನೆ ಮಾಡಿದ.

ಮರುಕ್ಷಣ ಅವಳು ಸೌಂದರ್ಯ ರಥದಂತೆ ಚಲಿಸುತ್ತಾ ಹ್ಯೂಬರ್‌ನನ್ನು ಮೋಹನ ಸಮುದ್ರದಂತೆ ಆವರಿಸಿಕೊಂಡಳು. ಅವನು ಕಕ್ಕಾಬಿಕ್ಕಿಯಾದ. ಅಲ್ಲಿಯವರೆಗೆ ಭಯದಿಂದ, ವಿಸ್ಮಯದಿಂದ ಡವಡವನೆ ಹೊಡೆದುಕೊಂಡ ಅವನ ಹೃದಯ ನಿಧಾನವಾಗಿ ಸುಧಾರಿಸಿಕೊಂಡಿತು. ಅವಳು ಎರಡೂ ಕೈಗಳಿಂದ ಅವನ ಮುಖ ಹಿಡಿದುಕೊಂಡು ತುಟಿಗಳಿಗೆ ತುಟಿ ಸೇರಿಸಿದಳು. ಹ್ಯೂಬರ್‌ನಲ್ಲಿ ಚಲನೆಯುಂಟಾಯಿತು. ಅಲ್ಲಿಯ ತನಕ ಭಯದಿಂದ ತಣ್ಣಗಾಗಿದ್ದ ಅವನ ರಕ್ತ ಕ್ರಮೇಣ ಬಿಸಿಯೇರಿಕ್ಷಣಗಳಲ್ಲಿ ಕುದಿಯತೊಡಗಿತು. ಅವಳ ಸೌಂದರ್ಯ ಸಮುದ್ರದಲ್ಲಿ ಪೂರ್ತಿ ಮುಳುಗಿ ಬಿಟ್ಟ. ಅಲ್ಲಿಂದ ಈಜುತ್ತಾ ಹೋಗಿ ಅಗ್ನಿಪರ್ವತ ಶಿಖರಗಳ ಮೇಲೆ ತಲುಪಿ ಫಟಾರೆಂದು ಸಿಡಿದ ಲಾವಾದಂತೆ ಪ್ರವಹಿಸಿದ. ಅವಳ ಸೌಂದರ್ಯಾಗ್ನಿಯಲ್ಲಿ ಬಿದ್ದು ಹ್ಯೂಬರ್ ಹುಲ್ಲುಕಡ್ಡಿಯಂತೆ ದಗ್ಧನಾದ.

* * * *

ಅವಳು ನಿಧಾನವಾಗಿ ಜೇಂಟ್ ಸೈಜ್ ಮಾಸ್ಟರ್ ಬೆಡ್‌ನಿಂದ ಕೆಳಗಿಳಿದು ಪಕ್ಕಕ್ಕೆ ನೋಡಿದಳು. ಹ್ಯೂಬರ್ ಬೆಡ್ ಮೇಲೆ ನಗ್ನನಾಗಿ ಮೈ ಮರೆತು ನಿದ್ದೆ ಮಾಡುತ್ತಿದ್ದ. ಅಲ್ಲಿಯವರೆಗೆ ಅವಳ ಸೌಂದರ್ಯ ಸಮುದ್ರದಲ್ಲಿ ಬಿದ್ದು ಓಲಾಡಿ, ಓಲಾಡಿ, ಬಳಲಿ, ಸೋತು ನಿದ್ದೆಯಲ್ಲಿ ಜಾರಿದ್ದ. ಅವಳ ತುಟಿಗಳ ಮೇಲೆ ಮುಗುಳ್ನಗೆ ಆಕರ್ಷಣೀಯವಾಗಿ ಮೂಡಿತು. ಗಂಡಸು ದುರ್ಬಲ ಸ್ತ್ರೀಯನ್ನು ಅಬಲೆಯೆಂದು ಭಾವಿಸಿ, ಅವಳ ಮೇಲೆ ಆಧಿಪತ್ಯ ನಡೆಸಲು ಪ್ರಯತ್ನಿಸುತ್ತಾನೆ. ಆದರೆ ನಿಜವಾಗಿ ಸ್ತ್ರೀಯ ಮುಂದೆ ಯಾವ ಗಂಡಸಾದರೂ ಸೋಲಲೇಬೇಕು. ಅವಳ ಸೌಂದರ್ಯ ಮಧುವನ್ನು ಹೀರಿ, ಹೀರಿ, ಓಲಾಡಿ, ಬಳಲಿ ಬೀಳಲೇಬೇಕು. ಇಷ್ಟು ಮಾತ್ರಕ್ಕೆ ಗಂಡಸು ಪ್ರತಿ ಸ್ತ್ರೀಯನ್ನೂ ಅನುಭವಿಸಬೇಕೆಂದುಕೊಳ್ಳುತ್ತಾನೆ. ಮೃಗತೃಷ್ಣದ ಹಿಂದೆ ಬಿದ್ದು ಓಡುತ್ತಾನೆ. ಎಷ್ಟೋ ಸ್ತ್ರೀಯರನ್ನು ಪ್ರೇಯಸಿಯರನ್ನಾಗಿಯೂ, ಕಾಲ್‌ಗರ್ಲ್ಸ್‌ಗಳಾಗಿಯೂ ಮಾಡುತ್ತಾನೆ. ಅವರಿಂದ ನಗ್ನ ನೃತ್ಯ ಮಾಡಿಸುತ್ತಾನೆ. ನೋಡಿ ನೋಡಿ ಸಂಭ್ರಮ ಪಡುತ್ತಾನೆ. ಆದರೆ ಕೊನೆಗೇನಾಗುತ್ತಾನೆ ? ಸ್ತ್ರೀಯ ಸೌಂದರ್ಯ ಮಧುವನ್ನು ಸಂಪೂರ್ಣವಾಗಿ ಆಸ್ವಾದಿಸಲಾಗದೆ ಅಲ್ಪ ಸಂತೋಷದಿಂದ ಮತ್ತೇರಿ ಜ್ಞಾನ ಕಳೆದುಕೊಂಡು, ನಿಶೆ ತಲೆಗೇರಿ ನಿದ್ದೆ ಹೋಗುತ್ತಾನೆ.

ಸ್ತ್ರೀಯನ್ನು ಗಂಡು ಎಂದೂ ಜಯಿಸಲಾರ! ಆಧಿಪತ್ಯದ ರೂಪದಲ್ಲಿ

ಶಾರೀರಿಕ ಬಲದಿಂದ ಅವನು ಚಲಾಯಿಸುವ ಅಧಿಕಾರ ಕೇವಲ ದೌರ್ಬಲ್ಯ! ಸ್ತ್ರೀಯರನ್ನು ಪ್ರತಿ ಸಲವೂ ಗೆಲ್ಲಬೇಕೆಂದುಕೊಳ್ಳುವುದು ಅವನ ಬಲಹೀನತೆ! ಸ್ತ್ರೀಯ ಸೌಂದರ್ಯ ಒಂದು ಆಯುಧ! ಮಹಾಯುಧ! ಗಂಡಸಿನ ಪಾಲಿನ ಮರಣಾಯುಧ! ಅದರ ವಿರುದ್ಧ ಪಾಶುಪತಾಸ್ತ್ರ ಕೂಡ ಕೆಲಸ ಮಾಡಲಾರದು! ಅವಳು ಮತ್ತೊಂದು ಸಲ ನಗುತ್ತಾ ವಿಮಾನದಲ್ಲಿನ ಮುಂದಿನ ಹಾಲಿನೊಳಕ್ಕೆ ಹಾಗೆಯೇ ನಗ್ನಳಾಗಿ ನಡೆಯುತ್ತಾ ಹೊರಟಳು.

ಈಗ ಅಲ್ಲಿ ಯಾವ ಶವವೂ ಇರಲಿಲ್ಲ. ಇದಕ್ಕೆ ಮುಂಚೆ ಅಲ್ಲಿ ಬಿದ್ದಿದ್ದ ಶವ ಪೆಸಿಫಿಕ್ ಮಹಾಸಮುದ್ರದಲ್ಲಿ ಈ ವೇಳೆಗಾಗಲೇ ಶಾರ್ಕ್‌ಗಳಿಗೆ ಆಹಾರವಾಗಿಬಿಟ್ಟಿತ್ತು. ಅಲ್ಲಿ ತಿವಾಸಿಯ ಮೇಲೆ ಚೆಲ್ಲಿದ ರಕ್ತ ತಿವಾಸಿಯ ಕೆಂಪು ಬಣ್ಣದೊಂದಿಗೆ ಬೆರೆತುಹೋಗಿತ್ತು. ಅವಳು ಒಂದು ಕ್ಷಣ ಅಲ್ಲಿಯೇ ನಿಂತು ಆ ಜಾಗವನ್ನು ಪರೀಕ್ಷೆಯಿಂದ ನೋಡಿ ಹಿಂದಿರುಗಿದಳು. ಸಾಯುವುದಕ್ಕೆ ಮುಂಚೆ ಆ ಏಜೆಂಟ್ ತನ್ನ ಒದ್ದೆ ಶರೀರವನ್ನು ಒರೆಸಿದ ಗುಲಾಬಿ ವಸ್ತ್ರ ವಿಮಾನದಲ್ಲಿನ ಒಂದು ಅರೆಯಲ್ಲಿ ಭದ್ರವಾಗಿತ್ತು. ಹ್ಯೂಬರ್‌ನೊಡನೆ ಮಲಗಲು ಹೋಗುವ ಮೊದಲು ಅವಳೇ ಆ ವಸ್ತ್ರವನ್ನು ಎಚ್ಚರಿಕೆಯಿಂದ ಮಡಿಸಿ ಆ ಅರೆಯಲ್ಲಿ ಅಡಗಿಸಿದ್ದಳು. ಅವಳು ಆ ಅರೆಯನ್ನು ತೆರೆದು ಗುಲಾಬಿ ವಸ್ತ್ರವನ್ನು ಕೈಗೆತ್ತಿಕೊಂಡಳು. ಅವಳ ಕಣ್ಣುಗಳು ವಿಚಿತ್ರವಾಗಿ ಹೊಳೆಯುತ್ತಿದ್ದವು.

ಗುಲಾಬಿ ವಸ್ತ್ರದೊಂದಿಗೆ ದೊಡ್ಡ ದೊಡ್ಡ ಹೆಜ್ಜೆಯಿಡುತ್ತಾ ಅವಳು ಬಾತ್‌ರೂಮಿನೊಳಗೆ ಹೋದಳು. ಎಚ್ಚರಿಕೆಯಿಂದ ಬಾಗಿಲು ಮುಚ್ಚಿದಳು. ಗುಲಾಬಿ ವಸ್ತ್ರದೊಂದಿಗೆ ಅವಳು ಸರಸರನೆ ವಾಷ್‌ಬೇಸಿನ್ ಹತ್ತಿರ ಹೋಗಿ, ನಿಧಾನವಾಗಿ ಅದರ ಮಡಿಕೆ ಬಿಚ್ಚಿದಳು. ಆ ಮಡಿಕೆಯಲ್ಲಿ ಅಡಗಿದ್ದ ಒಂದು ವಸ್ತು ಟಪ್ ಎನ್ನುತ್ತಾ ಫ್ಲೋರಿಂಗ್ ಮೇಲೆ ಬಿತ್ತು. ಅವಳು ಥಟ್ಟನೆ ಮುಂದೆ ಬಾಗಿ ಆ ವಸ್ತುವನ್ನೆತ್ತಿಕೊಂಡಳು. ನಂತರ ಗುಲಾಬಿ ವಸ್ತ್ರವನ್ನು ನಿರ್ಲಕ್ಷ್ಯವಾಗಿ ಫ್ಲೋರಿಂಗ್ ಮೇಲೆಯೇ ಬಿಟ್ಟು, ಮೊದಲೇ ಸಿದ್ಧಮಾಡಿಟ್ಟುಕೊಂಡಿದ್ದ ಆಲ್ಕೋಹಾಲ್ ಬಾಟಲನ್ನು ಕೈಗೆತ್ತಿಕೊಂಡು ಸರಸರನೆ ಮುಚ್ಚಳ ತೆರೆದಳು. ತನ್ನ ಕೈಯಲ್ಲಿನ ವಸ್ತುವನ್ನು ಆಲ್ಕೋಹಾಲ್‌ನಲ್ಲಿ ಪೂರ್ತಿಯಾಗಿ ತೋಯಿಸಿ, ಬಾಟಲ್‌ನೊಂದಿಗೇ ಅಲ್ಲಿಟ್ಟಿದ್ದ ಸಿಗಾರ್ ಲೈಟರ್ ಎತ್ತಿಕೊಂಡು ಹೊತ್ತಿಸಿದಳು.

ಸಿಗಾರ್ ಲೈಟರ್ ನೀಲಿ ಜ್ವಾಲೆಯಿಂದ ಸಣ್ಣಗೆ ಉರಿಯುತ್ತಿತ್ತು. ತನ್ನ ಎರಡನೇ ಕೈಯಲ್ಲಿದ್ದ ವಸ್ತುವಿನ ಹತ್ತಿರ ಸಿಗಾರ್‌ಲೈಟರ್ ಒಯ್ದು ಹೊತ್ತಿಸಿದಳು. ಆ ವಸ್ತು ಭಗ್ ಎನ್ನುತ್ತಾ ಹೊತ್ತಿಕೊಂಡಿತು.ಕ್ಷಣಗಳಲ್ಲಿ ಬೂದಿಯಾಗ

ತೊಡಗಿತು. ಆ ವಸ್ತು ಪೂರ್ತಿಯಾಗಿ ಬೂದಿಯಾಗುವವರೆಗೆ ಅವಳು ಅಲ್ಲಿಯೇ ಆ ಉರಿಯನ್ನು ನೋಡುತ್ತಾ ನಿಂತುಕೊಂಡಳು. ಅದು ಪೂರ್ತಿಯಾಗಿ ಸುಟ್ಟು ಹೋದ ಮೇಲೆ ಸಂತೃಪ್ತಿಯಿಂದ ನಲ್ಲಿ ತಿರುಗಿಸಿದಳು. ವಾಷ್‌ಬೇಸಿನ್‌ನಲ್ಲಿದ್ದ ಬೂದಿ ಆ ನೀರಿನೊಂದಿಗೆ ಬೆರೆತು, ಸುಳಿ ತಿರುಗುತ್ತಾ ಒಳಗೆ ಹೋಗತೊಡಗಿತು. ಅದು ಪೂರ್ತಿಯಾಗಿ ಒಳಗೆ ಹೋದಮೇಲೆ ಅವಳು ಹಿಂದಿರುಗಿದಳು. ವಿಜಯಗರ್ವದಿಂದ ಅವಳ ಕಣ್ಣುಗಳು ಫಳಫಳನೆ ಹೊಳೆಯುತ್ತಿದ್ದುವು. ಅವಳ ತುಟಿಗಳ ಮೇಲೆ ಅಪಾಯಕಾರಿಯಾದ ಮುಗುಳ್ನಗೆ ಮತ್ತೆ ಮತ್ತೆ ಮೂಡುತ್ತಿತ್ತು. ಬೂದಿಯಾಗಿ ಬದಲಾಗಿ ವಾಷ್‌ಬೇಸಿನ್ ಪೈಪ್ ಮೂಲಕ ನೀರಿನೊಂದಿಗೆ ಬೆರೆತು, ಜಾರಿಹೋದ ಆ ವಸ್ತು.... ಒಂದು ಐಡೆಂಟಿಟಿ ಕಾರ್ಡ್! ಮುನೀಂದ್ರಸ್ವಾಮಿಯ ಕೈಯಲ್ಲಿ ಪ್ರಾಣಕಳೆದುಕೊಂಡ ಗೂಢಚಾರಿಗೆ ಸಂಬಂಧಿಸಿದ ಅಸಲಿ ಕಾರ್ಡ್! ಸುಟ್ಟು ಬೂದಿಯಾಗುವ ಮೊದಲು ಅದರ ಮೇಲೆ ಕ್ಯಾಪಿಟಲ್ ಅಕ್ಷರಗಳಲ್ಲಿ ಒಂದು ಹೆಸರು ಸ್ಪಷ್ಟವಾಗಿ ಕಾಣಿಸಿತು.

ಆ ಹೆಸರು........ "ಗ್ರೆಗರಿ ಸ್ಕಾಟ್!"

## ೩

ಜಾನಿವಾಕರ್ ಟ್ಯಾಂಕ್‌ಬಂಡ್‌ನ ಹತ್ತಿರ ಕಾರು ನಿಲ್ಲಿಸಿ ಕೆಳಗಿಳಿದ. ಒಂದು ಸಲ ರಸ್ತೆಯ ಮೇಲೆ ಅತ್ತಿತ್ತ ನೋಡಿ ಹಣೆಯ ಮೇಲೆ ಅಂದವಾಗಿ ಬೀಳುತ್ತಿದ್ದ ಕೂದಲ ಜೊಂಪೆಯೊಂದನ್ನು ನಿರ್ಲಕ್ಷ್ಯವಾಗಿ ಒಂದು ಕೈಯಿಂದ ಮೇಲೆ ತಳ್ಳುತ್ತಾ ಪೇವ್‌ಮೆಂಟ್ ಮೇಲೆ ನಡೆದು, ಶ್ರೀ ಶ್ರೀಯ ವಿಗ್ರಹದ ಮುಂದೆ ನಿಂತು ತಲೆಯೆತ್ತಿ ನೋಡಿದ. ಮಹಾಕವಿ ಶ್ರೀ ಶ್ರೀ ಗಾಂಭೀರ್ಯದಿಂದ ನಿಂತಿದ್ದ. ಶ್ರೀ ಶ್ರೀಯನ್ನು ನೋಡುತ್ತಿದ್ದರೆ ಅವನ ಹೃದಯ ವಿಚಿತ್ರವಾಗಿ ಸ್ಪಂದಿಸುತ್ತಿತ್ತು. ಶ್ರೀ ಶ್ರೀಯಷ್ಟೇ ಅವನಿಗಿಷ್ಟವಾದ ಇನ್ನೊಬ್ಬ ಮಹಾಕವಿ ಫೈಜ್ ಅಹಮದ್ ಫೈಜ್. ಶ್ರೀ ಶ್ರೀ, ಫೈಜ್ ಇಬ್ಬರೂ ಕೈ ಕೈ ಕೂಡಿಸಿ ತಿರುಗಾಡುತ್ತಿರುವಂತೆ ಯಾವಾಗಲೂ ಅವನ ಊಹಾಪಥದಲ್ಲಿ ಸುಳಿದಾಡುತ್ತಿರುತ್ತಾರೆ.

ಅವನ ಭುಜದ ಮೇಲೆ ಯಾರದೋ ಕೈ ಬಿತ್ತು. ಆಲೋಚಿಸುತ್ತಿದ್ದ ಅವನು ಬೆಚ್ಚಿಬಿದ್ದ. ಸರಕ್ಕನೆ ಹಿಂದಿರುಗಿ ನೋಡಿದ. ಎದುರಿಗೆ ನಿಂತಿದ್ದ ವ್ಯಕ್ತಿ ಸ್ನೇಹಪೂರ್ವಕವಾಗಿ ನಗುತ್ತಾ ಕೈ ಚಾಚಿದ. ಜಾನಿವಾಕರ್ ಆತುರದಿಂದ ಆ ಕೈ ಹಿಡಿದುಕೊಂಡ. ಅವನು ಏನೋ ಪ್ರಶ್ನಿಸುವುದರೊಳಗೆ ಆ

ವ್ಯಕ್ತಿ ನುಡಿದ— "ಮದೀನಾದಲ್ಲಿ ಮನೆ ನಂಬರ್ 1112! ನಾಳೆ ನೀನು ಆ ಮನೆಗೆ ಹೋದರೆ ನಿನಗೆ ಬೇಕಾದ ಮಾಹಿತಿ ಸಿಗುತ್ತದೆ. ಮತ್ತೆ ಭೇಟಿಯಾಗೋಣ!" ಅವನ ಕೈಯಿಂದ ತನ್ನ ಕೈಬಿಡಿಸಿಕೊಳ್ಳುತ್ತಾ, ಅವನ ಉತ್ತರಕ್ಕೋಸ್ಕರ ಕಾಯದೆ ಹಿಂದಿರುಗಿ ಹೊರಟು ಹೋದ ಆ ವ್ಯಕ್ತಿ.

ಜಾನಿವಾಕರ್ ಸರಸರನೆ ನಡೆದು ಹೋಗುತ್ತಿದ್ದ ಅವನ ಕಡೆಯೇ ನೋಡುತ್ತಾ ನಿಂತ. ಕೋಡ್‌ವರ್ಡ್ 'ಲೋಟಸ್!' ಲೋಟಸ್ ! ಅದೇ ಅವನ ಹೆಸರು. ಅದಕ್ಕೆ ಮಿಕ್ಕಿ ಅವನ ಬಗೆಗೆ ತಾನು ತಿಳಿದುಕೊಳ್ಳುವ ಪ್ರಯತ್ನ ಮಾಡಕೂಡದು ಅವನೂ ಅಷ್ಟೇ! ತನಗವನು ಸಹಾಯಕನಾಗಿ ಕೆಲಸ ಮಾಡಬೇಕು! ಹೇಳಿದ ಕೆಲಸ ಮಾಡಬೇಕು! ಅಷ್ಟೇ! ಯಾಕೆ, ಏನೂ ಎಂದು ಪ್ರಶ್ನಿಸಕೂಡದು ತನಗೆ ಅಗತ್ಯವಾದರೆ ಒಂದು ಟೆಲಿಫೋನ್ ನಂಬರ್ ತಿರುಗಿಸಿ, 'ಲೋಟಸ್!' ಎಂದರೆ ಅವನು ಮಾತಾಡುತ್ತಾನೆ. ಇಬ್ಬರೂ ಭೇಟಿಯಾಗಲು ಒಂದು ಸ್ಥಳ ಆರಿಸಿಕೊಳ್ಳುತ್ತಾರೆ ತನಗೆ ಬೇಕಾದ ಸಹಾಯ ಏನೆಂದು ಅವನನ್ನು ಕೇಳುತ್ತಾನೆ, ಅವನು ಮಾಡಿಕೊಡುತ್ತಾನೆ. ಅದನ್ನು ಮೀರಿ ತಮ್ಮಿಬ್ಬರ ನಡುವೆ ಎಂತಹುದೇ ಸಂಬಂಧ ಇರುವುದಿಲ್ಲ, ಇರಕೂಡದು. ಮಿಷನ್ ಮೇಲೆ ಹೊರಡುವ ಮೊದಲು ತಮ್ಮಿಬ್ಬರ ನಡುವೆ ಕುದುರಿದ ವಿಚಿತ್ರವಾದ ಒಪ್ಪಂದವದು. ಕೆಲವು ಕ್ಷಣಗಳು ಅಲ್ಲಿಯೇ ನಿಂತ ಜಾನಿವಾಕರ್ ತಲೆಯಾಡಿಸಿದ ಮದೀನಾದಲ್ಲಿ ಮನೆ ನಂಬರ್ 1112. ತನಗೆ ಬೇಕಾದ ಮಾಹಿತಿ ಸಿಕ್ಕಿತು. ಇನ್ನು ಇಲ್ಲಿ ತನಗೇನೂ ಕೆಲಸವಿಲ್ಲ. ಅವನು ಮತ್ತೊಂದು ಸಲ ಶ್ರೀ ಶ್ರೀಯ ವಿಗ್ರಹದ ಕಡೆ ನೋಡಿ ನೇರವಾಗಿ ಹೋಗಿ ಕಾರಿನ ಬಾಗಿಲು ತೆರೆದು ಡ್ರೈವಿಂಗ್ ಸೀಟಿನಲ್ಲಿ ಕುಳಿತುಕೊಂಡ. ಆ ಮನೆಯ ನಂಬರ್‌ಗೆ ಈಗಲೇ ಹೊರಡಬೇಕೆನಿಸಿತು. ಆದರೆ.... ಈಗಲ್ಲ! ನಾಳೆ! ಲೋಟಸ್ ನಾಳೆ ಅಲ್ಲಿಗೆ ಹೋಗಲು ಹೇಳಿದ್ದಾನಲ್ಲ! ಜಾನಿವಾಕರ್ ಕಾರು ಸ್ಟಾರ್ಟ್ ಮಾಡಿ ತನ್ನ ಅಪಾರ್ಟ್‌ಮೆಂಟ್ ಕಡೆ ಹೊರಟ. ಅಲ್ಲಿಗೆ ತಲುಪಿದ ಮೇಲೆ ಗ್ಯಾರೇಜಿನಲ್ಲಿ ಕಾರನ್ನು ಬಿಟ್ಟು, ಸರಸರನೆ ಒಳ ನಡೆದ. ಒಟ್ಟು ಆರು ಅಂತಸ್ತುಗಳಿರುವ ಹೌಸಿಂಗ್ ಕಾಂಪ್ಲೆಕ್ಸ್ ಅದು. ಮೂರನೇ ಅಂತಸ್ತಿನಲ್ಲಿ ಅವನ ಅಪಾರ್ಟ್‌ಮೆಂಟ್ ಇತ್ತು. ಲಿಫ್ಟ್ ಇದ್ದಿತಾದರೂ ಅವನು ಲಿಫ್ಟ್ ಬಳಸುತ್ತಿರಲಿಲ್ಲ. ಬೂಟನ್ನು ಟಕಟಕವೆನಿಸುತ್ತಾ ಮೆಟ್ಟಲು ಹತ್ತಿ ತನ್ನ ಅಪಾರ್ಟ್‌ಮೆಂಟ್ ತಲುಪಿದ. ಜೇಬಿನಲ್ಲಿದ್ದ ಕೀಲಿಕೈ ತೆಗೆದು, ಬಾಗಿಲು ತೆರೆಯಲಿದ್ದ.

"ಮಿಸ್ಟರ್ ಜಾನಿ!" ಯಾರೋ ಕರೆದರು. ಹಿಂದಕ್ಕೆ ನೋಡಿದ. ತನ್ನ ಎದುರಿನ ಅಪಾರ್ಟ್‌ಮೆಂಟಿನಲ್ಲಿರುವಾತ. ಹೆಸರು ಗುರುಮೂರ್ತಿ. ಅರವತ್ತು

ವರ್ಷ ಇರಬಹುದು. ವಿಚಿತ್ರವಾದ ವ್ಯಕ್ತಿ. ಆತನಿಗೆ ಬ್ರಹ್ಮ ಕಿವುಡು. ಹಿಯರಿಂಗ್ ಏಡ್ ಇತ್ತು. ಯಾವಾಗಲೂ ಜೇಬಿನಲ್ಲಿಟ್ಟುಕೊಂಡು ತಿರು ಗಾಡುತ್ತಿದ್ದ. ಆದರೆ ಕಿವಿಯಲ್ಲಿ ಮಾತ್ರ ಇಟ್ಟುಕೊಳ್ಳುತ್ತಿರಲಿಲ್ಲ. ಇಯರ್ ಪೀಸ್ ವೈರ್‌ನೊಂದಿಗೆ ಹೊರಗೆ ನೇತಾಡುತ್ತಿತ್ತು. ತನ್ನಂತೆಯೇ ಎದುರಿನ ವರಿಗೂ ಕಿವುಡೆಂದುಕೊಳ್ಳುತ್ತಿದ್ದನೇನೋ! ತುಂಬಾ ತಾರಕ ಸ್ವರದಲ್ಲಿ ಮಾತಾ ಡುತ್ತಿದ್ದ.

"ಎಸ್ ಪ್ಲೀಸ್ ?" ಜಾನಿವಾಕರ್ ಜೋರಾಗಿ ಅರಚಿದ. ಗುರುಮೂರ್ತಿ ಅಂಗಿಯ ಜೇಬಿನಿಂದ ಒಂದು ನೀಲಿ ಬಣ್ಣದ ಕವರ್ ಹೊರತೆಗೆದ. "ಇದಕ್ಕೆ ಮುಂಚೆ ಯಾರೋ ಬಂದಿದ್ರು ಜಾನಿ!" ಆತ ಕೂಗಿದ. ಆ ರೀತಿ ಕೂಗಿ ಹೇಳುವುದು ಆತನ ರೂಢಿ. ಆ ಕೂಗಿಗೆ ಜಾನಿವಾಕರ್ ಕಿವಿಗಳು ಗುಂಯ್ಯೆಂದವು. "ಇದನ್ನು ನಿಮಗೆ ಕೊಡೂಂತ ಹೇಳಿದ್ರು !" ಮತ್ತೆ ಕೂಗಿ ಹೇಳಿದನಾತ.

ಜಾನಿವಾಕರ್ ಕಿವಿಯಲ್ಲಿ ಕಿರುಬೆರಳಾಡಿಸಿಕೊಳ್ಳುತ್ತಾ,ಆ ಕವರ್ ತೆಗೆದು ಕೊಂಡು "ಥ್ಯಾಂಕ್ಸ್" ಜೋರಾಗಿ ಕೂಗಿ ಹೇಳಿದ.

"ಬ್ಯಾಂಕಾ! ಬ್ಯಾಂಕ್ ಯಾಕೆ ? ಇಷ್ಟೊತ್ತಿಗೆ ಮುಚ್ಚಿರ್ತಾರೆ!" ಮತ್ತೆ ಜೋರಾಗಿ ನುಡಿದ ಗುರುಮೂರ್ತಿ. ಜಾನಿವಾಕರ್ ಮತ್ತೊಂದು ಸಲ ಮುಖ ಕಿವಿಚಿಕೊಳ್ಳುತ್ತಾ, ಕಿವಿಯಲ್ಲಿ ಕಿರು ಬೆರಳಾಡಿಸಿಕೊಂಡು, ಆತನ ಜೇಬಿನಿಂದ ನೇತಾಡುತ್ತಿದ್ದ ಇಯರ್‌ಪೀಸ್ ಅನ್ನು ತೆಗೆದು ಆತನ ಕಿವಿಗೆ ತುಕ್ಕಿದ.

"ಥ್ಯಾಂಕ್ಸ್ !"

"ಓಹೋ ಥ್ಯಾಂಕ್ಸಾ" ಇಯರ್‌ಪೀಸ್ ಸರಿಪಡಿಸಿಕೊಳ್ಳುತ್ತಾ ನಕ್ಕ ಗುರುಮೂರ್ತಿ. "ಥ್ಯಾಂಕ್ಸ್ ಥ್ಯಾಂಕ್ಸ್! ಹಿಯರಿಂಗ್ ಏಡ್ ಇಟ್ಟುಕೊಳ್ಳುವು ದನ್ನು ಮರೀತೀರ್ತೀನಿ. ಏನೋ ಈ ವಯಸ್ನಲ್ಲಿ ಯಾವುದೂ ನೆನಪಿರೋದಿಲ್ಲ! ನನ್ನ ಹೆಂಡತಿ ಕೂಡ ಒಂದೊಂದ್ಸಲ ನೆನಪಿರೋದಿಲ್ಲ". ಜಾನಿವಾಕರ್ ಮುಗು ಳ್ನಕ್ಕು ಬಾಗಿಲು ತಳ್ಳಿಕೊಂಡು ಅಪಾರ್ಟ್‌ಮೆಂಟ್ ಒಳಗೆ ಪ್ರವೇಶಿಸಿದ. ಆತ ನೊಂದಿಗೆ ಹೆಚ್ಚು ಮಾತಿಗಿಳಿದರೆ ಬಿಡುವುದಿಲ್ಲ-ಜಿಡ್ಡು !

ಜಾನಿವಾಕರ್ ಬಾಗಿಲು ಲಾಕ್ ಮಾಡಿ ಸೋಫಾದಲ್ಲಿ ಕುಳಿತು, ನೀಲಿ ಕವರ್ ಕಡೆ ಒಂದು ಸಲ ಕಣ್ಣಾರಳಿಸಿ ನೋಡಿದ. ನೋಡಿದೊಡನೆಯೇ ಆ ಕವರ್ ಏನೆಂದು ಅವನು ಗ್ರಹಿಸಿದ. ನೀಲಿ ಕವರ್ ಕಪ್ಪು ರಹಸ್ಯದ ಚಿಹ್ನೆ! ಓದಿದ ತಕ್ಷಣವೇ ಪತ್ರವನ್ನು ನಾಶ ಮಾಡಬೇಕೆಂದು ಆ ಬಣ್ಣ ಎಚ್ಚರಿಸುತ್ತದೆ. ಕವರ್ ನಿಂದ ಕಾಗದವನ್ನು ಹೊರತೆಗೆದ. ಅದರಲ್ಲಿ ಹೀಗಿತ್ತು— "ಡಿಯರ್

ಮಿಸ್ಟರ್ ಜಾನಿವಾಕರ್, ಜೇಬಿನಲ್ಲಿ ಕೇವಲ ಯಾವುದೋ ವಿಷಯ ಮಾತ್ರ
ನಗುತ್ತಾ ದಡದ ಲ್ಲಿಷ್ಟರ್ ಸಿಕ್ಕು ಐಸ್ ಎತ್ತಿ ಆರಿಸಿ ಜೆಂಟ್ಸ್ ಟರ್ಕಿ ಸ್ಕ್ಯಾಚ್
ಟಂಗ್ ನವ ನ್ನಮಗೆ ಯಾಕೋ ರೋಧಿಸುತ್ತಾ ಕೊಂಚ ದಿಗಿಲಿನಿಂದದ್ದಾಟಿ
ರೆವರೆಂಡ್, ಮೇನಲ್ಲಿ ಖನಿಜದ ಲಿಟು ಎಲ್ಲಾನ್ನುನೆ ವರ್ಣಕ್ಕೆ ಯುದ್ಧ ವರ್ಗಕ್ಕೆ
ತಿರುಗಿ ನೀರು ನಿಲ್ಲಿಸಿ ರುದ್ರ ವರಸೆಯಲ್ಲಿ ಭಯಂಕರವಾಗಿ ವರ್ಣಿಸಿ ನರ್ತಿಸಿ
ದಣಿದು ಲ್ಲಿಲಿ ಯೇಲಿ ಇವನು ರುಮಾಲು ತ್ತಾ ತಾ ಳಂಬ. ಅದು ವತ್ತಾಸೆ
ಯಾಗಿ ಳೇಖಿಸಿದ ನಟ ಮಹಾನ್ ಗೆರಿಲ್ಲಾ ಬೇಕೆಂದು ಕಾದಾಡಿ ದಣಿದ
ಯುವನ ವರ್ಗದ ತಿಪ್ಪರಲಾಗ.

ಯುವರ್ಸ್ ಎಟರ್ನಲೀ
ಫೂಲ್"

ಆ ತಲೆ ಬುಡವಿಲ್ಲದ ಅರ್ಥಹೀನ ಪತ್ರವನ್ನು ಜಾನಿವಾಕರ್ ಎರಡು-ಮೂರು ಸಲ ಓದಿದ. ಅದು ಕೋಡ್‌ನಲ್ಲಿ ಬರೆದ ಪತ್ರ. ತುಂಬಾ ಸಿಂಪಲ್ ಕೋಡ್. ಜಾನಿವಾಕರ್ ಜೇಬಿನಿಂದ ಪೆನ್ ತೆಗೆದು ಆ ಪತ್ರದಲ್ಲಿನ ಕೆಲವು ಅಕ್ಷರಗಳಿಗೆ ಗೆರೆ ಎಳೆಯತೊಡಗಿದ. "ಡಿಯರ್ ಮಿಸ್ಟರ್ ಜಾನಿವಾಕರ್" ಎನ್ನುವ ವಾಕ್ಯಕ್ಕೂ 'ಯುವರ್ಸ್ ಎಟರ್ನಲೀ ಫೂಲ್' ಎನ್ನುವ ವಾಕ್ಯಕ್ಕೂ ಆ ಪತ್ರದಲ್ಲಿ ಯಾವುದೇ ವೈಶಿಷ್ಟ್ಯವಿರಲಿಲ್ಲ. ಒಳಗಿನ ವಾಕ್ಯಗಳಲ್ಲಿ ಮಾತ್ರ ಪ್ರತಿ ಪದದ ಮೊದಲನೇ ಅಕ್ಷರವನ್ನು ಅಂಡರ್‌ಲೈನ್ ಮಾಡುತ್ತಾ ಹೋದ. ಆ ರೀತಿ ಮಾಡಿ ಸಂದೇಶವನ್ನು ಡೀಕೋಡ್ ಮಾಡಿದಾಗ ಅದು ಹೀಗಿತ್ತು. "ಜೇಕೇಯು ವಿಮಾನದಲ್ಲಿ ಸಿ.ಐ.ಎ. ಏಜೆಂಟು ಸ್ಕಾಟ್‌ನನ್ನು ಯಾರೋ ಕೊಂದಿದ್ದಾರೆ. ಮೇಖಲೆ ಎನ್ನುವ ಯುವತಿ ನೀನಿರುವ ಭವನದಲ್ಲಿಯೇ ಇರುತ್ತಾಳೆ. ಅವಳೇ ನಮಗೆ ಬೇಕಾದ ಯುವತಿ".

ಜಾನಿವಾಕರ್ ತಾನು ಡೀಕೋಡ್ ಮಾಡಿದ ಸಂದೇಶದ ಕಡೆಯೇ ಕಣ್ಣರಳಿಸಿ ನೋಡುತ್ತಿದ್ದುಬಿಟ್ಟ.

ವಿಷಾದ........ ಹೃದಯದಿಂದ ಉಕ್ಕಿ, ಕಣ್ಣುಗಳಿಂದ ಜಲಪಾತದಂತೆ ಕೆಳಗೆ ಧುಮುಕುತ್ತಿತ್ತು. ಅವನು ವಿಷಾದದ ಕಪಿಮುಷ್ಟಿಗೆ ಸಿಕ್ಕಿಬಿದ್ದಿದ್ದ. ಮೊಣಕಾಲಿನಲ್ಲಿ ಮುಖ ಅಡಗಿಸಿಕೊಂಡು ತನ್ನಲ್ಲಿ ತಾನೇ ಕೊರಗುತ್ತಾ ಅಳು ತ್ತಿದ್ದ. ವಿಷಾದ ಮನುಷ್ಯನನ್ನು ಕುಗ್ಗಿಸಿ, ಇಡಿಯಷ್ಟಾಗಿ ಮಾಡುತ್ತದೆ.

ಅಳುತ್ತಿದ್ದ ಅವನು ತಟಕ್ಕನೆ ಎದ್ದುನಿಂತ. ವಿಷಾದ ಅವನನ್ನು ಸುಡುತ್ತಿತ್ತು. ಗುಡ್ಡದ ಅಂಚಿಗೆ ಅವನು ನಿಂತಿದ್ದ. ಒಂದು ಸಲ ತಲೆ ಮೇಲೆತ್ತಿ ಆಕಾಶದ ಕಡೆ ನೋಡಿದ. ಅವನಿಗೆ ದೇವರು ಕಾಣಿಸಲಿಲ್ಲ. ಕಾಣಿಸಿದ್ದರೆ ಕೊರಳ ಪಟ್ಟಿ ಹಿಡಿದು ಕೇಳಿರುತ್ತಿದ್ದ. ತಲೆಬಾಗಿಸಿ ಕೆಳಗೆ ನೋಡಿದ. ಮೃತ್ಯುದೇವತೆ ಮುಗುಳ್ನಗುತ್ತಾ ಅವನನ್ನು ಆಹ್ವಾನಿಸುತ್ತಿದ್ದಳು. ಕಣ್ಣು ಮುಚ್ಚಿ ಒಂದು ಸಲ ತಾಯಿಯನ್ನು ಜ್ಞಾಪಿಸಿಕೊಂಡ. ಅಮ್ಮಾ ಯಾಕೆ ನನ್ನನ್ನು ಹೆತ್ತೆ ? ಈ ನಿರ್ಭಾಗ್ಯನನ್ನು, ಈ ದರಿದ್ರನನ್ನು, ಈ ನಿಸ್ಸಹಾಯಕನನ್ನು, ಈ ಅಸಮರ್ಥನನ್ನು ಯಾಕಮ್ಮಾ ಹೆತ್ತೆ ? ಕಾಲು ನಡುಗುವ ಮುಪ್ಪಿನಲ್ಲಿ ನಿನಗೆ ನಾನು ಜೊತೆಯಾಗಿ ಬರಲಾರೆ! ಕನಿಷ್ಟ ಹೊಟ್ಟೆ ತುಂಬಾ ಒಂದು ಹೊತ್ತಾದರೂ ನಿನಗೆ ಊಟ ಹಾಕಲಾರೆ. ನಿನ್ನ ಋಣ ತೀರಿಸದೆಯೇ ನಾನು ಹೊರಟು ಹೋಗ್ತಿದೀನಮ್ಮಾ, ನನ್ನನ್ನು ಕ್ಷಮಿಸು! ಕಣ್ಣು ತೆರೆದು ಮತ್ತೊಂದು ಸಲ ಕೆಳಗೆ ನೋಡಿದ. ಮೃತ್ಯುದೇವತೆ ಇನ್ನೂ ಅವನನ್ನು ಆಹ್ವಾನಿಸುತ್ತಿದ್ದಳು. ಎದೆ ತುಂಬಾ ಉಸಿರೆಳೆದುಕೊಂಡ. ಒಂದು ಹೆಜ್ಜೆ ಮುಂದಿಟ್ಟ. ಇನ್ನೇನು ಹಾರಲಿದ್ದ. ಮತ್ತೊಂದು ಕ್ಷಣದಲ್ಲಿ ಈ ಪ್ರಪಂಚದಿಂದ ದೂರವಾಗಲಿದ್ದ.

ಆದರೆ ಹಾಗಾಗಲಿಲ್ಲ! ಯಾರದೋ ಕೈ ಅವನ ಭುಜದ ಮೇಲೆ ಬಿತ್ತು. ಅವನ ಕೈ ಹಿಡಿದುಕೊಂಡು ಹಿಂದಕ್ಕೆಳೆಯಿತು. ಯಾರದೋ ಕೈ ಅವನ ಕೆನ್ನೆ ಚುರ್ರೆನಿಸಿತು. ಅವನನ್ನು ನೆಲದ ಮೇಲೆ ಅಂಗಾತನಾಗಿ ತಳ್ಳಿತು. ಅವನು ದಿಗ್ಭ್ರಾಂತನಾಗಿ ತಲೆ ಮೇಲೆತ್ತಿ ನೋಡಿದ. ಯಾರೋ ಯುವತಿ! ತುಂಬಾ ಸುಂದರವಾಗಿದ್ದಳು! ಹೃದಯ ಸೀಳುವಂತಹ ಸೌಂದರ್ಯ ಅವಳದು. ಆದರೆ ಅವನಿಗೆ ಕಾಣಿಸಿದ್ದು ಅವಳ ಸೌಂದರ್ಯವಲ್ಲ. ಸೀಳಿ ಹಾಕುವಂತೆ ತೀಕ್ಷ್ಣವಾಗಿದ್ದ ಅವಳ ನೋಟ. ಆ ನೋಟವನ್ನು ನೋಡಿ ಅವನು ಹೆದರಿದ. ಆ ವಿಶಾಲ ನೇತ್ರಗಳೊಳಕ್ಕೆ ನೇರವಾಗಿ ನೋಡಲಾಗದೆ ತಲೆ ಬಾಗಿಸಿದ. ಅವಳು ಅವನ ಪಕ್ಕದಲ್ಲಿ ಬಂದು ಕುಳಿತುಕೊಂಡು ಅವನ ಅಂಗಿಯ ಕಾಲರ್ ಹಿಡಿದು ಬಲವಂತದಿಂದ ತನ್ನ ಕಡೆ ತಿರುಗಿಸಿದಳು. ಅವನು ತತ್ತರಿಸಿ ಅವಳ ಕಡೆ ನೋಡಿದ.

"ಯಾಕೆ ಸಾಯ್ಬೇಕು ಅಂದ್ಕೊಂಡಿದೀಯ ?" ಆ ನೋಟವನ್ನು ತಾಳಿಕೊಳ್ಳಲಾಗದೆ ಅವನು ಮತ್ತೆ ತಲೆ ಬಾಗಿಸಿದ. ಅವಳು ಬಿಡಲಿಲ್ಲ. "ಯಾಕೆ, ಯಾಕೆ ಸಾಯ್ಬೇಕೂಂತ ಅಂದ್ಕೊಂಡೆ ? ಸಾಯಬೇಕೆಂದುಕೊಳ್ಳುವಂತಹ ಕಷ್ಟ ಏನು ಬಂದಿದೆ?"

"ನನ್ನನ್ನ.... ನನ್ನನ್ನೇನೂ ಕೇಳ್ಬೇಡಿ!" ಅವನು ಗೊಣಗಿದ.

ಗ್ರಂಥ ಸ್ವಾಮ್ಯ
ರಾಜ್ಯ ಕೇಂದ್ರ ಗ್ರಂಥಾಲಯ,
ಬೆಂಗಳೂರು.



"ನನ್ನ ಕಣ್ಣಲ್ಲಿ ಸರಿಯಾಗಿ ನೋಡು!" ಆಜ್ಞಾಪಿಸಿದಳು. ಅವನು ತಲೆ ಮೇಲೆತ್ತಿ ಭಯದಿಂದ ನೋಡಿದ.

"ಈಗ ಹೇಳು! ಯಾಕೆ ಸಾಯಬೇಕೆಂದಿದ್ದೀಯಾ ?" ಈ ಸಲ ಅವಳ ಕಣ್ಣುಗಳಲ್ಲಿ ತೀಕ್ಷ್ಣತೆಯಿರಲಿಲ್ಲ. ಅವಳ ಧ್ವನಿಯಲ್ಲಿ ಅಧಿಕಾರವಿರಲಿಲ್ಲ. ಮರುಕ! ಆಪ್ಯಾಯತೆ, ಕರುಣೆ, ದಯೆ, ಮಾನವತೆಯ ಮೂರ್ತೀಭವಿಸಿದ ಮಹಾವ್ಯಕ್ತಿಯಂತೆ ಅವಳು ಕಾಣಿಸಿದಳು. 49307CR

ಅವನು ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡ. "ನನ್ನೇನೂ ಕೇಳ್ಬೇಡಿ........ ದಯವಿಟ್ಟು ನನ್ನೇನೂ ಕೇಳ್ಬೇಡಿ!"

"ಕೇಳ್ತೀನಿ........ ಖಂಡಿತ ಕೇಳ್ತೀನಿ. ನೀನಿನ್ನೂ ಯುವಕ ತುಂಬಾ ಓದಿರೋ ಹಾಗೆ ಕಾಣ್ತಿದೀಯ, ನಿನಗೆಂತಹ ಕಷ್ಟ ?"

ಅವನು ಮುಖ ಎತ್ತಿ ಕರುಣಾಜನಕವಾಗಿ ನೋಡಿದ. "ಅದೇ ಚೆನ್ನಾಗಿ ಓದಿದ್ದೇ ನನ್ನನ್ನು ಈ ಸ್ಥಿತಿಗೆ ತಂದಿದೆ. ನಮ್ಮ ತಾಯಿ ನನ್ನನ್ನು ಕಾಲೇಜಿಗೆ ಕಳುಹಿಸದೆ, ಆಟೋ ಗ್ಯಾರೇಜಿಗಾದರೂ ಕಳುಹಿಸಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ". 894.814 3 KAT N31

"ಅರ್ಥವಾಯ್ತು! ತುಂಬಾ ಓದಿದ್ದರೂ ನಿನಗೆ ಕೆಲಸ ಸಿಕ್ಕಿಲ್ಲ. ಬದುಕು ಸಾಗಿಸುವುದೇ ನಿನಗೆ ಕಷ್ಟವಾಗಿದೆ. ಅದಕ್ಕೇ ಸಾಯಬೇಕೆಂದುಕೊಂಡಿದೀಯ!"

"ನಿಮಗೆ.... ನಿಮಗೆ ಹೇಗೆ ಗೊತ್ತು ?" ಅವಳು ಶುಷ್ಕ ನಗೆ ಬೀರಿದಳು. "ಇದರಲ್ಲಿ ತಿಳಿದುಕೊಳ್ಳೋದು ಏನಿದೆ ? ಈ ದೇಶದಲ್ಲಿ ನಿನ್ನಂತಹ ವಿದ್ಯಾವಂತರು ಶೇಕಡಾ ತೊಂಬತ್ತರಷ್ಟು ಜನ ನಿನ್ನಂತೆಯೇ ನೋವನುಭವಿಸುತ್ತಿದ್ದಾರೆ. ಆದರೆ ಒಳ್ಳೆ ವಯಸ್ಸಿನಲ್ಲಿದೀಯ, ಕೈ-ಕಾಲು ಗಟ್ಟಿಯಾಗಿವೆ, ರಿಕ್ಷಾ ಎಳೆದಾದರೂ ಹೊಟ್ಟೆ ಹೊರೆದುಕೊಳ್ಳಬಹುದಲ್ಲ ? ಇಷ್ಟಕ್ಕೂ ನಿನ್ನ ಹೆಸರೇನು ?"

"ಆ ಕೆಲಸ ಮಾಡಿದ್ದರೂ ಚೆನ್ನಾಗಿರುತ್ತಿತ್ತು. ಆದರೆ ನಮ್ಮ ಸಮಸ್ಯೆ ರಿಕ್ಷಾ ಎಳೆದರೆ ಬಗೆಹರಿಯುವಂತಹುದಲ್ಲ! ನನ್ನ ಹೆಸರು ಆಶಾರಾಜ!"

"ನಿನ್ನ ಸಮಸ್ಯೆ ಏನು ?"

"ಒಬ್ಬ ನನಗೆ ಕೆಲಸ ಕೊಡಿಸುತ್ತೇನೆಂದು ಆಸೆ ತೋರಿಸಿದ. ಹತ್ತು ಸಾವಿರ ಕೊಟ್ಟರೆ ಆ ಕೆಲಸ ನಿನ್ನದೇ ಎಂದ. ಆಸೆಪಟ್ಟೆ. ದುಡ್ಡಿರುವ ನನ್ನ ಸ್ನೇಹಿತನ ಹತ್ತಿರ ಹತ್ತು ಸಾವಿರ ಸಾಲ ಕೇಳಿ ಒಯ್ದು ಅವನಿಗೆ ಕೊಟ್ಟೆ. ಕೆಲಸವೂ ಸಿಗಲಿಲ್ಲ, ದುಡ್ಡೂ ಕೈಗೆ ಬರಲಿಲ್ಲ.ಸಾಲ ತೀರಿಸುವ ದಾರಿಯೂ ಇಲ್ಲ. ನನ್ನ ಸ್ನೇಹಿತ ಈಗ ನನ್ನನ್ನೊಬ್ಬ ಮೋಸಗಾರನಂತೆ ನೋಡುತ್ತಿದ್ದಾನೆ".

"ಓಹೋ! ಜೀವನದಲ್ಲಿ ವಿರಕ್ತಿಯುಂಟಾಗಿ ಸಾಯಬೇಕೆಂದುಕೊಂಡಿದ್ದೀ ಏನು !" ಅಷ್ಟೇ ತಾನೆ ? ಆಶಾರಾಜ ಅಂತ ಹೆಸರಿಟ್ಟುಕೊಂಡು ನಿರಾಶೆಯಿಂದ ಕುಗ್ಗಿದ್ದೀಯಾ ?"

"ನನಗೆ ಬೇರೆ ದಾರಿ ಕಾಣಿಸುತ್ತಿಲ್ಲ!"

"ಲಂಚ ತಗೆದುಕೊಂಡ ಆ ದೊಡ್ಡ ಮನುಷ್ಯನ್ನ ಹಿಡಿದು ಕೇಳ್ಲಿಲ್ವಾ ?"

"ಏನೂಂತ ಕೇಳ್ಲಿ ? ಅವನು ತುಂಬಾ ದೊಡ್ಡ ಸ್ಥಾನದಲ್ಲಿದಾನೆ. ನಾನು ಅವನನ್ನು ಕಣ್ಣೆತ್ತಿಯೂ ನೋಡಲಾರೆ."

"ಛಿಸೀ! ಕೈಲಾಗದವನೆಂದಾಯ್ತು! ನಾನಾಗಿದ್ರೆ ಏನು ಮಾಡ್ತಿದ್ದೆ ಗೊತ್ತಾ ? ಆ ಮೇಲಿರೋನನ್ನ ಕೆಳಗೆಳೆದು ಕೊಂದುಹಾಕ್ತಿದ್ದೆ".

"ಆ ಕೆಲಸ ಮಾಡುವ ಮೊದಲು ಅವನೇ ನನ್ನನ್ನು ಗೇಟಿನಿಂದ ಹೊರ ತಳ್ಳುತ್ತಿದ್ದ".

ಅವಳು ಅವನ ಮುಖವನ್ನು ದಿಟ್ಟಿಸಿ ನೋಡಿದಳು. "ಪ್ರತಿ ಕೆಲಸಕ್ಕೂ ಒಂದು ಪದ್ಧತಿ ಇರುತ್ತದೆ. ನೀನು ಆ ಕೆಲಸ ಮಾಡೋದಿಲ್ಲಾಂತೀಯ ಸರಿ. ನಾನು ಹೇಳಿದಂತೆ ನೀನು ಮಾಡು. ನಿನಗೆ ಕ್ಷಣಗಳಲ್ಲಿ ಕೆಲಸಸಿಗುವಂತೆ ನಾನು ಮಾಡ್ತೀನಿ!"

ಅವನ ಕಣ್ಣುಗಳಲ್ಲಿ ಆಸೆ ಮೂಡಿತು. "ಏನು ಮಾಡಬೇಕು?" ಕೇಳಿದ.

"ಇಲ್ಲಿಂದ ಎದ್ದು ನೇರವಾಗಿ ಮನೆಗೆ ಹೋಗು. ನಿನ್ನನ್ನು ಮೋಸಗೊಳಿಸಿದವನ ಅಡ್ರೆಸ್ ನನಗೆ ಕೊಡು. ಅಷ್ಟೇ ನೀನು ಮಾಡಬೇಕಾಗಿರೋದು. ಬೆಳಗಾಗುವುದರೊಳಗೆ ಅಪಾಯಿಂಟ್‌ಮೆಂಟ್ ಆರ್ಡರ್ ನಿನ್ನ ಕೈಗೆ ಬರುತ್ತದೆ"

ಅವನ ಕಣ್ಣುಗಳಲ್ಲಿ ಅನುಮಾನ ಗೋಚರಿಸಿತು. "ನೀವು........ ನೀವು ನನ್ನನ್ನು ರಮಿಸಲು ನೋಡ್ತಿದೀರಿ".

ಅವಳು ತಲೆ ಅಡ್ಡವಾಗಿ ಆಡಿಸಿದಳು. "ಇಲ್ಲ, ನಿಜವಾಗ್ಲೂ ಹೇಳ್ತಿದೀನಿ. ಸಾಯಬೇಕು ಅನ್ನೋದು ಹೇಡಿತನ. ಧೈರ್ಯವಾಗಿರು. ನಿನಗೆ ಕೆಲಸಾನೂ ಸಿಗುತ್ತೆ, ನಿನ್ನ ಸಾಲಾನೂ ತೀರಿಸ್ತೀಯಾ! ಏಳು, ಅಡ್ರೆಸ್ ಕೊಟ್ಟು ಮನೆಗೆ ಹೋಗು".

"ನಿಮ್ಮ ಮಾತು ನಂಬಬೇಕೆನಿಸುತ್ತದೆ. ಆದರೆ...."

"ಸಾಯುವುದರಿಂದ ನಿಮ್ಮವರನ್ನು ನಿರಾಶ್ರಿತರನ್ನಾಗಿ ಮಾಡುವುದರ ಹೊರತು ನೀನು ಸಾಧಿಸುವುದೇನೂ ಇಲ್ಲ. ನಾನು ಹೇಳುವ ಮಾತು ಕೇಳುವುದರಲ್ಲಿ ಪ್ರಯೋಜನವಿದೆ. ಎದ್ದೇಳು, ಈ ಡೈರಿಯಲ್ಲಿ ಆ ಅಡ್ರೆಸ್ ಬರೆ" ಒಂದು ಪ್ಯಾಕೆಟ್ ಡೈರಿ,ಬಾಲ್‌ಪೆನ್ ಅನ್ನು ಹ್ಯಾಂಡ್‌ಬ್ಯಾಗ್‌ನಿಂದ ತೆಗೆದುಕೊಟ್ಟಳು. ಅವನು ಕೆಲವು ಕ್ಷಣ ಅವಳ ಮುಖವನ್ನು ದಿಟ್ಟಿಸಿನೋಡಿ ತಲೆಯಾಡಿಸಿದ.

"ನಿಮ್ಮ ಮಾತು ನಂಬ್ತೀನಿ!"

"ಹಾಗಿದ್ರೆ ಇದರಲ್ಲಿ ಅಡ್ರೆಸ್ ಬರೆ".

ಅವನು ಡೈರಿಯಲ್ಲಿ ಅಡ್ರೆಸ್ ಬರೆದ.ಅವಳು ಎದ್ದುನಿಂತು ಕೈ ನೀಡಿದಳು. ಅವನು ತಡವರಿಸುತ್ತಾ ಅವಳ ಕೈ ಹಿಡಿದುಕೊಂಡು ಎದ್ದು ನಿಂತ.

"ಗುಡ್! ಇನ್ನು ನೇರವಾಗಿ ಮನೆಗೆ ಹೋಗು". ಅವಳು ಹಿಂದಿರುಗಿ ಹೋಗಲುದ್ಯುಕ್ತಳಾದಳು.

"ಸಿಸ್ಟರ್!" ಎಂದ ಆಶಾರಾಜ. ಆ ಕೂಗು ಕೇಳುತ್ತಲೇ ಥಟ್ಟನೆ ನಿಂತು, ಸರಕ್ಕನೆ ಅವನ ಕಡೆ ತಿರುಗಿದಳು. "ನೀನು ಏನಂತ ಕರೆದೆ ?" ಅವಳ ಧ್ವನಿಯಲ್ಲಿನ ಕಾಠಿಣ್ಯಕ್ಕೆ ಅವನು ಬೆರಗಾದ. ಆ ಕರೆ ಕೇಳುತ್ತಲೇ ಪೆಟ್ಟುತಿಂದ ಕಾಳಸರ್ಪದಂತೆ ಕೆರಳಿದಳವಳು "ಹೇಳು, ನನ್ನನ್ನು ಏನಂತ ಕರೆದೆ?" ಹತಾತ್ತನೆ ಕಿರುಚಿದಳು.

"ಸಿಸ್ಟರ್...."

"ಸ್ಟಾಪಿಟ್! ಆ ಹೆಸರಿನಿಂದ ನನ್ನನ್ನು ಕರೀಬೇಡ! ಐ ಹೇಟ್ ಇಟ್!" ಅವನು ಕಣ್ಣರಳಿಸಿ ನೋಡಿದ. ಅವಳು ಸರಸರನೆ ಅವನ ಎದುರಿಗೆ ಬಂದು ನಿಂತು ಸೆರಗನ್ನು ಎಳೆದು ಹಾಕಿದಳು. ಆವೇಶದಿಂದ ಸರಸರನೆ ಜಾಕೆಟ್‌ನ ಬಟನ್‌ಗಳನ್ನು ಬಿಚ್ಚಿ, ಬ್ರಾ ಕಳಚಿದಳು. ಪರಿಪೂರ್ಣ ಯೌವನದಿಂದ ಹೊಳೆಯುತ್ತಿದ್ದ ಅವಳ ಸ್ತನಗಳು ಜೋಡಿ ಕುದುರೆಗಳಂತೆ ಮುಂದಕ್ಕೆ ಧುಮುಕಿದವು. ಅವನಿಗೆ ಷಾಕ್ ಹೊಡೆದಂತಾಯ್ತು. ಕಣ್ಣರಳಿಸಿ ಹುಚ್ಚನಂತೆ ನೋಡಿದ.

"ಹಿಡ್ಕೋ ಅವನ್ನ!"

"ಸಿಸ್ಟರ್".

ಅವನ ಎರಡೂ ಕೆನ್ನೆಗಳು ಚುರ್ರೆಂದವು. "ಐ ಸೇ ಹೋಲ್ಡ್ ದೆಮ್!" ಬಲವಂತವಾಗಿ ಅವನ ಕೈ ಎಳೆದುಕೊಂಡು ಅವುಗಳ ಮೇಲಿಟ್ಟುಕೊಂಡಳು. "ನಿಮ್ಮ ಗಂಡು ಜಾತಿಗೆ ಬೇಕಿರೋದು ಈ ಮಾಂಸದ ಮುದ್ದೆಗಳು ತಾನೇ! ಹಿಡ್ಕೋ........"

ಅವನು ಭಯದಿಂದ ನಡುಗಿದ. ಕೆಲವು ಕ್ಷಣಗಳ ಹಿಂದೆಯಷ್ಟೇ ಕಾರುಣ್ಯಮೂರ್ತಿಯಾಗಿ ಅವನ ಮುಂದೆ ಆವಿಷ್ಕಾರಗೊಂಡ ಅವಳ ರೂಪ ಈಗ ಶರಾಘಾತದಿಂದ ಕೆರಳಿ ಮೇಲೆ ಬೀಳಲಿರುವ ಸಿಂಹಿಣಿಯಂತೆ ಕಾಣಿಸಿತು.

"ಯೂ ಈಡಿಯಟ್! ಏನು ಹಾಗೆ ನೋಡ್ತಿದೀಯಾ ? ಈ ಲೋಕದಲ್ಲಿ ಗಂಡಸರಿಗೆ ಹೆಣ್ಣೆಂದರೆ ಭೋಗದ ವಸ್ತು. ತಾಯಿ, ತಂಗಿ, ಅಕ್ಕ, ಹೆಂಡತಿ ಎಲ್ಲಾ ನೀವು ಇಷ್ಟಾನುಸಾರ ಇಟ್ಟುಕೊಂಡ ಹೆಸರುಗಳು. ಹೆಣ್ಣು ಹೆಣ್ಣಾಗಿ ನಿಮ್ಮ

ಮುಂದೆ ಬಂದರೆ ಭೋಗದ ವಸ್ತುವಾಗಿ ಹೊರತು ಬೇರೆ ರೀತಿ ನೋಡಲಾರಿರಿ. ಯಾಕೆ ಹಾಗೆ ನಡುಗ್ತಿದೀಯಾ ? ಕಮಾನ್! ನಾನೇ ಕೊಡ್ತಿದೀನಿ ಬಾ!"

ಅವನ ಕೈಗಳು ಶಕ್ತಿಹೀನವಾಗಿ ಅವಳ ಸ್ತನಗಳ ಮೇಲಿನಿಂದ ಜಾರಿದವು. ಕಾಲುಗಳ ಶಕ್ತಿ ಉಡುಗಿದವನಂತೆ ಅವಳ ಮುಂದೆ ಮೊಣಕಾಲುಗಳ ಮೇಲೆ ಕುಸಿದು ಕುಳಿತ. ಅವಳು ಅವನ ಕೂದಲು ಹಿಡಿದು ಬಲವಂತವಾಗಿ ಹಿಂದೆ ಬಾಗಿಸಿದಳು. "ಯಾಕೆ ನಾನು ಹೇಳ್ತಿರೋದು ಕೇಳ್ತಿದ್ರೆ ನಡುಕ ಹುಟ್ತಿದೆಯಾ ? ಇನ್ನೂ ಹೇಳ್ತೀನಿ ಕೇಳು. ನಿಮ್ಮ ಗಂಡು ಜಾತಿ ಈ ಹೆಣ್ಣಿನ ಮಾಂಸದೊಳಗಿಂದಲೇ ಹುಟ್ಟುತ್ತದೆ. ಈ ಹೆಣ್ಣಿನ ಮಾಂಸದಲ್ಲಿಯೇ ಒಂಬತ್ತು ತಿಂಗಳು ಬೆಳೆಯುತ್ತದೆ. ಈ ಹೆಣ್ಣಿನ ಮಾಂಸದೊಂದಿಗೇ ಮಲಗಬೇಕೆಂದು ಕೊಳ್ಳುತ್ತದೆ. ಈ ಹೆಣ್ಣಿನ ಮಾಂಸವನ್ನೇ ನಲುಗಿಸಿ ಆನಂದಿಸಬೇಕೆಂದು ಕೊಳ್ಳುತ್ತದೆ. ಈ ಹೆಣ್ಣಿನ ಮಾಂಸವನ್ನೇ ತಲೆ ಹಿಡಿದು ಕೆಲಸ ಸಾಧಿಸಿ ಕೊಳ್ಳಬೇಕೆಂದುಕೊಳ್ಳುತ್ತದೆ. ನಾಚಿಕೆ,ಹೇಸಿಕೆ ಕೊಂಚವೂ ಇಲ್ಲದ ಜಾತಿಯೋ ನಿಮ್ಮದು!"

ಅವನು ನಿಬ್ಬೆರಗಾಗಿ ನೋಡುತ್ತಿದ್ದ.

ಅವಳು ಆವೇಶದಿಂದ ಕೆರಳಿದಳು. "ಏನಂದೆ ನೀನು, ಸಿಸ್ಟರ್ ಅಂತಾನಾ? ಯಾರು ನಿನಗೆ ಸಿಸ್ಟರ್ ? ನಿಮ್ಮ ಗಂಡು ಜಾತಿಗೆ ಯಾರು ಸಿಸ್ಟರ್ ? ಯಾರು ಮದರ್ ? ಮಗಳ ವಯಸ್ಸಿನ ಹೆಣ್ಣು ಎದುರಿಗೆ ನಗ್ನವಾಗಿ ಬಂದರೆ ನೋಡಿ ಆನಂದಿಸಬೇಕೆನ್ನುವ ಗುಳ್ಳೆ ನರಿಗಳು ನೀವು! ಹಾಲುಗೆನ್ನೆಗಳನ್ನು ಕಚ್ಚ ಬೇಕೆನ್ನುವ ಕಿರಾತಕರು ನೀವು ? ಉಕ್ಕಿಬಂದ ಪಯೋಧರಗಳನ್ನು ಹಿಂಡ ಬೇಕೆನ್ನುವ ಕಾಮಪಿಶಾಚಿಗಳು ನೀವು!" ಅವನ ಕಣ್ಣುಗಳು ಆಶ್ಚರ್ಯದಿಂದ ಅರಳುತ್ತಿದ್ದವು. ಯಾರಿವಳು ? ಅವಳ ನೋಟದ ಜ್ವಾಲೆಯಲ್ಲಿ ಸಿಕ್ಕಿ ಬಿದ್ದರೆ ಗಂಡು ಜಾತಿ ಬದುಕುಳಿಯುವುದೇ? ಅವಳು ಹೇಳುವುದನ್ನು ನಿಲ್ಲಿಸಲಿಲ್ಲ.

"ನಿನ್ನೊಬ್ಬನನ್ನೇ ಬೆರಳೆತ್ತಿ ತೋರಿಸ್ತಿದೀನಿ ಅಂತ ಅಂದ್ಕೋಬೇಡ. ನಾನು ಇಡೀ ಗಂಡು ಜಾತಿಯನ್ನೇ ಅಪರಾಧಿ ಸ್ಥಾನದಲ್ಲಿಟ್ಟು ಹೇಳ್ತಿದೀನಿ. ನಿಮ್ಮ ಇಡೀ ಗಂಡು ಜಾತಿಯನ್ನು ನಾನು ಒಂದೇ ಹೆಸರಿಟ್ಟು ಕರೀತೀನಿ.... ಡಾಫರ್ಸ್.... ಬ್ಲಡೀ ಡಾಫರ್ಸ್! "ಸ್ತ್ರೀಯನ್ನು ನಗ್ನವಾಗಿ ನೋಡಬೇಕೆಂದು ಕೊಳ್ಳುವ ಲೋಫರ್ಸ್! ಅದೇ ಸ್ತ್ರೀಯಾದರೆ ಹೇಗೆ ಆಲೋಚಿಸುತ್ತಾಳೆ ಗೊತ್ತಾ ? ತನ್ನ ಹೊಟ್ಟೆಯಲ್ಲಿ ಹುಟ್ಟಿದ ಹಸುಕಂದನನ್ನು ಬಿಟ್ಟು ಇನ್ನ್ಯಾವ ಗಂಡಸನ್ನೇ ಆಗಲಿ ನಗ್ನವಾಗಿ ನೋಡಬೇಕೆಂದು ಇಚ್ಛಿಸುವುದಿಲ್ಲ. ಕೊನೆಗೆ ತಾಳಿ ಕಟ್ಟಿದ ಗಂಡನಾದರೂ ಸರಿ, ನಗ್ನವಾಗಿ ಎದುರಿಗೆ ಬಂದರೆ ನಾಚಿಕೆಯಿಂದ

ಕಣ್ಣು ಮುಚ್ಚಿಕೊಳ್ಳುತ್ತಾಳೆ. ಆ ಸಂಸ್ಕಾರ ನಿಮಗೆಲ್ಲಿಯದು ? ಹಾಡು ಹಗಲು ಊರ ಹೊರಗೆ ಈ ರೀತಿ ನಿನ್ನ ಮುಂದೆ ಜಾಕೆಟ್ ಬಿಚ್ಚಿದ್ದಕ್ಕೆ ಇಬ್ಬಂದಿ ಪಡುತ್ತಿದ್ದೀಯಲ್ವೇ, ನಾನು ನಾಲ್ಕು ಗೋಡೆಗಳ ನಡುವೆ ಇದೇ ರೀತಿ ಮಾಡಿದ್ದರೆ ಹೀಗೆ ಇರುತ್ತಿದ್ದೆಯಾ ? ಆಗಲೂ ಸಿಸ್ಟರ್ ಅಂತಾನೇ ಕರೀತಿದ್ದೆಯಾ ? ಈ ಮಾಂಸದ ಮುದ್ದೆಗಳನ್ನು ಮನಸೇಚ್ಛೆ ನಲುಗಿಸುತ್ತಿದ್ದ. ಮನಸಾರೆ ಕಚ್ಚಿರುತ್ತಿದ್ದೆ. ನಿಮ್ಮದೆಲ್ಲಾ ಬರೀ ಕಪಟ, ಬರೀ ನಾಟಕ, ಮನಸ್ಸಿನಲ್ಲೆಲ್ಲಾ ಹೊಲಸು ತುಂಬಿಕೊಂಡು ದುರ್ನಾತ ಹೊಡೆಯುತ್ತಿದ್ದರೂ ಮಾತಿನಲ್ಲಿ ಜೇನು ಹರಿಸ್ತೀರಿ.

"ಈ ದಿನ ನೀನು ಸಾಯುದಂತೆ ನಾನು ತಡೆದುದಕ್ಕೆ ನನ್ನನ್ನು ಮುಟ್ಟುವುದು ನಿನಗಿಷ್ಟವಿಲ್ಲದಿರಬಹುದು ಆದರೆ ನಾಳೆ.... ನಿನಗೆ ಉದ್ಯೋಗ ದೊರೆತ ನಂತರ.... ನಿನ್ನ ಅಗತ್ಯಗಳೆಲ್ಲವೂ ಪೂರೈಕೆಯಾದ ನಂತರ ಇದೇ ಮಾಂಸದ ಮುದ್ದೆಗಳನ್ನು ನೀನು ಅನುಭವಿಸಬೇಕೆಂದುಕೊಂಡರೆ ನನಗೆ ಆಶ್ಚರ್ಯ ಉಂಟಾಗುವುದಿಲ್ಲ." "ಸ್ತ್ರೀಯನ್ನು ಮಾಂಸದ ಮುದ್ದೆಯೆಂದೇ ನೋಡುವ ನಿಮ್ಮ ಗಂಡು ಜಾತಿಗೆ ನಾನು ಸಹಾಯ ಮಾಡಕೂಡದು. ಆದರೂ ನಿನಗೆ ಸಹಾಯ ಮಾಡಲಿದ್ದೇನೆ. ಯಾಕೆ ಗೊತ್ತಾ ? ತನ್ನನ್ನು ನಾಶ ಮಾಡುವ ಗಂಡಸನ್ನು ಕೂಡ ಉನ್ನತ ಸ್ಥಿತಿಯಲ್ಲಿ ನೋಡಬೇಕೆಂದುಕೊಳ್ಳುವುದು ಸ್ತ್ರೀಯ ದೌರ್ಬಲ್ಯ. "ಗಂಡು ಜಾತಿ ತನಗೆ ಅಪಕಾರ ಮಾಡುತ್ತಿದ್ದರೆ ತಿರುಗಿ ಉಪಕಾರ ಮಾಡಿ ಅದೇ ಗಂಡಸಿನ ಕಾಲ ಕೆಳಗೆ ನಲುಗುವುದು ಸ್ತ್ರೀಯ ರೂಢಿ! ಅಲ್ಲ ಒಳ್ಳೆಯತನ! ಈಗ ಈ ಮಾಂಸದ ಮುದ್ದೆಗಳನ್ನು ಬೇರೆಯವರಿಗೆ ಕೊಟ್ಟು ನಿನಗೆ ಉದ್ಯೋಗ ದೊರಕಿಸಿಕೊಡಲಿದ್ದೇನೆ".

ಸುದೀರ್ಘವಾದ ತನ್ನ ಮಾತು ಕೊಂಚ ನಿಲ್ಲಿಸಿ ಉಸಿರೆಳೆದುಕೊಂಡು "ಗುಡ್ ಬೈ!" ಎಂದು ಸುಳಿಗಾಳಿಯಂತೆ ಸರಕ್ಕನೆ ಹಿಂದಿರುಗಿ ಅಲ್ಲಿಂದ ವೇಗವಾಗಿ ಓಡಿದಳು.

ಅವನು ಪ್ರತಿಮೆಯಂತೆ ಅವಳು ಕಣ್ಣು ಮರೆಯಾಗುವವರೆಗೆ ಅವಳನ್ನೇ ನೋಡುತ್ತಾ ನಿಂತಿದ್ದ. ಎಷ್ಟುಹೊತ್ತು ಹಾಗೆಯೇ ನಿಂತಿದ್ದನೋ ಅವನಿಗೇ ತಿಳಿಯದು.

ಮನ್ಮಥರಾವ್ ಮೆತ್ತನೆಯ ರಿವಾಲ್ವಿಂಗ್ ಚೇರ್‌ನಲ್ಲಿ ತಲೆ ಹಿಂದಕ್ಕೆ ವಾಲಿಸಿ ಗೊರಕೆ ಹೊಡೆಯುತ್ತಾ ನಿದ್ದೆ ಮಾಡುತ್ತಿದ್ದ. ಅದು ಅವನ ಮಲಗುವ ಕೋಣೆಯಲ್ಲ,ಆಫೀಸು ರೂಮು! ಆದರೂ ಅದೇಕೋ ಅವನಿಗೆ ತನ್ನ ಮನೆಗಿಂತ ಆಫೀಸಿನಲ್ಲಿ ಚೆನ್ನಾಗಿ ನಿದ್ದೆ ಬರುತ್ತಿತ್ತು. ಯಾಕೋ ಏನೋ ಅವನಿಗೆ ಮನೆಯಲ್ಲಿ ತನ್ನ ಹೆಂಡತಿಯನ್ನು ನೋಡಿದರೆ ನಿದ್ದೆ ಬರುತ್ತಿರಲಿಲ್ಲ. ಮೋಹದಿಂದಲ್ಲ, ಬೇಸರದಿಂದಾಗಿ ನಿದ್ದೆ ಬರುತ್ತಿರಲಿಲ್ಲ. ಮನ್ಮಥರಾವ್‌ನ ಹೆಂಡತಿ ಬಕಾಸುರನ ತಂಗಿಯಂತಿದ್ದಳು. ಕಪ್ಪು ಬಣ್ಣ, ಮೇಲಾಗಿ ಉಬ್ಬುಹಲ್ಲು.

“ಅಬ್ಬಾ! ನಿದ್ದೆ ಮಾಡೋವಾಗ ಕಣ್ಣೆದುರಿಗೆ ಬರಬೇಡ್ವೆ! ರಾತ್ರಿ ನಂಗೆ ನಿದ್ದೆ ಬರೋದಿಲ್ಲ!” ಎನ್ನುತ್ತಿದ್ದ ಮನ್ಮಥರಾವ್. ಪಾಪ ಆ ಗೃಹಿಣಿ ಸಂಭ್ರಮ ಪಡುತ್ತಿದ್ದಳು. ಮನ್ಮಥರಾವ್ ಅಸಹ್ಯದಿಂದ ಆ ಮಾತು ಹೇಳುತ್ತಿದ್ದ. ಅವಳೇನೋ ಅದನ್ನು ಪ್ರೇಮದಿಂದ ಎಂದು ಕೊಳ್ಳುತ್ತಿದ್ದಳು. ಗಂಡನ ಕನಸಿನಲ್ಲಿ ತಾನೇ ಬರುವಷ್ಟು ಸುಂದರವಾಗಿರುವೆನೆಂದು ಹಿಗ್ಗುತ್ತಾ ಮತ್ತಷ್ಟು ಅಲಂಕರಿಸಿಕೊಂಡು ತಯಾರಾಗುತ್ತಿದ್ದಳು. ನೋಡಲಾಗದೆ ಅವನು ಅವಸ್ಥೆ ಪಡುತ್ತಿದ್ದ. ಅರ್ಥ ಮಾಡಿಕೊಳ್ಳಬಲ್ಲ ಶಕ್ತಿ ಅವಳ ಚಿಕ್ಕ ಮಿದುಳಿಗಿರಲಿಲ್ಲ. ಆಕಾರಕ್ಕೂ ಅವಳ ಮನಸ್ಸಿಗೂ ಹೊಂದಿಕೆಯಿರಲಿಲ್ಲ. ಮೇಲೆ ವಿಕಾರವಾಗಿ ಗಯ್ಯಾಳಿಯಂತೆ ಕಾಣಿಸುವ ಅವಳ ಮನಸ್ಸು ತುಂಬಾ ಮೃದುವಾದುದು. ಮೇಲಾಗಿ ಅಮಾಯಕಳು. ಗಂಡನೇ ದೈವ- ಏನು ಮಾಡಿದರೂ ಗಂಡನ ಸಂತೋಷಕ್ಕೋಸ್ಕರವೇ ಎಂದುಕೊಳ್ಳುವ ಭಾರತೀಯ ಗೃಹಿಣಿ. ಗಂಡ ಗದರಿಸುತ್ತಿದ್ದರೂ ಪ್ರೇಮಿಸುತ್ತಿದ್ದಾನೆಂದು ಭಾವಿಸುವ ಮುಗ್ಧೆ. ಆ ಮುಗ್ಧತೆಯನ್ನೇ ಆಸರೆಯಾಗಿಟ್ಟುಕೊಂಡು ಮನ್ಮಥರಾವ್ ಮರೆಯಲ್ಲಿ ತುಂಬಾ ಅವ್ಯವಹಾರಗಳನ್ನು ಮಾಡುತ್ತಿದ್ದ.

ನಿಜಕ್ಕೂ ಅವನೇ ಅವಳನ್ನು ಬಯಸಿ ಬಯಸಿ ಮದುವೆಯಾಗಿದ್ದ. ಅವಳನ್ನು ನೋಡಿ ಅಲ್ಲ, ಆಸ್ತಿ ನೋಡಿ ಮದುವೆಯಾಗಿದ್ದ. ಅವನ ಭಾವಮೈದುನನಿಗೆ ತಂಗಿಯೆಂದರೆ ತುಂಬಾ ಪ್ರೇಮ. ಅದಕ್ಕೇ ಭಾವನನ್ನು ತನ್ನ ಕಂಪನಿಯಲ್ಲಿ ಜನರಲ್ ಮ್ಯಾನೇಜರ್ ಆಗಿ ನೇಮಿಸಿಕೊಂಡಿದ್ದ. ತಂಗಿಗೇನಾದರೂ ಅನ್ಯಾಯ ಮಾಡಿದ್ದಾನೆಂದು ತಿಳಿದರೆ ಭಾವಮೈದುನ ತನ್ನ ಚರ್ಮ ಸುಲಿಯುತ್ತಾನೆಂದು ಮನ್ಮಥರಾವ್‌ಗೆ ಚೆನ್ನಾಗಿ ತಿಳಿದಿತ್ತು. ಅದಕ್ಕೇ ತನ್ನ ಅವ್ಯವಹಾರಗಳು ಭಾವಮೈದುನನಿಗೆ ತಿಳಿಯದಂತೆ ತುಂಬಾ ಎಚ್ಚರಿಕೆವಹಿಸಿದ.

ಅವನಿಗೆ ಎಲ್ಲರೂ ಇಟ್ಟ ಅಡ್ಡ ಹೆಸರು ಲಂಚೇಶ್ವರ ಎಂದು. ಲಂಚ ತೆಗೆದುಕೊಳ್ಳದೆ, ಚಿಕ್ಕ ಕಾಗದದ ಮೇಲೆ ಕೂಡ ಸಹಿ ಮಾಡುವುದಿಲ್ಲ ಎನ್ನುತ್ತಿದ್ದ. ಈ ಲಂಚೇಶ್ವರನಿಂದಾಗಿ ಕಂಪನಿಗೆ ತುಂಬಾ ಕೆಟ್ಟ ಹೆಸರು ಬಂದಿತ್ತು. ಆದರೂ ತಂಗಿಗೋಸ್ಕರ ಇವನನ್ನು ಇವನ ಭಾವಮೈದುನ ಕೆಲಸದಿಂದ ತೆಗೆಯದೆ ಉಳಿಸಿದ್ದ.

ಮನ್ಮಥರಾವ್ ಗೊರಕೆ ಹೊಡೆಯುತ್ತಾ ನಿದ್ದೆ ಮಾಡುತ್ತಿರುವಂತೆಯೇ ಜವಾನ ತಾತಾರಾವ್ ಆ ಕೋಣೆಯೊಳಗೆ ಪ್ರವೇಶಿಸಿ "ಸಾರ್ ಸಾರ್!" ಎಂದು ಗಡಿಬಿಡಿಯಿಂದ ಕೂಗಿದ. ಮನ್ಮಥರಾವ್ ನಿದ್ದೆಯಿಂದ ಬೆಚ್ಚಿಬಿದ್ದು ಎದ್ದ. "ಫೂಲ್! ರ್ಯಾಸ್ಕಲ್! ಕತ್ತೆ! ಬಂಗಾದರಂತಹ ನಿದ್ದೆ ಕೆಡಿಸಿದೆಯಲ್ಲೋ!" ಎಂದು ಗದರಿಸಿದ.

ತಾತಾರಾವ್ "ಹ್ಹಿ.... ಹ್ಹಿ...." ಎಂದು ನಕ್ಕ! ಮನ್ಮಥರಾವ್‌ನಿಗೂ, ಅವನಿಗೂ ತುಂಬಾ ಹೊಂದಾಣಿಕೆ. "ನಿಮಗೋಸ್ಕರ ಒಂದು ಬಣ್ಣದ ಬೀಸಣಿಗೆ ಬಂದಿದೆ ಸಾರ್!".

"ಯಾವ ಕ್ಯಾಟಗರಿ" ಕೇಳಿದ ಮನ್ಮಥರಾವ್.

"ಅದೇ ಒಂದು ಕ್ಯಾಟಗರಿ ಇರೋಹಾಗಿದೆ !" ತಾತಾರಾವ್ ಕಣ್ಣು ಹೊಡೆದ.

ಮನ್ಮಥರಾವ್ ಉಗುಳು ನುಂಗಿದ. "ಹಾಗಿದ್ರೆ ತಡ ಯಾಕೆ........ ತಕ್ಷಣ ಕರ್ಕೊಂಬಾ!" ಎಂದ ಲೊಟಗೆ ಹೊಡೆಯುತ್ತಾ. ತಾತಾರಾವ್ ಎಷ್ಟು ವೇಗವಾಗಿ ಒಳ ಬಂದಿದ್ದನೋ, ಅಷ್ಟೇ ವೇಗವಾಗಿ ಹೊರಗೋಡಿದ. ಅವನು ಹೊರಹೋದ ಕೊಂಚ ಹೊತ್ತಿಗೆ ಸ್ವಿಂಗ್‌ಡೋರ್ಸ್ ತೆರೆದುಕೊಳ್ಳುತ್ತಾ, ಮಣಿಮೇಖಲೆ ಒಳಗೆ ಬಂದಳು. ಅವಳನ್ನು ನೋಡುತ್ತಲೇ ಕಣ್ಣರಳಿಸಿ ನೋಡುತ್ತಾ ಕುಳಿತುಬಿಟ್ಟ ಮನ್ಮಥರಾವ್. ಅವನು ತನ್ನ ಜೀವನದಲ್ಲಿ ಅಲ್ಲಿಯವರೆಗೆ ಅಷ್ಟು ಸುಂದರ ಯುವತಿಯನ್ನು ನೋಡಿರಲಿಲ್ಲ. ಅವಳು ಒಳ ಬರುತ್ತಿದ್ದರೆ ಮಿಂಚಿನ ಬಳ್ಳಿ, ಆ ಕೋಣೆಯಲ್ಲಿ ಪ್ರವೇಶಿಸಿದಂತೆನಿಸಿತು.

ಅವಳು ಗಾಂಭೀರ್ಯದಿಂದ ನಡೆಯುತ್ತಾ ಬಂದಳು. ಮನ್ಮಥರಾವ್ ಅಲ್ಲಿಯವರೆಗೆ ತುಂಬಾ ಜನ ಹೆಣ್ಣುಗಳನ್ನು ಅನುಭವಿಸಿದ್ದ. ತುಂಬಾ ಅಗ್ಗವಾಗಿ ದೊರಕುವ ಹೆಣ್ಣುಗಳನ್ನು ಅನುಭವಿಸಿದ್ದ. ಅವರೆಲ್ಲ ಮಣ್ಣಿನ ಬೊಂಬೆಗಳು. ಇವಳ ವಿಷಯ ಬೇರೆ! ಇವಳು ಸ್ವರ್ಣ ಪುತ್ತಳಿ. ಮನ್ಮಥರಾವ್‌ಗೆ ಅವಳ ಸೌಂದರ್ಯ ನೋಡುತ್ತಿದ್ದಂತೇ ಭಯ ಉಂಟಾಯಿತು. ಅವನ ಮುಖಭಾವ ನೋಡಿ ಅವಳು ಮನಸ್ಸಿನಲ್ಲೇ ನಕ್ಕಳು. ಇಂತಹವರು ಹಾಸಿಗೆಯ

ಮೇಲೆ ಬಂದರೆ ಏನಾಗುತ್ತಾರೋ ಅವಳಿಗೆ ಚೆನ್ನಾಗಿ ತಿಳಿದಿತ್ತು. ಇಂತಹವರೊಂದಿಗೆ ಬೇಕಾದ ಕೆಲಸ ಹೇಗೆ ಮಾಡಿಸಿಕೊಳ್ಳಬೇಕೆನ್ನುವುದು ಅವಳಿಗೆ ಚೆನ್ನಾಗಿ ತಿಳಿದಿತ್ತು. ತಲೆ ಮೇಲೆತ್ತಿ ಮನ್ಮಥರಾವ್‌ನ ಕಡೆ ನೇರವಾಗಿ ನೋಡುತ್ತಾ ಮೆಲ್ಲಗೆ ನಕ್ಕಳು. "ಕೂತ್ಕೋಬಹುದೆ ?" ಎಂದಳು, ಮುಗುಳ್ನಗುತ್ತಲೇ. ಆ ನಗುವನ್ನು ನೋಡಿ ಮನ್ಮಥರಾವ್‌ಗಿಂತಲೂ ಘಟಾನುಘಟಿಗಳಾದ ಗಂಡಸರೇ ಚಿತ್ತಾಗಿದ್ದರು. ಮನ್ಮಥರಾವ್ ಎಷ್ಟರವನು ?!

"ಪ್ಲೀಸ್.... ಪ್ಲೀಸ್ ಕೂತ್ಕೊಳ್ಳಿ!" ಎಂದ ತಡಬಡಿಸುತ್ತಾ.

"ಥ್ಯಾಂಕ್ಸ್!" ಎನ್ನುತ್ತಾ ಅವಳು ಕುಳಿತುಕೊಂಡಳು. ಅವಳ ಧ್ವನಿಯ ಮಾಧುರ್ಯಕ್ಕೆ ಐಸ್‌ನಂತೆ ಕರಗುತ್ತಾ ಅವನೇನೋ ಹೇಳುವುದರೊಳಗೆ ಅವಳೇ ನುಡಿದಳು. "ಮೊದಲೇ ಅಪಾಯಿಂಟ್‌ಮೆಂಟ್ ಇಲ್ಲದೆ ಬಂದಿದ್ದೀನಿ. ಐ ಆ್ಯಮ್ ಸಾರಿ! ನಿಮ್ಮ ಟೈಮ್ ಹೆಚ್ಚು ತೊಗೊಳ್ಳೋದಿಲ್ಲ"

"ಅಯ್ಯೋ ಎಂತಹ ಮಾತು!" ಮನ್ಮಥರಾವ್ ತಟಕ್ಕನೆ ನುಡಿದ. "ಅಪಾಯಿಂಟ್‌ಮೆಂಟ್ ಬೇರೆ ಎಲ್ಲರಿಗೆ ಆದರೆ ನಿಮಗ್ಯಾಕೆ!"ಎಂದು ದ್ವಂದ್ವಾರ್ಥ ಧ್ವನಿಸುವಂತೆ ನುಡಿದ.

ಅವಳು ಮತ್ತೊಂದು ಸಲ ತನ್ನಲ್ಲಿ ತಾನೇ ನಕ್ಕಳು. ಇಂತಹ ಗೋಮುಖ ವ್ಯಾಘ್ರಗಳನ್ನು ಅವಳು ಬಹಳ ನೋಡಿದ್ದಳು. ಅವಳಿಗೆ ಅನುಭವ ಪೂರ್ವಕವಾಗಿ ಒಂದು ವಿಷಯ ಚೆನ್ನಾಗಿ ಗೊತ್ತಿತ್ತು. ಹೆಂಗಸರನ್ನು ಕಂಡೊಡನೆಯೇ ಕಣ್ಣರಳಿಸಿ, ಬಟ್ಟೆ ಬಿಚ್ಚಿ ನೋಡುತ್ತಿರುವಂತೆ ವರ್ತಿಸುವವರು ಸೆಕ್ಸ್‌ನಲ್ಲಿ ತುಂಬಾ ಬೇಗ ಸೋತುಹೋಗುತ್ತಾರೆ. ಹೆಣ್ಣು ಕೊಂಚ ಅಡ್ವಾನ್ಸ್ ಆದರೆ ಇಂತಹವರು ತಡೆದುಕೊಳ್ಳಲಾರರು. ಇವರ ಪ್ರತಾಪವೆಲ್ಲಾ ತಗ್ಗಿ-ಬಗ್ಗಿ ಇರುವ ಹೆಂಗಸರ ಹತ್ತಿರವೇ. ಅವಳು ಹೈಕ್ಲಾಸ್ ಕಾಲ್‌ಗರ್ಲ್. ಪ್ರಪಂಚವ್ಯಾಪ್ತವಾಗಿ ಅತ್ಯಂತ ಶಕ್ತಿವಂತರಾದ ಪ್ರಮುಖರಲ್ಲಿ ಬಹುಜನ ಅವಳ ಕಸ್ಟಮರುಗಳು. ದೇಶ-ವಿದೇಶಗಳ ಮಿನಿಸ್ಟರ್‌ಗಳೂ, ರಾಜರೂ, ಯುವರಾಜರೂ ಅವಳ ಮುಂದೆ ದಾಸೋಹಂ ಎಂದಿದ್ದರು. ಮನ್ಮಥರಾವ್‌ನಂತಹ ಚಿಲ್ಲರೆ ವ್ಯಕ್ತಿಗಳು ಅವಳ ಕಾಲುಗುರಿನ ಹತ್ತಿರವೂ ಬರಲಾರರು. ಅವಳು ಅವನೊಂದಿಗೆ ಮಲಗಲು ಬಂದಿರಲಿಲ್ಲ. ಮನ್ಮಥರಾವ್‌ನಂತಹವರೊಂದಿಗೆ ಮಲಗುವ ಅಗತ್ಯವೂ ಇರಲಿಲ್ಲ. ಕೊಂಚ ಸೆರಗು ಜಾರಿಸಿದರೆ ಸಾಕು. ಕೇಳಿದ್ದನ್ನು ಕೊಟ್ಟು ದಾಸರಾಗುತ್ತಾರೆ. "ತುಂಬಾ ಥ್ಯಾಂಕ್ಸ್" ಮತ್ತೊಂದು ಸಲ ನುಡಿದಳು. ಅವಳ ಮಾತುಗಳಲ್ಲಾಗಲಿ, ಚಲನೆಯಲ್ಲಾಗಲಿ ಎಲ್ಲಿಯೂ ಅಶ್ಲೀಲದ ಸೋಂಕಿರಲಿಲ್ಲ. ಮನ್ಮಥರಾವ್ ನುಡಿದ ದ್ವಂದ್ವಾರ್ಥವನ್ನು ಗ್ರಹಿಸಿದಂತೆ ಅವಳು ತೋರಿಸಿ

ಕೊಳ್ಳಲಿಲ್ಲ. "ಏನಾದರೂ ನಿಮ್ಮ ಟೈಮ್ ತುಂಬಾ ಅಮೂಲ್ಯವಾದುದೆಂದು ನನಗೆ ಗೊತ್ತು. ಅದಕ್ಕೇ ನಾನು ಬಂದ ಕೆಲಸವೇನೆಂದು ಬೇಗನೇ ಹೇಳ್ತೀನಿ!" ಎಂದು ಅವನನ್ನು ಉಬ್ಬಿಸುತ್ತಿದ್ದಳು.

"ಪರವಾಗಿಲ್ಲ, ಪರವಾಗಿಲ್ಲ ! ಕೊಂಚ ನಿಧಾನವಾಗಿ ಕೂತ್ಕೊಂಡು ಹೇಳಿ ! ತಡವಾದರೂ ಪರವಾಗಿಲ್ಲ! ಸಾಯಂಕಾಲದವರೆಗೂ ನನಗೇನೂ ಕೆಲಸವಿಲ್ಲ!".

ಅವಳು ಉತ್ತರವಾಗಿ ಮತ್ತೊಂದು ಸಲ ಮುಗುಳ್ನಕ್ಕು, ಹ್ಯಾಂಡ್ ಬ್ಯಾಗ್ ತೆರೆದು ಒಂದು ವಿಸಿಟಿಂಗ್ ಕಾರ್ಡ್ ಅವನ ಎದುರಿಗಿಟ್ಟಳು. ಮನ್ಮಥ ರಾವ್ ಶ್ರದ್ಧೆಯಿಂದ ಆ ಕಾರ್ಡ್ ಕೈಗೆತ್ತಿಕೊಂಡು ನೋಡಿದ.

"ಮೇಖಲೆ ಸೆಕ್ಸ್ ಎಜುಕೇಶನ್ ಸೆಂಟರ್!" ಆ ಹೆಸರು ಓಗುತ್ತಲೇ ಮಾತು ಬಿದ್ದವನಂತೆ ಕಣ್ಣರಳಿಸಿ ನೋಡಿದ. "ಸೆಕ್ಸ್ ಎಜುಕೇಶನ್ ಸೆಂಟರ್" ಎಂದು ಗೊಣಗುತ್ತಿರುವಂತೆ, ಸೆಕ್ಸ್ ಎಜುಕೇಶನ್ ಎಂದರೆ ನಿಜವಾಗಿ ಏನೆಂದು ಮನ್ಮಥರಾವ್‌ನಂತಹವರಿಗೆ ತಿಳಿಯುವ ಅವಕಾಶವಿಲ್ಲ. ಅವರು ತಿಳಿದು ಕೊಳ್ಳುವುದಿಲ್ಲ. ಮೇಖಲಾ ಆ ಅಜ್ಞಾನವನ್ನೇ ಉಪಯೋಗಿಸಿಕೊಳ್ಳಬೇಕೆಂದು ಕೊಂಡಳು.

"ಜಂಟಿ ನಗರಗಳಲ್ಲಿ ಸೆಕ್ಸ್ ಎಜುಕೇಶನ್ ಸೆಂಟರ್ ಒಂದು ಏರ್ಪಾಡು ಮಾಡಬೇಕೆಂದು ನನ್ನ ಉದ್ದೇಶ. ನಿಮ್ಮಂತಹ ದೊಡ್ಡವರು ಆರ್ಥಿಕ ಸಹಾಯ ಮಾಡಿದರೆ ದೇಶದಲ್ಲಿಯೇ ಮೊಟ್ಟಮೊದಲ ಬಾರಿಗೆ ಸೆಕ್ಸ್ ಎಜುಕೇಶನ್ ಸೆಂಟರ್ ಇಲ್ಲಿಯೇ ಆರಂಭವಾಗುತ್ತದೆ".

"ಸೆಕ್ಸ್ ಎಜುಕೇಶನ್ ಯಾರು ಕಲಿಸುತ್ತಾರೆ?"

"ನಾನೇ!"

ಮನ್ಮಥರಾವ್‌ನ ಗಂಟಲೊಣಗಿತು. "ನೀವಾ?"

"ಯಾಕೆ? ನಂಬೋದಿಕ್ಕಾಗ್ತಿಲ್ವಾ? ನಾನು ಸೆಕ್ಸ್ ಎಜುಕೇಶನ್ ಕಲಿಸ ಕೂಡದೆ?"

"ಯಾಕೆ ಕಲಿಸಕೂಡದು?" ಮನ್ಮಥರಾವ್ ತಡಬಡಿಸುತ್ತಾ ನುಡಿದ. ಅವಳು ಮೊಟ್ಟಮೊದಲು ಬಾರಿಗೆ ಮೋಹಕವಾಗಿ ನೋಡಿದಳು. ಮನ್ಮಥ ರಾವ್‌ಗೆ ಕಚಗುಳಿ ಇಟ್ಟಂತಾಯ್ತು. ತಕ್ಷಣವೇ ಡೆಸ್ಕ್ ಎಳೆದು ಚೆಕ್ ಬುಕ್ ಹೊರತೆಗೆದು, "ಹೇಳಿ, ಎಷ್ಟು ಚಂದಾ ಬೇಕು?"

"ನಿಮ್ಮ ಅಂತಸ್ತಿಗೆ ತಕ್ಕಂತೆ ಹತ್ತು ಸಾವಿರಕ್ಕೆ ಕಡಿಮೆ ಇಲ್ಲದಂತೆ ಕೊಡಿ".

ಹತ್ತು ಸಾವಿರ! ಅವನ ತಲೆ ಗಿರ್ರೆಂದು ತಿರುಗಿತು. ಯಾವ ಸಂಸ್ಥೆಗೂ ಅವನು ಅಷ್ಟು ಚಂದಾ ಕೊಟ್ಟಿರಲಿಲ್ಲ. ಆದರೆ ಅಷ್ಟರಲ್ಲಿಯೇ ಅವನ ತಲೆಯಲ್ಲಿ ವಿಕಾರವಾದ ಆಲೋಚನೆಯೊಂದು ತಲೆಯೆತ್ತಿತು. ಚೆಕ್‌ಬುಕ್ ತೆರೆದು ಸರಸರನೆ ಹತ್ತು ಸಾವಿರ ಮೊತ್ತ ಬರೆದ. ಸಹಿ ಕೂಡ ಮಾಡಿ ಚೆಕ್ ಹರಿದು ಅವಳ ಕಡೆ ನೋಡಿದ.

"ಥ್ಯಾಂಕ್ಯೂ, ಥ್ಯಾಂಕ್ಯೂ ವೆರಿ ಮಚ್" ಅವಳು ಅದೇ ಸಮ್ಮೋಹನಕರವಾದ ಮುಗುಳ್ನಗುವಿನೊಂದಿಗೆ ಕೈ ಮುಂದೆ ಚಾಚಿದಳು.

ಮನ್ಮಥರಾವ್ ಥಟ್ಟನೆ ಚೆಕ್ ಹಿಂತೆಗೆದುಕೊಂಡ. "ನೀವು ಕೇಳಿದಷ್ಟು ಚಂದಾ ಕೊಡ್ತಿದೀನಿ. ಆದರೆ ಒಂದು ಷರತ್ತು".

"ಏನದು?" ಪ್ರಶ್ನಾರ್ಥಕವಾಗಿ ನೋಡಿದಳು.

"ನನಗೂ ಸೆಕ್ಸ್ ಎಜುಕೇಶನ್ ಕಲಿಸಬೇಕು".

"ಓಹ್ ಅಷ್ಟೇನಾ! ಖಂಡಿತವಾಗ್ಲೂ ನಮ್ಮ ಸೆಕ್ಸ್ ಎಜುಕೇಶನ್ ಸೆಂಟರ್‌ಗೆ ಮೊದಲ ಕಸ್ಟಮರ್ ನೀವೇ!"

"ಹಾಗಲ್ಲ, ಈಗಿನಿಂದ್ಲೇ ಪ್ರಾರಂಭಿಸಬೇಕು!"

ಅವಳು ಅವನ ಕಡೆ ವಿಚಿತ್ರವಾಗಿ ನೋಡಿದಳು. "ಈಗಿನಿಂದ್ಲೇ?!"

"ಆಂ, ಈಗಿನಿಂದ್ಲೇ!" ಹೃದಯ ಡವಡವನೆ ಹೊಡೆದುಕೊಳ್ಳುತ್ತಿರ್ರುವಂತೆ ನುಡಿದ. ಅವಳು ನಗುತ್ತಾ ಭುಜ ಕುಣಿಸಿ "ಆಲ್‌ರೈಟ್" ಎಂದಳು. ಅವನು ಪುಳಕಗೊಳ್ಳುತ್ತಾ ಚೆಕ್ ಕೊಟ್ಟ.

"ಥ್ಯಾಂಕ್ಸ್" ಮತ್ತೊಂದು ಸಲ ಹೇಳುತ್ತಾ ಅವಳು ಆ ಚೆಕ್ಕನ್ನು ಭದ್ರವಾಗಿ ಬ್ಯಾಗಿನಲ್ಲಿಟ್ಟುಕೊಂಡು ಎದ್ದು ನಿಂತು ಮರ್ಯಾದೆಯಾಗಿ ಎರಡು ಕೈ ಜೋಡಿಸಿದಳು. "ಹೋಗಿಬರ್ತೀನಿ. ನಮಸ್ತೆ!"

ಅವನು ಆ ಮಾತಿನಿಂದ ಗಾಬರಿಯಾಗುತ್ತ ಎದ್ದುನಿಂತ. "ಇದೇನು.... ಆಗಲೇ!"

"ನನಗೆ ಹೋಗಬೇಕಾದ ಕೆಲಸವಿದೆ. ತುಂಬಾ ಅರ್ಜೆಂಟ್! ನನಗೆ ಬೇಕಾದ ವ್ಯಕ್ತಿಯೊಬ್ಬನಿಗೆ ಕೆಲಸ ಕೊಡಿಸ್ತೀನಿಂತ ಒಬ್ಬ ದೊಡ್ಡ ಮನುಷ್ಯ ಪ್ರಾಮಿಸ್ ಮಾಡಿದ್ದಾನೆ. ಅರ್ಧ ಗಂಟೇಲಿ ಅಪಾಯಿಂಟ್‌ಮೆಂಟ್ ಇದೆ. ಹೋಗದೇ ಇದ್ರೆ ಚೆನ್ನಾಗಿರೋದಿಲ್ಲ".

ಸಿಹಿ ಮಿಠಾಯಿ ಕೈಯಿಂದ ಜಾರಿ ಹೋಗುತ್ತಿರುವಂತೆ ಅವನಿಗನ್ನಿಸಿತು.

"ಮತ್ತೆ ನನ್ನ ಸೆಕ್ಸ್ ಎಜುಕೇಶನ್ ವಿಷಯ?"

"ಓ! ಅದಾ? ನೀವು ಯಾವಾಗ ಬೇಕೆಂದರೆ ಆವಾಗಲೇ ಪ್ರಾರಂಭಿಸ್ತೀನಿ".

"ನನಗೆ ಈಗ್ಲೇ ಬೇಕು!"

"ಈಗಲೇ?....ಅಂದ್ರೆ ಈಗ್ಲೇ? ಈ ಕ್ಷಣವೇ ? ಇಲ್ಲಿಯೇ?"

"ಹೌದು.... ಈಗಲೇ.... ಇಲ್ಲಿಂಯೇ" ಅವನು ಸರಸರನೆ ಮುಂದೆ ಬಂದು ಅವಳ ಎರಡೂ ಭುಜಗಳನ್ನು ಹಿಡಿದುಕೊಂಡ. ಅವನು ನಡುಗುತ್ತಿದ್ದ. ಅವಳು ಎಂತಹುದೇ ಗಾಬರಿಯನ್ನೂ ಪ್ರದರ್ಶಿಸಲಿಲ್ಲ. ನಿರ್ಭಯವಾಗಿ ಅವನ ಕಡೆ ನೋಡಿದಳು.

"ಪ್ಲೀಸ್.... ಹೋಗೋದಿಕ್ಕೆ ಬಿಡಿ, ನಮ್ಮಪ್ಪನಿಗೆ ಕೆಲಸ ತುಂಬಾ ಅಗತ್ಯ. ಕೊಡಿಸ್ಲೇಬೇಕು! ಮತ್ತೆ ಬರ್ತೀನಲ್ಲ!"

"ಸಾಧ್ಯವಿಲ್ಲ.... ನೀನು ಹೋಗೋದಿಕ್ಕೆ ಸಾಧ್ಯವಿಲ್ಲ!" ನಡುಗುತ್ತಲೇ ಅವಳನ್ನು ಅಪ್ಪಿಕೊಂಡ. ಅವನ ಅಂಗೈ, ಅಂಗಾಲು ಬೆವರಿನಿಂದ ಒದ್ದೆಯಾಗ ತೊಡಗಿದ್ದವು.

"ಹುಶ್! ಯಾರಾದ್ರೂ ಬರ್ತಾರೆ!"

"ಬರೋದಿಲ್ಲ! ತಾತಾರಾವ್ ಯಾರನ್ನೂ ಬಿಡೋದಿಲ್ಲ!"

"ಮತ್ತೆ ನಮ್ಮಪ್ಪನಿಗೆ ಉದ್ಯೋಗ?"

"ದರಿದ್ರ ಉದ್ಯೋಗ ನಾನೇ ಕೊಡ್ತೀನಿ! ನೀನು ಮಾತ್ರ ಹೋಗ್ಬೇಡ!" ಎಂದು ಹೇಳುತ್ತಾ ಅವನು ನಡುಗುತ್ತಿದ್ದ! ತಡಬಡಿಸುತ್ತಿದ್ದ! ಅವಳ ಬೆನ್ನಿನ ಮೇಲೆ ಅವನ ಕೈಗಳು ಅಸ್ಥಿರವಾಗಿ ಜಾರಿಹೋಗುತ್ತಿದ್ದವು. ಅವಳು ನಕ್ಕಳು.

"ನೀವು ತಮಾಷೆಗೆ ಹೇಳ್ತಿದೀರಿ!"

"ತಮಾಷೆಗಲ್ಲ, ನಿಜವಾಗ಼್ೂ ಹೇಳ್ತಿದೀನಿ".

"ನಂಬೋದಿಲ್ಲ, ನಂತರ ಇಲ್ಲವೆಂದರೆ?"

"ಈಗ್ಲೇ ಅಪಾಯಿಂಟ್‌ಮೆಂಟ್ ಆರ್ಡರ್ ಕೊಡ್ತೀನಿ".

"ಯಾವ ಕೆಲಸ?"

"ಯಾವ ಕೆಲಸವಾದ್ರೂ ಸರಿ!"

"ಅಸಿಸ್ಟೆಂಟ್ ಮ್ಯಾನೇಜರ್?"

"ಓ ಎಸ್".

"ಸುಳ್ಳು ಹೇಳ್ತಿದೀರಿ! ಆ ಪೋಸ್ಟ್ ಯಾವುದೂ ನಿಮ್ಮ ಕಂಪನಿಯಲ್ಲಿ ಖಾಲಿಯಾಗಿಲ್ಲ".

"ಇಲ್ಲದಿದ್ದರೆ ಸೃಷ್ಟಿಸ್ತೀನಿ. ಈ ಕ್ಷಣದಲ್ಲಿ ಸೃಷ್ಟಿಸ್ತೀನಿ!"

"ನೀವು ವಿಶ್ವಾಮಿತ್ರರೆ?"

"ಅವರಪ್ಪ!"

"ಹೇಗೆ? ನಿಮ್ಮ ಭಾವಮೈದುನನಿಗೆ ಹೇಳಬೇಕಲ್ಲ!"

"ಆ ವಿಷಯ ನಿನಗೆ ಹೇಗೆ ಗೊತ್ತು?"

"ಎಲ್ಲಾ ತಿಳ್ಕೊಂಡೇ ಬಂದಿದೀನಿ!"

"ಹಾಗಾ! ಹಾಗಿದ್ರೆ ನಾನೆಂತಹವನು ಅನ್ನೋದನ್ನೂ ತಿಳಿದುಕೊಂಡೇ ಇರ್ತೀಯಾ!"

"ತಿಳ್ಕೊಂಡಿದೀನಿ. ನೀವು ತುಂಬಾ ನೀಚರಂತೆ!" ಅವನು ಷಾಕ್ ಹೊಡೆಸಿಕೊಂಡವನಂತೆ ಅವಳನ್ನು ಬಿಟ್ಟ.

"ಆ ಮಾತು ಯಾರು ಹೇಳಿದ್ರು?" ಕೋಪದಿಂದ ಕೆಂಪೇರುತ್ತಾ ಕೇಳಿದ.

"ಯಾರಾದ್ರೆ ಏನು ಬಿಡಿ"ಅವಳು ತುಂಟತನದಿಂದ ನಕ್ಕಳು. "ಇಷ್ಟಕ್ಕೂ ನೀವು ನೀಚರೇನಾ?"

"ಡ್ಯಾಮಿಟ್, ಇನ್ನೂ ಏನು ಹೇಳಿದ್ರು?"

"ನಿಮಗೆ ಮನ್ಮಥರಾವ್ ಎನ್ನುವ ಹೆಸರು ಸಾರ್ಥಕವಾಗಿದೆಯಂತೆ. ಕಣ್ಣಿಗೆ ಬಿದ್ದ ಹೆಣ್ಣುಗಳನ್ನೆಲ್ಲ ಮನ್ಮಥಕ್ರೀಡೆಗೆ ಕರೆಯುತ್ತೀರಂತೆ! ಆಫೀಸ್ ನಲ್ಲಿರೋ ಹುಡುಗಿಯರೆಲ್ಲರೂ ನಿಮಗೆ ಹೆದರುತ್ತಾರಂತೆ. ನಿಮಗೆ ಲಂಚೇಶ್ವರ ಅನ್ನೋ ಅಡ್ಡ ಹೆಸರು ಕೂಡ ಇದೆಯಂತೆ! ನೀವು ತುಂಬಾ ಲಂಚ ತೊಗೋತೀರಂತೆ! ಆಫೀಸಿನಲ್ಲಿ ಕೆಲಸಗಾರರೆಲ್ಲರನ್ನೂ ಪೀಡಿಸ್ತೀರಂತೆ, ಆಫೀಸಿನಲ್ಲಿ ಗೊರಕೆ ಹೊಡೆಯುತ್ತಾ ನಿದ್ದೆ ಮಾಡ್ತೀರಂತೆ".

ಮನ್ಮಥರಾವ್ ಉಗುಳು ನುಂಗಿದ. ಅವಳು ಹೇಳುವುದರಲ್ಲಿ ಪ್ರತಿ ಅಕ್ಷರವೂ ನಿಜವೆಂದು ಅವನಿಗೂ ಗೊತ್ತು. "ಯಾರು ಆ ರೀತಿ ಹೇಳಿದ್ದು! ಅವರ ಚರ್ಮ ಸುಲೀತೀನಿ!" ಶೌರ್ಯ-ರಿಕೆಯ ಗಾಂಭೀರ್ಯದಿಂದ ನುಡಿದ.

"ಯಾರೋ, ಯಾಕೆ ಬಿಡಿ. ನಿಮ್ಮ ತಾತಾರಾವ್ ಅಂತಿಟ್ಕೊಳ್ಳಿ!"

"ಅವನಾ!" ಅವನು ಕೋಪದಿಂದ ಮಾತು ಮರೆತವನಂತೆ ನಿಲ್ಲಿಸಿದ. ನಂತರ ಸುಧಾರಿಸಿಕೊಳ್ಳುತ್ತ, "ಮುಟ್ಠಾಳ, ನನ್ನ ಹಿಂದೆ ಚೂರಿ ಹಾಕ್ತಿದಾನೆಂದಾಯ್ತು. ಅವನನ್ನ ಡಿಸ್‌ಮಿಸ್ ಮಾಡಿಬಿಡ್ತೀನಿ" ಎಂದ.

"ಆ ಡಿಸ್‌ಮಿಸ್ ಸಂಗತಿ ನನಗ್ಯಾಕೆ ಬಿಡಿ. ನಮ್ಮವನ ಅಪಾಯಿಂಟ್ ಮೆಂಟ್ ವಿಷಯ?"

"ಕೊಡ್ತೀನಿ ಅಂತಿದೀನಲ್ಲ!" ಮತ್ತೊಂದು ಸಲ ಅವಳ ಭುಜ ಹಿಡಿದು ಕೊಂಡ.

ಅವನ ಶೌರ್ಯ-ರಿಕೆಯ ಗಾಂಭೀರ್ಯ ಚೆದುರಿಹೋಯಿತು ಮತ್ತೆ ನಡುಗ ತೊಡಗಿದ.

"ಹಾಗಿದ್ರೆ ಕೊಡಿ!"

"ಈಗ್ಲೇನಾ!"

"ಹೌದು ಈಗ್ಲೇ! ನಾನೂ ಈಗಲೇ ಬೇಕು ಅಂದ್ರಲ್ಲ! ಅಪಾಯಿಂಟ್ ಮೆಂಟ್ ಆರ್ಡರ್ ಕೊಡಿ!"

"ನಂತರ ಕೊಟ್ರೆ?"

"ಊಹೂಂ! ನಂತರ ನೀವು ಕೈಕೊಟ್ರೆ, ನೀವೂ ಕೊಡದೆ ಕೊಡುತ್ತೇನೆಂದು ಹೇಳಿದ ಆ ದೊಡ್ಡ ಮನುಷ್ಯನೂ ಕೊಡದೆ—ಪಾಪ ನಮ್ಮವನ ಗತಿ ಏನಾಗಬೇಕು!"

"ಡ್ಯಾಮಿಟ್!" ಅವನು ಅವಳನ್ನು ಬಿಟ್ಟು ತನ್ನ ರಿವಾಲ್ವಿಂಗ್ ಚೇರ್ ನಲ್ಲಿ ಹೋಗಿ ಕುಳಿತುಕೊಂಡ. ತಡಬಡಿಸುತ್ತಿರುವ ಕೈಗಳಿಂದ ಇಂಟರ್ ಕಾಮ್‌ನ ಬಟನ್ ಒತ್ತಿದ. "ಲೂಸಿ! ಒಳಗೆ ಬಾ! ಡಿಕ್ಟೇಷನ್ ಕೊಡ್ತೀನಿ!" ಮೇಖಲೆಯನ್ನು ನೋಡುತ್ತಿದ್ದರೆ ಅವನಿಗ್ಯಾಕೋ ಕೊನೆಯಿಲ್ಲದ ಗಾಬರಿ ಮಾಡುತ್ತಿತ್ತು. ಕ್ಷಣ-ಕ್ಷಣಕ್ಕೆ ಹ್ಯಾಂಡ್ ಕರ್ಚೀಫ್‌ನಿಂದ ಹಣೆ ಒರೆಸಿ ಕೊಳ್ಳುತ್ತಿದ್ದ. ಅದಕ್ಕೆ ತಕ್ಕಂತೆ ಅವಳು ತನ್ನ ವಕ್ಷಸ್ಥಲದ ಮೇಲಿನಿಂದ ಸೆರಗನ್ನು ಕೊಂಚ ಸರಿಸಿ ಅವನ ಎದುರಿಗೆ ಕುಳಿತುಕೊಂಡಳು. ಲೋನೆಕ್ ಜಾಕೆಟ್‌ನೊಳಗಿಂದ ಅವಳ ವೇಸ್ಟ್‌ಲೈನ್ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಹಠಾತ್ತನೆ ಅವನ ಮೆದುಳಿನಲ್ಲಿ ಒಂದು ಭಯಂಕರವಾದ ಊಹೆ ಪ್ರವೇಶಿಸಿತು. ಎಷ್ಟು ಸೌಂದರ್ಯ! ಇಷ್ಟು ಸೌಂದರ್ಯವನ್ನು ತಾನು ಭರಿಸಬಲ್ಲನೆ? ಒಂದು ವೇಳೆ, ತಾನು ಈ ಸೌಂದರ್ಯ ರಾಶಿಯ ಹತ್ತಿರ ವಿಫಲನಾದರೆ ? ಅವನ ಹೃದಯ ಝಲ್ಲೆಂದಿತು. ಆ ಊಹೆ ಬರುತ್ತಲೇ ಅವನು ತಲ್ಲಣಿಸಿದ. ನೋ, ಸಾಧ್ಯವಿಲ್ಲ. ತಾನು ವಿಫಲವಾಗಲು ಸಾಧ್ಯವಿಲ್ಲ! ಅವಳ ಬಾಯಿಂದಲೇ ಇನ್ನು ಸಾಕು ಎನಿಸುವಂತೆ ಮಾಡಬೇಕು. ಅವನು ನಡುಗುತ್ತಿರುವ ಕೈಗಳಿಂದ ಸಿಗರೇಟ್ ತೆಗೆದು ಹೊತ್ತಿಸಿಕೊಳ್ಳಲು ಹೋದ. ನಡುಗುತ್ತಿರುವ ಕೈಗಳು ಲೈಟರ್ ಅನ್ನು ಸಿಗರೇಟ್‌ನ ಹತ್ತಿರ ಒಯ್ಯಲು ಸಹಕರಿಸಲಿಲ್ಲ. ಕ್ಷಣ-ಕ್ಷಣಕ್ಕೂ ಆ ಊಹೆಯೇ ಅವನನ್ನು ಕಾಡಿಸುತ್ತಿತ್ತು! ತಾನು ವಿಫಲಗೊಂಡರೆ? ತಾನು ವಿಫಲಗೊಂಡರೆ?! ಯಾವ ಗಂಡಸಿಗೂ ಬರಬಾರದ ಅನುಮಾನ ಅದು. ಅಲ್ಲಿಯೇ ಗಂಡಸು ಸೆಕ್ಸ್‌ನಲ್ಲಿ ತಪ್ಪು ಹೆಜ್ಜೆ ಇಡುತ್ತಾನೆ. ಸೆಕ್ಸ್‌ನಲ್ಲಿ ಆತ್ಮ ವಿಶ್ವಾಸ ಗಂಡಸಿಗೆ ತುಂಬಾ ಅಗತ್ಯ.

ಆ ರೀತಿ ಮನ್ಮಥರಾವ್ ಯೋಚನೆ ಮಾಡುತ್ತಿರುವಾಗಲೇ ಸ್ಟೆನೋ ಒಳಬಂದಳು. ಮನ್ಮಥರಾವ್‌ನ ಸ್ಥಿತಿ ನೋಡಿ ಅವಳು ಆಶ್ಚರ್ಯಪಟ್ಟಳು.

ಅವಳು ಅವನನ್ನು ಎಂದೂ ಅಂತಹ ದೀನಾವಸ್ಥೆಯಲ್ಲಿ ನೋಡಿರಲಿಲ್ಲ. "ಯೆಸ್ *ಸರ್!*" ಎಂದಳು. ನೋಟ್ ಬುಕ್ ತೆರೆಯುತ್ತಾ–

"ಕ್ಯಾಂಡಿಡೇಟ್‌ನ ವಿವರಗಳನ್ನು ಕೊಡಿ!" ಅವನು ತಡಬಡಿಸುತ್ತಲೇ ಕೇಳಿದ.

"ನಾನು ಕೊಡಬೇಕಾಗಿಲ್ಲ– ಅವನ ವಿವರಗಳು ನಿಮ್ಮ ಹತ್ತಿರ ಇವೆ" ಎಂದಳು ಮೇಖಲೆ.

"ನನ್ನ ಹತ್ತಿರಾನಾ?"

ಅವಳು ತಲೆಯಾಡಿಸಿ, "ಅವನ ಹೆಸರು ಆಶಾರಾಜ್!" ಎಂದು ಸುಮ್ಮನಾದಳು. ಮನ್ಮಥರಾವ್ ಬೆಚ್ಚಿಬಿದ್ದ.

"ಅವನಾ....!" ಎನ್ನುತ್ತಾ ಇನ್ನೇನೋ ಹೇಳಲು ಹೋಗಿ ನಾಲಿಗೆ ಕಚ್ಚಿಕೊಂಡ. "ಆ ಹೆಸರಿನಲ್ಲಿ ಯಾವುದಾದ್ರೂ ಅಪ್ಲಿಕೇಷನ್ ನಮ್ಮ ಹತ್ರ ಇದೆಯಾ?" ಎನ್ನುತ್ತಾ ಅಸಹನೆಯಿಂದ ಡೆಸ್ಕ್ ಎಳೆದು ಸರಸರನೆ ಯಾವುದೋ ಒಂದು ಫೈಲು ಹೊರಗೆಳೆದ. "ಹೌದು ಇದೇ ಫೈಲು! ಲೂಸಿ.... ಡಿಕ್ಟೇಟ್ ಮಾಡ್ತೀನಿ ಬರ್ಕೋ!" ಎನ್ನುತ್ತಾ ತಡಬಡಿಸುತ್ತಲೇ ಅಪಾಯಿಂಟ್‌ಮೆಂಟ್ ಆರ್ಡರ್ ಡಿಕ್ಟೇಟ್ ಮಾಡಿ, "ಟೈಪ್ ಮಾಡಿ ತಗೋಂಬಾ!" ಎಂದ. ಲೂಸಿ ಹೊರಟುಹೋದಳು. ಅವನು ಎದ್ದು ಮೇಖಲೆ ಕಡೆ ಬಂದ. ಅವಳು ಅವನನ್ನು ಹತ್ತಿರ ಬರಗೊಡದೆ ಕೈ ಅಡ್ಡ ಇಟ್ಟಳು. "ಮೊದಲು ಅಪಾಯಿಂಟ್‌ಮೆಂಟ್ ಆರ್ಡರ್ ಮೇಲೆ ಸಹಿ ಮಾಡಿ!" ಇದ್ದ ಸ್ಥಳದಲ್ಲಿಯೇ ನಿಂತು ದೊಡ್ಡದಾಗಿ ನಿಟ್ಟುಸಿರುಬಿಟ್ಟು ತಿರುಗಿ ಹೋಗಿ ತನ್ನ ರಿವಾಲ್ವಿಂಗ್ ಚೇರ್‌ನಲ್ಲಿ ಕುಳಿತುಕೊಂಡ. ಈ ಸಲ ಅವನು ಅವಳ ಕಡೆ ನೋಡುತ್ತಿರಲಿಲ್ಲ. ಎತ್ತಲೋ ನೋಡುತ್ತಾ ಕುಳಿತಿದ್ದ. ಅವಳ ಕಡೆ ನೋಡಬೇಕೆಂದರೇನೇ ಅವನ ಹೃದಯ ಭಯದಿಂದ ನಡುಗುತ್ತಿತ್ತು. ಐದು ನಿಮಿಷಗಳಲ್ಲಿ ಲೂಸಿ ಅಪಾಯಿಂಟ್‌ಮೆಂಟ್ ಆರ್ಡರ್ ಟೈಪ್ ಮಾಡಿಕೊಂಡು ಬಂದಳು. ಅವನು ಅವಳ ಕೈಯಿಂದ ಆ ಕಾಗದ ಕಿತ್ತುಕೊಳ್ಳುತ್ತಿರುವಂತೆ ಎಳೆದುಕೊಂಡು ಸರಸರನೆ ಸಹಿ ಮಾಡಿ ತನ್ನ ಸೀಲು ಹಾಕಿದ.

"ಥ್ಯಾಂಕ್ಯೂ!" ಅವಳು ಮುಗುಳ್ನಗುತ್ತಾ ಆ ಕಾಗದ ತೆಗೆದುಕೊಂಡು ಹ್ಯಾಂಡ್‌ಬ್ಯಾಗ್‌ನಲ್ಲಿಟ್ಟುಕೊಂಡಳು.

"ಲೂಸಿ, ನೀನಿನ್ನು ಹೋಗ್ಬಹುದು" ಎಂದ. ಲೂಸಿ ಹೊರಟುಹೋದಳು. ಅವನು ತಟಕ್ಕನೆದ್ದು ಹೋಗಿ ಬಾಗಿಲು ಹಾಕಿದ. ಮೇಖಲೆ ಆ ಕಡೆ ಗಂಭೀರವಾಗಿ ನೋಡಿದಳು. ಅವನು ಆ ಕೆಲಸ ಮಾಡುತ್ತಾನೆಂದು ಅವಳಿಗೆ

ಮೊದಲೇ ಗೊತ್ತಿತ್ತು. ಮನ್ಮಥರಾವ್ ಬಾಗಿಲು ಮುಚ್ಚಿ ನಾಯಿಯಂತೆ ಏದುಸಿರುಬಿಡುತ್ತಾ ಅವಳ ಹತ್ತಿರ ಬಂದ.

"ಯಾಕೆ ಹಾಗೆ ನಡುಗುತ್ತಿದೀಯಾ?" ಅವನ ಭುಜದ ಮೇಲೆ ವಿಲಾಸದಿಂದ ಕೈಹಾಕಿ ಪ್ರಶ್ನಿಸಿದಳು. ಆ ಪ್ರಶ್ನೆಯಿಂದ ಅವನು ಮತ್ತಷ್ಟು ಗಲಿಬಿಲಿಗೊಂಡ. ಅವನ ಮುಖ ಮತ್ತಷ್ಟು ದೀನವಾಯ್ತು. ಅವಳ ಪ್ರಶ್ನೆಗೆ ಉತ್ತರಿಸದೆ ಗಡಗಡ ನಡುಗುತ್ತಿದ್ದ ಕೈಗಳಿಂದ ಅವಳನ್ನು ಹತ್ತಿರ ಎಳೆದುಕೊಂಡ. ಅವಳು ಅಡ್ಡಿ ಮಾಡಲಿಲ್ಲ.

"ನಿನ್ನ.... ನಿನ್ನ ಹೆಸರೇನು?"

"ನನ್ನ ಹೆಸರು ಕೇಳಬೇಕೆಂದು ಈಗ ನೆನಪಾಯ್ತಾ? ನಾನು ಹೇಳೋಲ್ಲ!" ಅವಳು ಕೆಣಕುತ್ತಾ ನುಡಿದಳು.

"ಇಲ್ಲ ನನಗೆ ಬೇಕು! ನಿನ್ಹೆಸರು ಹೇಳು!"

"ಸಮ್ಮೋಹನಾಸ್ತ್ರ!"

"ಏನು?'

"ಸಮ್ಮೋಹನಾಸ್ತ್ರ! ಎಲ್ಲರೂ ನನ್ನನ್ನ ಆ ಹೆಸರಿನಿಂದಲೇ ಕರೀತಾರೆ!"

"ಆ ಹೆಸರಲ್ಲ– ಅಸಲಿ ಹೆಸರು!"

"ಅಸಲಿ ಹೆಸರು ಯಾವುದಾದರೆ ನಿನಗೇನು?"

"ಬೇಡ ಬಿಡು" ಎನ್ನುತ್ತಾ ಅವನು ಅಸಹನೆಯಿಂದ ಅವಳ ಸೆರಗು ಎಳೆದ. ಅವನಿಗೆ ಒಳಗೊಳಗೇ ಯಮಯಾತನೆಯಾಗಿತ್ತು. ಅವನ ಕೈಗಳು ಅವನಿಗೆ ಸರಿಯಾಗಿ ಸಹಕರಿಸುತ್ತಿರಲಿಲ್ಲ. ಕಾಲುಗಳೂ ಸರಿಯಾಗಿ ಸಹಕರಿಸುತ್ತಿಲ್ಲ. ಸೆರಗನ್ನು ತೊಲಗಿಸುತ್ತಲೇ ಉನ್ನತವಾಗಿ ಏರಿಳಿಯುತ್ತಿದ್ದ ಅವಳ ಎದೆಯನ್ನು ನೋಡಿ ಅವನ ಉಸಿರು ನಿಂತು ಹೋದಂತಾಯಿತು. ತಡೆದುಕೊಳ್ಳಲಾಗದೆ ಪಕ್ಕದಲ್ಲಿಯೇ ಇದ್ದ ಕುರ್ಚಿಯಲ್ಲಿ ಕುಸಿದು ಬಿದ್ದ. ಅವಳು ಮೋಹಕವಾಗಿ ನೋಡುತ್ತಾ ಸೀರೆಯ ನೆರಿಗೆಗಳನ್ನು ನಿಧಾನವಾಗಿ ಎಳೆಯುತೊಡಗಿದಳು. ಮನ್ಮಥರಾವ್ ಬಾಯಿ ತೆರೆದುಕೊಂಡು ನೋಡುತ್ತಿದ್ದ. ಅವನನ್ನು ಕೆರಳಿಸುತ್ತಾ ನಿಧಾನವಾಗಿ ತನ್ನ ಶರೀರದ ಮೇಲಿನ ಬಟ್ಟೆಗಳೆಲ್ಲವನ್ನೂ ತೆಗೆದುಹಾಕಿ ಅವನ ಮುಂದೆ ನಗ್ನಳಾಗಿ ನಿಂತುಕೊಂಡಳು. "ಊಂ ನೋಡು! ನೋಡಬೇಕೆಂದುಕೊಂಡೆಯಲ್ಲ, ನೋಡು! ಇದೇ ನಾನು! ಪೂರ್ತಿಯಾಗಿ ನಾನು! ನನ್ನಲ್ಲಿ ಅನಂತಾಕಾಶಗಳಿವೆ! ಅಂತ್ಯ ತಿಳಿಯದ ಸಮುದ್ರಗಳಿವೆ! ಕುಪ್ಪಳಿಸಿ ಧುಮುಕುವ ಜಲಪಾತಗಳಿವೆ! ಇಡೀ ಪ್ರಕೃತಿ ನನ್ನಲ್ಲಡಗಿದೆ! ಹಾಗೇಕೆ ನಡುಗುತ್ತಿದೀಯಾ? ನೋಡು!"

ಮನ್ಮಥರಾವ್ ಚಳಿಜ್ವರ ಬಂದವನಂತೆ ನಡುಗುತ್ತಿದ್ದ. ಅವಳ ನಗ್ನತೆ ಅವನನ್ನು ಭಯಭ್ರಾಂತನನ್ನಾಗಿ ಮಾಡುತ್ತಿತ್ತು. ಕೆಲವು ಯುಗಗಳಿಂದ ಬೆಳಕನ್ನೇ ಕಂಡಿರದ ಅಂಧನಿಗೆ ಹಠಾತ್ತನೆ ದೃಷ್ಟಿ ಬಂದು ಒಂದು ಸಾರಿಗೆ ಸೂರ್ಯಬಿಂಬವನ್ನು ನೋಡಿದರೆ ಕಣ್ಣುಗಳು ಮತ್ತೆ ಹೇಗೆ ಸಿಡಿದು ಹೋಗುತ್ತವೆಯೋ ಹಾಗೆ ಅವನ ಕಣ್ಣುಗಳು ಕುಕ್ಕಿದಂತಾಗುತ್ತಿದ್ದವು. ತಡೆದು ಕೊಳ್ಳಲಾಗುತ್ತಿಲ್ಲ.

"ಯಾಕೆ ಹಾಗೆ ಕಣ್ಣು ಮುಚ್ಚಿಕೊಂಡಿದೀಯ? ನೋಡು!" ಅವಳು ಆಜ್ಞಾಪಿಸಿದಳು. ಅವನು ಭಯದಿಂದ ಒಂದು ಸಲ ಕಣ್ಣು ತೆರೆದು ಮತ್ತೆ ಮುಚ್ಚಿಕೊಂಡ. "ಇಷ್ಟೇನಾ ನಿನ್ನ ಗಂಡಸುತನ? ಇಷ್ಟೇನಾ? ಕಣ್ಣು ತೆರೆ!" ಅವಳು ಅವನಿಗೆ ಸವಾಲು ಹಾಕಿದಳು.

"ನೋ!" ಅವನು ಗೊಣಗಿದ.

"....ಛೀ ನೀನಿಷ್ಟು ಕೆಲಸಕ್ಕೆ ಬಾರದವನೆಂದುಕೊಂಡಿರಲಿಲ್ಲ! ನೀನು ಗಂಡಸೇ ಅಲ್ಲವೆಂದುಕೊಂಡಿರಲಿಲ್ಲ! ಇಷ್ಟು ಮಾತ್ರಕ್ಕೇನಾ ಕಣ್ಣಿಗೆ ಸುಂದರವಾಗಿ ಕಾಣಿಸಿದ ಹೆಣ್ಣುಗಳನ್ನೆಲ್ಲಾ ಪಿಳಿ ಪಿಳಿ ನೋಡುತ್ತಿದ್ದುದು ? ಇಷ್ಟು ಮಾತ್ರಕ್ಕೇನಾ ಪ್ರತಿ ಹೆಣ್ಣನ್ನೂ ನೋಟದಿಂದ ಚುಚ್ಚಿಚುಚ್ಚಿ ಹಿಂಸಿಸೋದು ? ಇಷ್ಟು ಮಾತ್ರಕ್ಕೇನಾ ಆಫೀಸಿನಲ್ಲಿನ ಹೆಣ್ಣುಗಳ ಹಿಂದೆ ಬಿದ್ದು ಪೀಡಿಸೋದು ? ನಿನಗೆ ನಾಚಿಕೆಯಾಗ್ತಿಲ್ವಾ? ಒಂದು ಹೆಣ್ಣು ತಾನಾಗಿ ಕರೆದ್ರೂ ಬರುತ್ತಿಲ್ಲವಲ್ಲ? ನೀನು ನಿಜವಾಗಿಯೂ ಗಂಡಸೇನು?" ಅವನ ಮೇಲೆ ಸಿಂಹಿಣಿಯಂತೆ ಹಾರಿ ಎರಡು ಕೈಗಳಿಂದಲೂ ಗಟ್ಟಿಯಾಗಿ ಹಿಡಿದುಕೊಂಡು ಅವನನ್ನು ಹಿಂಡಿ ಹಿಪ್ಪೆ ಮಾಡಿದಳು. ಅವನ ತಲೆಯನ್ನು ತನ್ನ ವಕ್ಷೋಜಗಳಿಗೆ ಅಪ್ಪಿಕೊಂಡು ತಿಕ್ಕಿದಳು. ಅವನ ಕೈಗಳನ್ನು ತನ್ನ ಅಂಗಾಂಗಗಳ ಮೇಲೆ ಹಾಕಿಕೊಳ್ಳುತ್ತಾ ಮೇಲೆ ಬಿದ್ದು ಕಚ್ಚಿದಳು. ಅವನು ಕುಸಿದುಬಿದ್ದ. ಯಾವ ಹೆಣ್ಣಾದರೂ ಬೆಡ್ ರೂಮಿನಲ್ಲಿ ಒಬ್ಬ ಗಂಡಸನ್ನು ನೀನು ಗಂಡಸೇ ಅಲ್ಲವೆಂದರೆ, ಆ ಗಂಡಸಿನ ಗಂಡಸುತನ ಅಲ್ಲಿಗೆ ಪರಿಸಮಾಪ್ತಿ! ಅವಮಾನದಿಂದ ಕೊರಗುತ್ತಾನೆ! ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅವಳು ವಿಜೃಂಭಿಸುತ್ತಿದ್ದರೆ ಅವನು ಕುಗ್ಗಿ ಹೋಗುತ್ತಿರುತ್ತಾನೆ. ಹಠಾತ್ತನೆ ಮನ್ಮಥರಾವ್‌ನ ಮನಸ್ಸಿನಲ್ಲಿ ತಾನು ನಪುಂಸಕನಾಗಿಬಿಟ್ಟೆನೇನೋ ಎನ್ನುವ ಅವಮಾನ ಮೂಡಿತು. ತನ್ನಲ್ಲಿ ಚಲನೆಯುಂಟಾಗುತ್ತಿಲ್ಲ. "ಬಾ........ ಬಾ........" ಅವಳು ಕರೆಯುತ್ತಲೇ ಇದ್ದಳು.

"ನೋ!" ಮೆಲ್ಲಗೆ ಕೂಗಿದ ಅವನು ಥಟ್ಟನೆ ಎದ್ದು ಅವಳ ಕಾಲುಗಳ

ಮೇಲೆ ಬಿದ್ದ. "ನನ್ನ ಕೊಲ್ಬೇಡ! ನನ್ನನ್ನ ಕಾಪಾಡು! ರಕ್ಷಿಸು! ನಿನ್ನ ನಗ್ನತೆಯನ್ನು ನಾನು ನೋಡಲಾರೆ! ನಿನ್ನ ಸೌಂದರ್ಯವನ್ನು ನಾನು ಮುಟ್ಟ ಲಾರೆ! ಪ್ಲೀಸ್! ನನ್ನನ್ನ ಕಾಪಾಡು! ನನ್ನಲ್ಲಿ ಅಪೇಕ್ಷೆಯುಂಟಾಗುತ್ತಿಲ್ಲ! ಭಯ ಉಂಟಾಗುತ್ತಿದೆ! ಪ್ಲೀಸ್ ನಿನ್ನ ನಗ್ನರೂಪವನ್ನು ಉಪಸಂಹರಿಸು.... ಉಪಸಂಹರಿಸು!...." ಅವಳ ಕಾಲ ಮೇಲೆ ಬಿದ್ದು ಬಿಕ್ಕಿಬಿಕ್ಕಿ ಅಳುತ್ತಿದ್ದ. ಏನು ಮಾಡಬೇಕೆಂದುಕೊಂಡಿದ್ದ! ಈಗೇನಾಗಿದೆ! ಅವನ ದೀನಾವಸ್ಥೆಯನ್ನು ನೋಡಿ ಅವಳು ಎರಡು ಕೈಗಳನ್ನೂ ಸೊಂಟದ ಮೇಲಿಟ್ಟುಕೊಂಡು ಜೋರಾಗಿ ನಕ್ಕಳು. ಆ ಕ್ಷಣದಲ್ಲಿ ಅವಳು ಮಹಾ ಶಕ್ತಿ ಸ್ವರೂಪಿಣಿ! ಪುರುಷನನ್ನು ಪ್ರಾರ್ತಿಯಾಗಿ ಭಸ್ಮ ಮಾಡಬಲ್ಲ ಅಭಿನವ ಮೋಹಿನಿ! ವಿಲಯಕಾರಿಣಿ! ಕಲ್ಲೋಲವಾಹಿನಿ! ಅವಳ ವಿಕೃತವಾದ ನಗು ನೋಡಿ ಅವನು ಮತ್ತಷ್ಟು ನಡುಗುತ್ತಾ ಬೆವೆತ. ಅವಳು ನಿಧಾನವಾಗಿ ಎಡಗಾಲು ಮೇಲೆತ್ತಿ ಪಾದವನ್ನು ಅವನ ಮುಖಕ್ಕೆ ತಂದಳು. ಅವನು ನಡುಗುತ್ತಾ ಕಣ್ಣರಳಿಸಿ ನೋಡಿದ. ಅವಳು ಪಾದವನ್ನು ಅವನ ಮುಖಕ್ಕೆ ತಾಗಿಸಿ ಕಾಲಿನಿಂದಲೇ ಅವನನ್ನು ತಳ್ಳಿದಳು. ಅವನು ಅಂಗಾ ತನಾಗಿ ಹಿಂದಕ್ಕೆ ಬಿದ್ದ.

ಅವಳು ಥಟ್ಟನೆ ಅವನ ಎದೆಯ ಮೇಲೆ ಕುಳಿತು ಅವನ ಮುಖವನ್ನು ಕ್ರೂರವಾಗಿ ನೋಡಿದಳು. "ನಾನು ಯಾರು ಗೊತ್ತೆ ? ಸಮ್ಮೋಹನಾಸ್ತ್ರ! ಒಂದು ರಾತ್ರಿಗೆ ನನ್ನ ಬೆಲೆಯೆಷ್ಟು ಗೊತ್ತೇ? ಲಕ್ಷ ರೂಪಾಯಿ. ನನ್ನನ್ನು ಅನುಭವಿಸುವುದು ನಿನ್ನಿಂದ ಶಕ್ಯವಿಲ್ಲ, ಹತ್ತು ಸಾವಿರ ರೂಪಾಯಿಗಳಿಗೆ ನನ್ನ ನಗ್ನ ದೇಹವನ್ನು ಕಣ್ಣಿಂದ ನೋಡಿದೆ- ಅದೇ ನಿನ್ನ ಅದೃಷ್ಟ! ನನ್ನನ್ನು ನೋಡುವ ಅರ್ಹತೆ ಕೂಡ ನಿನಗಿಲ್ಲ! ಆದರೂ ನಿನ್ನ ಹತ್ತಿರ ಬಂದೆ! ಯಾಕೆ ಗೊತ್ತಾ! ಒಬ್ಬ ಅಭಾಗ್ಯನನ್ನು ಆತ್ಮಹತ್ಯೆಯಿಂದ ಕಾಪಾಡಲು! ಈ ಹತ್ತು ಸಾವಿರ ರೂಪಾಯಿಗಳನ್ನು ಅವನನ್ನು ಮೋಸಗೊಳಿಸಿ ನೀನು ಸಂಪಾದಿಸಿದ್ದು- ತಿರುಗಿ ಅವನಿಗೆ ಕೊಡುತ್ತೇನೆ! ಗುಡ್ ಬೈ!".

ಅವಳ ಮಾತುಗಳನ್ನು ಅವನು ಕೇಳಿಸಿಕೊಳ್ಳುತ್ತಿಲ್ಲ! ಏನು ನಡೆಯಿತೋ ಏನು ನಡೆಯುತ್ತಿದೆಯೋ ಅವನಿಗೇನೂ ನೆನಪಿರಲಿಲ್ಲ! ಅವನಿಗೆ ನೆನಪಿದ್ದುದೆಲ್ಲಾ ಒಂದೇ! ತಾನು ನಪುಂಸಕನಾದೆ! ತಾನು ನಂಪುಸಕನಾದೆ ಎನ್ನುವ ಭಯಂಕರ ವಾದ ಊಹೆಯಿಂದಲೇ ಅವನಿಗೆ ಜ್ಞಾನ ತಪ್ಪಿತು.

ಮಣಿಮೇಖಲೆ ಆ ಆಫೀಸಿನಿಂದ ಹೊರಬಿದ್ದು ವಿಜಯಗರ್ವದಿಂದ ಕಾರು ಹತ್ತಿ ಸ್ಟಾರ್ಟ್ ಮಾಡಿದಳು. ಅವಳ ಕಾರು ಕಾಂಪೌಂಡ್ ದಾಟಿ ಹೋದೊಡನೆಯೇ ಕ್ರೋಟನ್ ಗಿಡಗಳ ಮರೆಯಿಂದ ಒಂದು ಆಕಾರ ನಿಧಾನವಾಗಿ ಹೊರಬಂತು. ಅವನ ಕೊರಳಲ್ಲಿ ಪವರ್‌ಫುಲ್ ಕ್ಯಾಮರಾ ನೇತಾಡುತ್ತಿತ್ತು. ಆ ಕ್ಯಾಮರಾದಿಂದಲೇ ಕ್ರೋಟನ್ ಗಿಡಗಳ ಮರೆಯಿಂದ ಅವನು ತಾನು ಕಾರು ಹತ್ತುತ್ತಿರುವಾಗ ಆ ಫೋಟೋ ತೆಗೆದನೆಂದು ಅವಳಿಗೆ ತಿಳಿಯದು.

ಅವನು........ ಜಾನೀವಾಕರ್!

"ಪೋಸ್ಟ್!" ಹೊರಗಿನಿಂದ ಪೋಸ್ಟ್‌ಮನ್‌ನ ಕೂಗು ಕೇಳಿಸಿತು.

ಆಶಾರಾಜ ಬಾಗಿಲಿನಿಂದ ಹೊರಬಂದ. ನಿರಾಶೆಯಿಂದ ನಿರುತ್ಸಾಹದಿಂದ ಪೋಸ್ಟ್‌ಮನ್‌ಕಡೆ ನೋಡಿದ. "ಇದು ನಿಮಗೆ ರಿಜಿಸ್ಟರ್ ಪೋಸ್ಟ್‌ನಲ್ಲಿ ಬಂತು ಸಾರ್!"ಎನ್ನುತ್ತಾ ಒಂದು ಉದ್ದನೆಯ ಕವರನ್ನು ಅವನ ಕೈಗಿತ್ತ. ಆಶಾರಾಜ ಆಶ್ಚರ್ಯದಿಂದ ಸಹಿ ಮಾಡಿ ಕವರ್ ತೆಗೆದುಕೊಂಡ, ತನಗೆ ರಿಜಿಸ್ಟರ್ ಪೋಸ್ಟಿನಲ್ಲಿ ಪತ್ರ ಕಳುಹಿಸುವವರು ಯಾರೂ ಇಲ್ಲ. ಸರಸರನೆ ಕವರ್ ಹರಿದು ಒಳಗಿನ ಕಾಗದಗಳನ್ನು ಹೊರತೆಗೆದ. ಅವನ ಆಶ್ಚರ್ಯಕ್ಕೆ ಮೇರೆಯಿರಲಿಲ್ಲ!

ಯಾವ ಮನ್ಮಥರಾವ್ ಲಂಚ ತೆಗೆದುಕೊಂಡೂ ಕೆಲಸ ಇಲ್ಲವೆಂದು ಹೊರತಳ್ಳಿದ್ದನೋ ಅದೇ ಮನ್ಮಥರಾವ್‌ನಿಂದಲೇ ಬಂದ ಅಪಾಯಿಂಟ್‌ಮೆಂಟ್ ಆರ್ಡರ್ ಅದು! ಗುಮಾಸ್ತನ ಕೆಲಸಕ್ಕಲ್ಲ– ಅಸಿಸ್ಟೆಂಟ್ ಮ್ಯಾನೇಜರ್ ಕೆಲಸಕ್ಕೆ! ಅದರೊಂದಿಗೇ ಹತ್ತುಸಾವಿರ ರೂಪಾಯಿಗಳಿಗೆ ಬ್ಯಾಂಕಿನ ಚೆಕ್ಕೊಂದನ್ನು ಲಗತ್ತಿಸಲಾಗಿತ್ತು. ಅವೆರಡೂ ಅಲ್ಲದೆ ಮತ್ತೊಂದು ಕಾಗದ ಇತ್ತು. ಅವನು ಸಂಭ್ರಮಾಶ್ಚರ್ಯದಿಂದ ಆ ಕಾಗದ ತೆರೆದು ನೋಡಿದ.

"ಆಶಾರಾಜ್,

"ನನ್ನ ಮಾತು ಉಳಿಸಿಕೊಂಡಿದ್ದೇನೆ. ಯಾವ ಕಂಪನಿ ನಿನ್ನನ್ನು ಹೊರ ತಳ್ಳಿತ್ತೋ ಅದೇ ಕಂಪನಿಯಲ್ಲಿ ನಿನಗೆ ಇನ್ನೂ ದೊಡ್ಡ ಕೆಲಸವನ್ನು ಕೊಡಿಸುತ್ತಿದ್ದೇನೆ. ನೀನು ಲಂಚ ಕೊಟ್ಟ ಹತ್ತು ಸಾವಿರ ರೂಪಾಯಿಗಳನ್ನು ಕೂಡ ಮತ್ತೆ ನಿನಗೆ ಸಿಗುವಂತೆ ಮಾಡುತ್ತಿದ್ದೇನೆ. ಒಂದು ವೇಳೆ ನಾನು ಇಚ್ಛಿಸಿದ್ದರೆ ನಿನಗೆ ಬೇರೆಲ್ಲಿಯಾದರೂ ಕೆಲಸ ಕೊಡಿಸಬಲ್ಲವಳಾಗಿದ್ದೆ. ಆದರೆ ನಿನ್ನನ್ನು ಮೋಸಗೊಳಿಸಿದ ಮನ್ಮಥರಾವ್‌ಗೆ ಬುದ್ಧಿ ಕಲಿಸಬೇಕೆನಿಸಿತು, ಬುದ್ಧಿ

ಕಲಿಸಿದೆ! ಆಶಾರಾಜ ಎಂದು ಹೆಸರಿಟ್ಟುಕೊಂಡಿದ್ದಕ್ಕೆ ಇನ್ನು ಮುಂದಾದರೂ ನಿರಾಶಾವಾದವನ್ನು ಬಿಡು! ನಿನಗೆ ದ್ರೋಹ ಮಾಡಿದವರನ್ನು ಧೈರ್ಯವಾಗಿ ಎದುರಿಸಿ ಜಯಿಸುವುದನ್ನು ಕಲಿತುಕೋ! ಇದೇ ನಿನ್ನಿಂದ ನಾನು ಕೇಳುತ್ತಿರುವ ಪ್ರತಿಫಲ!

"ಇನ್ನು ಮತ್ತೆ ನಾವು ಭೇಟಿಯಾಗಕೂಡದೆಂದು ಕೋರುತ್ತಾ........ ಅನಾಮಿಕ".

ಆಶಾರಾಜ ತುಂಬಾ ಹೊತ್ತು ಆ ಪತ್ರದ ಕಡೆಯೇ ನೋಡುತ್ತಿದ್ದುಬಿಟ್ಟ. ಅವನ ಕಣ್ಣುಗಳಲ್ಲಿ ಕ್ರಮೇಣ ನಿರಾಶೆಯ ಕತ್ತಲು ತೊಲಗಿ ಆಶಾಕಿರಣ ಮೂಡ ತೊಡಗಿತು.

## ೮

ಆಕಾಶ ಹೊತ್ತಿ ಉರಿಯುತ್ತಿರುವಂತಿತ್ತು! ದಿಕ್ಕು ತೋಚದ ಮೇಘವೊಂದು ಕಂಬಿಗಳಲ್ಲಿ ಸಿಕ್ಕಿಕೊಂಡು ರೋದಿಸುತ್ತಿತ್ತು! ಬರುವವರು ಯಾರೂ ಇಲ್ಲ- ಬರೋದಿಲ್ಲ- ಗಂಟಲುಗಳು ದಾಹದಿಂದ ಪರಿತಪಿಸುತ್ತಿದ್ದುವು. ತೊಂದರೆಗೆ ಸಿಕ್ಕಿದ ಆ ಬಡಪಾಯಿಗಳ ಮೊರೆಯನ್ನು ಕೇಳಲು ಅಲ್ಲಿ ಯಾರೂ ಇರಲಿಲ್ಲ.

ಅದು ಹೈದರಾಬಾದ್‌ನ ಒಂದು ಸ್ಲಮ್ ಪ್ರದೇಶ. ಆ ದಿನ ಸೂರ್ಯಾಸ್ತ ಸಮಯದ ವೇಳೆಗೆ ಅಲ್ಲೆಲ್ಲಾ ಗೊಂದಲಮಯವಾಗಿತ್ತು. ಆ ಗೊಂದಲಕ್ಕೆ ಕಾರಣ.... ಆ ಪ್ರದೇಶದಲ್ಲಿ ಹೊಸದಾಗಿ ಕಟ್ಟಲಾಗಿದ್ದ ವಾಟರ್ ಟ್ಯಾಂಕೊಂದು ಪ್ರಾರಂಭೋತ್ಸವ ನಡೆದ ವಾರದಲ್ಲಿಯೇ ಬಿರುಕು ಬಿಟ್ಟು ಫಟೇರೆಂದು ಸಿಡಿದು ನೆಲಕ್ಕೊರಗಿತು. ಆ ರೀತಿ ನೆಲಕ್ಕೊರಗಿದ ವಾಟರ್ ಟ್ಯಾಂಕ್ ತುಂಬಾ ಅಪಾಯ ಉಂಟುಮಾಡಿತು. ಕೈಲಾದ ಮಟ್ಟಿಗೂ ದುಡ್ಡು ನುಂಗುವುದೇ ಧ್ಯೇಯವಾಗಿಟ್ಟುಕೊಂಡಿದ್ದ ಕಂಟ್ರಾಕ್ಟರ್ ಆ ಟ್ಯಾಂಕ್ ಅನ್ನು ಸರಿಯಾಗಿ ಕಟ್ಟಿರಲಿಲ್ಲ. ಲಂಚ ಪಡೆದ ಅಧಿಕಾರಿಗಳು ಟ್ಯಾಂಕ್ ಸರಿಯಾಗಿ ಕಟ್ಟುತ್ತಿದ್ದಾನೋ, ಇಲ್ಲವೋ ಎಂದು ಪರೀಕ್ಷಿಸುವ ಗೊಡವೆಗೆ ಹೋಗಲಿಲ್ಲ. ಆ ನಿರ್ಲಕ್ಷ್ಯದ ಪರಿಣಾಮವಾಗಿ, ಆ ಅನೀತಿಯ ಕಾರಣವಾಗಿ ಘೋರವಾದ ಅಪಘಾತ ಸಂಭವಿಸಿತು. ಟ್ಯಾಂಕ್ ಒಡೆದೊಡನೆಯೇ ಕೆಲ ಲಕ್ಷ ಗ್ಯಾಲನ್‌ಗಳಷ್ಟು ನೀರು ಬಂದೀಖಾನೆಯಿಂದ ಹೊರಬೀಳಲು ದಾರಿ ದೊರೆತೊಡನೆ ಒಂದೇ ಸಲಕ್ಕೆ

ವಿಜೃಂಭಿಸಿತು. ವಿಪರೀತವಾದ ಶಕ್ತಿಯಿಂದ ಟ್ಯಾಂಕನ್ನು ಒಡೆದುಕೊಂಡು ಶರವೇಗದಿಂದ ಹೊರಬಿತ್ತು. ಆ ಪ್ರಚಂಡ ಶಕ್ತಿಗೆ ಒಡೆದ ಟ್ಯಾಂಕಿನ ಅವಶೇಷಗಳು ಕೆಲವು ನೂರು ಅಡಿ ದೂರ ಹೋಗಿಬಿದ್ದವು. ಟ್ಯಾಂಕಿನ ಕೆಳಗೇ ಆಡುತ್ತಿದ್ದ ಹದಿನಾಲ್ಕು ಮಕ್ಕಳು ಸ್ಥಳದಲ್ಲಿಯೇ ಪ್ರಾಣಬಿಟ್ಟರು. ಇನ್ನೂ ನಾಲ್ಕು ಜನ ದೊಡ್ಡವರು ತಲೆ ಒಡೆದು ಪ್ರಾಣ ಕಳೆದುಕೊಂಡರು. ಯಾವಾಗಲೂ ಬಡ ಜನರಿಂದ ಕಿಕ್ಕಿರಿದು ತುಂಬಿರುವ ಆ ಪ್ರದೇಶದಲ್ಲಿ ಮತ್ತೆ ಕೆಲವು ಜನ ತೀವ್ರವಾಗಿ ಗಾಯಗೊಂಡು ಮೃತ್ಯುವಿನ ಜೊತೆ ಹೋರಾಡುತ್ತಿದ್ದರು. ಇನ್ನೂ ತುಂಬಾ ಜನ ಸ್ವಲ್ಪ ಗಾಯಗಳೊಂದಿಗೆ ಪಾರಾದರು.

ಅಲ್ಲಿಯವರೆಗೂ ಪ್ರಶಾಂತವಾಗಿದ್ದ ಆ ಪ್ರದೇಶ ಅಳುವಿನಿಂದ ತುಂಬಿತು. ಸರಿಯಾಗಿ ಅದೇ ಸಮಯದಲ್ಲಿ ಒಬ್ಬ ವ್ಯಕ್ತಿ ಆ ಪ್ರದೇಶದಲ್ಲಿ ಪ್ರವೇಶಿಸಿದ. ಅವನಿಗೆ ಸುಮಾರು ಮೂವತ್ತು ವರ್ಷಗಳಿರಬಹುದು. ಕೂದಲು ಅಡ್ಡಾದಿಡ್ಡಿಯಾಗಿ ಬೆಳೆದು, ಭುಜದ ತನಕ ಇಳಿಬಿದ್ದಿತ್ತು. ಯಾವ ಕಾಲದಲ್ಲಿ ಹೆರೆದುಕೊಂಡಿದ್ದನೋ ಏನೋ ಗಡ್ಡ ಮೀಸೆಗಳು ಅಸ್ತವ್ಯಸ್ತವಾಗಿ ಬೆಳೆದು ವಿಕಾರವಾಗಿ ಕಾಣುತ್ತಿದ್ದವು. ತಲೆಗೆ ತೂತು ಬಿದ್ದಿದ್ದ ಹ್ಯಾಟ್ ಧರಿಸಿದ್ದ. ಅವನು ತೊಟ್ಟುಕೊಂಡಿದ್ದ ಶರ್ಟು ಒಂದೊಮ್ಮೆ ಒಳ್ಳೆಯ ಸ್ಥಿತಿಯಲ್ಲಿತ್ತು. ಈಗ ಮೂಲ ರೂಪದಿಂದ ತುಂಬಾ ಬೇರೆಯಾಗಿ ಜೀರ್ಣಗೊಳ್ಳುವ ಸ್ಥಿತಿಯಲ್ಲಿತ್ತು. ಅದರ ಮೇಲೆ ವೇಸ್ಟ್‌ಕೋಟು ಧರಿಸಿದ್ದ. ಅದೂ ಅಂತಹುದೇ ಸ್ಥಿತಿಯಲ್ಲಿತ್ತು. ಅವನು ತೊಟ್ಟಿದ್ದ ಪ್ಯಾಂಟು ಮೊದಲು ಯಾವ ಬಣ್ಣದಲ್ಲಿತ್ತೋ ಏನೋ ಈಗಂತೂ ಬಣ್ಣ ಕೆಟ್ಟು ಮರಣಾವಸ್ಥೆಯಲ್ಲಿತ್ತು. ಭುಜಕ್ಕೊಂದು ಚೀಲ ನೇತಾಡುತ್ತಿತ್ತು. ಆ ಚೀಲದಲ್ಲಿ ಯಾವುದೋ ದಪ್ಪನೆಯ ವಸ್ತುವಿದ್ದಂತೆ ಭಾರವಾಗಿ ಕಾಣಿಸುತ್ತಿತ್ತು. ಅವನ ಕಣ್ಣುಗಳು ವಿಷಾದದಿಂದ ನೋಡುತ್ತಿದ್ದವು. ತಲೆಯ ಮೇಲಿನ ಹ್ಯಾಟನ್ನು ಡಿಗ್ನಿಫೈಡ್ ಆಗಿ ಸರಿಪಡಿಸಿಕೊಳ್ಳುತ್ತಾ ಆ ಸ್ಲಮ್‌ಗೆ ಪ್ರವೇಶಿಸಿದ. ಅವನು ಬೊಬ್ಬೆ ಹೊಡೆಯುತ್ತಾ ಅತ್ತ ಇತ್ತ ಓಡುತ್ತಿದ್ದ ಜನರನ್ನು ವಿಚಿತ್ರವಾಗಿ ನೋಡಿದ. ಜನ ಅವನನ್ನು ತಳ್ಳುತ್ತಾ ಓಡುತ್ತಿದ್ದರು. ಅವನು ಹಿಂದು ಹಿಂದಕ್ಕೆ ಸರಿಯುತ್ತಾ ರಸ್ತೆಯ ಒಂದು ಪಕ್ಕಕ್ಕೆ ಸರಿದು ನಿಂತುಕೊಂಡ. ಕೆಲವು ಕ್ಷಣಗಳ ನಂತರ ಗಡಿಬಿಡಿಯಿಂದ ಹೋಗುತ್ತಿದ್ದ ಒಬ್ಬ ಯುವಕನ ಕೈಹಿಡಿದು ನಿಲ್ಲಿಸಿದ. "ಏನಾಯ್ತು ಬಾಸ್? ಎಲ್ಲ ಯಾಕೆ ಹೀಗೆ ಓಡ್ತಿದಾರೆ?" ಆ ಯುವಕ ಅವನ ಕಡೆ ಹುಚ್ಚನನ್ನು ನೋಡಿದಂತೆ ನೋಡಿ ಕೈಬಿಡಿಸಿಕೊಂಡು ಉತ್ತರಿಸದೆ ಮುಂದೆ ಹೊರಟುಹೋದ. ಅವನು 'ಸರಿಬಿಡು' ಎನ್ನುವಂತೆ ತಲೆಯಾಡಿಸಿ ಮತ್ತೆ ಒಂದು ಪಕ್ಕಕ್ಕೆ ಸರಿದು ನಿಂತುಕೊಂಡ. ಅಷ್ಟರಲ್ಲಿಯೇ

ಯಾರೋ ಮುದುಕ ಅತ್ತ ಕಡೆ ಓಡುತ್ತಾ ಅವನೆದುರಿಗೆ ಬಂದ. ಅಷ್ಟೇ! ತಟಕ್ಕನೆ ಜಿಗಿದು ಅವನು ಆ ಮುದುಕನ ಮೇಲೆ ಬಿದ್ದು ಅಲುಗಾಡದಂತೆ ಬಿಗಿದು ಹಿಡಿದುಕೊಂಡ. "ಯಾರೋ ನೀನು!" ಆ ಮುದುಕ ಕೊಸರಾಡಿದ. ಅವನು ಬಿಡಲಿಲ್ಲ. ಅವನ ಧೃತರಾಷ್ಟ್ರ ಆಲಿಂಗನದಲ್ಲಿ ಒದ್ದಾಡುತ್ತಿದ್ದ ಆ ಮುದುಕ ಹಠಾತ್ತನೆ ಕೊಸರಾಡುವುದನ್ನು ನಿಲ್ಲಿಸಿ ಅವನ ಕಣ್ಣುಗಳೊಳಕ್ಕೆ ನೇರವಾಗಿ ನೋಡಿ ಜೋರಾಗಿ ಕೂಗು ಹಾಕಿದ. "ಹುಚ್ಚನಪ್ಪೋ....ಹುಚ್ಚ! ನನ್ನ ಕೊಲ್ತಿದಾನೆ!"

ಆ ಕೂಗು ಕೇಳುತ್ತಲೇ ಅವನು ತಟಕ್ಕನೆ ಮುದುಕನ ಬಾಯಿಮುಚ್ಚಿದ.

"ಬಾಸ್ ಬಾಸ್! ನಾನು ಹುಚ್ಚನಲ್ಲ ಬಾಸ್! ನಾನು ಒಳ್ಳೆಯೋನು ಬಾಸ್! ಯಾರನ್ನ ಕೇಳಿದ್ರೂ ಏನಾಯ್ತೂಂತ ಹೇಳ್ತಿಲ್ಲ ಬಾಸ್! ನೀವಾದ್ರೂ ಹೇಳಿ ಬಾಸ್! ದೇವರು ನಿಮಗೆ ಒಳ್ಳೆಯದು ಮಾಡ್ತಾನೆ ಬಾಸ್!" ಎಂದು ಹೇಳುತ್ತಾ ಆ ಮುದುಕನನ್ನು ಬಿಟ್ಟ.

ಮುದುಕ ಅವನನ್ನು ದಿಟ್ಟಿಸಿ ನೋಡಿದ. "ದೇವರೆ ? ದೇವರೇನು ಮಾಡ್ತಾನೋಲೇ!"

"ಆ ದೇವರಲ್ಲ ಬಾಸ್! ಆ ದೇವರಿಗೆ ನಿಮ್ಮ ಕಷ್ಟಸುಖ ಗಮನಿಸುವಷ್ಟು ಟೈಮಿಲ್ಲ! ಈ ದೇವ........ ಈ ದೇವ ಬಾಸ್! ಈ ದೇವ ನಿಮಗೆ ಒಳ್ಳೇದು ಮಾಡ್ತಾನೆ!" ತನ್ನ ಎದೆ ತಟ್ಟಿಕೊಳ್ಳುತ್ತಾ ನುಡಿದ.

"ನೀನಾ?! ನೀನು ದೇವರಾ? ನೀನೇನು ದೇವರೇನೋಲೇ?" ಅವನು ವಿಷಾದದಿಂದ ನೋಡುತ್ತಾ ನಕ್ಕ.

"ನಾನು ದೇವನೇ ಬಾಸ್! ನಿಜವಾಗ಼್ಲೂ ದೇವನೇ!" ಆ ಮುದುಕ ಅವನನ್ನು ಮೇಲೆ ಕೆಳಗೆ ನೋಡಿ ಜೋರಾಗಿ ನಗುತ್ತಾ ಅಲ್ಲಿಂದ ಹೋಗಲು ದ್ಯುಕ್ತನಾದ. ಅವನು ತಟಕ್ಕನೆ ಆ ಮುದುಕನ ಕೈ ಹಿಡಿದುಕೊಂಡ.

"ಏನಾಯ್ತು ಹೇಳು ಬಾಸ್!"

ಆ ಮುದುಕ ಕೈ ಬಿಡಿಸಿಕೊಂಡ. "ಹೇಳ್ತೀನಿ ಬಿಡೋ ಹುಚ್ಚ! ನೀರಿನ ಟ್ಯಾಂಕು ಕುಸಿದು ಬಿದ್ದಿದೆ– ಆ ಕಂಟ್ರಾಕ್ಟರ್‌ನ ಮಹಿಮೆ! ಎಷ್ಟು ಜನ ಸತ್ತಿದ್ದಾರೊ, ಎಷ್ಟು ಜನ ಬದುಕಿದ್ದಾರೋ ಗೊತ್ತಾಗಿಲ್ಲ. ಸಾಕಾ?" ಆ ಮಾತು ಕೇಳುತ್ತಲೇ ಹುಚ್ಚನಂತೆ ಕಾಣಿಸುತ್ತಿದ್ದ ಆ ಯುವಕನ ಮುಖ ಬಾಡಿತು. ತುಟಿಗಳು ನಗುತ್ತಿರುವಂತೆಯೇ ಇದ್ದವು. ಕಣ್ಣುಗಳು ಅಳತೊಡಗಿದವು! ಕಣ್ಣೀರು ಉಕ್ಕಿಬಂದವು. ಥೇಟ್ ಹುಚ್ಚನಂತೆಯೇ ಅಳತೊಡಗಿದ. ಮುದುಕ ಅವನನ್ನು ವಿಚಿತ್ರವಾಗಿ ನೋಡಿದ. "ನೀನ್ಯಾಕೆ ಅಳ್ತಿದೀಯೋ ಹುಚ್ಚ? ಸತ್ತ

ವರಲ್ಲಿ ನಿನ್ನವರ್‍ಯಾರಾದರೂ ಇದ್ದಾರಾ?"

"ನನಗಾ ಬಾಸ್ ? ನನ್ನವರಾ ಬಾಸ್ ? ಎಲ್ಲರೂ ನನ್ನವರೇ ಬಾಸ್".

"ಎಲ್ಲರೂ ನಿನ್ನವರು ಹೇಗಾಗ್ತಾರೋ ಹುಚ್ಚ!"

"ಹೌದು ಬಾಸ್. ಎಲ್ಲರೂ ನನ್ನವರೇ!" ಕಣ್ಣೊರಿಸಿಕೊಳ್ಳುತ್ತಾ ಅವನು ಹೇಳಿದ. "ದೇವ ನಿಮಗೆ ಒಳ್ಳೇದು ಮಾಡ್ತಾನೆ ಬಾಸ್. ದೇವ ನಿಮಗೆಲ್ಲರಿಗೂ ಒಳ್ಳೇದು ಮಾಡ್ತಾನೆ........ ನಿಜವಾಗ್ಲೂ!"

"ನೀನಾ! ನೀನು ನಮಗೆ ಒಳ್ಳೇದು ಮಾಡ್ತೀಯಾ? ನೀನೇನು ಮಾಡ್ತೀಯೋ- ಗವರ್ನ್‌ಮೆಂಟ್ನೋರೇ ಏನೂ ಮಾಡ್ತಿಲ್ಲ!"

"ಇಲ್ಲ ಬಾಸ್! ದೇವ ನಿಮಗೆ ಒಳ್ಳೇದು ಮಾಡ್ತಾನೆ! ನಿಜವಾಗ್ಲೂ.....!"

"ಹೋಗೋ ಹುಚ್ಚ.... ಹೋಗ್ಹೋಗು!" ಮುದುಕ ಅವನ ಕುತ್ತಿಗೆ ಕೈ ಕೊಟ್ಟು ತಳ್ಳಿದ. ಅವನು ಧೊಪ್ಪೆಂದು ಕೆಳಗೆ ಬಿದ್ದ. ಆ ಮುದುಕ ನಗುತ್ತಾ ಹೊರಟುಹೋದ.

"ದೇವ ನಿಮಗೆ ನಿಜವಾಗಲೂ ಒಳ್ಳೇದುಮಾಡ್ತಾನೆ ಬಾಸ್!"ಹಿಂದಿನಿಂದ ಅವನು ಗಟ್ಟಿಯಾಗಿ ಕೂಗು ಹಾಕಿದ.

ಆ ಮುದುಕ ಕಿವಿಗೆ ಹಾಕಿಕೊಳ್ಳದೆ ಹಾಗೆಯೇ ಹೊರಟುಹೋದ. ಕೆಳಗೆ ಬಿದ್ದ ಅವನು ಹಾಗೆಯೇ ರಸ್ತೆಯ ಮೇಲೆ ಕುಳಿತುಕೊಂಡ. ಒಂದು ಕೈನಿಂದ ಕಣ್ಣೀರು ಒರೆಸಿಕೊಳ್ಳುತ್ತಾ ಭುಜಕ್ಕೆ ನೇತಾಡುತ್ತಿದ್ದ ಚೀಲದಲ್ಲಿ ಕೈ ಇಟ್ಟ. ಅದರೊಳಗಿಂದ ದೊಡ್ಡ ಪುಸ್ತಕದಂತಹದ್ದನ್ನು ಹೊರತೆಗೆದ. ಅವನ ಚೀಲದಲ್ಲಿದ್ದ ಒಂದೇ ಒಂದು ವಸ್ತು ಆ ಪುಸ್ತಕ. ನಲುಗಿ ಹಾಸಿತ್ತು. ಆ ದೊಡ್ಡ ಪುಸ್ತಕವನ್ನು ಹೊರತೆಗೆದು ಶ್ರದ್ಧೆಯಿಂದ ಅದನ್ನು ಮಡಿಲಲ್ಲಿಟ್ಟು ಕೊಂಡು ಬಿಚ್ಚಿದ. ಅದರಲ್ಲಿ ಯಾವು ಯಾವುದೋ ಬರಹಗಳನ್ನು ಹುಚ್ಚು ಚ್ಚಾಗಿ ಬರೆಯಲಾಗಿತ್ತು.ಆ ಪುಸ್ತಕವನ್ನು ತೆರೆಯುತ್ತಲೇ ಅವನು ಜೇಬಿನಿಂದ ಅಗ್ಗದ ಬಾಲ್ ಪೆನ್ನೊಂದನ್ನು ಹೊರತೆಗೆದ. ನಂತರ ಶ್ರದ್ಧೆಯಿಂದ ಅದರಲ್ಲಿ ಏನೇನೋ ಗೀಚತೊಡಗಿದ. ಯಾರೂ ಅವನನ್ನು ಗಮನಿಸದವರಂತೆ ಅವನ ಮುಂದೆಯೇ ಹೊರಟು ಹೋಗುತ್ತಿದ್ದರು. ಅವನು ತಲೆಯೆತ್ತಿ ನೋಡುತ್ತಿದ್ದಿಲ್ಲ. ಬಹುಶಃ ಆದಿಕಾವ್ಯ ಬರೆದ ಮಹರ್ಷಿ ವಾಲ್ಮೀಕಿ ಕೂಡ ಅಷ್ಟು ಶ್ರದ್ಧೆಯಿಂದ ರಾಮಾಯಣವನ್ನು ಬರೆದಿರಲಿಲ್ಲವೇನೋ! ಆ ಬಾಲ್ ಪೆನ್ ಅವನ ಕೈಯಲ್ಲಿ ಆ ಪುಸ್ತಕದ ಮೇಲೆ ಓಡುತ್ತಲೇ ಇತ್ತು.

## ಮದೀನಾ!

ಚಾರ್ಮಿನಾರ್ ಸುತ್ತುಮುತ್ತಲಿನಲ್ಲಿರುವ ಹಳೆಯ ಕಾಲದ ಬೀದಿಗಳೆಲ್ಲ ವನ್ನೂ ಒಂದೊಮ್ಮೆ ಪತ್ಥರ್ ಘಟ್ಟ ಎಂದು ಕರೆಯುತ್ತಿದ್ದರು. ಈಗ ಮದೀನಾ ಎಂದು ಕರೆಯುತ್ತಿದ್ದಾರೆ. ಇದನ್ನೇ ಪಾತಬಸ್ತಿಯೆಂದೂ ಕರೆಯುತ್ತಾರೆ. ಈ ಪ್ರಾಂತ್ಯದಲ್ಲಿಯೇ ಮತ ಕಲಹಗಳು ವಿಪರೀತವಾಗಿ ನಡೆಯುತ್ತಿರುತ್ತವೆ. ಮದೀನಾದಲ್ಲಿ ಅದು ತುಂಬಾ ಹಳೆಯ ಮನೆ. ಯಾವ ಕಾಲದಲ್ಲೋ ಕಲ್ಲಿನಿಂದ ಕಟ್ಟಲಾಗಿದ್ದು. ಮೇಲ್ಛಾವಣಿ ಒಂದು ಕಡೆ ಒಳಭಾಗದಲ್ಲಿ ಕುಸಿದುಬಿದ್ದಿತ್ತು. ಉಳಿದ ಭಾಗ ಯಾವಾಗಲಾದರೂ ಬೀಳುವುದಕ್ಕೆ ಸಿದ್ಧವಾಗಿತ್ತು. ಆ ಮನೆಯ ಆವರಣದಲ್ಲಿ ಒಣಗಿಹೋದ ಮಲ್ಲಿಗೆಯ ಹಂದರವೊಂದಿತ್ತು. ಆ ಮಲ್ಲಿಗೆ ಹಂದರದ ಹತ್ತಿರದಲ್ಲಿ ಒಂದು ಹಗ್ಗದ ಮಂಚದ ಮೇಲೆ ಮಲಗಿದ್ದ ವೃದ್ಧೆ "ಖೊಕ್, ಖೊಕ್" ಎಂದು ಕೆಮ್ಮುತ್ತಿದ್ದಳು. ಆ ವೃದ್ಧೆಯ ಮುಖದಲ್ಲಿ ಮೃತ್ಯುಛಾಯೆ ಗೋಚರಿಸುತ್ತಿತ್ತು. ಆಕೆ ಈಗಲೋ ಆಗಲೋ ಎನ್ನುವಂತಿದ್ದಳು. ಹಳೆಯದಾಗಿ ಮುರಿದುಹೋಗಿದ್ದ ಆ ಮನೆಯ ಬಾಗಿಲುಗಳು ಕಿಟಕಿಟವೆನ್ನುತ್ತಾ ನಿಧಾನವಾಗಿ ತೆರೆದುಕೊಂಡವು. ವೃದ್ಧೆಯ ತಲೆ ನಿಧಾನವಾಗಿ ಆ ಕಡೆ ತಿರುಗಿತು. "ಕೌನ್? ಕೌನ್ ಹೈ?" ಬಲಹೀನವಾದ ಅವಳ ಧ್ವನಿ ಬಾಗಿಲಿನವರೆಗೂ ಕೇಳಿಸಲಿಲ್ಲ. ಬಾಗಿಲು ತೆರೆದುಕೊಂಡು ಒಳಬಂದ ಯುವಕ ಫುಲ್‌ಸೂಟಿನಲ್ಲಿದ್ದ. ಕರ್ರಗೆ ಮಿರಿಮಿರಿ ಮಿಂಚುತ್ತಿದ್ದ ಬೂಟುಗಳನ್ನು ಟಕಟಕವೆನಿಸುತ್ತಾ ಆ ವೃದ್ಧೆಯ ಪಕ್ಕಕ್ಕೆ ಬಂದು ನಿಂತ. "ಕೌನ್ ಹೈ?" ಆಕೆ ಮತ್ತೊಂದು ಸಲ ಬಲಹೀನವಾಗಿ ಪ್ರಶ್ನಿಸಿದಳು. ಕಣ್ಣು ಮುಚ್ಚುತ್ತಾ, ತೆರೆಯುತ್ತಾ ಆಕೆ ಅವನನ್ನು ಸ್ಪಷ್ಟವಾಗಿ ನೋಡಲು ಪ್ರಯತ್ನಿಸುತ್ತಿದ್ದಳು. ಆದರೆ ಕಣ್ಣಿಗೆ ಅಡ್ಡವಾಗುತ್ತಿದ್ದ ವೃದ್ಧಾಪ್ಯದ ಪೊರೆಗಳು ಆಕೆಯನ್ನು ಸ್ಪಷ್ಟವಾಗಿ ನೋಡಲು ಬಿಡುತ್ತಿದ್ದಿಲ್ಲ. ಅವನು ಸಲಿಗೆಯಿಂದ ಆಕೆಯ ಪಕ್ಕದಲ್ಲೇ ಕುಳಿತುಕೊಂಡ.

"ನನ್ನ ಹೆಸರು ಜಾನಿವಾಕರ್! ನಾನು ತುಂಬಾ ದೂರದಿಂದ ಬಂದಿದೀನವ್ವಾ!" ಅವನು ಸ್ಪಷ್ಟವಾದ ಉರ್ದುವಿನಲ್ಲಿ ನುಡಿದ.

"ಜಾನಿ........? ಜಾ....ನಿ....ವಾ....ಕ....ರ್ ? ಕ್ಷಮಿಸು-ನೀನು ಯಾರೂಂತ ನನ್ನಿಂದ ಗುರುತು ಹಿಡಿಯಲಾಗುತ್ತಿಲ್ಲ. ಮುಪ್ಪಾಯ್ತು.....!"

ಅವನು ತಲೆಯಾಡಿಸಿದ. "ನಿಜ ಅವ್ವಾ! ನಾನ್ಯಾರೂಂತ ನಿನಗೆ

ತಿಳಿಯದು– ತಿಳಿಯಬೇಕಾದ ಅಗತ್ಯವೂ ಇಲ್ಲ. ನಾನು ಮಾತ್ರ ಸಣ್ಣ ಕೆಲಸ ವೊಂದರ ಮೇಲೆ ನಿನ್ನ ಹತ್ತಿರ ಬಂದಿದೀನಿ".

"ಕೆಲಸಾನಾ? ಈ ಮುದುಕಿಯೊಂದಿಗೆ ನಿನಗೇನು ಕೆಲಸವಪ್ಪಾ? ನನ್ನೊಂದಿಗೆ ಏನೂ ಕೆಲಸ ಇಲ್ಲಾಂತ ನನ್ನ ಇಬ್ಬರು ಮಕ್ಕಳೂ ನನ್ನನ್ನು ಬಿಟ್ಟು ಹೆಂಡಂದಿರ ಜೊತೆ ಹೊರಟುಹೋದರು. ನನಗೆ ಅನ್ನ ಹಾಕುವುದು ದಂಡವೆಂದೂ, ನನ್ನನ್ನು ಪೋಷಿಸಬೇಕಾಗುತ್ತದೆಂದೂ ನಾಲ್ವರು ಹೆಣ್ಣು ಮಕ್ಕಳೂ ನನ್ನ ಮುಖ ನೋಡಲೂ ಬರುತ್ತಿಲ್ಲ. ನಿನಗೆ ನನ್ನೊಂದಿಗೆ ಏನು ಕೆಲಸ?"

ಅವನು ಕೆಲವು ಕ್ಷಣ ಮೌನವಹಿಸಿ, ಮಾತು ಹುಡುಕುತ್ತಿರುವವನಂತೆ ಸುಮ್ಮನಿದ್ದ. ನಂತರ "ಶಹಜಾದಾ....ಶಹಜಾದಾ ನೂರುಲ್ ಶರೀಫ್ ಬಗೆಗೆ ಕೇಳೋದಿಕೆ ಬಂದಿದೀನಿ" ಎಂದ.

ಆ ಹೆಸರು ಕೇಳುತ್ತಲೇ ಆ ವೃದ್ಧೆಯ ನೆರಿಗೆ ತುಂಬಿದ ಮುಖದಲ್ಲಿ ಮಹಾಶ್ಚರ್ಯ ಕಾಣಿಸಿತು. ಮಂಚದ ಮೇಲೆ ಎದ್ದು ಕುಳಿತುಕೊಳ್ಳಲು ವೃಥಾಶ್ರಮಪಡತೊಡಗಿದಳು. ಜಾನಿವಾಕರ್ ಆಕೆ ಎದ್ದು ಕುಳಿತುಕೊಳ್ಳಲು ಸಹಾಯ ಮಾಡಿದ. ಆಕೆ ಕಣ್ಣರಳಿಸಿ ನಂಬಲಾಗದವಳಂತೆ ಮುಸುಕಾಗಿ ಕಾಣಿಸುತ್ತಿದ್ದ ಅವನ ಮುಖವನ್ನು ಸ್ಪಷ್ಟವಾಗಿ ನೋಡಲು ಪ್ರಯಾಸಪಡು ತ್ತಿದ್ದಳು. "ಶಹಜಾದಾ! ಶಹಜಾದಾ ಬಗೆಗೆ ಇಷ್ಟು ವರ್ಷಗಳ ನಂತರ........ ಇಷ್ಟು ಯುಗಗಳ ನಂತರ........ ಇಷ್ಟಕ್ಕೂ ನೀನು ಯಾರು?" ಎಂದು ಕೇಳಿದಳು.

"ನಾನು ಯಾರೋ ನನಗೇ ಸ್ಪಷ್ಟವಾಗಿ ತಿಳಿಯದವ್ವಾ! ಏನೂಂತ ಪರಿ ಚಯಿಸಿಕೊಳ್ಳಲಿ? ಅದನ್ನು ತಿಳಿದುಕೊಳ್ಳಲೆಂದೇ ಬಂದೆ".

ಆಕೆಯ ಮನಸ್ಸು ಆಯೋಮಯವಾಯಿತು. ತುಟಿಗಳು ಅಸ್ಪಷ್ಟವಾಗಿ ಅಲುಗಾಡಿದವು. "ಶಹಜಾದಾ....! ಆ ಹೆಸರು ಕೇಳಿ ಎಷ್ಟು ಕಾಲವಾಯ್ತು! ನಲವತ್ತು ವರ್ಷ? ಐವತ್ತು ವರ್ಷ? ಎಷ್ಟು ವರ್ಷ, ಎಷ್ಟು ವರ್ಷವಾಯ್ತು?"

"ನಲವತ್ತು ವರ್ಷ...." ಜಾನಿವಾಕರ್ ನುಡಿದ.

"ಹೌದು, ನಲವತ್ತು ವರ್ಷ! ನಲವತ್ತು ವರ್ಷಗಳ ನಂತರ ಕೇಳ್ತಿ ದೀನಿ....! ಎಂತಹ ವ್ಯಕ್ತಿ....! ಎಂತಹ ಮಹಾವ್ಯಕ್ತಿ...." ತನ್ನಲ್ಲೇ ಹೇಳಿ ಕೊಳ್ಳತೊಡಗಿದಳಾಕೆ.

"ಅವರು ಯಾರವ್ವಾ?" ಆಕೆ ತಲೆ ತಿರುಗಿಸಿ ಮತ್ತೆ ಅವನನ್ನು ಅಸ್ಪಷ್ಟ ವಾಗಿ ನೋಡಿದಳು.

"ಹೆಸರು ಹೇಳ್ತಿದೀಯಲ್ಲ. ಅವರು ಯಾರೂಂತ ನಿಂಗೊತ್ತಿಲ್ವಾ?"

"ಗೊತ್ತಿಲ್ಲ....ಸ್ಪಷ್ಟವಾಗಿ ತಿಳಿಯದು!"

"ಶಹೆಜಾದಾ ಹೈದರಾಬಾದ್ ರಾಜವಂಶಕ್ಕೆ ಸೇರಿದವನು. ತುಂಬಾ ದೊಡ್ಡ ವ್ಯಕ್ತಿ. ಆದರೆ ಸ್ವಾರ್ಥಿಗಳ ಸಂಚಿನಿಂದಾಗಿ ಆತನ ದೊಡ್ಡತನ ಹೊರಗೆ ಬರಲಿಲ್ಲ. ಅದೂ ಅಲ್ಲದೆ ಆತನೇ ದೇಶ ಬಿಟ್ಟು ಹೋಗಬೇಕಾಗಿ ಬಂತು".

ಜಾನಿವಾಕರ್‌ನ ಹೃದಯ ವೇಗವಾಗಿ ಹೊಡೆದುಕೊಳ್ಳತೊಡಗಿತು. "ಸ್ಪಷ್ಟವಾಗಿ ಹೇಳವ್ವಾ! ಅವರು ದೇಶಬಿಟ್ಟು ಯಾಕೆ ಹೋಗಬೇಕಾಗಿಬಂತು?"

ಆಕೆ ಸ್ವಗತದಲ್ಲಿ ಮಾತಾಡಿಕೊಳ್ಳುತ್ತಿರುವವಳಂತೆಯೇ ಹೇಳತೊಡಗಿದಳು. "ಅದು ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನ ಮೊದಲಿನ ದಿನಗಳು. ಬಿಳಿಯರ ಕುಟಿಲ ರಾಜನೀತಿಯ ಫಲವಾಗಿ ದೇಶ ಇಬ್ಭಾಗವಾಯ್ತು. ಹೈದರಾಬಾದ್ ಸಂಸ್ಥಾನ ಭಾರತದಲ್ಲಿ ಸೇರಲು ಇಷ್ಟಪಡಲಿಲ್ಲ. ಈ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಿಬಿಡುತ್ತೇನೆಂದು ನಿಜಾಂ ನವಾಬ ಹಟ ಹಿಡಿದು ಕುಳಿತಿದ್ದ. ಹೈದರಾಬಾದ್ ಪಾಕಿಸ್ತಾನದಲ್ಲಿ ಸೇರಲೇಬೇಕೆಂದು ರಜಾಕಾರರು ತೀವ್ರವಾಗಿ ಪ್ರಯತ್ನಿಸಿ ಚಳವಳಿ ಪ್ರಾರಂಭಿಸಿದರು. ಮತಕಲಹಗಳಲ್ಲಿ ಸಾವಿರಾರು ಜನ ಅಮಾಯಕರು ಪ್ರಾಣ ಕಳೆದುಕೊಂಡರು. ಕೊನೆಗೆ ವಲ್ಲಭಾಯ್ ಪಟೇಲರ ಚಾಣಾಕ್ಷತೆ, ದಕ್ಷತೆಯಿಂದ ರಜಾಕಾರರು ಪೋಲೀಸರಿಗೆ ಶರಣಾದರು. ಅಷ್ಟರೊಳಗೆ ಎಷ್ಟು ಅರಾಜಕ ಕೃತ್ಯಗಳು ನಡೆದು ಹೋದುವೋ ಲೆಕ್ಕವೇ ಇಲ್ಲ.ಒಂದೊಂದೂ ಒಂದೊಂದು ದುರಂತ ಕತೆ. ಶಹೆಜಾದನದು ಕೂಡ ಒಂದು ದುರಂತದ ಕತೆ.

"ಶಹೆಜಾದಾ ರಜಾಕಾರರೊಂದಿಗೆ ಬೆರೆಯಲಿಲ್ಲ. ಭಾರತಕ್ಕೆ ಹೈದರಾಬಾದ್ ಸೇರಲೇಬೇಕು ಎಂದು ವಾದಿಸುತ್ತಿದ್ದ. ರಜಾಕಾರರು ಹಗೆತೊಟ್ಟರು. ಸಂಸ್ಥಾನ ಬಿಟ್ಟು ಆತ ಹೆಂಡತಿಯೊಂದಿಗೆ ಭಾರತದ ಭೂಭಾಗಕ್ಕೆ ಓಡಿಹೋದ. ರಜಾಕಾರರು ಅಲ್ಲಿ ಕೂಡ ಆತನನ್ನು ಬಿಡಲಿಲ್ಲ. ಆತ ಭಾರತದ ಶತ್ರುವೆಂದೂ, ಹೈದರಾಬಾದ್ ಪಾಕಿಸ್ತಾನಕ್ಕೆ ಸೇರಬೇಕೆಂದು ವಾದಿಸುತ್ತಿದ್ದನೆಂದೂ, ರಜಾಕಾರರ ಏಜೆಂಟ್ ಎಂದೂ ರಜಾಕಾರರೇ ಭಾರತ ಸರಕಾರ ನಂಬುವಂತೆ ಪುಕಾರು ಹಬ್ಬಿಸಿದರು. ಶಹೆಜಾದಾ ಎಲ್ಲೆಲ್ಲಿಗೆ ಹೋದನೋ ಅಲ್ಲೆಲ್ಲಾ ಆತನನ್ನು ಪ್ರಜೆಗಳು ಅನುಮಾನದಿಂದ ನೋಡತೊಡಗಿದರು. ಅಷ್ಟರೊಳಗೆ ಪೋಲೀಸ್ ಆ್ಯಕ್ಷನ್ ಬಂದಿತು. ಹೈದರಾಬಾದ್ ಭಾರತಕ್ಕೆ ಸೇರಿಹೋಯ್ತು. ಶಹೆಜಾದಾ ಕಂಡ ಕನಸು ನನಸಾಯ್ತು. ಆದರೆ ಆತ ಕೂಡ ಒಬ್ಬ ರಜಾಕಾರನೆಂದು ಸರಕಾರ ಅನುಮಾನಿಸಿದ್ದರಿಂದ ಆತ ರಹಸ್ಯವಾಗಿ ದೇಶ ಬಿಟ್ಟು

ಹೋಗಬೇಕಾಗಿ ಬಂತು. ಹೋಗುವ ಮೊದಲು ಆತ ನನಗೊಂದು ಪತ್ರ ಬರೆದಿದ್ದ. ಅದರಲ್ಲಿ ತಾನು ದೇಶ ಬಿಟ್ಟು ಹೋಗಬೇಕಾಗಿ ಬಂದ ಪರಿಸ್ಥಿತಿಯ ಬಗೆಗೆ ತುಂಬಾ ನೋವಿನಿಂದ ವಿವರಿಸಿದ್ದ. ಆದರೆ ತಾನು ಯಾವ ದೇಶಕ್ಕೆ ಹೋಗುತ್ತೀನಿ ಎನ್ನುವುದನ್ನು ತಿಳಿಸಲಿಲ್ಲ".

"ಒಂದ್ವಿಷಯ ಹೇಳಿ. ಅವರು ನಿಮಗೇನಾಗಬೇಕು?" ಕೇಳಿದ ಜಾನಿವಾಕರ್. ಆ ವೃದ್ಧೆಯ ಮುಖದಲ್ಲಿ ಒಂದು ವಿಧವಾದ ಪ್ರಸನ್ನತೆ ವ್ಯಾಪಿಸಿತು.

"ಏನೂ ಆಗುವುದಿಲ್ಲ. ನಾನು ಆತನ ಮಹಲ್‌ನಲ್ಲಿ ಪರಿಚಾರಿಕೆಯಾಗಿ ಕೆಲಸ ಮಾಡುತ್ತಿದ್ದೆ. ನನ್ನ ಗಂಡ ದರ್ವಾನ್ ಆಗಿದ್ದ. ಆದರೆ ನಾವೆಂದೂ ನೌಕರರಾಗಿ ಆ ಮಹಲ್‌ನಲ್ಲಿದ್ದವರಲ್ಲ. ಆ ಕುಟುಂಬದ ಸದಸ್ಯರಂತಿದ್ದೆವು. ಶಹಜಾದಾ ನನ್ನನ್ನು ಸ್ವಂತ ತಂಗಿಯಂತೆ ನೋಡುತ್ತಿದ್ದ. ನಮ್ಮ ಕುಟುಂಬಕ್ಕೆ ಆತ ಎಷ್ಟು ಕಾಣಿಕೆಗಳನ್ನು ಕೊಟ್ಟನೋ, ಎಷ್ಟು ಸಹಾಯ ಮಾಡಿದನೋ ಹೇಳಲಾರೆ. ಕೊನೆಗೆ ಆತನ ಪರಿಸ್ಥಿತಿ ಆ ರೀತಿ ವಿಷಮಿಸಿತು. ದೇವರು ಯಾವಾಗಲೂ ಒಳ್ಳೆಯವರಿಗೇ ಕಷ್ಟ ಕೊಡುತ್ತಾನೆ. ಆತ ದೇಶ ಬಿಟ್ಟು ಹೋಗುವಾಗ ಪತ್ರ ಬರೆದದ್ದು ಎಂದರೆ ನನಗೆ ಮಾತ್ರ!"

"ಹಾಗಿದ್ರೆ ಅವರ ಜ್ಞಾಪಕಾರ್ಥ ನೀನು ಯಾವುದಾದರೂ ವಸ್ತುವನ್ನು ಹತ್ತಿರ ಇಟ್ಟುಕೊಂಡಿರಬೇಕು. ಅಂತಹುದೇನಾದರೂ ಇದ್ದರೆ ನನಗೆ ತೋರಿಸ್ತೀಯಾ ಅವ್ವಾ?"

"ಆತ ನಮಗೆ ಕೊಟ್ಟ ಕಾಣಿಕೆಗಳು ನಮ್ಮ ಮನೆಯ ತುಂಬಾ ತುಂಬಿದ್ದವು ಕಣಪ್ಪಾ. ಆದರೆ ದರಿದ್ರರು ನನ್ನಿಬ್ಬರು ಮಕ್ಕಳು ಅವನ್ನೆಲ್ಲ ಮಾರಿ ತಿಂದು ಹಾಕಿದ್ದಾರೆ! ಒಂದು ವಸ್ತುವನ್ನು ಮಾತ್ರ ನನಗುಳಿಸಿದ್ದಾರೆ, 'ಅವರಿಗೆ ಯಾವುದಕ್ಕೂ ಉಪಯೋಗವಿಲ್ಲವೆಂದು!"

"ಆತನ ಫೋಟೋ!"

ಜಾನಿವಾಕರ್ ಹೃದಯ ಹಠಾತ್ತನೆ ಲಯತಪ್ಪಿ ಸ್ಪಂದಿಸತೊಡಗಿತು. "ಅದನ್ನ....ಅದನ್ನ ನನಗೆ ತೋರಿಸ್ತೀಯಾ?"

"ಎದ್ದುಕೊಡಲಾರೆ ಕಣಪ್ಪಾ ! ಆ ಹಳೆಯ ಟ್ರಂಕ್‌ನಲ್ಲೆಲ್ಲೋ ಇದ್ದಿರಬೇಕು!"

"ನಾನು ಹುಡುಕ್ತೀನವ್ವಾ? ಟ್ರಂಕ್ ಎಲ್ಲಿದೆ ಹೇಳು?"

"ಈ ಮನೆಯಲ್ಲಿರೋ ಹೇಳಿಕೊಳ್ಳುವಂತಹ ವಸ್ತು ಅದೊಂದೇ! ಮನೆಯೊಳಗೆ ಹೋದರೆ ಎದುರಿಗೇ ಇರುತ್ತದೆ!"

ಜಾನಿವಾಕರ್ ಆಕೆಯನ್ನು ಎಚ್ಚರಿಕೆಯಿಂದ ಹಿಂದಕ್ಕೆ ಮಲಗಿಸಿ, ತಾನು ಮನೆಯೊಳಕ್ಕೆ ಓಡಿದ. ಎಲ್ಲಾ ಕಿತ್ತುಹೋದ ಹಳೆಯ ಟ್ರಂಕದು. ಜಾನಿ ವಾಕರ್ ಅದರ ಮುಚ್ಚಳ ಎತ್ತಿ ಪಕ್ಕಕ್ಕಿಟ್ಟು, ಆತುರದಿಂದ ಅದರಲ್ಲಿನ ಹಳೆಯ ಬಟ್ಟೆಗಳನ್ನು ಪಕ್ಕಕ್ಕೆ ತೆಗೆದಿಡತೊಡಗಿದ. ಹೆಚ್ಚು ಬಟ್ಟೆಗಳೇನೂ ಇರಲಿಲ್ಲ! ಅದರಲ್ಲಿ ಕೆಲವು ಹರಿದುಹೋದ ಸೀರೆಗಳೂ, ಹೆಂಗಸರು ತೊಟ್ಟುಕೊಳ್ಳುವ ಕುರ್ತಾಗಳೂ ಇದ್ದವು. ಒಂದು ಮುರಿದುಹೋದ ಬಾಚಣಿಗೆಯಿತ್ತು. ವೃದ್ಧೆ ಹೇಳಿದ ಫೋಟೋ ಪೆಟ್ಟಿಗೆಯ ತಳದಲ್ಲಿತ್ತು. ವೇಗವಾಗಿ ಬಡಿದುಕೊಳ್ಳುತ್ತಿದ್ದ ಹೃದಯದಿಂದ ಅವನು ಆ ಫೋಟೋ ಕೈಗೆತ್ತಿಕೊಂಡ. ಆ ಫೋಟೋ ತುಂಬಾ ಹಳೆಯದಾಗಿದ್ದು ಅಲ್ಲಲ್ಲಿ ಎನಾಮಲ್ ಬಿದ್ದುಹೋಗಿತ್ತು. ಆದರೂ ಅದರಲ್ಲಿದ್ದ ವ್ಯಕ್ತಿಯ ಮುಖ ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಜಾನಿವಾಕರ್ ಆ ಫೋಟೋವನ್ನೇ ಕೆಲವು ಕ್ಷಣಗಳು ಕಣ್ಣರಳಿಸಿ ನೋಡುತ್ತಿದ್ದುಬಿಟ್ಟ. ಅವನ ಹೃದಯ ವಿಚಿತ್ರವಾದ ಸ್ಪಂದನೆಗೆ ಒಳಗಾಗುತ್ತಿತ್ತು. ಕೆಲವು ಕ್ಷಣಗಳು ಹಾಗೆಯೇ ಶಿಲೆಯಂತೆ ಕುಳಿತಿದ್ದು, ಆ ಫೋಟೋವನ್ನೇ ನೋಡುತ್ತಿದ್ದ. ಅವನು ಕೊನೆಗೆ ನಿಧಾನವಾಗಿ ಚಲಿಸಿದ. ಫೋಟೋವನ್ನು, ಬಟ್ಟೆಗಳನ್ನೂ ಯಥಾಪ್ರಕಾರ ಟ್ರಂಕಿನಲ್ಲಿಟ್ಟು ಎದ್ದು ನಿಂತ. ಅವನ ಮುಖ ಗಂಭೀರವಾಗಿತ್ತು. ಅವನ ಕಣ್ಣುಗಳು ಅವನು ತೀವ್ರವಾಗಿ ಆಲೋಚಿಸುತ್ತಿದ್ದಾನೆಂದು ಸೂಚಿಸುತ್ತಿದ್ದವು. ಹಾಗೆ ಆಲೋಚಿಸುತ್ತಲೇ ಅವನು ವೃದ್ಧೆಯ ಹತ್ತಿರ ತಿರುಗಿ ಬಂದ. ಮತ್ತೆ ಅವಳ ಪಕ್ಕದಲ್ಲಿಯೇ ಕುಳಿತುಕೊಂಡು ನೇರವಾಗಿ ಅವಳನ್ನೇ ನೋಡಿದ. ಅವನ ಕಣ್ಣುಗಳು ವಿಚಿತ್ರವಾಗಿ ಹೊಳೆಯುತ್ತಿದ್ದವು. "ಅವ್ವಾ! ಶಹಜಾದಾ ಯಾವ ದೇಶಕ್ಕೆ ಹೋದನೋ ನಿನಗೆ ಗೊತ್ತಿಲ್ಲ ಅಲ್ವೆ?"

ಆ ವೃದ್ಧೆ ತನ್ನ ನೆರಿಗೆ ತುಂಬಿದ ಮುಖವನ್ನು ಅಡ್ಡವಾಗಿ ಆಡಿಸಿದಳು.

"ಆ ದೇಶ ಯಾವುದೂಂತ ನಾನು ಹೇಳ್ತೀನಿ!"

ಆಕೆ ಅವನನ್ನು ಕಣ್ಣರಳಿಸಿ ತುಂಬಾ ಹೊತ್ತು ಅಸ್ಪಷ್ಟವಾಗಿ ನೋಡುತ್ತಿದ್ದು, ನಂತರ ಕ್ಷೀಣವಾಗಿ "ಯಾವುದು?"

"ಪಾಕಿಸ್ತಾನ್!"

## ೧೦

ಮಣಿಮೇಖಲೆ ತಲೆ ಸ್ನಾನ ಮಾಡಿ, ಮೈಗೆ ಟವಲ್ ಸುತ್ತಿಕೊಂಡು ಬಾತ್‌ರೂಮಿನಿಂದ ಹೊರಗೆ ಬಂದಳು. ಮೃದುವಾಗಿ ಹೆಜ್ಜೆಯಿಡುತ್ತಾ ಡ್ರೆಸಿಂಗ್ ರೂಮಿನೊಳಕ್ಕೆ ಬಂದಳು. ಡ್ರೆಸಿಂಗ್ ಟೇಬಲ್ ಮುಂದೆ ನಿಂತು ಒಂದು ಸಲ ತನ್ನನ್ನು ತಾನು ಪರೀಕ್ಷೆಯಿಂದ ನೋಡಿಕೊಂಡಳು. ಕುತ್ತಿಗೆಯ ಮೇಲಿನಿಂದ ಮುತ್ತಿನಂತಹ ನೀರಿನ ಹನಿಗಳು ಅರ್ಧ ನಗ್ನವಾಗಿ ಕಾಣಿಸುತ್ತಿದ್ದ ಸ್ತನಗಳ ನಡುವಿನ ಕಣಿವೆಯೊಳಕ್ಕೆ ಸರಸರನೆ ಜಾರಿ ಹೋಗುತ್ತಿದ್ದವು. ಮೈಗೆ ಸುತ್ತಿಕೊಂಡಿದ್ದ ಟರ್ಕಿಟವಲ್ ತಟಕ್ಕನೆ ಎಳೆದುಹಾಕಿದಳು. ಕನ್ನಡಿಯಲ್ಲಿ ಹಠಾತ್ತನೆ ಒಂದು ಮಹಾ ಸೌಂದರ್ಯರಾಶಿ ನಗ್ನವಾಗಿ ಸಾಕ್ಷಾತ್ಕರಿಸಿತು. ಟವಲ್‌ನಿಂದ ಅವಳು ಹಾಗೆಯೇ ಕುತ್ತಿಗೆಯಮೇಲಿನಿಂದ ಜಾರುತ್ತಿದ್ದ ಮುತ್ತಿನ ಬಿಂದುಗಳನ್ನು ಒರೆಸಿಕೊಳ್ಳುತ್ತಾ, ಕನ್ನಡಿಯಲ್ಲಿ ತನ್ನ ನಗ್ನ ಸೌಂದರ್ಯವನ್ನು ಪರೀಕ್ಷೆಯಿಂದ ನೋಡಿಕೊಂಡಳು.

ಅದು ಅವಳಿಗೆ ರೂಢಿ ಪ್ರತಿದಿನ ಸ್ನಾನ ಮಾಡಿದ ನಂತರ ಸ್ವಲ್ಪ ಹೊತ್ತು ಕನ್ನಡಿಯಲ್ಲಿ ಆ ರೀತಿ ತನ್ನ ನಗ್ನ ಸೌಂದರ್ಯವನ್ನು ಅಣುವಣುವೂ ಪರೀಕ್ಷೆಯಿಂದ ನೋಡಿಕೊಳ್ಳುತ್ತಿದ್ದಳು. ತನ್ನ ಸೌಂದರ್ಯ ಒಂದು ಮಹಾ ಯುಧವೆಂದು ಅವಳಿಗೆ ಚೆನ್ನಾಗಿ ಗೊತ್ತಿತ್ತು. ಆ ಮಹಾಯುಧದಿಂದ ಎಷ್ಟೆಷ್ಟು ಮಹಾಕಾರ್ಯಗಳನ್ನು ಸಾಧಿಸಬಹುದೆಂದೂ ಕೂಡ ಅವಳಿಗೆ ಗೊತ್ತಿತ್ತು. ತನ್ನ ಸೌಂದರ್ಯವನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳುವುದರಲ್ಲಿಯೇ ಅವಳ ಯಶಸ್ಸು, ವಿಜಯ ಅಡಗಿತ್ತು. ಕೊಂಚ ಅಗತ್ಯವೆನಿಸಿದರೂ ಅವಳು ತನ್ನ ಸೌಂದರ್ಯವನ್ನು ಮತ್ತಷ್ಟು ಮೆರಗುಗೊಳಿಸಿಕೊಳ್ಳುವವರೆಗೂ ನಿದ್ದೆ ಮಾಡುತ್ತಿದ್ದಿಲ್ಲ. ಸ್ತ್ರೀಯ ಸೌಂದರ್ಯದ ಮುಂದೆ ಗಂಡಸು ತುಂಬಾ ಅಲ್ಪ. ಜ್ವಾಲೆಯನ್ನು ನೋಡಿ ಬುದ್ಧಿ ಕಳೆದುಕೊಂಡು ಹಾರಿ ಬಂದು ಅದರಲ್ಲಿ ಧುಮುಕಿ ಭಸ್ಮವಾಗುವ ಪತಂಗದಂತಹವನು. ಗಂಡನ್ನು ಬೆರಳ ಕೊನೆಯಲ್ಲಿ ಸೂತ್ರದ ಬೊಂಬೆಯಂತೆ ಕುಣಿಸಬೇಕಾದರೆ ಅವಳ ಸೌಂದರ್ಯ ಜ್ವಾಲಾ ಸಮಾನವಾಗಿ ಪ್ರಕಾಶಿಸಬೇಕಾದದ್ದೇ. ಅದಕ್ಕೋಸ್ಕರ ಅವಳು ಏನು ಬೇಕಾದರೂ ಮಾಡುತ್ತಿದ್ದಳು.

ಸ್ತ್ರೀಯ ಸೌಂದರ್ಯ ಅನುಕ್ಷಣವೂ ಪಂಜರದಿಂದ ಹಾರಿಹೋಗಲು ಪ್ರಯತ್ನಿಸುವ ಅರಗಿಣಿಯಂತಹುದು. ಎಚ್ಚರಿಕೆಯಿಂದಿರದಿದ್ದರೆ ಪಂಜರದ ಬಾಗಿಲು ತೆರೆದುಕೊಂಡು ಹಾರಿಹೋಗಿ ತಿರುಗಿಬಾರದಂತೆ ಅದೃಶ್ಯವಾಗುತ್ತದೆ. ಸ್ತ್ರೀಯ ಶರೀರದಲ್ಲಿ ಸೌಂದರ್ಯವನ್ನು ಇಮ್ಮಡಿಗೊಳಿಸದ ಭಾಗವೆಂದು ಇಲ್ಲವೇ

ಇಲ್ಲ. ಕಣ್ಣು, ರೆಪ್ಪೆಗಳು, ಮೂಗು, ತುಟಿಗಳು ಕೆನ್ನೆ, ಕುತ್ತಿಗೆ, ವಕ್ಷಸ್ಥಳ, ಸೊಂಟ, ನಿತಂಬ ಕಾಲು, ಪಾದಗಳು ಇವಷ್ಟೇ ಅಲ್ಲ, ಬೆರಳುಗಳು, ಉಗುರು ಗಳು, ನಡಿಗೆ, ಮುಗುಳ್ನಗುವ ವಿಧಾನ, ಚಲನೆ, ಶರೀರದಲ್ಲಿನ ಅಣುವಣುವೂ ಸೌಂದರ್ಯವನ್ನು ಪ್ರಕಟಿಸುತ್ತಲೇ ಇರುತ್ತವೆ. ಸುಂದರವಾಗಿ ಕಾಣಬೇಕೆಂದು ಕೊಳ್ಳುವ ಯುವತಿ ಯಾವ ಆ್ಯಂಗಲ್‌ನಲ್ಲಿ ಎಷ್ಟು ಚೆನ್ನಾಗಿರುತ್ತಾಳೋ, ಯಾವ ಚಲನೆಯಲ್ಲಿ ಯಾವ ಶರೀರದ ಭಾಗ ಎಷ್ಟು ಚೆನ್ನಾಗಿ ಕಾಣಿಸುತ್ತದೋ ಖಚಿತವಾಗಿ ತಿಳಿದುಕೊಂಡಿರಬೇಕು.

ಅವಳು ತನ್ನ ಅಪಾರ್ಟ್‌ಮೆಂಟಿನಲ್ಲಿ ಕೇವಲ ತನಗೋಸ್ಕರವೇ ಒಂದು ದೊಡ್ಡ ಬ್ಯೂಟಿ ಕ್ಲಿನಿಕ್‌ನಂತಹುದನ್ನೇ ಏರ್ಪಾಡು ಮಾಡಿಕೊಂಡಿದ್ದಳು ತನ್ನ ಬ್ಯೂಟಿಷಿಯನ್ ತಾನೇ! ಮೇಲಾಗಿ ತನ್ನ ಸೌಂದರ್ಯವನ್ನು ಒಬ್ಬ ದೊಡ್ಡ ವಿಜ್ಞಾನಿ ತನ್ನ ವಿಷಯವನ್ನು ಅಧ್ಯಯನ ಮಾಡಿದಷ್ಟು ಶ್ರದ್ಧೆಯಿಂದ ಸ್ಟಡಿ ಮಾಡಿದ್ದಳು. ಅವಳ ಸೌಂದರ್ಯ ಒಂದು ಮಹಾಕಾವ್ಯ! ಅಧ್ಯಯನ ಮಾಡಿ ದಷ್ಟೂ ಇನ್ನೂ ಇನ್ನೂ ಸೌಂದರ್ಯ ಕಾಣಿಸುತ್ತಲೇ ಇತ್ತು. ಅವಳು ದಿನಕ್ಕೆ ಎರಡು-ಮೂರು ಬಾರಿ ಸ್ನಾನ ಮಾಡುತ್ತಿದ್ದಳು. ಜಾಹೀರಾತುಗಳಲ್ಲಿ ತೋರಿ ಸುವ ಸಾಬೂನುಗಳಿಂದಲ್ಲ, ಪ್ಕೈ ತುಂಬಾ ಎಚ್ಚರಿಕೆಯಿಂದ ಅರಿಶಿಣ ಒಳಿದು ಕೊಂಡು ಕಡಲೆ ಹಿಟ್ಟಿನಿಂದ ಸ್ನಾನ ಮಾಡುತ್ತಿದ್ದಳು. ಅವಳು ಕೃತ್ರಿಮವಾದ ಕಾಸ್ಮೆಟಿಕ್ಸ್ ಯಾವುದನ್ನೂ ಬಳಸುತ್ತಿರಲಿಲ್ಲ. ಪ್ರಕೃತಿಸಿದ್ಧವಾದ ಪದ್ಧತಿಯ ಮೂಲಕ ತನ್ನ ಸೌಂದರ್ಯವನ್ನು ಕಾಪಾಡಿಕೊಳ್ಳುತ್ತಿದ್ದಳು. ವಾಸ್ತವಕ್ಕೆ ಅವಳ ಸೌಂದರ್ಯ ಪೋಷಣೆಗೆ ಕೃತ್ರಿಮವಾದ ಸಾಧನಗಳ ಅಗತ್ಯವೂ ಇಲ್ಲ. ಪ್ರಕೃತಿ ಅವಳಿಗೆ ಅಪರೂಪವಾದ ರೂಪ-ಲಾವಣ್ಯಗಳನ್ನು ಪ್ರಸಾದಿಸಿತ್ತು. ಅವಳು ತುಟಿಗಳಿಗೆ ಲಿಪ್‌ಸ್ಟಿಕ್ ಬಳಸಬೇಕಾಗಿರಲಿಲ್ಲ. ಅವಳು ಮುಖಕ್ಕೆ ಎಂತಹುದೇ ಕ್ರೀಮ್‌ಗಳನ್ನೂ ಹಚ್ಚಿಕೊಳ್ಳಬೇಕಾಗಿರಲಿಲ್ಲ. ಸಿಂಪಲ್ ಆಗಿ ಇರುವುದರಲ್ಲಿಯೇ ತನ್ನ ರೂಪ-ಲಾವಣ್ಯಕ್ಕೆ ಮೆರುಗು ಬರುತ್ತದೆನ್ನುವುದು ಅವಳಿಗೆ ಚೆನ್ನಾಗಿ ತಿಳಿದಿತ್ತು. ಅವಳ ಸೌಂದರ್ಯದಿಂದ ಕನ್ನಡಿಗೇ ಮೆರುಗು ಬಂದಂತಿತ್ತು. ಅವಳ ಶರೀರದ ಲಾಲಿತ್ಯ ಕನ್ನಡಿಯ ನುಣುಪನ್ನೇ ಅಣಕಿಸು ವಂತಿತ್ತು. ಅವಳ ಸೌಂದರ್ಯವನ್ನು ತಾನು ಪ್ರತಿಫಲಿಸುತ್ತಿರುವುದಕ್ಕೆ ಕನ್ನಡಿಯೇ ಪುಳಕಗೊಳ್ಳುತ್ತಿರುವಂತಿತ್ತು. ತದೇಕ ದೀಕ್ಷೆಯಿಂದ ತನ್ನ ಸೌಂದ ರ್ಯವನ್ನು ಪರಿಶೀಲಿಸಿಕೊಳ್ಳುವುದರಲ್ಲಿ ಮುಳುಗಿದ್ದ ಅವಳು ಅಕಸ್ಮಾತ್ತಾಗಿ ಬೆಚ್ಚಿಬಿದ್ದಳು. ಪಕ್ಕದ ಕೋಣೆಯಿಂದ ಕೇಳಿಸಿದ ಟೆಲಿಫೋನ್ ಶಬ್ದ ಅವಳ ಏಕಾಗ್ರತೆಯನ್ನು ಭಂಗಪಡಿಸಿತು. ಅವಳು ತನ್ನ ಕೈಯಲ್ಲಿಯ ಟರ್ಕಿ ಟವಲ್

ಅನ್ನು ಡ್ರೆಸ್ಸಿಂಗ್ ಟೇಬಲ್ ಮೇಲೆ ಎಸೆದು, ನಿರ್ಲಕ್ಷ್ಯವಾಗಿ ಮುಂಗುರುಳು ನೇವರಿಸಿಕೊಳ್ಳುತ್ತಾ ನಗ್ನಳಾಗಿಯೇ ಪಕ್ಕದ ಕೋಣೆಗೆ ಹೋಗಿ ರಿಸೀವರ್ ಎತ್ತಿಕೊಂಡಳು. "ಹಲೋ!" ಮೃದುವಾಗಿ ನುಡಿದಳು.

"ಹಲೋ! ನಿಮಗೆ ಸೌದಿ ಅರೇಬಿಯಾದಿಂದ ಓವರ್‌ಸೀಸ್ ಕಾಲ್!" ಆಪರೇಟರ್‌ನ ಧ್ವನಿ ಕೇಳಿಸಿತು. ಮೇಖಲೆ ಒಂದು ಕ್ಷಣ ಕಾಯ್ದ ನಂತರ ಆ ಕಡೆಯಿಂದ ಜೇಕೇಯ ಧ್ವನಿ ಕೇಳಿಸಿತು. "ಹಲೋ ಬೇಬಿ! ನಾನು ಜೇಕೇ ಮಾತಾಡ್ತಿದೀನಿ! ಎಲ್ಲೋ ತಪ್ಪಾಗಿದೆ".

"ಏನಾಯ್ತು?" ಅವಳು ನಿಧಾನವಾಗಿ ಕೇಳಿದಳು.

"ಆ ದಿನ ಪ್ಲೇನ್‌ನಲ್ಲಿ ನಡೆದ ಘಟನೆ ನೆನಪಿದೆ ತಾನೆ!"

"ನೆನಪಿದೆ!"

"ನಿನ್ನ ಜಡ್ಜ್‌ಮೆಂಟ್ ತಪ್ಪು. ತುಂಬಾ ತಪ್ಪು!"

"ಅಂದ್ರೆ?"

"ಅಂದ್ರೆ ಆ ದಿನ ರಷ್ಯನ್ ಕೆ.ಜಿ.ಬಿ. ಎಂದು ಭ್ರಮೆಪಟ್ಟಿದ್ದು ವಾಸ್ತವವಾಗಿ ಅಮೆರಿಕನ್ ಸಿ.ಐ.ಎ.ನನ್ನು. ನಾನು ಹೇಳ್ತಿರೋದು ಅರ್ಥವಾಯ್ತು ತಾನೆ? ಟೆಲಿಫೋನ್‌ನಲ್ಲಿ ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ಹೇಳೋದಕ್ಕೆ ಆಗೋದಿಲ್ಲ".

"ಅರ್ಥವಾಯ್ತು. ಆದರೆ ಆ ರೀತಿ ಭ್ರಮೆಪಟ್ಟಿದ್ದು ನಾನಲ್ಲ! ಮುನೀಂದ್ರ ಸ್ವಾಮಿ!"

"ಆತನನ್ನು ಭ್ರಮೆಪಡುವಂತೆ ಮಾಡಿದ್ದು ನೀನು!"

"ನಾನಲ್ಲ! ಆ ವ್ಯಕ್ತಿಯನ್ನು ನೋಡಿ ನನಗೆ ನಿಜವಾಗಿಯೂ ಅನುಮಾನ ಬಂತು. ಮುನೀಂದ್ರ ಸ್ವಾಮಿಗೆ ಹೇಳುವುದು ನನ್ನ ಡ್ಯೂಟಿ! ಅದಕ್ಕೇ ಅವನ ಜೇಬಿನಿಂದ ಐಡೆಂಟಿಟಿ ಕಾರ್ಡ್ ಕದ್ದು ಮುನೀಂದ್ರ ಸ್ವಾಮಿಗೆ ಕೊಟ್ಟೆ. ಆ ವ್ಯಕ್ತಿ ತನ್ನ ಜೇಬಿನಲ್ಲಿ ಕೆ.ಜಿ.ಬಿ. ಐಡೆಂಟಿಟಿ ಕಾರ್ಡಿಟ್ಟುಕೊಂಡು ಯಾಕೆ ತಿರುಗುತ್ತಿದ್ದನೋ ನನಗೆ ತಿಳಿಯದು. ಅದಕ್ಕೆ ನಾನು ಹೇಗೆ ಜವಾಬ್ದಾರಳಾಗುತ್ತೇನೆ? ಮುನೀಂದ್ರಸ್ವಾಮಿ ಅದನ್ನು ನೋಡಿ ಆತುರಪಟ್ಟರೆ ನಾನೇನು ಮಾಡಬಲ್ಲೆ?"

ಕೆಲವು ಕ್ಷಣಗಳು ನಿಶ್ಶಬ್ದ. ನಂತರ "ಸರಿ, ನಿನ್ನ ತಪ್ಪೇನೂ ಇಲ್ಲ, ಒಪ್ಕೋತೀನಿ! ಮುನೀಂದ್ರಸ್ವಾಮಿ ಆತುರಪಟ್ಟ. ಅದನ್ನೂ ಒಪ್ಕೋತೀನಿ.ಆದರೆ ಆ ಘಟನೆಯ ಪ್ರಭಾವ ನನ್ನ ಮೇಲೆ ಬಿದ್ದರೆ ನಾನೇನು ಮಾಡಬೇಕು? ಅನಗತ್ಯವಾಗಿ ಇಕ್ಕಟ್ಟಿಗೆ ಸಿಕ್ಕಿಬಿದ್ದೆ!" ಎಂದ ಜೇಕೆ.

"ಏನು ನಡೀತೂಂತ ಹೇಳಿ!"

"ಏನು ನಡೆಯುತ್ತೆ ? ಮುನೀಂದ್ರಸ್ವಾಮಿ ನಿಜವಾಗಿಯೂ ತುಂಬಾ ಆತುರಪಟ್ಟ. ಸಿ. ಐ. ಎ. ಈಗ ಆ ಘಟನೆಯನ್ನು ಬೆದಕುತ್ತಾ ಬರುತ್ತಿದೆ. ಹಠಾತ್ತನೆ ತಮ್ಮ ಏಜೆಂಟ್ ಒಂದು ರೋಟೀನ್ ಮಿಷನ್ ಮೇಲೆ ಹೋಗಿ ಅದೃಶ್ಯನಾದುದರಿಂದ ಅವರಿಗೆ ನಮ್ಮ ಮೇಲೆಯೇ ಅನುಮಾನ ಬಂದಿದೆ. ಬಹುಶಃ ಅವರ ಸಬ್‌ಮೆರೀನ್‌ಗಳು ಪೆಸಿಫಿಕ್ ಮಹಾ ಸಮುದ್ರದಲ್ಲಿ ಅವನ ದೇಹವನ್ನು ಪತ್ತೆ ಮಾಡಿರಬಹುದು. ನನ್ನ ವಿಮಾನಕ್ಕೂ ಈ ಘಟನೆಗೂ ಏನೋ ಸಂಬಂಧವಿರಬೇಕೆಂದು ಅವರಿಗೆ ಅರ್ಥವಾಗುವಂತಿದೆ. ಈಗ ಪರಿಸ್ಥಿತಿ ನನಗೆ ಎದುರಾಗುತ್ತಿರುವಂತಿದೆ."

"ಹಾಗಾ? ! ಆದರೆ ಈ ಘಟನೆ ಬಗ್ಗೆ ನೀವ್ಯಾಕೆ ಚಿಂತಿಸಬೇಕು?"

"ನೋಡು ಬೇಬಿ!" ಜೇಕೇ ಅಸಹನೆಯಿಂದ ನುಡಿದ. "ನೀನು ನಿಜ ವಾಗಿಯೂ ಬೇಬಿಯಲ್ಲ. ತುಂಬಾ ಬುದ್ಧಿವಂತಿಕೆಯ ಹೆಣ್ಣು. ಈ ದುರ್ಘಟನೆ ನನ್ನ ಪ್ಲೇನ್‌ನಲ್ಲಿ ನಡೆದಿದೆಯೆಂದರೆ ಅವರಿಗೆ ನನ್ನ ಮೇಲೆಯೇ ಅನುಮಾನ ಬರುವುದು ಸಹಜ. ಈ ಘಟನೆಯ ಹಿಂದೆ ಯಾವುದೋ ಅಂತರಾಷ್ಟ್ರೀಯ ಸಂಚಿದೆಯೆಂದು ಅವರು ತಿಳಿದುಕೊಳ್ಳುವುದೂ ಸಹಜ!"

"ಆ ರೀತಿ ಅವರ‍್ಯಾಕೆ ಅಂದ್ಕೋಬೇಕು?"

"ಹೆಲ್! ನಿನಗೆ ಹೇಳಿದ್ರೂ ಅರ್ಥವಾಗ್ತಿಲ್ಲ!"

"ಅರ್ಥವಾಗ್ತಿದೆ. ಚೆನ್ನಾಗಿ ಅರ್ಥವಾಗ್ತಿದೆ! ಇದರ ಬಗೆಗೆ ನೀವು ಚಿಂತಿಸಬೇಕಾದ ಅಗತ್ಯ ಇಲ್ಲ."

"ವ್ಹಾಟ್! ಚಿಂತಿಸದಿರೋಕ್ಕೆ ಹೇಗೆ ಸಾಧ್ಯ ? ನನ್ನ ವಿಷಯ ನಿಂಗೊತ್ತಿಲ್ಲ! ನಾನೊಬ್ಬ ಸಾದಾಸೀದಾ ಕಮಿಷನ್ ಏಜೆಂಟ್. ಈ ಅಂತರ ರಾಷ್ಟ್ರೀಯ ಸಂಚುಗಳೂ, ಗೂಢಚಾರಿ ಸಂಸ್ಥೆಗಳ ಅನುಮಾನಗಳೂ ಇವೆಲ್ಲಾ ನನಗಾಗೋದಿಲ್ಲ. ಒಂದು ರೀತಿಯಲ್ಲಿ ಅಮೆರಿಕನ್ ಸಿ. ಐ. ಎ. ನನ್ನ ಕಸ್ಟಮರ್! ಅದಕ್ಕೆ ಸಂಬಂಧಿಸಿದ ತುಂಬಾ ಕೆಲಸಗಳು-ಆಯುಧಗಳ ಮಾರಾಟ, ಮಿಲಿಟರಿ ರಹಸ್ಯಗಳ ಮಾರಾಟ ಇತ್ಯಾದಿ ರಹಸ್ಯವಾದ ಲೇವಾದೇವಿಯೆಲ್ಲಾ ನನ್ನಿಂದ ತುಂಬಾ ನಡೆದಿವೆ. ಆದರೆ ಅವೆಲ್ಲಾ ಪೂರ್ತಿಯಾಗಿ ವ್ಯಾಪಾರಿ ದೃಷ್ಟಿಯಿಂದ ನಡೆದಂತಹವು! ಅವುಗಳ ಹಿಂದಿರುವ ಅಂತರರಾಷ್ಟ್ರೀಯ ಸಂಚುಗಳಿಗೂ, ನನಗೂ ಸಂಬಂಧವಿಲ್ಲ. ನನ್ನ ಕಮಿಷನ್ ನಾನು ಪಡೆಯುತ್ತೇನೆ ಅಷ್ಟೆ. ಈಗ ಈ ಉಪದ್ರವ ಬಂದುಬಿಟ್ಟಿದೆ. ಸಿ.ಐ.ಎ. ದಂತಹ ಬಲಶಾಲಿ ಗೂಢಚಾರಿ ಸಂಸ್ಥೆಯೊಂದಿಗೆ ವಿರೋಧ ನನಗಿಷ್ಟವಿಲ್ಲ.

ಅದು ನನ್ನ ಲೈನ್ ಅಲ್ಲ!"

"ನಾನೂ ಅದೇ ಹೇಳ್ತಿದೀನಿ! ಸಿ. ಐ. ಎ. ದೊಂದಿಗೆ ನೀವು ವಿರೋಧ ಕಟ್ಟಿಕೊಳ್ಳಬೇಕಾಗಿಯೇ ಇಲ್ಲ!"

"ಹೇಗೆ?"

"ಮೊದಲು ನನಗೊಂದು ವಿಷಯ ಹೇಳಿ! ಸಿ.ಐ.ಎ. ಗೆ ನಿಮ್ಮ ಮೇಲೆ ಅನುಮಾನ ಬಂದಿದೆಯೆಂದು ನಿಮಗೆ ಹೇಗೆ ಗೊತ್ತಾಯ್ತು?"

"ಹೇಗೆಂದರೇನು? ಸಿ ಐ. ಎ. ಒಂದು ರೀತಿ ನನ್ನ ಕಸ್ಟಮರ್ ಎಂದು ನಿನಗೆ ಮೊದಲೇ ಹೇಳಿದ್ದೀನಿ. ಸಿ. ಐ. ಎ. ನಲ್ಲಿ ನನ್ನ ಪೇರೋಲ್ ಮೇಲೆ ಚೆನ್ನಾಗಿ ಬದುಕುತ್ತಿರುವವರು ಕೆಲವರಿದ್ದಾರೆ. ಸಿ. ಐ. ಎ. ನಮಗೆ ಕೆಲವು ಕಾಂಟ್ರಾಕ್ಟ್‌ಗಳನ್ನು ಕೊಡುವುದಕ್ಕೆ ಈ ವ್ಯಕ್ತಿಗಳೇ ಕಾರಣ! ಅವರೇ ನನಗೀ ವಿಷಯ ತಿಳಿಸಿದ್ದು. ಆದರೆ ಯಾವ ವಿಷಯವನ್ನೂ ವಿವರವಾಗಿ ಮಾತ್ರ ಹೇಳಲಿಲ್ಲ."

"ವೆರಿ ಗುಡ್! ಹಾಗಿದ್ರೆ ನಾನು ಹೇಳಿದಂತೆ ಮಾಡಿ."

"ಏನು ಮಾಡಬೇಕು?"

"ಆ ದಿನ ಪ್ಲೇನ್‌ನಲ್ಲಿ ನಡೆದ ಘಟನೆಗೂ ನಿಮಗೂ ಯಾವುದೇ ಸಂಬಂಧವಿಲ್ಲ. ಆ ಘಟನೆಯ ಪೂರ್ತಿ ಜವಾಬ್ದಾರಿ ಮುನೀಂದ್ರಸ್ವಾಮಿಯದೇ! ಹೌದಾ?"

"ಹೌದಾ ಏನು? ಖಂಡಿತವಾಗಿ ಹೌದು!"

"ಹಾಗಿದ್ರೆ ಇನ್ನೇನು? ಮುನೀಂದ್ರಸ್ವಾಮಿಯ ಪಾಪದಲ್ಲಿ ನೀವ್ಯಾಕೆ ಪಾಲುಗಾರರಾಗಬೇಕು? ಬಹಳ ಹೆಚ್ಚೆಂದರೆ ನಿಮಗೆ ಒಬ್ಬ ರೆಗ್ಯುಲರ್ ಕಸ್ಟಮರ್ ಇಲ್ಲವಾಗ್ತಾನೆ. ಸಿ. ಐ. ಎ. ನಿಂದ ನಿಮಗೆ ಅಸಲಿಗೆ ಮೋಸ ವಾಗುವುದಕ್ಕಿಂತ ಅದು ಉತ್ತಮ ಅಲ್ವೆ?"

"ನೀನು ಹೇಳ್ತಿರೋದು ನನಗೆ ಅರ್ಥವಾಗ್ತಿಲ್ಲ."

"ಎಚ್ಚರಿಕೆಯಿಂದ ಕೇಳಿ! ಮುನೀಂದ್ರಸ್ವಾಮಿಯನ್ನು ನಿಮ್ಮ ಬೆನ್ನ ಹಿಂದಿಟ್ಟುಕೊಳ್ಳಬೇಕಿಲ್ಲ. ಸಿ. ಐ. ಎ. ನಲ್ಲಿ ನಿಮಗೆ ಬೇಕಾದ ವ್ಯಕ್ತಿಗಳಿದ್ದಾರೆಂದಿರಲ್ಲ, ಅವರನ್ನು ಕಾಂಟ್ಯಾಕ್ಟ್ ಮಾಡಿ. ಆ ದಿನ ಪ್ಲೇನ್‌ನಲ್ಲಿ ಏನು ನಡೆಯಿತೆಂಬುದನ್ನ ಅವರಿಗೆ ವಿವರಿಸಿ ಹೇಳಿ. ನಿಮಗೂ ಆ ಘಟನೆಗೂ ಸಂಬಂಧವಿಲ್ಲವೆಂದು ಸ್ಪಷ್ಟವಾಗಿ ಹೇಳಿ. ಮುನೀಂದ್ರಸ್ವಾಮಿಯನ್ನು ನೀವು ಶೀಲ್ಡ್ ಮಾಡುವ ಅಗತ್ಯವಿಲ್ಲ! ಆತನೊಂದಿಗೆ ನಿಮ್ಮ ಸಂಬಂಧಗಳೆಲ್ಲವನ್ನೂ ಕಡಿದುಕೊಳ್ಳಿ! ಅವನು ತಲೆ ತುರಿಸಿಕೊಂಡ ಕೊಳ್ಳಿಯನ್ನು ಹೇಗೆ ಆರಿಸಿ

ಕೊಳ್ಳಬೇಕೋ ಆ ಸಮಸ್ಯೆ ಆತನೇ ನೋಡಿಕೊಳ್ತಾನೆ! ಸಿ. ಐ. ಎ ದವಡೆಯಲ್ಲಿ ಅವನು ಸಿಕ್ಕಿಬೀಳುತ್ತಾನಾ, ಬೀಳಲಿ ಬಿಡಿ! ಅವನು ಮಾಡಿದ ತಪ್ಪಿಗೆ ಅವನೇ ಪೂರ್ತಿ ಜವಾಬ್ದಾರಿ ವಹಿಸಲು ಬಿಡಿ. ನೀವು ಮಾತ್ರ ಶುಭ್ರವಾಗಿ ಕೈ ತೊಳೆದುಕೊಂಡುಬಿಡಿ! ಈಗಲಾದ್ರೂ ನಾನು ಹೇಳುತ್ತಿರುವುದು ಅರ್ಥವಾಯ್ತಾ?"

"ಡ್ಯಾಮಿಟ್! ನಾನು ಹೇಳುವ ಕತೇನ ಸಿ ಐ. ಎ. ನಂಬಬೇಕಲ್ಲ!"

"ನಂಬುತ್ತದೆ! ನಂಬಲೇಬೇಕು. ನೀವು ನಿಜ ಹೇಳ್ತಿದಿರಿ. ಸುಳ್ಳು ಹೇಳ್ತಿಲ್ಲ! ಅವರು ಎಷ್ಟು ವಿಧವಾದ ಪ್ರಶ್ನೆಗಳಿಂದ ನಿಮ್ಮನ್ನು ಪೀಡಿಸಿದರೂ ನೀವು ನಿಜವನ್ನೇ ಹೇಳ್ತೀರಿ! ನೀವು ಹೇಳುವ ಕತೆಯಲ್ಲಿ ಅವರು ಎಷ್ಟು ಕೊಂಕು ಹುಡುಕಬೇಕೆಂದರೂ ಸಾಧ್ಯವಾಗದು! ಬಿ ಟ್ರುತ್‌ಫುಲ್ ದಟ್ಸಾಲ್!"

ಮತ್ತೆ ಕೆಲವು ಕ್ಷಣಗಳು ನಿಶ್ಶಬ್ದ! ನಂತರ ಮತ್ತೆ ಮೆಲ್ಲಗೆ ನಗು ಕೇಳಿಸಿತು! "ಬೇಬಿ ಯೂ ಆರ್ ಸ್ಮಾರ್ಟ್! ರಿಯಲೀ ಸ್ಮಾರ್ಟ್. ಹೌದು ಅಷ್ಟೇ ಮಾಡ್ಬೇಕು! ಅವನ್ನು ಬಿಟ್ಟರೆ ನನಗೆ ಬೇರೇನೂ ದಾರಿಯಿಲ್ಲ! ಇಲ್ಲಿಯ ತನಕ ಏನು ಮಾಡಬೇಕೆಂದು ತಲೆ ತಲೆ ಹೊಡೆದುಕೊಳ್ಳುತ್ತಿದ್ದೆ. ನಿನ್ನನ್ನು ಕಾಂಟ್ಯಾಕ್ಟ್ ಮಾಡಿದ್ದು ಒಳ್ಳೆಯದಾಯ್ತು. ಓಕೆ ಬೇಬಿ, ಗುಡ್‌ಬೈ!" ಪ್ಚ್ ಎನ್ನುತ್ತಾ ಮುತ್ತಿಟ್ಟ ಶಬ್ದ ಕೇಳಿಸಿತು. ಅವಳೂ ಕೂಡ ಅದಕ್ಕೆ ಪ್ರತಿಕ್ರಿಯೆ ಸೂಚಿಸಿದಳು. ಅತ್ತಲಿಂದ ಟೆಲಿಫೋನ್ ಡಿಸ್ ಕನೆಕ್ಟ್ ಆದೊಡನೆಯೇ ನಿಧಾನವಾಗಿ ರಿಸೀವರ್ ಅನ್ನು ಕ್ರೆಡಿಲ್ ಮೇಲೆ ಇಟ್ಟಳು. ಅವಳ ತುಟಿಗಳ ಮೇಲೆ ಕ್ರಮೇಣ ಹರಿತವಾದ ಖಡ್ಗದಂತಹ ಮುಗುಳ್ನಗೆ ವ್ಯಾಪಿಸಿತು. ಆ ನಗುವಿನಲ್ಲಿ ಮಾರ್ದವವಿರಲಿಲ್ಲ. ಕೇವಲ ಹಗೆ, ದ್ವೇಷ ತುಂಬಿದ್ದವು.

"ಮುನೀಂದ್ರಸ್ವಾಮಿ! ಇವತ್ತಿಗೆ ನಿನ್ನ ಕತೆ ಮುಗೀತು!" ಎಂದು ತನ್ನಲ್ಲಿಯೇ ಅಸ್ಪಷ್ಟವಾಗಿ ಅಂದುಕೊಂಡಳು. ಹಠಾತ್ತನೆ ಅವಳಿಗೆ ತಾನಿನ್ನೂ ನಗ್ನಳಾಗಿ ನಿಂತಿದ್ದೇನೆಂಬ ವಿಷಯ ಜ್ಞಾಪಕವಾಯ್ತು. ಮತ್ತೆ ಡ್ರೆಸ್ಸಿಂಗ್ ರೂಮಿಗೆ ಹೋಗಲು ಹಿಂದಿರುಗಿದಳು ಅಷ್ಟೇ. ಅಕಸ್ಮಾತ್ತಾಗಿ ಬಾಯಿಗೆ ಅಂಗೈ ಅಡ್ಡವಿಟ್ಟುಕೊಂಡು ಒಂದೇ ಸಲಕ್ಕೆ ಹುಚ್ಚಳಂತೆ ಕೂಗು ಹಾಕಿದಳು. ಅವಳು ಹಾಕಿದ ಕೂಗಿನಿಂದ ಆ ಕೋಣೆ ವಿಕೃತವಾಗಿ ಪ್ರತಿಧ್ವನಿಸಿತು.

* * * *

ಮೇಖಲೆಯೊಂದಿಗೆ ಮಾತಾಡಿದ ನಂತರ ಜೇಕೇ ಕೆಲವು ನಿಮಿಷ ಆಲೋಚನೆಗೆ ತೊಡಗಿದ. ಅವನಿಗೆ ಮುನೀಂದ್ರಸ್ವಾಮಿ ನೆನಪಾದ ನಿಜವೇ!

ತಾನು ಮುನೀಂದ್ರಸ್ವಾಮಿಯನ್ನೇಕೆ ಶೀಲ್ಡ್ ಮಾಡಬೇಕು? ಮುನೀಂದ್ರ ಸ್ವಾಮಿಯ ಪಾಪದ ಭಾಗವನ್ನು ತನ್ನ ಭುಜದ ಮೇಲೆ ಯಾಕೆ ಹೊತ್ತು ಕೊಳ್ಳಬೇಕು? ಮುನೀಂದ್ರಸ್ವಾಮಿ ತನಗೆ ಸ್ನೇಹಿತ, ನಿಜವೆ! ಆದರೆ ಬಿಜಿನೆಸ್‌ನಲ್ಲಿ ಸ್ನೇಹ-ಸಂಬಂಧಗಳೂ, ಬಾಂಧವ್ಯಗಳು ಇರಕೂಡದು! ಅವನಿಗೆ ಹಠಾತ್ತನೆ ಒಂದು ಅನುಮಾನ ಬಂತು. ತಾನಿರುವ ಸ್ಥಿತಿಯಲ್ಲಿಯೇ ಮುನೀಂದ್ರಸ್ವಾಮಿ ಇದ್ದಿದ್ದರೆ ಏನು ಮಾಡುತ್ತಿದ್ದ ? ಅವನು ಮಾಡಿದ ತಪ್ಪನ್ನೇ ತಾನೂ ಮಾಡಿ, ಅವನಿಗೆ ಸಂಬಂಧವಿಲ್ಲದ ತೊಡಕಿಗೆ ತಾನೂ ಸಿಕ್ಕಿಸಿದ್ದರೆ ಮುನೀಂದ್ರಸ್ವಾಮಿಯ ವರ್ತನೆ ಹೇಗಿರುತ್ತಿತ್ತು ? ಸಂದೇಹವಿಲ್ಲ, ಮುನೀಂದ್ರಸ್ವಾಮಿ ಕೂಡ ತಾನು ಮಾಡಲಿರುವ ಕೆಲಸವನ್ನೇ ಮಾಡುತ್ತಿದ್ದ. ಹೌದು ಮುನೀಂದ್ರಸ್ವಾಮಿಯ ಪಾಪದಲ್ಲಿ ತಾನ್ಯಾಕೆ ಪಾಲುಗಾರನಾಗಬೇಕು? ಮೇಖಲೆ ಹೇಳಿದ್ದು ಅಕ್ಷರಶಃ ನಿಜ! ಅವನಿಗೆ ಒಂದು ವಿಷಯ ಮಾತ್ರ ಅರ್ಥವಾಗಲಿಲ್ಲ. ಮೇಖಲೆಳನ್ನು ತನಗೆ ಪರಿಚಯ ಮಾಡಿಸಿದ್ದು ಮುನೀಂದ್ರಸ್ವಾಮಿಯೇ! ಹಾಗಿರುವಾಗ ಮೇಖಲೆಳಿಗೆ ತನ್ನ ಮೇಲಿರುವುದಕ್ಕಿಂತ ಹೆಚ್ಚಾಗಿ ಶ್ರದ್ಧಾಸಕ್ತಿ ಅವನ ಮೇಲೆ ಇರಬೇಕು! ಆದರೆ........... ಮೇಖಲಾ ನಾನು ತಪ್ಪಿಸಿಕೊಳ್ಳುವ ಮಾರ್ಗ ಹೇಳಿ, ಮುನೀಂದ್ರಸ್ವಾಮಿಯನ್ನು ಸಿಕ್ಕಿಸಿದ್ದಾಳೆ. ಈ ಸಮಸ್ಯೆಯಿಂದ ತನ್ನ ವಿಮುಕ್ತಿ, ಮುನೀಂದ್ರಸ್ವಾಮಿಗೆ ಮೃತ್ಯುಮಾರ್ಗ! ಮೇಖಲೆ ಯಾಕೆ ಹೀಗೆ ವರ್ತಿಸಿದಳು? ಎಷ್ಟು ಆಲೋಚಿಸಿದರೂ ಅವನಿಗರ್ಥವಾಗಲಿಲ್ಲ. ನಂತರ ಮತ್ತೊಂದು ಸಲ ರಿಸೀವರ್ ಎತ್ತಿ ಒಂದು ನಂಬರ್‌ಗೆ ಡಯಲ್ ಮಾಡತೊಡಗಿದ.

## ೧೧

ಅವಳು ಮತ್ತೊಂದು ಸಲ ಕಿರುಚಲು ಹೋದವಳು ಹಠಾತ್ತನೆ ನಿಲ್ಲಿಸಿದಳು. ಹಠಾತ್ತನೆ ಅವಳ ಕಣ್ಣುಗಳು ಅರಳಿದವು. ತೆರೆದ ಬಾಯಿ ಕೆಲವು ಕ್ಷಣಗಳು ಹಾಗೆಯೇ ಇದ್ದು, ಕ್ರಮೇಣ ಮುಗುಳ್ನಗೆಯಾಗಿ ಬದಲಾಯಿತು. ಮುಗುಳ್ನಗೆ ಕ್ರಮೇಣ ದೊಡ್ಡದಾಗಿ ಅವಳು ಬಿದ್ದು, ಬಿದ್ದು ನಗತೊಡಗಿದಳು. ಮೇಲಿಂದ ಮೇಲೆ ಬದಲಾದ ಅವಳ ಮುಖಭಾವಗಳನ್ನು ನೋಡಿದ್ದರೆ ಕೆಲವು ಕ್ಷಣಗಳು ಯಾರಾದರೂ ಅವಳಿಗೆ ಹುಚ್ಚು ಹಿಡಿದಿದೆಯೆಂದುಕೊಳ್ಳುತ್ತಿದ್ದರು! ಅವಳು ಕೊಂಚಹೊತ್ತು ನಗುತ್ತಿದ್ದು, ನಂತರ ಕಷ್ಟದಿಂದ ನಗು ನಿಲ್ಲಿಸಿದಳು. ಅವಳ ಎದುರಿಗೆ ಒಬ್ಬ ವ್ಯಕ್ತಿ ನೆಲದ ಮೇಲೆ ಕುಳಿತುಕೊಂಡಿದ್ದ. ನಲುಗಿ, ಮಾಸಿ, ಅಲ್ಲಲ್ಲಿ ಹರಿದ ಬಟ್ಟೆಗಳನ್ನು ಹಾಕಿಕೊಂಡಿದ್ದ.

ಭುಜಕ್ಕೊಂದು ಚೀಲ ನೇತಾಡುತ್ತಿತ್ತು. ಮಡಿಲಲ್ಲಿ ಒಂದು ದಪ್ಪನೆಯ ಪುಸ್ತಕದಂತಹುದನ್ನು ತೆರೆದಿಟ್ಟುಕೊಂಡು ಅಲ್ಲಿಯತನಕ ಶ್ರದ್ಧೆಯಿಂದ ತನ್ನಲ್ಲಿ ತಾನೇ ಯಾವುದೋ ಬಾಯಿ ಲೆಕ್ಕ ಗೊಣಗಿಕೊಳ್ಳುತ್ತಿದ್ದವನು ಅವಳು ಅಕ ಸ್ಮಾತ್ತಾಗಿ ಕೂಗು ಹಾಕಿದ್ದರಿಂದ ಬೆಚ್ಚಿಬಿದ್ದು ತಲೆ ಮೇಲೆತ್ತಿ ನೋಡಿದ. ಅವಳು ಆ ರೀತಿ ಕೂಗು ಹಾಕಲು ತಾನು ಆ ರೀತಿ ನಗ್ನವಾಗಿರುವಾಗ ಊಹಿಸಿರದ ರೀತಿಯಲ್ಲಿ ಯಾರೋ ತನ್ನ ಮುಂದೆ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾದುದೇ!

ಅವಳು ಬಲವಂತವಾಗಿ ನಗು ತಡೆದುಕೊಳ್ಳುತ್ತಾ ಎದುರಿಗೆ ಕುಳಿತು ಬಾಯಿ ಲೆಕ್ಕ ಗುಣಿಸಿಕೊಳ್ಳುತ್ತಾ ಹುಚ್ಚನಂತೆ ಕಾಣಿಸುತ್ತಿದ್ದ ಆ ವ್ಯಕ್ತಿಯನ್ನು ದಿಟ್ಟಿಸಿ ನೋಡಿದಳು. "ಹಲೋ ಹ್ಯಾಪಿ ಪ್ರಿನ್ಸ್! ಏನು ಹೀಗೆ ಹೇಳ್ದೆ ಕೇಳ್ದೆ ಮನೇಲಿ ಬಂದು ಕೂತ್ಕೊಂಡಿದೀಯಲ್ಲ? ಹೆಂಗಸರು ಮೈಮೇಲೆ ಬಟ್ಟೆಗಳಿಲ್ಲದೆ ನಿಂತಿರೋ ಸ್ಥಳಕ್ಕೆ ಕಳ್ಳನಂತೆ ಬಂದು ಕೂತ್ಕೋಬಹುದಾ?"

ದೇವ ಅವಳು ಹೇಳುತ್ತಿರುವುದೇನೆಂದು ಅರ್ಥವಾಗದವನಂತೆ ನೋಡಿದ. ಅವನ ಕಣ್ಣುಗಳು ಅವಳನ್ನು ಕೊಂಚ ಹೊತ್ತು ಅರ್ಥರಹಿತವಾಗಿ ನೋಡಿದವು. ಅವನ ಧೋರಣೆಯನ್ನು ನೋಡುತ್ತಿದ್ದರೆ ಅವನು ಒಳ ಬಂದು ಕುಳಿತುಕೊಳ್ಳುತ್ತಿರುವಾಗ ಅವಳು ನಗ್ನವಾಗಿ ನಿಂತಿದ್ದ ವಿಷಯವನ್ನು ಕೂಡ ಗಮನಿಸಿದಂತಿರಲಿಲ್ಲ. ಅವಳನ್ನೊಂದುಸಲ ಮೇಲಿನಿಂದ ಕೆಳಗೆ ದಿಟ್ಟಿಸಿ ನೋಡಿ, ಅರ್ಥರಹಿತವಾಗಿ ನಕ್ಕ.

"ಸಾರಿ ಬಾಸ್! ನೀನು ಕೊಟ್ಟ ಡೂಪ್ಲಿಕೇಟ್ ಕೀಲಿಕೈನಿಂದ ಆಟೋಮ್ಯಾಟಿಕ್ ಲಾಕ್ ತೆರೆದುಕೊಂಡು ನೇರವಾಗಿ ಒಳಗೆ ಬಂದೆ. ಬಾಗಿಲು ತಟ್ಟೋದು ಕೂಡ ಮರೆತುಬಿಟ್ಟೆ. ಹೋಗಿ ಬಟ್ಟೆ ಹಾಕ್ಕೋ!" ಆ ಮಾತು ಹೇಳಿ ಅವನು ಮತ್ತೆ ಪುಸ್ತಕದಲ್ಲಿ ತಲೆ ತೂರಿಸಿ ಬಾಯಿ ಲೆಕ್ಕ ಗೊಣಗಿಕೊಳ್ಳ ತೊಡಗಿದ. ಅವಳು ಉಕ್ಕಿಬರುತ್ತಿದ್ದ ನಗುವನ್ನು ತಡೆದುಕೊಂಡು ಅವನ ಹತ್ತಿರ ಹೋಗಿ ಕೈಹಿಡಿದು ನೆಲದ ಮೇಲಿನಿಂದ ಎಬ್ಬಿಸಿದಳು.

"ಪರವಾಗಿಲ್ಲ ಬಿಡು. ನೀನು ಋಷ್ಯಶೃಂಗನೆಂದು ನನಗೆ ಚೆನ್ನಾಗಿ ಗೊತ್ತು! ನೀನೇನು– ಹೀಗೆ ನೆಲದ ಮೇಲೆ ಕೂತ್ಕೋಬೇಡಾಂತ ಎಷ್ಟು ಸಲ ಹೇಳಿದ್ದೀನಿ. ನನ್ನೊಂದಿಗೆ ಬಾ!" ಅವನ ಕೈಹಿಡಿದುಕೊಂಡು ಡ್ರೆಸ್ಸಿಂಗ್ ರೂಮಿನೊಳಗೆ ಕರೆದೊಯ್ದು ಒಂದು ಮೆತ್ತನೆಯ ಕುರ್ಚಿಯ ಮೇಲೆ ಕೂರಿಸಿದಳು. "ಈಗ ಹೇಳು. ಏನೀ ಅವತಾರ? ತಲೆ ಯಾವಾಗ ಬೋಳಿಸ್ಕೊಂಡೆ ? ಗಡ್ಡವೇನು ನುಣ್ಣಗೆ ಯಾವತ್ತೂ ಇಲ್ಲದಷ್ಟು ಫ್ರೆಶ್ ಆಗಿ ಕಾಣಿಸ್ತಿದೆ? ಈ ಅವತಾರದಲ್ಲಿ ನೀನು ಹೇಗಿದೀಯಾ ಗೊತ್ತಾ?"

ಅವನಿಗೆ ತಾನು ತಲೆ ಬೋಳಿಸಿಕೊಂಡ ವಿಷಯ ಆಗಷ್ಟೇ ನೆನಪಾದಂತೆ ಅಂಗೈ ನೆತ್ತಿಯ ಮೇಲೆ ಸವರಿಕೊಳ್ಳುತ್ತಾ, ಆನಂದದಿಂದ ನಕ್ಕ. "ಇದಾ! ಈಗ್ತಾನೇ ಬೋಳಿಸ್ಕೊಂಡೆ! ನೀನು ನನ್ನನ್ನ ಮುಟ್ಟಿಸ್ಕೋಬಹುದು. ಆಗಲೇ ಸ್ನಾನ ಮಾಡಿದ್ದೀನಿ".

"ಇಷ್ಟಕ್ಕೂ ತಲೆ ಬೋಳಿಸಿಕೊಂಡಿದ್ದು ಯಾಕೆ ?" ಸ್ಟ್ಯಾಂಡ್‌ನ ಹತ್ತಿರ ಹೋಗಿ ಅವನ ಮುಂದೆಯೇ ಬಟ್ಟೆ ಧರಿಸತೊಡಗಿದಳು.

ಅವನು ಅದನ್ನೇನೂ ಹಚ್ಚಿಕೊಳ್ಳದೆ ತನ್ನ ಧೋರಣೆಯಲ್ಲಿ ತಾನು ಹೇಳ ತೊಡಗಿದ. "ಅದಲ್ಲ ಬಾಸ್! ದಾರೀಲಿ ಬರ್ತಿದ್ನಾ? ಒಬ್ಬ ಭಿಕ್ಷೆ ಬೇಡೋ ಅವ್ವ ನನಗೆದುರು ಬಂದು ಅನ್ನ ತಿಂದು ನಾಲ್ಕು ದಿನಗಳಾಯ್ತು, ಏನಾದ್ರೂ ಇದ್ರೆ ಕೊಡು ಅಂದ್ಲು. ಪಾಪ ನನ್ನಂತೆ ಅರ್ಧ ಕುರುಡಿ! ಅವಳ ಹೊಟ್ಟೆ ಪಕ್ಕೆಗಂಟಿಕೊಂಡಿತ್ತು. ನನ್ನ ಹತ್ತಿರ ಒಂದು ಕಾಸು ಕೂಡಾ ಇರಲಿಲ್ಲ. ಅದಕ್ಕೇ ಆ ಅವ್ವನನ್ನು ಕೈಹಿಡಿದು ಒಂದು ಹೇರ್ ಡ್ರೆಸ್ಸಿಂಗ್ ಸೆಲೂನ್ ಹತ್ತಿರ ಹೋಗಿ ಬಾರ್ಬರ್‌ನನ್ನು ಹಿಡಿದುಕೊಂಡು ಆಕೆಗೇನಾದ್ರೂ ಕೊಡು ಅಂದೆ! ಬಾರ್ಬರ್ 'ಇಲ್ಲ ಹೋಗಯ್ಯ' ಅಂದ! ಹೋಗ್ಲಿ ನಾನು ಏನಾದ್ರೂ ಕೆಲಸ ಮಾಡ್ತೀನಿ, ಆ ಅವ್ವನಿಗೆ ಎಂಟಾಣೆ ಕೊಡು ಅಂತಂದೆ! ಬಾರ್ಬರ್ ನನ್ನ ಮುಖದ ಕಡೆ ನೋಡಿ 'ನಿನ್ನ ಮುಖ, ನೀನೇನು ಕೆಲಸ ಮಾಡ್ತೀಯೋ! ಹೆಣ್ಣಿನಂತೆ ಕೂದಲು ಬೆಳೆಸಿಕೊಂಡಿದ್ದೀಯಾ, ಚೌರಿಗೆ ಉಪಯೋಗವಾಗುತ್ತೆ. ಕೂದಲು ಕೊಡು, ಎಂಟಾಣೆ ಕೊಡ್ತೀನಿ' ಅಂದ. ಕೊಟ್ಬಿಟ್ಟೆ! ಪಾಪ ಒಳ್ಳೆಯವನಿದ್ದಂತಿದ್ದ. ಕೇಳದೆಯೇ ಕೂದಲಿನ ಜೊತೆ ಗಡ್ಡ ಕೂಡ ಹೆರೆದು ಹಾಕಿದ".

ಅವನು ಆನಂದದಿಂದ ಹೇಳುತ್ತಿದ್ದ ಮಾತುಗಳನ್ನು ಕೇಳಿದ ಅವಳು ಕೆಲವು ಕ್ಷಣ ಬಟ್ಟೆ ಧರಿಸುವುದನ್ನು ಮರೆತಳು. ಅವನು ಹೇಳುವುದನ್ನು ನಿಲ್ಲಿಸಿ ದೊಡನೆಯೇ ಅವಳ ಕಣ್ಣುಗಳಲ್ಲಿ ಮರುಕದಿಂದ ಕೂಡಿದ ಎರಡು ಕಣ್ಣೀರಿನ ಹನಿಗಳು ಉಕ್ಕಿ ಬಂದು ನೋಟಕ್ಕೆ ಅಡ್ಡಿಯಾದವು. "ಸಾಕು ಬಿಡು– ತುಂಬಾ ದೊಡ್ಡದಾಗಿ. ಆನಂದದಿಂದ ಹೇಳ್ತಿದಾನೆ! ಇನ್ನೊಬ್ಬರಿಗೋಸ್ಕರ ಕೊಡಲಾರದ್ದು ನಿನ್ನ ಶರೀರದಲ್ಲಿ ಏನಾದ್ರೂ ಇದೆಯಾ? ಮೊದಲು ಯಾರಿಗೋ ಬೇಕೆಂದು ಒಂದು ಕಿಡ್ನಿ ದಾನ ಮಾಡಿದೆ! ನಂತರ ಒಬ್ಬ ಕುರುಡು ಯುವತಿಗೋಸ್ಕರ ಒಂದು ಕಣ್ಣು ದಾನ ಮಾಡಿ ಗಾಜಿನ ಕಣ್ಣಿಟ್ಟುಕೊಂಡೆ! ಈಗೇನೋ ತಲೆ ಬೋಳಿಸ್ಕೊಂಡಿದೀಯ! ನಿನ್ನ ಹತ್ತಿರ ಇತರರಿಗೋಸ್ಕರ ಕೊಡಲಾರದ ವಸ್ತು ವೇನಾದ್ರೂ ಇದೆಯಾ?"

"ಇದೆ. ನನ್ನ ಪ್ರಾಣ. ಅದನ್ನು ಕೂಡಾ ಕೊಟ್ಟಬಿಟ್ರೆ ಇನ್ನು ಕೊಡಲು ನನ್ನ ಹತ್ತಿರ ಏನೂ ಇರೋದಿಲ್ಲಾದ್ದರಿಂದ ಸುಮ್ಮನಿದೀನಿ! ಟೈಮ್ ಬಂದ್ರೆ ಅದನ್ನು ಕೂಡ ಯಾರಿಗೋಸ್ಕರನಾದ್ರೂ ಕೊಟ್ಟಿಡ್ತೀನಿ!" ಅವನ ಮಾತುಗಳಲ್ಲಿ ಹಾಸ್ಯ ಕೊಂಚವೂ ಇರಲಿಲ್ಲ. ಹಠಾತ್ತನೆ ಮತ್ತಷ್ಟು ಸೀರಿಯಸ್ ಆಗುತ್ತಾ ಮತ್ತೆ ನುಡಿದ. "ದೇವರು ಮನುಷ್ಯರಿಗೆ ಎರಡು ಕಣ್ಣು ಕೊಟ್ಟಿದ್ದಾನೆ. ನೋಡೋದಿಕ್ಕೆ ಒಂದು ಸಾಕು. ಆದ್ರೂ ಎರಡು ಕೊಟ್ಟಿದ್ದಾನೆ ಯಾಕೆ ? ದೇವರು ಮನುಷ್ಯನಿಗೆ ಎರಡು ಕಿಡ್ನಿ ಕೊಟ್ಟಿದ್ದಾನೆ. ಬದುಕೋದಕ್ಕೆ ಒಂದು ಸಾಕು. ಆದರೂ ಕೊಟ್ಟಿದ್ದಾನೆ. ಯಾಕೆ ? ಅಗತ್ಯವಿದ್ದವರಿಗೆ ಕೊಡು ಅಂತ! ಅಗತ್ಯಕ್ಕೆ ಮಿಕ್ಕಿ ಒಬ್ಬ ಮನುಷ್ಯನ ಹತ್ತಿರ ಏನಾದರೂ ಯಾಕಿರಬೇಕು ? ಈ ಬದುಕು ಯಾಕೆ? ಇತರರೊಂದಿಗೆ ಹಂಚಿಕೊಳ್ಳಲು ಬಿಟ್ಟರೆ!"

"ದೇವ ನಿನಗೆ ದೇವರ ಮೇಲೆ ನಂಬಿಕೆ ಇದೆಯಾ?"

ಅವನು ಸಿನ್ಸಿಯರ್ ಆಗಿ ತಲೆಯಾಡಿಸಿದ. "ನನಗಿದೆ. ನಿಂಗಿಲ್ವಾ ?" ಅಮಾಯಕವಾಗಿ ಕೇಳಿದ.

"ಇಲ್ಲ".

"ಪ್ಚ್! ಇಲ್ದಿದ್ರೆ ಏನು ಬಿಡು ? ಆತ ಇದ್ದೂ ಕೂಡ ಏನು ಮಾಡ್ತಿರೋದು ? ಗೊರಕೆ ಹೊಡೆದು ನಿದ್ದೆ ಮಾಡ್ತಿರಬೇಕಷ್ಟೇ. ಎಚ್ಚರವಾಗಿದ್ದಿದ್ದರೆ ಲೋಕದಲ್ಲಿ ಇಷ್ಟು ಅಸ್ತವ್ಯಸ್ತತೆ ಯಾಕಿರುತ್ತಿತ್ತು ಹೇಳು? ಒಬ್ಬ ಬದುಕಲಾರದೆ ನರಳುತ್ತಿದ್ದರೆ ಮತ್ತೊಬ್ಬ ಸಾಯಲಾರದೆ ನರಳುತ್ತಿರುತ್ತಾನೆ!ಒಬ್ಬನಿಗೆ ತಿಂದದ್ದು ಜೀರ್ಣವಾಗದೆ ಒದ್ದಾಡುತ್ತಿದ್ದರೆ ಮತ್ತೊಬ್ಬನು ತಿನ್ನೋದಕ್ಕೆ ಇಲ್ದೆ ಒದ್ದಾಡುತ್ತಿರುತ್ತಾನೆ. ಆ ದೇವರು ಯಾವಾಗಲಾದರೂ ನನಗೆ ಸಿಕ್ಕಿದ್ರೆ ತಪ್ಪದೇ ಕೇಳ್ತೀನಿ. ಯಾಕಯ್ಯ ಹೀಗೆ ಮೈ ಮರೆತು ಮಲಗಿದೀಯಾ ? ಅಂತ!".

ಆವಳು ಅವನನ್ನು ಕೆಲವು ಕ್ಷಣ ಪರಿಶೀಲಿಸಿ ನೋಡಿದಳು. "ದೇವ! ದೇವರು ನಿನಗಿಂತ್ಲೂ ಒಳ್ಳೆಯವನು ಅಂತೀಯಾ ?"

"ಅದೇನೋ ನಂಗೊತ್ತಿಲ್ಲ! ಆದರೆ ಕೆಲವು ಕೆಲಸಗಳನ್ನು ದೇವರು ಮಾಡುತ್ತಿಲ್ಲವೆಂದು ನನಗೆ ಗೊತ್ತು. ಕನಿಷ್ಟ ಅವುಗಳಲ್ಲಿ ಕೆಲವನ್ನಾದರೂ ಪೂರ್ತಿಗೊಳಿಸಬೇಕೆಂದುಕೊಂಡು ಈ ಚೀಲ ಭುಜಕ್ಕೆ ನೇತಾಡಿಸಿಕೊಂಡು ತಿರುಗುತ್ತಿರುತ್ತೇನೆ. ದೇವರು ಮಾಡಲು ಸೋಮಾರಿತನ ತೋರಿಸಿದ ಕೆಲಸಗಳೆಲ್ಲವನ್ನೂ ನೆನೆಪಿಟ್ಟುಕೊಳ್ಳಲು ಈ ದೇವರ ಡೈರಿ ಮೈನ್‌ಟೇನ್ ಮಾಡ್ತಿದೀನಿ!" ಕೈನಲ್ಲಿದ್ದ ದಪ್ಪನೆಯ ಪುಸ್ತಕ ತೋರಿಸಿದ.

ಅವಳ ತುಟಿಗಳ ಮೇಲೆ ಮುಗುಳ್ನಗು ಮೂಡಿತು. ಅವಳಿಗೆ ದೇವನನ್ನು ಮೊದಲಬಾರಿ ನೋಡಿದ ಘಟನೆ ಕಣ್ಣ ಮುಂದೆ ಸುಳಿಯಿತು.

ಒಂದು ದಿನ ಕಾರಿನಲ್ಲಿ ಸಿಟಿಯಲ್ಲಿನ ಒಂದು ದೊಡ್ಡ ಬಿಜಿ ಸೆಂಟರ್‌ನಲ್ಲಿ ಸ್ಪೀಡಾಗಿ ಹೋಗುತ್ತಿದ್ದಳು. ಹಠಾತ್ತನೆ ಒಂದು ಆಕಾರ ತನ್ನ ಕಾರಿಗೆ ಅಡ್ಡ ವಾಗಿ ಬಂದು ಬಿತ್ತು. ಸಮಯಕ್ಕೆ ಸರಿಯಾಗಿ ಬ್ರೇಕ್ ಹಾಕಿರದಿದ್ದರೆ ಅವನು ಕಾರಿನ ಗಾಲಿಯ ಕೆಳಗಿರುತ್ತಿದ್ದ! ಆ ಹಠಾತ್ ಘಟನೆಯಿಂದ ರಸ್ತೆಯ ಮೇಲಿನ ಟ್ರಾಫಿಕ್ ಎಲ್ಲಾ ಜಾಮ್ ಆಗಿಬಿಟ್ಟಿತು. ಅವಳು ಕೋಪದಿಂದ ಕಾರಿಳಿದು ಅವನ ಹತ್ತಿರ ಹೋಗಿ ಏನೋ ಹೇಳಲು ಹೋದಳು. ಅವನಿಗೆ ತುಂಬಾ ಪೆಟ್ಟು ತಗುಲಿತ್ತು. ಕಣ್ಣುಗಳು ಅವಳ ಕಡೆ ಕರುಣಾಜನಕವಾಗಿ ನೋಡುತ್ತಿದ್ದವು. "ಪ್ಲೀಸ್! ನನಗೇನೂ ಪರವಾಗಿಲ್ಲ. ಆದರೆ ಅವಳನ್ನು ಮಾತ್ರ ಹಾಸ್ಪಿಟಲ್‌ಗೆ ಕರೆದೊಯ್ಯಿರಿ" ಪಕ್ಕಕ್ಕೆ ಬೆರಳು ತೋರಿಸುತ್ತಾ ನುಡಿದ. ಆ ಮಾತು ಹೇಳುತ್ತಿರುವಂತೆ ಅವನಿಗೆ ಜ್ಞಾನ ತಪ್ಪಿತು. ಅವಳು ಅವನು ತೋರಿಸಿದ ಕಡೆ ನೋಡಿದಳು. ಪೇವ್‌ಮೆಂಟ್ ಮೇಲೆ ಚಳಿಗೆ ಗಡಗಡನೆ ನಡುಗುತ್ತಾ ಆಗಲೋ, ಈಗಲೋ ಎನ್ನುವಂತಿದ್ದ ಒಬ್ಬ ಮುದುಕಿ ಕಾಣಿಸಿದಳು. ಅವಳು ಅವರಿಬ್ಬರನ್ನೂ ಕಾರಿನಲ್ಲಿ ಹಾಕಿಕೊಂಡು ಜನರಲ್ ಹಾಸ್ಪಿಟಲ್‌ಗೆ ಕರೆದೊಯ್ದಳು.

ಅವನು ಕಣ್ಣು ತೆರೆಯುತ್ತಲೇ ಹೇಳಿದ ಮಾತುಗಳು ಅವಳಿಗಿನ್ನೂ ನೆನಪಿದ್ದವು. "ಆ ಮುದುಕಿ- ಆ ಮುದುಕಿಗೆ ಹೇಗಿದೆ ಬಾಸ್?"

ಅವಳು ಅವನ ಕಡೆ ಆಸಕ್ತಿಯಿಂದ ನೋಡಿದಳು. "ಆಕೆಗೇನು ಚೆನ್ನಾಗಿದ್ದಾಳೆ! ಹಾಸ್ಪಿಟಲ್‌ಗೆ ತರೋದು ಕೊಂಚ ತಡವಾಗಿದ್ದರೆ ನ್ಯೂಮೋನಿಯಾ ಆಗಿರುತ್ತಿತ್ತು!" ಎಂದಳು.

ಅವನ ಕಣ್ಣುಗಳು ತೃಪ್ತಿಯಿಂದ ಹೊಳೆದವು. "ಯೂ ಆರ್ ಗ್ರೇಟ್ ಬಾಸ್, ರಿಯಲಿ!" ತುಂಬಿದ ಹೃದಯದಿಂದ ನುಡಿದ.

"ಇದರಲ್ಲಿ ಗ್ರೇಟನೆಸ್ ಏನಿದೆ?" ಅವಳು ಕೇಳಿದಳು.

"ಮನುಷ್ಯನ ಮೇಲೆ ಕಾರು ಓಡಿಸಿ ಹಿಂದಿರುಗಿ ನೋಡದೆ ಹೊರಟು ಹೋಗುವ ದಿನಗಳಿವು. ನೀವು ನಿಜವಾಗ್ಲೂ ಗ್ರೇಟ್ ಬಾಸ್!"

ಅವನ ಮಾತುಗಳು ಅವಳಿಗೆ ಮೋಜೆನಿಸಿದವು "ಇಷ್ಟಕ್ಕೂ ಆ ಮುದುಕಿ ನಿನಗೇನಾಗ್ಬೇಕು?"

"ಎಲ್ಲಾ ಆಗ್ಬೇಕು ಬಾಸ್! ಅತ್ತನೋಡಿ, ಆ ಬೆಡ್ ಮೇಲೆ ಮಲಗಿರೋ ಮಗು ನನಗೇನಾಗ್ತಾಳೆ? ಅವಳಿಗೇನಾದ್ರೂ ಆದ್ರೆ ಅಯ್ಯೋ ಪಾಪ ಅನ್ನಿಸೋ

ದಿಲ್ವಾ? ಅತ್ತ ನೋಡಿ, ಆ ಕಿಟಕಿಯಿಂದ ದೂರದಲ್ಲಿ ಕಾಣಿಸುತ್ತಿರುವ ಹೂವಿನ ಗಿಡ ನನಗೇನಾಗಬೇಕು? ಆ ಗಿಡ ಬಾಡಿದರೆ ಮನಸ್ಸಿಗೆ ನೋವೆನಿಸುವುದಿಲ್ವಾ?"

ಅವಳು ವಿಚಿತ್ರವಾಗಿ ನೋಡಿದಳು. "ಅಂದ್ರೆ ಆ ಮುದುಕಿ ನಿನಗೇನೂ ಅಲ್ವಾ?" ಎಂದು ಕೇಳಿದಳು ಅವನು ಅಡ್ಡವಾಗಿ ತಲೆಯಾಡಿಸಿದ.

"ಅರರೆ! ಯಾರೋ ದಿಕ್ಕೂ-ದೆಸೆಯಿಲ್ಲದ ಮುದುಕಿಗೋಸ್ಕರ ನನ್ನ ಕಾರಿನ ಕೆಳಗೆ ಬಿದ್ದೆಯಾ?"

ಅವನು ಅಮಾಯಕವಾಗಿ ನಕ್ಕ. "ದಿಕ್ಕೂ-ದೆಸೆ ಇಲ್ಲದ್ದರಿಂದಲೇ ನಿಮ್ಮ ಕಾರಿನ ಕೆಳಗೆ ಬಿದ್ದೆ ಬಾಸ್! ಆಕೆಗೆ ದಿಕ್ಕೂ-ದೆಸೆ ಇದ್ದರೆ ನನಗೇನು ಅವಶ್ಯಕತೆಯಿತ್ತು?"

"ಅದ್ರೂ ಅಷ್ಟು ಪ್ರಾಣಭಯ ತೊರೆದು, ಸಾಹಸ ಮಾಡಬೇಕಿತ್ತಾ?" ಗದರಿಸಿದಳು.

"ಯಾರೂ ಬರಲಿಲ್ಲ ಬಾಸ್! ಆಕೇನ ಹಾಸ್ಪಿಟಲ್‌ಗೆ ಕರೆದೊಯ್ಯಲು ಎಷ್ಟು ಕಾರು ನಿಲ್ಲಿಸಿದರೂ ಯಾರೂ ನಿಲ್ಲಿಸಲಿಲ್ಲ. ಎಷ್ಟು ಜನರನ್ನು ಸಹಾಯ ಕೇಳಿದರೂ ಹಚ್ಚಿಕೊಳ್ಳಲಿಲ್ಲ. ಎಷ್ಟು ಆಟೋಗಳನ್ನು ಕರೆದರೂ ಬರೋದಿಲ್ಲಾಂದ್ರು. ಏನು ಮಾಡೋದು ಕೊನೆಗೆ ನಿಮ್ಮ ಕಾರಿನ ಕೆಳಗೆ ಬಿದ್ದೆ!"

ಅವಳು ಆಶ್ಚರ್ಯದಿಂದ ಅವನ ಕಡೆ ನೋಡುತ್ತಿದ್ದಳು. ಅವಳು ತನ್ನ ಜೀವನದಲ್ಲಿ ಎಷ್ಟೋ ಗೋಮುಖ ವ್ಯಾಘ್ರಗಳನ್ನು ನೋಡಿದ್ದಳು. ಎಷ್ಟೋ ಗುಳ್ಳೆನರಿಗಳನ್ನು ನೋಡಿದ್ದಳು. ತನ್ನ ಸ್ವಾರ್ಥಕ್ಕೋಸ್ಕರ ಇನ್ನೊಬ್ಬರ ಕತ್ತು ಕೊಯ್ಯೋ ಕಾರ್ಕೋಟಕರನ್ನು ನೋಡಿದ್ದಳು. ತನ್ನ ಕೆಲಸ ಮಾಡಿಕೊಳ್ಳುವುದಕ್ಕಾಗಿ ಅಮಾಯಕ ಹೆಣ್ಣುಗಳ ತಲೆ ಹಿಡಿಯೋ ಪಶುಗಳನ್ನು ನೋಡಿದ್ದಳು.... ಆದರೆ ಇಂತಹ ಒಬ್ಬ ಮನುಷ್ಯನನ್ನು ನೋಡುತ್ತಿರುವುದು ಅದೇ ಮೊದಲ ಸಲ. ಈ ಪ್ರಪಂಚವೆನ್ನುವ ಜನಾರಣ್ಯದಲ್ಲಿ ಕ್ರೂರ ಜಂತುಗಳ ನಡುವೆ ಮಾನವತೆಗೋಸ್ಕರ ಹುಡುಕುತ್ತಾ ತಿರುಗುವ ಮಾನವನನ್ನು ನೋಡಿದಳು. ಈ ಲೋಕದಲ್ಲಿ ಇರಲಾರದ ಎಂದುಕೊಂಡ ವ್ಯಕ್ತಿಯನ್ನು ನೋಡಿದ್ದಳು. ಅವನು ಹಠಾತ್ತನೆ ಏನೋ ನೆನಪಾದವನಂತೆ ನೋಡಿದ. "ಹೌದೂ! ನಾನು ಕಾರು ಕೆಳಗೆ ಬಿದ್ದಿದ್ದಕ್ಕೆ ಪೋಲೀಸರು ನಿಮ್ಮನ್ನೇನೂ ಅನ್ನದೆ ಸುಮ್ಮನಾದ್ರಾ ಬಾಸ್?"

"ಯಾಕೆ ಸುಮ್ಮನಾಗ್ತಾರೆ? ಲಂಚಕೊಟ್ಟು ತಪ್ಪಿಸಿಕೊಂಡು ಬಂದೆ".

ಅವನ ಮುಖದ ಮೇಲೆ ನಂಬಲಶಕ್ಯವಾದ ಮಹದಾನಂದ ಕಾಣಿಸಿತು. "ನಿಜವಾಗಗ್ಲೂ?" ಅವಳು ಹೌದೆಂದು ತಲೆಯಾಡಿಸಿದಳು. ಅವನು ಆನಂದದಿಂದ ನಕ್ಕ. ಆ ಕ್ಷಣದಲ್ಲಿ ಅವನು ಹೇಳಿದ ಮಾತನ್ನು ಅವಳು ಜೀವನವಿಡೀ

ಮರೆಯಲಾರಳು. "ಹೋಗ್ಲಿ ಬಿಡಿ! ಪೋಲೀಸರಿಗೆ ಒಂದು ಹೊತ್ತು ಹೊಟ್ಟೆ ಪಾಡು ಕಳೆಯುತ್ತೆ?"

ಅಷ್ಟೇ! ಆ ಕ್ಷಣದಿಂದ್ಲೇ ಅವನು ಅವಳಿಗೆ ಬೆಸ್ಟ್ ಫ್ರೆಂಡ್ ಆಗಿಬಿಟ್ಟ. ತನ್ನನ್ನು ಅಂದವಾದ ಮಾಂಸದ ಮುದ್ದೆಯಂತಲ್ಲದೆ ಮನುಷ್ಯಳೆಂದು ಗುರುತಿಸಿದ ಮೊಟ್ಟ ಮೊದಲ ವ್ಯಕ್ತಿ ಅವನು. ನೋಡಲು ಹುಚ್ಚನಂತೆ ಕಾಣಿಸುತ್ತಿದ್ದ ಆದರೆ ಮೇಧಾವಿಗಳಲ್ಲಿ ಮೇಧಾವಿ! ಅವನ ಪ್ರತಿ ಮಾತೂ ಒಂದೊಂದು ಮುತ್ತು. ದಿನವೆಲ್ಲಾ ಎಲ್ಲೆಲ್ಲಿ ಕಳೆಯುತ್ತಿದ್ದನೋ ತಿಳಿಯದು. ಯಾವುದೋ ಒಂದು ದಿನ ಆಕಾಶದಿಂದ ಕಳಚಿ ಬಿದ್ದಂತೆ ಬರುತ್ತಾನೆ. ಅಲ್ಲಿಗೆ ದೇಶದಲ್ಲಿ ಯಾರ್ಯಾರು ಏನೇನು ನೋವನ್ನನುಭವಿಸುತ್ತಿದ್ದಾರೋ, ಯಾರ್ಯಾರಿಗೆ ಏನೇನು ಅಗತ್ಯಗಳಿವೆಯೋ ಎಲ್ಲಾ ತನ್ನ ಗಪ್ಪನೆಯ ಪುಸ್ತಕದಲ್ಲಿ ಒಂದು ಲಿಸ್ಟ್ ಬರೆದುಕೊಂಡು ಬರುತ್ತಾನೆ. ಅದಕ್ಕವನು ಇಟ್ಟ ಹೆಸರು– ದೇವನ ಡೈರಿ! ಬರುತ್ತಿದ್ದಂತೆಯೇ ಆ ಲಿಸ್ಟ್ ಅನ್ನು ಅವಳ ಮುಂದೆ ಓದುತ್ತಿದ್ದ. ಯಾರ್ಯಾರಿಗೆ ಎಷ್ಟೆಷ್ಟು ದುಡ್ಡು ಸಹಾಯ ಮಾಡಬೇಕೋ ಹೇಳಿ, ಆ ದುಡ್ಡು ಕೊಡೆಂದು ಗುಂಬಾಲು ಬೀಳುತ್ತಿದ್ದ. ಅವಳು ಬೇಸರಿಸಿಕೊಳ್ಳುತ್ತಿದ್ದಿಲ್ಲ. ಅವನು ಕೇಳಿದಷ್ಟು ಕೊಡುತ್ತಿದ್ದಳು. ಸಂತೋಷದಿಂದ ಚಿಕ್ಕಮಗುವಿನಂತೆ ಕುಣಿದಾಡುತ್ತಾ ಹೋಗುತ್ತಿದ್ದ. ಅವನ ಕೈಗಳ ಮೂಲಕ ಎಷ್ಟು ಸಾವಿರ ರೂಪಾಯಿಗಳು ನೀರಿನಂತೆ ಹರಿದಿವೆಯೋ ಅವಳಿಗೇ ನೆನಪಿಲ್ಲ. ಪರವಾಗಿಲ್ಲ, ನಿಜವಾದ ಮನುಷ್ಯನಿಗೋಸ್ಕರ ಏನು ಮಾಡಿದರೂ ಪರವಾಗಿಲ್ಲ ಎಂದುಕೊಳ್ಳುತ್ತಿದ್ದಳು. ಅವಳು ಕೊಟ್ಟ ಆ ದುಡ್ಡಿನಲ್ಲಿ ಅವನು ತನಗೋಸ್ಕರ ಒಂದು ಪೈಸೆಯನ್ನೂ ಖರ್ಚು ಮಾಡುತ್ತಿರಲಿಲ್ಲ. ತಾನು ಲಿಸ್ಟ್ ಬರೆದುಕೊಂಡು ಬಂದ ಪ್ರತಿಯೊಬ್ಬರಿಗೂ ಹಂಚಿಬಿಡುತ್ತಿದ್ದ. ಸ್ವಂತಕ್ಕೋಸ್ಕರ ಏನಾದರೂ ಕೊಂಡುಕೋ ಎಂದು ಅವಳು ಅವನಿಗೆ ಸಾಕಷ್ಟು ಸಲ ಬಲವಂತ ಮಾಡಿದ್ದಳು. ಅವನು ಬೇಡವೆನ್ನುತ್ತಿದ್ದ. ಒಂದು ದಿನ ಅವನಿಗೋಸ್ಕರ ಬೆಲೆ ಬಾಳುವ ಬಟ್ಟೆಗಳನ್ನು ಕೊಂಡು ತಂದಿದ್ದಳು. ಅವುಗಳನ್ನು ಕೈಯಲ್ಲಿ ತೆಗೆದುಕೊಳ್ಳುತ್ತಲೇ, "ಈಗ್ಲೇ ಬರ್ತೀನಿ ಒಂದ್ನಿಮಿಷ!"ಎನ್ನುತ್ತಾ ಮಾಂತ್ರಿಕನಂತೆ ಅದೃಶ್ಯನಾದ. ಮತ್ತೆ ಮರುದಿನದವರೆಗೂ ಕಣ್ಣಿಗೆ ಬೀಳಲಿಲ್ಲ. ಮತ್ತೆ ಅವನು ಎದುರಿಗೆ ಬಂದು ನಿಲ್ಲುವಾಗ ಏನಿತ್ತು? ಮತ್ತೆ ಅದೇ ಅವತಾರ. ತಾನು ಕೊಟ್ಟ ಬಟ್ಟೆಗಳನ್ನು ಯಾರಿಗೋ ಕೊಟ್ಟುಬಿಟ್ಟಿದ್ದ.

"ಇದೇನು?" ಕೋಪದಿಂದ ಕೇಳಿದಳು.

"ಯಾಕೆ? ನಾನೀ ಡ್ರೆಸ್‌ನಲ್ಲಿ ಚೆನ್ನಾಗಿಲ್ವಾ ಬಾಸ್?" ಆಶ್ಚರ್ಯದಿಂದ ತನ್ನನ್ನು ತಾನೇ ನೋಡಿಕೊಳ್ಳುತ್ತಾ ನುಡಿದ. "ನಾನು ಅಂದವಾಗಿಲ್ವಾ?"

ಎಂದ ಸೀರಿಯಸ್ ಆಗಿ. ಅವನು ಸೀರಿಯಸ್ ಆಗಿ ಆ ರೀತಿ ಮುಖ ಮಾಡಿದ ರೀತಿಗೆ ಅವಳಿಗೆ ಹೊಟ್ಟೆ ಹುಣ್ಣಾಗುವಷ್ಟು ನಗು ಬಂದಿತ್ತು.

ಕೆಲವಾರು ಸಲ ಅವಳು ಅವನನ್ನು ಪರೀಕ್ಷಿಸಿ ನೋಡಿದ್ದಳು. ಇನ್ನೊಬ್ಬರ ನೋವಿನ ಬಗೆಗೆ ಗಮನಿಸುವುದನ್ನು ಬಿಟ್ಟರೆ ಅವನಿಗೆ ಪ್ರಪಂಚದಲ್ಲಿ ಮತ್ತೇನೂ ಇರಲಿಲ್ಲ. ಇನ್ನೂ ವಿಚಿತ್ರವೇನೆಂದರೆ ಮಾನವ ಮಾತ್ರರಾದವರಿಗೆ ಪ್ರಕೃತಿ ಸಹಜವಾಗಿ, ಅನಿವಾರ್ಯವಾಗಿರುವ ಬಯಕೆಗಳು ಕೂಡ ಅವನಲ್ಲಿ ವ್ಯಕ್ತವಾಗದಿರುವುದು. ಅವನ ಮುಂದೆ ಅವಳು ಎಷ್ಟೋ ಸಲ ನಗ್ನಳಾಗಿ ಕಾಣಿಸಿಕೊಂಡಿದ್ದಳು. ಪರೀಕ್ಷಿಸಬೇಕೆಂದಲ್ಲ. ಆಕಸ್ಮಿಕವಾಗಿ. ತುಂಬಾ ಜನ ಮಾಡುವಂತೆ ಕಣ್ಣರಳಿಸಿ ತಿನ್ನುವಂತೆ ನೋಡುತ್ತಿರಲಿಲ್ಲ. ಹೋಗಲಿ ನಾಚಿಕೊಂಡು ಬೇರೆ ಕಡೆ ಹೋಗುತ್ತಾನಾ ಎಂದರೆ ಅದೂ ಇಲ್ಲ. ಅವಳು ನಗ್ನವಾಗಿರುವ ವಿಷಯವನ್ನು ಅವನು ಎಳ್ಳಷ್ಟೂ ಗಮನಿಸಿದವನಂತೆ ಸಹಜವಾಗಿ ತನ್ನ ಮಾಮೂಲು ಧೋರಣೆಯಲ್ಲಿ ಮಾತಾಡುತ್ತಿದ್ದ.

ಸೃಷ್ಟಿಯಲ್ಲಿ ಯಾವ ಗಂಡಸಿಗಾದರೂ ಹಾಗಿರಲು ಸಾಧ್ಯವೇ ? ಎನ್ನುವ ಅನುಮಾನ ಕೂಡ ಅವಳಿಗೆ ತುಂಬಾ ಸಲ ಬಂದಿತ್ತು. ಅವನು ಅದನ್ನೇನೂ ಗಮನಿಸುತ್ತಿದ್ದಿಲ್ಲ. ತನ್ನ ಲೋಕದಲ್ಲಿ ತಾನಿರುತ್ತಿದ್ದ. ಮಹರ್ಷಿಗಳೂ, ದೇವತೆಗಳೂ ಎನ್ನುತ್ತಾರೆ ಇಂತಹವರನ್ನೇನೊ ! ನಪುಂಸಕರಲ್ಲಿ ಕೂಡ ಸೆಕ್ಸ್ ಬಯಕೆಗಳಿರುವುದು ಅವಳಿಗೆ ಚೆನ್ನಾಗಿ ಗೊತ್ತಿತ್ತು. ಇವನಲ್ಲಿ ಕನಿಷ್ಟ ಸ್ಪಂದನ ಕೂಡ ಇರುವಂತೆ ಅನಿಸುತ್ತಿಲ್ಲ. ಇವನು ಬಂಡೆಗಲ್ಲ ಅಥವಾ ಮಹಾತ್ಮನೆ ? ಈವರೆಗೆ ಅವಳ ಪ್ರಶ್ನೆಗೆ ಉತ್ತರ ಸಿಕ್ಕಿರಲಿಲ್ಲ. ಬಹುಜನ ಸೇವೆ ಮಾಡುತ್ತಾರೆ. ಬಹುಜನ ಇತರರಿಗೆ ಸಹಾಯ ಮಾಡುತ್ತಾರೆ. ಸೇವೆ ಮಾಡುತ್ತಿದ್ದೇವೆಂದು ಹೇಳಿಕೊಳ್ಳುವುದಕ್ಕಷ್ಟೇ ಮಾಡುತ್ತಾರೆ ತಮಗೆ ಖ್ಯಾತಿ ಬರಬೇಕೆಂದು ಬಯಸಿ ಸೇವೆ ಮಾಡುತ್ತಾರೆ. ಇವನಿಗೆ ಅಂತಹ ಬಯಕೆಗಳೇನೂ ಇಲ್ಲ. ಬಯಕೆಗಳಿಲ್ಲದೆ ಮನುಷ್ಯರು ಬದುಕುವುದು ಸಾಧ್ಯವೇ ? ಮತ್ತೆ ತಾನು ಕಣ್ಣೆದುರಿಗೆ ನೋಡುತ್ತಿರುವುದೇನು ?

ತನ್ನ ಬಳಿ ಅವನಿಗೆ ಸರ್ವ ಸ್ವಾತಂತ್ರ್ಯಗಳನ್ನೂ ಕೊಟ್ಟಿದ್ದಳು. ತನ್ನ ಅಪಾರ್ಟ್‌ಮೆಂಟಿನ ಡೂಪ್ಲಿಕೇಟ್ ಕೀಯನ್ನು ಕೂಡ ಅವನಿಗೆ ಕೊಟ್ಟಿದ್ದಳು. ಅಷ್ಟೇ ಅಲ್ಲ,ತಾನು ಕಾಲ್ಸ್ ಮೇಲೆ ಹೊರಗೆ ಹೋದಾಗ ಅಗತ್ಯವಾದರೆ ಅವನು ದುಡ್ಡು ತೆಗೆದುಕೊಳ್ಳಲು ಸಾಧ್ಯವಾಗುವಂತೆ ಸೇಫ್‌ನ ಕೀಲಿಕೈ ಇರುವ ಜಾಗವನ್ನೂ ಅವನಿಗೆ ಹೇಳಿದ್ದಳು. ಆದರೆ ಅವನು ಅಲ್ಲಿ ಕೂಡ ಅವಳನ್ನು ಆಶ್ಚರ್ಯಗೊಳಿಸಿದ. ಅವಳು ಅಪಾರ್ಟ್‌ಮೆಂಟಿನಲ್ಲಿಲ್ಲದಿರುವಾಗ ತಪ್ಪಿಯೂ ಸೇಫ್

ತಂಟೆಗೆ ಹೋಗುತ್ತಿರಲಿಲ್ಲ. ಅವಳು ತನಗೆ ಕೊಟ್ಟ ಡೂಪ್ಲಿಕೇಟ್ ಕೀಯಿಂದ ಅಪಾರ್ಟ್‌ಮೆಂಟಿನಲ್ಲಿ ಪ್ರವೇಶಿಸಿ, ಅವಳು ತಿರುಗಿ ಬರುವವರೆಗೆ-ಎಷ್ಟು ದಿನಗಳಾದರೂ ಸರಿಯೇ-ಕಾವಲು ಕಾಯುತ್ತಿದ್ದ. ಅವಳನ್ನು ಕೇಳದೆ ಒಂದು ಪೈಸೆ ಮುಟ್ಟುತ್ತಿರಲಿಲ್ಲ.

* * * *

ಅವಳು ತನ್ನ ಯೋಚನಾ ತರಂಗದಿಂದ ಹೊರಬಂದು ಅವನ ಕಡೆ ನೋಡಿದಳು. "ಊಂ! ಈಗ ದೇವರು ಮರೆತಿರೋ ಯಾವ ಕೆಲಸಾನ ಲಿಸ್ಟ್ ಮಾಡ್ಕೊಂಡು ಬಂದಿದೀಯಾ?" ಬ್ರಾ ಹಾಕಿಕೊಳ್ಳುತ್ತಾ ಕೇಳಿದಳು.

"ಏನಿಲ್ಲ, ದೇವರು ಒಬ್ಬ ಕಂಟ್ರಾಕ್ಟರ್‌ನ ತಲೇಲಿ ಮಿದುಳು ಇಡೋದನ್ನ ಮರೆತಿದ್ದಾನೆ".

"ಹಾಗಾ! ಅದಕ್ಕೆ ನೀನೇನು ಮಾಡ್ತೀಯಾ?"

"ಅದಕ್ಕೆ ನಾನೇನೂ ಮಾಡೋದಿಲ್ಲಾಂತಂದ್ಕೋ! ಆದರೆ ಮಿದುಳಿದ್ದರಿಂದ ಆ ಕಂಟ್ರಾಕ್ಟರ್ ಕಟ್ಟಿಸಿದ ಒಂದು ನೀರಿನ ಟ್ಯಾಂಕ್ ಒಡೆದುಹೋಗಿದೆ. ಬಹಳ ಜನ ಚಿಕ್ಕವರೂ, ದೊಡ್ಡವರೂ ಸತ್ತು ಹೋಗಿದ್ದಾರೆ. ಇನ್ನೂ ಎಷ್ಟೋ ಜನರಿಗೆ ಗಾಯಗಳಾಗಿವೆ. ಇಲ್ಲೀವರೆಗೆ ಸರಕಾರ ಅವರ ಕಡೆ ಗಮನಹರಿಸಿಲ್ಲ".

"ಅಯ್ಯೋ ಪಾಪ! ಅಂದ್ರೆ ಅವರ ಕುಟುಂಬಗಳಿಗೆ ಸಹಾಯ ಮಾಡ್ಬೇಕೂಂತಿದೀಯಾ. ಎಷ್ಟು ಬೇಕು?"

"ಐದು ಲಕ್ಷ. ಸದ್ಯಕ್ಕೆ ಐದು ಲಕ್ಷಗಳಿದ್ದರೆ ಸಾಕು" ಎಂದ ತನ್ನ ಪುಸ್ತಕ ತೆರೆದು ನೋಡುತ್ತಾ.

ಐದು ಲಕ್ಷ! ತನಗೆ ಐದು ರಾತ್ರಿಗಳ ಸಂಪಾದನೆ! ಎಷ್ಟೋ ಲಕ್ಷಗಳು ಬ್ಲಾಕ್ ಮನಿಯ ರೂಪದಲ್ಲಿ ತನ್ನ ಸೇಫ್‌ನಲ್ಲಿ ಬಿದ್ದು ನರಳುತ್ತಿವೆ. ಇನ್ನೂ ಎಷ್ಟೋ ಲಕ್ಷಗಳು ಅವಕ್ಕೆ ಸೇರುತ್ತವೆ. ಅಷ್ಟು ದುಡ್ಡು ಏನು ಮಾಡಬೇಕು? ಒಬ್ಬ ನಿಜವಾದ ಮಾನವನ ಮನಸ್ಸನ್ನು ಸಂತೃಪ್ತಿಪಡಿಸಲು ಎಷ್ಟು ಲಕ್ಷ ಹೋದರೇನು? ಅವಳು ಮೌನವಾಗಿ ಬಟ್ಟೆ ಧರಿಸಿ, ಸೇಫ್‌ನ ಕೀಲಿಕೈಗಳನ್ನು ಅವನ ಕಡೆ ಎಸೆದಳು. "ನಿನಗೆಷ್ಟು ಬೇಕೋ ತಗೋ!"

"ಥ್ಯಾಂಕ್ಯೂ ಬಾಸ್! ಥ್ಯಾಂಕ್ಯೂ ಬಾಸ್!" ಅವನು ಸಂತೋಷದಿಂದ ಕುಣಿದಾಡುತ್ತಾ ಪಕ್ಕದ ಕೋಣೆಯೊಳಕ್ಕೆ ಹೋದ. ಮೇಖಲೆ ಡ್ರೆಸಿಂಗ್ ಟೇಬಲ್ ಮುಂದೆ ಕುಳಿತುಕೊಂಡು ಹಣೆಯ ಮೇಲೆ ಬೀಳುತ್ತಿದ್ದ ಮುಂಗುರುಳುಗಳನ್ನು ಹಿಂದಕ್ಕೆ ಬಾಚಿಕೊಂಡಳು. ನಂತರ ಕೈಗಳಿಗೆ ಬಳೆಗಳನ್ನು ತೊಟ್ಟು

ಕೊಂಡಳು. ಕಿವಿಗಳಿಗೆ ಲೋಲಾಕುಗಳನ್ನು ಹಾಕಿಕೊಳ್ಳತೊಡಗಿದಳು. ಒಂದು ಕಿವಿಗೆ ಲೋಲಾಕು ಹಾಕಿಕೊಂಡ ನಂತರ ಎರಡನೇ ಕಿವಿಗೆ ಹಾಕಿಕೊಳ್ಳುತ್ತಿದ್ದಳು. ಹಾಗೆ ಹಾಕಿಕೊಳ್ಳುತ್ತಲೇ ಅಕಸ್ಮಾತ್ತಾಗಿ ಬೆಚ್ಚಿಬಿದ್ದಳು. ಎದುರುಗಿದ್ದ ನಿಲುವುಗನ್ನಡಿಯಲ್ಲಿ ಹಿಂದೆ ತೆರೆದಿಟ್ಟ ಬಾಗಿಲುಗಳು ಸ್ಪಷ್ಟವಾಗಿ ಕಾಣಿಸುತ್ತಿದ್ದವು. ಅವಳು ನೋಡುತ್ತಿರುವಂತೆಯೇ ಫುಲ್ ಸೂಟ್‌ನಲ್ಲಿದ್ದ ಒಬ್ಬ ಎತ್ತರದ ವ್ಯಕ್ತಿ ಆ ಬಾಗಿಲುಗಳ ಮೂಲಕ ಒಳಗಡೆ ಪ್ರವೇಶಿಸಿದ.

"ಹಲೋ!" ಬಾಗಿಲ ಬಳಿಯಿಂದಲೇ ಬಲಗೈ ಮೇಲೆತ್ತಿ ಕನ್ನಡಿಯಲ್ಲಿಯೇ ಅವಳನ್ನು ವಿಶ್ ಮಾಡುತ್ತಾ ವಿಲಾಸವಾಗಿ ಬಾಗಿಲಿಗೆ ಒರಗಿ ನಿಂತ. ಅವಳು ಸರಕ್ಕನೆ ಹಿಂದಿರುಗಿದಳು.

ಅವನ ತುಟಿಗಳ ಮೇಲೆ ಆಹ್ಲಾದಕರವಾದ ಮುಗುಳ್ನಗೆ ನಾಟ್ಯವಾಡುತ್ತಿತ್ತು. "ಗ್ಲಾಡ್ ಟು ಮೀಟ್ ಯೂ! ನನ್ನ ಹೆಸರು.... ಜಾನಿವಾಕರ್!" ಎಂದ ಅವನು.

## ೧೨

ಅವಳು ಕೆಲವು ಕ್ಷಣ ಕಣ್ಣರಳಿಸಿ ಅವನನ್ನು ನೋಡುತ್ತಾ ಇದ್ದುಬಿಟ್ಟಳು. "ಮುಂಚಿತವಾಗಿ ಅನುಮತಿ ಪಡೆಯದೆ ಹೀಗೆ ಮನೆಯೊಳಗೆ ಪ್ರವೇಶಿಸುವುದು ಮರ್ಯಾದಸ್ಥರ ಲಕ್ಷಣವಲ್ಲ!" ಎಂದಳು.

ಅವನು ಮಂದಹಾಸ ಬೀರಿದ. "ಮರ್ಯಾದಸ್ಥರ ಮನೆಗಳಿಗೆ ಹೋಗುವಾಗ ತಪ್ಪದೇ ಆ ಮರ್ಯಾದೆ ಪಾಲಿಸಬೇಕು. ಅದು ನಿಜವೇ!"

"ಅಂದ್ರೆ?"

"ನಾನು ಸದ್ಯ ಪ್ರವೇಶಿಸಿದ್ದು ಗಂಡಸರಿಗೋಸ್ಕರ ತನ್ನ ಶರೀರವನ್ನು ಮಾರಾಟಕ್ಕಿಟ್ಟಿರುವ ಕಾಲ್‌ಗರ್ಲ್ ಮಣಿಮೇಖಲೆಯ ಅಪಾರ್ಟ್‌ಮೆಂಟಿಗೆ! ಗಂಡಸರಿಗಾಗಿ ಈ ಅಪಾರ್ಟ್‌ಮೆಂಟಿನಲ್ಲಿ ಎಂತಹುದೇ ಪ್ರತಿಬಂಧಕಗಳಿರುವುದಿಲ್ಲ ಎಂದುಕೊಂಡಿದೀನಿ".

ಅವಳ ಕಣ್ಣುಗಳು ತೀಕ್ಷ್ಣವಾಗಿ ನೋಡಿದವು. "ಅಂದ್ರೆ ನನ್ನ ಬಗೆಗೆ ನಿನಗೆ ಚೆನ್ನಾಗಿ ತಿಳಿದಿದೆ ಎಂದಾಯ್ತು!" ವ್ಯಂಗ್ಯವಾಗಿ ನುಡಿದಳು.

"ಆಫ್‌ಕೋರ್ಸ್!" ಅವನು ಮುಖದ ಮೇಲಿನ ಮುಗುಳ್ನಗೆ ಹಾಗೆಯೇ ಉಳಿಸಿಕೊಂಡು, ಗಂಭೀರವಾಗಿ ನಡೆಯುತ್ತಾ ಒಳಬಂದು ಅವಳ ಎದುರಿಗೆ ಕುಳಿತುಕೊಂಡ. "ನಿನ್ನ ಹೆಸರು ಮೇಖಲೆ- ಮಣಿಮೇಖಲೆ! ಬಹುಶಃ

ಪ್ರಪಂಚದಲ್ಲಿಯೇ ಎಲ್ಲರಿಗಿಂತಲೂ ನೀನೇ ದುಬಾರಿಯಾದ ಕಾಲ್‌ಗರ್ಲ್- ಹೌದಾ? ಪ್ರಪಂಚದ ಅನೇಕ ದೇಶಗಳ ಪ್ರಮುಖರು ನಿನ್ನ ದಾಸಾನು ದಾಸರು! ನಿನಗೆ ಇನ್ನೊಂದು ಹೆಸರಿದೆ ಸಮ್ಮೋಹನಾಸ್ತ್ರ ಅಂತ!"

"ಇನ್ನೂ?"

"ನಿನಗೆ ಮಹಾದ್ಭುತವಾದ ಸೌಂದರ್ಯದೊಂದಿಗೆ ಅಪೂರ್ವವಾದ ಬುದ್ಧಿವಂತಿಕೆ ಕೂಡ ಇದೆ. ಸಾಧಾರಣವಾದ ಇತರ ಕಾಲ್‌ಗರ್ಲ್‌ಗಳಿಗೂ ನಿನಗೂ ವ್ಯತ್ಯಾಸವೇನೆಂದರೆ ನಿನಗೆ ತುಂಬಾ ವ್ಯವಹಾರ ಜ್ಞಾನವಿದೆ. ಒಂದು ವಿಧದಲ್ಲಿ ನೀನು ಮೇಧಾವಿ! ಸಾಧಾರಣ ಕಾಲ್‌ಗರ್ಲ್‌ಗಳಂತೆ ನೀನು ತಲೆಹಿಡು ಕರ ಹತ್ತಿರ ನಿನ್ನ ರೇಟು ನೀನು ಪಡೆದುಕೊಂಡು, ಅವರು ಯಾರ ಹತ್ತಿರ ಹೋಗೆಂದರೆ ಅವರ ಹತ್ತಿರ ಹೋಗಿ ರಾತ್ರಿ ಕಳೆದು, ಅವರ ಡೀಲಿಂಗ್ಸ್‌ನೊಂದಿಗೆ ಎಂತಹುದೇ ಸಂಬಂಧವಿಲ್ಲದಂತೆ ಬೆಳಗಾದೊಡನೆಯೇ ತಿರುಗಿ ಬರೋದಿಲ್ಲ. "ತಮಗೆ ಬೇಕಾದ ಕೆಲಸವೇನೆಂದು ನಿನ್ನ ಕಸ್ಟಮರ್‌ಗಳು ಮೊದಲೇ ನಿನಗೆ ಹೇಳುತ್ತಾರೆ. ಯಾರೊಂದಿಗೆ ಕಳೆಯಬೇಕಾಗಿರುತ್ತದೋ ಅವರಿಗೆ ಸಂಪೂರ್ಣ ನಾದ ಆನಂದ ಉಂಟು ಮಾಡುವುದಷ್ಟೇ ಅಲ್ಲದೆ ನಿನ್ನನ್ನು ಅವರ ಹತ್ತಿರ ಕಳುಹಿಸಿದವರಿಗೆ ಬೇಕಾದ ಕೆಲಸ ನೀನೇ ಸಾಧಿಸ್ತೀಯ. ಅಷ್ಟೇ ಅಲ್ಲ, ಮಾಮೂಲು ರಾಯಭಾರಗಳಿಗೆ ಶರಣಾಗದ ವ್ಯಕ್ತಿಗಳಿಗೆ ನಿನ್ನ ಸೌಂದರ್ಯ ವನ್ನು ಎರೆಯಾಗಿಟ್ಟು ಮೊದಲು ನೀನೇ ಶರಣಾಗತರನ್ನಾಗಿ ಮಾಡಿಕೊಳ್ತೀಯ. ಅವರೊಂದಿಗೆ ಕೆಲವು ಕಾಲ ಅಫೇರ್ ಸಾಗಿಸಿ, ಕೊನೆಗೆ ಬೇಕಾದ ಕೆಲಸ ಸಾಧಿ ಸುತ್ತೀಯ. ಅದಕ್ಕೇ ನಿನ್ನನ್ನು ಸಮ್ಮೋಹನಾಸ್ತ್ರವೆಂದು ನಿನ್ನ ಕಸ್ಟಮರ್‌ಗಳು ಮುದ್ದಿನಿಂದ ಕರೀತಾರೆ. ಈ ಅಪರೂಪವಾದ ಗುಣ ನಿನ್ನನ್ನು ಪ್ರಪಂಚದಲ್ಲಿನ ಕಾಲ್‌ಗರ್ಲ್‌ಗಳಲ್ಲಿ ರಾಣಿಯನ್ನಾಗಿ ಮಾಡಿದೆ".

"ಇನ್ನು ನಿನ್ನ ಪೂರ್ವಾಶ್ರಮದ ಬಗೆಗೆ ಹೇಳ್ತೀನಿ- ಹಾಗೆ ಚಿಕ್ಕಂದಿ ನಿಂದಲೇ, ಅಂದ್ರೆ ಹದಿನೈದು-ಹದಿನಾರು ವರ್ಷಗಳ ವಯಸ್ಸಿನಿಂದಲೇ ನಿನ್ನ ವರ್ತನೆ ಇತರ ಹುಡುಗಿಯರಿಗಿಂತ ಬೇರೆಯಾಗಿತ್ತು. ಆ ವಯಸ್ಸಿನಲ್ಲಿಯೇ ಗಂಡಸರನ್ನು ವಶಪಡಿಸಿಕೊಂಡು ನಿನ್ನ ಕಣ್ಣಸನ್ನೆಗನುಗುಣವಾಗಿ ಕುಣಿಸುತ್ತಿದ್ದ ವಳೆಂದು ನಿನ್ನ ಗತ ಚರಿತ್ರೆ ಹೇಳುತ್ತದೆ. ಹುಡುಗರು ನಿನಗೋಸ್ಕರ ಹುಚ್ಚಾ ಗುತ್ತಿದ್ದರು. ಆದರೆ ನೀನು ಯಾರೊಂದಿಗೆ ಬೇಕಾದರೂ ಕಾಲ ಕಳೆಯುವವ ಳಾಗಿರಲಿಲ್ಲ. ಬಾಯ್‌ಫ್ರೆಂಡ್ಸ್‌ಗಳನ್ನು ಆರಿಸಿಕೊಳ್ಳುವುದರಲ್ಲಿ ತುಂಬಾ ಜಾಗ್ರತೆ ವಹಿಸುತ್ತಿದ್ದೆ. ನಿಜಕ್ಕೆ ನಿನ್ನ ಬಾಯ್‌ಫ್ರೆಂಡ್ಸ್ ಎಲ್ಲರೂ ನಲವತ್ತು ವರ್ಷಗಳಿಗೆ ಮೇಲ್ಪಟ್ಟವರಾಗಿರುತ್ತಿದ್ದರು. ಯಾವುದೋ ಒಂದು ಮುಖ್ಯವಾದ

ಪದವಿಯಲ್ಲಿರುವವರಾಗಿರುತ್ತಿದ್ದರು. ಅವರನ್ನು ವಶಪಡಿಸಿಕೊಂಡು ಮೇಲೆ ಬರಬೇಕೆನ್ನುವುದು ನಿನ್ನ ಪ್ರಯತ್ನ. ಆ ಪ್ರಯತ್ನದಲ್ಲಿ ವಿಜಯ ಸಾಧಿಸಿದೆ.

"ಮೊದಲಲ್ಲಿ ಕೆಲಕಾಲ ಮಾಡೆಲ್ ಆಗಿ ಕೆಲಸ ಮಾಡಿದೆ. ಆದರೆ ಮಾಡೆಲ್ ಆಗಿ ಕೆಲಸ ಮಾಡಲು ಪ್ರಾರಂಭಿಸಿದ ತಕ್ಷಣವೇ ಯಾಕೋ ನಿನಗೆ ಟಾಪ್ ಕ್ಲಾಸ್ ಮಾಡೆಲ್ ಆಗಿ ಹೆಸರು ಬರಲಿಲ್ಲ. ಅದಕ್ಕೆ ಏನೋ ನ್ಯೂಡ್ ಮಾಡೆಲ್ ಆಗಿ ಕೂಡ ಕೆಲಕಾಲ ಕೆಲಸ ಮಾಡಿದೆ. ಒಂದಿಬ್ಬರು ಪ್ರಪಂಚ ಪ್ರಖ್ಯಾತ ನ್ಯೂಡ್ ಫೋಟೋಗ್ರಾಫರ್‌ಗಳು ಈಗಲೂ ನಿನ್ನ ನ್ಯೂಡ್ ಫೋಟುಗಳನ್ನು ಮಾಸ್ಟರ್‌ಪೀಸ್‌ಗಳೆಂದು ತಮ್ಮ ಹತ್ತಿರ ಇಟ್ಟು ಕೊಂಡಿದ್ದಾರೆ. ನಂತರ ನಿನ್ನ ದೆಸೆ ಬದಲಾಯಿತ್ತು. ವಿವಿಧ ಸೌಂದರ್ಯ ಸ್ಪರ್ಧೆಗಳಲ್ಲಿ ನೀನು ಸೌಂದರ್ಯ ರಾಣಿಯಾಗಿ ಆಯ್ಕೆಯಾದೆ. ಕೊನೆಗೆ ಕೆಲವು ವರ್ಷಗಳ ಹಿಂದೆ ಮಿಸ್ ಇಂಡಿಯಾ ಆಗಿ ಆಯ್ಕೆಯಾದೆ. ಮಿಸ್ ಇಂಡಿಯಾ ಆದ ನಂತರ ಮಾಡೆಲ್ ಆಗಿ ನಿನ್ನ ಡಿಮ್ಯಾಂಡ್ ತುಂಬಾ ಏರಿತು. ಟಾಪ್‌ಕ್ಲಾಸ್ ಮಾಡೆಲ್‌ಗಳಿಗೆ ಸ್ವರ್ಗದಂತಹ ಬಾಂಬೆಗೆ ನಿನ್ನ ಮುಕ್ಕಾಂ ಬದಲಾಯಿಸಿದೆ.ಅತ್ಯಧಿಕ ಪಾರಿತೋಷಕಗಳನ್ನು ಪಡೆದುಕೊಳ್ಳುತ್ತಾ ಅಲ್ಲಿ ದೊಡ್ಡ ದೊಡ್ಡ ಆಡ್ ಏಜೆನ್ಸಿಗಳಿಗೆ ಕೆಲಸ ಮಾಡಿದೆ. ಕಾಲ್‌ಗರ್ಲ್ ಆಗಿ ನಿನ್ನ ಜೀವನ ಆಗಿನ್ನೂ ಪ್ರಾರಂಭವಾಗಿರಲಿಲ್ಲ.

"ಹೇಗೆ ಉಂಟಾಯ್ತೋ ಏನೋ, ಮುನೀಂದ್ರಸ್ವಾಮಿಯೊಂದಿಗೆ ನಿನಗೆ ಪರಿಚಯವಾಯ್ತು. ಮುನೀಂದ್ರಸ್ವಾಮಿ ಕೆಲಕಾಲ ನಿನ್ನನ್ನು ಅಮೇರಿಕಾ ದಲ್ಲಿನ ತನ್ನ ಆಶ್ರಮದಲ್ಲಿಟ್ಟುಕೊಂಡು ಜೇಕೀಯೊಂದಿಗೆ ಪರಿಚಯ ಮಾಡಿ ಸಿದ. ಅಷ್ಟೇ, ಆ ಕ್ಷಣದಿಂದ ನಿನ್ನ ಜೀವನ ಜೆಟ್ ವಿಮಾನದಲ್ಲಿನ ನೀಲಾಕಾಶದಲ್ಲಿ ತೇಲಿ ಹೋಗುತ್ತಲೇ ಇದೆ. ಒಂದು ವಿಧವಾಗಿ ಜೇಕೀ ನಿನ್ನಿಂದಾಗಿ ತನ್ನ ವ್ಯಾಪಾರವನ್ನು ವಿಸ್ತೃತಗೊಳಿಸಿಕೊಂಡ. ನಿನ್ನನ್ನು ಪೂರ್ತಿಯಾಗಿ ಬಳಸಿಕೊಂಡವನು ಜೇಕೀ! ಅದೂ ಅಲ್ಲದೆ, ನಿನ್ನಿಂದಾಗಿಯೇ ಅವನ ಹಿಂದಿರುವ ಕೋಟ್ಯಂತರ ಡಾಲರ್‌ಗಳು ಎಂದೂ ಇಲ್ಲದಷ್ಟು ವೃದ್ಧಿ ಹೊಂದಿದವು. ಎಷ್ಟು ಕ್ಲಿಷ್ಟವಾದ ಡೀಲಿಂಗ್ ಆದರೂ ಸರಿ ಜೇಕೀ ನಿನ್ನನ್ನು ಬಳಸಿ ಸಾಧಿಸುತ್ತಿದ್ದ. ಕ್ಲಿಷ್ಟವಾದ ಸಮಸ್ಯೆಗಳು ತಲೆಯೆತ್ತಿದಾಗ ಜೇಕೀ ನಿನ್ನನ್ನೇ ಸಂಪರ್ಕಿಸುತ್ತಾನೆಂದು ಹೇಳುತ್ತಾರೆ. ನಿನ್ನ ಹಿರಿಮೆಯನ್ನು ಗುರುತಿಸಿಯೇ ಜೇಕೀ ಒಂದು ರಾತ್ರಿಗೆ ನಿನ್ನ ಬೆಲೆಯನ್ನು ಲಕ್ಷ ರೂಪಾಯಿ ಗಳಿಗೆ ಏರಿಸಿದ. ಅದು ಮಾತ್ರವಲ್ಲದೆ ಜೇಕೀ ಪರವಾಗಿ ನೀನು ಕೆಲಸ ಮಾಡಿದಾಗಲೆಲ್ಲಾ ತನಗೆ ಬರುವ ಕೋಟ್ಯಂತರ ಡಾಲರ್‌ಗಳ ಕಮಿಷನ್‌ನಲ್ಲಿ

ಕೊಂಚ ಪರ್ಸೆಂಟೇಜ್ ಕೊಡ್ತಾನೆ. ತಾನು ಸಂಪಾದಿಸಿದ ಲೆಕ್ಕವಿಲ್ಲದಷ್ಟು ಸಂಪತ್ತಿಗಿಂತ ಜಾಸ್ತೀ ನಿನಗೆ ಹೆಚ್ಚು ಬೆಲೆ ಕೊಡ್ತಾನೆ.

"ಅಂತರರಾಷ್ಟ್ರೀಯ ಕಂಪನಿಗಳು ಕೊಡುವ ಪಾರ್ಟಿಗಳನ್ನು ನಿನ್ನ ಸೌಂದರ್ಯ ಜ್ವಾಲೆಯಿಂದ ಬಿಸಿಯೇರಿಸುವುದರಿಂದ ಪ್ರಾರಂಭಿಸಿ, ಪ್ರಪಂಚ ದಲ್ಲಿನ ಟೆರ್ರರಿಸ್ಟ್ ಗ್ರೂಪ್‌ಗಳಿಗೆ ಆಯುಧಗಳ ಸರಬರಾಜಿನಂತಹ ಅತಿ ಕ್ಲಿಷ್ಟವಾದ ಅಂತರರಾಷ್ಟ್ರೀಯ ವ್ಯವಹಾರಗಳವರೆಗೆ, ದೇಶಾಧಿನೇತರ ನಡುವೆ ಅನಧಿಕಾರ ರಾಯಭಾರಗಳನ್ನು ನಡೆಸುವವರೆಗೆ, ಮಿಲಿಟರಿ ರಹಸ್ಯಗಳ ವಿಕ್ರಯಗಳ ಡೀಲಿಂಗ್ಸ್‌ವರೆಗೆ ನಿನ್ನ ವ್ಯವಹಾರ ವಿಜ್ಞಾನ ವಿಸ್ತೃತವಾಗಿ ವ್ಯಾಪಿಸಿದೆ. ಇಷ್ಟು ನಿಪುಣೆಯಾದವಳು ಹೈದರಾಬಾದ್‌ನಲ್ಲಿ ಈ ಚಿಕ್ಕ ಅಪಾರ್ಟ್‌ಮೆಂಟಿನಲ್ಲಿ ಅಜ್ಞಾತಳಾಗಿ ಇರುತ್ತೀಯ! ಕಾರಣ ಏನೆಂದು ನಾನು ತುಂಬಾ ಸುಲಭವಾಗಿ ಊಹಿಸಬಲ್ಲೆ. ಇಲ್ಲಿಯವರೆಗೆ ನಿನ್ನ ಬಗೆಗಾಗಲಿ, ನಿನ್ನ ರಹಸ್ಯ ಕಾರ್ಯಕಲಾಪಗಳ ಬಗೆಗಾಗಲಿ; ಪ್ರಪಂಚದ ಪ್ರಮುಖ ರೊಂದಿಗೆ ನಿನ್ನ ಶೃಂಗಾರ ಕಲಾಪಗಳ ಬಗೆಗಾಗಲಿ ಹೊರ ಪ್ರಪಂಚಕ್ಕೆ ಕೊಂಚ ಮಾತ್ರವೂ ತಿಳಿಯದು. ಹೈದರಾಬಾದ್‌ನಲ್ಲಿ ನೀನು ಮಕ್ಕಾಂ ಮಾಡಿದರೆ ತಿಳಿಯುವ ಅವಕಾಶ ಕೂಡ ಇಲ್ಲ. ಹೀಗೆ ಅಜ್ಞಾತವಾಗಿರು ವುದೇ ನಿನ್ನ ವೃತ್ತಿಗೆ ತುಂಬಾ ಅಗತ್ಯ. ನಿನ್ನ ಬಗೆಗಿನ ವಿಷಯ ಹೊರ ಬಿತ್ತೆಂದರೆ ನಿನ್ನ ಜೀವನ ಆಭಾಸಕ್ಕೀಡಾಗುವುದಷ್ಟೇ ಅಲ್ಲದೆ, ಅನೇಕ ರಾಷ್ಟ್ರೀಯ, ಅಂತರರಾಷ್ಟ್ರೀಯ ಗುಟ್ಟುಗಳು ಹೊರಬೀಳುತ್ತವೆ. ಅದಕ್ಕೇ ನೀನಿಲ್ಲಿ ಅನಾಮಿಕಳಾಗಿ ಇದೀಯೇ. ಆ್ಯಮ್ ಐ ಕರೆಕ್ಟ್?" ತನ್ನ ಸುದೀರ್ಘ ಹೇಳಿಕೆಯನ್ನು ಮುಗಿಸಿದ.

ಅವನು ಆ ರೀತಿ ನಿರರ್ಗಳವಾಗಿ ಪ್ರವಾಹದಂತೆ ಮಾತಾಡುತ್ತಿದ್ದರೂ ಅವಳ ಕಣ್ಣುಗಳಲ್ಲಾಗಲಿ, ಮುಖದಲ್ಲಾಗಲಿ ತೃಣ ಮಾತ್ರವಾದರೂ ಕಾತರ, ಗಾಬರಿಯನ್ನು ವ್ಯಕ್ತಪಡಿಸಲಿಲ್ಲ. ಅವಳ ತುಟಿಗಳ ಮೇಲೆ ವ್ಯಂಗ್ಯದಿಂದ ಕೂಡಿದ ಮುಗುಳ್ನಗೆ ಕೂಡ ಕೊಂಚವೂ ಅಳಿಸಲಿಲ್ಲ. "ಆಲ್‌ರೈಟ್!" ಭುಜ ಕುಣಿಸುತ್ತಾ ನುಡಿದಳವಳು."ನೀನುಹೇಳಿದ ವಿಷಯಗಳೆಲ್ಲವೂ ನಿಜವೇಎಂದಿಟ್ಟು ಕೊಳ್ಳೋಣ. ಅವನ್ನೆಲ್ಲಾ ನಿರೂಪಿಸಲು ನಿನ್ನ ಬಳಿ ರುಜುವಾತುಗಳಿವೆಯೆ?"

ಈ ಸಲ ಅವನು ತಮಾಷೆಯಾಗಿ ನಕ್ಕ. "ರುಜುವಾತುಗಳನ್ನು ಸಂಪಾದಿಸದೆ ನಿನ್ನೊಂದಿಗೆ ಬಂದು ನೇರವಾಗಿ ಮಾತಾಡುವಷ್ಟು ಮೂರ್ಖ ನಲ್ಲ. ಹೌದು, ನನ್ನ ಬಳಿ ನಿನ್ನ ಜೀವನದ ಬಗೆಗೆ ರುಜುವಾತುಗಳಿವೆ. ತುಂಬಾ ಇವೆ! ಕಳೆದ ಕೆಲದಿನಗಳಿಂದ ನಿನ್ನನ್ನು ನಾನು ತುಂಬಾ ಹತ್ತಿರ

ದಿಂದ ಗಮನಿಸುತ್ತಿದ್ದೇನೆ!"

ಆಗಲೂ ಅವಳು ಹೆದರಲಿಲ್ಲ, ಬೆದರಲಿಲ್ಲ. "ಸರಿ ನಿನ್ನ ಹತ್ತಿರ ರುಜುವಾತುಗಳಿವೆ! ಆದರೇನು? ಹೀಗೆ ಎಷ್ಟು ಅಮರ್ಯಾದೆಯಾಗಿ ನನ್ನ ಅಪಾರ್ಟ್‌ಮೆಂಟ್ ಪ್ರವೇಶ ಮಾಡಲು ಕಾರಣ?" ಅವಳು ಕೇಳಿದಳು.

ಆ ಪ್ರಶ್ನೆಗೆ ಅವನ ಮುಖ ಗಂಭೀರವಾಯಿತು. ಕುಳಿತಿದ್ದ ಸ್ಥಳದಿಂದ ತಟಕ್ಕನೆದ್ದು ಆ ಕೋಣೆಯಲ್ಲಿ ಅವಳ ಮುಂದೆ ಅತ್ತ-ಇತ್ತ ಶತಪಥ ಹಾಕಿದ. "ಇತ್ತೀಚೆಗೆ ನೀನು ಯಾವುದೋ ಆಟ ಆಡ್ತಿದೀಯಾ-ತುಂಬಾ ಅಪಾಯಕಾರಿಯಾದ ಆಟ! ಆ ಆಟ ನೀನ್ಯಾಕೆ ಆಡ್ತಿದೀಯೋ ಎಷ್ಟು ಆಲೋಚಿಸಿದರೂ ನನಗೆ ಅರ್ಥವಾಗುತ್ತಿಲ್ಲ." ಶತಪಥ ಹಾಕುತ್ತಲೇ ನುಡಿದ.

"ಯಾವ ಆಟ?"

"ಅದೇ ಅರ್ಥವಾಗುತ್ತಿಲ್ಲ. ನಿನ್ನೊಂದಿಗೆ ಅಫೇರ್ಸ್ ಇಟ್ಟುಕೊಂಡ ಪ್ರಮುಖರು ಈ ನಡುವೆ ಸಾಲಾಗಿ ಪದವಿ ಕಳೆದುಕೊಳ್ಳುತ್ತಿದ್ದಾರೆ. ಮುಖ್ಯವಾಗಿ ಇಂಡಿಯಾದಲ್ಲಿ! ಆ ರೀತಿ ಅವರು ಪದವಿ ಕಳೆದುಕೊಳ್ಳುವುದಕ್ಕೂ, ನಿನಗೂ ಎಷ್ಟು ಆಲೋಚಿಸಿದರೂ ಸಂಬಂಧ ಕಾಣಿಸುತ್ತಿಲ್ಲ. ಆದರೆ ಒಂದು ಮಾತ್ರ ನಿಜ. ಪದವಿ ಕಳೆದುಕೊಳ್ಳುವುದಕ್ಕೆ ಮೊದಲು, ಕೆಲ ದಿನಗಳ ಹಿಂದೆಯೋ, ತಿಂಗಳುಗಳ ಹಿಂದೆಯೋ ಅವರು ನಿಂಜೊತೆ ಕಾಲ ಕಳೆದಿದ್ದಾರೆ. ಅದಕ್ಕೇ....ಅವರು ಪದವಿ ಕಳೆದುಕೊಳ್ಳುವುದಕ್ಕೂ ನಿನಗೂ ತಪ್ಪದೆಯೇ ಏನೋ ಸಂಬಂಧ ಇದ್ದಿರಲೇಬೇಕು. ಆದರೆ ಆ ಸಂಬಂಧ ಏನೋ, ಆ ಕೊಂಡಿ ಯಾವುದೋ ಎಷ್ಟು ಆಲೋಚಿಸಿದರೂ ಅರ್ಥವಾಗುತ್ತಿಲ್ಲ" ಎಂದ. ಅವಳ ಕಣ್ಣುಗಳಲ್ಲಿ ಗರ್ವ ಕುಣಿದಾಡಿತು. ಅಷ್ಟೇ ಹೊರತು, ಅವಳು ಬಾಯಿ ಬಿಚ್ಚಿ ಮಾತಾಡಲಿಲ್ಲ. ಜಾನಿವಾಕರ್ ಮುಂದುವರಿಸಿಯೇ ಇದ್ದ.

"ಇತ್ತೀಚಿಗೆ ನಡೆಯುತ್ತಿರುವ ಈ ವಿಚಿತ್ರ ಸಂಘಟನೆಗಳಿಗೆ ಪರಾಕಾಷ್ಟೆ-ಸಿ.ಐ.ಎ. ಏಜೆಂಟ್ ಗ್ರೆಗರಿ ಸ್ಕಾಟ್‌ನ ಕೊಲೆ. ಗ್ರೆಗರಿ ಸ್ಕಾಟ್‌ನನ್ನು ಯಾರೋ ಕೊಂದಿದ್ದಾರೆಂದು ಸಿ.ಐ.ಎ. ಈಗ ಪೂರ್ತಿಯಾಗಿ ದೃಢಪಡಿಸಿಕೊಂಡಿದೆ. ಸ್ಕಾಟ್ ಅದೃಶ್ಯವಾಗುವ ಮೊದಲು ಕೊನೆಯ ಸಲ ಜೇಕೇಯ ಪ್ಲೇನ್‌ನಲ್ಲಿ ಆಯುಧಗಳ ಡೀಲಿಂಗ್ ಒಂದರಲ್ಲಿ ಪಾಲ್ಗೊಂಡಂತೆ ಸಿ.ಐ.ಎ. ಗೆ ಚೆನ್ನಾಗಿ ಗೊತ್ತು. ಆ ನಂತರ ಅವನು ಆಕಸ್ಮಿಕವಾಗಿ ಅದೃಶ್ಯನಾದ. ಗ್ರೆಗರಿ ಸ್ಕಾಟ್ ಜೇಕೇಯ ಪ್ಲೇನ್‌ನಲ್ಲಿದ್ದಾಗ ನೀನು ಕೂಡ ಅಲ್ಲಿದ್ದೆಯೆಂಬುದು ನಗ್ನಸತ್ಯ. ಮೊದಲಿನಿಂದಲೂ ನಡೆಯುತ್ತಿರುವ ವಿಚಿತ್ರವಾದ ಘಟನೆಗಳನ್ನು

ಲಿಂಕ್ ಮಾಡುತ್ತಾ ಬಂದರೆ ಗ್ರಿಗರಿ ಸ್ಕಾಟ್‌ನ ಕೊಲೆಯೊಂದಿಗೆ ನಿನಗೆ ಸಂಬಂಧವಿಲ್ಲವೆಂದು ಹೇಗೆ ಅಂದ್ಕೊಳ್ಳೋದು? ಆಫ್‌ಕೋರ್ಸ್! ಇದು ಕೇವಲ ನನ್ನ ಅನುಮಾನ ಮಾತ್ರವೇ ಆಗಿರಬಹುದು. ಆದರೆ ತುಂಬಾ ದೃಢ ಆಧಾರಗಳ ಮೇಲಿಂದ ಉಂಟಾದ ಅನುಮಾನ. ಇಲ್ಲಿಯವರೆಗೆ ಕೇವಲ ನನಗೆ, ನನಗೊಬ್ಬನಿಗೆ ಮಾತ್ರ ಈ ಅನುಮಾನ ಬಂದಿರಬಹುದು. ಆದರೆ ಅತಿ ಬೇಗ ಅಮೆರಿಕನ್ ಸಿ.ಐ.ಎ. ಗೆ ಇದೇ ಅನುಮಾನ ಉಂಟಾಗುತ್ತದೆ. ಒಂದು ಸಲ ಸಿ.ಐ.ಎ ಗೆ ನಿನ್ನ ಮೇಲೆ ಅನುಮಾನ ಉಂಟಾದರೆ ನಿನ್ನನ್ನು ಕಾಪಾಡಬಲ್ಲವರಾರೂ ಇಲ್ಲ" ಮಾತು ನಿಲ್ಲಿಸಿದ.

"ಹೆದರಿಸ್ತಿದೀಯಾ?" ಕೇಳಿದಳು.

"ಇಲ್ಲ, ಎಚ್ಚರಿಸ್ತಿದೀನಿ. ಸಿ.ಐ.ಎ. ಕಬಂಧ ಹಸ್ತಗಳಿಂದ ನಿನ್ನನ್ನು ಕಾಪಾಡಬಲ್ಲವನು ನಾನೊಬ್ಬನೇ! ಅದಕ್ಕೆ ನೀನು ಆಡುತ್ತಿರುವ ಈ ಅಪಾಯಕಾರಿಯಾದ ಆಟವೇನೆಂದು ನನಗೆ ಹೇಳು!"

"ಓಹೋ! ಹಾಗಾದ್ರೆ ತಾವು ನನಗೆ ಸಂರಕ್ಷಕರಾಗಲು ಹೊರಟಿದ್ದೀರಿ ಎಂದಾಯ್ತು. ವೆರಿಗುಡ್, ಆದರೆ ತಮಗೆ ನನ್ನ ಮೇಲೆ ಇಷ್ಟು ಅಕ್ಕರೆ ಉಂಟಾಗಲು ಕಾರಣ?"

"ಅಕ್ಕರೆಯಲ್ಲ, ಅಗತ್ಯ. ಒಂದು ವಿಧವಾಗಿ ಇದೊಂದು ವ್ಯಾಪಾರ. ನನಗೆ ಒಂದು ಚಿಕ್ಕ ವಿಷಯವನ್ನೂ ಮರೆಮಾಚದೆ ನೀನು ಸತ್ಯ ಸಂಗತಿಗಳನ್ನು ಹೇಳಬೇಕು. ಸಿ ಐ. ಎ. ನ ಕೈಗಳಿಂದ ನಿನ್ನನ್ನು ನಾನು ಕಾಪಾಡ್ತೀನಿ."

"ಮೈ ಡಿಯರ್ ಮಿಸ್ಟರ್ ಜಾನಿವಾಕರ್, ಒಂದು ವೇಳೆ ನೀವು ಹೇಳಿದ ವಿಷಯಗಳೆಲ್ಲವನ್ನೂ ನಿಜವೇ ಅಂತಿಟ್ಕೊಳ್ಳೋಣ, ನೀವು ಹೇಳಿದ ಅಪಾಯಕಾರಿಯಾದ ಆಟ ನಾನು ಆಡುತ್ತಿದ್ದೇನೆಂದು ಅಂದ್ಕೊಳ್ಳೋಣ. ಹಾಗಿರುವಾಗ ಪರಿಸ್ಥಿತಿ ಎದುರಾದರೆ ಅದನ್ನು ಎದುರಿಸಲು ನಾನು ಸಿದ್ಧವಾಗಿರುತ್ತೇನೆಂದೂ, ಸಂಚಿಗೆ ಪ್ರತಿ ಸಂಚು ಹೂಡುತ್ತೇನೆಂದೂ, ನನ್ನ ಹತ್ತಿರ ಚದುರಂಗದ ದಾಳಗಳು ತುಂಬಾ ಇರಬಹುದೆಂದೂ ನಿನಗನಿಸಲಿಲ್ವಾ?"

ಅವನು ಕೆಲವು ಕ್ಷಣ ಅವಳ ಕಡೆ ನೋಡುತ್ತಿದ್ದ. ನಂತರ ನುಡಿದ "ಹೌದು, ಅನ್ನಿಸ್ತು. ಆದರೆ ಈ ಸಲ ನೀನು ನಿನ್ನ ಆಟದಲ್ಲಿ ದಾಳ ನಡೆಸುವ ಮೊದಲೇ ನಿನ್ನ ರಾಜ ಸಿಕ್ಕಿಬೀಳುವುದು ಖಂಡಿತ."

"ಹಾಗಾ? 'ಚೆಕ್' ಹೇಳೋರ್‍ಯಾರು?"

"ನಾನು."

"ಏ ಸೀ. ಆಲ್‌ರೈಟ್, ನಿನ್ನ ಆಟ ಯಾವುದೋ ನೀನು ಆಡು. ನನ್ನ ಆಟ ಯಾವುದೋ ನಾನು ಆಡ್ತೀನಿ. ಯಾರ ರಾಜ ಸಿಕ್ಕಿ ಬೀಳ್ತಾನೋ ನೋಡೋಣ."

ಜಾನಿವಾಕರ್ ಅಸಹನೆಯಿಂದ ನೋಡಿ ಮತ್ತೆ ಬಂದು ಅವಳ ಎದುರಿಗೆ ಕುಳಿತುಕೊಂಡ. "ನೋಡು ಮೇಖಲೆ, ನೀನು ನನ್ನನ್ನು ಅರ್ಥ ಮಾಡಿ ಕೊಳ್ಳೋದು ಒಳ್ಳೇದು. ನಾನಿಲ್ಲಿಗೆ ನಿನ್ನ ಶತ್ರುವಾಗಿ ಬಂದಿಲ್ಲ. ನನ್ನ ಕೈಲಾದ ಮಟ್ಟಿಗೆ ನಿನಗೆ ಸಹಾಯ ಮಾಡಲೆಂದೇ ಬಂದಿದ್ದೀನಿ. ನನ್ನೊಂದಿಗೆ ಸ್ನೇಹ ಬೇಕೋ, ಶತ್ರುತ್ವ ಬೇಕೋ ನಿರ್ಣಯಿಸಬೇಕಾದವಳು ನೀನು."

"ಸ್ನೇಹವೆ! ನಿನ್ನೊಂದಿಗಾ, ಎಂತಹ ನಟನೆ" ಎಂದಳು.

"ನನ್ನದು ನಟನೆ ಅಂತ ನಿನಗೆ ಹೇಗೆ ಗೊತ್ತು?"

ಅವಳು ಗರ್ವದಿಂದ ತಲೆ ಕುಣಿಸಿ ಸರಕ್ಕನೆ ನಿಲುವುಗನ್ನಡಿಯ ಕಡೆ ತಿರುಗಿ ಕಿವಿಗಳಿಗಿಟ್ಟುಕೊಂಡ ಲೋಲಾಕುಗಳನ್ನು ಸರಿಮಾಡಿಕೊಳ್ಳುತ್ತಾ, ಕನ್ನಡಿಯಲ್ಲಿ ಕಾಣಿಸುತ್ತಿದ್ದ ಅವನನ್ನು ಉದ್ದೇಶಿಸಿ ನುಡಿದಳು "ನನಗೆ ಗೊತ್ತು ಜಾನಿವಾಕರ್, ನೀನಾಡುತ್ತಿರುವ ನಾಟಕ ಏನೆಂದು ನನಗೆ ತುಂಬಾ ಚೆನ್ನಾಗಿ ಗೊತ್ತು. ನಿನ್ನ ಎಲ್ಲ ವಿಷಯವೂ ನನಗೆ ಗೊತ್ತು."

"ಅಂದ್ರೆ?" ಅವನು ಚಕಿತನಾಗಿ ಕೇಳಿದ.

ಅವಳು ನಿರ್ಲಕ್ಷ್ಯದಿಂದ ನಕ್ಕಳು. "ನಿನ್ನ ಬಗೆಗೆ ಎಲ್ಲಾ ಹೇಳುವುದು ಯಾಕೆ? ಒಂದೇ ಒಂದು ವಿಷಯ ಹೇಳ್ತೀನಿ....ಹೇಳಲಾ?" ಕೆಣಕುವವಳಂತೆ ನುಡಿದಳು. ಅವನು ಕಣ್ಣರಳಿಸಿ ಕನ್ನಡಿಯಲ್ಲಿ ಕಾಣಿಸುತ್ತಿದ್ದ ಅವಳ ಕಡೆ ನೋಡಿದ.

"ನೀನು ಪಾಕಿಸ್ತಾನದಿಂದ ಬಂದ ಗೂಢಚಾರಿ! ನಾನು ಹೇಳೋದು ಸರಿ ತಾನೆ ಮಿಸ್ಟರ್ ಜಾನಿವಾಕರ್?"

ಜಾನಿವಾಕರ್ ಬೆಚ್ಚಿಬಿದ್ದ. ಅವಳು ಮತ್ತೆ ಅವನಕಡೆ ತಿರುಗಿ ನಗುತ್ತಾ ನುಡಿದಳು. ಅವನು ನಿಶ್ಚೇಷ್ಟಿತನಾಗಿ ಕುಳಿತುಬಿಟ್ಟ. "ನಿನಗೆ ನನ್ನ ಬಗೆಗೆ ಇನ್ನೂ ಏನೇನು ಗೊತ್ತು?" ನಿಧಾನವಾಗಿ ಕೇಳಿದ.

"ಎಲ್ಲಾ....ಎಲ್ಲಾ ಗೊತ್ತು !"

"ಎಲ್ಲಾ ಅಂದರೆ?"

"ನಿನ್ನ ನಿಜವಾದ ಹೆಸರು ಶಹೆಜಾದಾ ಜೈನುಲ್ ಅಕ್ರಮ್. ಪಾಕಿಸ್ತಾನದ ರಾವಲ್ಪಿಂಡಿಯಲ್ಲಿ ನೀನು ಹುಟ್ಟಿದೆ ನೀನು ಹುಟ್ಟಿದ ಕೆಲವು ದಿನಗಳಿಗೇ ನಿನ್ನ ತಾಯಿ ಆಸ್ಪತ್ರೆಯಲ್ಲಿ ಸತ್ತಳು. ನಿನ್ನ ತಂದೆ ರಾವಲ್ಪಿಂಡಿಯ

ರೈಲ್ವೇ ಸ್ಟೇಷನ್‌ನಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡುತ್ತಿದ್ದ. ಚಿಕ್ಕವನಿದ್ದಾಗ ನಿನ್ನ ನಿಜವಾದ ಹೆಸರು ಹೇಳಲು ನಿನಗೆ ನಾಲಿಗೆ ಹೊರಳುತ್ತಿದ್ದಿಲ್ಲ ಜೈನುಲ್ ಅಕ್ರಮ್ ಬದಲು ಜಾನಿವಾಕರ್ ಎನುತ್ತಿದ್ದೆ. ಅದೇ ನಿನ್ನ ಪೆಟ್ ನೇಮ್ ಆಗಿ ಸ್ಥಿರವಾಯಿತು. ರೆಕಾರ್ಡ್‌ಗಳಲ್ಲಿ ಕೂಡ ನಿನ್ನ ಹೆಸರು ಜಾನಿವಾಕರ್ ಎಂದೇ ನಮೂದಾಗಿದೆ.

"ನಿನ್ನ ತಂದೆ ನಿನಗೆ ಎಂಟು ವರ್ಷವಾಗಿದ್ದಾಗ ಹೃದಯಾಘಾತದಿಂದ ಮರಣಿಸಿದ. ಅದರಿಂದಾಗಿ ನೀನು ಅನಾಥನಾಗಬೇಕಿತ್ತು. ಆದರೆ ನಿನ್ನ ತಂದೆಯ ಸ್ನೇಹಿತನೊಬ್ಬ ನಿನ್ನನ್ನು ಸಾಕಿ-ಸಲುಹಿ ಓದಿಸಿದ. ರಾವಲ್ಪಿಂಡಿ ಯೂನಿವರ್ಸಿಟಿಯಿಂದ ನೀನು ಎಂಎಸ್ಸಿ. ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದೀಯ ಪಾಕಿಸ್ತಾನ್ ಪೊಲೀಸ್ ಸರ್ವೀಸ್ ಪರೀಕ್ಷೆ ಬರೆದು ಇಡೀ ದೇಶದಲ್ಲಿ ಫಸ್ಟ್ ಬಂದೆ. ಟ್ರೈನಿಂಗ್ ಪೀರಿಯಡ್‌ನಲ್ಲಿ ನೀನು ತೋರಿಸಿದ ಸಾಮರ್ಥ್ಯ ನಿನ್ನ ಮೇಲಿನವರೆಲ್ಲರನ್ನೂ ಆಶ್ಚರ್ಯಪಡಿಸುತ್ತಿತ್ತು. ತುಂಬಾ ಚಿಕ್ಕ ವಯಸ್ಸಿನ ಲ್ಲಿಯೇ ಸರ್ವೀಸಿನಲ್ಲಿ ನೀನು ತೋರಿಸಿದ ಧೈರ್ಯ, ಸಾಹಸಗಳಿಗೆ ನಿನಗೆ ಪೊಲೀಸ್ ಮೆಡಲ್ ಲಭಿಸಿತು. ಆಗ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಟ್ಯಾಲೆಂಟ್ ತುಂಬಾ ಕಡಿಮೆ ಇರುತ್ತಿತ್ತು. ನಿನ್ನಂತಹ ಸರ್ವ ಸಮರ್ಥರಾದ ಯುವಕರ ಅಗತ್ಯ ಆ ಸಂಸ್ಥೆಗೆ ತುಂಬಾ ಇತ್ತು. ಇಂಟಲಿಜೆನ್ಸ್ ಬ್ಯೂರೋ ಚೀಫ್ ಆಸಕ್ತಿ ವಹಿಸಿದ್ದರಿಂದಾಗಿ ನೀನು ಸೀಕ್ರೆಟ್ ಸರ್ವೀಸ್ ಸೇರಿದೆ ಆ ಕ್ಷಣದಿಂದ ಈ ದಿನದವರೆಗೆ ನೀನು ಹಿಂದಿರುಗಿ ನೋಡಿಲ್ಲ. ಪಾಕಿಸ್ತಾನ್ ಸೀಕ್ರೆಟ್ ಸರ್ವೀಸ್‌ನಲ್ಲಿ ಟಾಪ್ ಏಜೆಂಟ್ ಆಗಿ ರೂಪುಗೊಂಡೆ. ಅನಂತರ ನೀನು ತುಂಬಾ ದೇಶಗಳಲ್ಲಿ ಪಾಕಿಸ್ತಾನ್ ಏಜೆಂಟ್ ಆಗಿ ಕೆಲಸ ಮಾಡಿ ದ್ದೀಯ. ನಿನ್ನ ಸರ್ವೀಸ್‌ನಲ್ಲಿ ಮುಖ್ಯವಾದ ಘಟ್ಟ ನೀನು ಆಫ್ಘಾನಿಸ್ತಾನ್‌ಗೆ ಹೋಗಿದ್ದು.

"ಕಾಬೂಲ್‌ನಲ್ಲಿ ರಷ್ಯನ್ ಸೈನಿಕ ದಳಗಳು ನಿನ್ನನ್ನು ಹಿಡಿದು ನಿಮ್ಮ ದೇಶದ ರಹಸ್ಯಗಳನ್ನು ತಿಳಿದುಕೊಳ್ಳಲು ನಿನ್ನನ್ನು ಚಿತ್ರವಧೆಗೆ ಗುರಿ ಮಾಡಿ ದವು. ಆದರೂ ನೀನು ಶರಣಾಗಲಿಲ್ಲ ಅವರ ಕಣ್ಣಿಗೆ ಮಣ್ಣೆರಚಿ ಯಶಸ್ವಿ ಯಾಗಿ ಪಾಕಿಸ್ತಾನಕ್ಕೆ ತಪ್ಪಿಸಿಕೊಂಡು ಹೊರಟುಹೋದೆ. ಆ ದಿನದಿಂದ ನಿಮ್ಮ ಇಂಟಲಿಜೆನ್ಸ್ ಬ್ಯೂರೋನಲ್ಲಿ ನಿನ್ನ ಪ್ರತಿಷ್ಠೆ ಲಕ್ಷಪಟ್ಟು ಏರಿತು ನಿಮ್ಮ ಇಂಟಲಿಜೆನ್ಸ್ ಸರ್ವೀಸ್‌ಗೆ ನೀನು ಮುಕುಟಪ್ರಾಯನಾದೆ. ಕಾಬೂಲ್‌ನಲ್ಲಿ ನಿನ್ನ ಮಿಶನ್ ಪೂರ್ತಿಯಾದ ನಂತರ ನಿನ್ನ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್ ಭಾರತಕ್ಕೆ ಹೋಗಲು ನಿನಗೆ ಶಿಕ್ಷಣ ನೀಡಿತು. ಮುಖ್ಯವಾಗಿ

ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ 49307
ಬೆಂಗಳೂರು

ಪ್ರಧಾನವಾದ ಭಾರತೀಯ ಭಾಷೆಗಳೆಲ್ಲದರಲ್ಲೂ ಪರಿಚಯ ಉಂಟಾಗುವಂತೆ ಮಾಡಿತು. ಅವುಗಳಲ್ಲಿ ಮುಖ್ಯವಾಗಿ ತೆಲುಗು ಭಾಷೆ ನಿನಗೆ ತುಂಬಾಚೆನ್ನಾಗಿ ಬಂತು. ತೆಲುಗು ಭಾಷೆಯೊಂದಿಗೆ ಕೇವಲ ಪರಿಚಯ ಉಂಟುಮಾಡಿಕೊಳ್ಳು ದಷ್ಟೇ ಅಲ್ಲ, ತೆಲುಗು ಸಾಹಿತ್ಯವನ್ನು ಆಸಕ್ತಿಯಿಂದ ಅಧ್ಯಯನ ಮಾಡಿದೆ ಆದಕ್ಕೇ ನಿನ್ನನ್ನು ನೋಡಿದವರೆಲ್ಲರೂ ಆಂಧ್ರದವನೆಂದೇ ಭ್ರಮೆಪಡುತ್ತಾರೆ! ಒಬ್ಬ ಆಂಧ್ರನೇ ಅಲ್ಲ, ನೀನು ಏಷಿಯಾ, ಯೂರೋಪ್ ಖಂಡಗಳಲ್ಲಿ ಯಾವ ದೇಶಕ್ಕೇ ಹೋದರೂ ಆ ದೇಶದ ಪ್ರಜೆಯಂತೆ ಮಾರ್ಪಾಟಾಗುವ ಸಾಮರ್ಥ್ಯ ನಿನಗಿದೆ ಅದಕ್ಕೆ ಮುಖ್ಯ ಕಾರಣ ನಿನ್ನ ಶರೀರಾಕೃತಿ. ನಿನ್ನ ಶರೀರದಲ್ಲಿ ಆರ್ಯನ್-ಮಂಗೋಲಾಯ್ಡ್ ಲಕ್ಷಣಗಳು ಪುಷ್ಕಳವಾಗಿವೆ ಅದಕ್ಕೇ ಏಷಿಯಾ ಖಂಡವೊಂದರಲ್ಲೇ ಅಲ್ಲದೆ ಯೂರೋಪ್ ಖಂಡದಲ್ಲಿನ ಜಾತಿ ಗಳೊಂದಿಗೆ ಕೂಡ ನಿನ್ನ ಶರೀರಾಕೃತಿ ಹೋಲುತ್ತದೆ. ಜೊತೆಗೆ ಪ್ರಪಂಚದ ವಿವಿಧ ಭಾಷೆಗಳೊಂದಿಗಿನ ನಿನ್ನ ಪರಿಚಯ ಕೂಡ ನಿನ್ನನ್ನು ಸಿಕ್ಕಿ ಬೀಳ ದಂತೆ ಕಾಪಾಡುತ್ತಿದೆ.

"ಆದರೇನು-ನೀನು ಎಷ್ಟೆಷ್ಟು ದೇಶಗಳಲ್ಲಿ ಎಷ್ಟೆಷ್ಟು ಜನ ಸೀಕ್ರೆಟ್ ಏಜೆಂಟ್‌ಗಳ ಕಣ್ಣಲ್ಲಿ ಮಣ್ಣೆರಚಿದ್ದರೂ, ಎಷ್ಟು ದೇಶಗಳ ಪೋಲೀಸರಿಗೆ ಸಿಕ್ಕಿಬೀಳದಂತೆ ತಪ್ಪಿಸಿಕೊಂಡಿದ್ದರೂ ನನ್ನ ದೃಷ್ಟಿಯಿಂದ ಮಾತ್ರ ತಪ್ಪಿಸಿ ಕೊಳ್ಳದೇ ಹೋದೆ....ಏನಂತೀಯಾ ಮಿಸ್ಟರ್ ಜಾನಿವಾಕರ್?" ಎಂದಳು.

ಅವನು ತುಂಬಾ ಹೊತ್ತು ಏನೂ ಮಾತನಾಡಲಿಲ್ಲ. ನಂತರ "ನಿನಗೆ....ನಿನಗೆ ಇಷ್ಟು ವಿವರಗಳು ಹೇಗೆ ಗೊತ್ತು? ಹೇಗೆ ಗೊತ್ತಾದವು?" ಎಂದು ಕೇಳಿದ.

"ತುಂಬಾ ಸಿಂಪಲ್ ಮಿಸ್ಟರ್ ಜಾನಿವಾಕರ್! ನಿಮ್ಮ ಇಂಟಲಿಜೆನ್ಸ್ ಬ್ಯೂರೋ ಚೀಫ್ ನನ್ನ ಕಸ್ಟಮರ್!"

ಪಕ್ಕದಲ್ಲಿಯೇ ಬಾಂಬ್ ಬಿದ್ದವನಂತೆ ಜಾನಿವಾಕರ್ ಬೆಚ್ಚಿಬಿದ್ದ. "ಮೈಗಾಡ್!" ಅಪ್ರಯತ್ನವಾಗಿ ನುಡಿದ. ಅವಳು ಇನ್ನೂ ನಗುತ್ತಲೇ ಇದ್ದಳು.

"ನಿನ್ನೊಬ್ಬನ ವಿವರಗಳು ಮಾತ್ರವೇ ಅಲ್ಲ ಮಿಸ್ಟರ್ ಜಾನಿವಾಕರ್! ನಿಮ್ಮ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡುತ್ತಿರುವ ಮುಖ್ಯ ವಾದ ಏಜೆಂಟ್‌ಗಳೆಲ್ಲರ ವಿವರಗಳೂ ನನಗೆ ಗೊತ್ತು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನಿಮ್ಮ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟಿನ ಗುಟ್ಟುಗಳೆಲ್ಲವೂ ನನ್ನ ಮುಷ್ಠಿಯಲ್ಲಿವೆ."

"ಮೈಗಾಡ್!" ಎಂದ. ಒಬ್ಬ ಸಾಧಾರಣ ಯುವತಿ....ಒಬ್ಬ ಕಾಲ್ ಗರ್ಲ್....ಅವಳು ಎಷ್ಟು ಬುದ್ಧಿವಂತೆಯೋ ಆಗಿರಲಿ....ಒಂದು ದೇಶದ ಸೀಕ್ರೆಟ್ ಇಂಟೆಲಿಜೆನ್ಸ್ ಬ್ಯೂರೋ ಗುಟ್ಟುಗಳೆಲ್ಲವನ್ನೂ ತಿಳಿದುಕೊಂಡಿದ್ದು ನಂಬಲ ಸಾಧ್ಯ. ಆದರೂ ಅದನ್ನು ಪ್ರತ್ಯಕ್ಷವಾಗಿ ನೋಡುತ್ತಿದ್ದಾನೆ, ಪ್ರತ್ಯಕ್ಷವಾಗಿ ಕೇಳುತ್ತಿದ್ದಾನೆ.

ತನ್ನ ಸೌಂದರ್ಯದಿಂದ ಇವಳು ಕೆಲವು ಜನ ಅಧಿಕಾರಿಗಳನ್ನು ವಶಪಡಿಸಿಕೊಂಡು ಕೆಲವು ದೇಶಗಳ ಮಿಲಿಟರಿ ರಹಸ್ಯಗಳನ್ನು ಸಂಪಾದಿಸಿರ ಬಹುದು. ಬದುಕಿರುವಷ್ಟು ಕಾಲ ಪದವಿಯಲ್ಲೇ ಇರಬೇಕೆಂದು ಒದ್ದಾ ಡುವ ರಾಜಕೀಯ ನಾಯಕರನ್ನು ತನ್ನ ಮುಷ್ಟಿಯಲ್ಲಿಟ್ಟುಕೊಂಡಿರಬಹುದ . ಆದರೆ....ಆದರೆ, ತುಂಬಾ ಅನುಭವ ಇರುವ....ತುಂಬಾ ಶಿಕ್ಷಣ ಹೊಂದಿದ ತಮ್ಮ ಡಿಪಾರ್ಟ್‌ಮೆಂಟಿನ ಚೀಫ್ ಇವಳು ತೋರಿಸಿದ ವಯ್ಯಾರಕ್ಕೆ ಮರು ಳಾಗಿ ಅತ್ಯಂತ ರಹಸ್ಯವಾದ ಡಿಪಾರ್ಟ್‌ಮೆಂಟಿನ ರಹಸ್ಯಗಳನ್ನು ಇವಳೊಂದಿಗೆ ಮಾತಾಡಿದ್ದು....ಮೈಗಾಡ್! ತಾನಿಲ್ಲಿಯವರೆಗೆ ಡೈನಮೈಟ್ ಜೊತೆ ವ್ಯವಹರಿ ಸುತ್ತಿರುವುದಾಗಿ ತಿಳಿದುಕೊಂಡಿದ್ದ....ಆದರೆ ಆಟಂಬಾಂಬ್‌ನೊಂದಿಗೆ ವ್ಯವ ಹರಿಸುತ್ತಿರುವುದು ಈಗ ಅರ್ಥವಾಯಿತು. ತನ್ನ ದೇಶಕ್ಕೆ ಸೇರಿದ ಟಾಪ್ ಕ್ಲಾಸ್ ಸೀಕ್ರೆಟ್ ಏಜೆಂಟ್ ಆಗಿ ಜೀವನದಲ್ಲಿ ಪೊಟ್ಟ ಮೊದಲಬಾರಿ ಅವನ ಅಂದಾಜು ತಪ್ಪಾಯ್ತು. ಈ ಸಮ್ಮೋಹನಾಸ್ತ್ರದ ಮುಂದೆ ತಲೆ ಬಾಗಿಸಿದ. ಎಷ್ಟೋ ಜನ ಪ್ರಮುಖರ ಲಿಸ್ಟ್ ತನ್ನ ಹತ್ತಿರವಿದೆ. ಆದರೆ....ಅದರಲ್ಲಿ ತನ್ನ ಡಿಪಾರ್ಟ್‌ಮೆಂಟಿನ ಚೀಫ್‌ನ ಹೆಸರು ಕೂಡ ಸೇರಿಸಬೇಕಾಗುತ್ತದೆಂದು ಕನಸಿನಲ್ಲೂ ಎಣಿಸಿರಲಿಲ್ಲ. ಅವನು ಸುಧಾರಿಸಿಕೊಳ್ಳುವುದರೊಳಗೆ ಅವಳು ಗರ್ವದಿಂದ ಹೇಳಿದಳು.

"ಈಗೇನಂತೀಯಾ ಮೈಡಿಯರ್ ಸೀಕ್ರೆಟ್ ಏಜೆಂಟ್? ನನ್ನನ್ನು ಕಾಪಾಡುವುದು ನಿನ್ನ ಕೈಯಲ್ಲಿದೆಯೋ? ಈ ಕ್ಷಣದಲ್ಲಿ ನಾನು ನೆನಪಿಸಿ ಕೊಂಡರೆ ಒಂದು ಟೆಲಿಫೋನ್ ಕಾಲ್ ಸಾಕು....ಕಾಲು ಗಂಟೆಯಲ್ಲಿ ನೀನು ಕಂಬಿ ಎಣಿಸ್ತೀಯ. ಒಂದು ಸಲ ಕಾಬೂಲ್‌ನಲ್ಲಿ ತಪ್ಪಿಸಿಕೊಂಡೆ....ನಿನ್ನ ಬುದ್ಧಿವಂತಿಕೆಗೆ ಶಭಾಶ್‌ಗಿರಿ ಕೊಡಬೇಕಾದುದೇ! ಆದರೆ ಈಗ, ನನ್ನ ಕೈಗಳಿಂದ ತಪ್ಪಿಸಿಕೊಳ್ಳಬಲ್ಲೆಯಾ? ನೋಡೋಣ!"

ಅವನು ನಿಧಾನವಾಗಿ ಸುಧಾರಿಸಿಕೊಂಡು ಅವಳನ್ನು ಪ್ರಶಂಸಾ ಪೂರ್ವಕವಾಗಿ ನೋಡಿದ. "ಕೆಲಸದ ಮೇಲೆ ಎಷ್ಟೆಷ್ಟೋ ದೇಶಗಳನ್ನು ತಿರುಗಿ ದ್ದೀನಿ. ಎಷ್ಟೋ ಜನ ಸೀಕ್ರೆಟ್ ಏಜೆಂಟ್‌ಗಳೊಂದಿಗೆ ಕೈ ಕೈ ಮಿಲಾಯಿಸಿದ್ದೀನಿ

ಅವರು ಯಾರೂ ನನಗೆ ಸರಿಜೋಡಿಯಾಗದೇ ಹೋದರು. ಈಗ ನನ್ನೊಂದಿಗೆ ಸಮಾನವಾಗಿ ಸ್ಪರ್ಧಿಸಬಲ್ಲ ಸಮಜೋಡಿಯನ್ನು ನೋಡ್ತಿದೀನಿ. ಆದರೆ ಆ ಜೋಡಿ ಯಾವ ಸೀಕ್ರೆಟ್ ಏಜೆಂಟನೂ ಆಗಿರದೆ, ಮೈ ಮಾರಿಕೊಳ್ಳುವ ಒಬ್ಬ ಕಾಲ್‌ಗರ್ಲ್ ಆಗಿರುವುದು ನನಗೆ ತುಂಬಾ ಆಶ್ಚರ್ಯವಾಗಿದೆ. ಯಾವ ಪರಿಸ್ಥಿತಿ ನಿನ್ನನ್ನು ಕಾಲ್‌ಗರ್ಲ್ ಆಗಲು ಪ್ರೋತ್ಸಾಹಿಸಿತು ನನಗೆ ಸ್ಪಷ್ಟವಾಗಿ ತಿಳಿಯದು. ಆದರೆ ಒಂದು ಮಾತ್ರ ಗೊತ್ತು! ನೀನು ರಾಜಕೀಯದಲ್ಲಿದ್ದಿದ್ದರೆ ಭಾರಿ ಉನ್ನತ ಸ್ಥಾನಕ್ಕೇರುತ್ತಿದ್ದೆ. ನಿನ್ನನ್ನು ಭೇಟಿಯಾಗುತ್ತಿರುವುದು ನನಗೆ ನಿಜವಾಗಲೂ ತುಂಬಾ ಆನಂದವುಂಟುಮಾಡಿದೆ". ತಲೆ ಬಾಗಿಸಿ ಅಭಿವಂದನೆ ಮಾಡುತ್ತಿರುವವನಂತೆ ನುಡಿದ. ಅವಳು ಕೂಡ ಹಾಗೆಯೇ ತಲೆ ಬಾಗಿಸಿ ವ್ಯಂಗ್ಯವಾಗಿ ಆ ಅಭಿನಂದನೆಯನ್ನು ಸ್ವೀಕರಿಸಿದಳು.

"ಈ ಅವಕಾಶವನ್ನು ಕಳೆದುಕೊಳ್ಳಬೇಕೆಂದುಕೊಂಡಿಲ್ಲ.ಜೀವನದಲ್ಲಿ ಸಮಬಲರೊಂದಿಗೆ ಸ್ಪರ್ಧಿಸುವ ಅವಕಾಶ ನನ್ನಂತಹ ಪ್ರೊಫೆಷನಲ್ಸ್‌ಗೆ ಬಹುಶಃ ಒಂದೇಸಲ ಬರುತ್ತದೆ. ನೀನು ಯಾವ ಅಪಾಯಕಾರಿ ಆಟ ಆಡುತ್ತಿದ್ದೀಯೋ ನನಗೆ ತಿಳಿಯದು. ಆದರೆ ಒಂದು ಮಾತ್ರ ಹೇಳಬಲ್ಲೆ! ನಿನ್ನ ಆಟಕ್ಕೆ........ ನಾನು ತಡೆ ಹಾಕ್ತೀನಿ".

ಅವಳು ಭುಜ ಕುಣಿಸಿದಳು. "ಈ ಕ್ಷಣದಲ್ಲಿ ನಿನ್ನನ್ನು ಅಧಿಕಾರಿಗಳಿಗೆ ಹಿಡಿದುಕೊಡಬೇಕೆಂದು ನನ್ನ ಮನಸ್ಸು ಹೇಳುತ್ತಿದೆ ಮೈ ಡಿಯರ್ ಸೀಕ್ರೆಟ್ ಏಜೆಂಟ್! ಆದರೆ ನೀನು ಹೇಗೂ ಚಾಲೆಂಜ್ ಮಾಡ್ತಿದ್ದಿಯಾದ್ದರಿಂದ ನಾನು ಆ ಕೆಲಸ ಮಾಡುತ್ತಿಲ್ಲ. ನೀನು ನಿರಾತಂಕವಾಗಿ ನನ್ನ ಆಟ ಕಟ್ಟಿ ಹಾಕಬಹುದು. ಆದರೆ ನೀನು ಆ ಕೆಲಸ ಮಾಡಲಾರೆ".

ಅವನು ಮತ್ತೊಂದುಸಲ ತಲೆಬಾಗಿಸಿ ಅಭಿನಂದಿಸಿದ."ನಿನ್ನ ಧೈರ್ಯಕ್ಕೆ ನನ್ನ ವಂದನೆಗಳು. ಆದರೆ ನಿನ್ನ ಆಟಕ್ಕೆ ನಾನು ತಡೆ ಹಾಕಲಾರೆನೆಂದು ಅಷ್ಟು ಖಚಿತವಾಗಿ ಹೇಗೆ ಹೇಳಬಲ್ಲೆ? ನನ್ನ ಹಿಂದೆ ಒಂದು ದೇಶದ ಸರಕಾರವೇ ಇದೆ. ಅಗತ್ಯವಾದರೆ ನನಗೆ ಸಹಾಯ ಮಾಡಲು ಅಮೆರಿಕನ್ ಸಿ.ಐ.ಎ., ಬ್ರಿಟಿಷ್ ಸೀಕ್ರೆಟ್ ಸರ್ವೀಸ್‌ನಂತಹ ಅತ್ಯಂತ ಶಕ್ತಿಯುತವಾದ ಇಂಟಲಿಜೆನ್ಸ್ ಸಂಸ್ಥೆಗಳು ಸಿದ್ಧವಾಗಿರುತ್ತವೆ. ನಿನಗೇನಿದೆ?"

"ಹೇಳೂಂತೀಯಾ?" ಅವನು ತಲೆಯಾಡಿಸಿದ.

"ನನ್ನ ಸೌಂದರ್ಯ" ಎಂದಳು.

ಅವನು ಕೆಲವು ಕ್ಷಣ ಮಾತಾಡಲಿಲ್ಲ. ನಂತರ ನಿಧಾನವಾಗಿ ಬಾಯಿ ತೆರೆದು ಏನೋ ಹೇಳಲಿರುವಾಗ ಅವಳೇ ನುಡಿದಳು." ನನಗೆ ನಿನ್ನನ್ನು ನೋಡು

ತ್ತಿದ್ದರೆ ತುಂಬಾ ಮರುಕವಾಗುತ್ತೆ ಮೈ ಡಿಯರ್ ಸೀಕ್ರೆಟ್ ಏಜೆಂಟ್! ನಿನ್ನೊಂದಿಗೆ ನಾನು ಚಾಲೆಂಜ್ ಮಾಡ್ತಿದ್ದೇನೆಂದರೆ ಅದು ಕೇವಲ ನನ್ನ ಆತ್ಮ ವಿಶ್ವಾಸ ಮಾತ್ರವೇ ಅಲ್ಲ. ನೀನು ಬೇಕು ಎಂದರೂ ನನ್ನ ಆಟ ಕಟ್ಟಿಹಾಕ ಲಾರೆ. ಆ ವಿಷಯ ನನಗೆ ಖಚಿತವಾಗಿ ಗೊತ್ತು!"

ಅವನು ಚಕಿತನಾದ. "ಹೇಗೆ ಹೇಳಬಲ್ಲೆ ?" ಕೇಳದೇ ಇರಲಾಗಲಿಲ್ಲ ಅವನಿಂದ.

ಅವಳು ಅವನ ಕಣ್ಣುಗಳನ್ನೇ ದಿಟ್ಟಿಸಿ ನೋಡಿದಳು."ನೀನು ಈ ದೇಶಕ್ಕೆ ಸೀಕ್ರೆಟ್ ಏಜೆಂಟ್ ಆಗಿ ಬಂದಿದ್ದು ಈ ದೇಶದ ಮಿಲಿಟರಿ ರಹಸ್ಯಗಳನ್ನು ತಿಳಿದು ಕೊಳ್ಳಲು. ಅಗತ್ಯವಾದರೆ ಈ ದೇಶವನ್ನು ನಾಶಗೊಳಿಸಲು– ಹೌದಾ?".

ಆ ಪ್ರಶ್ನೆಗೆ ಅವನು ಉತ್ತರ ಕೊಡಲಿಲ್ಲ. ತುಟಿಗಳನ್ನು ಬಿಗಿದು ಅವಳ ಕಡೆ ಹುಬ್ಬು ಗಂಟಿಕ್ಕಿ ನೋಡಿದ.

ಅವಳು ನಿಧಾನವಾಗಿ ಎದ್ದುನಿಂತು ಮೃದುವಾಗಿ ಅವನ ಕೈಹಿಡಿದು ಕೊಂಡು ಕೋಣೆಯಲ್ಲಿದ್ದ ಕಿಟಕಿಯ ಬಳಿ ಕರೆದುಕೊಂಡು ಹೋದಳು. ಅವನು ವಿಚಿತ್ರವಾಗಿ ನೋಡುತ್ತಾ ಅವಳನ್ನು ಹಿಂಬಾಲಿಸಿದ. ಅವಳು ವಿಶಾಲವಾದ ಕಿಟಕಿಯ ಹತ್ತಿರ ನಿಂತು ಪರದೆಗಳನ್ನು ಪಕ್ಕಕ್ಕೆಳೆದಳು. "ಒಂದು ಸಲ ಹೊರಗೆ ನೋಡು ಜಾನಿವಾಕರ್! ಈ ದೇಶದ ಜನ ಸಮೂಹದೊಂದಿಗೆ ಬೆರೆತಿರುವುದು ಇಲ್ಲಿಂದ ಸ್ಪಷ್ಟವಾಗಿ ಕಾಣಿಸುತ್ತಿದೆ— ಹೌದಾ?"

ಅವನು ಆ ಪ್ರಶ್ನೆಗೆ ಕೂಡ ಉತ್ತರ ಹೇಳಲಿಲ್ಲ. ಆಸಕ್ತಿಯಿಂದ ಅವಳ ಮುಖ ನೋಡುತ್ತಾ ನಿಂತ.

"ಒಂದು ವಿಧದಲ್ಲಿ ನಿನ್ನ ಆಸೆ, ನನ್ನ ಆಸೆ ಒಂದೇ ಮೈಡಿಯರ್ ಸೀಕ್ರೆಟ್ ಏಜೆಂಟ್. ಅದಕ್ಕೇ ಬೇಕು ಎಂದರೂ ನೀನು ನನ್ನನ್ನು ಅಡ್ಡಿಪಡಿಸ ಲಾರೆ ಎಂದು ಹೇಳಿದೆ".

ಹಠಾತ್ತನೆ ಅವನ ಕಣ್ಣುಗಳಲ್ಲಿ ಆಶ್ಚರ್ಯ ಇಣುಕಿತು "ಅಂದ್ರೆ?" ಅನುಮಾನದಿಂದ ಕೇಳಿದ.

ಅವಳು ಮತ್ತೊಂದು ಸಲ ಆ ಕಿಟಕಿಯಿಂದ ಹೊರನೋಡುತ್ತಾ ಕೊಂಚ ಹೊತ್ತು ಮೌನವಾಗಿದ್ದುಬಿಟ್ಟಳು. ಕ್ರಮೇಣ ಅವಳ ಕಣ್ಣುಗಳಲ್ಲಿ ದ್ವೇಷ ತುಂಬಿಕೊಳ್ಳುತ್ತಿರುವುದನ್ನು ಅವನು ಗಮನಿಸಲಿಲ್ಲ. ಅವಳ ತುಟಿಗಳು ಉದ್ವೇಗದಿಂದ ನಿಧಾನವಾಗಿ ನಡುಗಿದವು. ಒಂದೇ ಸಾರಿಗೆ ಉದ್ರೇಕದಿಂದ ಅವನ ಕಡೆ ತಲೆ ತಿರುಗಿಸಿ ನೋಡಿದಳು. "ಈ ದೇಶವಿಡೀ ಬೂದಿಯ ರಾಶಿ ಯಾಗಬೇಕು– ಅದನ್ನು ನಾನು ಕಣ್ಣಾರೆ ನೋಡಬೇಕು! ಅದೇ ನನ್ನ ಆಸೆ!".

ಅವಳು ಆ ಮಾತು ಹೇಳಿದೊಡನೆಯೇ ಜಾನಿವಾಕರ್ ಬೆಚ್ಚಿಬಿದ್ದ.

* * * *

ದೇವ ಐದು ಲಕ್ಷ ರೂಪಾಯಿಗಳ ಕರೆನ್ಸಿ ನೋಟುಗಳ ಕಟ್ಟುಗಳನ್ನು ಒಂದು ಹಳೆಯ ಸೀರೆಯಲ್ಲಿ ಎಚ್ಚರಿಕೆಯಿಂದ ಸುತ್ತಿಕೊಂಡು ಭುಜಕ್ಕೆ ಹಾಕಿಕೊಂಡು ಉಲ್ಲಾಸದಿಂದ ಮತ್ತೆ ಆ ಕೋಣೆಯೊಳಗೆ ಅಡಿಯಿಟ್ಟ. ಕೋಣೆಯಲ್ಲಿ ಅಡಿಯಿಡುತ್ತಲೇ ಬಾಗಿಲಲ್ಲಿಯೇ ತಟಕ್ಕನೆ ನಿಂತುಕೊಂಡು ಮೇಖಲೆ ಪಕ್ಕದಲ್ಲಿಯೇ ನಿಂತಿದ್ದ ಹೊಸ ವ್ಯಕ್ತಿಯನ್ನು ಕಣ್ಣರಳಿಸಿ ಕೆಲವು ಕ್ಷಣಗಳು ನೋಡುತ್ತಾ ನಿಂತ. ಭುಜದ ಮೇಲೆ ದೊಡ್ಡ ಮೂಟೆಯೊಂದಿಗೆ ಅಕಸ್ಮಾತ್ತಾಗಿ ಆ ಕೋಣೆಯಲ್ಲಿ ಪ್ರವೇಸಿದ ಅವನ ಕಡೆ ಜಾನಿವಾಕರ್ ತಲೆ ತಿರುಗಿಸಿ ವಿಚಿತ್ರವಾಗಿ ನೋಡಿದ. ನೋಡುವುದಕ್ಕೆ ಹುಚ್ಚನಂತೆ, ತವಾಷೆಯಾಗಿ ಕಾಣಿಸುತ್ತಿದ್ದ ದೇವನನ್ನು ನೋಡಿ ಅವನ ಕಣ್ಣುಗಳು ಸಂಕುಚಿತವಾದವು. ಇಬ್ಬರೂ ಕೊಂಚ ಹೊತ್ತು ಆ ರೀತಿ ಒಬ್ಬರನ್ನೊಬ್ಬರು ನೋಡಿದರು. ಅಲ್ಲಿಯವರೆಗೆ ದೇವನ ಸಂಗತಿಯನ್ನೇ ಮರೆತಿದ್ದ ಮೇಖಲೆ ಮುಖ ಇದ್ದಕ್ಕಿದ್ದಂತೆ ಅವನನ್ನು ನೋಡುತ್ತಲೇ ಅರಳಿತು. ಅಲ್ಲಿಯವರೆಗೆ ಟೆನ್‌ಷನ್‌ನಿಂದ ತುಂಬಿದ್ದ ಆ ಕೋಣೆಯಲ್ಲಿನ ವಾತಾವರಣ ಹಠಾತ್ತನೆ ಹಗುರವಾದಂತೆ ಅನಿಸಿತು.ದೇವನನ್ನು ನೋಡುತ್ತಲೇ ಅವಳು ಅವನ ಕಡೆ ನಡೆದಳು.

"ಏನು ಹ್ಯಾಪಿ ಪ್ರಿನ್ಸ್? ದುಡ್ಡು ತಗೊಂಡೆಯಾ?" ಮುಗುಳ್ನಗುತ್ತಾ ಕೇಳಿದಳು.

ಅವನು ಆ ಪ್ರಶ್ನೆಗೆ ಉತ್ತರ ಹೇಳಲಿಲ್ಲ. ಕಣ್ಣರಳಿಸಿ ಜಾನಿವಾಕರ್‌ನನ್ನು ನೋಡುತ್ತಿದ್ದ ಅವನು ಎತ್ತ ನೋಡುತ್ತಿದ್ದಾನೋ ಗಮನಿಸಿ ಅವಳು ಅವನನ್ನೂ– ಜಾನಿವಾಕರ್‌ನನ್ನೂ ನೋಡಿದಳು. ಜಾನಿವಾಕರ್‌ನನ್ನು ದೇವ ಯಾಕೆ ಸುನಿಶಿತವಾಗಿ ಗಮನಿಸುತ್ತಿದ್ದಾನೋ ಅವಳಿಗೆ ಅರ್ಥವಾಗಲಿಲ್ಲ.ಅವಳು ಏನೋ ಹೇಳುತ್ತಿರುವಂತೆ ದೇವ ನಿಧಾನವಾಗಿ ಭುಜದ ಮೇಲಿನ ಮೂಟೆಯನ್ನು ಕೆಳಗಿಟ್ಟ. ಹಾಗೆ ಮಾಡುತ್ತಿರುವಾಗ ಕೂಡ ಅವನ ಕಣ್ಣುಗಳು ಜಾನಿವಾಕರ್‌ನ ಕಡೆಯೇ ನೇರವಾಗಿ ನೋಡುತ್ತಿದ್ದವು. ಜಾನಿವಾಕರ್‌ಗೆ ಕೂಡ ಈ ಹುಚ್ಚ ತನ್ನನ್ನು ಏಕೆ ಕಣ್ಣರಳಿಸಿ ನೋಡುತ್ತಿದ್ದಾನೋ ಎಂದು ಅರ್ಥವಾಗಲಿಲ್ಲ.ಅವನ ನೋಟಕ್ಕೆ ಅರ್ಥ ತಿಳಿಯದೆ ಅವನೊಂದು ಸಲ ತನ್ನನ್ನು ತಾನು ವಿಚಿತ್ರವಾಗಿ ನೋಡಿಕೊಂಡ. ಆ ಪರೀಕ್ಷೆಯಿಂದ ಆ ಹುಚ್ಚ ತನ್ನನ್ನು ಗಮನಿಸಬೇಕಾದ ಅಂಶ ತನ್ನಲ್ಲೇನಿದೆಯೋ ಅವನಿಗೆ ತೋಚಲಿಲ್ಲ. ಮತ್ತೆ ತಲೆಯೆತ್ತಿ ದೇವನ ಕಡೆ

ಹುಬ್ಬು ಗಂಟಿಕ್ಕಿ ನೋಡಿದ.ಭುಜದ ಮೇಲಿನ ಮೂಟೆ ಕೆಳಗಿಟ್ಟ ದೇವ ನಿಧಾನ ವಾಗಿ ಜಾನಿವಾಕರ್‌ನ ಕಡೆ ಹೆಜ್ಜೆ ಇಟ್ಟ.

"ದೇವ ಎಲ್ಲಿಗೆ?" ಮೇಖಲೆ ಆಶ್ಚರ್ಯದಿಂದ ಪ್ರಶ್ನಿಸಿದಳು.

ಆಗಲೂ ಅವನು ಅವಳಿಗೆ ಉತ್ತರ ಹೇಳಲಿಲ್ಲ.ನೇರವಾಗಿ ಜಾನಿವಾಕರ್‌ನ ಎದುರಿಗೆ ಹೋಗಿ ನಿಂತು, ಮತ್ತೊಂದು ಸಲ ಅವನನ್ನು ಆಪಾದಮಸ್ತಕ ದಿಟ್ಟಿಸಿ ನೋಡಿದ. ಜಾನಿವಾಕರ್ ಮತ್ತೊಂದು ಸಲ ತನ್ನನ್ನು ತಾನು ಪರೀಕ್ಷಿಸಿ ನೋಡಿಕೊಂಡ. ಆಗಲೂ ಕೂಡ ಅವನಿಗೆ ಈ ಹುಚ್ಚ ತನ್ನನ್ನು ಅಷ್ಟು ಪರೀಕ್ಷೆಯಿಂದ ಯಾಕೆ ನೋಡುತ್ತಿದ್ದಾನೋ ಅರ್ಥವಾಗಲಿಲ್ಲ. ದೇವ ತಟಕ್ಕನೆ ಅವನ ಎರಡೂ ಭುಜಗಳನ್ನು ಹಿಡಿದುಕೊಂಡ. "ಬಾಸ್! ದೇಶದಲ್ಲಿ ತುಂಬಾ ಜನ ಮೈ ತುಂಬಾ ಉಟ್ಕೊಳ್ಳೋಕ ಬಟ್ಟೆ ಇಲ್ಲದೆ ಒದ್ದಾಡ್ತಿದಾರೆ ಒಬ್ಬ ವ್ಯಕ್ತಿಗೆ ನಾಲ್ಕು ಜನರಿಗೆ ಸರಿಹೋಗುವಷ್ಟು ಬಟ್ಟೆ ಯಾಕೆ ಹೇಳು ? ಅಗತ್ಯವಿರೋರು ಇನ್ನೂ ತುಂಬಾ ಜನರಿದ್ದಾರೆ. ಈ ಕೋಟು ಹೀಗೆ ಕೊಡು".

"ಅರೆರೆ! ಇದೇನು?"ಜಾನಿವಾಕರ್ ಗಾಬರಿಯಿಂದ ಇನ್ನೇನೋ ಹೇಳುತ್ತಿ ರುವಂತೆಯೇ ದೇವ ಅವನ ಮೇಲೆ ಬಿದ್ದು ಬಲವಂತವಾಗಿ ಕೋಟು ಎಳೆದು ಕೊಂಡ. ಒಳಗಿದ್ದ ವೇಸ್ಟ್‌ಕೋಟನ್ನೂ ಕೂಡ ಎಳೆದುಕೊಳ್ಳುತ್ತಿದ್ದಾಗ ಜಾನಿ ವಾಕರ್ ಥಟ್ಟನೆ ಅವನ ಕೈಹಿಡಿದುಕೊಂಡ.

"ಏನೀ ದೌರ್ಜನ್ಯ? ನನ್ನ ಬಟ್ಟೆ ಎಳೆದುಕೊಳ್ತಿದ್ದೀಯಲ್ಲ?" ಸೀರಿಯಸ್ ಆಗಿ ಕೇಳಿದ.

ದೇವ ಅದಕ್ಕಿಂತಲೂ ಸೀರಿಯಸ್ ಆಗಿ ನೋಡಿದ. "ಮನುಷ್ಯನಿಗೆ ಮಾನ ಮುಚ್ಚಲು ಲಂಗೋಟಿ ಸಾಕು ಬಾಸ್ ! ಚಳಿಯಿಂದ,ಬಿಸಿಲಿನಿಂದ ಶರೀರ ವನ್ನು ಕಾಪಾಡಿಕೊಳ್ಳಬೇಕೆಂದರೆ ಒಂದು ಪ್ಯಾಂಟು, ಒಂದು ಷರ್ಟು ಸಾಕು. ಈ ಡಬಲ್‌ಸ್ಟ್ರಿಪ್ ಫುಲ್ ಸೂಟುಗಳು ನಮಗ್ಯಾಕೆ ಹೇಳು? ಕೊಟ್ಟಿಡು!" ವೇಸ್ಟ್‌ಕೋಟನ್ನು ಕೂಡ ಬಲವಂತದಿಂದ ಎಳೆದುಕೊಂಡು ಅವನ ಟೈಯನ್ನು ಬಲಗೈಯಲ್ಲಿ ಹಿಡಿದುಕೊಂಡ. ಅಷ್ಟರಲ್ಲಿಯೇ ಏನೆಂದುಕೊಂಡನೋ ಏನೋ ಅದನ್ನು ಬಿಟ್ಟು ಬಿಟ್ಟ.

"ಟೈ ಇರ್ಲಿಬಿಡು ಪರವಾಗಿಲ್ಲ! ಈ ಎರಡೂ ನಾನು ತಗೊಂಡು ಹೋಗ್ತಿ ದೀನಿ! ಬರ್ತೀನಿ ಬಾಸ್!"

"ಥ್ಯಾಂಕ್ಯೂ ವೆರಿ ಮಚ್!" ಹಿಂದಿರುಗಿ ನೋಡದೆ ಬಾಗಿಲ ಕಡೆ ಓಡಿದ.

"ಅರೆ! ಎಲ್ಲಿಗೆ ಹೋಗ್ತಿದೀಯಾ? ನಿಂತ್ಕೋ!" ಜಾನಿವಾಕರ್ ಅವನನ್ನು ಬಾಗಿಲವರೆಗೆ ಹಿಂಬಾಲಿಸಿದ. ಆದರೆ ಅಷ್ಟು ಹೊತ್ತಿಗೆ ದೇವ ಬಾಗಿಲು ದಾಟಿ

ಹೊರಗೋಡಿದ್ದ. ಜಾನಿವಾಕರ್ ಬಾಗಿಲಲ್ಲಿಯೇ ನಿಂತು ಮೇಖಲೆಯ ಕಡೆ ತಿರುಗಿದ. "ಯಾರವನು ?" ಎಂದು ಪ್ರಶ್ನಿಸುತ್ತಿರುವಂತಿತ್ತು ಅವನ ನೋಟ.

ಅಲ್ಲಿಯವರೆಗೆ ಇದನ್ನೆಲ್ಲಾ ನೋಡುತ್ತಿದ್ದ ಮೇಖಲೆ ಹೊಟ್ಟೆ ಹಿಡಿದು ಕೊಂಡು ನಗ ತೊಡಗಿದಳು. "ಪರವಾಗಿಲ್ಲ ಬಿಡು– ನಿನ್ನ ಕೋಟು ಸದ್ವಿನಿ ಯೋಗವಾಗುತ್ತೆ!" ಎಂದು ಹೇಳಿ ಮತ್ತೆ ನಗತೊಡಗಿದಳು. ಅಷ್ಟರಲ್ಲಿಯೇ ದೇವ ಮತ್ತೆ ಬಾಗಿಲಲ್ಲಿ ಪ್ರತ್ಯಕ್ಷವಾಗಿ ಅವನ ಕಡೆ ನೋಡಿದ.

"ಸಾರಿ ಬಾಸ್! ನನ್ನ ಮೂಟೆ ತಗೊಳ್ಳೋದನ್ನ ಮರೆತಿದ್ದ!"ಎನ್ನುತ್ತಲೇ ಜಿಂಕೆ ಮರಿಯಂತೆ ಕೋಣೆಯೊಳಗೆ ಓಡಿ ಮೂಟೆ ತೆಗೆದುಕೊಂಡು ಭದ್ರವಾಗಿ ಹೆಗಲಿಗೇರಿಸಿಕೊಂಡು ಹೊರಗೋಡಿದ.

"ಯಾರು ಆ ಹುಚ್ಚ!" ವಿಸ್ಮಯದಿಂದ ಕೇಳಿದ ಜಾನಿವಾಕರ್.

"ಅವನ ಹೆಸರು ದೇವ! ನಿಜವಾಗಿಯೂ ದೇವರಂತಹ ವ್ಯಕ್ತಿ! ನಿನ್ನ ಕೋಟು ಹೋಯಿತೆಂದು ಗಾಬರಿಯಾಗಬೇಕಾದುದಿಲ್ಲ. ರಾತ್ರಿ ಹೊತ್ತು ಚಳಿಯಲ್ಲಿ ಒದ್ದಾಡುತ್ತಿರುವ ಯಾವನಾದರೂ ಬಡವನಿಗೆ ಆ ಕೋಟು ತಲುಪುತ್ತದೆ".

"ಐಸೀ! ಅಂದ್ರೆ ಹುಚ್ಚನಂತೆ ಕಾಣಿಸುತ್ತಿರುವ ಆ ಮನುಷ್ಯ ಒಳ್ಳೆಯ ದಾನಿ ಎಂದಾಯ್ತು! ಇಷ್ಟಕ್ಕೂ ಯಾರಾತ?"

"ಅವನು ಯಾರೋ ಎಲ್ಲಿಂದ ಬಂದಿದ್ದಾನೋ ನಿಜವಾಗ್ಲೂ ನನಗೆ ತಿಳಿಯದು. ಕೆಲವರು ಒಳ್ಳೆಯವರಿಗೋಸ್ಕರ ಪ್ರಳಯ ಬರದೆ ನಿಲ್ಲುತ್ತಿರುತ್ತ ದೆಂದು ಹೇಳುತ್ತಾರಲ್ಲ– ಅಂತಹ ವ್ಯಕ್ತಿ ಅವನು!"

"ಅವನು ಇಲ್ಯಾಕಿದ್ದಾನೆ?"

"ಅದು ನಿನಗೆ ಅನಗತ್ಯ! ವೆಲ್ ಮೈ ಡಿಯರ್ ಸೀಕ್ರೆಟ್ ಏಜೆಂಟ್! ಇನ್ನು ನೀನು ದಯಮಾಡಿಸಬಹುದು! ಸಾಧ್ಯವಾದರೆ ನನ್ನ ಆಟ ಕಟ್ಟಿಹಾಕಿಸ ಬಹುದು! ವಿಷ್ ಯೂ ಬೆಸ್ಟ್ ಲಕ್!" ಎಂದಳು.

ಜಾನಿವಾಕರ್ ಕೆಲವು ಕ್ಷಣ ಅಲ್ಲಿಯೇ ನಿಂತು ಅವಳನ್ನೇ ದಿಟ್ಟಿಸಿ ನೋಡಿದ. ನಂತರ "ಗುಡ್‌ಬೈ!" ಎಂದಷ್ಟೇ ಹೇಳಿ ಸರಸರನೆ ಆ ಕೋಣೆಯಿಂದ ಹೊರನಡೆದ. ಹೊರ ನಡೆಯುತ್ತಿರುವಾಗ ಅವನ ಕಣ್ಣುಗಳು ಯಾವುದೋ ಭಯವನ್ನು ಸೂಚಿಸುತ್ತಿದ್ದವು!

# ೧೩

ಮುನೀಂದ್ರ ಸ್ವಾಮಿಗೆ ಪ್ರಪಂಚದಾದ್ಯಂತ ಆಶ್ರಮಗಳಿದ್ದವು. ತನ್ನ ಮೊಟ್ಟ ಮೊದಲ ಆಶ್ರಮವನ್ನು ಭಾರತದಲ್ಲಿಯೇ ಸ್ಥಾಪಿಸಿದ್ದ. ಇಲ್ಲಿ ಸಾವಿರಾರು ಜನ ಭಕ್ತರೊಂದಿಗೆ ಕೋಟ್ಯಂತರ ರೂಪಾಯಿಗಳ ದುಡ್ಡು ಕೂಡ ಸಂಪಾದಿಸಿದ ನಂತರ ವಿದೇಶಗಳಿಗೆ ಹಾರಿ ಹೋದ.

ಈ ದೇಶದಲ್ಲಿ ಅನೇಕ ಜನ ಸ್ವಾಮಿಗಳಿದ್ದಾರೆ. ಇವರಲ್ಲಿ ಒಬ್ಬ ಭಗವಾನ್. ಭಕ್ತರಿಗೆ ಭಕ್ತಿಯನ್ನು ಮಾರಿ ತುಂಬಾ ದುಡ್ಡು ಸಂಪಾದಿಸಿದ ನಂತರ ವಿದೇಶಗಳಿಗೆ ಹೋಗಿ ವಾಸಿಸುತ್ತಾರೆ. ಅದರಲ್ಲಿ ಅಮೆರಿಕಾ ಮುಖ್ಯವಾದುದು. ಸದರಿ ಸ್ವಾಮಿಗಳೂ, ಭಗವಾನರೂ ಅಮೆರಿಕಾಗೆ ಹೋಗಿ ಕುಳಿತುಕೊಳ್ಳಲು ಕಾರಣಗಳು ತುಂಬಾ ಇವೆ. ಮೊಟ್ಟಮೊದಲನೆಯ ಕಾರಣ ಭಾರತೀಯ ರೂಪಾಯಿಗಿಂತಲೂ ಅಮೆರಿಕನ್ ಡಾಲರ್ ಹೆಚ್ಚು ಮೌಲ್ಯವುಳ್ಳದ್ದು. ಎರಡನೇ ಕಾರಣ ಇಂಡಿಯಾದಲ್ಲಿನ ಭಕ್ತರಿಗಿಂತ ಅಮೆರಿಕಾದಲ್ಲಿನ ಭಕ್ತರು ಹೆಚ್ಚು ಧನಿಕರಾಗಿರುವುದು. ಮೂರನೇ ಕಾರಣ ವಿಶೃಂಖಲ ಜೀವನ ಕಳೆಯಲು ಭಾರತಕ್ಕಿಂತಲೂ ಅಮೆರಿಕಾದಲ್ಲಿ ಹೆಚ್ಚಿನ ಅವಕಾಶಗಳಿರುವುದು. ಇನ್ನೂ ಇನ್ನೂ ತುಂಬಾ ಕಾರಣಗಳಿವೆ. ಹಾಗೆ ದುಡ್ಡು ಸಂಪಾದಿಸಿದೊಡನೆಯೇ ರೆಕ್ಕೆ ಕಟ್ಟಿಕೊಂಡು ವಿದೇಶಗಳಿಗೆ ಪ್ರಯಾಣ ಬೆಳೆಸಲು ಇವರು ಹೇಳುವ ನೆಪವೊಂದೇ- ಪಾಶ್ಚಾತ್ಯ ದೇಶಗಳಲ್ಲಿ ಆಧ್ಯಾತ್ಮಿಕ ಚಿಂತನೆಯನ್ನು ಬೆಳೆಸುವುದು. ಮೋಕ್ಷ, ಸೆಕ್ಸ್, ಭಕ್ತಿ, ರಾಜಕೀಯ, ಆಧ್ಯಾತ್ಮಿಕತೆ ಮತ್ತು ಆಯುಧಗಳಿಗೆ ಬಿಡಿಸಲಾರದ ನೆಂಟು ಉಂಟುಮಾಡಿದ ಮೇಧಾವಿ ಮುನೀಂದ್ರ ಸ್ವಾಮಿ! ಯಾವತ್ತಿಗಾದರೂ ಭಾರತಕ್ಕೆ ತಾನು ಪ್ರಧಾನಿಯೋ, ಅಧ್ಯಕ್ಷನೋ ಆಗಬೇಕೆಂದುಕೊಂಡು ಅದಕ್ಕೆ ಬೇಕಾಗುವಷ್ಟು ನಿಧಿಯನ್ನು ಶೇಖರಿಸುವುದರಲ್ಲಿ ತೀವ್ರವಾಗಿ ಮಗ್ನವಾಗಿರುವ ವ್ಯಕ್ತಿ. ವಿದೇಶಗಳಲ್ಲಿ ಕುಳಿತು ಭಾರತ ದೇಶದಲ್ಲಿನ ಆಳುವ ಪಕ್ಷದ ರೀತಿನೀತಿಗಳನ್ನು ವಿಮರ್ಶಿಸುತ್ತಿರುತ್ತಾನೆ. ಆಳುವ ಪಕ್ಷದೊಂದಿಗೆ ಅಸಂತೃಪ್ತಿ ಹೊಂದಿದ ಮಾಜಿ ಅಧ್ಯಕ್ಷರೊಂದಿಗೂ, ವಿರೋಧ ಪಕ್ಷದ ನಾಯಕರೊಂದಿಗೂ ಆಗಾಗ ವೇದಿಕೆಗಳ ಮೇಲೆ ಪ್ರತ್ಯಕ್ಷನಾಗುತ್ತಾನೆ.ರಾಜಕೀಯಕ್ಕೂ, ಭಕ್ತಿಗೂ ಸಂಬಂಧ ಏನಯ್ಯಾ ಅಂದ್ರೆ ತುಂಬಾ ಇದೆಯೆನ್ನುತ್ತಾನೆ.ಮುನೀಂದ್ರ ಸ್ವಾಮಿಗೆ ಅಮೆರಿಕಾ ಒಂದರಲ್ಲೇ ಅರ್ಧ ಡಜನ್‌ಗಿಂತಲೂ ಹೆಚ್ಚು ಆಶ್ರಮಗಳಿದ್ದವು. ಕ್ಯಾಲಿಫೋರ್ನಿಯಾದಲ್ಲಿದ್ದ ಆಶ್ರಮ ಅವೆಲ್ಲವುಗಳಿಗೂ ಹೆಡ್ ಕ್ವಾರ್ಟರ್ಸ್. ಆಶ್ರಮವೆಂದರೆ ಅದ್ಯಾವುದೋ ಕುಟೀರದಂತಿರುತ್ತದೆಂದು

ಕೊಳ್ಳಬೇಕಿಲ್ಲ. ಸಕಲ ಸೌಕರ್ಯಗಳುಳ್ಳ ದೇವೇಂದ್ರ ಭವನದಂತಿತ್ತು ಅದು. ಆ ಆಶ್ರಮವನ್ನು ನಲವತ್ತು ಎಕರೆ ವಿಸ್ತೀರ್ಣವುಳ್ಳ ಸ್ಥಳದಲ್ಲಿ ಕಟ್ಟಿಸಿದ್ದ. ಭವನದ ಹೊರಗೆ ಇಪ್ಪತ್ತನಾಲ್ಕು ರೋಲ್ಸ್‌ರಾಯ್ಸ್ ಕಾರುಗಳು ಸಾಲಾಗಿ ನಿಂತಿರುತ್ತಿದ್ದವು. ಅವೆಲ್ಲವೂ ಮುನೀಂದ್ರ ಸ್ವಾಮಿಯವೇ. ಮುನೀಂದ್ರ ಸ್ವಾಮಿಗೆ ಬೆಲೆ ಬಾಳುವ ಕಾರುಗಳ ಹುಚ್ಚು ವಿಪರೀತ. ಭವನಾಂತರ್ಭಾಗದಲ್ಲಿ ಒಂದು ವಿಶಾಲವಾದ ಹಾಲ್‌ನಲ್ಲಿ ಒಂದು ವಿಶಾಲವಾದ ವೇದಿಕೆಯ ಮೇಲೆ ಆಸೀನನಾಗಿ ಸುತ್ತಲೂ ಸೇರಿದ ಭಕ್ತ ಜನಾವಳಿಯನ್ನುದ್ದೇಶಿಸಿ ಉಪನ್ಯಾಸ ನೀಡುತ್ತಿದ್ದ ಮುನೀಂದ್ರಸ್ವಾಮಿ.

ಆವನ ಸುತ್ತಲೂ ಕುಳಿತಿದ್ದ ಭಕ್ತರು ಭಕ್ತರಂತಿದ್ದಿಲ್ಲ. ಮುನೀಂದ್ರ ಸ್ವಾಮಿಯ ಉಪನ್ಯಾಸಕ್ಕೆ ಕಣ್ಣು ಮುಚ್ಚಿಕೊಂಡು ತಲೆ ತೂಗುತ್ತಿರುವುದು ಭಕ್ತಿಯಿಂದಲ್ಲ- ಗಾಂಜಾ ದಮ್ಮು ಎಳೆದ ಸುಖಾನುಭವದಲ್ಲಿ. ಸುತ್ತ ಇದ್ದ ಗುಂಪಿನಲ್ಲಿ ಸ್ತ್ರೀ-ಪುರುಷರೆಲ್ಲರೂ ಸಂಖ್ಯೆಯಲ್ಲಿ ಹೆಚ್ಚೂ ಕಡಿಮೆ ಸಮಾನ ವಾಗಿದ್ದರು. ಎಲ್ಲರ ಮೈ ಮೇಲೂ ಬಟ್ಟೆಗಳು ಅಸ್ತವ್ಯಸ್ತವಾಗಿದ್ದುವು. ಅರ್ಧ ನಗ್ನವಾಗಿದ್ದರು. ಕೆಲವರು ಪೂರ್ತಿ ನಗ್ನವಾಗಿದ್ದರು. ಕೆಲವರು ಗಾಂಜಾ ಪ್ರಭಾವದಿಂದಲೂ ಮತ್ತೆ ಕೆಲವರು ಡ್ರಗ್ಸ್ ಪ್ರಭಾವದಿಂದಲೂ ತೂರಾಡುತ್ತಿದ್ದರು. ಅಲ್ಲಿ ಕುಳಿತಿದ್ದವರಲ್ಲಿ ಗಂಡು ಹೆಣ್ಣು ಜೋಡಿಯಾಗಿ ಕುಳಿತುಕೊಳ್ಳುವುದಷ್ಟೇ ಅಲ್ಲದೆ, ಇಬ್ಬರು ಹೆಣ್ಣುಗಳ ಜೋಡಿಯೂ, ಇಬ್ಬರು ಗಂಡುಗಳ ಜೋಡಿಯೂ ತುಂಬಾ ಇದ್ದುವು. ಆದರಲ್ಲಿ ಬಹಳ ಜೋಡಿಗಳು ಸುಮ್ಮನೇ ಕುಳಿತಿರಲಿಲ್ಲ. ಒಬ್ಬರ ಶರೀರದ ಮೇಲೆ ಮತ್ತೊಬ್ಬರ ಕೈಗಳು ಯಥೇಚ್ಛವಾಗಿ ವಿಹರಿಸುತ್ತಿದ್ದವು. ಕೆಲವರು ಜೋಡಿಯಾಗಲ್ಲದೆ ಗುಂಪುಗುಂಪಾಗಿ ಕುಳಿತು ಕೊಂಡಿದ್ದರು. ಹೆಣ್ಣು-ಗಂಡು ಜೋಡಿಯಾಗಿ ಕುಳಿತಲ್ಲಿ ಅಲ್ಲಲ್ಲಿ ಲೈಂಗಿಕ ಸಂಪರ್ಕ ಕೂಡ ನಡೆಯುತ್ತಿತ್ತು. ಒಬ್ಬರ ವಿಷಯವನ್ನು ಮತ್ತೊಬ್ಬರು ಹಚ್ಚಿಕೊಳ್ಳುತ್ತಿರಲಿಲ್ಲ!

ಹೆಂಗಸರು ಹೆಂಗಸರೂ, ಗಂಡಸರು-ಗಂಡಸರೂ ಜೋಡಿಯಾಗಿ ಕುಳಿತಿದ್ದ ಸ್ಥಳದಲ್ಲಿ ಪರಿಸ್ಥಿತಿ ಇನ್ನೂ ತುಂಬಾ ಘೋರವಾಗಿತ್ತು. ಒಬ್ಬರ ಮೇಲೊಬ್ಬರು, ಎದುರೆದುರಾಗಿ ಕುಳಿತು ಒಬ್ಬರನ್ನೊಬ್ಬರು, ಮತ್ತೊಬ್ಬರು ಮುತ್ತಿಡುತ್ತಿದ್ದರು. ಒಬ್ಬರ ಶರೀರದ ಅಂಗಗಳನ್ನು ಮತ್ತೊಬ್ಬರು ತಡವುತ್ತಿದ್ದರು. ಒಬ್ಬರನ್ನೊಬ್ಬರು ಕಚ್ಚುತ್ತಿದ್ದರು. ಒಬ್ಬರನ್ನೊಬ್ಬರು ಪರಚುತ್ತಿದ್ದರು. "ಮೋಕ್ಷ....!" ಮುನೀಂದ್ರ ಸ್ವಾಮಿ ವೇದಿಕೆ ಮೇಲಿನಿಂದ ಕೂಗಿ ಹೇಳುತ್ತಿದ್ದ. "ಭಕ್ತರೆ! ಮೋಕ್ಷ....! ಪ್ರತಿ ಮಾನವನೂ ಮೋಕ್ಷಕ್ಕೋಸ್ಕರ ಶ್ರಮಿಸಬೇಕು! ಮೋಕ್ಷ

ವೆಂದರೆ ಏನು? ಮೋಕ್ಷವೆಂದರೆ ಆನಂದ! ಬ್ರಹ್ಮಾನಂದ! ಆನಂದವೆಂದರೆ ಏನು! ಮನುಷ್ಯ ಬಾಧೆಯಿಂದ ವಿಮುಕ್ತನಾಗುವುದು! ಶರೀರವನ್ನು ಆತ್ಮ ಬಿಟ್ಟು ಹೋದಮೇಲೆ ಆ ಆತ್ಮ ಬ್ರಹ್ಮಾನಂದವನ್ನು ಹೊಂದುವುದೇ ಮೋಕ್ಷ! ಶರೀರ ವನ್ನು ಬಿಟ್ಟ ನಂತರ ಆತ್ಮ ಸಂಕ್ಷೋಭಿತಗೊಳ್ಳದಿರುವುದೇ ಬ್ರಹ್ಮಾನಂದ! ಅದೇ ಮೋಕ್ಷ!

ಭಕ್ತರೆ! ಅಂತಹ ಆನಂದವನ್ನು ಪಡೆಯಲು ಮಾರ್ಗ ಏನು ? ಆನಂದ! ಆನಂದಕ್ಕೆ ಮಾರ್ಗ ಆನಂದ! ಮೋಕ್ಷಕ್ಕೆ ಮಾರ್ಗ ಆನಂದ! ಆದ್ದರಿಂದ ಭಕ್ತರೆ! ಆನಂದವನ್ನು ಅನುಭವಿಸಿ! ಮನಸ್ಫೂರ್ತಿಯಾಗಿ ಅನುಭವಿಸಿ! ಅನುಭವಿಸುವು ದರಲ್ಲಿಯೇ ಆನಂದವಿದೆ! ಅನುಭವಿಸುವುದರಲ್ಲಿಯೇ ಮೋಕ್ಷವಿದೆ! ಅನುಭವಿಸುವು ದರಲ್ಲಿಯೇ ಸರ್ವಸ್ವವೂ ಇದೆ! ಅನುಭವವೇ ಆನಂದ! ಅನುಭವವೇ ಮೋಕ್ಷ! ಅನುಭವವೇ ಪರಬ್ರಹ್ಮ!

ಆನಂದೋ ಬ್ರಹ್ಮ! ಮನಸಾರಾ ಆನಂದಿಸಿ! ಮನಸಾರಾ ಅನುಭವಿಸಿ! ಮನಸಾರಾ ಮೋಕ್ಷ ಪಡೆಯಿರಿ! ಮುನೀಂದ್ರ ಸ್ವಾಮಿ ಜೋರಾಗಿ ಕೂಗಿ ಹೇಳುತ್ತಿದ್ದ ಉಪನ್ಯಾಸ ಕಾಮಕೇಳಿಯಲ್ಲಿ ಮುಳುಗಿದ್ದವರಲ್ಲಿ ಕೆಲವರಿಗೆ ಮಾತ್ರವೇ ಕೇಳಿಸಿತು. ಆ ಕೇಳಿಸಿದ್ದು ಕೂಡ ಒಂದೇ ಮಾತು–

"ಆನಂದ ಅನುಭವಿಸಿ! ಮನಸಾರಾ ಆನಂದ ಅನುಭವಿಸಿ! ಆನಂದ ಕ್ಕೋಸ್ಕರ ಆನಂದ ಅನುಭವಿಸಿ! ಮೋಕ್ಷಕ್ಕೋಸ್ಕರ ಆನಂದ ಅನುಭವಿಸಿ! ಅನುಭವಿಸಿ!"

ಎಷ್ಟು ಸಲ ಹೇಳಿದರೂ, ಎಷ್ಟು ವಿಧವಾಗಿ ತಿರುಗಿಸಿ ಹೇಳಿದರೂ ಅದೆಲ್ಲಾ ಒಂದೇ ಮಾತು! "ಅನುಭವಿಸಿ!" ಅದೇ ಮುನೀಂದ್ರ ಸ್ವಾಮಿಯ ಸ್ಲೋಗನ್.

ಭಾರತ ದೇಶದಲ್ಲಿ ಯುಗ-ಯುಗಗಳಿಂದ ನಿಕ್ಷಿಪ್ತವಾಗಿರುವ ಆಧ್ಯಾತ್ಮಿಕ ಜ್ಞಾನ ಸಂಪತ್ತಿಗೆ ಮುನೀಂದ್ರಸ್ವಾಮಿ ಕೊಟ್ಟ ವಕ್ರಭಾಷ್ಯ ಅದು– "ಅನು ಭವಿಸಿ! ಮನಸಾರಾ ಅನುಭವಿಸಿ!" ಈ ಸ್ಲೋಗನ್ ವಿಧವಿಧವಾದ ಮನೋ ವೈಕಲ್ಯಗಳಿಗೊಳಗಾಗಿರುವ ಪಾಶ್ಚಾತ್ಯ ದೇಶಿಯರಿಗೆ ಚೆನ್ನಾಗಿ ಹಿಡಿಸುತ್ತ ದೆಂದು ಅವನಿಗೆ ತಿಳಿದಿತ್ತು. ಪಾಶ್ಚಾತ್ಯರಲ್ಲಿ ಮುಖ್ಯವಾಗಿ ಅಮೆರಿಕಾದಂತಹ ಅಭಿವೃದ್ಧಿ ಹೊಂದಿದ ದೇಶದ ಪ್ರಜೆಗಳಲ್ಲಿ ಇತ್ತೀಚೆಗೆ ಮುಖ್ಯವಾಗಿ ಎದ್ದು ಕಾಣುತ್ತಿರುವ ಅಂಶ–ಅಸಹನೆ, ಅಸಂತೃಪ್ತಿ, ಆಂದೋಳನ! ಅವುಗಳಿಂದ ಹೊರಬೀಳುವುದಕ್ಕೋಸ್ಕರ ಅವರು ಆಶ್ರಯಿಸಿದ್ದು ಎರಡೇ ಎರಡನ್ನು– ಡ್ರಗ್ಸ್....ಸೆಕ್ಸ್! ಮುನೀಂದ್ರ ಸ್ವಾಮಿ ಅವರ ನಾಡಿಯನ್ನು ಸರಿಯಾಗಿ

ಅಲ್ಲಿಯೇ ಹಿಡಿದಿದ್ದ. ಮೋಕ್ಷಕ್ಕೆ ಮಾರ್ಗ ಡ್ರಗ್ಸ್ ಎಂದ! ಮೋಕ್ಷಕ್ಕೆ ಮಾರ್ಗ ಸೆಕ್ಸ್ ಎಂದ! ಅಷ್ಟೇ! ಅವನ ಆಶ್ರಮದಲ್ಲಿ ಸಾವಿರಾರು ಜನ ಭಕ್ತರು ಸೇರಿ ಕೊಂಡರು. ಕೋಟ್ಯಂತರ ಡಾಲರ್ ಸುರಿದರು. ಮುನೀಂದ್ರ ಸ್ವಾಮಿ ತನ್ನ ಉಪನ್ಯಾಸವನ್ನು ನಿಲ್ಲಿಸಿ, ಒಂದು ಸಲ ತನ್ನ ಸುತ್ತಲೂ ಸೇರಿದ ಭಕ್ತರನ್ನು ಶ್ರದ್ಧೆಯಿಂದ ಪರಿಶೀಲಿಸಿ ನೋಡಿದ.

ಆ ವೇಳೆಗೆ ಅವರಲ್ಲಿ ತುಂಬಾ ಜನ ತೀವ್ರವಾದ ವಿಕೃತ ರತಿಯಲ್ಲಿ ಮುಳುಗಿಹೋಗಿದ್ದರು. ಕೆಲವರು ಮಾತ್ರ ನಿಶೆ ಹೆಚ್ಚಾಗಿ ತೇಲಿ ಹೋಗುತ್ತಿದ್ದ ಕಣ್ಣುಗಳಿಂದ ಮೊಣಕಾಲುಗಳ ಮೇಲೆ ಗದ್ದ ಆನಿಸಿ ತಲೆ ಮೇಲೆತ್ತಿ ಯಾವು ದಕ್ಕೋ ನಿರೀಕ್ಷಿಸುತ್ತಿರುವವರಂತೆ ಮುನೀಂದ್ರ ಸ್ವಾಮಿಯ ಕಡೆ ನೋಡುತ್ತಾ ಕುಳಿತಿದ್ದರು.

ಮುನೀಂದ್ರ ಸ್ವಾಮಿ ತನ್ನ ಭಕ್ತರನ್ನು ಪರಿಶೀಲಿಸಿ ನೋಡುವುದನ್ನು ನಿಲ್ಲಿಸಿ ನಿಧಾನವಾಗಿ ಎದ್ದು ನಿಂತ. ತಕ್ಷಣವೇ ಅವನ ಹಿಂದೆ ಚಾಮರ ಬೀಸುತ್ತಾ ಮುನಿಕನ್ಯೆಯರ ಡ್ರೆಸ್ಸಿನಲ್ಲಿ ನಿಂತಿದ್ದ ಇಬ್ಬರು ಯುವತಿಯರು ಚಾಮರಗಳನ್ನು ಪಕ್ಕಕ್ಕಿಟ್ಟು ಸರಸರನೆ ಮುಂದೆ ಬಂದರು. ಮುನೀಂದ್ರ ಸ್ವಾಮಿ ಅವರಿಬ್ಬರ ಭುಜಗಳ ಮೇಲೆ ಕೈ ಹಾಕಿ ನಿಧಾನವಾಗಿ ಮುಂದಕ್ಕೆ ನಡೆದ.

ಅವನು ತನ್ನ ಕೋಣೆಯೊಳಗೆ ಹೋದೊಡನೆಯೇ ಆ ಇಬ್ಬರು ಮುನಿ ಕನ್ಯೆಯರಲ್ಲಿ ಒಬ್ಬಳು ಅವನ ಕೈಯಲ್ಲಿನ ದಂಡವನ್ನು ತೆಗೆದು ಪಕ್ಕಕ್ಕಿಟ್ಟರೆ, ಮತ್ತೊಬ್ಬಳು ಅವನ ಕುತ್ತಿಗೆಯಲ್ಲಿನ ರುದ್ರಾಕ್ಷಿ ಮಾಲೆಗಳನ್ನು ತೆಗೆದು ಗೋಡೆಗೆ ತಗುಲಿಸಿದಳು. ಕ್ಷಣಗಳಲ್ಲಿ ಅವರಿಬ್ಬರೂ ಅವನನ್ನು ನಗ್ನನನ್ನಾಗಿ ಮಾಡಿದರು. ನಂತರ ಅವನೊಂದಿಗೆ ತಾವು ಕೂಡ ಬಟ್ಟೆ ಕಳಚಿ ನಗ್ನರಾದರು.

ಆ ಇಬ್ಬರು ಯುವತಿಯರಲ್ಲಿ ಒಬ್ಬಳು ಬಿಳುಪು! ಅವಳು ಯೂರೋಪ್ ನಿಂದ ಬಂದಿದ್ದಳು. ಮತ್ತೊಬ್ಬ ಯುವತಿ ಕಾಡಿಗೆ ಕಪ್ಪು! ಆ ಯುವತಿ ಅಮೆರಿಕನ್ ನಿಗ್ರೋ! ಮುನೀಂದ್ರ ಸ್ವಾಮಿ ಆ ಇಬ್ಬರು ಯುವತಿಯರೊಡ ಗೂಡಿ ವಿಶಾಲವಾದ ತನ್ನ ಜೇಂಟ್‌ಸೈಜ್ ಮಾಸ್ಟರ್ ಬೆಡ್ ಮೇಲೆ ಹೋದ. ಪ್ರತಿದಿನವೂ ಮುನೀಂದ್ರ ಸ್ವಾಮಿಯ ಹತ್ತಿರ ಎಷ್ಟೆಷ್ಟೋ ಯುವತಿಯರು ಭಕ್ತೆಯರಾಗಿ ಬದಲಾಗಿ ಬರುತ್ತಿರುತ್ತಾರೆ. ಮುನೀಂದ್ರ ಸ್ವಾಮಿ ಅವರೆಲ್ಲ ರೊಂದಿಗೂ ಕೂಡುತ್ತಿದ್ದ. ಮೋಕ್ಷದ ಹೆಸರಿನಲ್ಲಿ ಎಲ್ಲರನ್ನೂ ಅನುಭವಿಸುತ್ತಿದ್ದ. ಒಂದು ದಿನ ಅನುಭವಿಸಿದ ಯುವತಿ ಮತ್ತೊಂದು ದಿನ ಅವನ ಹಾಸಿಗೆಯಲ್ಲಿ ರುತ್ತಿರಲಿಲ್ಲ. ಅವನ ಭಕ್ತೆಯರೆಲ್ಲರೂ ತಮ್ಮ ಸ್ವಾಮೀಜಿಯನ್ನು ಸಂತೃಪ್ತಿ ಪಡಿಸಿ ಮೋಕ್ಷ ಹೊಂದಲು ನಾ ಮುಂದು ತಾ ಮುಂದು ಎನ್ನುತ್ತಿದ್ದರು.

ಮುನೀಂದ್ರ ಸ್ವಾಮಿ ಆ ಯುವತಿಯರೊಡಗೂಡಿ ಬೆಡ್ ಮೇಲೆ ಹೋದೊಡನೆಯೇ ಟೆಲಿಫೋನ್ ನಿರ್ವಿರಾಮವಾಗಿ ಮೊಳಗತೊಡಗಿತು. ತಕ್ಷಣವೇ ನಿಗ್ರೋ ಯುವತಿ ಬೆಡ್ ಮೇಲಿನಿಂದ ಎದ್ದುಹೋಗಿ ಟೆಲಿಫೋನ್ ತಂದು ಕೊಟ್ಟಳು ಅವಳು ಆ ರೀತಿ ನಡೆದಾಡುತ್ತಿದ್ದರೆ ಅವಳ ಕಪ್ಪು ಮೈಮಾಟವನ್ನು ಆಕಾಂಕ್ಷೆಯಿಂದ ಗಮನಿಸುತ್ತಿದ್ದ ಮುನೀಂದ್ರ ಸ್ವಾಮಿ ಬೇಸರದಿಂದ ರಿಸೀವರ್ ಎತ್ತಿಕೊಂಡ.

"ಹಲೋ! ಆಚಾರ್ಯ ಮುನೀಂದ್ರ ಸ್ವಾಮೀಜಿ ತಾನೆ ?" ಅತ್ತಲಿಂದ ಇಂಗ್ಲಿಷ್‌ನಲ್ಲಿ ಕಾತರದ ಪ್ರಶ್ನೆ.

"ಎಸ್. ಸ್ಪೀಕಿಂಗ್!"

"ಸ್ವಾಮೀಜಿ! ನಾನು ನೀರೋ ಬ್ಲಯರ್ ಮಾತಾಡ್ತಿದೀನಿ".

ನೀರೋ ಬ್ಲಯರ್ ಅಮೆರಿಕನ್ ಸಿ.ಐ.ಎ. ನೊಂದಿಗೆ ಮುನೀಂದ್ರ ಸ್ವಾಮಿಗಿರುವ ಅತಿ ಮುಖ್ಯವಾದ ಲಿಂಕ್. ಮುನೀಂದ್ರ ಸ್ವಾಮಿಯ ಶಿಷ್ಯಕೋಟಿಯಲ್ಲಿ ನೀರೋ ಕೂಡ ಒಬ್ಬ. ಆದರೆ ಆ ವಿಷಯ ಇಲ್ಲಿಯ ತನಕ ರಹಸ್ಯವಾಗಿಯೇ ಇದೆ. ಮುನೀಂದ್ರ ಸ್ವಾಮಿಯ ಕಾರ್ಯಕಲಾಪಗಳ ಬಗೆಗೆ ಅಮೆರಿಕನ್ ಸರಕಾರಕ್ಕೆ ತುಂಬಾ ಸಂದೇಹಗಳಿದ್ದವು. ನೀರೋನಂತಹ ಮುಖ್ಯವಾದ ಸಿ.ಐ.ಎ. ಉದ್ಯೋಗಿ ಮುನೀಂದ್ರ ಸ್ವಾಮಿಯಂತಹ ಅನುಮಾನಾಸ್ಪದ ಸ್ವಾಮೀಜಿಯ ಶಿಷ್ಯನೆಂದರೆ ತಕ್ಷಣವೇ ಸರಕಾರ ಅವನನ್ನು ತೊಲಗಿಸಬಹುದು!

"ಹಲೋ ನೀರೋ! ಏನಿದು ಹೊತ್ತಲ್ಲದ ಹೊತ್ತಿನಲ್ಲಿ ಫೋನ್ ಮಾಡ್ದೆ?" ಕೇಳಿದ ಮುನೀಂದ್ರ ಸ್ವಾಮಿ.

"ಇದು ತುಂಬಾ ಅರ್ಜೆಂಟ್ ಸ್ವಾಮೀಜಿ!" ನೀರೋ ನುಡಿದ "ಈ ಸುದ್ದಿ ನನಗೆ ತಡವಾಗಿ ತಿಳಿಯಿತು. ಸಿ. ಐ. ಎ. ನಿಮ್ಮ ಮೇಲೆ ದಾಳಿ ಮಾಡಲಿದೆ".

"ವ್ಹಾಟ್?" ಸ್ವಾಮೀಜಿ ಮಂಚದ ಮೇಲೆ ದಿಗ್ಗನೆದ್ದು ಕುಳಿತ!

"ಹೌದು ಸ್ವಾಮೀಜಿ! ಇಲ್ಲಿಯವರೆಗೆ ಈ ವಿಷಯವನ್ನು ಮೇಲಿನ ಅಧಿಕಾರಿಗಳು ನಮಗೆ ಕೂಡ ತಿಳಿಯದಂತೆ ಮುಚ್ಚಿಟ್ಟಿದ್ದರು".

"ಆದರೆ...., ಆದರೆ...., ಯಾಕೆ....? ಯಾಕಂತ....?" ವಿಸ್ಮಯದಿಂದ ಕೇಳಿದ ಮುನೀಂದ್ರ ಸ್ವಾಮಿ.

"ನೀವು ರಷ್ಯನ್ ಕೆ.ಜಿ.ಬಿ. ಏಜೆಂಟ್ ಎಂದು ಸಿ.ಐ.ಎ.ಗೆ ಬಲವಾದ ಅನುಮಾನ ಬಂದಿದೆ".

"ವ್ಹಾಟ್? ನಾನ್‌ಸೆನ್ಸ್!" ಎಂದು ಕೂಗಿದ ಮುನೀಂದ್ರಸ್ವಾಮಿ.

"ಇದು ಅಕ್ಷರಶಃ ನಿಜ ಸ್ವಾಮೀಜಿ! ನಮ್ಮ ಏಜೆಂಟ್ ಒಬ್ಬನನ್ನು ನೀವು ಕೊಂದಿರುವುದಕ್ಕೆ ಸಿ ಐ.ಎ. ಹತ್ತಿರ ಬಲವಾದ ಸಾಕ್ಷ್ಯಾಧಾರಗಳಿವೆ".

"ಸಿ.ಐ.ಎ.ಏಜೆಂಟ್‌ನನ್ನಾ? ನಾನಾ? ಕೊಲ್ಲುವುದಾ?! ನಿಮ್ಮ ಸಿ.ಐ.ಎ. ದವರಿಗೆ ತಲೆ ಕೆಟ್ಟಿದೆ!"

"ನನಗೆ ತಿಳಿದ ವಿಷಯ ನಿಮಗೆ ಪಾಸ್ ಆನ್ ಮಾಡ್ತಿದೀನಿ. ಗ್ರೆಗರಿ ಸ್ಕ್ಯಾಟ್ ಎನ್ನುವ ಏಜೆಂಟ್‌ನನ್ನು ನೀವು ಕೊಲೆ ಮಾಡಿದ್ದೀರೆಂದು ಸಿ.ಐ ಎ. ಬಲವಾಗಿ ನಂಬಿದೆ".

"ಏನು....ಗ್ರೆಗರಿ ಸ್ಕ್ಯಾಟ್‌ನನ್ನು ನಾನು........" ಮುನೀಂದ್ರ ಸ್ವಾಮಿ ಇನ್ನೂ ಏನೋ ಹೇಳಲು ಹೋಗಿ ಹಠಾತ್ತನೆ ನಿಲ್ಲಿಸಿದ. ಅವನ ತಲೆ ಇದ್ದಕ್ಕಿದ್ದಂತೆ ಗಿರ್ರೆಂದು ತಿರುಗತೊಡಗಿತು. ಗ್ರೆಗರಿ ಸ್ಕ್ಯಾಟ್! ಜೇಕೀಯು ವಿಮಾನ! ರಷ್ಯನ್ ಕೆ.ಜಿ.ಬಿ. ಐಡೆಂಟಿಟಿ ಕಾರ್ಡ್....! ಓ ಮೈ ಗಾಡ್! ಎಲ್ಲೋ ಯಾವುದೋ ಘೋರವಾದ ತಪ್ಪು ನಡೆದಿದೆ! ಮುನೀಂದ್ರಸ್ವಾಮಿಯ ಕೈಯಿಂದ ರಿಸೀವರ್ ಜಾರಿಬಿತ್ತು. ಪಕ್ಕದಲ್ಲಿಯೇ ಇದ್ದ ಇಬ್ಬರು ಯುವತಿಯರು ಗಾಬರಿಯಾಗುತ್ತಾ ಅವನನ್ನು ಕೆಳಗೆ ಬೀಳದಂತೆ ಹಿಡಿದುಕೊಂಡರು.

## ೧೪

ಜಾನಿವಾಕರ್ ತನ್ನನ್ನು ಭೇಟಿಯಾಗಿ ಹೊರಟುಹೋದ ನಂತರ ಮೇಖಲೆಯ ಪರಿಸ್ಥಿತಿ ವಿಚಿತ್ರವಾಗಿ ಬದಲಾಯಿತು. ಆ ದಿನವೆಲ್ಲಾ ಅವಳ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ತನ್ನ ಗತ ಚರಿತ್ರೆಯನ್ನು ನೆನಪು ಮಾಡಿದ ಜಾನಿವಾಕರ್ ಕೆಲ ಸಂವತ್ಸರಗಳಿಂದ ಮಸ್ತಿಷ್ಕದಲ್ಲಿ ಗೂಡುಕಟ್ಟಿದ್ದ ಜೇನುಗೂಡನ್ನು ಅಲುಗಾಡಿಸಿದ. ತನ್ನ ಜೀವನ ವೃಥಾ ಕಳೆದುಹೋಯಿತು. ಹಠಾತ್ತನೆ ಬಂದ ಆ ಆಲೋಚನೆ ಭಯಂಕರವೆನಿಸಿತು. ಒಂದು ಕ್ಷಣ ಕೂಡ ತನ್ನ ಅಪಾರ್ಟ್‌ಮೆಂಟಿನಲ್ಲಿ ಕುಳಿತುಕೊಳ್ಳಲಾಗಲಿಲ್ಲ. ತಕ್ಷಣ ಕಾರು ಹತ್ತಿ ಹೊರಟಳು. ಸಾಯಂಕಾಲವಾಗುವವರೆಗೆ ಹಾಗೇ ಡ್ರೈವ್ ಮಾಡುತ್ತಲೇ ಇದ್ದಳು. ಎಲ್ಲಿಯೂ ಒಂದು ಕ್ಷಣ ಕಾರು ನಿಲ್ಲಿಸಲಿಲ್ಲ. ಸಾಯಂಕಾಲವಾಗುವ ವೇಳೆಗೆ ಮಾನಸಿಕವಾಗಿ ಪೂರ್ತಿಯಾಗಿ ಬಳಲಿ ತನ್ನ ಅಪಾರ್ಟ್‌ಮೆಂಟಿಗೆ ತಿರುಗಿ ಬಂದಳು. ಅಪಾರ್ಟ್‌ಮೆಂಟಿನೊಳಗೆ ಹೋಗುತ್ತಲೇ ಡ್ರಾಯಿಂಗ್ ರೂಮಿನಲ್ಲಿ ಸೋಫಾದಲ್ಲಿ ಹಾಗೆಯೇ ವಾಲಿದಳು. ಬಳಲಿದ ಮನಸ್ಸು

ವಿಶ್ರಾಂತಿಯ ದಾರಿಯನ್ನು ಹುಡುಕುತ್ತಾ ಕ್ರಮೇಣ ಅವಳನ್ನು ನಿದ್ರಾವಶಳನ್ನಾಗಿ ಮಾಡಿತು. ಯಾವ ಕ್ಷಣದಲ್ಲಿ ನಿದ್ದೆ ಹತ್ತಿತೋ ತಿಳಿಯದು, ಮೈಮರೆತು ನಿದ್ದೆಹೋದಳು. ಮತ್ತೆ ನಿದ್ದೆಯಿಂದೇಳುವ ಹೊತ್ತಿಗೆ ರಾತ್ರಿ ಎಂಟೂವರೆ ಯಾಗಿತ್ತು.

ತಲೆಯೆಲ್ಲಾ ಭಾರವೆನಿಸಿದರೂ ಮನಸ್ಸು ಮಾತ್ರ ಆ ನಿದ್ದೆಯಿಂದಾಗಿ ಹಗುರವಾದಂತಾಯ್ತು. ಬಾತ್‌ರೂಮಿಗೆ ಹೋಗಿ ಮತ್ತೆ ಸ್ನಾನ ಮಾಡಿದಳು. ಅದರಿಂದಾಗಿ ತಲೆಭಾರ ಕೂಡ ಕಡಿಮೆಯಾಯಿತು. ಆದರೂ ಆಲೋಚನೆಗಳು ಅವಳನ್ನು ಕಾಡುತ್ತಲೇ ಇದ್ದವು. ಯಾವುದಾದರೂ ಮತ್ತೊಂದು ವಿಷಯದ ಮೇಲೆ ಮನಸ್ಸು ಹೊರಳಿಸದೆ ಉಪಯೋಗವಿಲ್ಲವೆನಿಸಿತು. ಹೋಗಿ ಟಿ.ವಿ. ಆನ್ ಮಾಡಿದಳು. ಟಿ.ವಿ.ಯಲ್ಲಿ ವಾರ್ತೆಗಳು ಬರುತ್ತಿದ್ದವು. ಅನ್ಯಮನಸ್ಕಳಾಗಿ ವಾರ್ತೆ ನೋಡುತ್ತಿದ್ದ ಅವಳು ಹಠಾತ್ತನೆ ಬೆಚ್ಚಿಬಿದ್ದಳು. ಅವಳ ಮೆದುಳನ್ನು ಕುಟುಕುತ್ತಿದ್ದ ಆಲೋಚನೆಗಳೆಲ್ಲವೂ ಒಂದೇ ಸಲ ತೊಲಗಿ ಹೋದವು. ಕಣ್ಣರಳಿಸಿ ಟಿ.ವಿ. ಸ್ಕ್ರೀನ್ ಕಡೆ ದೃಷ್ಟಿ ಹರಿಸಿದಳು.

ನ್ಯೂಸ್ ರೀಡರ್ ವಾರ್ತೆ ಹೇಳಿಕೊಂಡು ಹೋಗುತ್ತಿದ್ದಳು - "........ಶ್ರೀ ಮುನೀಂದ್ರಸ್ವಾಮಿಯನ್ನು ಅಮೆರಿಕಾ ತನ್ನ ದೇಶದಿಂದ ಬಹಿಷ್ಕರಿಸಿದೆ. ಶ್ರೀ ಮುನೀಂದ್ರಸ್ವಾಮಿಯ ವೀಸಾವನ್ನು ಸರಕಾರ ರದ್ದುಗೊಳಿಸಿದ್ದರಿಂದ ಅನಿವಾರ್ಯವಾಗಿ ಅವರು ಆ ದೇಶವನ್ನು ಬಿಡಬೇಕಾಗಿ ಬಂದಿದೆ. ಶ್ರೀ ಮುನೀಂದ್ರಸ್ವಾಮಿಗೆ ಅಮೆರಿಕಾದಲ್ಲಿ ಆರು ಆಶ್ರಮಗಳಿವೆ. ಸ್ವಾಮೀಜಿ ವರ್ತನೆ ವಿವಾದಾಸ್ಪದವಾಗಿದೆ. ಅವರ ಆಶ್ರಮಗಳಲ್ಲಿ ಕಾನೂನಿಗೆ ವ್ಯತಿರಿಕ್ತವಾದ ಕಾರ್ಯಕಲಾಪಗಳು ನಡೆಯುತ್ತಿದ್ದವು. ಎನ್ನಲಾಗಿದೆ. ಅಮೆರಿಕಾದ ವಿರುದ್ಧ ಅವರು ಗೂಢಚರ್ಯೆ ಚಟುವಟಿಕೆಗಳನ್ನು ನಡೆಸುತ್ತಿದ್ದರಂತೆ. ಮುನೀಂದ್ರಸ್ವಾಮಿಯ ಆರು ಆಶ್ರಮಗಳಿಗೆ ಇಂಟಲಿಜೆನ್ಸ್ ಅಧಿಕಾರಿಗಳು ಬೀಗಮುದ್ರೆ ಹಾಕಿದ್ದಾರೆ ಸರಕಾರದಿಂದ ಆಜ್ಞೆ ಹೊರಬಿದ್ದ ಕೆಲವು ನಿಮಿಷಗಳಲ್ಲೇ ಮುನೀಂದ್ರಸ್ವಾಮಿ ತಮ್ಮ ಸ್ವಂತ ವಿಮಾನದಲ್ಲಿ ಅಮೆರಿಕಾ ಬಿಟ್ಟು ಹೊರಟರು...."ಟಿ.ವಿ.ಸ್ಕ್ರೀನ್ ಮೇಲಿನ ದೃಶ್ಯ ಬದಲಾಯಿತು. ಯಾವುದೋ ವಿಮಾನ ನಿಲ್ದಾಣದಲ್ಲಿ ವಿಮಾನ ಇಳಿಯುತ್ತಿದ್ದ ಮುನೀಂದ್ರಸ್ವಾಮಿ ಕಾಣಿಸಿದ ನ್ಯೂಸ್ ರೀಡರ್‌ನ ಧ್ವನಿ ಮತ್ತೆ ಕೇಳಿಬರತೊಡಗಿತು.

"ಇದು ಮುನೀಂದ್ರಸ್ವಾಮಿ. ಲಂಡನ್‌ನಲ್ಲಿನ ಹೀತ್ರೋ ವಿಮಾನ ನಿಲ್ದಾಣದಲ್ಲಿ ಇಳಿದರು. ಆದರೆ ಅವರಿಗೆ ಇಂಗ್ಲೆಂಡ್‌ನಲ್ಲಿ ಕೂಡ ಪ್ರವೇಶ ಲಭಿಸಲಿಲ್ಲ. ವಿಮಾನ ಇಳಿಯುತ್ತಲೇ ವಲಸೆ ಅಧಿಕಾರಿಗಳು ಅವರನ್ನು ಭೇಟಿಯಾಗಿ ಅವರು ವಿಮಾನ ನಿಲ್ದಾಣ ದಾಟಿ ಲಂಡನ್ ನಗರವನ್ನು ಪ್ರವೇಶಿಸುವ ಪ್ರಸಕ್ತಿಯೇ

ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಮುನೀಂದ್ರಸ್ವಾಮಿ ಇನ್ನೂ ಹೀತ್ರೋ ವಿಮಾನ ನಿಲ್ದಾಣದಲ್ಲಿಯೇ ಇದ್ದಾರೆ. ತಾವು ಲಂಡನ್ ಪ್ರವೇಶಿಸಲು ಅವಕಾಶ ಕೊಡಬೇಕೆಂದು ಅವರು ಬ್ರಿಟಿಷ್ ಸರಕಾರವನ್ನು ವಿನಂತಿಸಿಕೊಂಡರು. ಲಂಡನ್‌ನಲ್ಲಿ ಅವರಿಗೆ ಆಶ್ರಮವಿದೆ. ಆದರೆ ಅವರು ಲಂಡನ್ ನಗರವನ್ನು ಪ್ರವೇಶಿಸಲು ಅವಕಾಶವಿಲ್ಲವೆಂದೂ, ತಮ್ಮ ಸರಕಾರದ ನಿರ್ಣಯ ಈ ವಿಷಯ ದಲ್ಲಿ ಬದಲಾಗದೆಂದೂ ಅಧಿಕಾರಿಗಳು ಹೇಳುತ್ತಿದ್ದಾರೆ. ಮುನೀಂದ್ರಸ್ವಾಮಿ ಭಾರತಕ್ಕೆ ಹಿಂತಿರುಗುವ ಸಂಭವ ತೀರಾ ಕಡಿಮೆ "

ನ್ಯೂಸ್ ರೀಡರ್ ಆ ನ್ಯೂಸ್ ಐಟೆಮ್ ಓದುವುದನ್ನು ಪೂರ್ತಿ ಮಾಡಿ ದೊಡನೆಯೇ ಮೇಖಲೆಯ ಕಣ್ಣುಗಳು ವಿಜಯಗರ್ವದಿಂದ ಹೊಳೆಯ ತೊಡಗಿದವು. ಅಕಸ್ಮಾತ್ತಾಗಿ ಅವಳಲ್ಲಿ ಎಲ್ಲಿಲ್ಲದ ಶಕ್ತಿ ಮೂಡಿಬಂತು ಮುನೀಂದ್ರಸ್ವಾಮಿಯ ಮೇಲೆ ತಾನು ಉಪಯೋಗಿಸಿದ ಬ್ರಹ್ಮಾಸ್ತ್ರ ಫಲಿಸಿತು. ಆದರೆ ಇಷ್ಟು ಬೇಗ ಹೀಗೆ ನಡೆಯುತ್ತದೆಂದು ತಾನು ಊಹಿಸಿರಲಿಲ್ಲ. ಅಂದರೆ ಜೇಕೇ ಸಿ.ಐ.ಎ ಅಧಿಕಾರಿಗಳ ಮುಂದೆ ಬಾಯಿ ಬಿಚ್ಚಿದ ನಂತರ ಕ್ಷಣಗಳಲ್ಲಿ ಅಮೆರಿಕನ್ ಸರಕಾರ ಅವನನ್ನು ಉಚ್ಚಾಟಿಸಿದೆ ಎಂದಾಯ್ತು. ಬಹುಶಃ ಸಿ.ಐ.ಎ. ದವರ ಕೈಗೆ ಸಿಕ್ಕಿ ಬೀಳುವುದಕ್ಕೆ ಮುಂಚೆಯೇ ಮುನೀಂದ್ರಸ್ವಾಮಿ ಆ ದೇಶ ಬಿಟ್ಟು ಪಲಾಯನ ಮಾಡಿರಬಹುದು. ಏನಾದರೂ ಆಧ್ಯಾತ್ಮಿಕ ಬೋಧನೆಗಳ ಹೆಸರಿನಿಂದ ಮುನೀಂದ್ರಸ್ವಾಮಿ ಇಷ್ಟುಕಾಲ ಆಡುತ್ತಿದ್ದ ನಾಟಕ ಈಗ ತಿರುಗಿಬಿದ್ದಿತು. ಅವನ ಆಶ್ರಮದಲ್ಲಿನ ಕಾರ್ಯಕಲಾಪಗಳೇನು ? ಅವನು ಪ್ರಚಾರ ಮಾಡುತ್ತಿರುವ ಬೋಧನೆಗಳೇನು ? ಎಂಬುದನ್ನು ಅರಿತಿರುವ ಯಾವ ಸರಕಾರವೂ ಅವನು ತಮ್ಮ ದೇಶದಲ್ಲಿ ಕಾಲಿಡಲು ಬಿಡುವದಿಲ್ಲ. ಮುನೀಂದ್ರಸ್ವಾಮಿ ಇನ್ನು ತ್ರಿಶಂಕು ಸ್ವರ್ಗದಲ್ಲಿ ನೇತಾಡುತ್ತಿರಬೇಕು ! ಭೂಮಿಯ ಮೇಲೆ ನಿಲ್ಲಲು ಅವನಿಗೀಗ ಮೂರಡಿ ಭೂಮಿ ಸಿಗದಂತಾಗಿದೆ. ಸ್ವಂತ ವಿಮಾನದಲ್ಲಿ ಅವನು ಎಷ್ಟು ಕಾಲ ಆಕಾಶದಲ್ಲಿ ತಿರುಗುತ್ತಿರಬೇಕೋ-ಇರಬಲ್ಲನೋ-ಕಾದು ನೋಡಬೇಕು. ಇನ್ನು ಮುನೀಂದ್ರಸ್ವಾಮಿಯ ಕತೆ ಪರಿಸಮಾಪ್ತಿಯಾಗಲು ಬಹಳದಿನ ಬೇಕಿಲ್ಲ. ಅವಳು ವಿಜಯಗರ್ವದಿಂದ ಬಿದ್ದು ಬಿದ್ದು ನಗತೊಡಗಿದಳು. ಅವಳು ಹಾಗೆ ನಗುತ್ತಿರುವಂತೆಯೇ ಟೆಲಿ ಫೋನ್ ಮೊಳಗಿತು. ಟಿ.ವಿ. ಆಫ್‌ಮಾಡಿ ರಿಸೀವರ್ ಎತ್ತಿಕೊಂಡಳು. ಜೇಕೇ ಮತ್ತೆ ಓವರ್‌ಸೀಸ್ ಕಾಲ್ ಮಾಡಿದ್ದ.

"ಹಲೋ ಬೇಬಿ! ನಿನಗೆ ಮುನೀಂದ್ರಸ್ವಾಮಿಯ ವಿಷಯ ಗೊತ್ತಾಯ್ತಾ?" ಫೋನ್ ಎತ್ತುತ್ತಲೇ ಕೇಳಿದ.

"ಆಂ ಈಗಷ್ಟೇ ಟಿ.ವಿ.ಲಿ ವಾರ್ತೆ ನೋಡ್ದೆ."

"ನನಗೆ ಸಿ.ಐ.ಎ ನಿಂದ಼್ಲೇ ನೇರವಾಗಿ ಇನ್‌ಫರ್ಮೇಷನ್ ಬಂತು. ಪಾಪ ಮುನೀಂದ್ರಸ್ವಾಮಿ!" ಎಂದ ಜೇಕೇ.

"ನಾವೇನೂ ಮರುಕಪಡಬೇಕಾದುದಿಲ್ಲ. ಮುನೀಂದ್ರಸ್ವಾಮಿ ಹಿಂದೆ-ಮುಂದೆ ಆಲೋಚಿಸದೆ ತಾನು ಮಾಡಿದ ತಪ್ಪಿಗೆ ಬೆಲೆ ತೆರುತ್ತಿದ್ದಾನೆ."

"ಆ ವಿಷಯ ಏನೇ ಇರಲಿ ನೀನು ಹೇಳಿದಂತೆ ನಡೆದುಕೊಂಡಿದ್ದರಿಂದ ನನಗೆ ಗಂಡಾಂತರ ತಪ್ಪಿತು. ಮೊದಲು ನಾನು ಬಾಯಿಬಿಡದೇ ಹೋಗಿದ್ದರೆ ಈಗ ಮುನೀಂದ್ರಸ್ವಾಮಿ ಸಿಕ್ಕಿಬಿದ್ದ ಪರಿಸ್ಥಿತಿಯಲ್ಲಿಯೇ ನಾನು ಇರುತ್ತಿದ್ದೆ. ಎಲ್ಲಾ ದೇಶಗಳೂ ಪ್ರವೇಶ ನಿಷೇಧಿಸಿದ್ದರೆ ವ್ಯಾಪಾರಕ್ಕೆ ಪೆಟ್ಟುಬಿದ್ದು ಎಲ್ಲಾ ಸರ್ವನಾಶವಾಗುತ್ತಿತ್ತು."

"ನಿಮ್ಮ ವಿಷಯದಲ್ಲಿ ಹಾಗಾಗುತ್ತಿರಲಿಲ್ಲ ಬಿಡಿ. ಮುನೀಂದ್ರಸ್ವಾಮಿಯನ್ನು ಎಲ್ಲಾದೇಶಗಳೂ ಓಡಿಸಲು ಮುಖ್ಯ ಕಾರಣ ಆಧ್ಯಾತ್ಮಿಕ ಚಿಂತನೆಯ ಹೆಸರಿನಲ್ಲಿ ಅವನು ಪ್ರಚಾರ ಮಾಡುತ್ತಿದ್ದ ಕೊಳೆ !"

"ಎನಿ ವೇ-ಥ್ಯಾಂಕ್ಯೂ ಬೇಬೀ ಥ್ಯಾಂಕ್ಯೂ ವೆರಿಮಚ್ !"

"ಥ್ಯಾಂಕ್ಸ್ ಹೇಳೋಕ್ಕಾ ಫೋನ್ ಮಾಡಿದ್ದು ?"

"ನೋ ನೋ ನೋ ! ನಮ್ಮ ನಮ್ಮಲ್ಲಿ ಈ ಫಾರ್ಮಾಲಿಟೀಸ್‌ಗಳೇನು? ಕೆಲಸ ಇದ್ದುದರಿಂದಲೇ ಫೋನ್ ಮಾಡ್ದೆ !"

"ಆಜ್ಞಾಪಿಸಿ !"

"ಗಮನವಿಟ್ಟು ಕೇಳು ! ಒಂದು ಗಂಟೆ ಹೊತ್ತಿನಲ್ಲಿ ಒಂದು ಟ್ರಾವೆಲಿಂಗ್ ಏಜೆನ್ಸಿಯಿಂದ ಒಬ್ಬ ವ್ಯಕ್ತಿ ಬಂದು ನಿನಗೆ ನೇರವಾಗಿ ಶ್ರೀನಗರಕ್ಕೆ ಪ್ಲೇನ್ ಟಿಕೆಟ್ ಕೊಡುತ್ತಾನೆ. ಅವನಿಗೆ ನೀನೇನೂ ಪೇ ಮಾಡಬೇಕಾಗಿಲ್ಲ. ನಾಳೆ ಬೆಳಿಗ್ಗೆ ಶ್ರೀನಗರಕ್ಕೆ ಪ್ಲೇನ್ ಹೊರಡುತ್ತದೆ. ಶ್ರೀನಗರದಲ್ಲಿನ ಲೇಕ್ ವ್ಯೂ ಹೋಟಲ್‌ನಲ್ಲಿ ನಿನಗೋಸ್ಕರ ಲಕ್ಷುರಿ ಸೂಟ್ ಬುಕ್ ಮಾಡಿಸಿದ್ದೀನಿ ನೀನು ಶ್ರೀನಗರ ತಲುಪಿದ ಮೇಲೆ ನಿನ್ನ ಸೂಟ್‌ಗೆ ಒಬ್ಬ ವ್ಯಕ್ತಿ ಬರುತ್ತಾನೆ. ಅವನು ನನ್ನ ಕಡೆಯವನು. ನೀನೇನು ಮಾಡಬೇಕೆಂಬು ಅವನೇ ಹೇಳುತ್ತಾನೆ ಆ ವಿಷಯ ಏನೆಂದು ಫೋನಿನಲ್ಲಿ ಹೇಳಲು ಸಾಧ್ಯವಿಲ್ಲ. ಅದಕ್ಕೆ ಈ ಏರ್ಪಾಡು ಒಂದು ವಿಷಯ ನೆನಪಿಟ್ಕೋ ಬೇಬಿ! ನೀನು ಶ್ರೀನಗರಕ್ಕೆ ಹೋಗ್ತಿರೋದು ತುಂಬಾ ಮುಖ್ಯವಾದ ಮಿಷನ್ ಮೇಲೆ ಅರ್ಥವಾಯ್ತಾ ?"

"ಯಸ್‌ಬಾಸ್! ಅರ್ಥವಾಯ್ತು" ತುಂಟತನದಿಂದ ನುಡಿಯುತ್ತಾ ಮೌತ್‌ಪೀಸ್‌ನಲ್ಲಿ ಒಂದು ಕಿಸ್ ಕಳಿಸಿದಳು.

"ಗುಡ್ ಬೈ ಬೇಬೀ ವಿಷ್ ಯೂ ಬೆಸ್ಟಾಫ್ ಲಕ್!" ಅವಳ ಮುತ್ತಿಗೆ ಉತ್ತರವಾಗಿ ಜೇಕೇ ತಾನೊಂದು ಮುತ್ತು ಕಳಿಸುತ್ತಾ ಲೈನ್ ಡಿಸ್‌ಕನೆಕ್ಟ್ ಮಾಡಿದ. ಮೇಖಲೆ ನಗುತ್ತಾ ರಿಸೀವರ್ ಕೆಳಗಿಟ್ಟಳು. ಅವಳ ಮನಸ್ಸು ಆಹ್ಲಾದದಿಂದ ಕೂಡಿತ್ತು.

ಸರಿಯಾಗಿ ಅದೇ ಸಮಯದಲ್ಲಿಯೇ ಆ ಬಿಲ್ಡಿಂಗ್‌ನಲ್ಲಿಯೇ ಇದ್ದ ಮತ್ತೊಂದು ಅಪಾರ್ಟ್‌ಮೆಂಟಿನಲ್ಲಿ ಅಲ್ಲಿಯ ವರೆಗೂ ಆ ಸಂಭಾಷಣೆಯನ್ನು ಚಾಚೂ ತಪ್ಪದೆ ರಹಸ್ಯವಾಗಿ ಕೇಳುತ್ತಿದ್ದ ಜಾನಿವಾಕರ್ ರಿಸೀವರ್ ಕೆಳಗಿಟ್ಟ. ಮೇಖಲೆಗೆ ಬರುವ ಪ್ರತಿ ಟೆಲಿಫೋನ್ ಕಾಲ್ ತಾನು ಕೇಳಲು ಸಾಧ್ಯವಾಗುವಂತೆ ಯಾರಿಗೂ ತಿಳಿಯದಂತೆ ಅವನು ಅವಳ ಟೆಲಿಫೋನ್ ಟ್ಯಾಪ್‌ಮಾಡಿದ್ದ ರಿಸೀವರ್ ಕೆಳಗಿಡುತ್ತಿರುವಂತೆ ಅವನ ಆಲೋಚನೆಗಳು ಓಡುತ್ತಿದ್ದುವು.

ಶ್ರೀನಗರ....................

## ೧೫

ಒಬ್ಬರೂ ತುಟಿ ಬಿಚ್ಚುತ್ತಿಲ್ಲ. ಒಬ್ಬರೂ ಪಕ್ಕದಲ್ಲಿದ್ದವರನ್ನು ನೋಡುತ್ತಿಲ್ಲ. ನೋಡಿದರೆ ಹೃದಯ ಬಿರಿಯುತ್ತದೆನ್ನುವ ಭಯ. ನೋಡಿದರೆ ಕಣ್ಣುಗಳಲ್ಲಿ ಕಣ್ಣೀರಿನ ಬದಲಾಗಿ ರಕ್ತ ಚಿಮ್ಮುತ್ತದೇನೋ ಎನ್ನುವ ಹೆದರಿಕೆ ಆ ಕೊಳಚೆ ಪ್ರದೇಶದ ನೂರಾರು ಟಿನ್ನಿನ ಶೆಡ್‌ಗಳಲ್ಲಿ ಅದೊಂದು. ಆ ಶೆಡ್‌ನಲ್ಲಿ ಒಟ್ಟು ನಾಲ್ವರಿದ್ದರು. ಒಬ್ಬ ಸ್ತ್ರೀ, ಮೂವರು ಮಕ್ಕಳು. ಮಕ್ಕಳು ತೀರಾ ಚಿಕ್ಕವರೇನೂ ಅಲ್ಲ. ನಡೆದುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಲ್ಲವರಾಗಿದ್ದರು. ಆ ಏರಿಯಾದಲ್ಲಿನ ನೀರಿನ ಟ್ಯಾಂಕಿನೊಂದಿಗೆ ಅವರ ಹೃದಯಗಳೂ ಒಡೆದು ಹೋಗಿದ್ದವು. ಅದರೊಂದಿಗೇ ಅವರ ಬದುಕೂ ಕುಸಿದು ಬಿದ್ದಿತ್ತು. ಆ ನೀರಿನ ಟ್ಯಾಂಕಿನ ಅವಶೇಷಗಳ ಕೆಳಗೆ ನಲುಗಿ ಹೋಗಿ ಪ್ರಾಣ ಕಳೆದುಕೊಂಡವರಲ್ಲಿ ಆ ಮಕ್ಕಳ ತಂದೆ ಕೂಡ ಒಬ್ಬ....ನಡೆದದ್ದೇನೆಂದು ಗೊತ್ತು ! ನಡೆಯಲಿರುವುದೇನೆಂದು ಮಾತ್ರ ತಿಳಿಯದು. ತಂದೆ ರಿಕ್ಷಾ ಎಳೆಯುತ್ತಿದ್ದವನು. ತಾಯಿ ರೋಗಿಷ್ಟೆ. ಯಾವ ಕೆಲಸವನ್ನೂ ಮಾಡಲಾರಳು. ಹಠಾತ್ತನೆ ಆಧಾರವಿಲ್ಲದಂತಾದ ತಮ್ಮ ಜೀವನ ಏನಾಗಲಿದೆಯೋ ತಿಳಿಯದು. ಈಗ ಅವರ ಬದುಕು ಏನಾಗಲಿದೆ ? ಆ ತಾಯಿ ಮಾತಾಡಲಾರಳು. ಮಾತಾಡಲು ಅವಳ ಹತ್ತಿರ ಮಾತುಗಳಿಲ್ಲ. ಶಕ್ತಿ ಮೊದಲೇ ಇಲ್ಲ. ನಿಜ ! ನಾಳೆಯಿಂದ ಮಗನೇ ರಿಕ್ಷಾ ಎಳೆಯಬೇಕು. ಆದರೆ ಅಷ್ಟು ಚಿಕ್ಕವನಿಗೆ ಎಳೆಯಲು ರಿಕ್ಷಾ ಬಾಡಿಗೆಗೆ ಯಾರು ಕೊಡುತ್ತಾರೆ ? ಟ್ಯಾಂಕ್ ಒಡೆದ ದಿನ ಪೊಲೀಸರೊಂದಿಗೆ ರಾಜಕೀಯ ನಾಯಕರೇನೋ ತುಂಬಾ ಜನರೇ ಬಂದಿದ್ದರು. ಮತ್ತೇನು ಪರವಾಗಿಲ್ಲವೆಂದೂ,

ಭಯಪಡಬೇಕಾದ ಅಗತ್ಯವಿಲ್ಲವೆಂದೂ ಸರಕಾರದ ವತಿಯಿಂದ ನಷ್ಟ ಪರಿಹಾರ ಬರುವಂತೆ ತಾವು ನೋಡಿಕೊಳ್ಳುತ್ತೇನೆಂದೂ ಪೊಳ್ಳು ಭರವಸೆ ಕೊಟ್ಟು ಹೊರಟುಹೋದರು. ಮತ್ತೆ ಇತ್ತ ಕಡೆ ಇಣುಕಿಯೂ ನೋಡಲಿಲ್ಲ. ಪತ್ರಿಕೆಗಳಲ್ಲಿ ಈ ದುರ್ಘಟನೆಯ ವಿವರಗಳೂ, ರಾಜಕೀಯ ನಾಯಕರ ಮೊಸಳೆ ಕಣ್ಣೀರಿನ ಚಿತ್ರಗಳೂ ಮಾತುಗಳೂ ತೃಪ್ತಿಕರವಾಗಿ ಬಂದವು.

"ಅಮ್ಮಾ ನಾಳೆಯಿಂದ ನಾನು ರಿಕ್ಷಾ ಎಳೀತೀನಿ ! ನೀನ್ಹೋಗಿ ಸೇಟ್‌ನೊಂದಿಗೆ ಮಾತಾಡಮ್ಮ" ಆ ಹುಡುಗ ಮತ್ತೊಂದು ಸಲ ನುಡಿದ. ಅವನು ತಲೆ ಮೇಲೆತ್ತಿ ತಾಯಿಯ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದ. ಹಠಾತ್ತನೆ ಹೊರಗಿನಿಂದ ಯಾವುದೋ ಶಬ್ದ ಕೇಳಿಸಿತು ಅವರು ಬೆಚ್ಚಿಬಿದ್ದು ಆ ಕಡೆ ನೋಡಿದರು. ಬಾಗಿಲೊಳಗಿನಿಂದ ಯಾವುದೋ ವಸ್ತು ಹಾರಿ ಬಂದು ಸರಿಯಾಗಿ ಅವರ ಕಾಲ ಹತ್ತಿರ ಬಿತ್ತು. ಆ ಹುಡುಗ ತಟಕ್ಕನೆದ್ದು ಆಶ್ಚರ್ಯದಿಂದ ಆ ವಸ್ತುವನ್ನು ಕೈಗೆತ್ತಿಕೊಂಡ. ಅದೊಂದು ಪಾಕೆಟ್! ಭಾರವಾಗಿತ್ತು. ಆ ಹುಡುಗ ಬಾಗಿಲ ಬಳಿ ಓಡಿ ಆ ಪಾಕೆಟ್ ಅನ್ನು ಒಳಗೆಸೆದವರ್‍ಯಾರೆಂದು ನೋಡಲು ಹೋದ. ಯಾರೂ ಕಾಣಿಸಲಿಲ್ಲ ಮತ್ತೆ ಶೆಡ್‌ನೊಳಕ್ಕೆ ನಡೆದು ಆ ಪಾಕೆಟ್ ಸುತ್ತಲೂ ಇದ್ದ ರಬ್ಬರ್ ಬಾಂಡ್‌ಗಳನ್ನು ತೊಲಗಿಸಿ, ಸರಸರನೆ ಮೇಲಿದ್ದ ಕವರ್ ಎಳೆದು ಒಳಗೆ ನೋಡಿದ ಒಂದೇ ಸಾರಿಗೆ ಕಣ್ಣರಳಿಸಿ ವಿಸ್ಮಯದಿಂದ ಸಣ್ಣಗೆ ಕೂಗು ಹಾಕಿದ. "ಅಮ್ಮಾ ! ದುಡ್ಡು........ದುಡ್ಡು!" ಒಂದೇ ಹೆಜ್ಜೆಗೆ ತಾಯಿಯನ್ನು ಸಮೀಪಿಸಿದ. "ಅಮ್ಮಾ ನೋಡು........ದುಡ್ಡು.... ದುಡ್ಡು....!" ಕೈಯಲ್ಲಿನ ನೋಟುಗಳ ಕಟ್ಟನ್ನು ತಾಯಿಗೆ ತೋರಿಸುತ್ತಾ ಹೇಳಿದ

ಅವಳು ನಂಬಲಾಗದವಳಂತೆ ನೋಡುತ್ತಾ ಮಗನ ಕೈಯಿಂದ ಕಟ್ಟನ್ನು ತನ್ನ ಕೈಗೆ ತೆಗೆದುಕೊಂಡಳು. ಉಳಿದ ಇಬ್ಬರು ಮಕ್ಕಳು ಹಿಗ್ಗಿನಿಂದ ತಾಯಿಯ ಪಕ್ಕಕ್ಕೆ ಸೇರಿದರು.

ಆ ನಾಲ್ವರಿಗೂ ತಾವು ನೋಡುತ್ತಿರುವುದು ಕನಸೋ-ನನಸೋ ಅರ್ಥವಾಗಲಿಲ್ಲ. ಕೈಯಲ್ಲಿರುವುದು ಕರೆನ್ಸಿ ನೋಟುಗಳ ಕಟ್ಟು ಎನ್ನುವ ವಿಷಯವನ್ನೇ ನಂಬಲಾಗುತ್ತಿದ್ದಿಲ್ಲ. ಎಲ್ಲಾ ನೂರು ರೂಪಾಯಿಗಳ ನೋಟುಗಳು. ದಪ್ಪವಾಗಿದ್ದ ಆ ಕಟ್ಟಿನಲ್ಲಿ ಒಟ್ಟು ಎಷ್ಟು ದುಡ್ಡಿದೆಯೋ ಅವರಿಗೇ ತಿಳಿಯದು. ಅಷ್ಟು ದುಡ್ಡನ್ನು ತಮ್ಮ ಜೀವನದಲ್ಲಿ ಒಂದು ಸಲವಾದರೂ ಕಣ್ಣಿಂದ ನೋಡಿರಲಿಲ್ಲ.

"ಇದು....ಇದು....ದುಡ್ಡೇನಾ ?" ಅಯೋಮಯದಿಂದ ಆ ಕಟ್ಟಿನ

ಕಡೆ ನೋಡುತ್ತಾ ಅಸ್ಪಷ್ಟವಾಗಿ ಗೊಣಗಿದಳವಳು.

"ದುಡ್ಡಮ್ಮಾ! ನಿಜವಾಗ್ಲೂ ದುಡ್ಡೇ! ಎಲ್ಲಾ ನೂರು ರೂಪಾಯಿಗಳ ನೋಟುಗಳು!" ತಾಯಿಯ ಕೈಯಿಂದ ಮತ್ತೆ ಆ ಕಟ್ಟನ್ನು ತನ್ನ ಕೈಗೆತ್ತಿಕೊಳ್ಳುತ್ತಾ ಆ ಹುಡುಗ ನುಡಿದ.

ಕಣ್ಣರಳಿಸಿ ಆ ಕಟ್ಟನ್ನು ಅತ್ತ-ಇತ್ತ ತಿರುಗಿಸಿ ನೋಡುತ್ತಿದ್ದ ಆ ಹುಡುಗ ಇದ್ದಕ್ಕಿದ್ದಂತೆ ನಿಲ್ಲಿಸಿದ. ಕಟ್ಟನೊಳಗೆ ಯಾವುದೋ ಚಿಕ್ಕ ಕಾಗದವನ್ನು ಸಿಕ್ಕಿಸಲಾಗಿತ್ತು. ಒಳಗೆ ಕೆಲವು ವಾಕ್ಯಗಳು ಬರೆಯಲ್ಪಟ್ಟಿದ್ದವು. ಆ ಹುಡುಗನಿಗೆ ಓದಲು ಬರುತ್ತಿತ್ತು. ಆ ಚೀಟಿಯಲ್ಲಿ ಬರೆದಿರುವುದೇನೆಂದು ತಾಯಿಗೆ ಕೇಳಿಸುವಂತೆ ಜೋರಾಗಿ ಓದಿದ.

"ರಿಕ್ಷಾ ಕೊಂಡುಕೊಳ್ಳಿ. ಒಂದಲ್ಲ-ನಾಲ್ಕು ಕೊಂಡುಕೊಳ್ಳಿ-ದೇವ."

ಆ ಹುಡುಗ ತಲೆ ಮೇಲೆತ್ತಿ ಏನೂ ಅರ್ಥವಾಗದವನಂತೆ ತಾಯಿಯ ಕಡೆ ನೋಡಿದ. ಅವಳೂ ಕೂಡ ಅವನ ಕಡೆ ಕಣ್ಣರಳಿಸಿ ನೋಡುತ್ತಿದ್ದಳು.

ದೇವ........! ಯಾರು ಆ ದೇವ?

ಅವನು ಆನಂದದಿಂದ ಚಿಕ್ಕ ಹುಡುಗನಂತೆ ಕುಣಿದಾಡುತ್ತಾ ಹೋಗುತ್ತಿದ್ದ. ಅವನ ಭುಜದ ಮೇಲೆ ಇದ್ದ ಹಳೇಯ ಸೀರೆ ಈಗ ಖಾಲಿಯಾಗಿ ನೇತಾಡುತ್ತಿತ್ತು. ಅದರಲ್ಲಿದ್ದ ದುಡ್ಡನ್ನೆಲ್ಲ ಹಂಚಿದ್ದ-ಎಲ್ಲರಿಗೂ ಹಂಚಿದ್ದ. ಅದೇ ಅವನ ಆನಂದಕ್ಕೆ ಕಾರಣ.

ತುಂಬಾ ಕತ್ತಲಾಗಿತ್ತು. ರಸ್ತೆಯ ಮೇಲೆ ಜನ ಹೆಚ್ಚಿರಲಿಲ್ಲ. ತಲೆ ಬೋಳಿಸಿಕೊಂಡು ಹುಚ್ಚನಂತೆ ಕಾಣಿಸುತ್ತಾ ಕುಣಿಯುತ್ತಾ ಹೋಗುತ್ತಿದ್ದ ಆ ಅನಾಮಿಕನನ್ನು ಯಾರೂ ಹಚ್ಚಿಕೊಳ್ಳಲಿಲ್ಲ. ಕೊಂಚ ಹೊತ್ತಿನ ಕೆಳಗೆಯೇ ಐದು ಲಕ್ಷ ರೂಪಾಯಿಗಳನ್ನು ಆ ಪ್ರದೇಶದಲ್ಲಿ ನೊಂದವರಿಗೆ ರಹಸ್ಯವಾಗಿ ಹಂಚಿ ಕನಿಷ್ಟ ತಾನು ಯಾರೆಂಬುದನ್ನಾದರೂ ಅವರಿಗೆ ತಿಳಿಯಪಡಿಸದೆ ಅನಾಮಿಕನಾಗಿ ಹಿಂದಿರುಗಿ ಬರುತ್ತಿದ್ದ ದೇವ ಈತನೇ ಎಂದರೆ ಯಾರೊಬ್ಬರೂ ನಂಬುತ್ತಿರಲಿಲ್ಲ

## ೧೬

ಶ್ರೀನಗ ದಲ್ಲಿ ಇಂಡಿಯನ್ ಏರ್‌ಲೈನ್ಸ್ ವಿಮಾನದಿಂದ ಇಳಿಯುತ್ತಲೇ ಮೋಖಲೆ ಟ್ಯಾಕ್ಸಿಯಲ್ಲಿ ಲೇಕ್ ವ್ಯೂ ಹೋಟೆಲ್ ತಲುಪಿದಳು.

ರಿಸೆಪ್ಷನ್‌ನಲ್ಲಿ ತನ್ನ ಹೆಸರು ಹೇಳಿದೊಡನೆ ರಿಸೆಪ್ಷನಿಸ್ಟ್ ಮುಗುಳ್ನಗೆಯಿಂದ ಅವಳಿಗೆ ಸ್ವಾಗತ ಹೇಳಿ ಅವಳಿಗೋಸ್ಕರ ರಿಸರ್ವ್ ಮಾಡಿದ ಸೂಟ್ ನಂಬರ್ ಹೇಳಿದ. ಮೇಖಲೆ ಇದಕ್ಕೆ ಮೊದಲು ಅನೇಕ ಬಾರಿ ಆ ಹೋಟೆಲ್‌ನಲ್ಲಿಯೇ ಇಳಿದುಕೊಂಡಿದ್ದಳು. ಹೆಚ್ಚು-ಕಡಿಮೆ ಪ್ರತಿಸಲವೂ ಅವಳಿಗೋಸ್ಕರ ಆ ಸೂಟ್ ಅನ್ನೇ ಬುಕ್ ಮಾಡಲಾಗುತ್ತಿತ್ತು.

ಅವಳಿಗೆ ಸಂಬಂಧಪಟ್ಟ ಮಟ್ಟಿಗೆ ಲೇಕ್ ವ್ಯೂ ಹೋಟೆಲ್‌ನಲ್ಲಿನ ಅತ್ಯುತ್ತಮ ಸೂಟ್ ಅದು. ಆ ಸೂಟ್‌ನಲ್ಲಿ ತುಂಬಾ ಪ್ರೈವೆಸಿ ಸಿಗುತ್ತಿತ್ತು. ಉಳಿದ ಸೂಟ್‌ಗಳಿಂದ ಬೇರೆಯಾಗಿ ದೂರವಾಗಿರುವುದರಿಂದ ಇತರರ ದೃಷ್ಟಿಗೆ ಬೀಳದಂತೆ ಇರಬಹುದು. ತನ್ನಂತಹ ಕಾಲ್‌ಗರ್ಲ್ ಜನರ ಮುಂದೆ ಹೆಚ್ಚಿಗೆ ಎಕ್ಸ್‌ಪೋಸ್ ಆಗಕೂಡದು. ಅಂತಹ ಪ್ರತ್ಯೇಕವಾದ ಸೂಟ್ ಹೆಚ್ಚು ಕಡಿಮೆ ಎಲ್ಲಾ ಫೈವ್‌ಸ್ಟಾರ್ ಹೋಟೆಲ್‌ಗಳಲ್ಲಿಯೂ ಇರುತ್ತವೆ. ಪ್ರಖ್ಯಾತ ಸಿನಿಮಾ ಸ್ಟಾರ್‌ಗಳೂ ಇತರ ಸೆಲೆಬ್ರಿಟಿಗಳೂ ಮಾಮೂಲಿ ಯಾಂತ್ರಿಕ ಜೀವನದಿಂದ ತಪ್ಪಿಸಿಕೊಂಡು ಬಂದು ಪ್ರಶಾಂತವಾಗಿ ಕೆಲಕಾಲ ಜನಗಳಿಗೆ ದೂರವಾಗಿ ಕಳೆಯಬೇಕೆಂದುಕೊಂಡಾಗ ಅಂತಹ ಸೂಟ್‌ಗಳಲ್ಲಿಯೇ ಇಳಿದುಕೊಳ್ಳುತ್ತಾರೆ. ಅವುಗಳ ರೇಟು ಕೂಡ ಜಾಸ್ತಿಯಾಗಿಯೇ ಇರುತ್ತದೆ. ಮೇಖಲೆಗೋಸ್ಕರ ಬುಕ್‌ಮಾಡಿದ ಆ ಸೂಟ್ ವಿಶಾಲವಾದುದು. ಬೆಡ್‌ರೂಮಿನಲ್ಲಿ ಕಿಟಕಿಯ ತೆರೆಗಳನ್ನು ಸರಿಸಿದರೆ ಹೊರಗೆ ಅಂದವಾದ ಲೇಕ್ ಕಾಣಿಸುತ್ತದೆ. ಶ್ರೀನಗರ ಅಂತಹ ಅಂದವಾದ ಕಾಲುವೆಗಳಿಗೆ ಪ್ರಸಿದ್ಧಿ ಪಡೆದಿದೆ. ಅಲ್ಲಿ ಲೇಕ್ ಬೋಟ್ಸ್‌ನಲ್ಲಿ ಕಾಲ ಕಳೆಯಲು, ಕಾಶ್ಮೀರ ನೋಡಲು ಪ್ರಪಂಚದ ನಾಲ್ಕೂ ಮೂಲೆಗಳಿಂದ ಬಂದ ಟೂರಿಸ್ಟ್‌ಗಳು ತುಂಬಾ ಉತ್ಸಾಹ ತೋರಿಸುತ್ತಿರುತ್ತಾರೆ. ಸೂಟ್‌ಗೆ ಪ್ರವೇಶಿಸುತ್ತಲೆ ಮೇಖಲೆ ಸ್ನಾನಮಾಡಿ ಬಟ್ಟೆ ಬದಲಾಯಿಸಿಕೊಂಡು ತೆಳ್ಳನೆಯ ಹೌಸ್ ಗೌನ್ ತೊಟ್ಟುಕೊಂಡಳು. ಅದರೊಳಗಿನಿಂದ ಅವಳ ಮೈಯ ಉಬ್ಬು ತಗ್ಗುಗಳು ಗೋಚರಿಸುತ್ತಾ ನೋಡುವ ಗಂಡಸರ ತಲೆ ಕೆಡಿಸುವಂತಿದ್ದವು. ಹೌಸ್‌ಗೌನ್‌ನಲ್ಲಿಯೇ ಅವಳು ಕಿಂಗ್ ಸೈಜ್ ಬೆಡ್ ಮೇಲೆ ವಿಲಾಸದಿಂದ ನಡುವಾಲಿಸಿ ಉದ್ದವಾದ ತನ್ನ ಬೆರಳುಗಳಿಂದ ಟೆಲಿಫೋನ್ ರಿಸೀವರ್ ಎತ್ತಿಕೊಂಡಳು. ಮೇಖಲೆ ತನಗೆ ತಾನು ಕೊಟ್ಟುಕೊಂಡ ಟ್ರೈನಿಂಗ್ ಅದು. ಒಂಟಿಯಾಗಿರುವಾಗ ಕೂಡ ತನ್ನ ಪ್ರತಿ ಚಲನೆಯಲ್ಲೂ ಮಿಂಚು ಹೊಡೆಯುವಂತೆ ತನ್ನ ಶರೀರಕ್ಕವಳು ತುಂಬಾ ತರಬೇತಿ ಕೊಟ್ಟಿದ್ದಳು. ಹಾಗೆ ಮಾಡಿದ್ದರಿಂದಲೇ ಗಂಡಸರ ಹೃದಯವನ್ನು ಹಿಂಡಿಹಾಕುವ

ಅವಳ ಚಲನವಲನಗಳು ಕೃತ್ರಿಮವಾಗಿರದೆ ಅತಿ ಸಹಜವಾಗಿರುತ್ತವೆ.

"ಹಲೋ ಆಪರೇಟರ್! ಗೆಟ್ ಮಿ ದಿ ಮ್ಯಾನೇಜರ್!" ಅವಳ ಕಂಠ ಮಾಧುರ್ಯಕ್ಕೆ ಆ ಹೋಟೆಲ್‌ನಲ್ಲಿನ ಟೆಲಿಫೋನ್ ಆಪರೇಟರ್ ಮುಗ್ಧಳಾದಳ. ಅಂತಹ ದುಬಾರಿ ಹೋಟೆಲ್‌ಗಳಲ್ಲಿ ಕೆಲಸ ಮಾಡುವ ಆಪರೇಟರ್‌ಗಳ ಧ್ವನಿಗಳು ತುಂಬಾ ಮಧುರವಾಗಿರುತ್ತವೆ ಲೈನ್ ಮೇಲೆ ಮೇಖಲೆ ಹೇಳಿದ ಆ ಎರಡು ಮಾತುಗಳು ಆ ಆಪರೇಟರ್‌ಗೆ ಕೋಗಿಲೆ ಗಾನದಂತೆ ಕೇಳಿಸಿತು.

"ಮೈಗಾಡ್! ಎಂತಹ ಮಧುರ ಧ್ವನಿ. ತನ್ನ ಕಂಠ ಕೂಡ ಲೈನ್ ಮೇಲೆ ಅಷ್ಟು ಇಂಪಾಗಿ ಕೇಳಿಸುವಂತೆ ಯಾವತ್ತಾದರೂ ಟ್ರೈನಿಂಗ್ ಕೊಡಬೇಕು. ಟ್ರೈನಿಂಗ್ ಇಲ್ಲದೆಯೇ ಆ ಧ್ವನಿ ಅಷ್ಟು ಇಂಪಾಗಿ ಲೈನ್ ಮೇಲೆ ಕೇಳಿಸಲು ಅವಕಾಶವಿಲ್ಲವೆಂದು ಪ್ರೊಫೆಷನಲ್ ಆದ್ದರಿಂದ ಆ ಆಪರೇಟರ್ ಗ್ರಹಿಸಲು ಶಕ್ತಳಾದಳು.

ಮೇಖಲೆ ಗಂಡಸರ ಮೇಲೆ ಪ್ರಯೋಗಿಸುವ ಸಮ್ಮೋಹನಾಸ್ತ್ರಗಳಲ್ಲಿ ಆ ಕಂಠ ಮಾಧುರ್ಯ ಕೂಡ ಒಂದು. ಆ ಧ್ವನಿ ಕಿವಿಗೆ ಬಿದ್ದರೆ ಪ್ರವರಾಖ್ಯನಾದರೂ ಆ ಧ್ವನಿಯ ಒಡತಿಯ ಪಾದಗಳಿಗೆ ತನ್ನ ಹೃದಯ ಅರ್ಪಿಸಬೇಕಾದುದೇ.

"ಜಸ್ಟ್ ಎ ಮಿನಿಟ್!" ತನ್ನ ಧ್ವನಿ ಕೂಡ ಅಷ್ಟೇ ಇಂಪಾಗಿ ಧ್ವನಿಸಲು ಪ್ರಯಾಸ ಪಡುತ್ತಾ ಆಪರೇಟರ್ ಆ ಲೈನ್ ಅನ್ನು ಮ್ಯಾನೇಜರ್ ಕೋಣೆಗೆ ಕನೆಕ್ಟ್ ಮಾಡಿದಳು.

ಕ್ಷಣಗಳಲ್ಲಿ ಮ್ಯಾನೇಜರ್‌ನ ಧ್ವನಿ ಟೆಲಿಫೋನ್‌ನಲ್ಲಿ ಮರ್ಯಾದೆ ಪೂರ್ವಕವಾಗಿ ಮೇಖಲೆಗೆ ಕೇಳಿಸಿತು. "ಎಸ್ ಪ್ಲೀಸ್? ವಾಟ್ ಕೆನ್ ಐ ಡೂ ಫಾರ್ ಯು?"

"ಮ್ಯಾನೇಜರ್! ಇದು ಮರ್ಯಾದಸ್ಥರು ಇಳಿದುಕೊಳ್ಳುವಹೋಟೆಲೆ?" ಬೇಸರ ಪ್ರದರ್ಶಿಸುತ್ತಾ ನುಡಿದಳು ಮೇಖಲೆ.

ಅಷ್ಟು ಇಂಪಾದ ಧ್ವನಿಯಿರುವ ಯುವತಿ ಅಕಸ್ಮಾತ್ತಾಗಿ ಆ ಮಾತು ಕೇಳಿದ್ದರಿಂದ ಮ್ಯಾನೇಜರ್ ಗಾಬರಿಯಾದ. "ಏನಾಯ್ತು ಮಿಸ್! ನಮ್ಮ ಹೋಟೆಲ್‌ನಲ್ಲಿ ನಿಮಗೆ ಸರಿಯಾದ ರಿಸೆಪ್ಷನ್ ಲಭಿಸಲಿಲ್ವೆ?" ಕೇಳಿದ.

"ಆಫ್‌ಕೋರ್ಸ್! ರಿಸೆಪ್ಷನ್ ವಿಷಯದಲ್ಲಿ ನಿಮ್ಮ ಹೋಟೆಲ್ ಮೇಲೆ ನನ್ನ ಕಂಪ್ಲೇಂಟ್ ಇಲ್ಲ. ಎಕ್ಸಲೆಂಟ್ ರಿಸೆಪ್ಷನ್. ನಾನ್ಯಾವಾಗ ಶ್ರೀನಗರಕ್ಕೆ ಬಂದರೂ ಈ ಹೋಟೆಲ್‌ನಲ್ಲಿಯೇ ರೂಮು ಬುಕ್ ಮಾಡ್ತೀನಿ."

ಮ್ಯಾನೇಜರ್ ಹಗುರವಾಗಿ ಉಸಿರೆಳೆದುಕೊಂಡು ಮತ್ತಷ್ಟು ಮರ್ಯಾದೆಯಿಂದ ಕೇಳಿದ–"ನಮ್ಮ ಹೋಟೆಲ್ ಮೇಲಿನ ನಿಮ್ಮ ಅಭಿಮಾನಕ್ಕೆ ಕೃತಜ್ಞ. ನಿಮ್ಮ ಸಮಸ್ಯೆ ಏನೆಂದು ಹೇಳಿದರೆ....?"

"ಹೇಳಿದೆನಲ್ಲ, ನಿಮ್ಮ ಹೋಟೆಲ್‌ನೊಂದಿಗೆ ನನಗ್ಯಾವ ಸಮಸ್ಯೆಯೂ ಇಲ್ಲ. ಸಮಸ್ಯೆಯೆಲ್ಲಾ ನಿಮ್ಮ ಹೋಟೆಲಿನ ಲಾಬಿಯಲ್ಲಿ ಕುಳಿತುಕೊಂಡಿರುವ ಒಬ್ಬ ಯುವಕನಿಂದಲೇ! ರೋಡ್ ಸೈಡ್ ರೋಮಿಯೋಗಳಿಗೆ ನಿಮ್ಮ ಹೋಟೆಲ್‌ನಲ್ಲಿ ಅಕಾಮಡೇಶನ್ ಕೊಡ್ತೀರಾ?"

"ನೆವರ್ ಮಿಸ್, ನೆವರ್! ನಿಮ್ಮನ್ನು ಇಬ್ಬಂದಿಗೀಡು ಮಾಡಿದ ಆ ವ್ಯಕ್ತಿ ಯಾರೆಂದು ಹೇಳಿದರೆ ತಕ್ಷಣವೇ ಅವನನ್ನು ಹೋಟೆಲ್‌ನಿಂದ ಹೊರ ತಳ್ಳಿಸ್ತೀನಿ. ಅಂತಹವರಿಗೆ ನಮ್ಮ ಹೋಟೆಲ್‌ನಲ್ಲಿ ಅಕಾಮಡೇಶನ್ ಕೊಡೋ ಪ್ರಸಕ್ತಿಯೇ ಇಲ್ಲ."

"ಅವನು ಯಾರೆಂದು ನನಗೆ ಹೇಗೆ ಗೊತ್ತಾಗಬೇಕು? ಏರ್‌ಪೋರ್ಟ್ ಹತ್ತಿರದಿಂದ ನನ್ನನ್ನು ಹಿಂಬಾಲಿಸುತ್ತಾ ಬರುತ್ತಿದ್ದಾನೆ. ಸದ್ಯಕ್ಕೆ ನಿಮ್ಮ ಹೋಟೆಲ್ ಲಾಬಿಯಲ್ಲಿ ಕುಳಿತುಕೊಂಡಿದ್ದಾನೆ. ಬಹುಶಃ ನನ್ನನ್ನು ಮತ್ತಷ್ಟು ಇಬ್ಬಂದಿಗೀಡು ಮಾಡಲು ಈ ಹೋಟೆಲ್‌ನಲ್ಲಿಯೇ ಅಕಾಮಡೇಶನ್ ಗೋಸ್ಕರ ಪ್ರಯತ್ನಿಸುತ್ತಿರಬಹುದು. ಗ್ರೇ ಕಲರ್ ಫುಲ್ ಸೂಟಿನಲ್ಲಿದ್ದಾನೆ. ಬ್ಲಾಕ್ ಟೈ ಕಟ್ಟಿಕೊಂಡಿದ್ದಾನೆ. ಕಣ್ಣುಗಳಿಗೆ ಸನ್ ಗ್ಲಾಸೆಸ್ ಹಾಕಿಕೊಂಡಿದ್ದಾನೆ. ಕೈಯಲ್ಲಿ ಕಪ್ಪು ಬ್ರೀಫ್‌ಕೇಸ್ ಇದೆ. ಬೆಳ್ಳಗೆ ಯೂರೋಪಿಯನ್‌ನಂತೆ ಕಾಣಿಸುತ್ತಾನೆ. ಆದರೆ ಯೂರೋಪಿಯನ್ ಅಲ್ಲ. ಇಷ್ಟು ಗುರುತುಗಳು ಸಾಕೆಂದುಕೊಳ್ತೀವಿ."

"ಸಾಕು! ತಕ್ಷಣವೇ ನಮ್ಮ ಹೌಸ್ ಡಿಟೆಕ್ಟಿವ್‌ನನ್ನು ಕಳಿಸಿ ಅವನಿಗೆ ಬುದ್ಧಿ ಕಲಿಸೋ ಏರ್ಪಾಡು ಮಾಡ್ತೀನಿ. ಮೇಕ್ ಯುವರ್‌ಸೆಲ್ಫ್ ಕಂಫರ್ಟಬಲ್ ಮಿಸ್! ಈ ರೋಮಿಯೋನಿಂದಾಗಿ ಮತ್ತೆ ಇಬ್ಬಂದಿಯುಂಟಾಗದಂತೆ ನಾವು ನೋಡಿ ಕೊಳ್ತೀನಿ."

ಮೇಖಲೆ ರಿಸೀವರ್ ಕೆಳಗಿಟ್ಟು ತುಂಟತನದಿಂದ ನಕ್ಕಳು. ವೆಲ್ ಮಿಸ್ಟರ್ ಚಾನಿವಾಕರ್! ನೀನು ನನ್ನನ್ನು ಹಿಂಬಾಲಿಸುತ್ತಿರುವೆಯೆಂದು ನನಗೆ ತುಂಬಾ ಚೆನ್ನಾಗಿ ಗೊತ್ತು. ಪ್ರಿಪೇರ್ ಯುವರ್‌ಸೆಲ್ಫ್ ಫಾರ್ ಎ ಲಿಟಲ್ ಷಾಕ್! ಅವಳು ನಗುತ್ತಲೇ ಹಾಸಿಗೆಯ ಮೇಲೆ ಮೋಜಿನಿಂದ ಅತ್ತಲಿಂದಿತ್ತ ಹೊರಳಾಡಿದಳು. ಸರಿಯಾಗಿ ಅದೇಸಮಯದಲ್ಲಿ ಕಾಲಿಂಗ್ ಬೆಲ್ ಮೊಳಗಿದ ಶಬ್ದ ಕೇಳಿಸಿತು.

"ನಾನ್‌ಸೆನ್ಸ್! ನಾನು ಹುಡುಗಿಯರನ್ನು ಹಿಂಬಾಲಿಸುವುದೆಂದರೇನು?! ಮತ್ತೊಂದ್ಸಲ ಆ ಮಾತು ಹೇಳಿದಿರೆಂದರೆ ನಿಮ್ಮ ಮೇಲೆ ಕೋರ್ಟಿನಲ್ಲಿ ದಾವ ಹಾಕಬೇಕಾಗುತ್ತದೆ"-ಕೋಪದಿಂದ ನುಡಿದ ಜಾನಿವಾಕರ್.

ಹೋಟೆಲ್ ಮ್ಯಾನೇಜರ್ ಅವರನ್ನು ಬೇಸರದಿಂದ ನೋಡಿದ. "ನೋಡಿ ಮಿಸ್ಟರ್! ನೀವ್ಯಾರೋ ನಂಗೊತ್ತಿಲ್ಲ. ಆದರೆ ಒಂದು ಮಾತ್ರ ಗೊತ್ತು ! ಇಪ್ಪತ್ತು ವರ್ಷಗಳಿಂದ ನಾನು ಹೋಟೆಲ್ ಮ್ಯಾನೇಜ್‌ಮೆಂಟ್ ಮಾಡ್ತಿದೀನಿ. ಈ ಇಪ್ಪತ್ತು ವರ್ಷಗಳಲ್ಲಿ ನಿಮ್ಮಂತಹ ನೂರಾರು ಜನರನ್ನು ನೋಡಿದೀನಿ. ನೀವು ಬೆಲೆಬಾಳುವ ಸೂಟ್ ಹಾಕ್ಕೋತೀರಿ, ದುಬಾರಿ ಕಾರುಗಳಲ್ಲಿ ಬರುತ್ತೀರಿ· ತಾಯಿ-ತಂದೆಗಳು ಸಂಪಾದಿಸಿದ ದುಡ್ಡು ನಿಮ್ಮ ಹಿಂದೆ ಸಾಕಷ್ಟು ಬಿದ್ದು ಮುಲುಗುತ್ತಿರುತ್ತದೆ. ನೀವೆಲ್ಲಾ ವಿಲಾಸವನ್ನು ಬಯಸಿ ಅಂದವಾದ ಯುವತಿಯರ ಬೇಟೆಯಲ್ಲಿ ಕಾಶ್ಮೀರದಂತಹ ದೊಡ್ಡ ಟೂರಿಸ್ಟ್ ಸೆಂಟರ್‌ಗಳಿಗೆ ಬರುತ್ತೀರಿ. ನಿಮ್ಮಂತಹವರಿಗೆ ತುಂಬಾ ಹೋಟೆಲ್‌ಗಳಲ್ಲಿ ಅಕಾಮಡೇಶನ್ ಸಿಗುತ್ತದೆ. ಆದರೆ ಇಲ್ಲಿ ಮಾತ್ರ ಅಲ್ಲ. ಇದು ಮರ್ಯಾದಸ್ಥರು ಇಳಿದುಕೊಳ್ಳೋ ಹೋಟೆಲು!"

ಜಾನಿವಾಕರ್‌ನ ಮುಖ ಕೆಂಪೇರಿತು. "ನಾನು ಅಂತಹವನೆನ್ನುವುದಕ್ಕೆ ಸಾಕ್ಷ್ಯ?" ತೀವ್ರವಾಗಿ ಕೇಳಿದ

"ಸಾಕ್ಷ್ಯವಿಲ್ಲದೇನು? ತುಂಬಾ ಇದೆ! ನೀವೊಬ್ಬ ಯುವತಿಯನ್ನು ಏರ್‌ಪೋರ್ಟಿನಿಂದ ಹಿಂಬಾಲಿಸಿ ಇಲ್ಲಿಗೆ ಬಂದಿದೀರಿ. ಆ ಯುವತಿಯನ್ನು ಪೀಡಿಸುವುದಕ್ಕೋಸ್ಕರವೇ ಇಲ್ಲಿ ಅಕಾಮಡೇಶನ್‌ಗೋಸ್ಕರ ಪ್ರಯತ್ನಿಸ್ತಿದೀರಿ. ಸಾಕಾ?"

ಜಾನಿವಾಕರ್ ಬೆಚ್ಚಿಬಿದ್ದ. ಮೇಖಲೆ! ತಾನು ಅವಳನ್ನು ಹೈದರಾಬಾದ್‌ನಿಂದ ಹಿಂಬಾಲಿಸುತ್ತಾ ಇಲ್ಲಿಯವರೆಗೆ ಬಂದಿರುವುದನ್ನು ಮೇಖಲೆ ಗ್ರಹಿಸಿದಳೆಂದಾಯ್ತು! ಅವನು ಮನಸ್ಸಿನಲ್ಲಿಯೇ ಅವಳನ್ನು ಪ್ರಶಂಸಿಸದೆಯೇ ಇರಲಾಗಲಿಲ್ಲ. ಪ್ರಪಂಚದಲ್ಲಿನ ಪರಿಣತ ಗೂಢಚಾರರನ್ನು ಎಷ್ಟು ಮಾತ್ರವೂ ಅನುಮಾನ ಬರದಂತೆ ದಿನಗಟ್ಟಲೆ ಹಿಂಬಾಲಿಸಿದ್ದ. ಅಂತಹುದು ಮೇಖಲೆ ಕೆಲವು ಗಂಟೆಗಳಲ್ಲಿಯೇ ತನ್ನ ಇರವನ್ನು ಕಂಡುಕೊಂಡಳೆಂದರೆ....! ಶಭಾಶ್ ಮೇಖಲೆ! ಹ್ಯಾಟ್ಸ್ ಆಫ್ ಟು ಯೂ!

"ಏನು ಮಿಸ್ಟರ್ ಆಲೋಚಿಸ್ತಿದೀರಿ? ನಿಮ್ಮನ್ನು ನೀವು ಸಮರ್ಥಿಸಿಕೊಳ್ಳಲು ಯಾವುದಾದರೂ ನೆಪ ಹೇಳಬೇಕೆಂದಾ?" ಮ್ಯಾನೇಜರ್ ವ್ಯಂಗ್ಯವಾಗಿ ಕೇಳಿದ.

ಜಾನಿವಾಕರ್ ಆಲೋಚನೆಗಳಿಂದ ಎಚ್ಚೆತ್ತು ಮ್ಯಾನೇಜರ್ ಕಡೆ ನೋಡಿ ಭುಜ ಕುಣಿಸಿದ. "ಆಲ್‌ರೈಟ್! ನಿಮ್ಮ ಆರೋಪವನ್ನು ನಾನು ಒಪ್ಪಿಕೊಳ್ತೀನಿ. ಮರ್ಯಾದೆಯಾಗಿಯೇ ಈ ಹೋಟೆಲ್‌ನಿಂದ ಹೊರಟು ಹೋಗ್ತಿದೀನಿ" ಕುರ್ಚಿಯಿಂದ ಏಳುತ್ತಾ ನುಡಿದ.

ಅವನ ಧ್ವನಿಯಲ್ಲಿ ಅಕಸ್ಮಾತ್ತಾಗಿ ಇಣುಕಿದ ವ್ಯಂಗ್ಯಕ್ಕೆ ಹೋಟೆಲ್ ಮ್ಯಾನೇಜರ್ ಚಕಿತನಾದ.

"ಆದರೆ, ಹೋಗುವ ಮೊದಲು ಒಂದು ಮಾತು", ಮುಗುಳ್ನಗುತ್ತಾ ಅಣಕವಾಗಿ ನೋಡುತ್ತಾ ನುಡಿದ ಜಾನಿವಾಕರ್, "ನಿಮಗೆ ನನ್ನ ಮೇಲೆ ಕಂಪ್ಲೇಂಟ್ ಕೊಟ್ಟ ಯುವತಿ ಯಾರೆಂದು ತಿಳಿಸಕೂಡದೆ? ಆ ಯುವತಿ ಒಬ್ಬ ಕಾಲ್‌ಗರ್ಲ್. ತುಂಬಾ ದುಬಾರಿಯಾದ ಕಾಲ್‌ಗರ್ಲ್. ಬಹುಶಃ ಪ್ರಪಂಚ ದಲ್ಲಿಯೇ ನಂಬರ್ ಒನ್ ಕಾಲ್‌ಗರ್ಲ್ ಇರಬಹುದು. ನಿಮ್ಮದು ಮರ್ಯಾದಸ್ಥರು ಇಳಿದುಕೊಳ್ಳುವ ಹೋಟೆಲ್ ಅಲ್ವೆ ? ಚೆಕ್ ಮಾಡ್ಕೊಳ್ಳಿ ಮತ್ತೆ".

"ಶಟಪ್" ಕೋಪದಿಂದ ನುಡಿದ ಮ್ಯಾನೇಜರ್. "ನಿನ್ನ ಪೋಕರಿತನ ಮುಚ್ಚಿಕೊಳ್ಳಲು ಆ ಯುವತಿಯ ಮೇಲೆ ಕೆಸರೆರಚುವ ಅಗತ್ಯವಿಲ್ಲ. ಆ ಯುವತಿ ಎಂತಹವಳೆಂಬು ನಮಗೆ ಚೆನ್ನಾಗಿ ಗೊತ್ತು. ನಮ್ಮ ಹೋಟೆಲ್‌ಗೆ ಅವಳು ರೆಗ್ಯುಲರ್ ಕಸ್ಟಮರ್".

ಮ್ಯಾನೇಜರ್ ಆ ಮಾತು ಪೂರ್ತಿಗೊಳಿಸುವುದರೊಳಗಾಗಿ ಜಾನಿ ವಾಕರ್ ಬಾಗಿಲ ಹತ್ತಿರವಿದ್ದ. ಬಾಗಿಲು ತೆರೆದುಕೊಂಡು ಹೊರ ಹೋಗುತ್ತಾ ನಿಂತು ಮತ್ತೊಂದು ಸಲ ಹೋಟೆಲ್ ಮ್ಯಾನೇಜರ್ ಕಡೆ ತಿರುಗಿದ. "ನಾನು ನಿಮಗೆ ಹೇಳಿಲ್ಲವೆಂದು ಹೇಳಬೇಡಿ ಮ್ಯಾನೇಜರ್. ಆ ಯುವತಿಯಂತಹ ಕಾಲ್ ಗರ್ಲ್‌ಗೆ ಅಕಾಮಡೇಶನ್ ಕೊಟ್ಟದ್ದಕ್ಕೆ ನಿಮ್ಮ ಹೋಟೆಲ್ ಸ್ಕ್ಯಾಂಡಲ್‌ಗೆ ಗುರಿಯಾಗಬಹುದೇನೋ? ನಂತರ ವಿಚಾರಿಸಿದರೆ ಉಪಯೋಗವಿರದು.ಬರ್ತೀನಿ. ಗುಡ್‌ಬೈ". ಆ ಮಾತು ಹೇಳುತ್ತಲೇ ಜಾನಿವಾಕರ್ ಆ ಕೋಣೆಯಿಂದ ವೇಗ ವಾಗಿ ಹೊರಬಿದ್ದ. ಅವನ ಹಿಂದೆಯೇ ಸ್ಪ್ರಿಂಗ್ ಡೋರ್ ಮುಚ್ಚಿಕೊಂಡು ಕೊಂಚ ಹೊತ್ತು ಅತ್ತ-ಇತ್ತ ಹೊಡೆದುಕೊಂಡಿತು.

ಹೋಟೆಲ್ ಮ್ಯಾನೇಜರ್ ಜಾನಿವಾಕರ್ ಹೋದ ಕಡೆಯೇ ಕೊಂಚ ಹೊತ್ತು ಕಣ್ಣರಳಿಸಿ ನೋಡುತ್ತಿದ್ದುಬಿಟ್ಟ. ನಂತರ ನಿಧಾನವಾಗಿ ಹೋಗಿ ತನ್ನ ರಿವಾಲ್ವಿಂಗ್ ಚೇರ್‌ನಲ್ಲಿ ಕುಳಿತುಕೊಂಡ. "ಬ್ರೂಟ್, ಇಂತಹವರನ್ನು ಪೋಲೀಸರಿಗೆ ಒಪ್ಪಿಸಬೇಕು" ಅವನು ತನ್ನಲ್ಲಿ ತಾನೇ ಗೊಣಗಿಕೊಂಡ.

ಬರಲಿರುವ ಕೆಲವು ದಿನಗಳಲ್ಲಿ ಏನು ನಡೆಯಲಿದೆಯೆಂದು ತಿಳಿದಿದ್ದರೆ ಜಾನಿವಾಕರ್ ಮೇಲೆ ಆ ರೀತಿ ಬೇಸರಿಸಿಕೊಳ್ಳುತ್ತಿದ್ದಿಲ್ಲವೇನೋ?! ಭವಿಷ್ಯದಲ್ಲಿ ಏನು ನಡೆಯಲಿದೆಯೆಂದು ಯಾರು ಊಹಿಸಬಲ್ಲರು?

ಕಾಲಿಂಗ್ ಬೆಲ್ ಮೊಳಗುತ್ತಲೇ ಮೇಖಲೆ ಹೋಗಿ ಬಾಗಿಲು ತೆರೆದಳು. ಎದುರಿಗೆ ಒಬ್ಬ ಮಧ್ಯ ವಯಸ್ಕ ನಿಂತಿದ್ದ ಕುಳ್ಳಗೆ, ದಪ್ಪಗೆ, ಕರ್ರಗಿದ್ದ. ನೋಡುತ್ತಿದ್ದಂತೆಯೇ ದಕ್ಷಿಣದವನೆಂದು ತಿಳಿದು ಹೋಗುತ್ತಿತ್ತು. "ಎಸ್ ಪ್ಲೀಸ್?" ಮೇಖಲೆ ಕೇಳಿದಳು.

"ಜೇಕೇ" ಎಂದ ಅವನು.

"ಕಮಿನ್" ಅವಳು ಪಕ್ಕಕ್ಕೆ ಸರಿದು ದಾರಿ ಬಿಟ್ಟಳು. ಅವನು ನೇರವಾಗಿ ಹೋಗಿ ಒಂದು ಸೋಫಾದಲ್ಲಿ ಕುಳಿತುಕೊಂಡ.ಮೇಖಲೆ ಡೋರ್ ಲಾಕ್ ಮಾಡಿ ಅವನ ಎದುರಿಗೆ ಹೋಗಿ ಕುಳಿತುಕೊಂಡಳು. "ಹೇಳಿ" ಕಾಲಿನ ಮೇಲೆ ಕಾಲು ಹಾಕಿಕೊಳ್ಳುತ್ತಾ ಕೇಳಿದಳು. ಅವಳು ಆ ರೀತಿ ಕಾಲ ಮೇಲೆ ಕಾಲು ಹಾಕಿ ಕೊಂಡಿದ್ದರಿಂದ ಪಾದದ ಮೇಲಿನಿಂದ ಹೌಸ್‌ಗೌನ್ ಮೇಲೆ ಸರಿಯಿತು.ಅರುಣ ವರ್ಣದಲ್ಲಿ ಅದ್ಭುತ ಲಾವಣ್ಯದಿಂದ ಮಿರಮಿರನೆ ಮಿಂಚುತ್ತಿದ್ದ ಅವಳ ಪಾದದ ಕಡೆ ಆ ವ್ಯಕ್ತಿ ಕಣ್ಣರಳಿಸಿ ನೋಡಿ ಉಗುಳು ನುಂಗಿದ. ಮೇಖಲೆ ಥಟ್ಟನೆ ಕಾಲನ್ನು ಕೆಳಗಿಳಿಸಿ ಪಾದಗಳ ಮೇಲೆ ಹೌಸ್‌ಗೌನ್ ಎಳೆದು ಸರಿಪಡಿಸಿಕೊಂಡು ಅವನ ಕಡೆ ಅಸಹ್ಯ ತುಂಬಿದ ನೋಟವೊಂದನ್ನು ಬೀರಿದಳು. ಗಂಡಸರು! ಕಾಮಾಂಧರಾದ ಗಂಡಸರು! ಎದುರಿಗೆ ಹೆತ್ತ ಮಗಳು ಕುಳಿತಿದ್ದರೂ ಇಷ್ಟೇ ಹೀನವಾಗಿ ನೋಡುತ್ತಾರೆ! ಮೇಖಲೆಗೆ ಅಸಹ್ಯ ಉಂಟು ಮಾಡಿದ್ದು ಆ ವ್ಯಕ್ತಿಯ ನೋಟವಲ್ಲ. ಅಂತಹ ನೋಟ ಅವಳಿಗೆ ಚಿರಪರಿಚಿತವೇ. ಎಷ್ಟೋ ಜನ ಗಂಡಸರ ನೋಟ ತನ್ನ ಶರೀರದ ಮೇಲೆ ಹಾವಿನಂತೆ ಹರಿದಾಡುವುದು ಅವಳಿಗೆ ಅನುಭವಪೂರ್ವಕವಾಗಿ ತಿಳಿದಿತ್ತು. ಎಲ್ಲ ಗಂಡಸರ ನೋಟವೂ ಒಂದೇ. ಎಲ್ಲ ಗಂಡಸರ ಹೃದಯಗಳೂ ಒಂದೇ. ಮೇಖಲೆಗೆ ಅಸಹ್ಯ ಉಂಟು ಮಾಡಿದ್ದು ಆ ವ್ಯಕ್ತಿಯ ಗೌರವಿಸಬೇಕಾದ ವಯಸ್ಸು. ಆದರೆ ಬಹಳ ಜನ ಗಂಡಸರು ಆ ವಯಸ್ಸಿನಲ್ಲಿ ಗೌರವ ಪಡೆಯುವುದನ್ನು ಬಿಟ್ಟು ಸ್ತ್ರೀ ಒಂಟಿಯಾಗಿ ಕಾಣಿಸಿದರೆ ಸಾಕು. ವಿಕಾರವಾಗಿ ಅಸಹ್ಯವಾಗಿ ವರ್ತಿಸಿ ಮರ್ಯಾದೆ ಕಳೆದುಕೊಳ್ಳುತ್ತಿರುತ್ತಾರೆಂದು ಅವಳಿಗೆ ಗೊತ್ತಿತ್ತು. ಇಂತಹ ಗಂಡಸರಿಗೆ ಹಿರಿಯ ವಯಸ್ಸೊಂದು ಮುಸುಕು. ಆ ಮುಸುಕಿನಲ್ಲಿ ಅಡಗಿಕೊಳ್ಳುತ್ತಲೇ

ಅವರಿಗೆ ಮನಸ್ಸಿನಲ್ಲಿನ ವಿಕಾರಗಳೆಲ್ಲಾ ಹೊರ ಬರುತ್ತಿರುತ್ತವೆ. ಅವನನ್ನು ನೋಡುತ್ತಿದ್ದರೆ ಮೇಖಲೆಗೆ ಒಂದೇ ಒಂದು ಮಾತು, ಮಾತು ಮಾತಿಗೂ ನೆನಪಾಗುತ್ತಿತ್ತು. ವಯಸ್ಸಿನಿಂದ ನೋಡಿದರೆ ಈ ವ್ಯಕ್ತಿಗೆ ತನ್ನ ವಯಸ್ಸಿನ ಮಗಳಿರಬೇಕು. ಆದರೂ ತನ್ನನ್ನು ನೋಡಿದರೆ ಇವನಿಗೆ ಮಗಳ ಜ್ಞಾಪಕ ವಾಗುತ್ತಿಲ್ಲ. ಸ್ತ್ರೀಯರಲ್ಲಿ ಗಂಡಸಿಗೆ ಸ್ವೈರಿಣಿ ಮಾತ್ರವೇ ಕಾಣಿಸುತ್ತಾಳೆ. ತಾಯಿಯನ್ನೂ, ತಂಗಿಯನ್ನೂ, ಮಗಳನ್ನೂ ಸ್ತ್ರೀಯರಲ್ಲಿ ನೋಡಿಕೊಳ್ಳಬಲ್ಲ ಶಕ್ತಿ ಗಂಡಸಿಗೆ ಸಾವಿರ ಜನ್ಮ ಎತ್ತಿದರೂ ಬರದು. ಅವಳು ಜೋರಾಗಿ ಕಾಲು ಕೆಳಗಿಳಿಸಿ ಹೌಸ್‌ಗೌನ್ ಸರಿಪಡಿಸಿಕೊಂಡಾಗ ಆ ವ್ಯಕ್ತಿ ಥಟ್ಟನೆ ತಲೆ ಮೇಲೆತ್ತಿ ಬೆದರುತ್ತಾ ನೋಡಿದ.

"ಮೆಸೇಜ್!" ಅವಳು ಕೋಪದಿಂದ ನುಡಿದಳು. "ಜೇಕೇ ಕೊಡೆಂದು ಹೇಳಿದ ಮೆಸೇಜ್! ಏನು ಆ ಮೆಸೇಜ್?" ಹಿಂದಿಯಲ್ಲಿ ಕೇಳಿದಳು. ಆ ಧ್ವನಿ ಯಲ್ಲಿನ ತೀವ್ರತೆಗೆ ಅವನು ಒಂದು ಕ್ಷಣ ತಡಬಡಿಸಿದ. ತಡಬಡಿಸುತ್ತಲೇ ಪ್ಯಾಂಟಿನ ಜೇಬಿನಿಂದ ಒಂದು ಬ್ರೌನ್ ಕವರ್ ಹೊರತೆಗೆದ. ಆ ಕವರು ಸೀಲ್ ಮಾಡಲಾಗಿತ್ತು.

"ಮೆಸೇಜ್ ಇದರಲ್ಲಿರುತ್ತದೆ" ವಿನಯದಿಂದ ನುಡಿದ.

ಆ ವಿನಯ ನೋಡಿ ಮೇಖಲೆಗೆ ಅವನ ಬಗೆಗಿನ ಅಸಹ್ಯ ಇಮ್ಮಡಿಸಿತು. ಮೌನವಾಗಿ ಅವನ ಕೈಯಿಂದ ಕವರ್ ತೆಗೆದುಕೊಂಡು ಎದ್ದು ನಿಂತುಕೊಂಡಳು. "ಆಲ್‌ರೈಟ್! ಇನ್ನು ನೀನು ಹೋಗಬಹುದು" ಬೇಕೆಂದು ಏಕವಚನದಲ್ಲಿ ಸಂಬೋಧಿಸುತ್ತಾ ಹೇಳಿದಳು. ಅವನ ಮುಖ ಕೊಂಚ ಬಿಗಿದುಕೊಂಡಿತು. ಅಸ್ಪಷ್ಟವಾಗಿ ತಲೆಯಾಡಿಸಿ ಅಲ್ಲಿಂದ ಹೊರಡಲು ತಿರುಗಿದ. "ಒಂದು ಕ್ಷಣ!" ಹಿಂದಿನಿಂದ ಅವಳು ಗಂಭೀರವಾಗಿ ಕರೆದಳು. ಅವನು ಬಾಗಿಲ ಹತ್ತಿರ ಥಟ್ಟನೆ ನಿಂತುಬಿಟ್ಟು ಹಿಂದಕ್ಕೆ ತಿರುಗಿದ.

"ಹೀಗ್ಬಾ!"

ಅವನು ಮತ್ತೆ ಅವಳ ಎದುರಿಗೆ ಹೋಗಿ ನಿಂತ.

"ನಿನಗೆ ಮಗಳಿದ್ದಾಳಾ?" ಅವಳು ಈ ಪ್ರಶ್ನೆ ಕೇಳುತ್ತಾಳೆಂದು ಅವನು ಎದುರು ನೋಡಿರಲಿಲ್ಲ. ನಿಬ್ಬೆರಗಾಗಿ ನೋಡುತ್ತಾ ತಲೆಯಾಡಿಸಿದ.

"ಎಷ್ಟು ವರ್ಷಗಳಿರಬಹುದು?" ಕೇಳಿದಳು.

"ಇಪ್ಪತ್ತು!"

ಅವಳು ಗಾಂಭೀರ್ಯದಿಂದ ತಲೆಯಾಡಿಸಿ ಪಕ್ಕದಲ್ಲೇ ಟೀಪಾಯ್ ಮೇಲಿದ್ದ ಹ್ಯಾಂಡ್ ಬ್ಯಾಗ್ ತೆರೆದು ಒಂದು ಸಾವಿರ ರೂಪಾಯಿ ನೋಟುಗಳ

ಕಟ್ಟನ್ನು ತೆಗೆದು ಅವನ ಕಡೆ ಎಸೆದಳು. ಅವನು ಆಶ್ಚರ್ಯಪಟ್ಟು ನೋಡುತ್ತಾ ಗಾಳಿಯಲ್ಲಿರುವಂತೆಯೇ ಆ ನೋಟುಗಳನ್ನು ಥಟ್ಟನೆ ಕೆಳ ಬೀಳದಂತೆ ಹಿಡಿದು ಕೊಂಡ.

"ಆ ದುಡ್ಡಿನಿಂದ ನಿನ್ನ ಮಗಳಿಗೆ ಒಳ್ಳೆ ಸೀರೆ ಕೊಂಡ್ಕೋ!" ಹೇಳಿದಳು. ವಿಸ್ಮಯದಿಂದ ಅವನಿಗೆ ಬಾಯಿಂದ ಮಾತೇ ಹೊರಬರಲಿಲ್ಲ. ಅಯೋಮಯ ದಿಂದ ನೋಡುತ್ತಾ ಮತ್ತೊಂದು ಸಲ ತಲೆಯಾಡಿಸಿ ಹೋಗಲುದ್ಯುಕ್ತನಾದ.

"ನಿಲ್ಲು!"

ಅವನು ನಿಂತುಕೊಂಡು ಮತ್ತೊಂದು ಸಲ ಅವಳ ಕಡೆ ತಿರುಗಿದ. ಈ ಸಲ ಅವನ ಕಣ್ಣುಗಳಲ್ಲಿ ಕೃತಜ್ಞತೆ ಇಣುಕುತ್ತಿತ್ತು.

"ನನ್ನ ವಯಸ್ಸೆಷ್ಟಿರಬಹುದು?" ಕೇಳಿದಳು.

ಅವನು ತಿಳಿಯದೆನ್ನುವಂತೆ ನೋಡಿದ.

"ಸುಮಾರು ನಿನ್ನ ಮಗಳಷ್ಟು ವಯಸ್ಸಿರಬಹುದೆ?" ಮತ್ತೆ ಕೇಳಿದಳು. ಇರಬಹುದೆನ್ನುವಂತೆ ತಲೆಯಾಡಿಸಿದ

"ಆದರೂ ನನ್ನನ್ನು ನೋಡಿದರೆ ನಿನಗೆ ಮಗಳು ಜ್ಞಾಪಕವಾಗಲಿಲ್ಲ ವೆಂದಾಯ್ತು".

ಅವಳು ಹೇಳಿದ ಮಾತು ನೇರವಾಗಿ ಬಂದು ಹೃದಯಕ್ಕೆ ಚುಚ್ಚಿತು. ಷಾಕ್ ಹೊಡೆದವನಂತೆ ನೋಡಿದ. ಅವಳು ತಲೆಯಾಡಿಸಿದಳು. "ಇನ್ನು ಹೋಗು! ಹೋಗಿ ನಿನ್ನ ಮಗಳಿಗೆ ಸೀರೆ ಕೊಂಡ್ಕೋ! ಇನ್ನಾದರೂ ಬೇರೆ ಹೆಂಗಸರನ್ನು ನೋಡಿದರೆ ಮಗಳನ್ನು ನೆನಪು ಮಾಡಿಕೋ, ಹೋಗು".

ಅವನು ಇದ್ದಕ್ಕಿದ್ದಂತೆ ಕುಗ್ಗಿಬಿಟ್ಟ. ಅವಳು ಹೇಳುತ್ತಿರುವುದೇನೆಂದು ಅರ್ಥವಾದಾಗ ಅವಮಾನದಿಂದ, ಪಶ್ಚಾತ್ತಾಪದಿಂದ ಕುಗ್ಗಿ ಹಿಡಿಯಷ್ಟಾದ. ಅವಳ ಮುಂದೆ ತಲೆಯೆತ್ತಲಾಗದೆ ಕೊಂಚ ಹೊತ್ತು ಹಾಗೆಯೇ ನಿಂತಿದ್ದು ಕೈಯಲ್ಲಿದ್ದ ನೋಟುಗಳ ಕಟ್ಟಿನ ಕಡೆ ನೋಡುತ್ತಿದ್ದುಬಿಟ್ಟ. ನಂತರ ನಿಧಾನ ವಾಗಿ ಕಣ್ಣು ಮೇಲೆತ್ತಿ ಅವಳ ಕಡೆ ನೋಡಿದ. ಅವನ ಕಣ್ಣುಗಳು ಪೆಟ್ಟು ತಿಂದ ಜಿಂಕೆ ಮರಿಯಂತೆ ನೋವಿನಿಂದ ನೋಡುತ್ತಿದ್ದವು. ಅಪ್ರಯತ್ನವಾಗಿ ಒಂದಡಿ ಮುಂದಿಟ್ಟು ಅವಳ ಕೈ ಹಿಡಿದುಕೊಂಡ. "ಹೌದು! ನಿನ್ನನ್ನು ನೋಡಿ ದರೆ ನನಗೆ ಮಗಳ ಜ್ಞಾಪಕ ಬರಬೇಕಾಗಿತ್ತು. ಆದರೆ ಬರಲಿಲ್ಲ. ಯಾಕೆ ಗೊತ್ತಾ? ನಾನು ಗಂಡಸಾದ್ದರಿಂದ! ಚೆನ್ನಾಗಿ ಬುದ್ಧಿ ಕಲಿಸಿದೆ ಕಣಮ್ಮಾ! ನೀನ್ಯಾರೋ, ಎಲ್ಲಿಂದ ಬಂದಿದ್ದೀಯೋ, ಏನು ಮಾಡ್ತಿದ್ದೀಯೋ ನನಗೆ ತಿಳಿ ಯದು. ಜೇಕೇ ಪರವಾಗಿ ಈ ದೇಶದಲ್ಲಿ ಒಬ್ಬ ಕಮೀಷನ್ ಏಜೆಂಟ್ ಆಗಿ

ಕೆಲಸ ಮಾಡುವುದು- ಅವರ ಆಜ್ಞೆ ಪಾಲಿಸುವುದು ನನ್ನ ವೃತ್ತಿ. ಕೆಲಸ ಸಾಧಿಸಿಕೊಳ್ಳುವುದಕ್ಕೆ ಬೇಕೇ ಬೇಕು ಅಂದವಾದ ಹೆಣ್ಣುಗಳನ್ನು ನನ್ನ ಕೈಲಿ ತಲೆ ಹಿಡಿಸಿದ್ದ. ನೀನೂ ಅಂತಹವಳೇ ಎಂದುಕೊಂಡೆ. ಚೆನ್ನಾಗಿ ಬುದ್ಧಿ ಹೇಳಿದೆ. ಇನ್ನು ಮುಂದೆ ಯಾವ ಹೆಣ್ಣನ್ನೂ ನೀಚ ದೃಷ್ಟಿಯಿಂದ ನೋಡುವುದಿಲ್ಲ" ದೀನವಾಗಿ ನುಡಿದ.

ಅವಳು ಅವನನ್ನು ಕೊಂಚ ಹೊತ್ತು ದಿಟ್ಟಿಸಿ ನೋಡುತ್ತಿದ್ದುಬಿಟ್ಟಳು. "ಒಂದು ವೇಳೆ ನಾನು ಅಂತಹವಳೇ ಆಗಿದ್ದರೆ? ಹೆಣ್ಣುಗಳ ಬಗೆಗಿನ ನಿನ್ನ ದೃಷ್ಟಿ ಮತ್ತೆ ಬದಲಾಗುತ್ತದೆಯೆ?" ಕೇಳಿದಳು.

"ಇಲ್ಲ! ನೀನು ಅಂತಹವಳಲ್ಲ, ಆಗಲು ಸಾಧ್ಯವಿಲ್ಲ".

"ಯಾಕೆ? ಯಾಕಾಗಕೂಡದು? ಇನ್ನೂ ನಿನ್ನಲ್ಲಿನ ಪುರುಷಾಹಂಕಾರ ಪೂರ್ತಿಯಾಗಿ ತೊಲಗಿಲ್ಲ. ಒಬ್ಬ ಯುವತಿ ಕಾಲ್‌ಗರ್ಲ್ ಆಗಿ ಕೆಲಸ ಮಾಡು ತ್ತಿದ್ದ ಮಾತ್ರಕ್ಕೆ ಹೆಣ್ಣಲ್ಲದೆ ಹೋಗುತ್ತಾಳೆಯೆ? ಆತ್ಮಾಭಿಮಾನ, ಆತ್ಮಗೌರವ ಕಾಲ್‌ಗರ್ಲ್‌ಗೆ ಇರಕೂಡದೆ?"

ಅವನೇನೋ ಹೇಳಲು ಹೋದ. ಅವಳು ಅವನನ್ನು ಮಾತಾಡಲು ಬಿಡಲಿಲ್ಲ. "ನನ್ನನ್ನು ಹೇಳಲು ಬಿಡು! ಹೌದು- ನಾನು ಕಾಲ್‌ಗರ್ಲ್! ಕಾಲ್ ಗರ್ಲ್ ಆಗುವ ಮೊದಲು ನಾನು ಕೂಡ ನಿನ್ನ ಮಗಳಂತಹವಳೇ, ನಿನ್ನ ಅಕ್ಕಳಂತಹವಳೇ, ನಿನ್ನ ತಂಗಿಯಂತಹವಳೇ!" ಅವನು ಅವಾಕ್ಕಾಗಿ ನೋಡುತ್ತಾ ನಿಂತುಬಿಟ್ಟ. "ಏನು ಹಾಗೆ ನೋಡ್ತಿದೀಯ ? ಐ ಸೇ ಗೆಟ್ ಔಟ್!" ಅವನು ಕನಸಿನಿಂದ ಎಚ್ಚರಗೊಂಡವನಂತೆ ಬೆಚ್ಚಿಬಿದ್ದ "ಗೆಟ್ ಔಟ್!" ಅವಳು ಮತ್ತೊಂದು ಸಲ ಹೇಳಿದಳು.

"ಹೋಗ್ತೀನಮ್ಮಾ! ತಪ್ಪದೇ ಹೋಗ್ತೀನಿ! ಆದರೆ ಹೋಗುವ ಮುಂಚೆ ಒಂದು ಮಾತು".

"ಏನದು?"

"ಮಗಳಿಗೆ ಸೀರೆ ಕೊಡಿಸು ಅಂತಂದೆ. ಕೊಡಿಸ್ತೀನಿ, ತಪ್ಪದೇ ಕೊಡಿ ಸ್ತೀನಿ. ಇದೋ ಈ ದುಡ್ಡು ತಗೋ, ನೀನು ಸೀರೆ ಕೊಂಡ್ಕೋ. ಈ ದುಡ್ಡು ನನ್ನ ಮಗಳಿಗೇ ಕೊಡ್ತಿದೀನಿ. ತಗೋ ತಾಯಿ. ಕಾಲ್‌ಗರ್ಲ್ ಅಂತ ಹೇಳ್ತಿದೀಯ. ಗಂಡು ಜಾತಿಯನ್ನೆಲ್ಲ ಸಂಸ್ಕರಿಸಬಲ್ಲ ಶಕ್ತಿ ನಿನ್ನಲ್ಲಿದೆ. ಬರ್ತೀನಿ, ಈ ಸಲ ಮತ್ತೊಂದು ಹೆಣ್ಣನ್ನು ನೋಡಿದಾಗ ನಿನ್ನನ್ನೇ ನೆನಪಿಸಿ ಕೊಳ್ಳಲು ಪ್ರಯತ್ನಿಸ್ತೀನಿ. ಬರ್ತೀನಿ ತಾಯಿ ಬರ್ತೀನಿ". ಅವಳ ಉತ್ತರ ಕ್ಕೋಸ್ಕರ ಎದುರು ನೋಡದೆ ಅವನು ಸರಸರನೆ ಅಲ್ಲಿಂದ ಹೊರಗೆ

ಹೊರಟು ಹೋದ. ಮೋಖಲೆ ಕೊಂಚ ಹೊತ್ತು ಅಲ್ಲಿಯೇ ನಿಂತಿದ್ದು ಅವನು ಹೋದ ಕಡೆಯೇ ನೋಡುತ್ತಿದ್ದಳು. ನಂತರ ಒಂದು ಸಲ ನಿಟ್ಟುಸಿರಿಟ್ಟು ಬೆಡ್‌ರೂಮಿನೊಳಗೆ ಹೋಗಿ ಮಂಚದ ಮೇಲೆ ಕುಳಿತುಕೊಂಡು ಆ ಘಟನೆಯನ್ನು ಮರೆತು ಬಿಡಲು ಪ್ರಯತ್ನಿಸುತ್ತಾ ಅನ್ಯಮನಸ್ಕಳಾಗಿ ಜೇಕೇ ಕಳುಹಿಸಿದ ಕವರು ಹರಿಯಲು ಹೋದಳು. ಆಗಲೇ ಟೆಲಿಫೋನ್ ಮೊಳಗಿದ್ದರಿಂದ ಅನ್ಯಮನಸ್ಕಳಾಗಿದ್ದ ಮೋಖಲೆ ಅಕಸ್ಮಾತ್ತಾಗಿ ಬೆಚ್ಚಿಬಿದ್ದಳು.

ಲೇಕ್ ವ್ಯೂ ಹೋಟೆಲ್‌ನಿಂದ ಹೊರ ಬರುತ್ತಲೇ ಜಾನಿವಾಕರ್ ಒಂದು ಪಬ್ಲಿಕ್ ಟೆಲಿಫೋನ್ ಬೂತ್‌ನೊಳಗೆ ಹೋದ. ಒಂದು ಕ್ಷಣ ಏನೋ ಆಲೋಚಿಸುತ್ತಾ ನಿಂತು, ರಿಸೀವರ್ ಎತ್ತಿ ಒಂದು ನಂಬರ್ ಡಯಲ್ ಮಾಡಿದ. "ಹಲೋ ಲೇಕ್ ವ್ಯೂ ಹೋಟೆಲ್ ಪ್ಲೀಸ್!" ಟೆಲಿಫೋನ್ ಆಪರೇಟರ್ ಧ್ವನಿ ಕೇಳಿಸಿತು. ಜಾನಿವಾಕರ್ ತಕ್ಷಣವೇ ಕಾಯಿನ್ ಹಾಕಿ, "ಸೂಟ್ ನಂಬರ್ ಟೂ ಡಬಲ್ ಫ್ಲೋರ್‌ಗೆ ಕನೆಕ್ಷನ್ ಕೊಡಿ" ಎಂದ.

ಕೆಲವು ಕ್ಷಣಗಳ ನಿರೀಕ್ಷಣೆಯ ನಂತರ ಅತ್ತಲಿಂದ ಮೋಖಲೆಯ ಧ್ವನಿ ಬೇಸರದಿಂದ ಕೇಳಿಸಿತು. "ಹಲೋ ಯಾರು?"

ಜಾನಿವಾಕರ್‌ನ ತುಟಿಗಳ ಮೇಲೆ ವ್ಯಂಗ್ಯದಿಂದ ಕೂಡಿದ ಮುಗುಳ್ನಗು ಸುಳಿಯಿತು. "ಕಂಗ್ರಾಜುಲೇಶನ್ಸ್!" ಮೆಲ್ಲಗೆ ನುಡಿದ.

ಮೋಖಲೆ ತಕ್ಷಣವೇ ಆ ಧ್ವನಿ ಗುರುತು ಹಿಡಿದಳು. "ಓ! ಮಿಸ್ಟರ್ ಜಾನಿವಾಕರ್!" ಅವಳೂ ಅಷ್ಟೇ ವ್ಯಂಗ್ಯವಾಗಿ ನುಡಿದಳು. "ನಿನಗಿನ್ನೂ ಲೇಕ್ ವ್ಯೂ ಹೋಟೆಲ್ ಮ್ಯಾನೇಜರ್ ಗುಡ್‌ಬೈ ಹೇಳಿಲ್ಲವಾ?"

"ಹೇಳಿದ. ಅದಕ್ಕೇ ನಿನಗೆ ಕಂಗ್ರಾಜುಲೇಶನ್ಸ್ ಹೇಳ್ತಿದೀನಿ".

"ಇದರಲ್ಲಿ ಕಂಗ್ರಾಜುಲೇಶನ್ಸ್ ಹೇಳೋದಕ್ಕೇನಿದೆ?"

"ನನ್ನ ವೃತ್ತಿಯಲ್ಲಿ ಪ್ರಪಂಚ ವ್ಯಾಪ್ತವಾಗಿ ಎಷ್ಟೋ ಘಟಾನುಘಟಿಗಳಾದ ಗೂಢಚಾರರನ್ನು ಶಾಡೋ ಮಾಡಿದ್ದೀನಿ. ಅವರ್‍ಯಾರೂ ನನ್ನನ್ನು ಕಂಡುಹಿಡಿಯದೇ ಹೋದರು. ನೀನು ಕಂಡುಹಿಡಿದೆ. ನಿನ್ನ ಬುದ್ಧಿವಂತಿಕೆಗೆ ಹ್ಯಾಟ್ಸಾಫ್. ನಿನಗೆ ಕಂಗ್ರಾಜುಲೇಶನ್ಸ್ ಹೇಳಲೇಬೇಕಲ್ಲ ಮತ್ತೆ".

"ಓ ಅದಾ, ಮಿಸ್ಟರ್ ಜಾನಿವಾಕರ್ ನೀನ್ಯಾವಾಗಲಾದರೂ ಇದಕ್ಕೆ ಮುಂಚೆ ಕಾಲ್‌ಗರ್ಲ್‌ಗಳನ್ನು ಶ್ಯಾಡೋ ಮಾಡಿದ್ದೀಯಾ?"

ಜಾನಿವಾಕರ್ ಚಕಿತನಾದ. "ಏನು ಹಾಗೆ ಕೇಳ್ತಿದೀಯಾ?" ಕೇಳಿದ.

"ಬಹುಶಃ ಮಾಡಿರಲಾರೆ. ಗೂಢಚಾರರಿಗೂ ಕೂಡ ಇಲ್ಲದ ಒಂದು ವಿಶಿಷ್ಟ ಗುಣ ಹೆಂಗಸರಿಗಿರುತ್ತದೆ. ಮಿಸ್ಟರ್ ಜಾನಿವಾಕರ್–ಅದರಲ್ಲೂ ಕಾಲ್‌ಗರ್ಲ್‌ಗಳಿಗೆ !"

"ಐಸೀ! ಆ ಗುಣವೇನೆಂದು ತಿಳಿದುಕೊಳ್ಳಬಹುದೆ?" ಕೇಳಿದ ಜಾನಿವಾಕರ್ "ಗಂಡಸರನ್ನು ಪರಿಶೀಲಿಸುವ ಶಕ್ತಿ!" ಹೇಳಿದಳು. "ಗಂಡಸರ ನಡುವೆ ಸುಳಿದಾಡುತ್ತಿರುವುದು ಎರಡು ಕಣ್ಣುಗಳಲ್ಲ ಮಿಸ್ಟರ್ ಜಾನಿವಾಕರ್, ಸಾವಿರ ಕಣ್ಣುಗಳು ! ನಿರ್ಲಜ್ಜವಾದ ಗಂಡಸಿನ ನೋಟ ಹೆಂಗಸನ್ನು ಎಷ್ಟು ಮುಜುಗರಪಡಿಸುತ್ತದೆ ಎನ್ನುವುದನ್ನು ನೀವು ಗಂಡಸರು ಲಕ್ಷ ಜನ್ಮ ಎತ್ತಿದರೂ ಅರ್ಥಮಾಡಿಕೊಳ್ಳಲಾರಿರಿ ಗಂಡಸಿನ ಕ್ರೂರ ನೋಟದಿಂದ ತನ್ನನ್ನು ತಾನು ಕಾಪಾಡಿಕೊಳ್ಳಲು ಸ್ತ್ರೀ ಕ್ಷಣ ಕ್ಷಣವೂ ಪ್ರಯತ್ನಿಸುತ್ತಲೇ ಇರುತ್ತಾಳೆ. ಯಾವ ಮೂಲೆಯಿಂದ ಯಾವ ಗಂಡಸು ತನ್ನನ್ನು ರಹಸ್ಯವಾಗಿ ಕಣ್ಣರಳಿಸಿ ನೋಡುತ್ತಿದ್ದಾನೆ ಎನ್ನುವುದನ್ನು ತಿಳಿದುಕೊಳ್ಳಬಲ್ಲಳು. ಆ ನೋಟದಿಂದ ತಪ್ಪಿಸಿಕೊಳ್ಳಲು ಸ್ತ್ರೀ ಮಾಡುವ ಪ್ರಯತ್ನಗಳನ್ನು ಗಂಡಸು ಮತ್ತೊಂದು ರೀತಿ ಅರ್ಥ ಮಾಡಿಕೊಳ್ಳುತ್ತಾನೆ. ಆ ಸ್ತ್ರೀ ತನ್ನ ಬಗೆಗೆ ಆಸಕ್ತಿ ತೋರಿಸುತ್ತಿರುವಳೆಂದುಕೊಂಡು ಮೂರ್ಖನಂತೆ ಹಿಗ್ಗುತ್ತಾನೆ- ಯಾವ ಸ್ತ್ರೀಯೂ ಕೂಡ ತನ್ನ ಮನಸ್ಸಿಗೆ ಹಿಡಿಸಿದವನ ಬಗೆಗೆ ಬಿಟ್ಟು ಮತ್ತೊಬ್ಬ ಗಂಡಸಿನ ಬಗೆಗೆ ಕೊಂಚವೂ ಆಸಕ್ತಿ ತೋರಿಸುವುದಿಲ್ಲ. ಇದು ನೀವು ಗಂಡಸರು ತಿಳಿದುಕೊಳ್ಳಬೇಕಾದ ಸತ್ಯ ಮಿಸ್ಟರ್ ಜಾನಿವಾಕರ್!"

"ಆ ಸ್ತ್ರೀಯ ಮನಸ್ಸಿಗೆ ಹಿಡಿಸಿದವನು ಆ ರೀತಿ ಕಣ್ಣರಳಿಸಿ ನೋಡುತ್ತಿರುವ ಗಂಡನೆ ಯಾಕಾಗಬಾರದು ?" ಜಾನಿವಾಕರ್ ನಗುತ್ತಾ ಕೇಳಿದ.

"ಎಂದಿಗೂ ಆಗಲಾರ!" ಮೇಖಲೆ ಖಚಿತವಾಗಿ ನುಡಿದಳು. "ಹತ್ತು ಜನರ ನಡುವೆ ತನ್ನ ಕಡೆ ಬಿಟ್ಟಕಣ್ಣು ಬಿಟ್ಟಂತೆಯೇ ನೋಡುವ ಗಂಡಸನ್ನು ಸ್ತ್ರೀ ಎಂದಿಗೂ ಮೆಚ್ಚಿಕೊಳ್ಳೋದಿಲ್ಲ. ಅದರಲ್ಲೂ ಮೊದಲ ಸಲ ನೋಡುತ್ತಲೇ ಯಾವ ಸ್ತ್ರೀ ಕೂಡ ಗಂಡಸನ್ನು ಮೆಚ್ಚಲಾರಳು. ಸ್ತ್ರೀ ಮೆಚ್ಚಿಕೊಳ್ಳುವುದು ಗಂಡಸಿನಲ್ಲಿನ ಶಕ್ತಿಯುತವಾದ ವ್ಯಕ್ತಿತ್ವವನ್ನು."

"ಚೆನ್ನಾಗಿದೆ ! ಮತ್ತೆ ಕಾಲ್‌ಗರ್ಲ್‌ಗಳಿಗಿರುವ ವಿಶಿಷ್ಟ ಅಂಶಗಳೇನು?"

"ಗಂಡಸನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡುವುದು, ಗಂಡಸಿನ ದೌರ್ಬಲ್ಯಗಳನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳುವುದು, ಗಂಡಸರ ಮೇಲೆ ಕಾಲ್‌ಗರ್ಲ್‌ಗೆ ಪ್ರೊಫೆಷನಲ್ ಇಂಟ್ರೆಸ್ಟ್ ಇರುತ್ತದೆಂಬ ವಿಷಯ ಮರೆಯಬೇಡ ಮಿಸ್ಟರ್ ಜಾನಿವಾಕರ್!"

"ಗುಡ್....! ವ್ಹೆರಿ ಗುಡ್....! ಅಂದರೆ ಶಿಕ್ಷಣ ಪಡೆದ ಗೂಢಚಾರಿ ಗಿಂತಲೂ ಒಬ್ಬ ಸಾಮಾನ್ಯ ಕಾಲ್‌ಗರ್ಲ್ ತನ್ನನ್ನು ಒಬ್ಬ ಗಂಡಸು ಹಿಂಬಾಲಿಸುವ ವಿಷಯದಲ್ಲಿ ಹೆಚ್ಚು ಬುದ್ಧಿವಂತಳಾಗಿರುತ್ತಾಳೆ ಎಂದಾಯ್ತು."

"ಈಗಲಾದರೂ ಅರ್ಥಮಾಡಿಕೊಂಡಿದ್ದಕ್ಕೆ ಸಂತೋಷ" ಅಣಕದಿಂದ ನುಡಿದಳವಳು.

"ಒಂದು ವಿಷಯ ಮಾತ್ರ ನೀನು ಹೇಳಲೇ ಇಲ್ಲ. ನಿನ್ನನ್ನು ಶಾಡೋ ಮಾಡುತ್ತಿರುವ ಗಂಡಸು ನಾನೇ ಎಂದು ಹೇಗೆ ತಿಳಿದುಕೊಂಡೆ ?"

ಮೇಖಲೆ ಮೆಲ್ಲಗೆ ನಕ್ಕಳು. "ವೆರಿ ಸಿಂಪಲ್ ಮಿಸ್ಟರ್ ಜಾನಿವಾಕರ್ ! ವಿಮಾನದಲ್ಲಿ ನನ್ನ ಹಿಂದೆ ಕೊಂಚ ದೂರದಲ್ಲಿ ಮೂಲೆಯಲ್ಲಿದ್ದ ಸೀಟು ಸಂಪಾದಿಸುವುದರಲ್ಲಿ ಯಶಸ್ವಿಯಾದೆ. ಹೇರ್‌ಸ್ಟೈಲ್ ಬದಲಾಯಿಸಿದೆ. ಮೀಸೆಗಳನ್ನು ಚಿಕ್ಕದಾಗಿ ಕತ್ತರಿಸಿಕೊಂಡಿರುವೆ. ಕಣ್ಣುಗಳಿಗೆ ಗಾಗಲ್ಸ್ ಇಟ್ಟುಕೊಂಡಿದೀಯ. ವಯಸ್ಸು ತಿಳಿಯದಂತಿರಲು ಮುಂದಲೆಯ ಹತ್ತಿರ ಬಿಳಿ ಬಳಿದುಕೊಂಡಿದೀಯಾ. ಬಿಜಿನೆಸ್ ಎಕ್ಸಿಕ್ಯೂಟಿವ್‌ನಂತೆ ಕಾಣಿಸಲು ಬಾಯಲ್ಲಿ ಬೆಲೆಬಾಳುವ ಪೈಪ್ ಇಟ್ಕೊಂಡಿದೀಯ. ಮುಖ ಪೂರ್ತಿಯಾಗಿ ಕಾಣಿಸದಂತೆ ಫೆಲ್ಟ್‌ಹ್ಯಾಟ್ ಇಟ್ಕೊಂಡಿದೀಯ, ನೋಟ ಅಡಗಿಸಲು ಯಾವುದೋ ಬಿಜಿನೆಸ್ ಪೇಪರ್ಸ್ ಓದುತ್ತಿರುವಂತೆ ನಟಿಸುತ್ತಾ ಎಕ್ಸಿಕ್ಯೂಟಿವ್ ಫೈಲೊಂದನ್ನು ಮುಖಕ್ಕೆ ಅಡ್ಡವಾಗಿಟ್ಟುಕೊಂಡಿದ್ದೆ. ನನ್ನನ್ನು ಗಮನಿಸಿಲ್ಲವೆನ್ನುವಂತೆಯೇ ನಿರ್ಲಕ್ಷ್ಯವಾಗಿ ಕುಳಿತಿದ್ದೆ. ಆದರೆ ನೀನು ನನ್ನನ್ನೇ ಗಮನಿಸುತ್ತಿದ್ದೀಯ ಎಂದು ತುಂಬಾ ಸುಲಭವಾಗಿ ತಿಳಿದುಕೊಂಡೆ."

"ಅದೇ ಹೇಗೆ ಅಂತ ಕೇಳ್ತಿದೀನಿ!" ತೀವ್ರವಾದ ಆಸಕ್ತಿಯಿಂದ ಪ್ರಶ್ನಿಸಿದ ಜಾನಿವಾಕರ್.

"ನೀನು ನನ್ನನ್ನು ಗಮನಿಸದಂತೆ ಕೂತುಕೊಂಡಿದ್ದೇ ನನ್ನನ್ನು ಗಮನಿಸುತ್ತಿದ್ದೀಯೆನ್ನುವುದಕ್ಕೆ ನಿದರ್ಶನ ಮಿಸ್ಟರ್ ಜಾನಿವಾಕರ್ ! ಸ್ತ್ರೀಯ ಸೌಂದರ್ಯದಿಂದ ತಪ್ಪಿಸಿಕೊಳ್ಳಬಲ್ಲ ಗಂಡಸು ಇಲ್ಲಿಯವರೆಗೂ ಸೃಷ್ಟಿಯಲ್ಲಿ ಹುಟ್ಟಿಯೇ ಇಲ್ಲ. ಸುಂದರವಾದ ಯುವತಿ ಎದುರಾದಾಗ ಕನಿಷ್ಟ ಒಂದು ಸಲವಾದರೂ ಒಬ್ಬ ಗಂಡಸು ಅವಳ ಕಡೆ ಕಣ್ಣು ತಿರುಗಿಸಿ ನೋಡಲಿಲ್ಲವೆಂದರೆ ಎರಡೇ ಅರ್ಥಗಳು....ಒಂದು ಆ ಗಂಡಸು ಕುರುಡನಾದರೂ ಆಗಿರಬೇಕು ! ಎರಡು....! ಅವಳ ಕಡೆ ಒಂದು ಸಲವಾದರೂ ನೋಡದಂತೆಯೇ ನಟಿಸುತ್ತಾ ಅನುಕ್ಷಣ ಅವಳನ್ನೇ ಗಮನಿಸುತ್ತಿರಬೇಕು!"

"ಡ್ಯಾಮಿಟ್!" ಜಾನಿವಾಕರ್ ಅಪ್ರಯತ್ನವಾಗಿ ನುಡಿದ.

ಮೇಖಲೆ ಪಕಪಕನೆ ನಕ್ಕಳು. "ವಿಮಾನದಲ್ಲಿ ನನ್ನ ಹಿಂದೆ ಒಂದು ಮೂಲೆಯಲ್ಲಿ ಕುಳಿತಿದ್ದ ಮಧ್ಯವಯಸ್ಕ ಕುರುಡನಲ್ಲವೆಂದು ನನಗೆ ತಿಳಿಯು ತ್ತಲೇ ಇತ್ತು. ಏಕೆಂದರೆ ನೀನು ಆ ಸಮಯದಲ್ಲಿ ಫೈಲು ಓದುತ್ತಿರುವವನಂತೆ ಕುಳಿತಿದ್ದೆ. ಅಂದರೆ ಅನುಕ್ಷಣ ಆ ಮಧ್ಯವಯಸ್ಕ ನನ್ನನ್ನೇ ಗಮನಿಸುತ್ತಿರುವ ನೆಂದಾಯ್ತು ! ನೀನು ಅಲುಗಾಡಿದಾಗ ಫೆಲ್ಟ್‌ಹ್ಯಾಟ್ ಸರಿಪಡಿಸಿಕೊಂಡಾಗ, ಫೈಲ್‌ನಲ್ಲಿನ ಪೇಜುಗಳನ್ನು ತಿರುವಿ ಹಾಕಿದಾಗ ಕೊನೆಗೊಂದು ಸಲ ಎದ್ದು ಟಾಯ್‌ಲೆಟ್ ಕಡೆ ಹೋಗಿ-ಬಂದಾಗಲೂ ಒಂದು ಸಲ ಕೂಡ ನನ್ನ ಕಡೆ ನೋಡಲು ಪ್ರಯತ್ನಿಸಲಿಲ್ಲ. ಅಷ್ಟು ರಹಸ್ಯವಾಗಿ ನನ್ನನ್ನು ಗಮನಿಸುತ್ತಿರು ವವರ್‍ಯಾರಿರಬಹುದು? ಇನ್ನ್ಯಾರು ಮಿಸ್ಟರ್ ಜಾನಿವಾಕರ್ ? ನೀನೇ ! ಏರ್ ಪೋರ್ಟ್‌ನಿಂದ ಮತ್ತೊಂದು ಟ್ಯಾಕ್ಸಿಯಲ್ಲಿ ನೀನು ನನ್ನ ಹಿಂದೆಯೇ ಲೇಕ್ ವ್ಯೂ ಹೋಟೆಲ್‌ಗೆ ಬಂದೆ ಆಫ್‌ಕೋರ್ಸ್, ಮತ್ತೊಂದು ಸಲ ನಿನ್ನ ರೂಪ ಬದಲಾಯ್ತು. ಮಧ್ಯವಯಸ್ಕನಿಂದ ಯುವಕನಾಗಿ ಬದಲಾದೆ. ಆದರೆ ನಿನ್ನ ಪ್ರತಿ ಚಲನೆಯನ್ನೂ ನಾನು ಗಮನಿಸುತ್ತಲೇ ಇದ್ದೆ. ನನ್ನ ನೋಟದಿಂದ ನೀನು ತಪ್ಪಿಸಿಕೊಳ್ಳದೇ ಹೋದೆ. ಒಂದು ವಿಧವಾಗಿ ಹೇಳಬೇಕೆಂದರೆ ವಿಮಾನ ಹತ್ತಿದಾಗಿನಿಂದ ನೀನು ನನ್ನನ್ನು ಶಾಡೋ ಮಾಡುವುದಲ್ಲ, ನಾನೇ ನಿನ್ನನ್ನು ಶಾಡೋ ಮಾಡ್ತಿದೀನಿ ಮಿಸ್ಟರ್ ಜಾನಿವಾಕರ್!"

"ವಂಡರ್‌ಫುಲ್! ಎಕ್ಸಲೆಂಟ್" ಜಾನಿವಾಕರ್ ಕಹಿಯಾಗಿ ನುಡಿದ. "ಯಾರನ್ನಾದರೂ ಶಾಡೋ ಮಾಡುತ್ತಿರುವಾಗ ಸಿಕ್ಕಿಬಿದ್ದದ್ದು ನನ್ನ ಅನುಭವ ಇದೇ ಮೊದಲ ಸಲ. ನೀನು ನನಗೆ ಸರಿ ಜೋಡಿಯೆಂದು ಮೊದಲೇ ತಿಳಿದು ಕೊಂಡಿದ್ದರೂ ನಿನ್ನನ್ನು ಕಡಿಮೆ ಅಂದಾಜು ಮಾಡಿದೆ. ಈ ವಿಷಯದಲ್ಲಿ ಮಾತ್ರ ನಿನ್ನ ಮುಂದೆ ಪ್ರೊಫೆಷನಲ್ ಆಗಿ ನಾನು ಸೋತುಹೋಗಿದ್ದೀನಿ. ಸೋತುಹೋಗಿದ್ದೀನಿ ಅಂತ ಒಪ್ಕೊಳ್ತಿದೀನಿ."

"ನಿನ್ನ ಅಹಂಭಾವ ಇನ್ನೂ ಕಡಿಮೆಯಾಗಿಲ್ಲ ಜಾನಿವಾಕರ್!" ನಿಧಾನ ವಾಗಿ ನುಡಿದಳು ಮೇಖಲೆ. "ನಾನು ಬಯಸಿದ್ದರೆ ಈ ಕ್ಷಣದಲ್ಲಿ ಕೂಡ ನಿನ್ನನ್ನು ಜೈಲಿಗೆ ಕಳುಹಿಸುತ್ತಿದ್ದೆ. ಆದರೆ ನಾನು ಹಾಗೆ ಮಾಡಲಿಲ್ಲ. ಯಾಕೆ ಗೊತ್ತಾ ? ನೀನು ನನ್ನನ್ನು ಶಾಡೋ ಮಾಡುತ್ತಿರುವ ವಿಷಯ ನಾನು ಕಂಡುಹಿಡಿದೆನೆಂದು ನಿನಗೆ ತಿಳಿಯಪಡಿಸಲು ಮಾತ್ರವೇ ಅಲ್ಲ, ನಿನ್ನನ್ನು ಎಚ್ಚರಿಸಲು ಕೂಡಾ! ನೀನು ನನ್ನನ್ನೇನೂ ಮಾಡಲಾರೆ, ನನ್ನ ಆಟಕ್ಕೆ ತಡೆ ಹಾಕುವುದು ನಿನ್ನಿಂದಾಗದು. ಇದನ್ನು ನಿನಗೆ ತಿಳಿಯಪಡಿಸುವುದಕ್ಕೋಸ್ಕರವೇ ನಿನ್ನನ್ನು ಹೋಟೆಲ್‌ನಿಂದ ಹೊರ ತಳ್ಳಿಸಿದೆ. ಇನ್ನಾದರೂ ನನ್ನನ್ನು ವಿರೋಧಿ

ಸುವುದನ್ನು ಬಿಟ್ಟು ನನ್ನೊಂದಿಗೆ ಕೈ ಕೂಡಿಸು! ಇಬ್ಬರೂ ಕೂಡಿ ಈ ದೇಶದ ವಿನಾಶವನ್ನು ಕಣ್ಣಾರೆ ನೋಡೋಣ."

ಜಾನಿವಾಕರ್ ಮುಖ ಹಠಾತ್ತನೆ ಕೆಂಪೇರಿತು. "ಸಾರಿ ಮೇಖಲೆ!" ಗಂಭೀರವಾಗಿ ನುಡಿದ. "ನಿನ್ನೊಂದಿಗೆ ಸೇರುವ ಪ್ರಶ್ನೆಯೇ ಇಲ್ಲ. ನನ್ನ ದಾರಿ ನನಗಿದೆ. ನಾನು ಶ್ರೀನಗರಬಿಟ್ಟು ಡೆಕ್ಕನ್‌ಗೆ ತಿರುಗಿ ಹೋಗ್ತಿದೀನಿ ಮತ್ತೆ ಭೇಟಿಯಾಗೋಣ. ಮತ್ತೆ ನಾವು ಎಂತಹ ಸಂದರ್ಭದಲ್ಲಿ ಭೇಟಿಯಾಗುತ್ತೇವೋ ತಿಳಿಯದು ಗುಡ್‌ಬೈ"–ಅವನು ತಟಕ್ಕನೆ ರಿಸೀವರ್ ಕೆಳಗಿಟ್ಟುಕೊಂಡುಹೊತ್ತು ಏನೋ ಆಲೋಚಿಸುತ್ತಿದ್ದುಬಿಟ್ಟು. ಆಲೋಚಿಸುತ್ತಲೇ ಅವನು ಕಣ್ಣು ಮೇಲೆತ್ತಿ ನೋಡಿದ ಟೆಲಿಫೋನ್ ಬೂತ್ ಕಡೆ ಒಬ್ಬಿಬ್ಬರು ವ್ಯಕ್ತಿಗಳು ಬರುವುದು ಕಾಣಿಸಿತು. ತಾನು ತಡ ಮಾಡಿದರೆ ಬೂತ್‌ನ ಎದುರಿಗೆ ಒಂದು ದೊಡ್ಡ ಕ್ಯೂ ತಯಾರಾಗಬಹುದು.

"ತಡೀತೀನಿ ಮೇಖಲೆ ನಿನ್ನನ್ನು ತಡೆದೇ ತಡೀತೀನಿ. ನಿನ್ನ ಆಟಕ್ಕೆ ಮುಕ್ತಾಯ ಹೇಳೇ ಹೇಳ್ತೀನಿ!" ತನ್ನಲ್ಲಿ ತಾನೇ ಗೊಣಗಿಕೊಳ್ಳುತ್ತಾ, ಅವನು ಕ್ಷಣದಲ್ಲಿ ಒಂದು ನಿರ್ಣಯಕ್ಕೆ ಬಂದ ಆ ನಿರ್ಣಯಕ್ಕೆ ಬಂದೊಡನೆ ಅವನು ಮತ್ತೊಂದು ಸಲ ರಿಸೀವರ್ ಎತ್ತಿಕೊಂಡು ಸರಸರನೆ ಡಯಲ್ ಮಾಡತೊಡಗಿದ. ಕನೆಕ್ಷನ್ ಸಿಕ್ಕೊಡನೆಯೇ ಕಾಯಿನ್ ಹಾಕಿದ.

"ಎಸ್!" ಅತ್ತಲಿಂದ ಕೇಳಿಬಂತು. ಅದಕ್ಕೆ ಉತ್ತರ ನಿಧಾನವಾಗಿ, ತುಂಬಾ ನಿಧಾನವಾಗಿ ಹೇಳಿದಾಗಲೂ ಸ್ಪಷ್ಟವಾಗಿ ಹೇಳಿದ ಜಾನಿವಾಕರ್, "ಲೋ........ಟಸ್"

"ಲೋಟಸ್" ಅತ್ತಲಿಂದ ಕೇಳಿಸಿತು.

ಮೇಖಲೆ ನಿಧಾನವಾಗಿ ರಿಸೀವರ್ ಕ್ರೆಡಲ್ ಮಾಡಿದಳು. ಅವಳ ಮೆದುಳು ವೇಗವಾಗಿ ಆಲೋಚಿಸುತ್ತಿತ್ತು. ಜಾನಿವಾಕರ್ ಯಾವುದೋ ಆಟ ಆಡುತ್ತಿದ್ದಾನೆ–ಏನದು ? ತಾನೇ ಅವನನ್ನು ಆಹ್ವಾನಿಸಿದರೂ ಅವನು ರಿಜೆಕ್ಟ್ ಮಾಡ್ತಿದಾನೆ. ನಿಜಕ್ಕೂ ಜಾನಿವಾಕರ್‌ನಂತಹ ವಿದೇಶಿ ಗೂಢಚಾರಿ ತನ್ನಂತಹ ಸಮ್ಮೋಹನಾಸ್ತ್ರವನ್ನು ಬಳಸಿಕೊಂಡು ಎಷ್ಟು ಕೆಲಸಗಳನ್ನಾದರೂ ಸಾಧಿಸಬಹುದು. ಆ ಅವಕಾಶವನ್ನು ಯಾವುದೇ ಷರತ್ತಿಲ್ಲದೆ ತನ್ನಷ್ಟಕ್ಕೆ ತಾನೇ ಅವನಿಗೆ ಕೊಡುತ್ತಿದ್ದಾಳೆ. ಆದರೂ ಅವನು ರಿಜೆಕ್ಟ್ ಮಾಡ್ತಿದಾನೆ ಯಾಕೆ? ತನ್ನ ಆಫರ್ ಅಂಗೀಕರಿಸಲು ನಿಜವಾಗಿಯೂ ಜಾನಿವಾಕರ್‌ಗೆ

ಆತ್ಮಗೌರವ ಅಡ್ಡ ಬರುತ್ತಿದೆಯೆ ? ಕೆಲಸ ಸಾಧಿಸಲು ಜಾನಿವಾಕರ್‌ಗೆ ಒಬ್ಬ ಕಾಲ್‌ಗರ್ಲ್ ಸಹಾಯ ಪಡೆಯುವುದು ಇಷ್ಟವಿಲ್ಲವೆ? ಅವಳು ತಲೆ ಜಾಡಿಸಿದಳು. ನಾನ್‌ಸೆನ್ಸ್ ವಿದೇಶಗಳಲ್ಲಿ ಆಪರೇಟ್ ಮಾಡುವ ಗೂಢಚಾರರಿಗೆ ನೀತಿ ಯಾವುದು, ನಿಜಾಯಿತಿ ಯಾವುದು? ಅವಕಾಶಗಳಿಗೋಸ್ಕರ ಅವರು ಎದುರು ನೋಡುತ್ತಿರುತ್ತಾರೆ. ಹಾಗಿರುವಾಗ ಇಂತಹ ದೊಡ್ಡ ಅವಕಾಶವನ್ನು ತನ್ನಷ್ಟಕ್ಕೆ ತಾನು ನೀಡುತ್ತಿರುವಾಗ ಜಾನಿವಾಕರ್ ದೂರ ಸರಿಯುತ್ತಿದ್ದಾನೆ. ಇಂಡಿಯಾದಲ್ಲಿ ವಿದೇಶೀ ಗೂಢಚಾರರಿಗೆ ಮಿಲಿಟರಿ ರಹಸ್ಯವನ್ನು ಸಂಪಾದಿಸುವುದು ಅತಿ ಸುಲಭ. ಅಧಿಕಾರಿಗಳಿಗೆ ಕೊಂಚ ದುಡ್ಡು, ರಾತ್ರಿಯೊಬ್ಬ ಹುಡುಗಿ, ಒಂದು ಫುಲ್ ಬಾಟಲ್ ವ್ಹಿಸ್ಕಿ ಕೊಟ್ಟರೆ-ಇವು ಸಾಕು ಮಾತೃದೇಶವನ್ನು ಮಾರಲು! ಅದರಲ್ಲೂ ತನ್ನಂತಹ ಯುವತಿಯನ್ನು ಏರ್ಪಾಡು ಮಾಡಿದರೆ ಅಧಿಕಾರಿಗಳು ಹೆತ್ತ ತಾಯಿಯನ್ನಾದರೂ ಮಾರಲು ಸಿದ್ಧವಾಗುತ್ತಾರೆ. ವಿಲಾಸಗಳಿಗೋಸ್ಕರ ತಹತಹಿಸುವ ಅಧಿಕಾರಿಗಳನ್ನು ಹಣ, ಹೆಂಡ, ಹೆಣ್ಣು-ಇವನ್ನು ತೋರಿಸಿ ವಶಪಡಿಸಿಕೊಳ್ಳುವುದು ಅತಿ ಸುಲಭ. ತನ್ನನ್ನೇ ಎಷ್ಟೋ ಸಲ ಅಂತಹ ಕೆಲಸಗಳಿಗೋಸ್ಕರ ಜೇಕೇ ಬಳಸಿಕೊಂಡಿದ್ದ. ಕೊಳೆತುಹೋದ ಈ ವ್ಯವಸ್ಥೆಯಲ್ಲಿ ಒಬ್ಬ ಕಾಲ್‌ಗರ್ಲ್ ಸಾಧಿಸಲಾರದ್ದನ್ನುವುದು ಯಾವುದೂ ಇಲ್ಲ. ಮೋಖಲೆ ತನ್ನಲ್ಲೇ ವ್ಯಂಗವಾಗಿ ನಕ್ಕಳು. ಜಾನಿವಾಕರ್ ತನ್ನ ಆಫರ್ ತಿರಸ್ಕರಿಸಿದನೆಂದರೆ ಅವನದು ಏನೋ ಬೇರೆ ಸಂಚಿರಬೇಕು. ಏನು ಆ ಸಂಚು? ತಿಳಿದುಕೊಳ್ಳಬೇಕು. ಹಠಾತ್ತನೆ ಅವಳಿಗೆ ತನ್ನ ಕೈಯಲ್ಲಿ ತೆರೆಯದೇ ಹಾಗೆಯೇ ಇದ್ದ ಕವರ್ ನೆನಪಾಯ್ತು. ಜೇಕೇ ಕಳುಹಿಸಿದ ಮೆಸೇಜ್ ಏನು ? ಅವಳು ಸರಸರನೆ ಕವರ್ ಹರಿದು ಒಂದು ಕಾಗದ ಹೊರ ತೆಗೆದಳು

'ಡಿಯರ್ ಬೇಬಿ,

'ಈ ವಿಷಯ ತುಂಬಾ ರಹಸ್ಯವಾದುದರಿಂದ ಫೋನ್‌ನಲ್ಲಿ ನಿನಗೆ ಹೇಳಲಿಲ್ಲ. ಕವರ್ ಅನ್ನು ಎಚ್ಚರಿಕೆಯಿಂದ ಸೀಲ್ ಮಾಡಿ ನಂಬಿಕಸ್ತನಾದ ವ್ಯಕ್ತಿಯೊಂದಿಗೆ ಕಳುಹಿಸುತ್ತಿದ್ದೇನೆ.

'ಈ ಕವರ್‌ನಲ್ಲಿಯೇ ಒಂದು ಫೋಟೋ ಇದೆ. ಆ ಫೋಟೋ ನೋಡುತ್ತಲೇ ಅದು ಯಾರದೆಂದು ನಿನಗೆ ಅರ್ಥವಾಗುತ್ತದೆ. ಆ ಫೋಟೋದಲ್ಲಿನ ವ್ಯಕ್ತಿಯನ್ನು ನೀನು ಈ ರಾತ್ರಿ ಎಂಟರ್‌ಟೈನ್ ಮಾಡಬೇಕು. ಅವನು ನಿನಗೊಂದು ಸೀಲ್ಡ್ ಕವರ್ ಕೊಡುತ್ತಾನೆ. ಅದರಲ್ಲಿ ದೇಶಕ್ಕೆ ಸಂಬಂಧಿಸಿದ ರಹಸ್ಯಗಳಿರುತ್ತವೆ. ಆ ಕವರ್ ಅನ್ನು ನೀನು ಎಚ್ಚರಿಕೆಯಿಂದ ನನಗೆ ಒಪ್ಪಿಸಬೇಕು.

ಡಾಲ್ ಲೇಕ್‌ನಲ್ಲಿ ಅವನನ್ನು ಭೇಟಿಯಾಗು. ಓದಿದೊಡನೆಯೇ ಈ ಪತ್ರವನ್ನು ಸುಟ್ಟುಹಾಕು.

"ಲವ್-ಜೇಕೇ"

ಅವಳು ಕವರ್‌ನೊಳಗೆ ನೋಡಿದಳು. ಒಳಗ್ಯಾವುದೋ ಫೋಟೋ ಇತ್ತು. ಆಸಕ್ತಿಯಿಂದ ಆ ಫೋಟೋವನ್ನು ಹೊರಗೆಳೆದಳು. ಅಷ್ಟೆ! ಆ ಫೋಟೋವನ್ನು ನೋಡುತ್ತಲೆ ಅವಳು ಬೆಚ್ಚಿಬಿದ್ದಳು. ಅವಳ ಕಣ್ಣುಗಳು ಅರಳಿದವು. ಕಣ್ಣರಳಿಸಿ ಆ ಫೋಟೋದ ಕಡೆಯೇ ನೋಡಿದಳು.

## ೧೭

ಸಾಯಂಕಾಲ ನಾಲ್ಕು ಗಂಟೆಗಳಾಗುತ್ತಲಿರುವಾಗ ಮೇಖಲೆ ಲೇಕ್‌ವ್ಯೂ ಹೋಟೆಲ್‌ನಿಂದ ಹೊರಬಿದ್ದಳು. ಹೋಟೆಲ್‌ನಿಂದ ಹೊರಬೀಳುವ ವೇಳೆಗೆ ಅವಳು ಗಂಧರ್ವ ಕನ್ಯೆಯಂತೆ ಸಿಂಗರಿಸಿಕೊಂಡಿದ್ದಳು. ಫ್ರಾನ್ಸ್‌ನಲ್ಲಿ ಹೊಲಿಸಿದ ಡೀ ಫ್ರಾಲಿನ್ ಸೂಟ್ ಧರಿಸಿ ಅದರ ಮೇಲೆ ಬೆಲೆ ಬಾಳುವ ಮಿಂಕ್ ಕೋಟ್ ಹಾಕಿಕೊಂಡಳು. ಹೈಹೀಲ್ಸ್. ಮೆಟ್ಟಿಕೊಂಡು ಗಾಳಿಯಲ್ಲಿ ತೇಲುತ್ತಿರುವವಳಂತೆ ಅವಳು ನಡೆಯುತ್ತಾ ಹೊರಬರುತ್ತಿದ್ದರೆ ಗಂಡು ಹೆಣ್ಣಿನ ವ್ಯತ್ಯಾಸವಿಲ್ಲದೆ ಪ್ರತಿಯೊಬ್ಬರ ಕಣ್ಣುಗಳೂ ಅವಳ ಮೇಲೆಯೇ ಇದ್ದವು.

ಫ್ಯಾಷನ್ ಪ್ರಪಂಚಕ್ಕೆ ಪ್ಯಾರಿಸ್ ಮೆಕ್ಕಾ ಇದ್ದಂತೆ. ಪ್ರಪಂಚದಲ್ಲಿನ ಮಿಲಿಯನೇರ್‌ಗಳೆಲ್ಲರೂ ಪ್ಯಾರಿಸ್‌ನಲ್ಲಿ ಶಾಪಿಂಗ್ ಮಾಡಲು ಇಷ್ಟಪಡುತ್ತಾರೆ. ಯಾವ ಫ್ಯಾಷನ್ನಾದರೂ ಮೊಟ್ಟಮೊದಲು ಪ್ಯಾರಿಸ್‌ನಿಂದ ಹೊರಡಬೇಕಾದದ್ದೇ. ಪ್ರಪಂಚ ಪ್ರಖ್ಯಾತಿ ಪಡೆದ ಡ್ರೆಸ್ ಮೇಕರ್‌ಗಳು ತಮ್ಮ ಕಲೆಯನ್ನೆಲ್ಲಾ ಉಪಯೋಗಿಸಿ ಒಂದು ಡಿಸೈನ್ ತಯಾರು ಮಾಡಿದರೆ ಇಪ್ಪತ್ನಾಲ್ಕು ಗಂಟೆಗಳು ಕಳೆಯುವುದರೊಳಗೆ ಉಳಿದ ಪ್ರಪಂಚವೆಲ್ಲಾ ಆ ಫ್ಯಾಷನ್ ಅನ್ನು ಅನುಸರಿಸಲು ಪ್ರಾರಂಭಿಸುತ್ತದೆ. ಒಂದು ಪಾಪ್ಯುಲರ್ ಡಿಸೈನ್ ತಯಾರು ಮಾಡಿದ್ದಕ್ಕೆ ಒಬ್ಬ ಡ್ರೆಸ್ ಮೇಕರ್‌ಗೆ ಕೆಲವು ಲಕ್ಷ ಡಾಲರ್‌ಗಳ ಪಾರಿತೋಷಕ ಸಲ್ಲಿಸಿದ ಸಂದರ್ಭಗಳು ಫ್ರಾನ್ಸ್‌ನಲ್ಲಿ ಎಷ್ಟೋ ಇವೆ. ಮೇಖಲೆ ಜೇಕೇಯೊಂದಿಗೆ ಕೂಡಿ ಕೆಲವು ನೂರು ಸಲ ಪ್ಯಾರಿಸ್‌ನಲ್ಲಿ ಶಾಪಿಂಗ್ ಮಾಡಿದ್ದಳು. ಜೇಕೇ ಶ್ರದ್ಧೆಯಿಂದ ತಾನೇ ಸ್ವತಃ ಅವಳಿಗೆ ಸರಿಹೊಂದುವಂತಹ ಡಿಸೈನ್ ಸೆಲೆಕ್ಟ್ ಮಾಡುತ್ತಿದ್ದ. ಯುವತಿಯರಿಗೆ ಸರಿಯಾದ ಡ್ರೆಸ್ ಸೆಲೆಕ್ಟ್ ಮಾಡುವುದರಲ್ಲಿ ಜೇಕೇ ಅದ್ಭುತವಾದ ನೈಪುಣ್ಯ

ತೋರಿಸುತ್ತಿದ್ದ. ಇಪ್ಪತ್ನಾಲ್ಕು ಗಂಟೆಗಳೂ ದುಡ್ಡು ಸಂಪಾದಿಸುವುದರಲ್ಲಿ ಮುಳುಗಿರುವ ಜೇಕೇಗೆ ಇಂತಹ ವಿಷಯಗಳ ಬಗೆಗೆ ಆಲೋಚಿಸಲು ಪುರುಸೊತ್ತೆಲ್ಲಿರುತ್ತದೊ! ಅಸಲು ಅವನು ಅಷ್ಟು ನೈಪುಣ್ಯವನ್ನು ಹೇಗೆ ಸಂಪಾದಿಸಿಕೊಂಡನೋ ಮೇಖಲೆಗೆ ಅರ್ಥವಾಗಿರಲಿಲ್ಲ. ಮೇಖಲೆಗೆ ಯಾವ ಡ್ರೆಸ್ಸಾದರೂ ಯಾವ ಡಿಸೈನ್ ಆದರೂ ಅದ್ಭುತವಾಗಿ ಒಪ್ಪುತ್ತಿತ್ತು. ಅದರಲ್ಲೂ ಜೇಕೇ ಸೆಲೆಕ್ಟ್ ಮಾಡುವ ಡ್ರೆಸ್‌ನಲ್ಲಿ ಅವಳು ಮತ್ತಷ್ಟು ಮನೋಹರವಾಗಿ ಕಂಗೊಳಿಸುತ್ತಿದ್ದಳು. ಆ ಡಿಸೈನ್‌ನಲ್ಲಿ ಅವಳ ಸೌಂದರ್ಯಕ್ಕೆ ಸಾಟಿಯಿರಲಿಲ್ಲ.

"ಇದೆಲ್ಲಾ ನಮ್ಮ ಎಸ್ಟೀಮ್ಡ್ ಕಸ್ಟಮರ್‌ಗಳನ್ನು ಸಂತೋಷಪಡಿಸಲೆಂದೇ ಬೇಬಿ! ಒಂದು ಸಲ ನಿನ್ನನ್ನು ನೋಡಿದಮೇಲೆ ಲೋಕದಲ್ಲಿನ ಇನ್ಯಾವ ಯುವತಿಯು ಅವರ ಕಣ್ಣಿಗೆ ಸುಂದರವಾಗಿ ಕಾಣಕೂಡದು. ಅದಕ್ಕೇ ನನ್ನ ಅಮೂಲ್ಯ ಸಮಯವನ್ನು ನಿನ್ನ ಶಾಪಿಂಗ್‌ಗೋಸ್ಕರ ಮೀಸಲಿಟ್ಟಿರ್ತೀನಿ" ಎಂದು ಜೇಕೇ ಹೇಳುತ್ತಿದ್ದ.

ಅವನು ಹೇಳುತ್ತಿದ್ದುದರಲ್ಲಿ ಅತಿಶಯೋಕ್ತಿ ಇರಲಿಲ್ಲ. ಮೇಖಲೆಯಂತಹ ಅಸಾಧಾರಣ ಸೌಂದರ್ಯವತಿ ಆ ಅದ್ಭುತವಾದ ಉಡುಪುಗಳಲ್ಲಿ ಸಾಣಿ ಹಿಡಿದ ವಜ್ರದಂತೆ ಪ್ರಕಾಶಿಸುತ್ತಿದ್ದಳು. ಅವಳ ಸಮ್ಮೋಹನ ಶಕ್ತಿಗೆ ಮರುಳಾಗಿ ಎಂತಹ ಕಠಿಣನಾದ ಬಿಜಿನೆಸ್ ಎಕ್ಸಿಕ್ಯೂಟಿವ್ ಆದರೂ ಜೇಕೇ ಕೇಳಿದಷ್ಟು ಕಮಿಷನ್ ಕೊಡಲು ಸಿದ್ಧನಾಗುತ್ತಾನೆ. ಎಂತಹ ಕಷ್ಟದ ಕೆಲಸವಾದರೂ ಮೇಖಲೆಯನ್ನು ಅಡ್ಡವಿಟ್ಟುಕೊಂಡು ಜೇಕೇ ಸಾಧಿಸಿಕೊಳ್ಳುತ್ತಿದ್ದ. ಸದ್ಯ ಮೇಖಲೆ ಧರಿಸಿದ್ದು ಅವಳಿಗಿದ್ದ ನೂರಾರು ಜೊತೆ ಉಡುಪುಗಳಲ್ಲಿ ಎಲ್ಲಕ್ಕಿಂತಲೂ ಬೆಲೆ ಬಾಳುವಂತಹುದು. ಇತ್ತೀಚೆಗಷ್ಟೇ ಫ್ರಾನ್ಸ್‌ಗೆ ಹೋದಾಗ ಜೇಕೇ ಅವಳಿಗೆ ಆ ಡ್ರೆಸ್ ಕೊಂಡು ಕೊಟ್ಟಿದ್ದ. ಈಗ ಮೇಖಲೆ ಭೇಟಿಯಾಗಲು ಹೋಗುತ್ತಿರುವ ವ್ಯಕ್ತಿ ಭಾರತ ಸರಕಾರದಲ್ಲಿ ತುಂಬಾ ಉನ್ನತ ಸ್ಥಾನದಲ್ಲಿರುವ ವ್ಯಕ್ತಿ. ಅಂತಹ ಮುಖ್ಯವಾದ ವ್ಯಕ್ತಿಗಳೊಂದಿಗೆ ವ್ಯವಹರಿಸಲು ಹೋಗುವಾಗ ಮೇಖಲೆ ತನ್ನ ಹತ್ತಿರವಿರುವ ಹೂಬಾಣಗಳೆಲ್ಲವನ್ನೂ ಸಿದ್ಧಪಡಿಸಿಕೊಂಡೇ ಹೊರಡುತ್ತಿದ್ದಳು. ಸದ್ಯಕ್ಕೆ ಅವಳು ಧರಿಸಿದ್ದ ಉಡುಪು ಇಂತಹ ಸಂದರ್ಭಕ್ಕಾಗಿಯೇ ಮೀಸಲಿಟ್ಟಿದ್ದು. ಹೋಟೆಲ್ ಲಾಂಚ್‌ನಿಂದ ಅವಳು ಹೊರಬರುತ್ತಿರುವಂತೆಯೇ ಒಂದು ಬೆಲೆ ಬಾಳುವ ಫಾರಿನ್ ಕಾರು ತಳತಳನೆ ಹೊಳೆಯುತ್ತಾ ಅವಳ ಮುಂದೆ ಬಂದು ನಿಂತಿತು. ಅವಳಿಗೋಸ್ಕರ ಜೇಕೇ ಅಂತಹ ಕಾರುಗಳ

ಏರ್ಪಾಡು ಮಾಡುತ್ತಿದ್ದ. ಕಾರು ನಿಲ್ಲುತ್ತಲೇ ಡ್ರೈವಿಂಗ್ ಸೀಟಿನಿಂದ ಫುಲ್ ಯೂನಿಫಾರ್ಮ್‌ನಲ್ಲಿದ್ದ ಡ್ರೈವರ್ ಕೆಳಗಿಳಿದು ಬ್ಯಾಕ್ ಡೋರ್ ತೆರೆದು ಹಿಡಿದುಕೊಂಡು ವಿನಯದಿಂದ ನಿಂತ. ಮೇಖಲೆ ಠೀವಿಯಿಂದ ಯುವ ರಾಣಿಯಂತೆ ಕಾರುಹತ್ತಿ ಹಿಂದಿನ ಸೀಟಿನಲ್ಲಿ ಒಂಗಡೆ ಕುಳಿತುಕೊಂಡಳು. ಕಾರಿಗೆ ಮೂರು ಕಡೆ ಇರುಳ ಗಾಜುಗಳೆಲ್ಲವೂ ಸನ್ ಗ್ಲಾಸಸ್. ಅವುಗಳನ್ನು ಪೂರ್ತಿಯಾಗಿ ಮೇಲೆತ್ತಲಾಗಿದ್ದರಿಂದ ಒಳಗೆ ಕುಳಿತಿದ್ದ ಮನುಷ್ಯರು ಹೊರಗಿನವರಿಗೆ ಕಾಣಿಸುತ್ತಿರಲಿಲ್ಲ. ಮೇಖಲೆ ಕಾರು ಹತ್ತಿ ಕುಳಿತೊಡನೆಯೇ ಡ್ರೈವರ್ ಬಾಗಿಲು ಮುಚ್ಚಿ, ಡ್ರೈವರ್ ಸೀಟಿನಲ್ಲಿ ಕುಳಿತು ಕಾರು ಸ್ಟಾರ್ಟ್ ಮಾಡಿದ.

"ಎಲ್ಲಿಗೆ ಹೋಗ್ಬೇಕು ಮೇಡಮ್?" ಹೋಟೆಲ್ ಗೇಟು ದಾಟಿ ಮೇನ್ ರೋಡಿನ ಮೇಲೆ ತಿರುವಿನಲ್ಲಿ ಹೊರಳುತ್ತಿರುವಾಗ ಡ್ರೈವರ್ ವಿನಯದಿಂದ ಕೇಳಿದ.

"ಎಲ್ಲಿಗೆ ಹೋಗಬೇಕೆಂದು ನಿನಗೆ ಹೇಳಿಲ್ಲವೇ?" ಹುಬ್ಬು ಗಂಟಿಕ್ಕುತ್ತಾ ಅವಳು ಪ್ರಶ್ನಿಸಿದಳು.

"ಇಲ್ಲ ಮೇಡಮ್! ನಿಮ್ಮ ಸೂಚನೆ ಪ್ರಕಾರ ನಡ್ಕೋಬೇಕೂಂತ ಬಿಗ್ ಬಾಸ್ ಆರ್ಡರ್!"

ಬಿಗ್ ಬಾಸ್ ಅಂದ್ರೆ ಜೇಕೇ. ಅವನಿಗೆ ಸಂಬಂಧಪಟ್ಟ ವ್ಯಕ್ತಿಗಳು ಅವನನ್ನು ಇನ್ನೂ ಅನೇಕ ಹೆಸರುಗಳಿಂದ ಕರೆಯುತ್ತಿದ್ದರು....ಚೀಫ್! ಸುಪ್ರೀಮ್! ಕಿಂಗ್! ಇನ್ನೂ ಇನ್ನೂ ಏನೇನೋ ಹೆಸರುಗಳು! ಅಷ್ಟು ವಿಧವಾದ ಹೆಸರುಗಳಿಂದ ಕರೆಸಿಕೊಳ್ಳುವುದನ್ನು ಜೇಕೇ ಇಷ್ಟಪಡುತ್ತಿದ್ದ. ಮೇಖಲೆ ಅರ್ಥವಾದಂತೆ ತಲೆಯಾಡಿಸಿದಳು. ಈ ದಿನ ತಾನು ಹೊರಟ ಮಿಷನ್ ಬಗೆಗೆ ಜೇಕೇ ತುಂಬಾ ಎಚ್ಚರದಿಂದಿದ್ದಾನೆ. ತನಗೆ ತುಂಬಾ ಬೇಕಾದ ವ್ಯಕ್ತಿಗಳಿಗೆ ಕೂಡ ಮೇಖಲೆ ಹೋಗುತ್ತಿರುವ ಕೆಲಸ ಯಾವುದೆಂದು ತಿಳಿಯುವುದು ಅವನಿಗೆ ಇಷ್ಟವಿಲ್ಲ. ಅದಕ್ಕೇ ತನಗೆ ಕಳುಹಿಸಿದ ಮೆಸೇಜ್ ಕವರ್‌ನಲ್ಲಿ ಸೀಲ್ ಮಾಡಿ ರಹಸ್ಯವಾಗಿ ತನಗೆ ನಂಬಿಕೆಯಿದ್ದ ವ್ಯಕ್ತಿಯ ಕೈಯಲ್ಲಿ ಕೊಟ್ಟು ಕಳುಹಿಸಿದ್ದ. ಶ್ರೀನಗರದಲ್ಲಿ ತನಗೋಸ್ಕರ ರೂಮು ಬುಕ್ ಮಾಡಿಸಿ ಈಗ ಈ ಕಾರು ಏರ್ಪಾಡು ಮಾಡಿಸಿದ್ದಾನೆಂದರೆ ಜೇಕೇಗೆ ಸಂಬಂಧಿಸಿದ ಪ್ರಧಾನ ಏಜೆಂಟ್ ಯಾರೋ ಇಲ್ಲಿ ಇದ್ದಿರಬೇಕು. ಕೊನೆಗೆ ಅವನಿಗೆ ಕೂಡ ತಾನು ಹೋಗುತ್ತಿರುವ ಕೆಲಸವೇನೆಂದು ತಿಳಿಯುವುದು ಜೇಕೇಗೆ ಇಷ್ಟವಿರಲಿಕ್ಕಿಲ್ಲ. ಅದಕ್ಕೇ ತನ್ನಿಂದಲೇ ಆದೇಶ ಪಡೆಯಲು ಆದೇಶಿಸಿರಬೇಕು.

"ಡಾಲ್ ಲೇಕ್!" ಮೇಖಲೆ ಆಜ್ಞಾಪಿಸಿದಳು.

ಡ್ರೈವರ್ ತಲೆಯಾಡಿಸಿದ. ಮರುಕ್ಷಣ ಆ ಕಾರು ಮೇನ್ ರೋಡಿನ ಮೇಲೆ ಬಾಣದಂತೆ ನುಗ್ಗಿತು. ಮೇಖಲೆ ತಪ್ಪು ಮಾಡಿದಳು. ತುಂಬಾ ದೊಡ್ಡ ತಪ್ಪು ಮಾಡಿದಳು. ಸದ್ಯಕ್ಕೆ ತಾನು ಪ್ರಯಾಣಿಸುತ್ತಿರುವ ಕಾರು ಜೇಕೇ ಏರ್ಪಾಡು ಮಾಡಿದ್ದಲ್ಲನೆಂದೂ ಅದನ್ನು ಡ್ರೈವ್ ಮಾಡುತ್ತಿದ್ದ ವ್ಯಕ್ತಿ ಜಾನಿವಾಕರ್ ಏರ್ಪಾಡು ಮಾಡಿದ ವ್ಯಕ್ತಿಯೆಂದೂ ಅವಳಿಗೆ ಅನುಮಾನ ಕೂಡ ಉಂಟಾಗಲಿಲ್ಲ.

ಕಾರು ಶರವೇಗದಿಂದ ಮುಂದೆ ಹೋಗುತ್ತಿತ್ತು.

* * * *

ಭೂಲೋಕ ಸ್ವರ್ಗವೆಂದು ಹೆಸರು ಪಡೆದ ಕಾಶ್ಮೀರ ತುಂಬಾ ಅಂದವಾದ ಕೊಳ್ಳವೆಂದು ಹೇಳುವುದು ಚರ್ವಿತ ಚರ್ವಣವೇ ಆಗುತ್ತದೆ. ಕಾಶ್ಮೀರದ ಸೌಂದರ್ಯವನ್ನು ಮಾತುಗಳಲ್ಲಿ ವರ್ಣಿಸುವುದು ಸಾಧ್ಯವಾಗುವ ವಿಷಯವಲ್ಲ ಆ ಅದ್ಭುತ ಸೌಂದರ್ಯವನ್ನು ಕಣ್ಣಾರೆ ನೋಡಿ ಆನಂದಿಸಬೇಕಾದುದೇ ! ಎತ್ತರವಾದ ಪರ್ವತಗಳೂ, ಆಳವಾದ ಕಣಿವೆಗಳೂ, ಅಮಾಯಕರಾದ ಪ್ರಜೆಗಳೂ ಅಂದವಾದ ಸ್ತ್ರೀ–ಪುರುಷರೂ, ಸೇಬುಹಣ್ಣಿನ ತೋಟಗಳೂ ಕಾಶ್ಮೀರದ ಹೆಸರು ಹೇಳುತ್ತಲೇ ನೆನಪಿಗೆ ಬರುತ್ತವೆ. ಇಲ್ಲಿಯ ಪ್ರಕೃತಿ ಸೌಂದರ್ಯ ಪ್ರಖ್ಯಾತವಾದುದು. ಅಲ್ಲಿನ ಸರೋವರಗಳಲ್ಲಿ ಮುಖ್ಯವಾದುದು ಡಾಲ್ ಲೇಕ್. ಕಾಶ್ಮೀರವನ್ನು ಸಂದರ್ಶಿಸುವ ಟೂರಿಸ್ಟುಗಳು ಒಂದು ಸಲವಾದರೂ ಡಾಲ್ ಲೇಕ್‌ನಲ್ಲಿನ ಹೌಸ್ ಬೋಟ್‌ಗಳಲ್ಲಿ ವಿಹರಿಸದೆ ಹಿರುಗಿ ಹೋಗುವುದಿಲ್ಲ! ಆ ಹೌಸ್ ಬೋಟ್‌ಗಳು ಬಣ್ಣ ಬಣ್ಣದ ಡಿಸೈನ್‌ಗಳುಳ್ಳ ನೀರಿನ ಮೇಲೆ ತೇಲಿ ಹೋಗುತ್ತಿರುವಂತಹ ಮನೆಗಳು. ಅಂತಹುದೇ ಒಂದು ಬೆಲೆ ಬಾಳುವ ಲಕ್ಷುರಿ ಹೌಸ್ ಬೋಟಿನಲ್ಲಿ ಆ ರಾತ್ರಿ ದೇಶದಲ್ಲಿನ ಒಬ್ಬ ಪ್ರಮುಖ ರಾಜಕೀಯ ನಾಯಕ ಹೊರ ಪ್ರಪಂಚಕ್ಕೆ ಯಾರಿಗೂ ತಿಳಿಯದಂತೆ ರಹಸ್ಯವಾಗಿ ಒಂಟಿಯಾಗಿ ಕುಳಿತುಕೊಂಡು ಯಾರಿಗೋಸ್ಕರವೋ ಅಸಹನೆಯಿಂದ ದಾರಿ ಕಾಯುತ್ತಿದ್ದ. ಅವನ ವಯಸ್ಸು ಐವತ್ತೈದು ವರ್ಷಗಳಿರಬಹುದು. ತೆಳ್ಳಗೆ ಉದ್ದವಾಗಿದ್ದ. ತೆಳ್ಳಗಿದ್ದರೂ ಆ ವ್ಯಕ್ತಿಗೆ ಚಿಕ್ಕ ಸೈಜಿನ ಬಿಂದಿಗೆಯಂತಹ ಹೊಟ್ಟೆ ಅಸಹ್ಯವಾಗಿ ಕಾಣಿಸುತ್ತಿತ್ತು. ಕೆಂಪು ಮುಖ, ಬೋಳು ತಲೆ, ಚಿಕ್ಕ ಕಣ್ಣುಗಳು ಗಿಡುಗನ ಮೂಗು, ದಪ್ಪನೆಯ ತುಟಿಗಳು, ಚೈನ್ ಸ್ಮೋಕಿಂಗ್‌ನಿಂದಾಗಿ ಕಪ್ಪು ಬಣ್ಣಕ್ಕೆ ತಿರುಗಿದ್ದವು. ಬೆಲೆಬಾಳುವ ಗೋಲ್ಡ್ ಫ್ರೇಮ್‌ನ ಕನ್ನಡಕ ಅವನ ಗಿಡುಗನ ಮೂಗಿನ

ಮೇಲೆ ತಮಾಷೆಯಾಗಿ ಕುಳಿತಿತ್ತು. ಮೈಮೇಲೆ ದುಬಾರಿಯಾದ ಕಾಶ್ಮೀರಿ ಶಾಲು ಹೊದ್ದುಕೊಂಡಿದ್ದ. ಅವನ ಎದುರಿಗಿದ್ದ ಟೀಪಾಯ್ ಮೇಲೆ ಫಾರಿನ್ ವಿಸ್ಕಿ ಬಾಟಲ್‌ಗಳು ಎರಡು ಮೂರಿದ್ದವು. ಗ್ಲಾಸ್‌ನಲ್ಲಿ ವಿಸ್ಕಿ ಹಾಕಿಕೊಂಡು ಸೋಡಾ ಇಲ್ಲದೆಯೇ ಐಸ್ ಕ್ಯೂಬ್‌ಗಳಿಂದ ಒಂದು ರೌಂಡ್ ಮುಗಿಸಿದ. ಅವನಿಗೆ ಮೊದಲನೇ ಡೋಸ್ ಹಾಗೆಯೇ ಒಳಸೇರಬೇಕು. ಸೋಡಾ ಇಲ್ಲದೆಯೇ ಗಂಟಲನ್ನು ಸುಡುತ್ತಾ ಬೆಚ್ಚಗೆ ಆ ದ್ರವ ಒಳಗಿಳಿಯುತ್ತಿದ್ದಂತೆ ಅವನಿಗೆ ಹಿತವಾದ ಅನುಭವ ಉಂಟಾಗುತ್ತಿತ್ತು. ಮೊದಲನೇ ಡೋಸ್ ಕೊಂಚ ಕಿಕ್ ಕೊಡಲು ಪ್ರಾರಂಭಿಸಿದೊಡನೆಯೇ ಅವನು ಉಲ್ಲಾಸದಿಂದ ಗ್ಲಾಸ್‌ನಲ್ಲಿ ಮತ್ತೊಂದು ಪೆಗ್ ಬಾಗಿಸಿಕೊಂಡು, ಈ ಸಲ ಅದರ ತುಂಬಾ ಸೋಡಾ ಬೆರೆಸಿದ ನಂತರ ಐಸ್‌ಕ್ಯೂಬ್ ತೆಗೆದು ಅದರಲ್ಲಿ ಹಾಕಿ ಗ್ಲಾಸ್ ಅನ್ನು ನಿಧಾನವಾಗಿ ಕುಲುಕುತ್ತಾ ಅನ್ಯಮನಸ್ಕನಾಗಿ ತಲೆಯೆತ್ತಿ ನೋಡಿದ. ಅಷ್ಟೇ! ಅಕಸ್ಮಾತ್ತಾಗಿ ಅವನ ಕಣ್ಣುಗಳು ದೀವಟಿಗೆಗಳಂತೆ ಹೊಳೆಯತೊಡಗಿದವು. ಎದುರಿಗೆ ಮಹಾದ್ಭುತ ಸೌಂದರ್ಯ ರಾಶಿಯೇ ಮೈವೆತ್ತಂತಿದ್ದ ಯುವತಿ ನಿಂತಿದ್ದಳು. ಅವಳು ವಿಲಾಸದಿಂದ ತಲೆ ಮೇಲೆತ್ತಿ ಅವನ ಕಡೆ ನೋಡುತ್ತಾ, ಠೀವಿಯಿಂದ ಒಂದು ಕೈ ನಡುವಿಗಾನಿಸಿಕೊಂಡು ಮತ್ತೊಂದು ಕೈಯಿಂದ ಮಿಂಕ್ ಕೋಟು ಸರಿಪಡಿಸಿಕೊಳ್ಳುತ್ತಾ ವಯ್ಯಾರದಿಂದ ನಿಂತಿದ್ದಳು. ಆ ಯುವತಿಯನ್ನು ನೋಡುತ್ತಲೇ ಅವನ ಕಣ್ಣು ಕೋರೈಸಿದಂತಾಯ್ತು. ಕೆಲವು ಕ್ಷಣ ಮೈಮರೆತು ಅವಳನ್ನೇ ನೋಡುತ್ತಿದ್ದುಬಿಟ್ಟ.

ಅವಳು ಮೃದುವಾಗಿ ಗಂಟಲು ಸರಿಪಡಿಸಿಕೊಂಡಳು. “ಒಳಗೆ ಬರಬಹುದೆ?” ಅವಳ ಧ್ವನಿ ಕೋಗಿಲೆಗಿಂತಲೂ ಮಧುರವಾಗಿತ್ತು.

ಆ ಮಾತಿನಿಂದ ಅವನು ಟ್ರಾನ್ಸ್‌ನಿಂದ ಎಚ್ಚೆತ್ತವನಂತೆ ನೋಡಿ ಥಟ್ಟನೆ ಎದ್ದು ನಿಂತ ಇದುವರೆಗೆ ಅವನು ಕುಡಿದ ವಿಸ್ಕಿಯು ಮತ್ತು ಅವಳನ್ನು ನೋಡಿದ ಕಿಕ್‌ನ ಮುಂದೆ ಡಾಲ್ ಲೇಕ್‌ನಲ್ಲಿ ಬೆರೆತುಹೋಯ್ತು. ಅವನ ಅನ್ಯಮನಸ್ಕತೆ ಗಾಳಿಯಲ್ಲಿ ಹಾರಿ ಹೋಯಿತು. ಅವನು ಉತ್ಸಾಹದಿಂದ ಯುವಕನಂತೆ ಅವಳ ಹತ್ತಿರ ನಡೆದ. ಹೋಗುತ್ತಲೇ ಅವಳ ಕೈ ಹಿಡಿದುಕೊಂಡು “ಎಂತಹ ಮಾತು....ಎಂತಹ ಮಾತು!” ಅರೆಬರೆ ಹಿಂದಿಯಲ್ಲಿ ನುಡಿದ. “ಇಂತಹ ಸೌಂದರ್ಯ ತನ್ನಷ್ಟಕ್ಕೆ ತಾನೇ ಒಳ ಬರುತ್ತೇನೆಂದರೆ ಬಾ ಅನ್ನದೆ ಹೋಗೆನ್ನುವಷ್ಟು ಅರಸಿಕನೇ! ಸ್ವಾಗತ್ ಹೈ ! ಸುಸ್ವಾಗತ್ ಹೈ !” ಸಿನಿಮಾ ಶೈಲಿಯಲ್ಲಿ ಒಂದು ಡೈಲಾಗ್ ಹೇಳಿದ.

ಅವಳು ಅವನ ಕೈ ಹಿಡಿದುಕೊಂಡು ವಯ್ಯಾರದಿಂದ ಮುಂದಕ್ಕೆ ನಡೆದಳು. ಅವನು ತನ್ನನ್ನು ತಾನೆ ಮರೆತವನಂತೆ ಅವಳನ್ನು ನೋಡುತ್ತಾ ನಾಯಿ ಮರಿಯಂತೆ ಅನುಸರಿಸಿದ. "ಕೂತ್ಕೋಬಹುದಾ?" ಮತ್ತೊಂದು ಸಲ ಅಷ್ಟೇ ಮನೋಹರವಾಗಿ ಹಿಂದಿಯಲ್ಲಿ ಪ್ರಶ್ನಿಸಿದಳು.

"ಅರೆ, ಅರೆ ಕ್ಯಾ ಬಾತ್ ಹೈ. ಕ್ಯಾ ಬಾತ್ ಹೈ! ಬೈಠೋ, ಬೈಠೋ!" ಎಂದ.

"ಮೊದಲು ನೀವು ಕೂತ್ಕೊಳ್ಳಿ!" ಮೃದುವಾಗಿ ಅವನನ್ನೊಂದು ಕುರ್ಚಿಯಲ್ಲಿ ಕೂಡಿಸಿ ತಾನು ಮತ್ತೊಂದು ಕುರ್ಚಿಯಲ್ಲಿ ಕುಳಿತುಕೊಳ್ಳಹೋದಳು. ಅವನು ತಟಕ್ಕನೆ ಅವಳ ಕೈಹಿಡಿದುಕೊಂಡು ಹತ್ತಿರ ಎಳೆದುಕೊಂಡ. ಅವಳು ಎಂತಹುದೇ ಅಭ್ಯಂತರ ಹೇಳಲಿಲ್ಲ. ಅದೇ ಸಮ್ಮೋಹನಕರವಾದ ಮುಗುಳ್ನಗೆಯಿಂದ ವಯ್ಯಾರವಾಗಿ ಬಂದು ಅವನ ಮಡಿಲಲ್ಲಿ ಕುಳಿತುಕೊಂಡಳು.

"ತುಮ್ಹಾರಾ ನಾಮ್ ಕ್ಯಾ ಹೈ?" ಅವಳನ್ನು ಅಪ್ಪಿಕೊಳ್ಳುತ್ತಾ ಪ್ರಶ್ನಿಸಿದ. ಅವಳು ನಕ್ಕಳು.

"ನನ್ನೊಂದಿಗೆ ನೀವು ಹಿಂದಿಯಲ್ಲಿ ಮಾತಾಡಬೇಕಾದ್ದಿಲ್ಲ" ಎಂದಳು.

"ಅರೆ! ನೀನು ನಮ್ಮ ಕಡೆಯವಳಾ? ಹೇಳ್ಲಿಲ್ಲವಲ್ಲಾ?" ಸಂಭ್ರಮದಿಂದ ಅವಳ ಕೆನ್ನೆಗೆ ಮುತ್ತಿಡುತ್ತಾ ನುಡಿದ. "ಜೇಕೇ ಪಟಾಕಿಯಂತಹ ಹೆಣ್ಣನ್ನ ಕಳಿಸ್ತೀನಿ ಅಂತ ಹೇಳಿದ್ರೆ ಏನೋ ಅಂದ್ಕೊಂಡಿದ್ದೆ!"

"ಯಾಕೆ? ನಾನು ಪಟಾಕಿ ಇದ್ದ ಹಾಗಿಲ್ವಾ?" ಮುದ್ದಾಗಿ ಕೇಳಿದಳವಳು.

"ಛೆ ಛೆ! ಪಟಾಕಿಯಂತೆ ಯಾಕೆ? ಆಟಂಬಾಂಬ್‌ನಂತೆ ಇದ್ದೀಯ! ಜೇಕೇಗೆ ನಿಜವಾಗ್ಲೂ ಥ್ಯಾಂಕ್ಸ್ ಹೇಳಬೇಕು. ಇಷ್ಟಕ್ಕೂ ನಿನ್ನ ಹೆಸರೇನು?"

ಅವಳು ಮತ್ತೊಂದು ಸಲ ನಗುತ್ತಾ ತಲೆ ಅಡ್ಡವಾಗಿ ಆಡಿಸಿದಳು. "ನಾನು ಹೇಳೋದಿಲ್ಲ! ನೀವೇ ತಿಳಿದುಕೊಳ್ಳಬೇಕು!" ಕೆಣಕುವವಳಂತೆ ನೋಡಿದಳು.

ಅವನು ಪೆಚ್ಚಾಗಿ, "ಇದೊಳ್ಳೇ ಚೆನ್ನಾಗಿದೆ! ನಿನ್ನ ಹೆಸರು ನನಗೆ ಹೇಗೆ ತಿಳಿಯುತ್ತೆ?"

"ಹೊಸದಾಗಿ ತಿಳ್ಕೋಬೇಕಾಗಿಲ್ಲ–ನನ್ನ ಹೆಸರು ನಿಮಗೆ ಗೊತ್ತು!"

"ನನಗಾ? ನಿನ್ನ ಹೆಸರಾ? ನನಗೆ ಹೇಗೆ ಗೊತ್ತಾಗುತ್ತೆ?"

"ಗೊತ್ತಿದೆ!" ಅವಳು ಮತ್ತಷ್ಟು ಮಾದಕವಾಗಿ ನುಡಿದಳು.

ಅವನು ತಲೆ ಕೆರೆದುಕೊಂಡ. "ನಾನ್ಯಾವಾಗಲೂ ನಿನ್ನನ್ನ ನೋಡಿರೋ

ಹಾಗಿಲ್ವೇ!" ನೆನಪು ಮಾಡಿಕೊಳ್ಳಲು ಪ್ರಯತ್ನಿಸುತ್ತಾ ನುಡಿದ. "ಇಷ್ಟು ಸುಂದರವಾದ ಯುವತಿಯನ್ನು ಒಮ್ಮೆ ನೋಡಿದರೆ ಯಾರಾದರೂ ಮತ್ತೆ ಮರೀತಾರಾ?"

"ನೀವು ಮರೆತಿದೀರಲ್ಲ!"

"ಓಯ್! ಸುಮ್ನೆ ಹೇಳ್ತಿದೀಯಾ! ನಾನು ನಿನ್ನನ್ನ್ಯಾವಾಗಲೂ ನೋಡಿಲ್ಲ."

ಅವಳು ತಲೆ ಅಡ್ಡವಾಗಿ ಆಡಿಸಿದಳು. "ನೋಡಿದೀರಿ! ಇತ್ತೀಚೆಗಲ್ಲ-ತುಂಬಾ ಕಾಲದ ಹಿಂದೆ! ಸುಮಾರು ಏಳುವರ್ಷಗಳ ಹಿಂದೆ!"

ಅವನು ಚಕಿತನಾದ- "ನಿಜಾನಾ! ಆದರೆ, ಆಗ ನೀನು ತುಂಬಾ ಚಿಕ್ಕವ ಳಿರಬೇಕು. ನಾನು ಹೇಗೆ ನೋಡಿರ್‍ತೀನಿ!"

"ತೀರಾ ಅಷ್ಟು ಚಿಕ್ಕವಳಿರಲಿಲ್ಲ ಬಿಡಿ-ನನಗಾಗ ಹದಿನೈದು ವರ್ಷ."

"ಹಾಗಾ! ಎಲ್ಲಿ ನೋಡಿದೀನಪ್ಪಾ ಹೋಗ್ಲಿ! ಹೆಸರು ಹೇಳು-ನೆನಪಾಗು ತ್ತೇನೋ ನೋಡೋಣ!"

"ಮೇಖಲೆ!" ಅವನ ಕಣ್ಣುಗಳಲ್ಲಿ ಏನೋ ಹುಡುಕುತ್ತಿರುವವಳಂತೆ ನೋಡುತ್ತಾ ನುಡಿದಳು. ' ಮಣಿ ಮೇಖಲೆ! ಜ್ಞಾಪಕವಾಯ್ತಾ?"

"ಮೆಖಲೆ! ಮಣಿಮೇಖಲೆ! ಚೆನ್ನಾಗಿದೆ-ನಿನ್ನಂತೆಯೆ, ಸುಂದರವಾದ ಹೆಸರು"

"ಜ್ಞಾಪಕ ಬಂತಾ?" ಅವಳು ಮತ್ತೆ ಕೇಳಿದಳು.

"ಊಹೂಂ! ಇಲ್ಲ."

ಅವಳು ಥಟ್ಟನೆ ತಲೆ ತಿರುಗಿಸಿಕೊಂಡಳು. ಅವಳ ಕಣ್ಣುಗಳಲ್ಲಿ ಹಠಾತ್ತನೆ ಸಣ್ಣನೆಯ ಜ್ವಾಲೆಯೊಂದು ಎದ್ದುದನ್ನು ಅವನು ಗುರುತಿಸದೇ ಹೋಗ.

"ಹೋಗ್ಲಿ ಬಿಡು!" ಅವನು ಅವಳ ಗದ್ದ ತನ್ನಕಡೆ ಹಿಡಿದುಕೊಂಡು ತಿರುಗಿಸಿಕೊಳ್ಳುತ್ತಾ ನುಡಿದ. "ಬಹುಶಃ ಆವಾಗ್ಯಾವಾಗಲಾದರೂ ನಿನ್ನನ್ನು ನೋಡಿದೀನೇನೋ! ಅಷ್ಟಾಗಿ ಗಮನಿಸಿರಲಿಕ್ಕಿಲ್ಲ!"

"ಗಮನಿಸಿದೀರಿ! ತುಂಬಾ ಹತ್ತಿರದಿಂದ ಗಮನಿಸಿದೀರಿ!" ಹಲ್ಲು ಕಚ್ಚಿ ನಿಧಾನವಾಗಿ ನುಡಿದಳು. ತಲೆಯನ್ನು ಮಾತ್ರ ಅವನ ಕಡೆ ತಿರುಗಿಸಲಿಲ್ಲ.

"ಹತ್ತಿರದಿಂದ ಅಂದ್ರೆ?" ಕೇಳಿದ.

ಈ ಸಲ ಅವನ ಕಡೆ ತಲೆ ತಿರುಗಿಸಿ ನೇರವಾಗಿ ನೋಡಿದಳು. ಅವಳ ಕಣ್ಣುಗಳಲ್ಲಿ ವಿಚಿತ್ರವಾದ ಮಾರ್ಪಾಡು ಕಾಣಿಸುತ್ತಿತ್ತು. "ಹತ್ತಿರವಾಗಿ

ಇಷ್ಟು ಹತ್ತಿರವಾಗಿ!" ಅವನ ಕುತ್ತಿಗೆ ಸುತ್ತಲೂ ಕೈಹಾಕಿ ಮತ್ತಷ್ಟು ತನ್ನ ಕಡೆ ಎಳೆದುಕೊಳ್ಳುತ್ತಾ ಹೇಳಿದಳು ಅವಳ ಧ್ವನಿಯಲ್ಲಿ ನಾಗರಹಾವನ್ನು ಆಡಿಸುವ ನಾಗಸ್ವರದಂತಹುದೇನೋ ಇತ್ತು. ಇವಳು ಆ ರೀತಿ ಎಳೆದುಕೊಂಡಿದ್ದರಿಂದ ಅವನ ಮುಖ ಸರಿಯಾಗಿ ಅವಳ ಎತ್ತರವಾದ ವಕ್ಷಸ್ಥಲವನ್ನು ತಾಕಿತು. ಆ ಸ್ಪರ್ಶಕ್ಕೆ ಅವನು ಮಂತ್ರಕ್ಕೆ ಮೋಡಿಗೊಳಗಾದ ಹಾವಿನಂತೆ ಮೆತ್ತಗಾದ. "ಈಗಲಾದ್ರೂ ನೆನಪಾಯ್ತಾ?" ಅವಳ ಧ್ವನಿಯಲ್ಲಿ ಅಕಸ್ಮಾತ್ತಾಗಿ ಧ್ವನಿಸಿದ ಕಾಠಿಣ್ಯ ಅವನ ಮಿದುಳಿಗೆ ತಲುಪಲಿಲ್ಲ. ಆ ಸ್ಥಿತಿಯನ್ನು ಅವನು ದಾಟಿದ್ದ.

"ಏನೋ! ಇಷ್ಟು ವರ್ಷಗಳ ಪ್ರಜಾ ಸೇವೆಯಲ್ಲಿ ಎಷ್ಟು ಜನ ಯುವತಿಯರ ಜೊತೆ ಮಲಕ್ಕೊಂಡಿದೀನಿ!" ಅವಳ ಎದೆಯಲ್ಲಿ ಮುಖ ಹುದುಗಿಸುತ್ತಾ ಅರೆಬರೆ ಜ್ಞಾನದಲ್ಲಿದ್ದವನಂತೆ ತೊದಲುತ್ತಾ ನುಡಿದ. "ಎಷ್ಟು ಜನ ಯುವತಿಯರ ನೆನಪಿಟ್ಟುಕೊಳ್ಳೋದಿಕ್ಕೆ ಸಾಧ್ಯ? ಆದರೂ ನಿನ್ನ ವಿಷಯ ಬೇರೆ! ನಿನ್ನಷ್ಟು ಸುಂದರಿಯನ್ನು ಅವರಲ್ಲಿ ನೋಡಿದ್ದರೆ ಖಂಡಿತ ನೆನಪಿಟ್ಟುಕೊಂಡಿರುತ್ತಿದ್ದೆ! ಆದರೆ ಏನು ಮಾಡಲಿ? ಯಾಕೋ ನೆನಪಾಗುತ್ತಿಲ್ಲ!"

"ಬರುತ್ತೆ! ತಪ್ಪದೇ ಜ್ಞಾಪಕ ಬರುತ್ತೆ! ನಾನು ಜ್ಞಾಪಕ ಬರಿಸ್ತೀನಲ್ಲ!" ಹಲ್ಲು ಕಚ್ಚಿ ನುಡಿದಳು.

"ಸರಿ ಹಾಗಾದ್ರೆ!" ಮಿಂಕ್ ಕೋಟ್‌ನ ಮೇಲಿನಿಂದಲೇ ಅವಳ ವಕ್ಷಸ್ಥಲಕ್ಕೆ ಮುಖ ತೀಡುತ್ತಾ ಮತ್ತಿನಿಂದ ನುಡಿದ. ಆ ರೀತಿ ಮಾಡುವುದರಲ್ಲಿ ಅವನ ಗೋಲ್ಡ್ ಫ್ರೇಮ್ ಕನ್ನಡಕ ಯಾವಾಗಲೋ ಜಾರಿ ಕೆಳಗೆ ಬಿದ್ದು ಹೋಗಿತ್ತು. ಅವನು ಅದನ್ನೆಲ್ಲಾ ಲೆಕ್ಕಿಸಲಿಲ್ಲ. ಅವಳ ವಕ್ಷಸ್ಥಲಕ್ಕೆ ಮುಖ ತೀಡುತ್ತಲೇ ಇದ್ದ.

"ಒಂದು ಸಲ ನನ್ನ ಕಣ್ಣೊಳಗೆ ಕಣ್ಣಿಟ್ಟು ನೋಡು!" ಹಠಾತ್ತನೆ ಅವನ ತಲೆ ಕೂದಲು ಹಿಡಿದು ಹಿಂದಕ್ಕೆ ಜಗ್ಗುತ್ತಾ ಕಿರುಚುವವಳಂತೆ ನುಡಿದಳು.

ಅವನು ಬೆಚ್ಚಿಬಿದ್ದು ಅವಳ ಕಡೆ ನೋಡಿದ. ಅವಳ ಕಣ್ಣುಗಳ ಕಡೆ ನೋಡುತ್ತಲೇ ಅವನು ಅಪ್ರಯತ್ನವಾಗಿ ನಡುಗಿದ. ಹೃದಯ ನಡುಗಿತು. ಕಣ್ಣರಳಿಸಿ ಕೆಲವು ಕ್ಷಣ ಅವಳ ಕಣ್ಣುಗಳನ್ನೇ ನೋಡುತ್ತಿದ್ದುಬಿಟ್ಟ. ಮೇಖಲೆಯ ಕಣ್ಣುಗಳಲ್ಲಿ ಕಿಡಿಗಳು ಚಿಮ್ಮುತ್ತಿದ್ದವು.

*  *  *  *

ಒಂದು ಹೌಸ್ ಬೋಟ್ ನಿಧಾನವಾಗಿ ನೀರಿನ ಮೇಲೆ ತೇಲುತ್ತಾ ದಡ ಬಿಟ್ಟು ಸರೋವರದ ನಟ್ಟ ನಡುವೆ ಸಾಗಿ ಹೋಯ್ತು. ಅದು ತುಂಬಾ ಸಾಧಾರಣವಾದ ಹೌಸ್ ಬೋಟ್. ಸಾಮಾನ್ಯರು ಕೂಡ ಬಾಡಿಗೆಗೆ ಪಡೆಯುವಂತಹುದು. ಆದರೆ ಆ ಹೌಸ್ ಬೋಟಿನಲ್ಲಿ ಒಂದು ಸ್ತಂಭಕ್ಕೆ ಆತುಕೊಂಡು ನಿಂತು ಕಾತರದಿಂದ ಕೂಡಿದ ಕಣ್ಣುಗಳಿಂದ ದೂರಕ್ಕೆ ನೋಡಲು ಪ್ರಯತ್ನಿಸುತ್ತಿದ್ದ ವ್ಯಕ್ತಿ ಮಾತ್ರ ಸಾಮಾನ್ಯನಾಗಿರಲಿಲ್ಲ. ಅವನು ಜಾನಿವಾಕರ್! ಮೇಖಲೆಗೆ ಫೋನ್‌ನಲ್ಲಿ ಹೇಳಿದಂತೆ ಜಾನಿವಾಕರ್ ಕಾಶ್ಮೀರ ಬಿಟ್ಟು ಹೈದರಾಬಾದ್‌ಗೆ ತಿರುಗಿ ಹೋಗಿರಲಿಲ್ಲ. ಮೇಖಲೆ ಒಂದು ಸಲ ಅತಿ ಸುಲಭವಾಗಿ ಗುರುತು ಹಿಡಿದುದರಿಂದ ಅವನು ಎಚ್ಚರಿಕೆ ವಹಿಸಬೇಕೆಂದುಕೊಂಡಿದ್ದ. ಲೋಟಸ್‌ನೊಂದಿಗೆ ಕಾಂಟ್ಯಾಕ್ಟ್ ಮಾಡಿ ಮೇಖಲೆ ಎಲ್ಲಿಗೆ ಹೋಗುತ್ತಾಳೋ ತಿಳಿದುಕೊಳ್ಳಲು ಸರಿಯಾದ ಬಲೆ ಬೀಸಿದ್ದ.

ಜೇಕೇ ಏರ್ಪಾಡು ಮಾಡಿದಂತೆ ಅವಳಿಗೆ ಕಾರೊಂದು ಏರ್ಪಾಡು ಮಾಡಿ ಡ್ರೈವರ್ ಮೂಲಕ ಅವಳು ಎಲ್ಲಿಗೆ ಹೋದಳೆಂಬುದನ್ನು ತಿಳಿದುಕೊಂಡ. ಯಾವ ಕಾರಣದಿಂದಲೋ ಏನೋ ಜೇಕೇ ಕಳಿಸಬೇಕಾದ ಕಾರು ಮೇಖಲೆ ಹೊರಹೋಗಬೇಕಾದ ಸಮಯಕ್ಕೆ ಬರದಿದ್ದುದು ಅವನ ಅದೃಷ್ಟ. ಆ ಕಾರಿನಲ್ಲಿ ಮೇಖಲೆ ಎಲ್ಲಿ ಹೋದಳೆಂಬುದನ್ನು ತಿಳಿದುಕೊಂಡೊಡನೆಯೇ ಅವನು ಗಡಿಬಿಡಿಯಿಂದ ಡಾಲ್ ಲೇಕ್ ತಲುಪಿದ. ಅವನ ಹೌಸ್ ಬೋಟ್ ನಿಧಾನವಾಗಿ ಪ್ರಯಾಣಿಸುತ್ತಾ ಲೇಕ್‌ನ ನಡುವೆ ಹೋಗಿ ಮತ್ತೊಂದು ಹೌಸ್ ಬೋಟ್‌ಗೆ ಆನಿಕೊಂಡಂತೆ ನಿಂತುಕೊಂಡಿತು. ಅದೂ ಇದರಂತದೇ ಸಾಧಾರಣವಾದ ಹೌಸ್ ಬೋಟ್. ಆ ಹೌಸ್ ಬೋಟ್ ಅನ್ನು ಸಮೀಪಿಸುತ್ತಲೇ ಜಾನಿವಾಕರ್ ತನ್ನ ಹೌಸ್ ಬೋಟ್‌ನೊಳಗಿಂದ ಒಂದೇ ನೆಗೆತಕ್ಕೆ ಅದರ ಮೇಲೆ ಸೇರಿಕೊಂಡ.

ಅತ್ತಲಿನ ಬೋಟ್ ಮೇಲೆ ಕಾಲಿಡುತ್ತಲೇ ಒಂದು ಕ್ಷಣ ತಡ ಮಾಡದೆ ಒಳಗೋಡಿದ. ಆ ಹೌಸ್ ಬೋಟ್‌ನಲ್ಲಿ ಮತ್ತೊಬ್ಬ ವ್ಯಕ್ತಿ ಯಾರೋ ಕುಳಿತ್ತಿದ್ದ ಅವನ ಕೈಯಲ್ಲಿ ಪವರ್‌ಫುಲ್ ಬೈನಾಕ್ಯುಲರ್ಸ್ ಇದ್ದವು. ಅವನು ಆ ಬೈನಾಕ್ಯುಲರ್ಸ್ ಮೂಲಕ ಅಲ್ಲಿಗೆ ದೂರದಲ್ಲಿದ್ದ ಒಂದು ಲಕ್ಸುರಿ ಹೌಸ್ ಬೋಟ್‌ನ್ನು ಪರದೆಯ ಮರೆಗೆ ಕುಳಿತುಕೊಂಡು ನಿರ್ವಿರಾಮವಾಗಿ ಗಮನಿಸುತ್ತಿದ್ದ. ಹಿಂದಿನಿಂದ ಟಕಟಕನೆ ಹೆಜ್ಜೆಯ ಸಪ್ಪಳ ಕೇಳಿಸಿದ್ದರಿಂದ ಅವನು ಬೆಚ್ಚಿಬಿದ್ದು ಹಿಂದಿರುಗಿ ನೋಡಿದ.

ಜಾನಿವಾಕರ್ ಒಂದೇ ಹೆಜ್ಜೆಗೆ ಅವನನ್ನು ಸಮೀಪಿಸಿ ಪಕ್ಕದಲ್ಲಿಯೇ

ಕುಳಿತ. ಅವನು ಲೋಟಸ್ ಮೂಲಕ ಏರ್ಪಾಡು ಮಾಡಿದ ವ್ಯಕ್ತಿ.

"ಎನಿ ಪ್ರೋಗ್ರೆಸ್?" ಜಾನಿವಾಕರ್ ಕೇಳಿದ.

ಆ ವ್ಯಕ್ತಿ ತಲೆ ಅಡ್ಡವಾಗಿ ಆಡಿಸಿದ. "ನೋ ಸರ್! ಆ ಯುವತಿ ಆ ಹೌಸ್ ಬೋಟ್‌ನೊಳಗೆ ಹೋದಾಗಿನಿಂದ ಇಲ್ಲಿಯೇ ಕುಳಿತುಕೊಂಡು ಒಂದು ಕ್ಷಣ ಕೂಡ ದೃಷ್ಟಿ ಪಕ್ಕಕ್ಕೆ ಹೊರಳಿಸದೆ ಬೈನಾಕ್ಯುಲರ್‌ನಿಂದ ಗಮನಿಸುತ್ತಲೇ ಇದ್ದೇನೆ. ಆ ಹೌಸ್‌ಬೋಟಿನ ಕಿಟಕಿಯ ತೆರೆಗಳೆಲ್ಲವೂ ಮುಚ್ಚಿಕೊಂಡಿವೆ.ಒಳಗೆ ಯಾರಿದ್ದಾರೋ, ಎಷ್ಟು ಜನರಿದ್ದಾರೋ ಇಲ್ಲಿಯವರೆಗೆ ತಿಳಿದಿಲ್ಲ."

ಜಾನಿವಾಕರ್ ಅವನ ಕೈಗಳಿಂದ ಬೈನಾಕ್ಯುಲರ್ ಪಡೆದುಕೊಂಡು ಕಣ್ಣಿಗಿಟ್ಟುಕೊಂಡು ನೋಡಿದ. ಅದು ತುಂಬಾ ಶಕ್ತಿಯುತವಾದ ಟೆಲಿಸ್ಕೋಪಿಕ್ ಲೆನ್ಸ್ ಜೋಡಿಸಿದ ಬೈನಾಕ್ಯುಲರ್. ಕೆಲವು ನೂರು ಗಜಗಳ ದೂರದಲ್ಲಿ ಬಿದ್ದಿರುವ ಅತಿ ಚಿಕ್ಕ ವಸ್ತುವನ್ನೂ ಕೂಡ ಸ್ಪಷ್ಟವಾಗಿ ನೋಡಬಹುದು. ಅದರ ವೈಶಿಷ್ಟ್ಯ ಏನೆಂದರೆ ದೂರದಲ್ಲಿ ಕತ್ತಲೆಯಲ್ಲಿರುವ ವಸ್ತುಗಳನ್ನು ಕೂಡ ರಾತ್ರಿಯ ಹೊತ್ತು ಸ್ಪಷ್ಟವಾಗಿ ತೋರಿಸಬಲ್ಲದು. ಜಾನಿವಾಕರ್ ಆ ಬೈನಾಕ್ಯುಲರ್ ಕಣ್ಣ ಹತ್ತಿರ ಇಟ್ಟುಕೊಂಡೊಡನೆಯೇ ದೂರದಲ್ಲಿ ನಿಂತಿದ್ದ ಆ ಲಕ್ಸುರಿ ಹೌಸ್‌ಬೋಟ್ ಸ್ಪಷ್ಟವಾಗಿ ಕಾಣಿಸತೊಡಗಿತು.

ವ್ಯಕ್ತಿ ಹೇಳಿದ ಮಾತು ನಿಜವೇ. ಬಣ್ಣ ಬಣ್ಣದ ಬಲ್ಬುಗಳ ಅಲಂಕಾರದಿಂದ ಆ ರಾತ್ರಿಯ ಹೊತ್ತು ದೇದೀಪ್ಯಮಾನವಾಗಿ ಅತ್ಯಂತ ಆಕರ್ಷಣೀಯವಾಗಿ ಕಾಣಿಸುತ್ತಿದ್ದ ಆ ಹೌಸ್‌ಬೋಟಿನೊಳಗೆ ಇದ್ದ ಪರದೆಗಳೆಲ್ಲವೂ ಮುಚ್ಚಿದ್ದವು. ಒಳಗೆ ಯಾರಿರುವುದೆಂಬುದು ಕಾಣಿಸುವ ಅವಕಾಶವಿರಲಿಲ್ಲ. ಜಾನಿವಾಕರ್ ಕಣ್ಣ ಹತ್ತಿರದಿಂದ ಬೈನಾಕ್ಯುಲರ್ ತೆಗೆದು ತನ್ನ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿಯ ಕಡೆ ನೋಡಿದ

"ಆಲ್‌ರೈಟ್! ತುಂಬಾ ಹೊತ್ತಿನಿಂದ ಇಲ್ಲಿ ಕುಳಿತಿರೋ ಹಾಗಿದೆ. ರಿಲ್ಯಾಕ್ಸ್! ಬೈ ದಿ ಬೈ ನಿಮ್ಮ ಹೆಸರು?"

ಆ ವ್ಯಕ್ತಿ ಮೆಲ್ಲಗೆ ನಕ್ಕ. "ನಮ್ಮ ವೃತ್ತಿಯಲ್ಲಿ ವ್ಯಕ್ತಿಗಳಿಗೆ ಹೆಸರುಗಳಿರುವುದಿಲ್ಲ. ಕೋಡ್ ನಂಬರ್‌ಗಳಾಗಲಿ, ಕೋಡ್ ವರ್ಡ್‌ಗಳಾಗಲಿ ಇರುತ್ತವೆ. ನನ್ನನ್ನು ನೀವು 909 ಎಂದು ಕರೆಯಬಹುದು."

ಜಾನಿವಾಕರ್ ಅವನನ್ನು ಕಣ್ಣರಳಿಸಿ ನೋಡಿದ. "ಡೈರೆಕ್ಟ್ ರಿಕ್ರೂಟ್ ಫ್ರಂ ಪಾಕಿಸ್ತಾನ್?" ಕೇಳಿದ.

"ಡೈರೆಕ್ಟ್ ರಿಕ್ರೂಟ್ ಫ್ರಂ ಪಾಕಿಸ್ತಾನ್! ಆಪರೇಟಿಂಗ್ ಫಾರ್ ತ್ರೀ ಮಂತ್ಸ್!" ಹೇಳಿದ ಆ ವ್ಯಕ್ತಿ.

ಜಾನಿವಾಕರ್ ಮೆಲ್ಲಗೆ ನಕ್ಕ. "ಗ್ಲಾಡ್ ಟು ಮೀಟ್ ಯೂ 909" ಷೇಕ್‌ಹ್ಯಾಂಡ್‌ಗೋಸ್ಕರ ಕೈ ಚಾಚುತ್ತಾ ನುಡಿದ.

"ಲುಕ್" ಎಚ್ಚರಿಸುವವನಂತೆ ನುಡಿದ. ಜಾನಿವಾಕರ್ ತಟಕ್ಕನೆ ಬೈನಾಕ್ಯುಲರನ್ನು ತಿರುಗಿ ಕಣ್ಣಿಗಿಟ್ಟುಕೊಂಡ. ಒಂದೇ ಸಾರಿಗೆ ಬೀಸಿದ ಗಾಳಿಗೋ ಏನೋ ಆ ಲಕ್ಸುರಿ ಹೌಸ್‌ಬೋಟ್‌ನೊಳಗಿನ ಕರ್ಟನ್‌ಗಳು ಪಕ್ಕಕ್ಕೆ ತೊಲಗಿ ಒಳಗೆ ನಡೆಯುತ್ತಿದ್ದ ದೃಶ್ಯ ಬೈನಾಕ್ಯುಲರ್ ಮೂಲಕ ಸ್ಪಷ್ಟವಾಗಿ ಕಾಣಿಸಿತು. ಕೆಲವು ಕ್ಷಣಗಳು........ ಅಷ್ಟೇ! ಆ ಕೆಲವು ಕ್ಷಣ ಗಳಲ್ಲಿಯೇ ಜಾನಿವಾಕರ್ ಆ ಇಬ್ಬರು ವ್ಯಕ್ತಿಗಳನ್ನು ಖಚಿತವಾಗಿ ಗುರುತು ಹಿಡಿದ. ಆ ಇಬ್ಬರಲ್ಲಿ ಒಬ್ಬ ವ್ಯಕ್ತಿಯನ್ನು ಅವನು ಗುರುತು ಹಿಡಿಯಬೇಕಾದ ಅಗತ್ಯವೇ ಇರಲಿಲ್ಲ— ಅವಳು ಮೇಖಲೆ! ಇನ್ನು ಆ ಎರಡನೇ ವ್ಯಕ್ತಿ........! ಅವನು ಯಾರೆಂದು ಗುರುತು ಹಿಡಿದೊಡನೆಯೇ ಅವನ ಕೈ-ಕಾಲು ತಣ್ಣಗಾ ದಂತೆ ಭಾಸವಾಯಿತು. "ಮೈ ಗಾಡ್!" ಅಪ್ರಯತ್ನವಾಗಿ ನುಡಿದ.

"ಒಳಗಿರುವುದು ಯಾರು?" 909 ಆಸಕ್ತಿಯಿಂದ ಕೇಳಿದ.

ಜಾನಿವಾಕರ್ ನಿಧಾನವಾಗಿ ಬೈನಾಕ್ಯುಲರ್ ತೆಗೆದು 909 ಕಡೆ ನೇರವಾಗಿ ನೋಡಿದ. ಅವನ ನೋಟ ವಿಚಿತ್ರವಾಗಿತ್ತು. "ಅವನಾಗಿರಬಹು ದೆಂದು ನಾನು ಕನಸಿನಲ್ಲೂ ಎಣಿಸಿರಲಿಲ್ಲ!" ಸ್ವಗತಕ್ಕೆಂಬಂತೆ ನುಡಿದ. 909 ಪ್ರಶ್ನಾರ್ಥಕವಾಗಿ ನೋಡಿದ. "ಯೂನಿಯನ್ ಮಿನಿಸ್ಟರ್ ಫಾರ್ ಡಿಫೆನ್ಸ್!" ಎಂದ ಜಾನಿವಾಕರ್.

"ಯಾರು?"

"ಯೂನಿಯನ್ ಮಿನಿಸ್ಟರ್ ಫಾರ್ ಡಿಫೆನ್ಸ್" ಮತ್ತೊಂದು ಸಲ ಹೇಳಿದ ಜಾನಿವಾಕರ್.

"ಹೆಸರು ನಿಮಗೆ ತಿಳಿದಿರಬೇಕು!"

"ಏನು?"

"ತಾರಕನಾಮ!"

## ೧೮

ಅವನು ನಿಬ್ಬೆರಗಾಗಿ ನೋಡುತ್ತಿರುವಂತೆ ಮೇಖಲೆಯ ವಿವೇಕ ಎಚ್ಚೆ ತ್ತಿತು. ತಕ್ಷಣವೇ ಬೆನ್ನಮೇಲೆ ಯಾರೋ ಕೊರಡಿನಿಂದ ಬಾರಿಸಿದಂತಾಯಿತು. ಏನದು ? ತಾನೇನು ಮಾಡುತ್ತಿದ್ದಾಳೆ ? ಹೀಗೆ ನಿಯಂತ್ರಣ ಕಳೆದುಕೊಳ್ಳುತ್ತಿ

ದ್ದಾಳೆ? ತಾನು ಮಾಡುವ ಒಂದೇ ಒಂದು ಚಿಕ್ಕ ತಪ್ಪು ತನ್ನನ್ನು ಭಯಂಕರವಾದ ಅಪಾಯಕ್ಕೀಡುಮಾಡಬಹುದು. ಇದು ತುಂಬಾ ಆತ್ಮಸಂಯಮದಿಂದ ವ್ಯವಹರಿಸಬೇಕಾದ ಸಮಯ, ತುಂಬಾ ಬುದ್ಧಿವಂತಿಕೆಯಿಂದ, ತುಂಬಾ ಎಚ್ಚರಿಕೆಯಿಂದ ನಿರ್ವಹಿಸಬೇಕಾದ ಕೆಲಸ. ಮೂರ್ಖಳಂತೆ ಹೀಗೆ ಹೊರಬಿದ್ದರೆ ನಷ್ಟವಾಗುವುದು ತನಗೇ. ಆಕಸ್ಮಾತ್ತಾಗಿ ಉಂಟಾದ ವಿವೇಚನೆಯಿಂದ ಮೇಖಲೆ ಕ್ಷಣಗಳಲ್ಲಿ ಸುಧಾರಿಸಿಕೊಂಡಳು. ತನ್ನ ಕಡೆ ಹುಚ್ಚನಂತೆ ಕಣ್ಣರಳಿಸಿ ನೋಡುತ್ತಿದ್ದ ತಾರಕನಾಮನ ಮುಖವನ್ನೇ ನೋಡುತ್ತಾ ಇದ್ದಕ್ಕಿದ್ದಂತೆ ಬಿದ್ದು ಬಿದ್ದು ನಗಲಾರಂಭಿಸಿದಳು. ತಾರಕನಾಮ ಮತ್ತಷ್ಟು ವಿಚಿತ್ರವಾಗಿ ನೋಡತೊಡಗಿದ. "ನೋಡಿದ್ರಾ! ಹೆದರಿಕೊಂಡು ಬಿಟ್ರಿ!" ಮತ್ತಷ್ಟು ಜೋರಾಗಿ ನಗುತ್ತಾ ಅವನ ಮೂಗು ಹಿಂಡಿದಳು. ಅದರಿಂದಾಗಿ ಅವನ ಕಣ್ಣುಗಳಲ್ಲಿ ಗೋಚರಿಸುತ್ತಿದ್ದ ಅಯೋಮಯ ಮಾಯವಾಗಿ, ಅವಳೊಂದಿಗೆ ನಗತೊಡಗಿದ.

"ಕಳ್ಳಿ! ನನ್ನನ್ನೇ ಹೆದರಿಸಬೇಕೂಂತಾ........!" ಇಷ್ಟರ ಹೊರತು ಅವನು ಮತ್ತೇನೂ ಹೇಳದೇ ಹೋದ. ಮತ್ತೊಂದು ಸಂದರ್ಭದಲ್ಲಿ ಅವನ ಮುಂದೆ ಆ ರೀತಿ ಯಾರಾದರೂ ವರ್ತಿಸಿದ್ದರೆ ತೀವ್ರನಾಗಿ ಪರಿಗಣಿಸುತ್ತಿದ್ದ. ಆದರೆ ಈಗಿನ ಪರಿಸ್ಥಿತಿ ಬೇರೆ. ಮೇಖಲೆಯ ಮಹಾದ್ಭುತ ಸೌಂದರ್ಯ ಅವನನ್ನು ಪೂರ್ತಿಯಾಗಿ ಆವರಿಸಿಕೊಂಡು ಅವನ ಬುದ್ಧಿಗೆ ಮಂಕು ಕವಿಸಿತ್ತು. ಆ ಸಮ್ಮೋಹನ ಶಕ್ತಿಯಿಂದ ಹೊರಬೀಳುವುದು ಆ ಕ್ಷಣದಲ್ಲಿ ಅವನಿಗೆ ಸಾಧ್ಯವಾಗುವ ಕೆಲಸವಾಗಿರಲಿಲ್ಲ.

"ಮತ್ತೆ....! ನಿಜವಾಗ಼್ೂ ನಿಮ್ಮನ್ನು ಹೆದರಿಸ್ತೀನಿ ಅಂದ್ಕೊಂಡ್ರಾ ?" ಎದೆಯ ಮೇಲೆ ಕೈ ಇಟ್ಟುಕೊಳ್ಳುತ್ತಾ ತುಂಟತನದಿಂದ ನುಡಿದಳು. "ಅಮ್ಮಮ್ಮೋ! ಹಾಗೆ ಮಾಡಿದ್ರೆ ಇನ್ನೇನಾದ್ರೂ ಇದೆಯಾ? ನೀವು ಮೊದಲೇ ಡಿಫೆನ್ಸ್ ಮಿನಿಸ್ಟರ್-ನಿಮ್ಮ ಕೆಳಗಿರುವ ತುಪಾಕಿಗಳೆಲ್ಲವನ್ನೂ ನನ್ನ ಕಡೆ ಗುರಿ ಇಡೋಲ್ವಾ!" ಅವಳ ಮಾತುಗಳಲ್ಲಿನ ತುಂಟತನಕ್ಕೆ ತಾರಕನಾಮ ಪುಳಕಿತನಾದ.

"ಒಂದು ಕ್ಷಣ ನಿಜಕ್ಕೂ ಹೆದರಿಸಿಬಿಟ್ಟಿದ್ದೆ!" ಸುಧಾರಿಸಿಕೊಂಡು ಕುಳಿತುಕೊಳ್ಳುತ್ತಾ, ಬಿಂಕದಿಂದ ನುಡಿದ.

"ಹಠಾತ್ತನೆ ಹಾಗ್ಯಾಕೆ ವರ್ತಿಸಿದೆ?"

"ಸುಮ್ಮನೇ! ನೀವೇನು ಮಾಡ್ತೀರೋ ನೋಡೋಣಾಂತ!?" ಎಂದಳು.

ಅವನು ಮತ್ತೊಂದು ಸಲ ನಕ್ಕು ಅವಳನ್ನು ಮತ್ತೆ ಹತ್ತಿರ ಎಳೆದುಕೊಂಡ. "ಇಷ್ಟಕ್ಕೂ ನಾನು ನಿನ್ನನ್ನೆಲ್ಲಿ ನೋಡಿದೀನೋ ಹೇಳಲಿಲ್ಲ!"

"ಇನ್ನೂ ನೆನಪಾಗಲಿಲ್ವಾ?"

"ಊಹೂಂ!"

"ಈಗ?" ಅವನ ತಲೆಯನ್ನು ಮತ್ತೊಂದು ಸಲ ತನ್ನ ಎದೆಗಪ್ಪಿ ಕೊಳ್ಳುತ್ತಾ ಕೇಳಿದಳು.

"ಊಹೂಂ!" ಅವನು ಕಕ್ಕಾಬಿಕ್ಕಿಯಾಗುತ್ತಾ ಉತ್ತರವಿತ್ತ. ಅವಳು ಪಕಪಕನೆ ನಕ್ಕಳು.

"ಹಾಗಾ! ಹೋಗ್ಲಿ ಈಗ ನೋಡೋಣ" ಅವನಬಳಿಯಿಂದ ಎದ್ದು ದೂರ ಹೋಗಿ ನಿಂತಳು.

"ಏಯ್! ಎಲ್ಲಿಗೆ ಹೋಗ್ತಿದೀಯೆ?"ತಾರಕನಾಮ ಮುಂದೆ ಹೆಜ್ಜೆಯಿಟ್ಟ. ಅವಳು ನಗುತ್ತ ತನ್ನ ಹತ್ತಿರ ಬರಬೇಡವೆನ್ನುವಂತೆ ತಲೆಯಾಡಿಸಿದಳು. ತಾರಕನಾಮ ಕೇಳಲಿಲ್ಲ. ಮತ್ತೆ ಮುಂದುವರಿದ. ಅವಳು ಕೈಗೆ ಸಿಗದಂತೆ ಬೆಡ್ ರೂಮಿನೊಳಗೆ ಓಡಿದಳು. ತಾರಕನಾಮ ಹಿಂಬಾಲಿಸಿದ ಅವಳು ಓಡಿಹೋಗಿ ಕಿಂಗ್‌ಸೈಜ್ ಬೆಡ್‌ನ ಹಿಂದೆ ನಿಂತು ಮಾದಕವಾಗಿ ನೋಡಿದಳು. ತಾರಕನಾಮ ಬೆಡ್ ಅಂಚಿನವರೆಗೂ ಓಡಿ ಏದುಸಿರು ಬಿಡುತ್ತಾ ನಿಂತುಬಿಟ್ಟ.

"ಪಾಪ....! ಮುದುಕ ದಣ್ಕೊಂಬಿಟ್ಟ!" ಕರುಣೆ ಪ್ರದರ್ಶಿಸುತ್ತಾ ಅಣಕಿಸಿದಳು.

"ಏನಂದೆ? ನಾನು ಮುದುಕನೆ?" ಮುಂದೆ ಹೆಜ್ಜೆಯಿಟ್ಟು ಮತ್ತೊಂದು ಸಲ ಏದುಸಿರು ಬಿಡುತ್ತಾ ನಿಂತುಬಿಟ್ಟ ತಾರಕನಾಮ.

ಅವಳು ತಾನೇ ಗೆದ್ದವಳಂತೆ ಚಪ್ಪಾಳೆ ಬಾರಿಸಿ ತಾನೇ ಅವನ ಹತ್ತಿರ ಹೋದಳು. "ಹೋಗ್ಲಿ ಬಿಡಿ ! ನೀವು ಮುದುಕರಲ್ಲ, ಹದಿನೆಂಟು ವರ್ಷದ ಟೀನೇಜ್ ಬಾಯ್. ಹಲೋ ಲವರ್ ಬಾಯ್! ಅಲ್ಲಿಕೂತ್ಕೊ....! ಕೂತ್ಕೊಳ್ಳಿ ಸಾರ್!" ಮೃದುವಾಗಿ ಅವನನ್ನು ಬೆಡ್ ಮೇಲೆ ತಳ್ಳಿದಳು. ಆ ಅಮಲೇರಿ ಸುವ ಕರೆಗೆ ತಾರಕನಾಮ ಐಸ್‌ನಂತೆ ಕರಗಿಬಿಟ್ಟ. ಮಂಚದ ಮೇಲೆ ಕುಳಿತು ಕೊಳ್ಳುತ್ತಲೇ ಅವಳ ಕೈ ಹಿಡಿದು ಎಳೆಯಲು ಪ್ರಯತ್ನಿಸಿದ. ತುಂಟತನದಿಂದ ತಲೆ ಅಡ್ಡವಾಗಿ ಆಡಿಸುತ್ತಾ ಅವನಿಗೆ ಕೊಂಚ ದೂರದಲ್ಲಿ ನಿಂತು ತನ್ನ ಮೈ ಮೇಲೆ ಇದ್ದ ಮಿಂಕ್ ಕೋಟು ತೆಗೆದು ಪಕ್ಕಕ್ಕೆ ಹಾಕಿದಳು. "ಈಗ ಹೇಳಿ–ನನ್ನ ನ್ಯಾವಾಗಲಾದರೂ ನೋಡಿದೀರಾ?" ವಿಲಾಸದಿಂದ ಎರಡೂ ಕೈಗಳನ್ನು ಕಟ್ಟಿ ಕೊಂಡು ಒಂದು ಸಲ ತಲೆ ಕುಣಿಸಿ ಮಾದಕವಾಗಿ ಕೇಳಿದಳು.

ತಾರಕನಾಮ ಕಣ್ಣರಳಿಸಿ ಅವಳನ್ನು ಆಪಾದಮಸ್ತಕ ಪರೀಕ್ಷೆಯಿಂದ ನೋಡಿದ. ಸರಿಯಾಗಿ ಅವಳ ಮೈಗೆ ಅಂಟಿಕೊಂಡಂತಿದ್ದ ಡೀಫ್ರಾಲಿನ್ ಸೂಟ್

ನಲ್ಲಿ ಮೇಖಲೆ ಸುಂದರವಾಗಿ ಕಂಗೊಳಿಸುತ್ತಿದ್ದಳು. ಆ ಡ್ರೆಸ್‌ನಲ್ಲಿ ಎದ್ದು ಕಾಣು ತ್ತಿದ್ದ ಅವಳ ಮೈಮಾಟ ಅವನ ಕಣ್ಣು ಕುಕ್ಕುವಂತಿತ್ತು. ಅವನು ಆ ರೀತಿ ಅವಳನ್ನು ಕಣ್ಣರಳಿಸಿ ನೋಡುತ್ತಲೇ ತಲೆ ಅಡ್ಡವಾಗಿ ಆಡಿಸಿದ. ಅವಳು ಮತ್ತಷ್ಟು ಮಾದಕವಾಗಿ ನೋಡುತ್ತಾ ಕೈಗಳಿಗಿದ್ದ ಬ್ಲಾಕ್ ಗ್ಲೋವ್ಸ್ ತೆಗೆದು ಎಸೆದಳು. "ಈಗ ನೆನಪಾಯ್ತಾ? ಈ ಕೈಗಳನ್ನು ಯಾವಾಗಲಾದರೂ ನೋಡಿ ದ್ದೀರಾ?" ತನ್ನ ಕೈಗಳನ್ನು ಅವನ ಮುಂದೆ ಸ್ಟೈಲ್ ಆಗಿ ಚಾಚುತ್ತಾ ಕೇಳಿದಳು.

ತಾರಕನಾಮ ಅವಳ ಕೈಗಳನ್ನು ತನ್ನ ಕೈಗಳಲ್ಲಿ ತೆಗೆದುಕೊಂಡು ಗಾಢ ವಾಗಿ ಮುತ್ತಿಟ್ಟು ಮತ್ತೆ ಒಂದು ಸಲ ತಲೆ ಅಡ್ಡವಾಗಿ ಆಡಿಸಿದ. ಅವಳು ವಿಲಾಸದಿಂದ ಕೈಗಳನ್ನು ಹಿಂದೆ ಒಯ್ದು ಬಲಗೈಯನ್ನು ಕೊರಳ ಹತ್ತಿರ ಒಯ್ದು ಡೈಮಂಡ್ ಬ್ರೋಚ್ ತೆಗೆದು ಟೀಪಾಯ್ ಮೇಲಿಟ್ಟಳು. ತಾರಕ ನಾಮನ ಹೃದಯ ಡವಡವನೆ ಹೊಡೆದುಕೊಂಡಿತು. ಉದ್ವೇಗದಿಂದ ನಾಲಿಗೆ ಒಣಗುತ್ತಿರುವಂತೆ ಭಾಸವಾಯ್ತು. ತನ್ನ ಜೀವನದಲ್ಲಿ ಅವನೆಷ್ಟೋ ಸುಂದರ ವಾದ ಯುವತಿಯರನ್ನು ಅನುಭವಿಸಿದ್ದ ಆದರೆ ಇಂತಹ ಯುವತಿಯನ್ನು ಕಣ್ಣಾರೆ ನೋಡುವುದು ಇದೇ ಮೊದಲೆನ್ನುವಂತಿತ್ತು. ರೆಪ್ಪೆ ಹೊಡೆಯದೆ ಅವ ಳನ್ನೇ ನೋಡುತ್ತಿದ್ದ. ಮೇಖಲೆ ಮತ್ತೊಂದು ಸಲ ಕೈಯನ್ನು ಮೇಲೆ ಒಯ್ದು ತನ್ನ ಸೂಟಿನ ಮೇಲ್ಭಾಗದ ಬಟನ್‌ಗಳನ್ನು ನಿಧಾನವಾಗಿ ಒಂದೊಂದಾಗಿ ಬಿಚ್ಚ ತೊಡಗಿದಳು. ತಾರಕನಾಮ ಉಸಿರು ಬಿಗಿಹಿಡಿದ. ಅವಳು ಮೆಲ್ಲಗೆ, ತುಂಬಾ ಮೆಲ್ಲಗೆ, ತನ್ನ ಸೂಟಿನ ಮೇಲ್ಭಾಗವನ್ನು ತೆಗೆದು ಪಕ್ಕಕ್ಕೆ ಹಾಕಿದಳು. "ಈಗ?" ಅವನ ಮುಂದೆ ಎದೆ ಉಬ್ಬಿಸುತ್ತಾ ಕೇಳಿದಳು.

ತಾರಕನಾಮ ಈ ಸಲ ತಲೆ ಅಡ್ಡವಾಗಿ ಆಡಿಸುವುದನ್ನು ಕೂಡ ಮರೆತು ಬಿಟ್ಟ. ಅವನ ಶರೀರದಲ್ಲಿ ಸಣ್ಣನೆಯ ಜ್ವಾಲೆ ನಿಧಾನವಾಗಿ ಆರಂಭವಾಗಿ ಕ್ರಮೇಣ ಮಹಾಗ್ನಿಯಾಗಿ ರೂಪುಗೊಳ್ಳುತ್ತಿತ್ತು.

ತನ್ನ ಸೂಟಿನಲ್ಲಿನ ಮೇಲ್ಭಾಗವನ್ನು ಬಿಚ್ಚಿ ಪಕ್ಕಕ್ಕೆ ಹಾಕಿದೊಡನೆಯೇ ಅವಳ ಎದೆಯ ಮೇಲೆ ಉಳಿದದ್ದು ಕೇವಲ ಬ್ರಾ ಮಾತ್ರ. ತಾರಕನಾಮ ಶಿಲಾ ಪ್ರತಿಮೆಯಂತೆ ಕುಳಿತು ಬಿಟ್ಟ. ಆ ಕ್ಷಣದಲ್ಲಿ ಪಕ್ಕದಲ್ಲಿ ಬಾಂಬ್ ಸಿಡಿದರೂ ಕೇಳಿಸಿಕೊಳ್ಳುವ ಪ್ರಜ್ಞೆಯಲ್ಲಿ ಅವನಿರಲಿಲ್ಲ. ಅವನ ಕಣ್ಣುಗಳ ತುಂಬಾ ಮೇಖ ಲೆಯ ಸೌಂದರ್ಯವೇ ತಾಂಡವವಾಡುತ್ತಿತ್ತು. ಮೇಖಲೆ ಈ ಸಲ ನಿಧಾನವಾಗಿ ತನ್ನ ಸೊಂಟದ ಹತ್ತಿರವಿದ್ದ ಬಟನ್ಸ್ ಬಿಚ್ಚತೊಡಗಿದಳು. ಸ್ತ್ರೀಯ ಸೌಂದರ್ಯ ಎಷ್ಟೇ ಆಗಲಿ ಮೈಮೇಲೆ ಬಟ್ಟೆಗಳಿರುವವರೆಗಷ್ಟೇ! ಒಂದೇ ಬಾರಿಗೆ ಮುಷ್ಟಿ

ಬಿಚ್ಚಿ ತೋರಿಸಿದರೆ ಏನೂ ಅನ್ನಿಸುವುದಿಲ್ಲ. ಹಾಗೆಯೇ ಒಂದೇ ಬಾರಿಗೆ ಸ್ತ್ರೀಯ ನಗ್ನತೆ ಎದುರಾದರೆ ಗಂಡಸಿಗೆ ತಕ್ಷಣ ಕುತೂಹಲ, ಆಸಕ್ತಿ ಕಡಿಮೆ ಯಾಗುತ್ತದೆ. ಅಸಹ್ಯ ಉಂಟಾಗಲೂಬಹುದು. ಸ್ಟ್ರಿಪ್ ಟೀಜಿಂಗ್‌ನಲ್ಲಿ ರುವ ಸಮ್ಮೋಹನ ಶಕ್ತಿ ಅದೇ! ಕಣ್ಣೆದುರಿಗಿರುವ ಯುವತಿ ಬಟ್ಟೆ ಬಿಚ್ಚು ವುದನ್ನು ಎಷ್ಟು ತಡ ಮಾಡುತ್ತಾಳೋ ಅಷ್ಟು ಗಂಡು ಉದ್ರೇಕಗೊಳ್ಳು ತ್ತಾನೆ. ಹಾಗೆ ಮಾಡಿದಾಗ ಆ ಯುವತಿಯ ಸೌಂದರ್ಯವನ್ನು ಒಂದೇ ಸಲಕ್ಕೆ ಕಣ್ಣು ಕುಕ್ಕುವ ಪ್ರಖರ ಬೆಳಕಿನಂತಲ್ಲದೆ ನಿಧಾನವಾಗಿ ಬೆಳಗುವ ಪ್ರಣತಿಯಂತೆ ಆಹ್ಲಾದವನ್ನು ಉಂಟುಮಾಡುತ್ತದೆ.

ಅವಳ ಸೊಂಟದ ಹತ್ತಿರದಿಂದ ಕೆಳಗಿದ್ದ ಬಟನ್‌ಗಳನ್ನು ಸಾವಕಾಶ ವಾಗಿ ತೆಗೆದು ಬೇಕೆಂದೇ ಮತ್ತಷ್ಟು ತಡ ಮಾಡುತ್ತಾ ಅವನನ್ನು ಕೆಣಕಿ, ಕೆರಳಿಸಿ ತನ್ನ ಮೈ ಮೇಲೆ ಉಳಿದ ಸೂಟ್‌ನ ಕೆಳಭಾಗವನ್ನು ತಟಕ್ಕನೆ ಜಾರಿಬಿಟ್ಟಳು. ಅಲ್ಲಿಯವರೆಗೂ ಶಿಲಾಸದೃಶನಾಗಿ ಕುಳಿತಿದ್ದ ತಾರಕನಾಮ ಒಂದೇ ಬಾರಿಗೆ ಝುಂಝಾ ಮಾರುತಕ್ಕೆ ಸಿಕ್ಕಿಬಿದ್ದ ಚಿಗುರೆಲೆಯಂತೆ ಕಂಪಿಸಿದ.

"ಈಗ ಹೇಳಿ-ಈಗಲಾದ್ರೂ ನೆನಪಾಯ್ತಾ?" ಹಣೆಯ ಮೇಲೆ ಬೀಳು ತ್ತಿದ್ದ ಮುಂಗುರುಳುಗಳನ್ನು ನಿರ್ಲಕ್ಷ್ಯದಿಂದ ಹಿಂದೆ ತಳ್ಳುತ್ತಾ ಕೇಳಿದಳು.

ಅಷ್ಟೇ! ಅವಳು ಪ್ರದರ್ಶಿಸುತ್ತಿದ್ದ ವಿಶೃಂಖಲತೆಗೆ ಅವನು ತಡೆದು ಕೊಳ್ಳದೇ ಹೋದ. ಐವತ್ತೈದು ವರ್ಷದ ವ್ಯಕ್ತಿಯನ್ನು ಕೊಂಚ ಹೊತ್ತಿನ ಪರಿಚಯದಲ್ಲಿಯೇ ನಿಜವಾಗಿಯೂ ಹದಿನೆಂಟು ವರ್ಷದ ಟೀನೇಜ್ ಬಾಯ್ ನಂತೆ ಬದಲಾಯಿಸಿದ್ದಳು. ಉದ್ವೇಗದಿಂದ ತೂರಾಡುತ್ತಾ, ಒಂದೇ ಹೆಜ್ಜೆಗೆ ಅವಳನ್ನು ಸಮೀಪಿಸಿದ. "ಏನು? ಈಗಲಾದ್ರೂ ನೆನಪಾಯ್ತಾ?" ಮತ್ತೆ ಕೇಳಿದಳು.

ಅವನು ಒಂದು ಕ್ಷಣ ಎದುರಿಗೆ ನಿಂತು ಅವಳನ್ನು ಆಪಾದಮಸ್ತಕ ಮತ್ತೊಂದು ಸಲ ಹೊಸದಾಗಿ ಪರಿಶೀಲಿಸುತ್ತಿರುವವನಂತೆ ನೋಡಿ ಇನ್ನು ತಡೆಯಲಾಗದೆ ಅವಳನ್ನು ಅಪ್ಪಿಕೊಂಡ. ಅವಳ ಶರೀರದ ಮೇಲೆ ಈಗ ಕೇವಲ ಬ್ರಾ ಮತ್ತು ಸ್ಟಾಕಿಂಗ್ಸ್ ಮಾತ್ರವೇ ಇದ್ದವು. ಕೆಂಪನೆಯ ಅವಳ ಶರೀರದ ಮೇಲೆ ಕಪ್ಪನೆಯ ಬ್ರಾ, ಸ್ಟಾಕಿಂಗ್ಸ್ ಅವನಿಗೆ ಹುಚ್ಚು ಹಿಡಿಸಿದ್ದವು. ''ಬೇಡ! ಇನ್ನೂ ನನ್ನನ್ನು ಕೆಣಕಬೇಡ!" ಹುಚ್ಚನಂತೆ ಅವಳ ಮುಖದ ಮೇಲೆ ಮುತ್ತಿನ ಮಳೆ ಸುರಿಸುತ್ತಾ ಗೊಣಗಿದ. "ಪ್ಲೀಸ್ ಇನ್ನೂ ನನ್ನನ್ನು ಕೆಣಕಬೇಡ. ನನ್ನಿಂದ ತಡ್ಕೊಳ್ಳೋದಕ್ಕಾಗೋದಿಲ್ಲ!"

"ಇಷ್ಟಕ್ಕೇನಾ!"

"ಹೌದು! ಇಲ್ಲಿಯುವರೆಗೂ ನನ್ನ ಅನುಭವದಲ್ಲಿ ನಿನ್ನಂತಹ ಬಾಂಬ್ ಶೆಲ್ ಅನ್ನು ಎಂದೂ ನೋಡಿಲ್ಲ! ಇದಕ್ಕೆ ಮುಂಚೆ ನಿನ್ನನ್ನು ಎಲ್ಲಿಯೋ ನಾನು ನೋಡಿರುವೆನೆಂದು ಹೇಳಿದ್ದು ಯಾಕೆಂದು ನನಗೀಗ ಚೆನ್ನಾಗಿ ಅರ್ಥವಾಯ್ತು. ನೀನು ಟೀಸ್ ಮಾಡ್ತಿದೀಯಾ! ನನ್ನ ಗೋಳಾಡಿಸ್ತಿದೀಯಾ! ಪ್ಲೀಸ್ ನಿಲ್ಲು, ಈ ಗೇಮ್ ನಿಲ್ಸು!"

"ರಿಯಲೀ? ಹಾಗಾದ್ರೆ ನೀವು ಇದಕ್ಕೆ ಮುಂಚೆ ಎಂದೂ ನನ್ನನ್ನು ನೋಡಿಲ್ಲವೆಂದಾಯ್ತು!" ಅವಳು ಕಣ್ಣನ್ನು ತಮಾಷೆಯಾಗಿ ತಿರುಗಿಸುತ್ತಾ ಕೇಳಿದಳು.

"ಹುಷ್! ಇನ್ನು ಆ ವಿಷಯ ಬೇಡ. ಆಗಾಗ್ಲೇ ನನ್ನ ಸತ್ವ ಹಿಂಡಿ ಬಿಟ್ಟಿದ್ದೀಯಾ. ಇನ್ನು ಸಾಕು" ಅವಳ ಕೈ ಹಿಡಿದು ಬೆಡ್ ಕಡೆ ಎಳೆದ.

"ಆಗಲೇನಾ?"

"ಊಂ! ಈ ವ್ಯಾಮೋಹ ನನ್ನಿಂದ ತಡ್ಕೊಳ್ಳೋಕಾಗ್ತಿಲ್ಲ."

"ಛೀ, ಅದೇನಲ್ಲ. ನನಗಿಂತಲೂ ಸುಂದರವಾದ ಯುವತಿಯರನ್ನೇ ನೀವು ನೋಡಿರ್ತೀರಿ."

"ಇಲ್ಲ, ನಿಜವಾಗ್ಲೂ ಇಂತಹ ಸೌಂದರ್ಯವನ್ನು ಕಣ್ಣಾರೆ ನೋಡಿದ್ದು ಜೀವನದಲ್ಲಿ ಇದೇ ಮೊದಲನೇ ಸಲ!"

"ಏನೋ ನಿಮ್ಮ ಜೀವನದಲ್ಲಿ ನೀವು ಮರೆತುಹೋದ ಪುಟಗಳು ಕೆಲವನ್ನು ತಿರುವಿ ಹಾಕಿದರೆ ಒಳ್ಳೆಯದೇನೋ!"

"ಅಗತ್ಯವಿಲ್ಲ. ಆದರೂ ಮಾತುಗಳಲ್ಲೇ ಟೈಮ್ ವೇಸ್ಟ್ ಮಾಡ್ತಿದೀಯಾ! ಬಾ....!"

"ನೋ.... ನೋ.... ಹೀಗಲ್ಲ ಹೋಗೋದು!"

"ಇನ್ನು ಹೇಗೆ?" ಅವನು ಬೇಸರದಿಂದ ಪ್ರಶ್ನಿಸಿದ.

ಉತ್ತರವಾಗಿ ಅವಳು ಅವನ ಶರೀರದ ಮೇಲಿದ್ದ ಶಾಲನ್ನು ಎಳೆದು ಹಾಕಿ ತನ್ನ ಅಂದವಾದ ಬೆರಳುಗಳಿಂದ ಜುಬ್ಬಾದ ಗುಂಡಿ ಬಿಚ್ಚತೊಡಗಿದಳು. ಅವಳ ಬೆರಳುಗಳು ತನ್ನ ಶರೀರದ ಮೇಲೆ ಹರಿದಾಡುತ್ತಿದ್ದರೆ ಆವೇಶ, ಉದ್ರೇಕ ತಡೆದುಕೊಳ್ಳಲಾಗದೆ ತಾರಕನಾಮ ವಿಲವಿಲನೆ ಒದ್ದಾಡಿದ. ಅವಳ ಬೆರಳುಗಳು ಅವನ ಶರೀರದ ಮೇಲೆ ಹರಿದಾಡುತ್ತಲೇ ಇದ್ದುವು.

* * * *

"ಆಲ್‌ರೈಟ್! ಯು ಹೋಲ್ಡ್ ದಿಸ್!" ತನ್ನ ಕೈಯಲ್ಲಿನ ಬೈನಾಕ್ಯುಲರ್ 909 ನ ಕೈಗೆ ಕೊಡುತ್ತಾ ಜಾನಿವಾಕರ್ ನುಡಿದ.

"ಈಗ ನೀವೇನು ಮಾಡಲಿದ್ದೀರಿ?" 909 ಆಸಕ್ತಿಯಿಂದ ಕೇಳಿದ.

"ನೀವೇ ನೋಡ್ತೀರಲ್ಲ! ನನಗೆಬೇಕಾದ ಸರಂಜಾಮನ್ನೆಲ್ಲಾ ತಂದಿದೀರಾ?"

"ಓ ಎಸ್! ಅರ್ಜೆಂಟಾಗಿ ಬೇಕೆಂದು ಲೋಟಸ್ ಕಡೆಯಿಂದ ಮೆಸೇಜ್ ಬಂದದ್ದರಿಂದ ಇವುಗಳನ್ನು ತಕ್ಷಣವೇ ಸಂಪಾದಿಸುವುದು ಕೊಂಚ ಕಷ್ಟವಾಯಿತಾದರೂ ಒಟ್ಟಿನಲ್ಲಿ ಕೆಲಸ ಸಾಧಿಸ್ದೆ." ತನ್ನ ಪಕ್ಕದಲ್ಲಿಯೇ ಇದ್ದ ಕಿಟಕಿಯಿಂದ ಚಿಕ್ಕ ಲೆದರ್ ಬ್ಯಾಗ್ ಒಂದನ್ನು ಹೊರತೆಗೆದ 909. ಅದರ ಜಿಪ್ ಎಳೆದು ಒಳಗಿನಿಂದ ಎರಡು ಕಪ್ಪನೆಯ ವಸ್ತುಗಳನ್ನು ಹೊರ ತೆಗೆದ.

"ಅಲ್ಟ್ರಾ ಮಾಡರ್ನ್ ಆಟೋಮ್ಯಾಟಿಕ್ ಕ್ಯಾಮೆರಾ....! ರಿಮೋಟ್ ಕಂಟ್ರೋಲ್‌ನಿಂದ ಕೆಲಸಮಾಡುತ್ತದೆ! ಇದು ಅದರ ರಿಮೋಟ್ ಕಂಟ್ರೋಲ್!"

ಜಾನಿವಾಕರ್ ತಲೆಯಾಡಿಸಿದ. "ಗೊತ್ತು! ಇತ್ತೀಚೆಗೆ ಚೀನಾದಲ್ಲಿ ಕ್ರ್ಯಾಕ್‌ಡೌನ್‌ಗೆ ಗುರಿಯಾದ ಪ್ರಜಾಸ್ವಾಮ್ಯವಾದಿಗಳಾದ ವಿದ್ಯಾರ್ಥಿಗಳು ತಮ್ಮ ದೇಶದ ಕಬ್ಬಿಣದ ಪರದೆಯಿಂದ ವಾಸ್ತವವಾದ ವಾರ್ತೆಗಳನ್ನು ಹೊರಗೆ ತಲುಪಿಸಲು ಉಪಯೋಗಿಸುತ್ತಿರುವ ಕ್ಯಾಮರಾಗಳು ಇಂತಹವೇ! ಇವುಗಳ ಸಹಾಯದಿಂದಲೇ ಅವರು ಹೃದಯವಿದ್ರಾವಕವಾದ ಅನೇಕ ದೃಶ್ಯಗಳನ್ನು ರಹಸ್ಯವಾಗಿ ಫೋಟೋ ತೆಗೆದು ಹೊರ ಪ್ರಪಂಚಕ್ಕೆ ತೋರ್ಪಡಿಸುತ್ತಿದ್ದಾರೆ!" ಎಂದ. 909 ಹೌದೆನ್ನುವಂತೆ ತಲೆಯಾಡಿಸಿದ.

"ಆಲ್‌ರೈಟ್! ಇದಕ್ಕೋಸ್ಕರ ವಾಟರ್ ಪ್ರೂಫ್ ಬ್ಯಾಗ್ ತಂದಿದೀರಾ" ಜಾನಿವಾಕರ್ ಕೇಳಿದ.

"ಎಸ್! ಇದೋ!"

"ಗುಡ್. ಥ್ಯಾಂಕ್ಯೂ ವೆರಿಮಚ್." ಜಾನಿವಾಕರ್ ಆ ಕ್ಯಾಮೆರಾ ಅದರಲ್ಲಿಟ್ಟು ಎಚ್ಚರಿಕೆಯಿಂದ ಜಿಪ್ ಮುಚ್ಚಿದ. "ಈ ರಿಮೋಟ್ ಕಂಟ್ರೋಲ್ ನಿಮ್ಮ ಹತ್ತಿರವೇ ಇರಲಿ. ನಾನು ಕೊಂಚ ಹೊತ್ತಿನಲ್ಲಿಯೇ ತಿರುಗಿ ಬರ್ತೀನಿ" ಎಂದ.

909 ಏನೋ ಹೇಳಲು ಹೋದ. ಜಾನಿವಾಕರ್ ಅವನನ್ನು ಮಾತಾಡಲು ಬಿಡಲಿಲ್ಲ. "ಪ್ಲೀಸ್, ಈಗೇನೂ ಪ್ರಶ್ನೆಗಳನ್ನು ಕೇಳಬೇಡಿ. ಜಸ್ಟ್ ವಿಷ್ ಮಿ ಗುಡ್‌ಲಕ್!" "ಗುಡ್‌ಲಕ್!" ಎಂದ 909.

ಜಾನಿವಾಕರ್ ಅವನ ಕೈ ಕುಲುಕಿ, ವಾಟರ್ ಪ್ರೂಫ್‌ಬ್ಯಾಗ್‌ನೊಂದಿಗೆ ನೀರಿನಲ್ಲಿ ಹಾರಿದ.

ತಾರಕನಾಮ ಅವಳೆದುರಿಗೆ ಪೂರ್ತಿ ನಗ್ನನಾಗಿ ನಿಂತ. ನಗ್ನವಾಗಿ ನಿಂತುಕೊಂಡಿದ್ದರಿಂದ ಅವನಿಗೆ ನಾಚಿಕೆಯಾಗಲಿ, ಸಂಕೋಚವಾಗಲಿ ಅನಿಸ

ಲಿಲ್ಲ. ಮೇಲಾಗಿ ಗರ್ವಪಡುತ್ತಿದ್ದ ಕೂಡ !

ತುಂಬಾ ಜನ ಧನ ಮದಾಂಧ, ಅಧಿಕಾರ ಮದಾಂಧರಂತೆಯೇ ತಾರಕನಾಮನಿಗೂ ಹೆಣ್ಣುಗಳ ಹುಚ್ಚು ವಿಪರೀತವಿತ್ತು. ಆದರೆ ವಯಸ್ಸಾಗುತ್ತಿರುವಂತೆ ಅವನು ಕ್ರಮೇಣ ಸೆಕ್ಸ್‌ನಲ್ಲಿ ವಿಫಲವಾಗತೊಡಗಿದ್ದ. ಅದರಿಂದಾಗಿ ಅವನು ತನ್ನ ಹಾಸಿಗೆ ಸೇರಿದ ಯುವತಿಯರ ಮುಂದೆ ಇತ್ತೀಚೆಗೆ ತೊಂದರೆಗೊಳಗಾಗುತ್ತಿದ್ದ. ಅವನಲ್ಲಿ ಮಲಗಿದ್ದ ಪುರುಷನನ್ನು ಮೇಖಲೆ ಪೂರ್ಣವಾಗಿ ಎಚ್ಚರಗೊಳಿಸುತ್ತಿದ್ದಳು. ಪರಿಣಾಮವಾಗಿ ತುಂಬಾ ದಿನಗಳ ನಂತರ ತಾರಕನಾಮ ಮತ್ತೆ ತನ್ನ ಪುರುಷತ್ವವನ್ನು ನಿರೂಪಿಸಿಕೊಳ್ಳಲಿದ್ದ. ಆ ಕ್ಷಣದಲ್ಲಿ ಅವನಿಗೆ ತಾನು ಇಪ್ಪತ್ತೈದು ವರ್ಷ ಚಿಕ್ಕವನಾದಂತೆ ಭಾಸವಾಗುತ್ತಿತ್ತು. ವಯಸ್ಸಾಗುತ್ತಿರುವ, ಯಾವ ಗಂಡಸಿಗಾದರೂ ಆ ಅನುಭವ ಅಲೌಕಿಕಾನಂದವನ್ನುಂಟು ಮಾಡುತ್ತದೆ.

ಅವಳು ಅವನ ಕೈಹಿಡಿದು ಮಂಚದ ಹತ್ತಿರ ಕರೆದೊಯ್ದು ಬೆಡ್ ಮೇಲೆ ತಳ್ಳಿದಳು. ತಾರಕನಾಮ ಬೆಡ್ ಮೇಲೆ ಅಂಗಾತನೆ ಬಿದ್ದ. ಅವಳು ತಕ್ಷಣ ಕೆಳಗೆ ನಿಂತುಕೊಂಡೇ ಒಂದು ಪಾದ ಮೇಲೆತ್ತಿ ಅವನ ಎದೆಯ ಮೇಲೆ ಮೃದುವಾಗಿ ಊರಿದಳು. ಅವಳ ಚರ್ಯೆಗಳನ್ನು ಅವನು ನಿಶ್ಚೇಷ್ಟಿತವಾಗಿ ಗಮನಿಸುತ್ತಿದ್ದ. ಅವಳು ಸಮ್ಮೋಹನಾಕಾರವಾಗಿ ನಕ್ಕು, ಬಿಲ್ಲಿನಂತೆ ಮುಂದೆ ಬಾಗುತ್ತಾ ತನ್ನ ಮೈಮೇಲಿದ್ದ ಸ್ಟಾಕಿಂಗ್ಸ್ ತೆಗೆಯತೊಡಗಿದಳು. ತಾರಕನಾಮನ ಹೃದಯದ ಬಡಿತ ಇಮ್ಮಡಿಯಾಯಿತು.

* * *

909 ತನ್ನ ಹೌಸ್‌ಬೋಟಿನಲ್ಲಿ ಕುಳಿತುಕೊಂಡು ಬೈನಾಕ್ಯುಲರ್‌ಮೂಲಕ ನೀರನ್ನೇ ಗಮನಿಸುತ್ತಿದ್ದ. ಆದರೂ ಅವನಿಗೆ ಜಾನಿವಾಕರ್‌ನ ಜಾಡೇ ಕಾಣಿಸಲಿಲ್ಲ. ಜಾನಿವಾಕರ್ ಉಸಿರು ಬಿಗಿಹಿಡಿದು ನೀರೊಳಗಿಂದ ಈಜುತ್ತಾ ಹೋಗುತ್ತಿದ್ದ. ಒಳಗೆ ಮನುಷ್ಯ ಈಜುತ್ತಿರುವ ರೀತಿಯಲ್ಲಿ ನೀರಮೇಲೆ ಕೊಂಚವಾದರೂ ಶಬ್ದವಿರಲಿಲ್ಲ. ಅಂಡರ್‌ವಾಟರ್‌ಸ್ವಿಮ್ಮಿಂಗ್‌ನಲ್ಲಿ ಜಾನಿವಾಕರ್ ನಿಷ್ಣಾತ. ಅವನು ನೀರೊಳಗೆ ಈಜುತ್ತಿದ್ದರೆ ಶಕ್ತಿಯುತವಾದ ಸಬ್‌ಮೆರೀನ್‌ನಂತಾಗುತ್ತಿದ್ದ. ಹೊರಗಿರುವ ಶತ್ರುಗಳು ಯಾರೂ ಅವನನ್ನು ಕಂಡುಹಿಡಿಯಲಾರರು.

ಸರಿಯಾಗಿ ಲಕ್ಸುರಿ ಹೌಸ್‌ಬೋಟ್ ಅನ್ನು ಸಮೀಪಿಸುತ್ತಲೇ ಅವನು ಥಟ್ಟನೆ ನೀರಿನಿಂದ ಮೇಲೆ ತೇಲಿ ಒಂದು ಸಲ ತಲೆತಿರುಗಿಸಿ ಸುತ್ತಲೂ ನೋಡಿದ. ಆ ಸಮಯದಲ್ಲಿ ತನ್ನನ್ನು ಗಮನಿಸುತ್ತಿರುವವರ್ಯಾರೂ ಕಾಣಿಸಲಿಲ್ಲ, ದೂರದಲ್ಲಿ ಬೈನಾಕ್ಯುಲರ್‌ನಿಂದ ನೋಡುತ್ತಿದ್ದ 909 ಅನ್ನು ಬಿಟ್ಟರೆ. ಕೆಲವು ಕ್ಷಣಗಳ

ಲ್ಲಿಯೇ ಅವನ ಕೈಗಳು ಆ ಲಕ್ಜುರಿ ಹೌಸ್‌ಬೋಟ್‌ನ ಬೋರ್ಡ್ ಮೇಲಿದ್ದವು. ಮತ್ತೊಂದು ಸಲ ಸುತ್ತ ನೋಡಿ ಹುಪ್ ಎನ್ನುತ್ತಾ ಹೌಸ್‌ಬೋಟ್‌ನ ಮೇಲೆ ಹತ್ತಿದ.

ಒಂದು ಸ್ಟಾಕಿಂಗ್ ತೆಗೆಯುವುದು ಪೂರ್ತಿಯಾದೊಡನೆಯೇ ಅವಳು ಎರಡನೆಯ ಕಾಲು ಮೇಲೆತ್ತಿ ಅವನ ಎದೆಯ ಮೇಲಿಟ್ಟಳು. ತಾರಕನಾಮನ ಹೃದಯ ಹೊಡೆದುಕೊಳ್ಳುತ್ತಿದ್ದ ಶಬ್ದ ಅವಳ ಮೃದುವಾದ ಪಾದಕ್ಕೆ ಸ್ಪಷ್ಟವಾಗಿ ಸೋಂಕುತ್ತಿತ್ತು. ಅವಳು ಮತ್ತೊಂದು ಸಲ ಬಿಲ್ಲಿನಂತೆ ಬಾಗಿ ಎರಡನೇ ಸ್ಟಾಕಿಂಗ್ ಕೂಡ ಉಂಡೆಯಂತೆ ಕೆಳಗೆ ಸುತ್ತಲು ಪ್ರಾರಂಭಿಸಿದಳು. ಕೊಂಚ ಹೊತ್ತಿನಲ್ಲಿಯೇ ಆ ಸ್ಟಾಕಿಂಗ್ ಕೂಡ ಅವಳ ಶರೀರದಿಂದ ಬೇರೆಯಾಯಿತು. ಈಗ ಕೇವಲ ಒಂದು ಅಂಡರ್‌ವೇರ್‌ನೊಂದಿಗೂ, ಬ್ರಾಸಿಯರ್‌ನೊಂದಿಗೂ ಅವನ ಮುಂದೆ ನಿಂತಿದ್ದಳು. ಅವನು ಹಾಗೆ ನೋಡುತ್ತಿರುವಂತೆಯೇ ಎರಡು ಕೈಗಳನ್ನೂ ಹಿಂದಕ್ಕೆ ಒಯ್ದು ಹುಕ್ಕು ತೆಗೆದು ಅವನ ಮೇಲೆ ಬ್ರಾಸಿಯರ್ ಎಸೆದಳು. ಮರುಕ್ಷಣ ಉನ್ನತವಾದ ಅವಳ ವಕ್ಷೋಜಗಳು ಮುಂದಕ್ಕೆ ಧುಮುಕಿದವು. ತಾರಕನಾಮನ ಹೃದಯದ ಬಡಿತ ಮುಮ್ಮಡಿಯಾಯ್ತು.

ಕಟ್ಟಕಡೆಯದಾಗಿ ಅವಳ ಶರೀರದ ಮೇಲೆ ಉಳಿದ ಅಂಡರ್‌ವೇರ್ ಕಡೆಯೂ ಅವಳ ಉದ್ದನೆಯ ಬೆರಳುಗಳು ಚುರುಕಾಗಿ ಚಲಿಸಿದವು. ಸೆಕೆಂಡ್‌ನ ಮುಳ್ಳು ಗಮ್ಯಸ್ಥಾನ ತಲುಪಿದೊಡನೆಯೇ ಸಿಡಿಯಲು ಸಿದ್ಧವಾದ ಟೈಮ್ ಬಾಂಬ್‌ನಂತಿದ್ದ ತಾರಕನಾಮ. ಒಂದೇ ಕ್ಷಣ ಅಷ್ಟೇ! ಅವಳ ಶರೀರದ ಮೇಲೆ ನಾಮಮಾತ್ರವಾಗಿ ಉಳಿದಿದ್ದ ಆ ಕೊನೆಯ ಆಚ್ಛಾದನೆಯೂ ರಿವ್ವೆಂದು ಗಾಳಿಯಲ್ಲಿ ಹಾರಿತು! ಟೈಂ ಬಾಂಬು ಸಿಡಿಯಿತು! ತಾರಕನಾಮ ಆವೇಶದಿಂದ ತೂಗಾಡುತ್ತಾ, ಅಸಹನೆಯಿಂದ ಅವಳ ಕೈ ಹಿಡಿದುಕೊಂಡು ಸರಕ್ಕನೆ ತನ್ನ ಮೇಲೆ ಎಳೆದುಕೊಂಡ. ಮೇಖಲೆ ರಬ್ಬರ್ ಬೊಂಬೆಯಂತೆ ಅವನ ಮೇಲೆ ಬಿದ್ದುಬಿಟ್ಟಳು. ಚಕಮುಕಿ ಕಲ್ಲಿನಂತೆ ತನ್ನ ಶರೀರಕ್ಕೆ ತೀಡುತ್ತಾ ತೀವ್ರವಾದ ಬಿಸಿ ಹುಟ್ಟಿಸುತ್ತಿದ್ದ ಅವಳ ಶರೀರದ ಮೇಲೆ ಎಲ್ಲಿ ಬೇಕಲ್ಲಿ ಕೈಯಾಡಿಸುತ್ತಾ ಅವಳನ್ನು ಪೂರ್ತಿಯಾಗಿ ಹೆಣೆದುಕೊಂಡ.

“ಏಯ್! ಏನಿದು ಚಿಕ್ಕ ಹುಡುಗರಂತೆ ಈ ಅವಸರ? ಈ ರಾತ್ರಿಯೆಲ್ಲಾ ನಿಮ್ಮದೇ ಅಲ್ವೆ ಒಂದು ಕ್ಷಣ ನಿಲ್ಲಿ!” ಅವಳು ತಡೆಯಲು ಹೋದಳು.

“ಊಂ ಹೂಂ! ನಾನು ತಡೆಯೋದಿಲ್ಲ” ಆವೇಶದಿಂದ ಏದುಸಿರು ಬಿಡುತ್ತಾ ಹೇಳಿದ ತಾರಕನಾಮ. “ನಿನ್ನ ಸೌಂದರ್ಯ ಸಯನೈಡ್‌ನಂತೆ

ಲಿಲ್ಲ. ಮೇಲಾಗಿ ಗರ್ವಪಡುತ್ತಿದ್ದ ಕೂಡ !

ತುಂಬಾ ಜನ ಧನ ಮದಾಂಧ, ಅಧಿಕಾರ ಮದಾಂಧರಂತೆಯೇ ತಾರಕ ನಾಮನಿಗೂ ಹೆಣ್ಣುಗಳ ಹುಚ್ಚು ವಿಪರೀತವಿತ್ತು. ಆದರೆ ವಯಸ್ಸಾಗುತ್ತಿರುವಂತೆ ಅವನು ಕ್ರಮೇಣ ಸೆಕ್ಸ್‌ನಲ್ಲಿ ವಿಫಲವಾಗತೊಡಗಿದ್ದ. ಅದರಿಂದಾಗಿ ಅವನು ತನ್ನ ಹಾಸಿಗೆ ಸೇರಿದ ಯುವತಿಯರ ಮುಂದೆ ಇತ್ತೀಚೆಗೆ ತೊಂದರೆಗೊಳಗಾಗುತ್ತಿದ್ದ. ಅವನಲ್ಲಿ ಮಲಗಿದ್ದ ಪುರುಷನನ್ನು ಮೇಖಲೆ ಪೂರ್ಣವಾಗಿ ಎಚ್ಚರಗೊಳಿಸುತ್ತಿದ್ದಳು. ಪರಿಣಾಮವಾಗಿ ತುಂಬಾ ದಿನಗಳ ನಂತರ ತಾರಕನಾಮ ಮತ್ತೆ ತನ್ನ ಪುರುಷತ್ವವನ್ನು ನಿರೂಪಿಸಿಕೊಳ್ಳಲಿದ್ದ. ಆ ಕ್ಷಣದಲ್ಲಿ ಅವನಿಗೆ ತಾನು ಇಪ್ಪತ್ತೈದು ವರ್ಷ ಚಿಕ್ಕವನಾದಂತೆ ಭಾಸವಾಗುತ್ತಿತ್ತು. ವಯಸ್ಸಾಗುತ್ತಿರುವ, ಯಾವ ಗಂಡಸಿಗಾದರೂ ಆ ಅನುಭವ ಅಲೌಕಿಕಾನಂದವನ್ನುಂಟು ಮಾಡುತ್ತದೆ.

ಅವಳು ಅವನ ಕೈಹಿಡಿದು ಮಂಚದ ಹತ್ತಿರ ಕರೆದೊಯ್ದು ಬೆಡ್ ಮೇಲೆ ತಳ್ಳಿದಳು. ತಾರಕನಾಮ ಬೆಡ್ ಮೇಲೆ ಅಂಗಾತನೆ ಬಿದ್ದ. ಅವಳು ತಕ್ಷಣ ಕೆಳಗೆ ನಿಂತುಕೊಂಡೇ ಒಂದು ಪಾದ ಮೇಲೆತ್ತಿ ಅವನ ಎದೆಯ ಮೇಲೆ ಮೃದುವಾಗಿ ಊರಿದಳು. ಅವಳ ಚರ್ಯೆಗಳನ್ನು ಅವನು ನಿರ್ನಿಮೇಷಿತವಾಗಿ ಗಮನಿಸುತ್ತಿದ್ದ. ಅವಳು ಸಮ್ಮೋಹನಾಕಾರವಾಗಿ ನಕ್ಕು, ಬಿಲ್ಲಿನಂತೆ ಮುಂದೆ ಬಾಗುತ್ತಾ ತನ್ನ ಮೈಮೇಲಿದ್ದ ಸ್ಟಾಕಿಂಗ್ಸ್ ತೆಗೆಯತೊಡಗಿದಳು. ತಾರಕ ನಾಮನ ಹೃದಯದ ಬಡಿತ ಇಮ್ಮಡಿಯಾಯಿತು.

* * *

909 ತನ್ನ ಹೌಸ್‌ಬೋಟಿನಲ್ಲಿ ಕುಳಿತುಕೊಂಡು ಬೈನಾಕ್ಯುಲರ್‌ಮೂಲಕ ನೀರನ್ನೇ ಗಮನಿಸುತ್ತಿದ್ದ. ಆದರೂ ಅವನಿಗೆ ಜಾನಿವಾಕರ್‌ನ ಜಾಡೇ ಕಾಣಿಸಲಿಲ್ಲ. ಜಾನಿವಾಕರ್ ಉಸಿರು ಬಿಗಿಹಿಡಿದು ನೀರೊಳಗಿಂದ ಈಜುತ್ತಾ ಹೋಗುತ್ತಿದ್ದ. ಒಳಗೆ ಮನುಷ್ಯ ಈಜುತ್ತಿರುವ ರೀತಿಯಲ್ಲಿ ನೀರಮೇಲೆ ಕೊಂಚವಾದರೂ ಶಬ್ದವಿರಲಿಲ್ಲ. ಅಂಡರ್‌ವಾಟರ್‌ಸ್ವಿಮ್ಮಿಂಗ್‌ನಲ್ಲಿ ಜಾನಿವಾಕರ್ ನಿಷ್ಣಾತ. ಅವನು ನೀರೊಳಗೆ ಈಜುತ್ತಿದ್ದರೆ ಶಕ್ತಿಯುತವಾದ ಸಬ್‌ಮೆರೀನ್‌ನಂತಾಗುತ್ತಿದ್ದ ಹೊರಗಿರುವ ಶತ್ರುಗಳು ಯಾರೂ ಅವನನ್ನು ಕಂಡುಹಿಡಿಯಲಾರರು.

ಸರಿಯಾಗಿ ಲಕ್ಜ್ಯುರಿ ಹೌಸ್‌ಬೋಟ್ ಅನ್ನು ಸಮೀಪಿಸುತ್ತಲೇ ಅವನು ಥಟ್ಟನೆ ನೀರಿನಿಂದ ಮೇಲೆ ತೇಲಿ ಒಂದು ಸಲ ತಲೆತಿರುಗಿಸಿ ಸುತ್ತಲೂ ನೋಡಿದ. ಆ ಸಮಯದಲ್ಲಿ ತನ್ನನ್ನು ಗಮನಿಸುತ್ತಿರುವವರ್ಯಾರೂ ಕಾಣಿಸಲಿಲ್ಲ, ದೂರದಲ್ಲಿ ಬೈನಾಕ್ಯುಲರ್‌ನಿಂದ ನೋಡುತ್ತಿದ್ದ 909 ಅನ್ನು ಬಿಟ್ಟರೆ. ಕೆಲವು ಕ್ಷಣಗಳ

ಲ್ಲಿಯೇ ಅವನ ಕೈಗಳು ಆ ಲಕ್ಷುರಿ ಹೌಸ್‌ಬೋಟ್‌ನ ಬೋರ್ಡ್ ಮೇಲಿದ್ದವು. ಮತ್ತೊಂದು ಸಲ ಸುತ್ತ ನೋಡಿ ಹುಪ್ ಎನ್ನುತ್ತಾ ಹೌಸ್‌ಬೋಟ್‌ನ ಮೇಲೆ ಹತ್ತಿದ.

*   *   *   *

ಒಂದು ಸ್ಟಾಕಿಂಗ್ ತೆಗೆಯುವುದು ಪೂರ್ತಿಯಾದೊಡನೆಯೇ ಅವಳು ಎರಡನೆಯ ಕಾಲು ಮೇಲೆತ್ತಿ ಅವನ ಎದೆಯ ಮೇಲಿಟ್ಟಳು. ತಾರಕನಾಮನ ಹೃದಯ ಹೊಡೆದುಕೊಳ್ಳುತ್ತಿದ್ದ ಶಬ್ದ ಅವಳ ಮೃದುವಾದ ಪಾದಕ್ಕೆ ಸ್ಪಷ್ಟವಾಗಿ ಸೋಂಕುತ್ತಿತ್ತು. ಅವಳು ಮತ್ತೊಂದು ಸಲ ಬಿಲ್ಲಿನಂತೆ ಬಾಗಿ ಎರಡನೇ ಸ್ಟಾಕಿಂಗ್ ಕೂಡ ಉಂಡೆಯಂತೆ ಕೆಳಗೆ ಸುತ್ತಲು ಪ್ರಾರಂಭಿಸಿದಳು. ಕೊಂಚ ಹೊತ್ತಿನಲ್ಲಿಯೇ ಆ ಸ್ಟಾಕಿಂಗ್ ಕೂಡ ಅವಳ ಶರೀರದಿಂದ ಬೇರೆಯಾಯಿತು. ಈಗ ಕೇವಲ ಒಂದು ಅಂಡರ್‌ವೇರ್‌ನೊಂದಿಗೂ, ಬ್ರಾಸಿಯರ್‌ನೊಂದಿಗೂ ಅವನ ಮುಂದೆ ನಿಂತಿದ್ದಳು. ಅವನು ಹಾಗೆ ನೋಡುತ್ತಿರುವಂತೆಯೇ ಎರಡು ಕೈಗಳನ್ನೂ ಹಿಂದಕ್ಕೆ ಒಯ್ದು ಹುಕ್ಕು ತೆಗೆದು ಅವನ ಮೇಲೆ ಬ್ರಾಸಿಯರ್ ಎಸೆದಳು. ಮರುಕ್ಷಣ ಉನ್ನತವಾದ ಅವಳ ವಕ್ಷೋಜಗಳು ಮುಂದಕ್ಕೆ ಧುಮುಕಿದವು. ತಾರಕನಾಮನ ಹೃದಯದ ಬಡಿತ ಮುಮ್ಮಡಿಯಾಯ್ತು.

ಕಟ್ಟಕಡೆಯದಾಗಿ ಅವಳ ಶರೀರದ ಮೇಲೆ ಉಳಿದ ಅಂಡರ್‌ವೇರ್ ಕಡೆಯೂ ಅವಳ ಉದ್ದನೆಯ ಬೆರಳುಗಳು ಚುರುಕಾಗಿ ಚಲಿಸಿದವು. ಸೆಕೆಂಡ್‌ನ ಮುಳ್ಳು ಗಮ್ಯಸ್ಥಾನ ತಲುಪಿದೊಡನೆಯೇ ಸಿಡಿಯಲು ಸಿದ್ಧವಾದ ಟೈಮ್ ಬಾಂಬ್‌ನಂತಿದ್ದ ತಾರಕನಾಮ. ಒಂದೇ ಕ್ಷಣ ಅಷ್ಟೇ! ಅವಳ ಶರೀರದ ಮೇಲೆ ನಾಮಮಾತ್ರವಾಗಿ ಉಳಿದಿದ್ದ ಆ ಕೊನೆಯ ಆಚ್ಛಾದನೆಯೂ ರಿವ್ವೆಂದು ಗಾಳಿಯಲ್ಲಿ ಹಾರಿತು! ಟೈಂ ಬಾಂಬು ಸಿಡಿಯಿತು! ತಾರಕನಾಮ ಆವೇಶದಿಂದ ತೂಗಾಡುತ್ತಾ, ಅಸಹನೆಯಿಂದ ಅವಳ ಕೈ ಹಿಡಿದುಕೊಂಡು ಸರಕ್ಕನೆ ತನ್ನ ಮೇಲೆ ಎಳೆದುಕೊಂಡ. ಮೇಖಲೆ ರಬ್ಬರ್ ಬೊಂಬೆಯಂತೆ ಅವನ ಮೇಲೆ ಬಿದ್ದುಬಿಟ್ಟಳು. ಚಕಮುಕಿ ಕಲ್ಲಿನಂತೆ ತನ್ನ ಶರೀರಕ್ಕೆ ತೀಡುತ್ತಾ ತೀವ್ರವಾದ ಬಿಸಿ ಹುಟ್ಟಿಸುತ್ತಿದ್ದ ಅವಳ ಶರೀರದ ಮೇಲೆ ಎಲ್ಲಿ ಬೇಕಲ್ಲಿ ಕೈಯಾಡಿಸುತ್ತಾ ಅವಳನ್ನು ಪೂರ್ತಿಯಾಗಿ ಹೆಣೆದುಕೊಂಡ.

"ಏಯ್! ಏನಿದು ಚಿಕ್ಕ ಹುಡುಗರಂತೆ ಈ ಅವಸರ? ಈ ರಾತ್ರಿಯೆಲ್ಲಾ ನಿಮ್ಮದೇ ಅಲ್ವೆ ಒಂದು ಕ್ಷಣ ನಿಲ್ಲಿ!" ಅವಳು ತಡೆಯಲು ಹೋದಳು.

"ಊಂ ಹೂಂ! ನಾನು ತಡೆಯೋದಿಲ್ಲ" ಆವೇಶದಿಂದ ಏದುಸಿರು ಬಿಡುತ್ತಾ ಹೇಳಿದ ತಾರಕನಾಮ. "ನಿನ್ನ ಸೌಂದರ್ಯ ಸಯನೈಡ್‌ನಂತೆ

ನನ್ನ ಮೈಯಲ್ಲೆಲ್ಲಾ ಹರಡಿ ನರಗಳೆಲ್ಲವೂ ಭಗಭಗ ಉರಿಯುತ್ತಿವೆ. ಇನ್ನೊಂದು ಕ್ಷಣವೂ ನಾನು ತಡೀಲಾರೆ."

"ಹುಷ್! ತಪ್ಪು, ತೀರಾ ಅಷ್ಟು ಆವೇಶ ಪಡುವುದು ಆರೋಗ್ಯಕ್ಕಷ್ಟು ಒಳ್ಳೆಯದಲ್ಲ. ಮೈ ಡಿಯರ್ ನಾಮ! ಈ ವಯಸ್ಸಿನಲ್ಲಿ ಇಷ್ಟು ಆವೇಶ ಪಟ್ಟರೆ ಬಿ. ಪಿ. ಹೆಚ್ಚಾಗುತ್ತದೇನೊ!"

"ಬಿ. ಪಿ. ಹೆಚ್ಚಾಗುವದಷ್ಟೇ ಅಲ್ಲ, ಪ್ರಾಣವೇ ಹೋದ್ರೂ ನಿನ್ನ ಬಿಡೋದಿಲ್ಲ."

"ಒಂದು ಕ್ಷಣ!" ಎಂದು ಮೃದುವಾಗಿ ಅವನಿಂದ ಬಿಡಿಸಿಕೊಂಡು ಹಾಸಿಗೆಯ ಮೇಲೆ ಅತ್ತ ಹೊರಳಿದಳು.

ಆ ಹೌಸ್‌ಬೋಟಿನಲ್ಲಿ ಬೆಡ್ ಪಕ್ಕದಲ್ಲಿ ಒಂದು ಲಿಕ್ಕರ್ ಸ್ಟ್ಯಾಂಡ್ ಕೂಡ ಇತ್ತು. ಅದರೊಳಗಿಂದ ಸ್ಕಾಚ್ ಬಾಟಲ್ ತೆಗೆದು, ಓಪನರ್‌ನಿಂದ ಕಾರ್ಕ್ ಮೇಲೆ ಹಾರಿಸಿದಳು ಟಪ್ ಎನ್ನುವ ಶಬ್ದದೊಂದಿಗೆ ಕಾರ್ಕ್ ಬಾಟಲ್ ತೆರೆದುಕೆತೂಂಡು. ತಾರಕನಾಮ ತುಟಿಗಳನ್ನು ನಾಲಿಗೆಯಿಂದ ಸವರಿಕೊಂಡ.

* * * *

ಬೋರ್ಡ್ ಮೇಲೆ ಸೇರಿಕೊಳ್ಳುತ್ತಲೇ ಜಾನಿವಾಕರ್ ಮೇಲೇಳದಂತೆ ಕೊಂಚವೂ ಶಬ್ದವಾಗದಂತೆ ಹಲ್ಲಿಯಂತೆ ಮುಂದಕ್ಕೆ ತೆವಳತೊಡಗಿದ. ಬೋರ್ಡ್ ಮೇಲೆ ಒಂದು ಮೂಲೆಗೆ ಸೇರಿದೊಡನೆಯೇ ಯಾರಾದರೂ ಇದ್ದಾರೇನೋ ಎಂದು ಎಚ್ಚರಿಕೆಯಿಂದ ಅತ್ತ ಇತ್ತ ನೋಡಿದ. ತಾರಕನಾಮನಂತಹ ಪ್ರಮುಖ ವ್ಯಕ್ತಿ ಯಾವುದೇ ಬಾಡಿಗಾರ್ಡ್‌ಗಳಿಲ್ಲದೆ ಆ ಹಡಗಿನ ಮೇಲಿರುತ್ತಾನೆಯೇ ? ಅವನ ಅನುಮಾನ ನಿರಾಧಾರವೆಂದು ತಿಳಿದುಬಂತು ಅತ್ತ-ಇತ್ತ ಯಾರೂ ಇರಲಿಲ್ಲ ಕೊನೇಪಕ್ಷ ಆ ಬೋಟ್‌ಹೌಸ್‌ಗೆ ಸಂಬಂಧಿಸಿದವರೂ ಇರಲಿಲ್ಲ. ಅಂದರೆ ತಾರಕನಾಮ ನೂರಕ್ಕೆ ನೂರು ಪಾಲು ರಹಸ್ಯ ಪಾಲಿಸುತ್ತಿದ್ದಾನೆಂದಾಯ್ತು ! ಜಾನಿವಾಕರ್‌ಗೆ ಆಶ್ಚರ್ಯವಾಯಿತು.

ರಾಜಕೀಯ ನಾಯಕರು ಯುವತಿಯರೊಂದಿಗೆ ಕಳೆಯುವುದು ಅವನಿಗೆ ತಿಳಿಯದ ವಿಷಯವಲ್ಲ.ತಾರಕನಾಮ ತೀರಾ ಇಷ್ಟುರಹಸ್ಯವಾಗಿ ಕಳೆಯುತ್ತಿರುವುದೇ ಅವನಿಗೆ ಆಶ್ಚರ್ಯವನ್ನುಂಟು ಮಾಡುತ್ತಿತ್ತು. ತಮ್ಮ ಕಪ್ಪು ಜೀವನದ ಬಗೆಗೆ ಸಾಮಾನ್ಯ ಪ್ರಜೆಗಳಿಗೆ, ಪತ್ರಿಕೆಗಳವರಿಗೆ ತಿಳಿಯದಂತೆ ಎಚ್ಚರಿಕೆ ವಹಿಸುವುದು ರಾಜಕೀಯ ನಾಯಕರಿಗೆ ತುಂಬಾ ಅಗತ್ಯ. ಆದರೆ, ತಮ್ಮ ಸ್ವಂತ ಅಂಗರಕ್ಷಕರೂ ಇಲ್ಲದೆ ಹೀಗೆ ಪೂರ್ತಿ ಒಂಟಿಯಾಗಿ ತಾರಕನಾಮ ಹೌಸ್ ಬೋಟಿನ ಮೇಲೆ ರಾತ್ರಿ ಕಳೆಯಲು ಬಂದಿದ್ದು ನಿಜಕ್ಕೂ ತುಂಬಾ

ವಿಚಿತ್ರವಾಗಿತ್ತು. ಪ್ರತಿಯೊಬ್ಬ ರಾಜಕೀಯ ನಾಯಕನಿಗೂ ಇಂತಹ ಕತ್ತಲೆ ಕೆಲಸ ಮಾಡುವಾಗ ಹೊರಗೆ ರಕ್ಷಣೆಯಾಗಿ ನಿಲ್ಲಲು ಸ್ವಂತದ ಅಂಗರಕ್ಷಕರಿರುತ್ತಾರೆ ಅವರಿಂದ ಆ ರಾಜಕೀಯ ನಾಯಕರು ಮುಚ್ಚಿಡುವುದೆನ್ನುವುದು ಯಾವುದೂ ಇರುವುದಿಲ್ಲ. ಅಂತಹ ಬಾಡಿಗಾರ್ಡ್ಸ್ ಸಾಮಾನ್ಯವಾಗಿ ಬಾಯಿ ಬಿಡುವುದಿಲ್ಲ. ಕನಿಷ್ಟ ಸ್ವಂತದ ಅಂಗರಕ್ಷಕರಾದರೂ ಇಲ್ಲದೆ ಬೋಟ್ ಮೇಲೆ ರಾತ್ರಿ ಕಳೆಯಲು ತಾರಕನಾಮ ಬಂದಿದ್ದಾನೆಂದರೆ ಅವನು ಆ ಸಮಯದಲ್ಲಿ ಮಾಡುತ್ತಿರುವುದು ರಾಸಲೀಲೆಯೊಂದೇ ಅಲ್ಲ, ಇನ್ನೂ ಏನೋ ಇದೆ.

ಬೋರ್ಡ್ ಮೇಲೆ ಒಬ್ಬ ವ್ಯಕ್ತಿ ಕೂಡಾ ಇರುವುದರಿಂದ ಜಾನಿವಾಕರ್‌ನ ಕೆಲಸ ಮತ್ತಷ್ಟು ಸುಲಭವಾಯಿತು. ಅವನು ತುಂಬಾ ಕತ್ತಲೆಯಿರುವ ಸ್ಥಳದಲ್ಲಿ ನೆರವಿನಲ್ಲಿ ನೆರಳಾಗಿ ಬೆರೆದು ಎದ್ದು ನಿಂತ. ಅವನ ಎದುರಿಗೇ ಹೌಸ್ ಬೋಟ್‌ನಲ್ಲಿನ ಕರ್ಟನ್ ಗಾಳಿಗೆ ಮೆಲ್ಲಗೆ ರಪ ರಪ ಎಂದು ಬಡಿದುಕೊಳ್ಳುತ್ತಿತ್ತು. ಬಹುಶಃ ತಂಗಾಳಿಗೋಸ್ಕರವೋ ಏನೋ ತಾರಕನಾಮ ಹೌಸ್ ಬೋಟಿನ ಕಿಟಕಿಗಳನ್ನು ಒಳಗಿನಿಂದ ಲಾಕ್ ಮಾಡಿರಲಿಲ್ಲ.

ಜಾನಿವಾಕರ್ ತನ್ನ ಎದುರಿಗಿದ್ದ ಪರದೆಯನ್ನು ಕೊಂಚವೇ ಪಕ್ಕಕ್ಕೆ ಸರಿಸಿ, ಒಂದೇ ಒಂದು ಕಣ್ಣಿಟ್ಟು ಒಳಗೆ ನೋಡಿದ. ತಾರಕನಾಮನಾಗಲಿ, ಮೇಖಲೆಯಾಗಲಿ ಅವನಿಗೆ ಕಾಣಿಸಲಿಲ್ಲ. ಅಂದರೆ ಅವರು ನೇರವಾಗಿ ಕಿಟಕಿಯ ಎದುರಿಗೆ ಇಲ್ಲವೆಂದಾಯ್ತು. ತಾನು ಪರದೆಯನ್ನು ಪೂರ್ತಿಯಾಗಿ ತೊಲಗಿಸಿ ತಲೆ ಒಳಗಿಟ್ಟು ನೋಡುವುದು ತುಂಬಾ ಅಪಾಯ. ಅವನು ಒಂದು ಕ್ಷಣ ಏನೋ ಆಲೋಚಿಸಿ, ಜೇಬಿನೊಳಗಿಂದ ಚಿಕ್ಕ ಪಾಕೇಟ್ ಒಂದನ್ನು ಹೊರತೆಗೆದ. ಥಟ್ಟನೆ ಮೊಣಕಾಲುಗಳ ಮೇಲೆ ಕುಳಿತು ಅದರೊಳಗಿಂದ ಯಾವುದೋ ವಸ್ತುಗಳನ್ನು ತೆಗೆದು ಒಂದು ಕ್ರಮದಲ್ಲಿ ಹೊಂದಿಸತೊಡಗಿದ. ಅದನ್ನು ಹೊಂದಿಸಲು ಅವನಿಗೆ ಒಂದೆರಡು ಕ್ಷಣಗಳಿಗಿಂತಲೂ ಹೆಚ್ಚು ಹೊತ್ತು ಹಿಡಿಯಲಿಲ್ಲ. ಪೆರಿಸ್ಕೋಪ್! ಆ ಉಪಕರಣವನ್ನು ಸಬ್‌ಮೆರೀನ್‌ಗಳಲ್ಲಿ ಬಳಸುತ್ತಾರೆ. ಸಮುದ್ರಗಳಲ್ಲಿ ಎಲ್ಲಿಯೋ ಕೆಲವು ನೂರು ಮೀಟರ್‌ಗಳ ಆಳದಲ್ಲಿ ಪ್ರಯಾಣ ಮಾಡುವ ಸಬ್‌ಮೆರೀನ್‌ಗಳು ನೀರಲ್ಲಿ ಆ ರೀತಿ ಪ್ರಯಾಣ ಮಾಡುತ್ತಲೇ ನೀರಿನ ಮೇಲೆ ಏನು ನಡೆಯುತ್ತಿದೆ ಎನ್ನುವುದನ್ನು ಪೆರಿಸ್ಕೋಪ್‌ನ ಮೂಲಕ ತಿಳಿದುಕೊಳ್ಳಬಹುದು. ಜಾನಿವಾಕರ್ ಅದೇ ಫಾರ್ಮುಲಾ ಬಳಸಿ. ತನಗೋಸ್ಕರ ಒಂದು ಮಿನಿ ಪೆರಿಸ್ಕೋಪ್ ತಯಾರು ಮಾಡಿಕೊಳ್ಳುತ್ತಿದ್ದ .ಅದು ಇಂಗ್ಲೀಷ್ ಅಕ್ಷರ 'ಜಡ್‌ನ' ಆಕಾರದಲ್ಲಿರುತ್ತದೆ. ಜಾನಿವಾಕರ್ ವೃತ್ತಿಯಲ್ಲಿ ಅಂತಹ ವಸ್ತುಗಳ ಅಗತ್ಯ ತುಂಬಾ ಇರುತ್ತದೆ.

ಅವನು ಮೊಣಕಾಲುಗಳ ಮೇಲೆ ಕುಳಿತುಕೊಂಡೇ ಪೆರಿಸ್ಕೋಪ್‌ನ ಒಂದು ಅಂಚನ್ನು ಕಿಟಕಿಯ ಮೂಲಕ ಒಳಗೆ ತಳ್ಳಿದ. ಯಾರಿಗೂ ಅನುಮಾನ ಉಂಟಾಗದಂತಹ ಚಿಕ್ಕ ವಸ್ತುವದು. ತಾನು ಎರಡನೇ ತುದಿಗೆ ಒಂದು ಕಣ್ಣಿಟ್ಟು ನೋಡಿದ ಪೆರಿಸ್ಕೋಪ್‌ನಲ್ಲಿ. ಒಳಗೇನು ನಡೆಯುತ್ತಿದೆ ಎಂದು ಸ್ಪಷ್ಟ ವಾಗಿ ಕಾಣಿಸುತ್ತಿತ್ತು. ಅಗರಲ್ಲೂ ಅವನಿಗೆ ಮೊದಲು ಯಾರೂ ಕಾಣಿಸಲಿಲ್ಲ. ಸರಸರನೆ ಆ್ಯಂಗಲ್ಸ್ ಬದಲಾಯಿಸಿ ನೋಡಿದ. ಒಂದು ಆ್ಯಂಗಲ್‌ನಲ್ಲಿ ಅವನ ದೃಷ್ಟಿ ಹಾಗೆಯೇ ನಿಂತುಬಿಟ್ಟಿತು. ಆ ಮರುಕ್ಷಣ ಅವನ ಹೃದಯ ಜಿಗುಪ್ಸೆ ಯಿಂದ ತುಂಬಿ ಹೋಯ್ತು. ತಾರಕನಾಥ ನಗ್ನನಾಗಿ ಮೇಖಲೆಯ ಮಡಿಲಿನಲ್ಲಿ ಸೊರಗಿದವನಂತೆ ಮಲಗಿದ್ದ. ಮೇಖಲೆ ಅವನನ್ನು ರಮಿಸುತ್ತಾ ಬಾಯಿಗೆ ಗ್ಲಾಸ್ ಕೊಡುತ್ತಿದ್ದಳು. ಒಂದು ಕ್ಷಣ ಆ ದೃಶ್ಯವನ್ನು ನೋಡಿ ಜಾನಿವಾಕರ್ ಥಟ್ಟನೆ ತಲೆ ತಿರುಗಿಸಿಕೊಳ್ಳುತ್ತಾ ಪೆರಿಸ್ಕೋಪ್ ಹಿಂದಕ್ಕೆ ತೆಗೆದುಕೊಂಡು, ಮತ್ತೆ ಕತ್ತಲೆಯಲ್ಲಿ ಸರಿದು ನಿಂತ. ತೀರದ ಸೆಕ್ಸ್ ದಾಹದಿಂದ ಬಳಲುತ್ತಾ, ಅನುಕ್ಷಣ ಮೃಗತೃಷ್ಣೆಯಿಂದ ಪರಿತಪಿಸುತ್ತಿರುವವನಿಗೆ ಒಂದು ಜೋಡಿ ರಹಸ್ಯ ವಾಗಿ ಒಂದು ಸ್ಥಳದಲ್ಲಿ ಕ್ರೀಡಿಸುತ್ತಿದ್ದರೆ ಇನ್ನೂ ಇನ್ನೂ ನೋಡಬೇಕೆನಿಸು ತ್ತದೆ. ಹಾಗಲ್ಲದೆ ಆತ್ಮ ಸಂಯಮದಿಂದ ನಿಗ್ರಹದಿಂದ ಇರಬಲ್ಲ ವ್ಯಕ್ತಿಗೆ ಅಂತಹ ದೃಶ್ಯ ಕಣ್ಣಿಗೆ ಬಿದ್ದಾಗ ಜಿಗುಪ್ಸೆ ಮಾತ್ರ ಉಂಟಾಗುತ್ತದೆ. ಆ ಹೆಣ್ಣು ಎಷ್ಟೇ ಸುಂದರಿಯಾದರೂ ಆಗಿರಬಹುದು.

ಜಾನಿವಾಕರ್ ಒಂದು ಸಲ ತಲೆ ಜಾಡಿಸಿ ಸರಸರನೆ ತನ್ನ ಕೆಲಸವನ್ನು ಪೂರ್ತಿಗೊಳಿಸತೊಡಗಿದ. 909 ತನಗೆ ಕೊಟ್ಟ ಅಟೋಮ್ಯಾಟಿಕ್ ಮಿನಿ ಯೇಚರ್ ಕ್ಯಾಮರಾ ಹೊರತೆಗೆದು, ಅದನ್ನು ಅಲ್ಲಿ ಜೋಡಿಸಲು ಸರಿ ಯಾದ ಸ್ಥಳಕ್ಕಾಗಿ ಒಂದು ಸಲ ಅತ್ತಿತ್ತ ನೋಡಿದ. ಆ ಕ್ಯಾಮರಾ ಅಡಗಿಸಿ ಡಲು ಆ ಕಿಟಕಿಗಿಂತಲೂ ಅನುಕೂಲವಾದ ಪ್ರದೇಶ ಅವನಿಗೆ ಕಾಣಿಸಲಿಲ್ಲ. ಒಟ್ಟಿನಲ್ಲಿ ಆ ಕ್ಯಾಮರಾ ಒಳಗಿದ್ದವರ ದೃಷ್ಟಿಗೆ ಬೀಳಕೂಡದು. ಹಠಾತ್ತನೆ ಕರ್ಟನ್‌ಗೆ ಅತ್ತಕಡೆ ಹೆಚ್ಚು-ಕಡಿಮೆ ಕಿಟಕಿಗೆ ಅಂಟಿಕೊಂಡು ಇಟ್ಟಂತಿದ್ದ ಒಂದು ಹೂವಿನ ಕುಂಡ ಅವನ ದೃಷ್ಟಿಯನ್ನು ಆಕರ್ಷಿಸಿತು. ಒಂದು ಕೈನಿಂದ ಅತಿ ಎಚ್ಚರಿಕೆಯಿಂದ ಪರದೆಯನ್ನು ಪಕ್ಕಕ್ಕೆ ಸರಿಸಿ ಹೂವಿನ ಕುಂಡವನ್ನು ಪರೀಕ್ಷಿಸಿ ನೋಡಿದ. ಆ ಹೂವಿನ ಕುಂಡ ಕ್ಯಾಮರಾವನ್ನು ಅಲ್ಲಿ ಕಾಣದಂತೆ ಅಡಗಿಸಿಡಲು ತುಂಬಾ ಅನುಕೂಲವುಳ್ಳದ್ದಾಗಿ ಕಾಣಿಸಿತು. ಜಾನಿವಾಕರ್ ತಡ ಮಾಡಲಿಲ್ಲ. ಒಂದು ಕೈನಿಂದ ಪರದೆಯನ್ನು ಪಕ್ಕಕ್ಕೆ ಸರಿಸಿ ಹಿಡಿದುಕೊಂಡೇ ಎರಡನೇ ಕೈಯನ್ನು ನಿಧಾನವಾಗಿ ಒಳಗಿಟ್ಟು ಹೂವಿನ ಕುಂಡದ ಮರೆಗೆ

ಕ್ಯಾಮರಾ ಇಟ್ಟ. ತುಂಬಾ ನೈಪುಣ್ಯದಿಂದ ಒಳಗಿದ್ದವರಿಗೆ ಕೊಂಚ ಮಾತ್ರವೂ ಅನುಮಾನ ಬರದಂತೆ ಅವನು ಆ ಕ್ಯಾಮರಾ ಇಟ್ಟಿದ್ದ. ಕ್ಯಾಮರಾ ಲೆನ್ಸ್ ನೇರ ವಾಗಿ ಅವರಿಬ್ಬರೂ ಇದ್ದ ಬೆಡ್ ಕಡೆಯೇ ನೋಡುತ್ತಿತ್ತು. ಹೂವಿನ ಕುಂಡದ ಮರೆಗಿದ್ದುದರಿಂದ ತುಂಬಾ ಪರೀಕ್ಷೆಯಿಂದ ನೋಡಿದ ಹೊರತು ಆ ಮಿನಿ ಯೇಚರ್ ಕ್ಯಾಮರಾ ಅವರಿಗೆ ಕಾಣಿಸುವ ಅವಕಾಶವಿದ್ದಿರಲಿಲ್ಲ. ಅವರಿಬ್ಬರೂ ಇರುವ ಪರಿಸ್ಥಿತಿಯಲ್ಲಿ ಅಷ್ಟು ಎಚ್ಚರಿಕೆಯಿಂದ ಆ ಹೂವಿನ ಕುಂಡದ ಕಡೆ ನೋಡುವ ಸಾಧ್ಯತೆಯೂ ಇರಲಿಲ್ಲ. ಮಿನಿಯೇಚರ್ ಕ್ಯಾಮರಾ ಅವರ ದೃಷ್ಟಿ ಯಲ್ಲಿ ಬೀಳುವ ಅವಕಾಶವಿಲ್ಲವೆಂದು ನಿರ್ಧರಿಸಿಕೊಂಡ ನಂತರ, ಜಾನಿವಾಕರ್ ಮೆಲ್ಲಗೆ ನಿಟ್ಟುಸಿರಿಟ್ಟು ಕೊಂಚವೂ ತಡ ಮಾಡದೆ ಹಿಂದಕ್ಕೆ ತಿರುಗಿದ. ಮೀನು ಈಜುತ್ತಿರುವಷ್ಟು ಶಬ್ದವನ್ನೂ ಮಾಡದೆ ನಿಶ್ಯಬ್ದವಾಗಿ ನೀರಿಗೆ ಜಾರಿದ. ಆ ಮರುಕ್ಷಣ ತಮ್ಮ ಹೌಸ್‌ಬೋಟಿನ ಕಡೆ ಸರಸರನೆ ಈಜತೊಡಗಿದ. ಒಬ್ಬ ವ್ಯಕ್ತಿ ತಮ್ಮ ಪಕ್ಕದಲ್ಲಿಯೇ ಈಜುತ್ತಾ ಹೋಗುತ್ತಿದ್ದಾನೆಂದು ಸರೋವರ ದಲ್ಲಿನ ಮೀನುಗಳು ಕೂಡಾ ಗ್ರಹಿಸಲಾರದಷ್ಟು ನಿಶ್ಯಬ್ದವಾಗಿ ಈಜುತ್ತಾ ಹೋಗಿ ತನ್ನ ಹೌಸ್‌ಬೋಟ್ ತಲುಪಿದ.

ಹೌಸ್‌ಬೋಟ್‌ನಲ್ಲಿದ್ದ 909, ಅವನಿಗೆ ಕೈ ನೀಡಿ ಮೇಲಕ್ಕೆಳೆದುಕೊಂಡ. "ವೆಲ್ ಡನ್ ಬ್ರದರ್! ನಾನು ನಿಮ್ಮ ಬಳಿ ಕೊನೇಪಕ್ಷ ಆರು ತಿಂಗಳಾದರೂ ಶಿಷ್ಯವೃತ್ತಿ ಮಾಡಬೇಕು!" ಎಂದ.

ಜಾನಿವಾಕರ್ ಪ್ರಶ್ನಾರ್ಥಕವಾಗಿ ನೋಡಿದ.

"ಇಲ್ಲೀವರೆಗೆ ಈ ಬೈನಾಕ್ಯುಲರ್‌ನಿಂದ ನೋಡುತ್ತಲೇ ಇದ್ದೀನಿ. ಅಲ್ಲಿ ನೀವೇನು ಮಾಡಿಬಂದಿರೋ ನನಗೆ ಅಣುಮಾತ್ರವೂ ಕಾಣಿಸಲಿಲ್ಲ. ಎಕ್ಸಲೆಂಟ್ ಪರ್‌ಫಾರ್ಮೆನ್ಸ್!" ಎಂದ 909.

*　　*　　*　　*

"ಸೋಡಾ ಹೆಚ್ಚಿಗೆ ಬೆರೆಸ್ಬೇಡಾ" ತಾರಕನಾಮ ಅನುಲಿನ ಧ್ವನಿಯಲ್ಲಿ ನುಡಿದ. ಅವನ ಕಣ್ಣುಗಳು ಅವಳ ಶರೀರದಲ್ಲಿನ ಅಣುವಣುವನ್ನೂ ಚುಚ್ಚಿ ಚುಚ್ಚಿ ನೋಡುತ್ತಿದ್ದವು. ಅವನ ಕೈಗಳು ಒಂದೇ ಕಡೆ ನಿಲ್ಲದೆ, ಅವಳ ಶರೀರದ ಮೇಲೆ ಎಲ್ಲೆಲ್ಲೋ ಹರಿದಾಡುತ್ತಿದ್ದವು. ಮೇಖಲೆ ಮೆಲ್ಲಗೆ ನಕ್ಕಳು.

"ಬ್ಯೂಟಿಫುಲ್ ಸ್ಮೈಲ್" ತಾರಕನಾಮ ಮೆಚ್ಚುಗೆಯಿಂದ ನುಡಿದ.

ಮೇಖಲೆ ಮತ್ತೊಂದು ಸಲ ನಕ್ಕು, ಗ್ಲಾಸಿನಲ್ಲಿ ಮತ್ತೆರಡು ರೌಂಡ್ಸ್ ಸುರುವಿದಳು. "ಹೌದೂ, ಜೆಕೇ ನೀವಾವುದೊ ಫೈಲ್ ಕೊಡ್ತೀರೀಂತ ಹೇಳಿದ್ದ. ಯಾವುದು ಆ ಫೈಲ್?" ಸೋಡಾ ಬೆರೆಸುತ್ತಾ ಕೇಳಿದಳು.

"ಹುಷ್, ಜೋರಾಗಿ ಮಾತಾಡ್ಬೇಡಾ. ಟಾಪ್ ಸೀಕ್ರೆಟ್" ಎಂದ ತಾರಕನಾಮ.

"ಅಷ್ಟು ರಹಸ್ಯಾನಾ! "

"ಹೌದು ದೇಶ ರಕ್ಷಣೆಗೆ ಸಂಬಂಧಿಸಿದ ರಹಸ್ಯಗಳು!"

"ಮೈ ಗಾಡ್! ಅವುಗಳನ್ನು ಜೇಕೇಗೆ ಯಾಕೆ ಕೊಡ್ತಿದೀರಿ?"

"ಸುಮ್ಮನೇ ಕೊಡ್ತಿಲ್ಲ" ರಹಸ್ಯ ಹೇಳುತ್ತಿರುವವನಂತೆ ನುಡಿದ.

"ನಿನಗೆ ಮಾತ್ರವೇ ಹೇಳ್ತಿದೀನಿ ಈಗ ದೇಶದಲ್ಲಿರುವ ಸರ್ಕಾರ ಶೀಘ್ರ ದಲ್ಲೇ ಬಿದ್ದು ಹೋಗುತ್ತದೆ. ಆಗ ನಾನು ಪ್ರಧಾನಮಂತ್ರಿಯಾಗಲು ಬೇಕಾಗು ವಷ್ಟು ದುಡ್ಡನ್ನು ಜೇಕೇ ಫೈನಾನ್ಸ್ ಮಾಡ್ತಾನೆ."

"ಹಾಗಾ? ಆ ರಕ್ಷಣಾ ರಹಸ್ಯಗಳನ್ನು ಜೇಕೇ ಏನು ಮಾಡ್ಕೋತಾನೆ?"

ತಾರಕನಾಮ ಅವಳ ಕೆನ್ನೆ ಹಿಂಡಿದ "ಏನೂ ತಿಳೀದವಳ ಹಾಗೆ ಮಾತಾ ಡ್ತಿದೀಯಲ್ಲಾ ? ದೊಡ್ಡಮೊತ್ತಕ್ಕೆ ಅಮೆರಿಕಾಗೆ ಮಾರುತ್ತಾನೆ. ಬಹುಶಃ ಪಾಕಿಸ್ತಾನ-ಚೀನಾಗಳಿಗೆ ಮಾರುತ್ತಾನೇನೋ."

ಮೇಘಲೆಗೆ ಆಶ್ಚರ್ಯ ಉಂಟಾಗಲಿಲ್ಲ. ಅಧಿಕಾರ ದಾಹದಿಂದ ದೇಶವನ್ನೇ ಮಾರಲು ಸಿದ್ಧವಾಗುವ ದಗಲ್ಬಾಜಿಗಳು ತುಂಬಾ ಜನರೇ ಇದ್ದಾರೆ. "ಆಗ ನಮ್ಮ ದೇಶಕ್ಕೆ ಯುದ್ಧ ಬರುವುದಿಲ್ಲವೆ?" ಅಮಾಯಕವಾಗಿ ನೋಡುತ್ತಾ ಕೇಳಿದಳು.

"ಬರುತ್ತೆ. ಬಂದ್ರೆ ತಾನೆ ನಮಗೊಳ್ಳೇದು. ಒಂದು ಕಡೆ ಯುದ್ಧದಲ್ಲಿ ನಮ್ಮ ಬೆಟಾಲಿಯನ್ಸ್ ಒಂದೊಂದಾಗಿ ಸೋತು ಹೋಗುತ್ತಿರುತ್ತವೆ. ದೇಶ ವಿಡೀ ದಿಗ್ಭ್ರಾಂತಿ ವ್ಯಾಪಿಸುತ್ತದೆ. ಅಷ್ಟರೊಳಗೆ ಅಧಿಕಾರ ಪಾರ್ಟಿಯಲ್ಲಿ ಗೊಂದಲ ಹುಟ್ಟಿಕೊಳ್ಳುತ್ತದೆ. ಯುದ್ಧದ ನಂತರ ಪ್ರಧಾನಮಂತ್ರಿ ಅನಿವಾರ್ಯ ವಾಗಿ ರಾಜೀನಾಮೆ ಕೊಡಬೇಕಾದ ಪರಿಸ್ಥಿತಿ ಕಲ್ಪಿಸುತ್ತೇವೆ. ಆಗ ನಾನು ಪ್ರಧಾನಮಂತ್ರಿಯಾಗುತ್ತೇನೆ."

"ನನಗೊಂದು ವಿಷಯ ಅರ್ಥವಾಗುತ್ತಿಲ್ಲ. ಯುದ್ಧಕ್ಕೆ ನಮ್ಮ ದೇಶ ಸೋತು ಹೋದರೆ ರಕ್ಷಣಾಮಂತ್ರಿಯಾಗಿ ನಿಮಗೇ ತಾನೆ ಕೆಟ್ಟ ಹೆಸರು ಬರೋದು? ಮೊದಲು ನೀವೇ ರಾಜೀನಾಮೆ ಕೊಡಬೇಕಾಗುತ್ತದೆ."

ತಾರಕನಾಮ ವಿಚಿತ್ರವಾಗಿ ನಕ್ಕ."ಹುಚ್ಚಿ, ಅಲ್ಲಿಯೇ ಇರೋದು ಎಲ್ಲಾ. ಯುದ್ಧ ಬರುವ ಸಮಯಕ್ಕೆ ನಾನು ಮಂತ್ರಿವರ್ಗದಲ್ಲಿಯೇ ಇರೋದಿಲ್ಲ."

"ಅಂದ್ರೆ?"

"ಅಂದ್ರೆ, ನನಗೂ–ಪ್ರಧಾನಮಂತ್ರಿಗೂ ಆಗಲೇ ಅಭಿಪ್ರಾಯ ಭೇದ

ಉಂಟಾಗುತ್ತದೆ. ಯಾವ ಕ್ಷಣದಲ್ಲಿಯಾದರೂ ಪ್ರಧಾನಮಂತ್ರಿ ನನ್ನನ್ನು ರಾಜೀನಾಮೆ ಕೊಡಲು ಕೇಳುತ್ತಾನೆ. ನಾನು ರಾಜೀನಾಮೆ ಕೊಡುತ್ತೇನೆ. ಕೊಟ್ಟ ನಂತರ ಪಾರ್ಟಿಯಲ್ಲಿಯೇ ಇರುವುದಿಲ್ಲ. ಪ್ರಧಾನಮಂತ್ರಿಯ ವಿರುದ್ಧ ಪ್ರಚಾರ ಪ್ರಾರಂಭಿಸುತ್ತೇನೆ."

"ಏನಂತ?"

"ದೇಶದ ರಹಸ್ಯಗಳು ಹೊರಗೆ ಹೋಗುತ್ತಿವೆಯೆಂದು."

"ಅಂದ್ರೆ ನೀವು ಅಧಿಕಾರದಲ್ಲಿರುವಾಗ ಮಾಡುವ ಕೆಲಸಗಳಿಗೆ ಪಾರ್ಟಿಯಿಂದ ಹೊರಹೋದ ನಂತರ ಪ್ರಧಾನಮಂತ್ರಿಯನ್ನು ದೂಷಿಸುತ್ತೀರಿ. ಅಷ್ಟೇ ತಾನೆ ?"

"ಗುಡ್‌ಗರ್ಲ್. ಚೆನ್ನಾಗಿ ಅರ್ಥಮಾಡಿಕೊಂಡೆ."

"ಆದರೆ ಆ ಸಮಯದಲ್ಲಿ ನೀವೂ ಅಧಿಕಾರದಲ್ಲಿದ್ದಂತೆಯೇ ಅಲ್ವೆ ! ಮತ್ತೆ ನೀವು ಅಧಿಕಾರದಲ್ಲಿದ್ದಾಗ ಹೆಚ್ಚು-ಕಡಿಮೆಯಾದುದಕ್ಕೆ ಜವಾಬ್ದಾರಿ ಹೊರಬೇಕಾದುದಿಲ್ವೆ?"

"ನಿನಗಿನ್ನೂ ಈ ದೇಶದಲ್ಲಿ ಪಾರ್ಟಿಯ ವ್ಯವಸ್ಥೆ ಅರ್ಥವಾಗಿಲ್ಲ. ಅಮೆರಿಕಾದಲ್ಲಿಯಂತೆಯೋ, ಬ್ರಿಟನ್‌ನಲ್ಲಿಯಂತೆಯೋ ಇಲ್ಲಿ ಒಬ್ಬ ವ್ಯಕ್ತಿ ಯಾವ ಪಾರ್ಟಿಯಲ್ಲಿದ್ದರೆ ಆ ಪಾರ್ಟಿಗೇ ನಿಷ್ಠನಾಗಬೇಕಾದುದಿಲ್ಲ. ಇಲ್ಲಿನ ಪಾರ್ಟಿಗಳೆಲ್ಲವೂ ಛತ್ರಗಳಂತಹವು ಒಂದು ದಿನ ಈ ಛತ್ರದಲ್ಲಿದ್ದರೆ ಮತ್ತೊಂದು ದಿನ ಆ ಛತ್ರದಲ್ಲಿರುತ್ತೇವೆ. ಯಾವುದೇ ಛತ್ರದಲ್ಲಿದ್ದರೂ ಅಧಿಕಾರದಲ್ಲಿರುವುದೇ ಮುಖ್ಯ. ಒಂದು ಸಲ ಪಾರ್ಟಿಯಿಂದ ಹೊರಬಂದ ಮೇಲೆ ಆ ಪಾರ್ಟಿಯಲ್ಲಿರುವಾಗ ನಾವು ಮಾಡಿದ ಕೆಲಸಗಳಿಗೆ ಯಾಕೆ ಜವಾಬ್ದಾರರಾಗುತ್ತೇವೆ?"

"ಅಂದ್ರೆ. ಎಲ್ಲಾ ಅನೀತಿಯೇ ಎಂದಾಯ್ತು?"

"ಹುಚ್ಚಿ, ರಾಜಕೀಯವೆಂದರೆ ನೀತಿ-ಅನೀತಿ ಎಂದು ಎರಡು ವಿಧ ಇರುವುದಿಲ್ಲ. ಇರುವುದೊಂದೇ-ರಾಜನೀತಿ! ನೀತಿಗೋಸ್ಕರ ಒದ್ದಾಡೋದಿಕ್ಕೆ ಇದೇನು ತ್ರೇತಾಯುಗವೇ? ಅದೂ ಅಲ್ದೆ ಈ ರಾಜಕೀಯ ಸೂಕ್ಷ್ಮಗಳು ಹೇಳಿದರೂ ನಿನ್ನಂತಹ ಚಿಕ್ಕ ಹುಡುಗಿಗೆ ಅರ್ಥವಾಗುವುದಿಲ್ಲ. ಇನ್ನು ನನ್ನ ಕೈಲಿ ಹೆಚ್ಚು ಹೇಳಿಸಬೇಡ."

ಮೇಖಲೆ ಸುಂದರವಾಗಿ ನಕ್ಕು ಮತ್ತೊಂದು ಸಲ ಗ್ಲಾಸ್ ಅನ್ನು ಅವನ ಬಾಯಿಗಿಡಲು ಹೋದಳು. ತಾರಕನಾಮ ಆತುರದಿಂದ ಬಾಯಿ ಹಾಕಲು ಹೋದ. ಅವಳು ಕೆಣಕುವವಳಂತೆ ಗ್ಲಾಸ್ ಅನ್ನು ಹಿಂದಕ್ಕೆ ತೆಗೆದುಕೊಂಡಳು. "ಊಹೂಂ, ಸುಂದರವಾದ ಹೆಣ್ಣಿನೊಡನಿರುವಾಗ ಡ್ರಿಂಕ್ಸ್ ತೆಗೆದುಕೊಳ್ಳುವ

ಪದ್ಧತಿ ಇದಲ್ಲ" ಎಂದು ತುಂಟತನದಿಂದ ನುಡಿದಳು.

"ಮತ್ತೆ?" ಕೇಳಿದ ತಾರಕನಾಥ.

ಮೇಖಲೆ ಕೆಲವು ಕ್ಷಣ ಅವನ ಕಣ್ಣುಗಳೊಳಗೆ ನೇರವಾಗಿ ನೋಡುತ್ತಿದ್ದು, ನಿಧಾನವಾಗಿ ಕುತ್ತಿಗೆ ಹಿಂದಕ್ಕೆ ಬಾಗಿಸಿದಳು. ನಂತರ ಗ್ಲಾಸ್ ಕೊರಳ ಮೇಲಿನಿಂದ ಸ್ಕಾಚ್ ಅನ್ನು ತನ್ನ ತುಂಬು ಮೊಲೆಗಳ ಮೇಲೆ ವಿಲಾಸವಾಗಿ ತುಳುಕಿಸಿದಳು. ತಾರಕನಾಥ ಕಣ್ಣರಳಿಸಿ ನೋಡುತ್ತಿದ್ದ. "ಕುಡಿಯಿರಿ" ಎಂದಳು.

ತಾರಕನಾಥ ಚಲಿಸಿದ. ತಕ್ಷಣ ಅವಳ ಸೊಂಟದ ಸುತ್ತಲೂ ಕೈ ಹಾಕಿ ಮುಂದೆ ಜರುಗಿದ. ಸರಿಯಾಗಿ ಅದೇ ಸಮಯದಲ್ಲಿ ತನ್ನ ಹೌಸ್‌ಬೋಟ್ ಮೇಲೆ ನಿಂತುಕೊಂಡು ಜಾನಿವಾಕರ್ ರಿಮೋಟ್ ಕಂಟ್ರೋಲ್‌ನ ಬಟನ್ ಒತ್ತಿದ. ಹೂವಿನ ಕುಂಡದ ಮರೆಗಿದ್ದ ಆಟೋಮ್ಯಾಟಿಕ್ ಮಿನಿಯೇಚರ್ ಕ್ಯಾಮರಾ ಮೊದಲ ಸ್ನ್ಯಾಪ್ ತೆಗೆದುಕೊಂಡಿತು. ಕ್ಲಿಕ್ ಎನ್ನುತ್ತಾ ಅತಿ ಮೆಲ್ಲಗೆ ಹೊರಬಂದ ಶಬ್ದ ಅವರಿಬ್ಬರಿಗೂ ಕೇಳಿಸಲಿಲ್ಲ.

## ೧೯

'ನ್ಯೂ ಇಂಡಿಯಾ' ದೇಶದಾದ್ಯಂತ ಅತ್ಯಧಿಕ ಸರ್ಕ್ಯುಲೇಶನ್ ಉಳ್ಳ ಇಂಗ್ಲಿಷ್ ದಿನಪತ್ರಿಕೆ. ಆ ಪತ್ರಿಕೆಯ ಮುಖ್ಯ ಕಚೇರಿ ಮುಂಬಯಿಯಲ್ಲಿತ್ತು. ಸುಜಿತ್ ಶಿವಾಲ್ಕರ್ ಆ ಪತ್ರಿಕೆಯ ಎಡಿಟರ್. ಶಿವಾಲ್ಕರ್ ಎಡಿಟರ್ ಆದ ನಂತರ ಆ ಪತ್ರಿಕೆಯ ಸರ್ಕ್ಯುಲೇಶನ್ ಆಕಾಶಕ್ಕೇರಿತ್ತು. ದಗಲ್ಬಾಜಿ ರಾಜಕೀಯ ನಾಯಕರಿಗೆ ಅವನ ಹೆಸರೆತ್ತಿದರೆ ಮೈ ಉರಿಯುತ್ತಿತ್ತು. ಎಷ್ಟೋ ಜನ ಪ್ರಮುಖ ವ್ಯಕ್ತಿಗಳು ಕತ್ತಲ ಮರೆಯಲ್ಲಿ ಸಾಗಿಸುತ್ತಾ ಬಂದ ಕುಂಭಕೋಣಗಳೆಷ್ಟನ್ನೋ ಅವನು ತನ್ನ ಪತ್ರಿಕೆಯ ಮೂಲಕ ಹೊರಗೆ ಹಾಕಿದ್ದ. ಆತ ಬರೆಯುವ ಸಂಪಾದಕೀಯಗಳೂ ಅದ್ಭುತವಾಗಿರುತ್ತವೆ. ಶಿವಾಲ್ಕರ್ ಪ್ರತಿದಿನವೂ ಬೆಳಿಗ್ಗೆಂಟುಗಂಟೆಗೆ ಸರಿಯಾಗಿ ತನ್ನ ಆಫೀಸಿಗೆ ಹಾಜರಾಗುತ್ತಿದ್ದ. ಅವನು ರಾತ್ರಿ ತಿರುಗಿ ಮನೆಗೆ ಹೋಗುವಾಗ ಹನ್ನೊಂದಾಗಿರುತ್ತಿತ್ತು. ಎಂದಿನಂತೆಯೇ ಆ ದಿನ ಕೂಡಾ ಶಿವಾಲ್ಕರ್ ಸರಿಯಾಗಿ ಎಂಟು ಗಂಟೆಗೆ ಆಫೀಸಿಗೆ ಹಾಜರಾಗಿದ್ದ. ಕುರ್ಚಿಯಲ್ಲಿ ಯಾವಾಗ ಕುಳಿತುಕೊಳ್ಳುತ್ತಿದ್ದನೋ, ತನ್ನನ್ನು ತಾನು ಮರೆತು ಕೆಲಸದಲ್ಲಿ ಲೀನವಾಗಿ ಬಿಡುತ್ತಿದ್ದ. ಹನ್ನೊಂದು ಗಂಟೆಗೆ ಮಾರ್ನಿಂಗ್ ಪೋಸ್ಟ್ ಬರುತ್ತಿತ್ತು. ಸರಿಯಾಗಿ ಹನ್ನೊಂದೂವರೆಗೆ ಅವನ

ಅಸಿಸ್ಟೆಂಟ್ ಪತ್ರಗಳೆಲ್ಲವನ್ನೂ ವಿಂಗಡಿಸಿ ತೆಗೆದುಕೊಂಡು ಬರುತ್ತಿದ್ದ. ಶಿವಾಲ್ಕರ್ ಆ ಸಮಯದಲ್ಲಿ ಸಾವಧಾನವಾಗಿ ಕಾಫಿ ಹೀರುತ್ತಾ ಕರೆಸ್ಪಾಂಡೆನ್ಸ್ ನೋಡುತ್ತಿದ್ದ. ಗಡಿಯಾರ ಸರಿಯಾಗಿ ಹನ್ನೊಂದೂವರೆ ತೋರಿಸುತ್ತಿರುವಂತೆ ಅಸಿಸ್ಟೆಂಟ್ ಎಡಿಟರ್ ಪತ್ರಗಳೊಂದಿಗೆ ಅವನ ಮುಂದೆ ಹಾಜರಾದ. ಅವನನ್ನು ನೋಡುತ್ತಲೇ ಶಿವಾಲ್ಕರ್ ಪರಿಚಯದನಗುಬೀರಿ ಕೈಯಲ್ಲಿನ ಪೆನ್ ಪಕ್ಕಕ್ಕಿಟ್ಟ.

"ವೆಲ್ ಕಿಶನ್ ! ಎನಿಥಿಂಗ್ ಇಂಪಾರ್ಟೆಂಟ್ ?" ಅವನ ಕೈಯಲ್ಲಿನ ಪತ್ರಗಳ ಕಟ್ಟುಗಳನ್ನು ತೆಗೆದುಕೊಳ್ಳುತ್ತಾ ಕೇಳಿದ.

"ಎಲ್ಲಾ ರೊಟೀನ್ ಆದರೆ ಈ ಕವರ್ ನೋಡಿ !" ಕೊಂಚ ಉದ್ದ, ಭಾರವಿದ್ದ ಒಂದು ಕವರ್ ಅನ್ನು ಮುಂದಿಡುತ್ತಾ ನುಡಿದ ಕಿಶನ್. ಶಿವಾಲ್ಕರ್ ಹುಬ್ಬು ಗಂಟಿಕ್ಕುತ್ತಾ ಆ ಕವರ್ ಎತ್ತಿಕೊಂಡ.

"ರಿಜಿಸ್ಟರ್ಡ್ ಪೋಸ್ಟ್ ?" ಅದನ್ನು ಅತ್ತ-ಇತ್ತ ತಿರುವುತ್ತಾ ಕೇಳಿದ. ಕಿಶನ್ ಹೌದೆನ್ನುವಂತೆ ತಲೆಯಾಡಿಸಿದ.

"ಶಿವಾಲ್ಕರ್ ಕವರ್ ಮೇಲಿ ಫ್ರಮ್ ಅಡ್ರೆಸ್ ನೋಡಿದ. "ಮಿಸ್ಟರ್ ಜಾನಿ, ಕೇರ್ ಆಫ್ ಪೋಸ್ಟ್ ಮಾಸ್ಟರ್ ಹೈದರಾಬಾದ್! ಯಾರೀ ಜಾನಿ ?" ಶಿವಾಲ್ಕರ ಕೇಳಿದ. ಕಿಶನ್ ಭುಜ ಕುಣಿಸಿದ. ಶಿವಾಲ್ಕರ್ ಮತ್ತೊಂದು ಸಲ ಆ ಕವರ್ ಅನ್ನು ಪರೀಕ್ಷಿಸಿ ನೋಡಿದ. ಅಡ್ರೆಸ್ ಮೇಲೆ ಕೆಂಪು ಮಸಿಯಲ್ಲಿ ದೊಡ್ಡ ಅಕ್ಷರಗಳಲ್ಲಿ ಇಂಗ್ಲೀಷಿನಲ್ಲಿ ಒಂದು ವಾಕ್ಯ ಬರೆದಿತ್ತು: "ಫಾರ್ ದಿ ಐಸ್ ಆಫ್ ಎಡಿಟರ್ ಓನ್ಲಿ !"

"ಅದನ್ನು ನೋಡಿಯೇ ಕವರ್ ಹರಿಯದೆ ನಿಮ್ಮ ಬಳಿ ತಂದೆ" ಎಂದ ಕಿಶನ್.

ಶಿವಾಲ್ಕರ್ ಆಸಕ್ತಿಯಿಂದ ಆ ಫೋಟೋಗಳನ್ನು ಕೈಗೆತ್ತಿಕೊಂಡು ನೋಡಿದ. ಅಷ್ಟೇ ! ಪಕ್ಕದಲ್ಲಿಯೇ ಬಾಂಬ್ ಸಿಡಿದಂತೆ ಬೆಚ್ಚಿ ಬಿದ್ದು ಕುರ್ಚಿಯಿಂದ ತಟಕ್ಕನೆ ಮೇಲೆದ್ದ. "ಮೈ....ಗಾ....ಡ್....!" ಆ ಮಾತು ಅವನ ಬಾಯಿಯಿಂದ ಅಪ್ರಯತ್ನವಾಗಿ ಹೊರಬಿತ್ತು.

## ೨೦

ಪ್ಯಾರಿಸ್ !

ಜೇಕೇಗೋಸ್ಕರ ಪ್ಯಾರಿಸ್‌ನಲ್ಲಿನ ಹೊಟೆಲ್ ಡಿ ಲಾಮೇರ್‌ನಲ್ಲಿ ಒಂದು ಪ್ರತ್ಯೇಕವಾದ ಲಕ್ಷುರಿ ಸೂಟ್ ಯಾವಾಗಲೂ ರಿಸರ್ವ್ ಮಾಡಿಯೇ ಇರುತ್ತದೆ. ಜೇಕೇ ತನ್ನ ವ್ಯವಹಾರದ ನಿಮಿತ್ತ ವಾರದಲ್ಲಿ ಕನಿಷ್ಟ ಎರಡು

ಸಲವಾದರೂ ಪ್ಯಾರಿಸ್‌ಗೆ ಹೋಗುತ್ತಿದ್ದ. ತನ್ನೊಂದಿಗೆ ಬಿಸಿನೆಸ್ ವಿಷಯ ಗಳನ್ನು ಮಾತನಾಡಲು ಬರುವ ಕೋಟ್ಯಾಧೀಶರಿಗಾಗಿ ಆ ಹೊಟೆಲ್‌ನಲ್ಲಿಯೇ ಗ್ರ್ಯಾಂಡ್ ಆಗಿ ಔತಣಕೂಟ ಏರ್ಪಾಡು ಮಾಡುತ್ತಿದ್ದ. ಅದು ಪ್ಯಾರಿಸ್‌ನಲ್ಲಿ ಅತ್ಯಂತ ದುಬಾರಿಯಾದ ಹೋಟೆಲ್. ಆ ದಿನ ಕೂಡ ಎಂದಿನಂತೆಯೇ ತನ್ನ ಕಸ್ಟಮರ್‌ಗಳೊಂದಿಗೆ ಕೆಲವು ಲಕ್ಷ ಡಾಲರ್‌ಗಳ ಮೌಲ್ಯದ ಟ್ರಾನ್ಸಾಕ್ಷನ್ ಬಗೆಗೆ ಮಾತಾಡಿ ಅವರಿಗೋಸ್ಕರ ಅದ್ಭುತವಾದ ಔತಣ ಏರ್ಪಾಡು ಮಾಡಿದ್ದ. ಔತಣ ಮುಗಿದೊಡನೆಯೇ ಅವನ ಕಸ್ಟಮರ್‌ಗಳು ಅವನಿಂದ ಬೀಳ್ಕೊಂಡರು. ಕಸ್ಟಮರ್‌ಗಳು ಹೊರಟು ಹೋದ ನಂತರ ಜೇಕೇ ಉಲ್ಲಾಸದಿಂದ ತನ್ನ ಕೋಣೆಗೆ ಅಡಿಯಿಟ್ಟ. ಸದ್ಯಕ್ಕೆ ತಮ್ಮ ಚರ್ಚೆ ಪೂರ್ತಿಯಾಗದಿದ್ದರೂ ಮತ್ತೆರಡು ದಿನಗಳಲ್ಲಿ ಪೂರ್ತಿಯಾಗಬಹುದು. ಈ ಎರಡು ದಿನಗಳೂ ತಾನು ಪ್ಯಾರಿಸ್‌ನಲ್ಲಿ ರಬೇಕಾಗುತ್ತದೇನೋ, ಪರವಾಗಿಲ್ಲ. ಈ ವ್ಯವಹಾರದಲ್ಲಿ ತಾನು ಯಶಸ್ವಿ ಯಾದರೆ ತನಗೆ ತುಂಬಾ ದೊಡ್ಡ ಮೊತ್ತದ ಕಮಿಷನ್ ಸಿಗುತ್ತದೆ. ಈ ಕಸ್ಟಮರ್‌ಗಳನ್ನು ಸಂತೋಷಪಡಿಸಲು ಮೇಖಲೆಯನ್ನು ಕರೆಸಬೇಕು ! ಇಷ್ಟಕ್ಕೂ ಮೇಖಲೆ ತಾರಕನಾಮನ ಬಳಿಯಿಂದ ಆ ಸೀಕ್ರೆಟ್ ಫೈಲ್ ಸಂಪಾದಿಸಿದಳೋ ಇಲ್ಲವೋ ! ಇಲ್ಲಿಯವರೆಗೆ ಅವಳ ಬಳಿಯಿಂದ ಎಂತಹುದೇ ಸಮಾಚಾರ ಬಂದಿಲ್ಲ. ಸಾಮಾನ್ಯವಾಗಿ ತಮ್ಮ ನಡುವೆ ಅಂಡರ್‌ಸ್ಟ್ಯಾಂಡಿಂಗ್ ಏನೆಂದರೆ ಮೇಖಲೆಯನ್ನು ತಾನು ಯಾವುದಾದರೂ ಮಿಷನ್ ಮೇಲೆ ಕಳಿಸಿದರೆ ಅದು ಪೂರ್ತಿಯಾದ ವೇಳೆ ಮೇಖಲೆಯೇ ತನ್ನನ್ನುಮೊದಲು ಸಂಪರ್ಕಿಸಬೇಕು. ಮತ್ತೆ ಇಲ್ಲಿಯವರೆಗೆ ಅವಳು ತನ್ನನ್ನ್ಯಾಕೆ ಕಾಂಟ್ಯಾಕ್ಟ್ ಮಾಡಲಿಲ್ಲವೋ ? ಏನೋ ಕಾರಣ ಇದ್ದೇ ಇರಬೇಕು. ಕಾರಣವಿಲ್ಲದೆ ಮೇಖಲೆ ಯಾವ ಕೆಲಸ ವನ್ನೂ ಮಾಡಲಾರಳು. ಜೇಕೇಗೆ ಮೇಖಲೆಯ ಮೇಲೆ ಪರಿಪೂರ್ಣ ವಿಶ್ವಾಸ ವಿತ್ತು. ಆ ವಿಶ್ವಾಸದಿಂದಾಗಿಯೇ ಅವಳಿಂದ ಸಮಾಚಾರ ಬರುವವರೆಗೆ ಕಾಯಬೇಕೆಂದುಕೊಂಡಿದ್ದ. ಜೇಕೇ ಆ ರೀತಿ ಆಲೋಚಿಸುತ್ತಿರುವಾಗಲೇ ಟೆಲಿಫೋನ್ ಮೊಳಗಿತು. ರಿಸೀವರ್ ಎತ್ತಿದ. "ಮಾನ್‌ಶಿಯರ್, ನಿಮಗೆ ಕೋಪನ್ ಹೇಗನ್‌ನಿಂದ ಓವರ್‌ಸೀಸ್ ಕಾಲ್" ಎಂದಳು ಆಪರೇಟರ್.

ಕೋಪನ್ ಹೇಗನ್ ಎಂದೊಡನೆಯೇ ಆ ಕಾಲ್ ಎಲ್ಲಿಂದ ಬಂದಿತೆಂಬುದು ಜೇಕೇ ತಕ್ಷಣವೇ ಅರ್ಥಮಾಡಿಕೊಂಡ. ಮುನೀಂದ್ರಸ್ವಾಮಿ ಸದ್ಯಕ್ಕೆ ಡೆನ್ಮಾರ್ಕ್ ನಲ್ಲಿಯೇ ಇದ್ದಾನೆ. ಕನಿಷ್ಟ ಆ ದೇಶದಲ್ಲಾದರೂ ತನ್ನನ್ನು ಇರಲು ಬಿಡ ಬೇಕೆಂದು ಅಧಿಕಾರಿಗಳನ್ನು ದೀನನಾಗಿ ವಿನಂತಿಸಿಕೊಂಡ. ಅಲ್ಲಿಯ ಅಧಿಕಾರಿ ಗಳು ಕೂಡ ಅವನನ್ನು ಕೋಪನ್ ಹೇಗನ್ ಏರ್‌ಪೋರ್ಟ್‌ದಲ್ಲಿಯೇ ತಡೆದು

ನಿಲ್ಲಿಸಿದರು. ಅಮೇರಿಕಾದಿಂದ ಮುನೀಂದ್ರಸ್ವಾಮಿಯನ್ನು ಹೊರ ತಳ್ಳಿದ ನಂತರ ಅವನ ಪರಿಸ್ಥಿತಿ ನಿಜಕ್ಕೂ ದಾರಿ ತಪ್ಪಿದ ಪಕ್ಷಿಯಂತಾಯಿತು. ಮುನೀಂದ್ರಸ್ವಾಮಿಯ ದಿನಗಳೀಗ ಹೆಚ್ಚಾಗಿ ಆಕಾಶದಲ್ಲಿಯೆ ಕಳೆಯುತ್ತಿದ್ದವು. ನಿಲ್ಲಲು ನೆಲದ ಮೇಲೆ ಕನಿಷ್ಟ ಒಂದಡಿ ಜಾಗವಾದರೂ ಸಿಗದ ವಿಚಿತ್ರವಾದ ಸಂಕಟದಲ್ಲಿ ಅವನು ಸಿಕ್ಕಿಬಿದ್ದಿದ್ದ. ಸ್ವಂತ ವಿಮಾನದಲ್ಲಿ ಈ ದೇಶದಿಂದ ಆ ದೇಶಕ್ಕೆ ಹಾರಿ ಹೋಗುವುದು, ಅಲ್ಲಿನ ವಿಮಾನ ನಿಲ್ದಾಣಗಳಲ್ಲಿ ವಿಮಾನಕ್ಕೆ ರೀಫ್ಯೂಯೆಲಿಂಗ್ ಮಾಡಿಸಿಕೊಳ್ಳುವುದು, ಆ ದೇಶದಲ್ಲಿ ತನ್ನನ್ನು ಇರಲು ಬಿಡಬೇಕೆಂದು ಅಧಿಕಾರಿಗಳೊಂದಿಗೆ ಮೊರೆಯಿಡುವುದು ಅವರಿಂದ ತಿರಸ್ಕೃತನಾಗುವುದು–ಇದು ಮುನೀಂದ್ರಸ್ವಾಮಿಯ ಪರಿಸ್ಥಿತಿ.

"ಆಲ್‌ರೈಟ್, ಕನೆಕ್ಷನ್ ಕೊಡು" ಜೇಕೇ ಹೇಳಿದ. ಆಪರೇಟರ್ ತಕ್ಷಣ ಕನೆಕ್ಷನ್ ಕೊಟ್ಟಳು. "ಹಲೋ !" ಎಂದ ಜೇಕೇ.

"ಹಲೋ, ಯಾರು ಜೇಕೇನಾ ?" ಕಾತರದ ಧ್ವನಿ ಕೇಳಿಸಿತು.

"ಹೌದು."

"ಥ್ಯಾಂಕ್ ಗಾಡ್! ನಿಮ್ಮನ್ನು ಲೋಕೇಟ್ ಮಾಡಲು ಎಷ್ಟು ಅವಸ್ಥೆ ಪಟ್ಟೆನೋ ಆ ಭಗವಂತನಿಗೇ ಗೊತ್ತು. ಅಂತೂ ಸಿಕ್ಕಿದಿರಿ. ನಾನು ಮುನೀಂದ್ರ ಸ್ವಾಮಿ ಮಾತಾಡ್ತಿದೀನಿ."

"ಊಂ, ಏನು ?" ಕೇಳಿದ ಜೇಕೇ.

"ಜೇಕೇ, ನನ್ನ ಪರಿಸ್ಥಿತಿ ದಾರುಣವಾಗಿದೆ. ನನ್ನ ವಿಮಾನವೇ ಇಲ್ಲದಿದ್ದರೆ ಭೂಮಿಯ ಮೇಲೆ ನಿಲ್ಲಲು ಸ್ಥಳ ಸಿಗದೆ ಯಾವ ಸಮುದ್ರಕ್ಕೋ ಹಾರಬೇಕಾಗುತ್ತಿತ್ತು."

"ಆ ಕೆಲಸ ಮಾಡೋದೇ ಒಳ್ಳೇದು."

"ಜೇಕೇ !"

"ನೋಡು ಮುನೀಂದ್ರಸ್ವಾಮಿ, ನೀನ್ಯಾಕೆ ಫೋನ್ ಮಾಡಿದ್ದೀಯೋ ನನಗೆ ಚೆನ್ನಾಗಿ ಗೊತ್ತು. ನಿನ್ನನ್ನು ಯಾರೂ ತಮ್ಮ ದೇಶದಲ್ಲಿ ಕಾಲಿಡಲು ಬಿಡದಿರುವುದರಿಂದ ನಿನಗೆ ದಿಕ್ಕಿಲ್ಲದಂತಾಗಿದೆ. ಆಶ್ರಮ ಏರ್ಪಾಡು ಮಾಡಿದ ಪ್ರತಿ ದೇಶದಲ್ಲೂ ನೀನು ಭಕ್ತಿಯ ಹೆಸರಿನಲ್ಲಿ ಸೆಕ್ಸ್ ಹುಚ್ಚು ಹಿಡಿಸುತ್ತಿದ್ದರೆ ಯಾವ ಸರ್ಕಾರವೂ ಪ್ರಜೆಗಳ ನಡುವೆ ನೀನಿರಲು ಬಿಡುವುದಿಲ್ಲ. ಇಷ್ಟು ದೊಡ್ಡ ಸ್ಕ್ಯಾಂಡಲ್ ಎದ್ದ ನಂತರ ಕೂಡ ನಿನ್ನನ್ನು "ಯಾರಾದರೂ ತಮ್ಮ ದೇಶದಲ್ಲಿ ಬರಲು ಬಿಡುತ್ತಾರೆನ್ನುವುದು ನಿನ್ನ ಹುಚ್ಚುತನ."

"ನೀವೇನೂ ಸಹಾಯ ಮಾಡಲಾರಿರಾ ಜೇಕೇ ?"

"ಸಾರಿ ! ಈ ವಿಷಯದಲ್ಲಿ ನಾನೇನೂ ಮಾಡಲಾರೆ. ಅಮೇರಿಕಾದಿಂದ ನಿನ್ನನ್ನು ಹೊರ ತಳ್ಳಲು ನಿಜವಾದ ಕಾರಣವೇನೆಂದು ಗೊತ್ತಾದ ಮೇಲೆ ಕೂಡ ನಿನಗೆ ಸಹಾಯ ಮಾಡುವುದು ಎಷ್ಟು ಮೂರ್ಖತನವೆಂದು ನನಗೆ ಚೆನ್ನಾಗಿ ಗೊತ್ತು. ಅಮೇರಿಕನ್ ಸಿ.ಐ.ಎ. ಒಂದು ದೊಡ್ಡ ಕೊಳ್ಳಿ. ಆ ಕೊಳ್ಳಿಯಿಂದ ತಲೆ ತುರಿಸಿಕೊಳ್ಳುವುದು ನನಗಿಷ್ಟವಿಲ್ಲ."

"ಜೇಕೇ !"

"ಐ ಆ್ಯಮ್ ಸಾರಿ ಮೈಫ್ರೆಂಡ್! ಪ್ರಪಂಚದ ಪ್ರಜೆಗಳಿಗೆ ಸೆಕ್ಸ್ ಮೂಲಕ ಮೋಕ್ಷ ಕೊಡಿಸೆಂದು ನಾನು ನಿನಗೆ ಸಲಹೆ ಕೊಟ್ಟಿಲ್ಲ. ಆ ದಿನ ಆ ಏಜೆಂಟ್‌ನನ್ನು ಕೊಲ್ಲು ಎಂದೂ ನಾನು ಹೇಳಲಿಲ್ಲ. ಅವೆಲ್ಲಾ ನೀನು ನಿನ್ನ ಸ್ವಂತ ಜವಾಬ್ದಾರಿಯ ಮೇಲೆ ಮಾಡಿಕೊಂಡ ಕೆಲಸಗಳು.ನನಗೆ ಸಂಬಂಧವಿಲ್ಲ!"

"ಜೇಕೇ ! ಇದು ಅನ್ಯಾಯ ! ನೀನು ಎಷ್ಟೋ ಕೋಟಿ ಸಂಪಾದಿಸೋದಕ್ಕೆ ನಾನು ಸಹಾಯ ಮಾಡಿದ್ದೀನಿ!"

"ನೋಡು ಮುನೀಂದ್ರಸ್ವಾಮಿ, ನಾನೊಬ್ಬ ಬಿಸಿನೆಸ್‌ಮನ್. ಕೋಟಿಗಟ್ಟಲೆ ಸಂಪಾದಿಸುವುದು ನನ್ನ ವೃತ್ತಿ. ಅದರಲ್ಲಿ ಕೊಂಚ ದುಡ್ಡು ನಿನ್ನ ಸಹಾಯದಿಂದಲೇ ಸಂಪಾದಿಸಿರಬಹುದು. ಅದಕ್ಕೆ ತಕ್ಕ ಪ್ರತಿಫಲ ನಿನಗಾಗಲೇ ಮುಟ್ಟಿದೆ."

"ಜೇಕೇ !"

"ಐ ಆ್ಯಮ್ ಸಾರಿ. ಇನ್ನು ನನ್ನ ಸಮಯ ಹಾಳು ಮಾಡ್ಬೇಡ" ಜೇಕೇ ರಿಸೀವರ್ ಕೆಳಗಿಟ್ಟ.

ರಿಸೀವರ್ ಇಡುತ್ತಿರುವಾಗ ಮುನೀಂದ್ರಸ್ವಾಮಿ ಹತಾಶನಾಗಿ "ಜೇಕೇ....ಜೇಕೇ...." ಎನ್ನುತ್ತಿದ್ದುದು ಆತನಿಗೆ ಕೇಳಿಸುತ್ತಲೇ ಇತ್ತು.

"ಡ್ಯಾಮಿಟ್" ಎಂದುಕೊಂಡ ಜೇಕೇ.

ಮೇಖಲೆಯ ಸಲಹೆ ಪಾಲಿಸಿದ್ದರಿಂದಲೇ ತಾನು ಈ ದಿನ ಇನ್ನಷ್ಟು ದರ್ಪದಿಂದ ಮಾತಾಡಬಲ್ಲವನಾಗಿದ್ದೇನೆ. ಮೇಖಲೆಯ ಸಲಹೆ ಪಡೆಯದೇ ಹೋಗಿದ್ದರೆ ಬಹುಶಃ ಮುನೀಂದ್ರಸ್ವಾಮಿ ಇದ್ದ ಪರಿಸ್ಥಿತಿಯಲ್ಲೇ ತಾನೂ ಇರುತ್ತಿದ್ದನೇನೋ !

ಆ ಆಲೋಚನೆ ಬಂದೊಡನೆಯೇ ಅವನ ಮೈ ಕಂಪಿಸಿತು.

## ೨೧

"ನೀವು ಆ ಟೇಬಲ್ ಹತ್ತಿರ ಕೂತ್ಕೊಳ್ಳಿ ಮೇಡಂ" ಹೆಡ್ ವೇಯ್‌ಟರ್ ವಿನಯದಿಂದ ನುಡಿದ.

ಮೇಖಲೆ ತಲೆಯಾಡಿಸಿ ಮೂಲೆಯಲ್ಲಿದ್ದ ಆ ಟೇಬಲ್ ಕಡೆ ನಡೆದಳು. ಆ ಟೇಬಲ್ ಹತ್ತಿರ ಯಾರೂ ಇರಲಿಲ್ಲ.

ಹೈದರಾಬಾದ್‌ನಲ್ಲಿ ಇತ್ತೀಚೆಗೆ ಕಟ್ಟಲಾದ ಒಂದು ಫೈವ್‌ಸ್ಟಾರ್ ಹೋಟೆಲ್ ಅದು. ಅಲ್ಲಿ ಕಾಫಿ ತುಂಬಾ ಚೆನ್ನಾಗಿರುತ್ತದೆ. ಮೇಖಲೆ ಯಾವಾಗಲಾದರೂ ಶಾಪಿಂಗ್‌ಗೋಸ್ಕರ ಹೊರಬಂದಾಗ ಕಾಫಿ ಕುಡಿಯಲು ಪ್ರತ್ಯೇಕವಾಗಿ ಅಲ್ಲಿಗೆ ಹೋಗುತ್ತಿದ್ದಳು.

ಕಾಫಿಯ ಮೇಲಿನ ಇಷ್ಟದಿಂದಲ್ಲ. ಪ್ರಪಂಚದಲ್ಲಿನ ಬೆಸ್ಟ್ ರೆಸ್ಟೋರೆಂಟ್‌ಗಳೆಷ್ಟರಲ್ಲೋ ಅವಳು ಅತ್ಯುತ್ತಮವಾದ ಕಾಫಿ ಕುಡಿದಿದ್ದಳು. ಅದಕ್ಕಿಂತಲೂ ಉತ್ತಮವಾದ ಔತಣ ಪಡೆದಿದ್ದಳು. ಆದರೆ ಆ ಸಂದರ್ಭಗಳು ಬೇರೆ.

ಹೀಗೆ ಮಾಮೂಲು ಸಮಯಗಳಲ್ಲಿ ಜನರ ನಡುವೆ ಮಾಮೂಲು ವ್ಯಕ್ತಿಯಂತೆ ತಿರುಗಾಡುವುದರಲ್ಲಿ ಅವಳ ಮನಸ್ಸಿಗೊಂದು ರೀತಿಯ ಪ್ರಶಾಂತತೆ ಉಂಟಾಗುತ್ತಿತ್ತು. ಹಾಗೆ ಮಾಡುತ್ತಿರುವಾಗ ತಾನು ಪ್ರಪಂಚದಲ್ಲಿಯೇ ಅತ್ಯಂತ ದುಬಾರಿಯಾದ ಕಾಲ್‌ಗರ್ಲ್ ಎನ್ನುವ ವಿಷಯವನ್ನು ಅವಳು ತಾತ್ಕಾಲಿಕವಾಗಿಯಾದರೂ ಮರೆತುಬಿಡುತ್ತಿದ್ದಳು ಮಾಮೂಲು ಯುವತಿಯರಂತೆ ತಾನೂ ಒಬ್ಬ ಯುವತಿಯಾದಂತೆ ಅನುಭವ ಪಡೆಯುತ್ತಿದ್ದಳು. ಆ ಅನುಭವ ಅವಳಿಗೆಷ್ಟೋ ತೃಪ್ತಿಯನ್ನು ನೀಡುತ್ತಿತ್ತು.

ಕಾಫಿಗೆ ಆರ್ಡರ್ ಕೊಟ್ಟು ಅವಳು ಅಲ್ಲಿ ಇನ್ನೂ ಯಾರಾದರೂ ಹೆಂಗಸರಿದ್ದಾರೇನೋ ಎಂದು ನೋಡಿದಳು ಇದ್ದರು ಆದರೆ ಗಂಡಸರೊಂದಿಗೆ ಹೋಲಿಸಿದರೆ ತುಂಬಾ ಕಡಿಮೆ ಜನರಿದ್ದರು

ಅಲ್ಲಿದ್ದ ಹೆಂಗಸರಲ್ಲಿ ಮೇಖಲೆಯ ದೃಷ್ಟಿಯನ್ನು ತುಂಬಾ ಆಕರ್ಷಿಸಿದ್ದು ಒಬ್ಬ ಯುವತಿ. ಆ ಯುವತಿ, ಅವಳು ಕುಳಿತಿದ್ದ ಟೇಬಲ್‌ಗೆ ಕೊಂಚ ದೂರದಲ್ಲಿಯೇ ಕುಳಿತುಕೊಂಡಿದ್ದಳು. ಯಾಕೋ ಏನೋ ಆ ಯುವತಿ ಆಗಾಗ ಹ್ಯಾಂಡ್ ಕರ್ಚೀಫಿನಿಂದ ಕಣ್ಣೊರೆಸಿಕೊಳ್ಳುತ್ತಿದ್ದಳು. ಆ ವೇಳೆಗಾಗಲೇ ತುಂಬಾ ಅತ್ತಿದ್ದರಿಂದಲೋ ಏನೋ ಅವಳ ಕಣ್ಣುಗಳು ಕೆಂಪಗೆ ಬಾತುಕೊಂಡಿದ್ದವು.

ಆ ಯುವತಿ ನೋಡಲು ಚಂದನದ ಬೊಂಬೆಯಂತಿದ್ದಳು. ಹದಿನಾರು

ವರ್ಷಗಳು ತುಂಬಿದ್ದವೋ ಇಲ್ಲವೋ. ಇನ್ನೂ ಮದುವೆಯಾಗಿಲ್ಲವೆಂದು ತಿಳಿಯುತ್ತಿತ್ತು. ಲಂಗಾ ದಾವಣಿ ತೊಟ್ಟಿದ್ದಳು.

ಆ ಯುವತಿಯ ಎದುರಿಗೆ ಒಬ್ಬ ಯುವಕ ಕುಳಿತುಕೊಂಡಿದ್ದ. ಅವನ ಬೆನ್ನು ಮೇಖಲೆಯ ಕಡೆ ತಿರುಗಿತ್ತು. ಹಿಂದಿನಿಂದ ನೋಡುತ್ತಿದ್ದರೆ ಅವನನ್ನು ಎಲ್ಲಿಯೋ, ಎಂದೊ ನೋಡಿರುವಂತೆ ಮೇಖಲೆಗೆ ಭಾಸವಾಯ್ತು. ಆದರೆ ಮುಖ ಕಾಣಿಸದೇ ಅವನು ಯಾರೆಂದು ನಿರ್ಧರಿಸುವುದು ಹೇಗೆ? ಆ ಯುವಕ ಆ ಯುವತಿಯ ಕೈ ಹಿಡಿದುಕೊಂಡು ಗದ್ಗದ ಸ್ವರದಿಂದ ಏನೋ ಹೇಳುತ್ತಿದ್ದ. ಅವನು ನಿಧಾನವಾಗಿಯೇ ಮಾತನಾಡುತ್ತಿದ್ದರೂ ಮೇಖಲೆ ಕುಳಿತಿದ್ದ ಸ್ಥಳಕ್ಕೆ ಆ ಮಾತುಗಳು ಸ್ಪಷ್ಟವಾಗಿಯೇ ಕೇಳಿಸುತ್ತಿದ್ದವು.

“ತಂಗಿ, ನಿನಗೆ ಅಣ್ಣನಾಗಿ ಹುಟ್ಟಿದ್ದಕ್ಕೆ ನನಗೆ ತುಂಬಾ ನಾಚಿಕೆಯಾಗಿದೆ. ದಯಮಾಡಿ ನೀನು ಅಳೋದನ್ನು ನಿಲ್ಲಿಸು. ನಿನ್ನ ಅಳು ನೋಡುತ್ತಿದ್ದರೆ ನನಗೆ ಮತ್ತೆ ಆತ್ಮಹತ್ಯೆ ಮಾಡಿಕೊಳ್ಳಬೇಕೆನಿಸುತ್ತಿದೆ.”

ಆ ಯುವತಿ ತಲೆಯಾಡಿಸಿದಳು. ಆದರೂ ಅವಳ ಕಣ್ಣಿನಿಂದ ದಳದಳನೆ ನೀರು ಸುರಿಯುತ್ತಲೇ ಇತ್ತು.

“ಆ ದುರ್ಮಾರ್ಗನ ಹತ್ತಿರ ನಿನ್ನನ್ನು ಕಳಿಸಬೇಕಾಗಿ ಬರುತ್ತಿರುವುದಕ್ಕೆ ನನ್ನ ಹೃದಯ ಚೂರಾಗುತ್ತಿದೆ!” ಅವನು ತೀವ್ರವಾದ ವಿಷಾದದಿಂದ ನುಡಿಯುತ್ತಿದ್ದ. “ಆದರೆ ಏನು ಮಾಡಲಿ ? ಸಿಗದೆ ಸಿಗದೆ, ಒಬ್ಬ ಪುಣ್ಯಾತ್ಮಳ ದಯೆಯಿಂದ ಈ ಕೆಲಸ ಸಿಕ್ಕಿದೆ. ಇದೇನಾದ್ರೂ ಹೋದರೆ ಮತ್ತೆ ನಮಗೆ ಉಪವಾಸವೇ ಗತಿ. ಅಮ್ಮನನ್ನು ಉಳಿಸಿಕೊಳ್ಳುವ ಆಸೆ ಬಿಡಬೇಕಾದ್ದೇ. ಇವೆಲ್ಲಾ ಆಲೋಚಿಸಿಯೇ ಆ ಮನ್ಮಥರಾವ್‌ನ ಹತ್ತಿರ ನಿನ್ನನ್ನು ಕಳಿಸಬೇಕೆಂಬ ನಿರ್ಣಯಕ್ಕೆ ಬಂದಿದ್ದೇನೆ.”

ಆ ಹೆಸರು ಕೇಳುತ್ತಲೇ ಮೇಖಲೆ ಬೆಚ್ಚಿ ಬಿದ್ದಳು. ಆ ಯುವಕನನ್ನು ಎಲ್ಲಿ ನೋಡಿದ್ದೆ ಎನ್ನುವುದು ಅವಳಿಗೆ ಜ್ಞಾಪಕವಾಯ್ತು.

ಆಶಾರಾಜ! ಅವನಿಗೆ ತಾನೇ ಕೆಲಸ ಕೊಡಿಸಿದ್ದಳು. ಮೈ ಗಾಡ್! ಈ ಮೂರ್ಖ ಮಾಡುತ್ತಿರುವ ಕೆಲಸವೇನು ? ಮನ್ಮಥರಾವ್‌ನ ಹತ್ತಿರ ತಾನೇ ಖುದ್ದಾಗಿ ತನ್ನ ತಂಗಿಯನ್ನು ಕಳಿಸುತ್ತಿದ್ದಾನೆಯೇ ? ಯಾಕೆ ? ಉತ್ತರ ಹೊಳೆಯಲು ಅವಳಿಗೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಆ ಮರುಕ್ಷಣ ಆವೇಶದಿಂದ ಅವಳ ರಕ್ತ ಕೊತಕೊತನೆ ಕುದಿಯಲಾರಂಭಿಸಿತು. ಕುಳಿತಿದ್ದ ಸ್ಥಳದಿಂದ ತಟಕ್ಕನೆದ್ದು ಆ ಕಡೆ ಹೋದಳು.

"ಆಶಾರಾಜ್!"

ತನ್ನ ಭುಜದ ಮೇಲೆ ಇದ್ದಕ್ಕಿದ್ದಂತೆ ಯಾರದೋ ಕೈ ಬಿದ್ದುದರಿಂದ ಬೆಚ್ಚಿಬಿದ್ದು ತಲೆ ಮೇಲೆತ್ತಿ ನೋಡಿದ. ತಕ್ಷಣವೇ ಅವನ ಕಣ್ಣುಗಳು ವಿಸ್ಮಯದಿಂದ ಅರಳಿದವು. "ಸಿಸ್ಟರ್!" ಕುರ್ಚಿಯಿಂದ ತಟಕ್ಕನೆ ಮೇಲೇಳುತ್ತಾ ನುಡಿದ.

"ಶಟಪ್, ಆ ಹೆಸರಿನಿಂದ ನನ್ನ ಕರೀಬೇಡ ಅಂತ ಹೇಳಿದ್ನಲ್ಲ" ಅವಳು ತೀಕ್ಷ್ಣವಾಗಿ ನುಡಿದಳು.

ಅವನು ಥಟ್ಟನೆ ಅವಳ ಕೈಹಿಡಿದುಕೊಂಡ. ಅವನ ಕಣ್ಣಲ್ಲಿ ನೀರು ಇಣುಕುತ್ತಿತ್ತು.

"ಇಲ್ಲ ಸಿಸ್ಟರ್, ನೀವು ಹೌದೆಂದರೂ, ಅಲ್ಲವೆಂದರೂ ನಿಮ್ಮನ್ನು ಆ ಹೆಸರಿನಿಂದಲೇ ಕರೀತೀನಿ. ನೀವು ನನ್ನ ಸಿಸ್ಟರ್, ನಿಜವಾಗ್ಲೂ ಸಿಸ್ಟರ್."

"ಹಾಗೆ ಕರೆಯೋದಿಕ್ಕೆ ನಿನಗೆ ನಾಚಿಕೆಯಾಗ್ತಿಲ್ವಾ. ಆ ದಿನ ನಿನಗೊಂದು ಮಾತು ಹೇಳಿದ್ದೆ. ನೆನಪಿದೆಯಾ ? ಈ ದೇಶ ತಲೆ ಹಿಡುಕರಿಂದ ತುಂಬಿಹೋಗಿದೆ. ಈ ದಿನ ನನ್ನನ್ನು ಸಿಸ್ಟರ್ ಎಂದು ಕರೆಯುತ್ತಿರುವವನು ನಾಳೆ ನಿನಗೆ ಅಗತ್ಯ ಬಂದರೆ ನೀನೇ ನನ್ನನ್ನು ಯಾರಿಗಾದರೂ ತಲೆ ಹಿಡಿದರೂ ನನಗೆ ಆಶ್ಚರ್ಯ ಉಂಟಾಗುವುದಿಲ್ಲ ಎಂದು ಆ ಮಾತು ನೆನಪಿದೆಯಾ?"

ಅವನ ಮುಖ ಹಠಾತ್ತನೆ ಕೆಂಪೇರಿತು. ವಿಷಾದದಿಂದ ತಲೆಯಾಡಿಸಿದ.

"ಭೇಷ್" ಮೇಖಲೆ ಮುಂದುವರಿಸಿದಳು. "ಈಗ ಅದಕ್ಕಿಂತಲೂ ಘನ ಕಾರ್ಯವನ್ನೇ ಮಾಡುತ್ತಿದ್ದೀಯೆಂದಾಯ್ತು. ನಿನ್ನ ಒಡಹುಟ್ಟಿದ ತಂಗಿಯನ್ನೇ ಮನ್ಮಥರಾವ್‌ಗೆ ತಲೆ ಹಿಡಿಯಲಿದ್ದೀಯ. ನಿನ್ನನ್ನು ನಿಜವಾಗಿಯೂ ಅಭಿನಂದಿಸಬೇಕು."

"ಸಿಸ್ಟರ್, ನೀವು.... ನೀವು....!"

"ಅಷ್ಟು ಆಶ್ಚರ್ಯಪಡಬೇಕಾದುದಿಲ್ಲ. ನಾನೆಲ್ಲಾ ಕೇಳಿದ್ದೀನಿ ಹೇಳು, ಸ್ವಂತ ತಂಗಿಯನ್ನೇ ಮನ್ಮಥರಾವ್‌ನ ಹತ್ತಿರ ಕಳಿಸಬೇಕಾದಂತಹ ಕರ್ಮ ನಿನಗೇನು ಬಂದಿದೆ ? ನಿನಗೆ ಬರುವ ಸಂಬಳದ ದುಡ್ಡು ಸರಿಯಾಗುತ್ತಿಲ್ವಾ ? ನಿನ್ನ ತಂಗಿಯನ್ನು ಒಂದು ರಾತ್ರಿ ಕಳಿಸುತ್ತಿರುವುದಕ್ಕೆ ಅವನು ಎಷ್ಟು ಕೊಡ್ತೀನಿಂತ ಹೇಳಿದ್ದಾನೆ ? ಸಾವಿರಾನಾ, ಹತ್ತು ಸಾವಿರಾನಾ ? ಎಷ್ಟು?"

"ಸಿಸ್ಟರ್!"

"ಡೋಂಟ್ ಕಾಲ್ ಮಿ ಲೈಕ್ ಸಿಸ್ಟರ್! ಆ ರೀತಿ ಕರೆಯೋ ಅರ್ಹತೆ ನಿನಗಿಲ್ಲ."

"ಬಂದೆಯೇನಯ್ಯ! ಹುಡುಗೀನ ಕರ್ಕೊಂಬಂದ್ಯಾ ?" ಎನ್ನುತ್ತಾ ಮನ್ಮಥರಾವ್ ಸಂಭ್ರಮದಿಂದ ಮೇಖಲೆ ಕಡೆ ತಿರುಗಿ ಕೊರಡಿನಂತಾಗಿ ಬಿಟ್ಟ.

"ನೀನಾ?" ಎಂದು ಸುಧಾರಿಸಿಕೊಂಡು ವಿಸ್ಮಯದಿಂದ ಕೇಳಿದ.

"ಯಾಕೆ? ಆಶ್ಚರ್ಯವಾಗಿದೆಯಾ ಮನ್ಮಥರಾವ್? ಹೌದು ನಾನೇ! ಮತ್ತೆ ಬಂದಿದೀನಿ!" ಎಂದಳು ಮೇಖಲೆ. ಮನ್ಮಥರಾವ್‌ನ ಮುಖದ ಮೇಲಿನ ವಿಸ್ಮಯ ಇನ್ನೂ ಮಾಯವಾಗಿರಲಿಲ್ಲ.

ಅವಳೇ ಮತ್ತೆ ನುಡಿದಳು "ಆ ದಿನ ಕೈಗೆ ಎಟುಕದ ದ್ರಾಕ್ಷಿಯಂತೆ ನಿನ್ನನ್ನು ಕಾಡಿಸಿ, ಗೋಳಾಡಿಸಿ ತಲೆ ಕೆಡಿಸಿ ಹೊರಟು ಹೋಗಿದ್ದೆ. ಈಗ ಮತ್ತೆ ಬಂದಿದೀನಿ. ಈ ಸಲ ಹಾಗೆ ಮಾಡುವುದಿಲ್ಲ. ನಿನ್ನನ್ನು ಸ್ವರ್ಗಸುಖದಲ್ಲಿ ತೇಲಾಡಿಸುತ್ತೀನಿ. ಹದಿನಾರು ವರ್ಷದ ಕನ್ಯೆಗಿಂತಲೂ ಹೆಚ್ಚಿನ ಆನಂದ ಕೊಡ್ತೀನಿ. ನಿನ್ನ ಜೀವನದಲ್ಲಿ ಮರೆಯಲಾಗದಷ್ಟು ಸುಖ ಕೊಡ್ತೀನಿ. ಆಶಾರಾಜ್‌ಗೆ ಕೊಡುತ್ತೇನೆಂದು ಹೇಳಿದ ದುಡ್ಡು ಕೊಟ್ಬಿಡು ಮನ್ಮಥರಾವ್."

ಮನ್ಮಥರಾವ್ ಸರಸರನೆ ಓಡಿಬಂದು ಮಹದಾನಂದದಿಂದ ಅವಳ ಕೈ ಹಿಡಿದುಕೊಂಡ. "ನೀನು ಮತ್ತೆ ನನಗೆ ಕಾಣಿಸ್ತೀಯಾ ಅಂತ ಅಂದ್ಕೊಂಡಿರಲಿಲ್ಲ. ಆ ದಿನ ನನಗೆ ತ್ರಿಶಂಕು ಸ್ವರ್ಗ ತೋರಿಸಿ ಹೊರಟುಹೋದೆ. ಆಗಿನಿಂದ ನಿನಗೋಸ್ಕರ ನಾನೆಷ್ಟು ತಪಿಸುತ್ತಿದ್ದೀನೋ ನಿನಗೆ ಗೊತ್ತಿಲ್ಲ. ಈ ದಿನ ಮತ್ತೆ ನನ್ನ ಕಣ್ಣಿಗೆ ಬಿದ್ದೆ. ಈ ಸಲ ನಿನ್ನ ಬಿಡೋಲ್ಲ! ನಿನಗೋಸ್ಕರ ಅರವತ್ತು ಸಾವಿರ ಯಾಕೆ ? ಲಕ್ಷ ಬೇಕಾದ್ರೂ ಕೊಡ್ತೀನಿ. ಎಷ್ಟು ಬೇಕೋ ಅಷ್ಟು ತಗೋ."

"ನಿನ್ನ ಭಾವಮೈದುನನ ಕಣ್ಣು ತಪ್ಪಿಸಿ ಕಂಪನಿಯಿಂದ ನೀನು ದೋಚಿದ ದುಡ್ಡನ್ನೆಲ್ಲಾ ನನಗೆ ಕೊಡಬೇಕಾದುದಿಲ್ಲ. ಆಶಾರಾಜನಿಗೆ ಕೊಡುತ್ತೇನೆಂದ ದುಡ್ಡು ಕೊಟ್ಟರೆ ಸಾಕು."

"ಓ ಎಸ್! ಈಗಲೇ ಕೊಡ್ತೀನಿ." ನಾಲಿಗೆಯಿಂದ ತುಟಿ ಸವರಿಕೊಳ್ಳುತ್ತಾ ನುಡಿದ ಮನ್ಮಥರಾವ್.

"ಈಗಲೇ ಅಗತ್ಯವಿಲ್ಲ. ನಿನ್ನ ಕೋರಿಕೆ ಪೂರೈಸಿಕೊಂಡ ನಂತರವೇ ಕೊಡಬಹುದು."

"ಹಾಗಾದ್ರೆ ಇನ್ಯಾಕೆ ತಡ ಬಾ" ಆತುರದಿಂದ ಅವಳ ಕೈ ಹಿಡಿದು ಎಳೆದ.

"ಆದರೆ ಒಂದು ಷರತ್ತು."

"ಏನದು ?"

ಅವಳು ತಕ್ಷಣವೇ ಉತ್ತರಿಸಲಿಲ್ಲ. ತಲೆ ತಿರುಗಿಸಿ ಆಶಾರಾಜ್ ಕಡೆ ಒಂದು ಸಲ ದಿಟ್ಟಿಸಿ ನೋಡಿ ಮತ್ತೆ ಮನ್ಮಥರಾವ್‌ನ ಕಡೆ ನೋಟ ಹೊರಳಿಸಿದಳು. "ನಿನ್ನ ಅಪೇಕ್ಷೆಯನ್ನು ಆಶಾರಾಜ್ ನೋಡುತ್ತಿರುವಂತೆ ಅವನ ಕಣ್ಣೆದುರಲ್ಲೇ ತೀರಿಸಿಕೊಳ್ಳಬೇಕು! ಅದೇ ನನ್ನ ಷರತ್ತು."

ಅಷ್ಟೇ, ಅವಳು ಆ ಮಾತು ಹೇಳಿದೊಡನೆಯೇ ಆಶಾರಾಜ್ ನೆತ್ತಿಯ ಮೇಲೆ ಸಿಡಿಲು ಬಿದ್ದವನಂತೆ ಬೆಚ್ಚಿಬಿದ್ದ. "ಸಿಸ್ಟರ್ !"

ಅವಳು ಅವನ ಆತಂಕವನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಇನ್ನೂ ಮನ್ಮಥರಾವ್‌ನನ್ನೇ ದಿಟ್ಟಿಸಿ ನೋಡುತ್ತಿದ್ದಳು. "ಏನಂತೀಯಾ ಮನ್ಮಥರಾವ್? ನನ್ನ ಷರತ್ತು ನಿನಗೆ ಒಪ್ಪಿಗೇನಾ ?"

ಮನ್ಮಥರಾವ್ ನಕ್ಕ. "ನೀನೇನು ಹೇಳಿದ್ರೂ ನನಗೆ ಒಪ್ಪಿಗೇನೇ. ನನಗೆ ತಿಳೀದೇ ಕೇಳ್ತೀಸಿ. ಇವನಿಗೆ ಆ ತರಹದ ಮೋಜು ಕೂಡಾ ಇದೆಯೇನು? ಇನ್ನೊಬ್ಬರ ಸರಸ ನೋಡಿ ಆನಂದಿಸುವುದು! ನನಗೆ ಕೂಡಾ ಅದೇ ರೀತಿಯ ಮೋಜು ಇದೆ ಬಿಡು. ನನಗೆ ಮೊದಲೇ ಹೇಳ್ಳಿಲ್ಲವಲ್ಲಯ್ಯಾ? ಇದಕ್ಕೆ ಮುಂಚೆ ಹುಡುಗಿಯರನ್ನು ತಂದಾಗಲೇ ನಿನಗೆ ಆ ಚಾನ್ಸ್ ಕೊಡ್ತಿದ್ದೆ?"

ಆಶಾರಾಜ್ ಒಂದು ಸಲ ಕಂಪಿಸಿದ. ಅವನ ಕೈ-ಕಾಲು ತಣ್ಣಗಾದಂತಾಯಿತು. "ಸಿಸ್ಟರ್!" ಮತ್ತೊಂದು ಸಲ ಕ್ಷೀಣ ಸ್ವರದಿಂದ ನುಡಿದ. ಆದರೆ ಆ ಕೂಗು ಪೂರ್ತಿಯಾಗಿ ಹೊರಗೆ ಕೇಳಿಸಲಿಲ್ಲ. "ಹಾಗಿದ್ರೆ ನಾನು ಸಿದ್ಧ" ಎಂದಳು ಮೇಖಲೆ.

"ಮತ್ತಿನ್ಯಾಕೆ ತಡ? ಬಾ ಹೋಗೋಣ" ಮನ್ಮಥರಾವ್ ಅವಳ ಕೈ ಹಿಡಿದುಕೊಂಡು ಬೆಡ್‌ರೂಮಿನತ್ತ ಕರೆದೊಯ್ದ.

ಆಶಾರಾಜ್ ನಿಶ್ಚೇಷ್ಟಿತನಾಗಿ ನೋಡುತ್ತಿದ್ದ. ಆಗಿಂದಾಗಲೇ ಹಿಂದಿರುಗಿ ಹಿಂದಕ್ಕೆ ತಿರುಗಿ ಆ ಸೂಟ್‌ನ ಬಾಗಿಲು ತೆರೆದುಕೊಂಡು ಹೋಗಬಹುದೆಂಬ ವಿಷಯ ಅವನಿಗೆ ಜ್ಞಾಪಕಕ್ಕೆ ಇದ್ದಿಲ್ಲ.

"ನಿನಗೆ ಬುದ್ಧಿ ಬರಬೇಕೆಂದರೆ ಹಾಗೆ ಮಾಡಕೂಡದು.... ನಿನಗೆ ಬುದ್ಧಿ ಬರಬೇಕೆಂದರೆ ಹಾಗೆ ಮಾಡಕೂಡದು...." ಅವನ ಕಿವಿಗಳಲ್ಲಿ ಮೇಖಲೆಯ ಮಾತುಗಳೇ ಮೊಳಗತೊಡಗಿದವು. ಅದನ್ನು ತಡೆಯಲಾಗದೆ ಎರಡೂ ಕೈಗಳಿಂದ ಗಟ್ಟಿಯಾಗಿ ಕಿವಿಗಳನ್ನು ಮುಚ್ಚಿಕೊಂಡ. ಅವನ ಕಣ್ಣು ಮಾತ್ರ ತೆರೆದೇ ಇದ್ದವು. ತೆರೆದುಕೊಂಡಿದ್ದ ಆ ಕಣ್ಣುಗಳಿಗೆ ಎದುರಿಗಿದ್ದ ಬೆಡ್‌ರೂಮ್ ಕಾಣಿಸುತ್ತಿತ್ತು. ಸ್ಪಷ್ಟವಾಗಿ ಅತಿ ಸ್ಪಷ್ಟವಾಗಿ....! ಅವನಿಗೆ ಮೈಮೇಲಿನ ಪ್ರಜ್ಞೆ ತಪ್ಪುತ್ತಿರುವಂತೆ ಭಾಸವಾಯಿತು. ಕಣ್ಣೆದುರಿಗೆ ಮೇಖಲೆ! ಮನ್ಮಥ

ರಾವ್ ಮೇಖಲೆಯನ್ನು ಅಪ್ಪಿಕೊಳ್ಳುತ್ತಿದ್ದ. ಗಟ್ಟಿಯಾಗಿ ಅಪ್ಪಿಕೊಳ್ಳುತ್ತಿದ್ದ. ಮೇಖಲೆ ಅವನಿಗೆ ಸಹಕರಿಸುತ್ತಿದ್ದಳು. ಸಹಕರಿಸುತ್ತಲೇ ನಡುನಡುವೆ ಆಶಾರಾಜ್‌ನ ಕಡೆ ನೋಡಿ ನಗುತ್ತಿದ್ದಳು. ಆ ನಗುವೇ ಅವನ ಹೃದಯಕ್ಕೆ ಶೂಲದಂತೆ ಚುಚ್ಚುತ್ತಿತ್ತು. ಅವನಿನ್ನೂ ಕಣ್ಣರಳಿಸಿ ನೋಡುತ್ತಿದ್ದ. ನೋಡುತ್ತಿದ್ದ ಅವನ ಕಣ್ಣುಗಳೆದುರಿಗೆ ಹಠಾತ್ತನೆ ದೃಶ್ಯ ಬದಲಾಯಿತು. ಮನ್ಮಥರಾವ್ ಬಿಗಿಯಾಗಿ ಅಪ್ಪಿಕೊಳ್ಳುತ್ತಿರುವುದು ಅವಳನ್ನಲ್ಲ; ತನ್ನ ತಂಗಿ! ಕಣ್ಣ ಮುಂದಿನಿಂದ ಅವಳು ಅದೃಶ್ಯವಾಗಿದ್ದಳು. ಅವಳ ಸ್ಥಾನದಲ್ಲಿಯೇ ತನ್ನ ತಂಗಿ ಪ್ರತ್ಯಕ್ಷವಾಗಿದ್ದಳು. ಆ ದೃಶ್ಯಗಳೆಲ್ಲಾ ಕಣ್ಣೆದುರಿಗೆ ಕಾಣಿಸುತ್ತಿದ್ದವು. ಅವಳ ಸ್ಥಾನದಲ್ಲಿ ತನ್ನ ತಂಗಿ ನಗ್ನಳಾಗಿ ನಿಂತುಕೊಂಡಿದ್ದಳು. ತನ್ನ ಕಡೆ ನೋಡಿ ಕೈ ಚಾಚಿದಳು. 'ಅಣ್ಣಾ' ಎಂದು ಆಕ್ರಂದನ ಮಾಡುತ್ತಿದ್ದಳು. ಅವನಿಂದ ತಡೆದುಕೊಳ್ಳಲಾಗಲಿಲ್ಲ. ಹಠಾತ್ತನೆ ಅವನ ಮೆದುಳು ಅಗ್ನಿಪರ್ವತದಂತೆ ಫಟಾರನೆ ಸಿಡಿಯಿತು. ಕ್ರೋಧದ ಲಾವಾ ಉಕ್ಕಿ ಅವನ ಕಣ್ಣುಗಳಲ್ಲಿ ಕೆಂಪಗೆ ಹರಡಿಕೊಂಡಿತು. ಅವನು ಅರಚಿದ, "ಲೇ ಮನ್ಮಥರಾವ್!"

ಆ ಘರ್ಜನೆಗೆ ಮನ್ಮಥರಾವ್ ಬೆಚ್ಚಿಬಿದ್ದ. ತಲೆ ತಿರುಗಿಸಿ ನೋಡುವುದರೊಳಗಾಗಿ ತಡವಾಯಿತು. ಆಶಾರಾಜ್ ಅಷ್ಟೊತ್ತಿಗೇ ಮುಂದೆ ನುಗ್ಗಿದ. ಬೇಟೆ ನಾಯಿಯಂತೆ ಮುಂದೆ ನುಗ್ಗಿದ. ಕಾಲ ಯಮನಂತೆ ತನ್ನ ಕಡೆ ನುಗ್ಗಿ ಬರುತ್ತಿದ್ದ ಅವನನ್ನು ನೋಡುತ್ತಲೇ ಮನ್ಮಥರಾವ್ ಭಯದಿಂದ ಕೂಗಿ, ಮೇಖಲೆಯನ್ನು ಬಿಟ್ಟು ನಾಲ್ಕು ಹೆಜ್ಜೆ ಹಿಂದೆ ಸರಿದ. ಕೂಗಲು ಯತ್ನಿಸಿದರೂ ಅದು ಅವನ ಗಂಟಲಲ್ಲಿಯೇ ಅಡಗಿತು.

ಜೆಟ್ ವೇಗದಿಂದ ಮುಂದೆ ನುಗ್ಗುತ್ತಲೇ ಆಶಾರಾಜ್ ಒಂದು ಕಡೆ ಇದ್ದ ಟೀಪಾಯ್ ಅನ್ನು ಕೈಗೆತ್ತಿಕೊಂಡ. ಮರುಕ್ಷಣ ಅವನ ಕೈಗಳಲ್ಲಿ ಟೀಪಾಯ್ ವಿಷ್ಣುಚಕ್ರದಂತೆ ಗಿರ್ರೆಂದು ತಿರುಗತೊಡಗಿತು. ಮನ್ಮಥರಾವ್ ಮತ್ತೊಂದು ಸಲ ಕೂಗಲು ಪ್ರಯತ್ನಿಸಿದ. ಆದರೆ ಆಶಾರಾಜ್ ಅಷ್ಟೊತ್ತಿಗೆ ಎದುರಿಗೆ ನಿಂತಿದ್ದ. ಮನ್ಮಥರಾವ್‌ನ ಗಂಟಲಿನಿಂದ ಕೂಗು ಹೊರಬೀಳುವುದರೊಳಗೆ ಆಶಾರಾಜ್‌ನ ಕೈಯಲ್ಲಿದ್ದ ಟೀಪಾಯ್ ಫಟೀರೆಂದು ಅವನ ತಲೆಗೆ ಬಡಿಯಿತು. ಅಷ್ಟೇ!

"ಫಟ್" ಎನ್ನುವ ಶಬ್ದದೊಂದಿಗೆ ಮನ್ಮಥರಾವ್ ತಲೆ ಎರಡು ಹೋಳಾಯಿತು. ಆ ದೃಶ್ಯ ನೋಡುತ್ತಲೇ ಮೇಖಲೆ ಕಿಟಾರನೆ ಕಿರುಚಿದಳು. ಆದರೆ ಆ ಸೂಟ್ ಸೌಂಡ್‌ಪ್ರೂಫ್ ಆದ್ದರಿಂದ ಅವಳ ಕೂಗು ಆ ನಾಲ್ಕು ಗೋಡೆ ದಾಟಿ ಹೊರಬರಲಿಲ್ಲ. ಅವಳು ಎರಡೂ ಕೈಗಳಿಂದ ಬಾಯಿಯನ್ನು ಒತ್ತಿ ಮುಚ್ಚಿ

ಕೊಳ್ಳುತ್ತಾ, ನಡುಗುತ್ತಾ ಆಶಾರಾಜ್‌ನ ಕಡೆ ನೋಡಿದಳು. ನೆಲದ ಮೇಲೆ ಬಿದ್ದು ವಿಲಿವಿಲಿ ಒದ್ದಾಡುತ್ತಿದ್ದ ಮನ್ಮಥರಾವ್‌ನ ಕಡೆ ಆಶಾರಾಜ್ ಕಣ್ಣರಳಿಸಿ ನೋಡುತ್ತಾ ನಿಂತುಬಿಟ್ಟ. ಕೊಂಚ ಹೊತ್ತಿನಲ್ಲಿ ಮನ್ಮಥರಾವ್‌ನ ಶರೀರ ಒದ್ದಾಡುವುದನ್ನು ನಿಲ್ಲಿಸಿತು. ನಿಧಾನವಾಗಿ ಟೀಪಾಯ್ ಅನ್ನು ಕೆಳಗಿಳಿಸಿ, ತಲೆಎತ್ತಿ ಮೇಖಲೆಯ ಕಡೆ ನೋಡಿದ. ಅವನ ಮಹೋಗ್ರ ರೂಪವನ್ನು ಅವಳು ಇನ್ನೂ ಕಣ್ಣರಳಿಸಿ ಹುಚ್ಚಿಯಂತೆ ನೋಡುತ್ತಿದ್ದಳು. ಅವಳ ಕಡೆ ನೋಡುತ್ತಲೇ ಅಲ್ಲಿಯತನಕ ಅವನ ಕಣ್ಣುಗಳಲ್ಲಿ ತಾಂಡವವಾಡಿದ ರೌದ್ರ ಮಾಯವಾಗಿ ಅದರ ಸ್ಥಾನದಲ್ಲಿ ವಾತ್ಸಲ್ಯ ಮೂಡಿತು. ತೂಫಾನಿಗೆ ಸಿಕ್ಕಿ ಬಿದ್ದು ಒಡೆದು ಹೋದ ಹಡಗಿನ ಅವಶೇಷದಂತೆ ಅವನು ನಿಧಾನವಾಗಿ ಅವಳ ಮುಂದೆ ಬಂದು, ಎದುರಿಗೆ ನಿಂತು ಸೆಲ್ಯೂಟ್ ಮಾಡಿದ. "ಸಿಸ್ಟರ್ ಬರ್ತೀನಿ!" ಅಷ್ಟೇ. ಅದಕ್ಕಿಂತ ಹೆಚ್ಚು ಅವನು ಇನ್ನೇನೂ ಹೇಳಲಿಲ್ಲ. ಆ ಮಾತು ಹೇಳುತ್ತಲೇ ಅವನು ಸರಕ್ಕನೆ ಹಿಂದಿರುಗಿ ಆ ಸೂಟ್‌ನಿಂದ ಸರಸರನೆ ಹೊರ ಬಿದ್ದ. ಅವನು ಹೋಗುತ್ತಿರುವ ಕಡೆ ನೋಡುತ್ತಾ ಮೇಖಲೆ ಶಿಲಾ ಪ್ರತಿಮೆಯಂತೆ ನಿಂತಿದ್ದಳು.

## ೨೨

ಅವಳು ಆ ರಾತ್ರಿಯೆಲ್ಲಾ ಎಚ್ಚರವಾಗಿಯೇ ಕಳೆದಳು. ರಾತ್ರಿಯ ಹೊತ್ತು ಎಚ್ಚರವಾಗಿರುವುದು ಅವಳಿಗೆ ಹೊಸದಲ್ಲ. ಆದರೆ ಈಗ ಎಚ್ಚರವಾಗಿರುವುದು ಬೇರೆ. ಕಣ್ಣು ಮುಚ್ಚಿದರೂ, ತೆರೆದರೂ ಅವಳಿಗೆ ಆಶಾರಾಜನೇ ನೆನಪಾಗುತ್ತಿದ್ದ.

"ಸಿಸ್ಟರ್....ಬರ್ತೀನಿ" ಎನ್ನುವ ಮಾತೇ ಅವಳ ಕಿವಿಗಳಲ್ಲಿ ಮೊಳಗುತ್ತಿತ್ತು. ಎಲ್ಲಕ್ಕಿಂತಲೂ ಹೆಚ್ಚಾಗಿ ಆಶಾರಾಜ್ ನೇಣುಗಂಬಕ್ಕೆ ಹತ್ತಿರವಾಗಲು ಕಾರಣ ತಾನೇ ಎಂಬ ವಿಷಯ ಅವಳನ್ನು ಚಿತ್ರವಧೆಗೊಳಿಸುತ್ತಿತ್ತು. ಅವಳ ಮನಸ್ಸೆಲ್ಲಾ ಛಿದ್ರಛಿದ್ರವಾಗಿತ್ತು.

ಮನ್ಮಥರಾವ್‌ನ ತಲೆ ಒಡೆದೊಡನೆಯೇ ಆಶಾರಾಜ್ ನೇರವಾಗಿ ಪೋಲೀಸ್ ಸ್ಟೇಷನ್‌ಗೆ ಹೋಗಿ ಕುಳಿತುಕೊಂಡ. ಏನೆಂದು ಪ್ರಶ್ನಿಸಿದಾಗ ಅವನು ಹೇಳಿದ್ದು ಒಂದೇ ಮಾತು. "ನಾನು ಮನ್ಮಥರಾವ್‌ನ ತಲೆ ಒಡೆದಿದ್ದೇನೆ. ನನ್ನನ್ನು ಅರೆಸ್ಟ್ ಮಾಡಿ!"

ಅವನು ಹೇಳಿದ ಮಾತು ಕೇಳುತ್ತಲೇ ಪೋಲೀಸರು ಅವನ ಧ್ವನಿಯಲ್ಲಿನ ಗಾಂಭೀರ್ಯವನ್ನು ನೋಡಿ ಬೆಚ್ಚಿಬಿದ್ದರು.

"ನೀವೇನೂ ವಿವರಗಳನ್ನು ಕೇಳಬೇಕಾಗಿಲ್ಲ, ನಾನೇ ಸ್ಟೇಟ್‌ಮೆಂಟ್ ಕೊಡ್ತೀನಿ ಬರ್ಕೊಳ್ಳಿ" ಎಂದ. ಸ್ಟೇಟ್‌ಮೆಂಟ್‌ನಲ್ಲಿ ಅವನು ಹೇಳಿದ್ದು ಒಂದೇ ಮಾತು. "ಮನ್ಮಥರಾವ್ ನೀಚ. ನನ್ನನ್ನು ಪೀಡಿಸಿ ಜೀವ ಹಿಂಡುತ್ತಿದ್ದ. ಅದಕ್ಕೆ ತಲೆ ಒಡೆದು ಹಾಕಿದೆ." ಅದಕ್ಕೆ ಹೆಚ್ಚಾಗಿ ಒಂದೂ ಮಾತೂ ಹೇಳಲಿಲ್ಲ. ತನ್ನ ತಂಗಿಯ ಬಗೆಗೆ, ಮೇಖಲೆಯ ಬಗೆಗೆ ತಪ್ಪಿಯೂ ಹೇಳಲಿಲ್ಲ.

ಪೋಲೀಸರು ಕೊಲೆ ನಡೆದ ಸ್ಥಳಕ್ಕೆ ಬರುವವರೆಗೆ ಮನ್ಮಥರಾವ್‌ನ ಶವವನ್ನು ಯಾರೂ ನೋಡಿರಲಿಲ್ಲ. ಅಷ್ಟರೊಳಗೆ ಮೇಖಲೆ ಅಲ್ಲಿಂದ ತಪ್ಪಿಸಿಕೊಂಡಿದ್ದಳು. ಯಾರಿಗೂ ಅವಳ ಮೇಲೆ ಅನುಮಾನ ಬಂದಿರಲಿಲ್ಲ. ಅವಳು ಸೂತ್ರ ಹರಿದ ಗಾಳಿಪಟದಂತೆ ತೂರಾಡುತ್ತ ತನ್ನ ಅಪಾರ್ಟ್‌ಮೆಂಟ್ ತಲುಪಿದಳು.

ಸಾವು, ಕೊಲೆಗಳನ್ನು ನೋಡುತ್ತಿರುವುದು ಅವಳಿಗೇನು ಹೊಸದಲ್ಲ. ಆದರೆ ಆಶಾರಾಜ್ ಹಠಾತ್ತನೆ ಮಾಡಿದ ಕೆಲಸವೇ ಅವಳನ್ನು ದಿಗ್ಭ್ರಾಂತಿಗೀಡು ಮಾಡಿತ್ತು. ಗಂಡಸರು ಕೇವಲ ಸ್ವಾರ್ಥಿಗಳು. ಸ್ತ್ರೀಯರನ್ನು ಕೇವಲ ಅಂದದ ಮಾಂಸದ ಮುದ್ದೆಯಾಗಿ ಹೊರತು, ತಾಯಿಯಾಗಿ, ತಂಗಿಯಾಗಿ ಕಾಣಲಾರರು ಎನ್ನುವುದು ಅಲ್ಲಿಯವರೆಗೂ ಅವಳ ಸಿದ್ಧಾಂತ. ಆಶಾರಾಜ್ ಅವಳ ಸಿದ್ಧಾಂತಕ್ಕೆ ತೀವ್ರ ಪೆಟ್ಟುಕೊಟ್ಟಿದ್ದ. ಅದೇ ಅವಳ ಮನಸ್ಸನ್ನು ಕಲಕುತ್ತಿತ್ತು. ಎತ್ತಲೂ ತೋಚದ ಪರಿಸ್ಥಿತಿಯಲ್ಲಿ ಅವಳು ದಿಗ್ಮೂಢಳಾಗಿದ್ದಳು. ಅವಳು ಆ ದಿನವೇ ಆಶಾರಾಜ್‌ನನ್ನು ಜೈಲಿನಲ್ಲಿ ಭೇಟಿಯಾಗಿದ್ದಳು. ಅವಳನ್ನು ನೋಡುತ್ತಲೇ ಅವನ ಕಣ್ಣುಗಳು ತೃಪ್ತಿಯಿಂದ ಹೊಳೆದವು. "ಇಷ್ಟು ಕಾಲ ನಿಮ್ಮನ್ನು ಇನ್ನೊಬ್ಬರಿಗೆ ತಲೆ ಹಿಡಿಯುವ ಗಂಡಸರನ್ನೇ ನೋಡಿರ್ತೀರಿ ಸಿಸ್ಟರ್! ಈಗ ಮತ್ತೊಬ್ಬ ಗಂಡಸಿನ ಕೈಯಿಂದ ನಿಮ್ಮನ್ನು ಬಿಡಿಸಿದ ಮನುಷ್ಯನನ್ನು ನೋಡಿದೀರಿ."

"ಆದರೆ........,ಆದರೆ........, ಅದರಿಂದ ಫಲವೇನು ?" ಅವಳು ಕೇಳಿದಳು.

"ನನ್ನ ಆತ್ಮಸಂತೃಪ್ತಿ!" ಎಂದ. ಅದಕ್ಕಿಂತಲೂ ಹೆಚ್ಚು ಅವಳೊಂದಿಗೆ ಮಾತಾಡಲಿಲ್ಲ.

"ನನ್ನವರ ಯೋಗಕ್ಷೇಮ ನಾನು ನೋಡ್ಕೋತೀನಿ ಆಶಾರಾಜ್ ! ನಿಮ್ಮ ತಾಯಿಗೆ ನಾನು ಆಪರೇಷನ್ ಮಾಡಿಸ್ತೀನಿ. ನೀನು ಮಾಡಿದ ಕೊಲೆ ಬೇಕಂತ ಮಾಡಿದ್ದಲ್ಲ. ದೇಶದಲ್ಲೆಲ್ಲಾ ಬೆಸ್ಟ್ ಲಾಯರ್‌ನನ್ನು ನಿನಗೋಸ್ಕರ ಕರೆಸ್ತೀನಿ."

ಇವ್ಯಾವುದಕ್ಕೂ ಅವನು ಉತ್ತರಿಸಲಿಲ್ಲ. ಎಲ್ಲಕ್ಕೂ ತಲೆಯಾಡಿಸಿ

ಸುಮ್ಮನಾದ. ಅವನಿನ್ನು ಮಾತಾಡುವುದಿಲ್ಲವೆಂದು ಅವಳಿಗೆ ಅರ್ಥವಾಯಿತು. ಭಾರವಾದ ಹೃದಯದಿಂದ ತನ್ನ ಅಪಾರ್ಟ್‌ಮೆಂಟ್‌ಗೆ ತಿರುಗಿ ಬಂದಳು. ಆ ರಾತ್ರಿಯೆಲ್ಲಾ ಅವಳು ಆಶಾರಾಜ್ ಬಗ್ಗೆಯೇ ಆಲೋಚಿಸುತ್ತಿದ್ದಳು. ಹೌದು, ಆಶಾರಾಜ್ ಹೇಳಿದ್ದು ನಿಜವೇ! ಇಷ್ಟು ಕಾಲ ಗಂಡಸರಲ್ಲಿ ತನಗೆ ತೋಳಗಳೂ, ಕ್ರೂರ ಮೃಗಗಳೂ, ವಿಷಸರ್ಪಗಳೇ ಕಾಣಿಸಿದ್ದರು. ಒಬ್ಬ ದೇವನಲ್ಲಿ ಬಿಟ್ಟು ಅವಳಿಗೆ ಗಂಡಸಿನಲ್ಲಿ ಇಲ್ಲಿಯವರೆಗೆ ಒಳ್ಳೆಯದೇನೂ ಕಾಣಿಸಿರಲಿಲ್ಲ. ಈಗ ಆಶಾರಾಜ್ ಕೂಡ ಅವಳಿಗೆ ಉನ್ನತನಂತೆಯೇ ಕಾಣುತ್ತಿದ್ದ. ನಿಜವೆ, ಎಲ್ಲ ಗಂಡಸರೂ ತನ್ನನ್ನು ಪರಪುರುಷರ ಮಲಗುವ ಕೋಣೆಗೆ ತಳ್ಳಿದರೆ, ಆಶಾರಾಜ್ ತನ್ನನ್ನು ಒಬ್ಬ ಪರಪುರುಷನ ಮಲಗುವ ಕೋಣೆಯಿಂದ ಹೊರ ತಂದಿದ್ದಾನೆ. ಅದರಿಂದೇನೂ ಉಪಯೋಗವಾಗದಿರಬಹುದು. ಅವನು ಹೊರ ತಂದಿದ್ದರಿಂದ ಕಾಪಾಡಿದ್ದೇನೂ ಇಲ್ಲ. ಅವನು ಕಾಪಾಡಲು ತನ್ನ ಹತ್ತಿರ ಉಳಿದದ್ದೇನೂ ಇಲ್ಲ. ಆದರೆ...., ಅಧಃಪಾತಾಳದಲ್ಲಿ ಹೂತಂತೆ ಕಾಣಿಸುತ್ತಿದ್ದ ಗಂಡು ಜಾತಿಯನ್ನು ಆಶಾರಾಜ್ ತಾನು ಮಾಡಿದ ಕೆಲಸದಿಂದ ಒಂದು ಮೆಟ್ಟಿಲು ಮೇಲೆ ಹತ್ತಿಸಿದ್ದ. ಬೆಳಗಿನ ಜಾವ ಸೂರ್ಯೋದಯವಾಗುವ ಹೊತ್ತಿಗೆ ಅವಳಿಗೆ ಕೊಂಚ ನಿದ್ದೆ ಹಿಡಿಯಿತು. ಆ ನಿದ್ದೆ ಕೂಡ ಕೊಂಚ ಹೊತ್ತೆ. ಒಂದೂವರೆ ಗಂಟೆಯಷ್ಟು ನಿದ್ದೆ ಮಾಡಿದ್ದಳೋ, ಇಲ್ಲವೋ ಟೆಲಿಫೋನ್ ಧ್ವನಿ ಅವಳನ್ನು ಎಚ್ಚರಗೊಳ್ಳುವಂತೆ ಮಾಡಿತು. ಕಣ್ಣು ತೆರೆಯುತ್ತಲೇ ತಲೆ ಭಾರವೆನಿಸಿತು. ಉರಿಯುತ್ತಿದ್ದ ಕಣ್ಣುಗಳನ್ನು ತೀಡಿ ಕೊಳ್ಳುತ್ತಾ ಹಾಸಿಗೆಯ ಮೇಲಿನಿಂದ ಎದ್ದು ರಿಸೀವರ್ ಎತ್ತಿಕೊಂಡಳು. "ಹಲೋ !".

ಅತ್ತಲಿಂದ ಮೆಲ್ಲಗೆ ನಗು ಕೇಳಿಸಿತು. "ಗುಡ್ ಮಾರ್ನಿಂಗ್ ಮಿಸ್ ಮೇಖಲೆ !"

ಜಾನಿವಾಕರ್‌ನ ಧ್ವನಿ. ಆ ಧ್ವನಿ ಕೇಳುತ್ತಲೇ ಅವಳ ಮುಖದಲ್ಲಿ ಕಾಠಿಣ್ಯ ತುಂಬಿತು.

"ಓ ನೀನಾ! ಏನು ಇಷ್ಟು ಬೆಳಿಗ್ಗೇನೇ ಫೋನ್ ಮಾಡ್ದೆ ?"

"ಏನಿಲ್ಲ ನಿನ್ನ ಆರೋಗ್ಯ ಹೇಗಿದೆಯೋ ತಿಳ್ಕೊಳ್ಳೋಣಾಂತ."

"ನನ್ನ ಆರೋಗ್ಯಕ್ಕೇನಾಗಿದೆ ?" ಗಡುಸಾಗಿ ಕೇಳಿದಳು.

"ಕೆಟ್ಟಿರಬೇಕು "

"ಅಂದ್ರೆ?"

"ಈ ಬೆಳಿಗ್ಗೆ 'ನ್ಯೂ ಇಂಡಿಯಾ' ನೋಡಿಲ್ವಾ ?"

"ಇಲ್ಲ."

"ಹಾಗಿದ್ರೆ ತಕ್ಷಣವೇ ನೋಡು. ನಿನ್ನ ಆರೋಗ್ಯ ಹೇಗಿರುತ್ತೋ ನೋಡೋಣ ! ಗುಡ್ ಬೈ !" ಜಾನಿವಾಕರ್ ರಿಸೀವರ್ ಕೆಳಗಿಟ್ಟ.

ಮೇಖಲೆ ತನ್ನ ಕೈಯಲ್ಲಿದ್ದ ರಿಸೀವರನ್ನು ದಿಟ್ಟಿಸಿ ನೋಡಿದಳು. ಜಾನಿವಾಕರ್ ಹೇಳಿದ್ದರ ತಲೆಬುಡ ಅರ್ಥವಾಗಲಿಲ್ಲ. ಮೊದಲೇ ಬೇಜಾರಿನಿಂದಿದ್ದ ಅವಳ ಮನಸ್ಸು ಜಾನಿವಾಕರ್ ಫೋನ್ ಮಾಡಿದ್ದರಿಂದ ಮತ್ತಷ್ಟು ಕೆಟ್ಟಿತು. ಕೈಯಲ್ಲಿನ ರಿಸೀವರನ್ನು ಕ್ರೆಡಿಲ್ ಮೇಲೆ ಕುಕ್ಕಿ ಎದ್ದು ನಿಂತಳು. 'ನ್ಯೂ ಇಂಡಿಯಾ', ಏನಿದೆ ನ್ಯೂ ಇಂಡಿಯಾದಲ್ಲಿ? ಅವಳ ಅಪಾರ್ಟ್‌ಮೆಂಟ್‌ಗೆ ಎಲ್ಲಾ ನ್ಯೂಸ್‌ಪೇಪರ್‌ಗಳೂ ಬರುತ್ತವೆ. ಆವಾಗಿಂದಾವಾಗ ಪ್ರಪಂಚದಲ್ಲಿ ನಡೆಯುತ್ತಿರುವ ವಿಷಯಗಳನ್ನು ಅಧ್ಯಯನ ಮಾಡುವುದನ್ನು ಅವಳು ರೂಢಿ ಮಾಡಿಕೊಂಡಿದ್ದಳು. ಅಧ್ಯಯನ ಮಾಡುತ್ತಿರುವಷ್ಟೂ ಅವಳಿಗೆ ಪ್ರಪಂಚದ ಮೇಲಿನ ಅಸಹ್ಯ ಮತ್ತಷ್ಟು ಬೆಳೆಯುತ್ತಿತ್ತು. ಅವಳು ಸರಸರನೆ ಮುಂದಿನ ಕೋಣೆಗೆ ಹೋದಳು. ಪೇಪರ್ ಬಾಯ್ ಪ್ರತಿದಿನವೂ ಬಾಗಿಲ ಸಂದಿಯ ಮೂಲಕ ನ್ಯೂಸ್‌ಪೇಪರ್‌ಗಳೆಲ್ಲವನ್ನೂ ಒಳಹಾಕಿ ಹೋಗುತ್ತಿದ್ದ. ಅವಳು ಹೋಗುವಷ್ಟರಲ್ಲಿ ನೆಲದ ಮೇಲಿದ್ದ ಕೆಂಪು ತಿವಾಸಿಯ ಮೇಲೆ ಮೂರು ನಾಲ್ಕು ಪೇಪರ್‌ಗಳಿದ್ದವು. ಥಟ್ಟನೆ ಬಾಗಿ 'ನ್ಯೂ ಇಂಡಿಯಾ' ಕೈಗೆತ್ತಿಕೊಂಡಳು. ಅಷ್ಟೇ ! ಫ್ರಂಟ್ ಪೇಜಿನಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಕಾಣಿಸಿದ ವಾರ್ತೆಯನ್ನು ನೋಡುತ್ತಲೇ ಬೆಚ್ಚಿಬಿದ್ದಳು. ಕಣ್ಣರಳಿಸಿ ಆ ಪೇಪರ್ ಕಡೆ ಹುಚ್ಚಿಯಂತೆ ನೋಡುತ್ತಿದ್ದುಬಿಟ್ಟಳು.

## ೨೩

ರಾಸಲೀಲೆಯಲ್ಲಿ ರಕ್ಷಣಾಮಂತ್ರಿ: ಭಾರತ ದೇಶದಲ್ಲಿ ಒಬ್ಬ ಕ್ರಿಸ್ಟೀನ್ ಕೀಲರ್:

ಶ್ರೀನಗರ, ಜುಲೈ 10: ತುಂಬಾ ವರ್ಷಗಳ ಹಿಂದೆ ಇಂಗ್ಲೆಂಡನ್ನು ಅಲುಗಾಡಿಸಿದ ಪ್ರೊ. ಫ್ಯೂಮೋ ಅಫೇರ್ ಈಗ ಮತ್ತೆ ಪುನರಾವೃತ್ತಗೊಳ್ಳಲಿದೆ. ಈ ಬಾರಿ ವ್ಯಕ್ತಿಗಳಲ್ಲಿ ಮಾತ್ರವೇ ಬದಲಾವಣೆ! ಬ್ಯಾಕ್‌ಗ್ರೌಂಡ್ ಭಾರತದೇಶ! ಸ್ಥಳ ಸೌಂದರ್ಯದ ಕಾಶ್ಮೀರ ಕೊಳ್ಳದ ಡಾಲ್ ಲೇಕ್! ಇಲ್ಲಿ ನಡೆಯುತ್ತಿರುವ ಹೊಚ್ಚ ಹೊಸ ಪ್ರೊಫ್ಯೂಮೋ ಅಫೇರ್‌ನಲ್ಲಿ ಪ್ರೊಫ್ಯೂಮೋ ಪಾತ್ರಧಾರಿ ರಕ್ಷಣಾಮಂತ್ರಿ ಶ್ರೀ ತಾರಕನಾಮ. ಆಧುನಿಕ ಕ್ರಿಸ್ಟೀನ್ ಆಗಿ ಅವತರಿಸಿದ ಸುಂದರಾಂಗಿಯ ಹೆಸರು ಮಿಸ್ ಮಣಿ ಮೇಖಲೆ ! ಈ ಮಣಿ ಮೇಖಲೆ

ಪ್ರಪಂಚದಲ್ಲಿಯೇ ಅತ್ಯಂತ ದುಬಾರಿಯಾದ ಕಾಲ್‌ಗರ್ಲ್ ಎಂದು ತಿಳಿದು ಬಂದಿದೆ.

ದೃಢವಾದ ಸಾಕ್ಷ್ಯಾಧಾರಗಳೊಂದಿಗೆ ನಮಗೆ ದೊರಕಿದ ಸಮಾಚಾರದ ಪ್ರಕಾರ ಡಾಲ್ ಲೇಕ್‌ನಲ್ಲಿನ ಒಂದು ಲಕ್ಸುರಿ ಹೌಸ್ ಬೋಟ್‌ನಲ್ಲಿ ತಾರಕ ನಾಮರವರು ಮಿಸ್ ಮೇಖಲೆಯೊಂದಿಗೆ ಒಂದು ರಾತ್ರಿ ರಹಸ್ಯವಾಗಿ ಕಳೆದಿರುವರೆಂದು ತಿಳಿದು ಬಂದಿದೆ. ಅದಕ್ಕೆ ಸಂಬಂಧಿಸಿದ ಎರಡು ಫೋಟೋಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಪ್ರಕಟಿಸಲು ಸಾಧ್ಯವಾಗದ ಫೋಟೋಗಳು ನಮ್ಮ ಬಳಿ ಇನ್ನೂ ಸಾಕಷ್ಟಿವೆ. ಮಿಸ್ಟರ್ ಜಾನಿ ಎನ್ನುವ ಒಬ್ಬ ಅಜ್ಞಾತ ವ್ಯಕ್ತಿ ನಮಗೆ ಈ ಅಮೂಲ್ಯ ಸಮಾಚಾರವನ್ನು ಕೊಟ್ಟಿದ್ದಾರೆ.

ಮಿಸ್ ಮೇಖಲೆ ಸೌದಿ ಅರೇಬಿಯಾಕ್ಕೆ ಸೇರಿದ ಮಿಲಿನಿಯರ್ ಕಮಿಷನ್ ಏಜೆಂಟ್ ಮಿಸ್ಟರ್ ಜಿಂದಾನ್ ಕರ್ಮಲಿ, ಅಲಿಯಾಸ್ ಜೇಕೇಯ ಪೋಷಣೆಯಲ್ಲಿರುವ ಒಂದು ಸುಂದರ ಪಾರಿವಾಳ. ಮಿಸ್ಟರ್ ಜೇಕೇಗೆ ವಿವಿಧದೇಶಗಳ ಇಂಟೆಲಿಜೆನ್ಸ್ ಏಜೆನ್ಸಿಗಳೊಂದಿಗೂ, ಪ್ರಪಂಚದಲ್ಲಿನ ಅನೇಕ ಉಗ್ರಗಾಮಿ ತಂಡಗಳಿಗೆ ತಲುಪುತ್ತಿರುವ ಆಯುಧಗಳ ಸರಬರಾಜಿನೊಂದಿಗೆ ಸಂಬಂಧವಿದೆಯೆಂದು ಭಾವಿಸಲಾಗುತ್ತಿದೆ. ಮಿಸ್ಟರ್ ಜೇಕೇ ಕೊಡುವ ದುಬಾರಿ ಔತಣಗಳಲ್ಲಿ ಮಿಸ್ ಮೇಖಲೆ ವಿಶಿಷ್ಟ ಆಕರ್ಷಣೆಯಾಗಿರುತ್ತಾಳೆಂದು ಕೂಡ ತಿಳಿದುಬಂದಿದೆ. ಪಕ್ಕದಲ್ಲಿ ನಾವು ಪ್ರಕಟಿಸುತ್ತಿರುವ ಒಂದು ಫೋಟೋದಲ್ಲಿ ತಾರಕನಾಮ ಅವರು 'ಟಾಪ್ ಸೀಕ್ರೆಟ್' ಎನ್ನುವ ಮಾರ್ಕಿಂಗ್ ಇರುವ ಒಂದು ಕೆಂಪು ಫೈಲ್ ಅನ್ನು ಮಿಸ್ ಮೇಖಲೆಗೆ ಕೊಡುತ್ತಿರುವುದು ಗಮನಾರ್ಹ. ಇಂತಹ ಫೈಲ್‌ಗಳು ಭಾರತ ಸರಕಾರದ ಅಮೂಲ್ಯ ಆಸ್ತಿ. ಫೋಟೋಗಳಲ್ಲಿ ಕಾಣಿಸುತ್ತಿರುವ ಫೈಲ್‌ನಂತಹುದು ಮಾರ್ಕೆಟ್‌ನಲ್ಲಿ ಸಿಗುವುದಿಲ್ಲ. ಕಾನೂನು ಪ್ರಕಾರ ಅಮೂಲ್ಯ ದಾಖಲೆಗಳು, ರಹಸ್ಯ ಪತ್ರಗಳಿಡುವುದಕ್ಕೆ ಭಾರತ ಸರ್ಕಾರ ಪ್ರತ್ಯೇಕವಾಗಿ ಈ ಫೈಲ್ ತಯಾರು ಮಾಡಿಕೊಳ್ಳುತ್ತದೆ. ರಕ್ಷಣಾ ಮಂತ್ರಿ ಸೇಫ್ಟಿ ಲಾಕರ್‌ನಲ್ಲಿರಬೇಕಾದ ಈ ಫೈಲ್ ಅನ್ನು ತಾರಕನಾಮ ಅವರು ಹೊರಗೆ ಏಕೆ ತಂದರೆಂಬುದು ಊಹಿಸಲಾಗದು. ತಮ್ಮ ಅಭಿಮಾನಕ್ಕೆ ಪಾತ್ರವಾದ ಒಬ್ಬ ಸುಂದರವಾದಯುವತಿ ಆಡಿಕೊಳ್ಳಲು ಉಪಯೋಗವಾಗುವ ಹೂ ಚೆಂಡೆಂದು ತಾರಕನಾಮರವರು ಆ ಫೈಲ್ ಅನ್ನು ಭಾವಿಸುತ್ತಾರೆಂದು ನಾವೆಂದುಕೊಳ್ಳುತ್ತಿಲ್ಲ.

ಸದ್ಯಕ್ಕೆ ಮಿಸ್ ಮೇಖಲೆ ಹೈದರಾಬಾದ್‌ನಲ್ಲಿನ ಒಂದು ಸಾಧಾರಣವಾದ ಅಪಾರ್ಟ್‌ಮೆಂಟಿನಲ್ಲಿನ ಹೊರ ಪ್ರಪಂಚಕ್ಕೆ ತಾನು ಯಾರೆಂದು ಗುರುತಿಸಲು

ಸಾಧ್ಯವಾಗದ ರೀತಿಯಲ್ಲಿ ಸಿಂಪಲ್ ಆಗಿ ವಾಸಿಸುತ್ತಿದ್ದಾಳೆ. ಈ ಯುವತಿಯು ಪೂರ್ವಾಪರಗಳೇನೆಂದು ನಮಗಿನ್ನೂ ತಿಳಿದು ಬಂದಿಲ್ಲ. ಕೆಲ ವರ್ಷಗಳ ಹಿಂದೆ ಇವಳು ಮಿಸ್ ಇಂಡಿಯಾ ಆಗಿ ಆಯ್ಕೆಯಾಗಿದ್ದಳೆಂದೂ, ಕೆಲವು ದೊಡ್ಡದೊಡ್ಡ ಆಡ್ ಏಜೆನ್ಸಿಗಳಲ್ಲಿ ಮಾಡೆಲ್ ಆಗಿ ಕೆಲಸ ಮಾಡಿದ್ದಾಳೆಂದೂ ತಿಳಿದುಬಂದಿದೆ.

* * * *

ಆ ವಾರ್ತೆ ಓದುವುದನ್ನು ಪೂರ್ತಿಗೊಳಿಸುತ್ತಲೇ ಮೇಖಲೆಗೆ ತಲೆ ತಿರುಗುತ್ತಿರುವಂತೆನಿಸಿತು. ಮಿಸ್ಟರ್ ಜಾನಿ! ಜಾನಿವಾಕರ್! ಜಾನಿವಾಕರ್‌ನೇ! ಮಿಸ್ಟರ್ ಜಾನಿ ಎನ್ನುವುದರಲ್ಲಿ ಎಂತಹುದೇ ಸಂದೇಹವಿಲ್ಲ. ಇದನ್ನು ಹೇಗೆ ? ಹೇಗೆ ಸಾಧಿಸಿದ ? ಡಾಲ್‌ಲೇಕ್‌ನಲ್ಲಿ ಅತ್ಯಂತ ರಹಸ್ಯವಾಗಿ ನಡೆದ ಸಮಾವೇಶವನ್ನು ಹೇಗೆ ಫೋಟೋ ತೆಗೆಯಬಲ್ಲವನಾದ ? ಅವಳಿಗೆ ಮೆದುಳು ಮರಗಟ್ಟುತ್ತಿರುವಂತೆನಿಸಿತು. ಅಲ್ಲಿಯವರೆಗೆ ತಾನಿರುವ ಪರಿಸ್ಥಿತಿಯನ್ನು ಪೂರ್ತಿಯಾಗಿ ಮರೆತುಬಿಟ್ಟಿದ್ದಳು. ಆ ಅಯೋಮಯ ಸ್ಥಿತಿಯಲ್ಲಿ ಕೂಡ ಅವಳಿಗೆ ಒಂದು ವಿಷಯ ಸ್ಪಷ್ಟವಾಗಿ ತಿಳಿಯುತ್ತಿತ್ತು. ಜಾನಿವಾಕರ್ ತನಗೆ ಊಹಿಸಿರದ ಪೆಟ್ಟು ಕೊಟ್ಟಿದ್ದಾನೆ. ಶ್ರೀನಗರದಿಂದ ಹೈದರಾಬಾದ್‌ಗೆ ತಿರುಗಿ ಹೋಗುವುದಾಗಿ ಹೇಳಿದ್ದರೂ ಅವನು ಆ ರೀತಿ ಮಾಡಿಲ್ಲ. ತಾನು ಮೂರ್ಖಳಂತೆ ಅದನ್ನು ನಂಬಿದೆ. ಜಾನಿವಾಕರ್ ಶ್ರೀನಗರ ಬಿಟ್ಟು ಹೋಗಿಲ್ಲ. ಆ ದಿನ ತಾನು ಅವನನ್ನು ಹೋಟೆಲ್‌ನಿಂದ ಹೊರ ಕಳುಹಿಸಿದ ನಂತರ ಕೂಡ ತನ್ನನ್ನು ಹಿಂಬಾಲಿಸುತ್ತಲೇ ಇದ್ದಾನೆ. ಈಗ........ ಈಗ ತಾನು ಏನಾದರೂ ಮಾಡಬೇಕು. ಈ ಸ್ಥಳದಿಂದ ಎಲ್ಲಿಗಾದರೂ ಹೊರಟು ಹೋಗಬೇಕು. ಇಲ್ಲದಿದ್ದರೆ ಪತ್ರಿಕೆಗಳವರು ತನ್ನನ್ನು ಮಿಡತೆಗಳ ದಂಡಿನಂತೆ ಮುತ್ತುತ್ತಾರೆ. ಪ್ರಶ್ನೆಗಳ ಮಳೆ ಸುರಿಸುತ್ತಾರೆ. ತನ್ನನ್ನು ಪೂರ್ತಿಯಾಗಿ ಬಯಲಿಗೆಳೆಯುತ್ತಾರೆ. ಓಡಿ ಹೋಗಬೇಕು! ಅಡಗಿಕೊಳ್ಳಬೇಕು! ಹೊರ ಪ್ರಪಂಚಕ್ಕೆ ಕನಿಷ್ಠ ಕೆಲ ಕಾಲವಾದರೂ ತನ್ನ ವಿಷಯ ತಿಳಿಯದಂತೆ ಅಡಗಿಕೊಳ್ಳಬೇಕು! ಎಲ್ಲಿಗೆ ? ಎಲ್ಲಿಗೆ ಹೋಗಬೇಕು ? ಇಷ್ಟು ಕಡಿಮೆ ಅವಧಿಯಲ್ಲಿ ಎಲ್ಲಿಗೆ ಹೋಗಿ ಅಡಗಿಕೊಳ್ಳಲು ಸಾಧ್ಯ ? ಹಠಾತ್ತನೆ ಅವಳ ಮನಸ್ಸಿನಲ್ಲಿ ಒಂದು ಆಲೋಚನೆ ಮಿಂಚಿನಂತೆ ಹೊಳೆಯಿತು. ದೇವ! ಹೌದು ದೇವ! ತನ್ನನ್ನು ಈ ಪರಿಸ್ಥಿತಿಯಿಂದ ಹೊರಗೊಯ್ಯಬಲ್ಲವನು ದೇವನೊಬ್ಬನೇ ! ಸಿಟಿಯಲ್ಲಿನ ನಾಲ್ಕು ಮೇಖಲೆಯ ಪ್ರದೇಶಗಳಲ್ಲಿ ದೇವನಿಗೆ ತಿಳಿಯದ ಸ್ಥಳವೆಂಬುದು ಯಾವುದೂ ಇಲ್ಲ. ಆದರೆ....! ಆದರೆ ಈಗ ದೇವ ಎಲ್ಲಿ ಸಿಗುತ್ತಾನೆ? ಆ ದೇವರು ಚರಾಚರ ಜಗತ್ಕೋಟಿಯಲ್ಲಿ ಎಲ್ಲಾ ಸ್ಥಳಗಳಲ್ಲಿರುತ್ತಾನೋ, ಇಲ್ಲವೋ ಈ ದೇವ ಮಾತ್ರ ದರಿದ್ರ

ನಾರಾಯಣರಿರುವ ಪ್ರತಿ ಸ್ಥಳದಲ್ಲಿ ಇರುತ್ತಾನೆ. ಎಲ್ಲಿಂದು ಹುಡುಕೋದು ?

"ಹಲೋ ಬಾಸ್" ಆ ಕರೆ ಕೇಳುತ್ತಲೇ ಮೇಖಲೆ ಬೆಚ್ಚಿಬಿದ್ದು ಅತ್ತ ತಿರುಗಿ ನೋಡಿದಳು. ತನ್ನ ಕಣ್ಣನ್ನು ತಾನೇ ನಂಬದೇ ಹೋದಳು. ದ್ರೌಪದಿ ನೆನೆಯುತ್ತಲೇ ಪ್ರತ್ಯಕ್ಷನಾದ ಶ್ರೀಕೃಷ್ಣ ಪರಮಾತ್ಮನಂತೆ ದೇವ ಎದುರಿಗೆ ನಿಂತಿದ್ದ. ಆ ಕ್ಷಣಗಳಲ್ಲಿ ಅವಳ ಕಣ್ಣುಗಳಿಗೆ ಅವನು ನಿಜವಾಗಿಯೂ ದೇವರಂತೆ ಕಾಣಿಸಿದ. ಸಂಭ್ರಮಾಶ್ಚರ್ಯಗಳಿಂದ ತಬ್ಬಿಬ್ಬಾಗುತ್ತಾ ತಟಕ್ಕನೆ ಹೋಗಿ ಅವನ ಕೈ ಹಿಡಿದುಕೊಂಡಳು. "ದೇವ! ಬಾ ಹೋಗೋಣ! ತಕ್ಷಣ ನಾವಿಲ್ಲಿಂದ ಹೊರಬೀಳಬೇಕು!"

ತನ್ನ ಸಹಜ ಧೋರಣೆಯಲ್ಲಿ ಅವಳನ್ನು ನೋಡಿ ನಗುತ್ತಾ ನಿಂತಿದ್ದ ದೇವ ಅವಳನ್ನು ವಿಚಿತ್ರವಾಗಿ ನೋಡಿದ. "ಎಲ್ಲಿಗೆ ಬಾಸ್ ?"

"ಹೇಳೋದಿಕ್ಕೆ ಟೈಂ ಇಲ್ಲ. ಒಂದು ಕ್ಷಣ ಕೂಡ ವೇಸ್ಟ್ ಮಾಡೋದಿಕ್ಕೆ ಸಾಧ್ಯವಿಲ್ಲ. ಬಾ ಹೋಗೋಣ !"

ದೇವ ಕೊಂಚವೂ ಎದುರು ಹೇಳಲಿಲ್ಲ. ಅವನ ತುಟಿಗಳ ಮೇಲಿನ ಹುಚ್ಚು ಮುಗುಳ್ನಗೆ ಚದುರಲೂ ಇಲ್ಲ. "ಓ.ಕೆ. ! ನಡಿ ಬಾಸ್ !" ಎಂದ.

## ೨೪

"ಮೇ ಐ ಕಮಿನ್ ?" ಯಾರೋ ಬಾಗಿಲು ತಟ್ಟುತ್ತಿರುವ ಶಬ್ದ ಕೇಳಿಸಿತು.

ಆ ಧ್ವನಿ ಕೇಳಿದೊಡನೆಯೇ ಫ್ಲಾಸ್ಕಿನಿಂದ ಕಪ್‌ನೊಳಗೆ ಕಾಫಿ ಬಗ್ಗಿಸಿ ಕೊಂಡು ಕುಡಿಯುಲಿದ್ದ ಮೇಖಲೆ ಬೆಚ್ಚಿಬಿದ್ದಳು.

ಪಕ್ಕದಲ್ಲಿಯೇ ಕುಳಿತುಕೊಂಡು ತನ್ನ ಡೈರಿಯಲ್ಲಿ ಏನೋ ಬರೆದು ಕೊಳ್ಳುತ್ತಾ, ತನ್ನಲ್ಲಿ ತಾನೇ ಏನೋ ಗೊಣಗಿಕೊಳ್ಳುತ್ತಿದ್ದ ದೇವನನ್ನು ನೋಡಿ ದಳು. "ದೇವ! ಹೋಗಿ ಬಾಗಿಲು ತೆರೆ !"

ದೇವ ತನ್ನ ಡೈರಿಯಿಂದ ತಲೆ ಮೇಲೆತ್ತಿ ನೋಡಿ ಮೇಲೆ-ಕೆಳಗೆ ತಮಾಷೆಯಾಗಿ ತಲೆಯಾಡಿಸಿದ. "ಆಗ್ಲಿ ಬಾಸ್ !"

ಅವನು ಹೋಗಿ ಬಾಗಿಲು ತೆರೆಯುತ್ತಿದ್ದರೆ ಮೇಖಲೆಯ ಮುಖ ಕಾಠಿಣ್ಯದಿಂದ ಬಿಗಿದುಕೊಂಡಿತು.

ಬಾಗಿಲು ತೆರೆದುಕೊಳ್ಳುತ್ತಲೇ ಜಾನಿವಾಕರ್ ಒಳಗಡಿಯಿಟ್ಟ. "ಹಲೋ! ಆರೋಗ್ಯ ಹೇಗಿದೆ?" ನಗುತ್ತಾ ಕೇಳಿದ. ಅವನ ಕೈಗಳಲ್ಲಿ ದೊಡ್ಡ ಬೊಕೇ ಇತ್ತು .

"ಇಲ್ಲಿಗೆ ಹೇಗೆ ಬಂದೆ? ನಾನಿಲ್ಲಿದೀನೀಂತ ನಿನಗೆ ಹೇಗೆ ಗೊತ್ತು?" ತೀಕ್ಷ್ಣವಾಗಿ ನೋಡುತ್ತಾ ಕೇಳಿದಳು.

"ಅದೇನು ಪ್ರಶ್ನೆ?" ನಗುತ್ತಲೇ ನುಡಿದ. "ತಿಳಿದುಕೊಳ್ಳುವುದು ನನ್ನ ವೃತ್ತಿ! ತಿಳಿದುಕೊಂಡೆ! ಅಷ್ಟೇ!"

ಮೇಖಲೆ ಮಾತಾಡಲಿಲ್ಲ. ಅವನನ್ನೇ ದುರುದುರು ನೋಡಿದಳು. ಅವನು ಎರಡು ಹೆಜ್ಜೆ ಮುಂದಿಟ್ಟು ಒಂದು ಸಲ ಆ ಗುಡಿಸಲನ್ನು ಪರೀಕ್ಷಿಸಿ ನೋಡಿದ.

"ಊಂ! ಗುಡಿಸಲು ಚಿಕ್ಕದಾದರೂ ಶುಭ್ರವಾಗಿದೆ! ನಿನ್ನನ್ನಿಲ್ಲಿಗೆ ಕರೆ ತಂದವರು ಯಾರು? ಈ ದೇವನೇನಾ?"

ಮೇಖಲೆ ಆಗಲೂ ಮಾತಾಡಲಿಲ್ಲ. ಜಾನಿವಾಕರ್ ಭುಜ ಕುಣಿಸಿದ. "ಪಾಪ! ಇಷ್ಟು ಚಿಕ್ಕ ಗುಡಿಸಲಲ್ಲಿರೋದಿಕ್ಕೆ ತೊಂದರೆಯಾಗ್ತಿಲ್ವಾ? ಬೈ ದಿ ವೇ.... ಮೈ ಕಂಡೊಲೆನ್ಸ್‌ಸ್!" ಗಾಂಭೀರ್ಯದಿಂದ ಕೈಯಲ್ಲಿನ ಬೊಕೇಯನ್ನು ಅವಳಿಗೆ ಕೊಡಲು ಹೋದ.

ಮೇಖಲೆ ತಟಕ್ಕನೆದ್ದು ಆ ಬೊಕೇಯನ್ನು ಕಸಿದುಕೊಂಡು ದೂರ ಎಸೆಯುತ್ತಾ ಅವನ ಕೆನ್ನೆಗೆ ಬಾರಿಸಿದಳು. "ನಿನಗೇನು ಬೇಕು? ಯಾಕೆ ಹೀಗೆ ನನ್ನ ಬೆನ್ನು ಬಿದ್ದಿದ್ದೀಯಾ?"

ಜಾನಿವಾಕರ್ ಅವಳ ಕಣ್ಣುಗಳನ್ನೇ ನೇರವಾಗಿ ನೋಡಿದ. ಅವಳು ಕೊಟ್ಟ ಏಟಿಗೆ ಅವನ ಕೆಂಪು ಚರ್ಮದ ಮೇಲೆ ಐದೂ ಬೆರಳುಗಳ ಬಾಸುಂಡೆ ಮೂಡಿತು. ಅವನು ಅದೇನನ್ನೂ ಹಚ್ಚಿಕೊಳ್ಳಲಿಲ್ಲ. "ತಾರಕನಾವು ನಿನಗೆ ಕೊಟ್ಟ ಸೀಕ್ರೆಟ್ ಫೈಲ್‌ನಲ್ಲಿ ಏನಿತ್ತು?" ನೇರವಾಗಿ ಕೇಳಿದ.

"ಅದು ನಿನಗನಗತ್ಯ!"

"ಇಲ್ಲ! ನನಗೆ ತುಂಬಾ ಅಗತ್ಯ! ಆ ಫೈಲ್‌ನಲ್ಲಿ ಏನಿದೆ? ನೀನು ಆ ಫೈಲನ್ನೇನು ಮಾಡಿದೆ?"

ಮೇಖಲೆ ಮಾತಾಡಲಿಲ್ಲ. ತನಗೆ ಸಂಬಂಧವಿಲ್ಲದಂತೆ ತಲೆಯನ್ನು ಮತ್ತೊಂದು ಕಡೆ ತಿರುಗಿಸಿದಳು. ಜಾನಿವಾಕರ್ ಸಹನೆ ಕಳೆದುಕೊಂಡ. ಥಟ್ಟನೆ ಭುಜಗಳನ್ನು ಹಿಡಿದುಕೊಂಡು ಅಲುಗಾಡಿಸುತ್ತಾ ಮುಖದಲ್ಲಿ ಮುಖ ಇಟ್ಟು ನೋಡಿದ. "ಪ್ಲೀಸ್ ಮೇಖಲೆ! ಆ ಫೈಲ್ ಹೊರಗೆ ಹೋಯಿತೆಂದರೆ ತುಂಬಾ ಅಪಾಯ!"

"ಯಾರಿಗೆ ಅಪಾಯ?"

"ನಿನ್ನ ದೇಶಕ್ಕೆ!"

"ಐ ಡೋಂಟ್ ಕೇರ್! ಅದೂ ಅಲ್ದೆ ನನ್ನ ಸಂಕಲ್ಪ ಏನೆಂದು ನಿನಗೆ

ಮೊದಲೇ ಹೇಳಿದ್ದೀನಿ. ಆಗ ಅರ್ಥವಾಗಿರಲಿಲ್ವಾ?"

"ಅರ್ಥವಾಗಿತ್ತಾದರೂ ಆ ಸಂಕಲ್ಪಕ್ಕೆ ಕಾರಣ ಏನೆಂದು ಊಹಿಸಲಾಗ್ತಿಲ್ಲ."

ಅವಳು ಹಠಾತ್ತನೆ ಬುಸುಗುಟ್ಟಿದಳು. "ಕಾರಣ ಬೇಕಾ? ಬಾ ತೋರಿಸ್ತೀನಿ!" ಅವನ ಕೈ ಹಿಡಿದು ಸರಸರನೆ ಆ ಗುಡಿಸಲಲ್ಲಿ ಒಂದು ಮೂಲೆಯಲ್ಲಿದ್ದ ಸೂಟ್‌ಕೇಸ್‌ನ ಹತ್ತಿರ ಎಳೆದೊಯ್ದಳು. ಅದು ಅವಳು ತನ್ನ ಅಪಾರ್ಟ್‌ಮೆಂಟ್ ಬಿಟ್ಟು ಜೀವನೊಂದಿಗೆ ಬರುತ್ತಿದ್ದಾಗ ತನ್ನೊಂದಿಗೆ ತಂದುಕೊಂಡ ಸೂಟ್‌ಕೇಸ್. ಅವಳು ಅದರೊಳಗಿಂದ ಒಂದು ಆಲ್ಬಮ್ ಹೊರತೆಗೆದು, ಅವನ ಮುಖದ ಕಡೆ ಎಸೆದಳು. "ಕಾರಣ ಬೇಕಾ? ಅದೇ ಕಾರಣ! ತೆರೆದು ನೋಡು!"

ಜಾನಿವಾಕರ್ ಅವಳ ಕಡೆ ವಿಚಿತ್ರವಾಗಿ ನೋಡುತ್ತಾ ಆ ಆಲ್ಬಮ್ ತೆರೆದ. ಅವಳ ಕಣ್ಣುಗಳು ಅಗ್ನಿಗೋಳಗಳಂತೆ ಹೊಳೆಯುತ್ತಿದ್ದುವು. "ಮೊದಲು ಕಾಣಿಸ್ತಿದಾನಲ್ಲ, ಮಿಲಿಟರಿ ಡ್ರೆಸ್ ಹಾಕ್ಕೊಂಡು-ಮೇಜರ್ ರಘುನಂದನ್, ಆತನೇ ನನ್ನ ತಂದೆ!" ಜಾನಿವಾಕರ್ ಷಾಕ್ ಹೊಡೆಸಿಕೊಂಡವನಂತೆ ನೋಡಿದ.

"ಮೇಜರ್.... ಮೇಜರ್ ರಘುನಂದನ್! ನೀನು ಮೇಜರ್ ರಘುನಂದನ್‌ನ ಮಗಳೆ?" ನಂಬಲಾಗದಂತೆ ಕೇಳಿದ.

"ಯಾಕೆ? ನೀನು ಮೇಜರ್ ರಘುನಂದನ್‌ನನ್ನು ಬಲ್ಲೆಯಾ?"

"ಗೊತ್ತು! 1971ರ ಯುದ್ಧದಲ್ಲಿ ಈ ದೇಶದ ಪರವಾಗಿ ಅದ್ಭುತವಾದ ಧೈರ್ಯ, ಸಾಹಸ ಪ್ರದರ್ಶಿಸಿದ ವ್ಯಕ್ತಿಯಾಗಿ ಗೊತ್ತು! ಮಹಾವೀರ ಚಕ್ರ ಬಿರುದು ಪಡೆದ ಸೈನಿಕನಾಗಿ ಗೊತ್ತು! ಅಂತಹ ವ್ಯಕ್ತಿಯ ಮಗಳಾ ನೀನು?"

"ಆಶ್ಚರ್ಯವಾಗಿದ್ಯಾ? ಹೌದು. ನಾನು ಮೇಜರ್ ರಘುನಂದನ್‌ನ ಮಗಳೇ! ಮಹಾವೀರ ಚಕ್ರ ಬಿರುದು ಪಡೆದ ಮೇಜರ್ ರಘುನಂದನ್‌ನ ಮಗಳೇ! ಮಹಾವೀರ ಚಕ್ರ....! ಅಂತಹ ಮಹಾ ಸೈನಿಕನಿಗೆ ಈ ದೇಶ ಏನು ಕೊಟ್ಟಿದೆ? ಯುದ್ಧದಲ್ಲಿ ವಿಕಲಾಂಗನಾಗಿ ಬಂದಿದ್ದಕ್ಕೆ ಕೊರಳಿಗೆ ಒಂದು ಮೆಡಲ್. ನಂತರ ಆತನ ಜೀವನ ಹೇಗೆ ಕೊನೆಗೊಂಡಿತೋ ನಿನಗೆ ಗೊತ್ತಾ? ದುರ್ಭರ ದಾರಿದ್ರ್ಯದಲ್ಲಿ, ರೋಗದಿಂದ ನರಳಿ, ನರಳಿ ಸತ್ತ! ಏನು ನೋಡಿ ನಾನು ಈ ದೇಶವನ್ನು ಗೌರವಿಸಲಿ?

"ಅದರಲ್ಲಿಯೇ ಮತ್ತೊಂದು ಫೋಟೋ ನೋಡು! ನಮ್ಮ ತಾಯಿ ಸ್ವರಾಜ್ಯಲಕ್ಷ್ಮಿ! ಪರಮ ಕಾರುಣ್ಯ ಮೂರ್ತಿ! ಇತರರಿಗೆ ಸೇವೆ ಮಾಡುವುದರಲ್ಲಿಯೇ ಜೀವನದ ಪರಮಾರ್ಥವಿದೆಯೆಂದುಕೊಂಡ ಉತ್ತಮ ನರ್ಸ್! ಆಕೆಗೆ ಏನಾಯ್ತು ಗೊತಾ? ಪ್ರಾಣ ಹೋಗುವಾಗ ತನಗೆ ಸೇವೆ ಮಾಡು

ವವರಿಲ್ಲದೆ ಕನಿಷ್ಠ ಬಾಯಿಗೆ ಎರಡು ತೊಟ್ಟು ನೀರು ಬಿಡುವವರಿಲ್ಲದೆ ಅತಿ ದೀನವಾದ ಪರಿಸ್ಥಿತಿಯಲ್ಲಿ ಸತ್ತಳು!

"ಅದರ ಪಕ್ಕದಲ್ಲಿರುವ ಫೋಟೋ ನೋಡು-ನನ್ನ ತಮ್ಮ ಮಹೇಶ್! ಎಂಟು ವರ್ಷದ ಹುಡುಗ ಹೇಗೆ ಸತ್ತನೆಂದು ಗೊತ್ತಾ? ಕರುಣೆ, ದಯೆ-ದಾಕ್ಷಿಣ್ಯಗಳಿಲ್ಲದ ಕಟುಕರು ಅವನನ್ನು ಗೋಡೆಯ ಮೇಲಿನಿಂದ ಚೆಂಡಿನಂತೆ ಎಸೆದಾಗ ಒಂದು ಡ್ರೈನೇಜ್‌ನಲ್ಲಿ ಬಿದ್ದು ದುರ್ಮರಣಕ್ಕೀಡಾದ! ಇನ್ನೊಂದು ಫೋಟೋ ನೋಡು – ಅದು ನಾನು! ಹದಿನೈದು ವರ್ಷದ ವಯಸ್ಸಿನ ನಾನು! ಅಂದಿನ ಆ ಮುಗ್ಧ ಮೇಖಲೆ ಇಂದಿನ ಈ ಸಮ್ಮೋಹನಾಸ್ತ್ರವಾಗಿ ಹೇಗೆ ಮಾರ್ಪಟ್ಟಳು? ಆ ಫೋಟೋದಲ್ಲಿನ ಕಣ್ಣುಗಳನ್ನು ನೋಡು! ಆ ಕಣ್ಣುಗಳಲ್ಲಿ ಎಲ್ಲಿಯಾದರೂ ಕಲ್ಮಶವೆನ್ನುವುದು ಇದೆಯಾ? ಆ ಹುಡುಗಿಯೇ ಇಂದು ಪ್ರಪಂಚದಲ್ಲಿಯೇ ಅತ್ಯಂತ ದುಬಾರಿಯಾದ ಕಾಲ್‌ಗರ್ಲ್ ಎಂದರೆ ನಂಬಬಲ್ಲೆಯಾ? ನಂಬಲಾರೆ! ಆದರೂ ಇದು ನಿಜ!"

ಜಾನಿವಾಕರ್ ನಿಧಾನವಾಗಿ ಆಲ್ಬಮ್ ಮುಚ್ಚಿದ. ಅವನ ಕಣ್ಣುಗಳು ಅವಳನ್ನು ಮರುಕದಿಂದ ನೋಡಿದುವು. "ಅರ್ಥವಾಯ್ತು! ನಿನಗೂ ನಿನ್ನ ಕುಟುಂಬಕ್ಕೂ ತುಂಬಾ ಅನ್ಯಾಯವಾಗಿದೆ. ಅಷ್ಟು ಮಾತ್ರಕ್ಕೆ ನಿನ್ನ ದೇಶದ ಮೇಲೆಯೇ ಹಗೆ ಇಟ್ಟುಕೊಳ್ಳುವುದು ನ್ಯಾಯವೆ?"

"ನ್ಯಾಯ! ನ್ಯಾಯ-ಅನ್ಯಾಯ ವಿಚಾರಿಸುವಷ್ಟು ತಾಳ್ಮೆಯಾಗಲಿ, ಆಲೋಚನೆಯಾಗಲಿ ಈ ದೇಶ ನನಗೆ ಕೊಟ್ಟಿದೆಯಾ? ಕನಿಷ್ಠ ನನಗೆ ನ್ಯಾಯ ದೊರಕಿತೋ, ಇಲ್ಲವೋ ಎಂದು ವಿಚಾರಿಸಿದೆಯೆ? ಇಲ್ವೇ? ನಾನ್ಯಾಕೆ ಈ ದೇಶವನ್ನು ಕ್ಷಮಿಸಬೇಕು?"

"ಮೇಖಲೆ....!"

"ಡೋಂಟಾಕ್!! ನೀನೇನೂ ಮಾತಾಡ್ಬೇಡ! ನಾನು ಮಾತಾಡ್ತೀನಿ! ಇಷ್ಟು ಕಾಲ ನನ್ನ ಹೃದಯದಲ್ಲಿ ತುಂಬಿಕೊಂಡ ವಿಷವನ್ನೆಲ್ಲಾ ಈ ದಿನ ಕಕ್ತೀನಿ! 'ನೀನು ಕಾಲ್‌ಗರ್ಲ್ ಆಗಿ ಹೇಗೆ ಬದಲಾದೆ' ಎಂದು ಒಂದು ಸಲ ಕೇಳಿದೆಯಲ್ಲ! ಕಿವಿಗೊಟ್ಟು ಕೇಳು! ಹೇಳ್ತೀನಿ.... ಎಲ್ಲಾ ಹೇಳ್ತೀನಿ. ನಾನು ಹೀಗಾಗುವುದಕ್ಕೆ ಕಾರಣ ಈ ದೇಶವೇ! ನಾನೇ ಅಲ್ಲ! ನನ್ನಂತಹ ಪತಿತೆಯರೂ, ಭ್ರಷ್ಟರೂ ತಮ್ಮ ಜೀವನಗಳನ್ನು ನಾಶ ಮಾಡಿಕೊಳ್ಳಲು ಕಾರಣ ಈ ದೇಶವೇ. ಈ ದೇಶದಲ್ಲಿ ನೀತಿಯಿಲ್ಲ! ನ್ಯಾಯವಿಲ್ಲ! ಇರುವುದೆಲ್ಲಾ ಸ್ವಾರ್ಥ! ಭಯಂಕರವಾದ ಸ್ವಾರ್ಥ! ಈ ದೇಶ ಕೊಳೆತುಹೋಗಿದೆ!

"ನನ್ನ ತಂದೆ ತನ್ನ ರೋಗ ಗುಣಪಡಿಸಿಕೊಳ್ಳಲು ಸರ್ಕಾರವನ್ನು

ಸಹಾಯ ಕೇಳಿದ. ಆತ ಕೇಳಿದ ಸಹಾಯ ಲಭಿಸಲಿಲ್ಲ. ಪರಿಸ್ಥಿತಿ ವಿಷಮಿಸಿ ಆತ ಸತ್ತು ಹೋದ! ಆ ನಂತರ ನನ್ನ ತಾಯಿಯ ಪರಿಸ್ಥಿತಿಯೊಂದಿಗೆ ನಮ್ಮ ಕುಟುಂಬದ ಪರಿಸ್ಥಿತಿ ಕ್ಷೀಣಿಸಿಹೋಯ್ತು! "ಒಂದು ದಿನ.... ಆರೋಗ್ಯ ಸರಿಯಾಗಿಲ್ಲದ ನಮ್ಮ ತಾಯಿಗೆ ಫಿಟ್ಸ್ ಬಂತು. ಸಹಾಯಕ್ಕೋಸ್ಕರ ಒಬ್ಬ ಸಮಾಜ ಸೇವಕನ ಹತ್ತಿರ ಓಡಿದೆ. ಅವನ ಹೆಸರು ದಯಾಕರರಾವ್. ಹೋಗುತ್ತಲೇ ಅವನ ಕಣ್ಣು ನನ್ನ ಮೇಲೆ ಬಿತ್ತು. ನನ್ನನ್ನು ಗೂಂಡಾಗಳ ಕೈಯಿಂದ ಹಿಡಿಸಿ ಪಾರ್ಟಿ ಟಿಕೆಟ್‌ಗೋಸ್ಕರ ಒಬ್ಬ ಅರವತ್ತು ವರ್ಷದ ಮುದುಕನಿಗೆ ಎರೆಯಾಗಿ ಹಾಕಿದ. ನನ್ನ ಜೀವನದಲ್ಲಿ ನನ್ನನ್ನು ಮೊಟ್ಟಮೊದಲು ತಲೆ ಹಿಡಿದ ವ್ಯಕ್ತಿ ದಯಾಕರರಾವ್. ಗೂಂಡಾಗಳು ನನ್ನನ್ನು ಎತ್ತಿಕೊಂಡು ಹೋಗುತ್ತಿದ್ದರೆ ನನ್ನ ತಮ್ಮ ಅಡ್ಡಿಪಡಿಸಿದ. ಅವರು ಅವನನ್ನು ಎತ್ತಿ ಗೋಡೆಯ ಮೇಲಿನಿಂದ ಅತ್ತ ಎಸೆದರು. ಒಂದು ಡ್ರೈನೇಜ್‌ನಲ್ಲಿ ತಲೆಕೆಳಗಾಗಿ ಬಿದ್ದ ಅವನನ್ನು ಹೊರ ತೆಗೆಯುವವರಿಲ್ಲದೆ ವಿಲಿ ವಿಲಿ ಒದ್ದಾಡಿ, ಒದ್ದಾಡಿ ಪ್ರಾಣಬಿಟ್ಟ. ಜ್ಞಾನವಿಲ್ಲದ ನನ್ನನ್ನು ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲಿ ಒಯ್ದು ಒಬ್ಬ ಪಾರ್ಟಿ ಸೆಕ್ರೆಟರಿಯ ಮುಂದೆ ಹಾಕಿದರು. ಆ ಅರವತ್ತು ವರ್ಷದ ಮುದುಕ ಒಬ್ಬ ಭಯಂಕರ ಸ್ಯಾಡಿಸ್ಟ್. ನನಗೆ ಜ್ಞಾನಬಂದು ಕಣ್ಣು ತೆರೆದು ನೋಡಿದಾಗ ಅವನ ಕೋಣೆಯಲ್ಲಿ ನನ್ನನ್ನು ಮಂಚಕ್ಕೆ ಕಟ್ಟಿ ಹಾಕಿದ್ದರು. ನನಗೆ ಜ್ಞಾನ ಬರುವವರೆಗೂ ಅವನು ನನ್ನನ್ನು ಮುಟ್ಟಲಿಲ್ಲ. ಜ್ಞಾನ ಬಂದಮೇಲೆ ಪಶುವಿನಂತೆ ಮೇಲೆ ಬಿದ್ದ. ಅಲುಗಾಡಲೂ ಸಾಧ್ಯವಿರಲಿಲ್ಲ ಕೈ–ಕಾಲುಗಳು ನನ್ನ ಸ್ವಾಧೀನದಲ್ಲಿರಲಿಲ್ಲ. ಕಿರುಚಿದೆ. ನನ್ನನ್ನು ಬಿಟ್ಟುಬಿಡೆಂದು ಅಂಗಲಾಚಿ ಬೇಡಿಕೊಂಡೆ. ಹೃದಯ ಬಿರಿಯುವಂತೆ ಅತ್ತೆ. ರಕ್ಷಿಸುವವರು ಯಾರೂ ಇರಲಿಲ್ಲ. ಅಲ್ಲಿಯೇ, ಆ ಕೋಣೆಯಲ್ಲಿಯೇ ನನ್ನ ಜೀವನ ಶಾಶ್ವತವಾಗಿ ಸಮಾಧಿಯಾಗಿಬಿಟ್ಟಿತು. ಹಾಗೆ ಮಂಚಕ್ಕೆ ಕಟ್ಟಿ ಹಾಕಿಯೇ ನನ್ನನ್ನು ವಿವಸ್ತ್ರಗೊಳಿಸಿ ರಾಕ್ಷಸ ರೀತಿಯಲ್ಲಿ ಕೆಡಿಸಿದ. ಆ ನಂತರ ನನ್ನನ್ನು ಪಕ್ಕದ ಕೋಣೆಯೊಳಕ್ಕೆ ಎಳೆದುಕೊಂಡು ಹೋದರು. ಈ ದಿನ ರಕ್ಷಣಾಮಂತ್ರಿಯಾಗಿರುವ ತಾರಕನಾಮ ಆ ದಿನ ತೀರಾ ಸಾಮಾನ್ಯ ವ್ಯಕ್ತಿ. ಆ ಪಾರ್ಟಿ ಸೆಕ್ರೆಟರಿಯ ಮೊಣಕೈ ಕೆಳಗಿನ ನೀರು ಕುಡಿಯುತ್ತಿದ್ದವನು. ಈ ದಿನ ದೇಶವನ್ನು ರಕ್ಷಿಸುವ ಪದವಿಯಲ್ಲಿರುವವನು, ಆ ದಿನ ದೀನವಾಗಿ ಆಕ್ರೋಶಿಸುತ್ತಿದ್ದ ಒಬ್ಬ ನಿಸ್ಸಹಾಯಕಳಾದ ಹೆಣ್ಣನ್ನು ರಕ್ಷಿಸುವುದನ್ನು ಬಿಟ್ಟು ಆ ದಿನದ ಮಾನಹರಣ ಪರ್ವದಲ್ಲಿ ತಾನೂ ಕೂಡ ಪಾಲುದಾರನಾಗಿದ್ದ. ಅವನ ನಂತರ ಆ ಗೆಸ್ಟ್ ಹೌಸ್‌ನಲ್ಲಿದ್ದ ದೊಡ್ಡ ಮನುಷ್ಯರೆಲ್ಲರೂ ಒಬ್ಬರಾದ ನಂತರ ಒಬ್ಬರು

ನನ್ನ ಶರೀರದೊಂದಿಗೆ ಆಡಿ ತಮ್ಮ ಕಾಮ ತೃಷೆಯನ್ನು ಇಂಗಿಸಿಕೊಂಡರು. ಆ ಕರಾಳ ರಾತ್ರಿಯಂದು ಎಷ್ಟು ಜನ ನನ್ನ ಶರೀರ ಅನುಭವಿಸಿದರೋ ನನಗೇ ತಿಳಿಯದು. ಬೆಳಗಿನವರೆಗೂ ಆ ಘೋರ ನರಕ ಅನುಭವಿಸುತ್ತಲೇ ಇದ್ದೆ. ಬೆಳಿಗ್ಗೆ ಆ ರಾಕ್ಷಸ ಕಬಂಧ ಹಸ್ತಗಳಲ್ಲಿ ನಲುಗಿ, ಬಾಡಿಹೋದ ನನ್ನನ್ನು ಮತ್ತೆ ದಯಾಕರರಾವ್‌ನ ಬಂಗಲೆಗೆ ಕರೆದೊಯ್ದರು. ಆ ದಾರುಣಕಾಂಡ ಅಲ್ಲಿ ಮತ್ತೆ ಪ್ರಾರಂಭವಾಯ್ತು. ದಯಾಕರರಾವ್‌ನೊಂದಿಗೆ ಅವನ ನಾಲ್ವರು ಗೂಂಡಾಗಳೂ ನನ್ನನ್ನು ಅನುಭವಿಸಿದರು. ಪ್ರಾಣ ಇದೆಯೋ, ಹೋಗಿದೆಯೋ ಎಂದು ಕೂಡ ನೋಡದಂತೆ ಪಿಶಾಚಿಗಳಂತೆ ವರ್ತಿಸಿದರು. ದುರದೃಷ್ಟವಶಾತ್ ನನ್ನ ಪ್ರಾಣ ಹೋಗಲಿಲ್ಲ. ನನ್ನ ಶರೀರವೆಲ್ಲಾ ನಾಯಿ ಹರಿದ ಬಾಳೆಯೆಲೆ ಯಂತಾಗಿತ್ತು. ನನಗೆ ಅಲುಗಾಡುವ ಶಕ್ತಿ ಕೂಡಾ ಇರಲಿಲ್ಲ. ಜ್ಞಾನ ಬಂದ ನಂತರ ದಯಾಕರರಾವ್ ನನಗೆ ದುಡ್ಡು ಕೊಡಲು ಬಂದ. ಆ ಸ್ಥಿತಿಯಲ್ಲಿಯೂ ಅಂತಹ ಶಕ್ತಿ ನನಗೆ ಹೇಗೆ ಬಂತೋ ತಿಳಿಯದು. ಅವನ ಮುಖಕ್ಕೆ ಉಗುಳಿದೆ. ಸಮಾಜ ಸೇವಕನೆಂದು ಹೇಳಿಕೊಳ್ಳುತ್ತಾ ತಿರುಗುವ ಆ ಗೋಮುಖ ವ್ಯಾಘ್ರ ಕೊಡಲು ಬಂದ ದುಡ್ಡನ್ನು ಅವನ ಮುಖಕ್ಕೆ ಎಸೆದೆ. ನಂತರ ಅವರು ನನ್ನನ್ನು ಕಾರಿನಲ್ಲಿ ಕರೆದೊಯ್ದು ಆ ಧಾರಾಕಾರ ಮಳೆಯಲ್ಲಿ ಒಂದು ನಿರ್ಮಾನುಷ್ಯ ಪ್ರದೇಶದಲ್ಲಿ ಬಿಸುಡಿ ಹೋದರು. ಅಲ್ಲಿ ಎಷ್ಟು ಹೊತ್ತು ಜ್ಞಾನವಿಲ್ಲದೆ ಬಿದ್ದಿದ್ದೆನೋ ನನಗೇ ತಿಳಿಯದು. ಜ್ಞಾನ ಬರುವ ವೇಳೆಗೆ ಮಳೆ ಇನ್ನೂ ಸುರಿಯುತ್ತಲೇ ಇತ್ತು. ನನ್ನ ಮೈಯೆಲ್ಲಾ ಕೆಸರು! ನನ್ನ ಶರೀರದ ತುಂಬಾ ನರಕ ಯಾತನೆ! ಕಣ್ಣು ತೆರೆಯುತ್ತಲೇ ನನಗೆ ಮೊಟ್ಟ ಮೊದಲು ನೆನಪಾ ದುದು ನನ್ನ ತಾಯಿ! ನಾನು ಆ ಕ್ರೂರಿಗಳ ಕೈಯಲ್ಲಿ ಸಿಕ್ಕಿಬೀಳುವ ಮೊದಲೇ ಫಿಟ್ಸ್ ಬಂದು ಬಿದ್ದ ನನ್ನ ತಾಯಿ ಏನಾದಳೋ ತಿಳಿಯದು. ನನ್ನ ತಮ್ಮನನ್ನು ಆ ದುರ್ಮಾರ್ಗರು ಏನು ಮಾಡಿದರೊ ತಿಳಿಯದು. ತಾಯಿಯ ನೆನಪಾದೊಡ ನೆಯೇ ಶರೀರದಲ್ಲಿ ಉಳಿದಿದ್ದ ಶಕ್ತಿಯನ್ನೆಲ್ಲಾ ಒಗ್ಗೂಡಿಸಿಕೊಂಡು ನಮ್ಮ ಮನೆಯ ಕಡೆ ಓಡಿದೆ. ಅವರು ನನ್ನನ್ನು ಒಯ್ದು ಹಾಕಿದ ಪ್ರದೇಶ ಹೆಚ್ಚು ದೂರದಲ್ಲಿದ್ದಿಲ್ಲ. ನಾನು ಮನೆ ತಲುಪಲು ಹೆಚ್ಚು ಹೊತ್ತು ಹಿಡಿಯಲಿಲ್ಲ.

"ಮನೆ ತಲುಪಿದೊಡನೆಯೇ ಎದುರಿಗೆ ಕಾಣಿಸಿದ ದೃಶ್ಯ ತನ್ನನ್ನು ತಡೆದು ನಿಲ್ಲಿಸಿತು. ಎದುರಿಗೆ ಅಮ್ಮ! ಪ್ರಾಣ ಹೋಗಿ ಶವವಾಗಿದ್ದ ನಮ್ಮ ತಾಯಿ! ನೆರೆ-ಹೊರೆಯವರು ನಮ್ಮ ತಾಯಿಯ ಶವವನ್ನು ತಂದು ಬೀದಿ ಬಾಗಿಲ ಹತ್ತಿರ ಇಟ್ಟಿದ್ದರು! ನನಗೆ ಜೋರಾಗಿ ಕಿರುಚಬೇಕೆನಿಸಿತು ಕಿರುಚಲಿಲ್ಲ. ಅಮ್ಮಾ ಎಂದು ಅಳಬೇಕೆನಿಸಿತು ಅಳಲಿಲ್ಲ. ಕಿರುಚುವ ಶಕ್ತಿ, ಅಳುವ ಶಕ್ತಿ ನನ್ನಲ್ಲಿ

ಆ ಮುಂಚಿನ ರಾತ್ರಿಯೇ ನಶಿಸಿಹೋಗಿತ್ತು. ಕಣ್ಣರಳಿಸಿ ಕಲ್ಲಿನಂತೆ ನೋಡುತ್ತಾ ನಿಂತುಬಿಟ್ಟೆ. ಮೈಯೆಲ್ಲಾ ಕೆಸರು ಮೆತ್ತಿ ದಯನೀಯವಾದ ಸ್ಥಿತಿಯಲ್ಲಿದ್ದ ನನ್ನನ್ನು ಅಲ್ಲಿದ್ದವರ್ಯಾರೂ ಗುರುತು ಹಿಡಿಯಲಿಲ್ಲ. ಅಲ್ಲಿಯೇ ಹಾಗೇ ನಿಂತುಕೊಂಡು ಕನಸಿನಲ್ಲಿದ್ದವಳಂತೆ ಹಿಂದಿರುಗಿದೆ. ನಾನೇನು ಮಾಡುತ್ತಿದ್ದೆನೋ ನನಗೇ ತಿಳಿಯದು. ನನ್ನ ಮೆದುಳು ನನ್ನ ಸ್ವಾಧೀನದಲ್ಲಿದ್ದಿಲ್ಲ. ಕಾಲುಗಳು ಯಾಂತ್ರಿಕವಾಗಿ ನನ್ನನ್ನು ಎತ್ತಲೋ ಎಳೆದೊಯ್ಯುತ್ತಿದ್ದವು. ಎಲ್ಲಿಗೆ ಹೋಗುತ್ತಿದ್ದೆನೋ ಅರ್ಥ ಮಾಡಿಕೊಳ್ಳುವುದರೊಳಗೆ ನಾನು ಮತ್ತೆ ದಯಾಕರರಾವ್‌ನ ಮನೆಯ ಎದುರಿಗೆ ನಿಂತುಕೊಂಡಿದ್ದೆ. ಅಲ್ಲಿಗೆ ಹೋದ ನಂತರ ಹಠಾತ್ತನೇ ನನ್ನ ತಮ್ಮ ನೆನಪಾದ. ಅವನೆಲ್ಲಿ ಹೋದ? ಏನಾದ? ಆ ದುರ್ಮಾರ್ಗರು ಅವನನ್ನೇನುಮಾಡಿದರು? ಉತ್ತರ ಕಣ್ಣೆದುರಿಗೇ ಕಾಣಿಸಿತು. ದಯಾಕರರಾವ್‌ನ ಮನೆಯೆದುರಿಗಿದ್ದ ಡ್ರೈನೇಜ್ ಸುತ್ತಲೂ ತುಂಬಾ ಜನ ಗುಂಪುಗೂಡಿದ್ದರು. ಯಾರೋ ಇಬ್ಬರು ವ್ಯಕ್ತಿಗಳು ಡ್ರೈನೇಜ್‌ನಲ್ಲಿ ಇಳಿದರು. ಅದರೊಳಗಿಂದ ಎಂಟು ವರ್ಷದ ಹುಡುಗನನ್ನು ಮೇಲಕ್ಕೆಳೆಯುತ್ತಿದ್ದರು. ಆ ದೃಶ್ಯ ನೋಡುತ್ತಲೇ ನನ್ನ ಹೃದಯ ಆತುರದಿಂದ ಹೊಡೆದುಕೊಳ್ಳತೊಡಗಿತು. ಅಪ್ರಯತ್ನವಾಗಿ ಮುಂದಕ್ಕೆ ಹೋದೆ. ನೋಡುತ್ತಿರುವಂತೆಯೇ ಅವರು ಆ ಹುಡುಗನನ್ನು ಡ್ರೈನೇಜ್‌ನಿಂದ ಹೊರಗೆಳೆದರು. ಯಾರೋ ಬಕೆಟ್‌ಗಳ ತುಂಬ ನೀರು ತಂದು ಆ ಹುಡುಗನ ಮುಖದ ಮೇಲೆ ಸುರಿದರು. ಅವನ ಮುಖದ ಸುತ್ತಲೂ ಕಂಬಳಿಯಂತೆ ಮೆತ್ತಿಕೊಂಡಿದ್ದ ಡ್ರೈನೇಜ್‌ನ ಕೊಳೆ, ಕ್ರಮೇಣ ಕರಗಿ ನನ್ನ ತಮ್ಮನ ಮುಖ ಸ್ಪಷ್ಟವಾಗಿ ಕಾಣಿಸಿತು. ಕೊಳೆದ ಮುತ್ತಿನಂತಿದ್ದ ಅವನ ಮುಖದ ಮೇಲೆ ಮೃತ್ಯುದೇವತೆ ವಿಲಯ ತಾಂಡವ ಮಾಡುತ್ತಿದ್ದಳು. ದೇಶ ರಕ್ಷಣೆಗೋಸ್ಕರ ಸಿಂಹದಂತೆ ಯುದ್ಧ ಭೂಮಿಯಲ್ಲಿ ಹೋರಾಡಿದ್ದ ವೀರ ಸೈನಿಕನ ಮಗ ತನ್ನನ್ನು ರಕ್ಷಿಸುವವರಿಲ್ಲದೆ ನಾಯಿಗಿಂತಲೂ ಹೀನವಾಗಿ ಪ್ರಾಣ ಬಿಟ್ಟಿದ್ದ. ಆಗಲೂ ಕೂಡ ನನಗೆ ಕಿರುಚಬೇಕೆನಿಸಿತು! ಹಾಗೆ ಮಾಡದೇ ಹೋದೆ. ಆದರೆ ಆ ದೃಶ್ಯ ನೋಡುತ್ತಿದ್ದ ನನ್ನ ಹೃದಯದಲ್ಲಿ ಅಗ್ನಿಪರ್ವತ ಸಿಡಿಯುತ್ತಿತ್ತು. ಸೇಡು! ಪ್ರತೀಕಾರ! ನನ್ನ ಮನಸ್ಸಿನಲ್ಲಿ ಒಡಲಾಗ್ನಿ ಚಿಮ್ಮುತ್ತಿತ್ತು! ನನ್ನ ಶರೀರವೆಲ್ಲಾ ದಾವಾಗ್ನಿಯಲ್ಲಿ ಸುಟ್ಟುಹೋಗುತ್ತಿರುವಂತೆ ಭಗಭಗನೆ ಉರಿಯುತ್ತಿತ್ತು. ಸೇಡು! ದಯಾಕರರಾವ್‌ನ ಮೇಲೆ ಸೇಡು! ನನ್ನನ್ನು ನಿಸ್ಸಹಾಯಕಳನ್ನಾಗಿ ಮಾಡಿ ನನ್ನ ಶರೀರದೊಂದಿಗೆ ರಾಕ್ಷಸಾನಂದ ಅನುಭವಿಸಿದ ಅವರೆಲ್ಲರ ಮೇಲೂ ಸೇಡು! ಲೋಕದಲ್ಲಿರುವ ಪ್ರತಿಯೊಬ್ಬನ ಮೇಲೂ ಸೇಡು! ನನ್ನ ತಂದೆಯನ್ನು ಕೊಂದುಹಾಕಿದ ದೇಶದ ಮೇಲೆ ಸೇಡು! ನಮ್ಮ

ತಾಯಿಯನ್ನು ರಕ್ಷಿಸಿಕೊಳ್ಳಲಾಗದೇ ಹೋದ ಮಾನವತೆಯ ಮೇಲೆ ಸೇಡು! ನನ್ನ ತಮ್ಮನನ್ನು ಡ್ರೈನೇಜ್‌ನಲ್ಲಿ ಹಾಕಿ ದಾರುಣವಾಗಿ ಕೊಂದ ದಾನವತೆಯ ಮೇಲೆ ಸೇಡು! ಅಷ್ಟೆಲ್ಲಾ ನಡೆದ ಮೇಲೆ ಕೂಡ ಇನ್ನೂ ಉಳಿದಿರುವ ನನ್ನ ಪ್ರಾಣದ ಮೇಲೆ ಸೇಡು! ಆ ಕ್ಷಣದಿಂದಲೇ ನನ್ನ ಜೀವನ ಗುರುತು ತಿಳಿಯದಂತೆ ಮಾರ್ಪಟ್ಟಿತು. ಮೊದಲು ಆತ್ಮಹತ್ಯೆ ಮಾಡಿಕೊಳ್ಳಬೇಕೆನಿಸಿತು. ಆದರೆ ಸತ್ತುಹೋದರೆ ದಯಾಕರರಾವ್‌ನ ಮೇಲೆ ಯಾರು ಸೇಡು ತೀರಿಸಿಕೊಳ್ಳುತ್ತಾರೆ? ಆ ದುರ್ಮಾರ್ಗರೆಲ್ಲರ ಮೇಲೆ ಯಾರು ಸೇಡು ತೀರಿಸಿಕೊಳ್ಳುತ್ತಾರೆ? ಅದಕ್ಕೇ ನಾನು ಸಾಯಬೇಕೆಂದುಕೊಳ್ಳಲಿಲ್ಲ. ಬದುಕಬೇಕೆಂದುಕೊಂಡೆ. ನಾನು ಬದುಕಿ ಈ ದೇಶವನ್ನು ನಾಶಮಾಡಬೇಕೆಂದುಕೊಂಡೆ. ಅಷ್ಟೇ; ಆ ದಿನದಿಂದಲೇ ನಾನು ಬದಲಾದೆ. ನನ್ನ ಸೌಂದರ್ಯವನ್ನು ಒಂದು ಮಾರಣಾಯುಧದಂತೆ ಹೇಗೆ ಉಪಯೋಗಿಸಿಕೊಳ್ಳಬಹುದೋ ಎಂಬುದನ್ನು ಅರ್ಥ ಮಾಡಿಕೊಂಡೆ. ತಗ್ಗಿ-ಬಗ್ಗಿ ಇರುವ ಹೆಣ್ಣಿನ ಅಂದವನ್ನು ನಲುಗಿಸಿ ಎಸೆಯಬೇಕೆಂದು ನೋಡುವ ಗಂಡಸು ಆ ಸೌಂದರ್ಯವನ್ನೇ ಆ ಹೆಣ್ಣು ಆಯುಧವಾಗಿ ಪ್ರಯೋಗಿಸಿದರೆ ತಪ್ಪಿಸಿಕೊಳ್ಳಲಾಗದೆ ಹೇಗೆ ವಿಲಿವಿಲಿ ಒದ್ದಾಡುತ್ತಾನೋ ತಿಳಿದುಕೊಂಡೆ. ಒಂದು ರಾತ್ರಿಯಲ್ಲಿ ನನ್ನ ಶರೀರವನ್ನು ಹತ್ತು ಜನ ಅನುಭವಿಸಿದರು. ಆ ರಾತ್ರಿ ಕಳೆದ ನಂತರ ನನ್ನಷ್ಟಕ್ಕೆ ನಾನೇ ನನ್ನ ಶರೀರವನ್ನು ಎಲ್ಲರ ಮುಂದೆ ಅನುಭವಿಸಲು ತೆರೆದಿಟ್ಟೆ. ಗಂಡು ಜಾತಿಯನ್ನೆಲ್ಲಾ ನನ್ನ ಪಾದಾಕ್ರಾಂತ ಮಾಡಿಕೊಂಡೆ. ಮಾಡೆಲಿಂಗ್ ಮಾಡಿದೆ.

"ಮಿಸ್ ಇಂಡಿಯಾ ಆಗಿ ಆಯ್ಕೆಯಾದೆ. ಕೊನೆಗೆ ಮುನೀಂದ್ರಸ್ವಾಮಿಯಿಂದಾಗಿ ಜೇಕೇಯ ದರ್ಬಾರಿನಲ್ಲಿ ಪ್ರವೇಶಿಸಿದೆ. ಈ ಲೋಕದ ಮೇಲೆ, ಈ ದೇಶದ ಮೇಲೆ, ಈ ಮನುಷ್ಯರ ಮೇಲೆ ನನ್ನ ಸೇಡು ತೀರಿಸಿಕೊಳ್ಳಲು ಸರಿಯಾದ ಸಮಯ ಬಂದಿದೆ. ಇನ್ನು ನನ್ನನ್ಯಾರೂ ತಡೆಯಲಾರರು. ತಾರಕನಾಮನೊಂದಿಗೆ ನಾನು ಕೂಡಿರುವ ಫೋಟೋಗಳು ಪತ್ರಿಕೆಯಲ್ಲಿ ಬರುವಂತೆ ಮಾಡಿದ ಮಾತ್ರಕ್ಕೆ ನನ್ನನ್ನು ತಡೆಯಬಹುದೆಂದುಕೊಳ್ಳಬೇಡ ಮಿಸ್ಟರ್ ಜಾನಿವಾಕರ್! ನೀನು ಹಾಗೆ ಮಾಡಿದ್ದರಿಂದ ನನ್ನ ಪ್ಲಾನ್ ತಾತ್ಕಾಲಿಕವಾಗಿ ಮುಂದೆ ಹೋಗಿದೆ ಅಷ್ಟೇ! ಆ ನಂತರ ಈ ದೇಶವನ್ನು ಯಾರೂ ಕಾಪಾಡಲಾರರು!"

ಆವೇಶದಿಂದ ಹೇಳುತ್ತಿದ್ದ ಮೇಖಲೆ ಮಾತು ನಿಲ್ಲಿಸಿದೊಡನೆಯೇ ಹಠಾತ್ತನೆ ಅಲ್ಲಿ ಕೆಲವು ಕ್ಷಣಗಳು ಗಾಢವಾದ ನಿಶ್ಶಬ್ದ ಆವರಿಸಿತು.

"ಅಂದ್ರೆ ನಿನ್ನ ಪ್ಲಾನ್ ಏನು?" ಜಾನಿವಾಕರ್ ನಿಶ್ಶಬ್ದವನ್ನು ಭಗ್ನಗೊಳಿಸುತಾ ಕೇಳಿದ.

"ಅದನ್ನು ಮಾತ್ರ ಹೇಳೋದಿಲ್ಲ! ನನ್ನ ಪ್ಲಾನ್ ಏನಾದರೇನು? ನನ್ನ ಆಸೆ ನೆರವೇರುವ ದಿನ ಹೆಚ್ಚು ದೂರವಿಲ್ಲ. ಏಳು ವರ್ಷ........ ಏಳು ವರ್ಷ ಮಿಸ್ಟರ್ ಜಾನಿವಾಕರ್! ಒಂದು ರಾತ್ರಿಯ ನರಕಯಾತನೆಯ ನಂತರ ಏಳು ವರ್ಷ ನಾನು ಕಾದಿದ್ದೇನೆ. ಮತ್ತೆ ಕೆಲವು ದಿನಗಳು ಕಾಯುವುದು ನನಗೆ ಕಷ್ಟವೇನೂ ಅಲ್ಲ. ಈ ಏಳು ವರ್ಷಗಳಲ್ಲಿ ಈ ದೇಶ ಎಷ್ಟು ಭ್ರಷ್ಟಗೊಂಡಿದೆ ಯೆಂದು ನನಗೆ ಚೆನ್ನಾಗಿ ಅರ್ಥವಾಗಿದೆ. "ಪ್ರಜಾರಕ್ಷಕರೇ ಪ್ರಜಾಭಕ್ಷಕರಾಗಿ ಗದ್ದುಗೆ ಹತ್ತುತ್ತಿದ್ದಾರೆ. ಹಾಗೆಂದು ಪ್ರಜೆಗಳು ಕೂಡ ಅಮಾಯಕರಾಗಿಲ್ಲ. ಯಾರಿಗೆ ಕೈಲಾದ ಮಟ್ಟಿಗೆ, ತಿಳಿದ ರೀತಿಯಲ್ಲಿ ಮತ್ತೊಬ್ಬರನ್ನು ದೋಚುತ್ತಲೇ ಇದ್ದಾರೆ. ಈ ದೇಶದಲ್ಲಿ ಪ್ರತಿಯೊಬ್ಬನೂ ಮತ್ತೊಬ್ಬನನ್ನು ದೋಚುವವನೇ! ಅವರಿಗವರು ನಿಸ್ಸಹಾಯವಾಗಿದ್ದು, ಪಕ್ಕದವನನ್ನು ಬೆರಳೆತ್ತಿ ತೋರಿಸುವುದು ತುಂಬಾ ರೂಢಿಯಾಗಿಬಿಟ್ಟಿದೆ! ಈ ದೇಶ ಛಿದ್ರಗೊಳ್ಳಲು ಅವರ ಪಾಲಿನ ಪಾತ್ರವನ್ನು ಅವರು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ. "ನೋ ...! ಈ ದೇಶ ಉಳಿಯಕೂಡದು. ಒಂದೇ ಬಾರಿಗೆ ಈ ದೇಶ ಬೂದಿಯ ರಾಶಿಯಾಗಿ ಬದಲಾಗಬೇಕು. ಆ ಬೂದಿಯ ರಾಶಿಯೆಲ್ಲವೂ ಸಮುದ್ರದಲ್ಲಿ ಬೆರೆತು ಹೋಗಿ, ಒಂದು ಹೊಸ ಮಾನವ ಪ್ರಪಂಚ ಇಲ್ಲಿ ಉದ್ಭವಿಸಬೇಕು. ಆ ಪ್ರಪಂಚದಲ್ಲಿ ಕುಲ–ಮತ, ಭಾಷಾ–ಭೇದಗಳಿರುವುದಿಲ್ಲ. ಧನ, ಮದ, ಸ್ವಾರ್ಥ, ದಾರಿದ್ರ್ಯ, ಅಜ್ಞಾನ, ನಯವಂಚನೆಗಳಿರುವುದಿಲ್ಲ. ಆ ಪ್ರಪಂಚದಲ್ಲಿ ಯಾವ ಹೆಣ್ಣೂ ಒಬ್ಬನ ಪಾರ್ಟಿ ಟಿಕೆಟ್‌ಗೋಸ್ಕರ ಇನ್ನೊಬ್ಬನ ಹತ್ತಿರ ಮಲಗ ಬೇಕಾದ ಅಗತ್ಯವಿರುವುದಿಲ್ಲ. ಆ ಪ್ರಪಂಚದಲ್ಲಿ ವೇಶ್ಯೆಯರೂ, ಕಾಲ್‌ಗರ್ಲ್ ಗಳೂ ಇರುವುದಿಲ್ಲ. ಆ ಪ್ರಪಂಚದಲ್ಲಿ ನಿರುದ್ಯೋಗದಿಂದ ನಿರಾಶೆಗೊಳಗಾಗಿ ಯಾವ ಯುವಕನೂ ಮಾದಕ ಪದಾರ್ಥಗಳ ಮೊರೆ ಹೋಗುವುದಿಲ್ಲ. ಆ ಪ್ರಪಂಚದಲ್ಲಿ ಯಾವ ಮದುಮಗಳೂ ವರದಕ್ಷಿಣೆ ತರಲಾಗದೆ ಅತ್ತೆಯ ಮನೆ ಯಲ್ಲಿ ಸೀಮೆ ಎಣ್ಣೆ ಬೆಂಕಿಗೆ ಬಲಿಯಾಗಳು. ಆ ಪ್ರಪಂಚ.... ಆ ಪ್ರಪಂಚ ಬರುತ್ತದೆ. ಆ ಪ್ರಪಂಚ ಬರಬೇಕು! ಆ ಪ್ರಪಂಚ ಬರಬೇಕೆಂದರೆ ಈಗಿರುವ ವ್ಯವಸ್ಥೆಯೆಲ್ಲವೂ ತೊಳೆದು ಹೋಗಬೇಕು! ಹೌದು ಆ ಪ್ರಪಂಚ ಬರಬೇಕು! ನೀನೇ ಅಲ್ಲ! ಯಾವ ಶಕ್ತಿಯೂ ನನ್ನನ್ನು ತಡೆಯಲಾಗದು ಮಿಸ್ಟರ್ ಜಾನಿವಾಕರ್!"

ಜಾನಿವಾಕರ್ ಆವೇಶ ತಡೆದುಕೊಳ್ಳದೆಹೋದ. "ನೀನೊಬ್ಬಳು ಸಿನಿಕ್ ಹುಚ್ಚಿ!" ಎಂದರಚಿದ.

"ಆಫ್‌ಕೋರ್ಸ್, ನಾನು ಸಿನಿಕ್! ನಾನು ಹುಚ್ಚಿ! ಮತ್ತೊಂದು

ಪ್ರಪಂಚಕ್ಕೋಸ್ಕರ ಪರಿತಪಿಸುವವರೆಲ್ಲರೂ ಹುಚ್ಚರೇ ಮಿಸ್ಟರ್ ಜಾನಿವಾಕರ್!"

"ಆದರೆ ಅವರ ದಾರಿ ಬೇರೆ! ನಿನ್ನ ಹಾಗೆ ದೇಶವನ್ನೇ ಬೂದಿಯ ರಾಶಿಯಾಗಿ ಬದಲಾಯಿಸಬೇಕೆಂದು ಅವರು ಕಂಕಣ ಕಟ್ಟಿಕೊಂಡಿಲ್ಲ!"

"ಮೂರ್ಖರು! ಒಂದು ವ್ಯವಸ್ಥೆ ಪೂರ್ತಿ ಅಳಿಸದೆಯೇ ಹೊಸ ವ್ಯವಸ್ಥೆ ಉದ್ಭವಿಸದೆಂದು ತಿಳಿಯದ ಮೂರ್ಖರು!"

ಜಾನಿವಾಕರ್ ಕೆಲವು ಕ್ಷಣಗಳು ಅವಳನ್ನೇ ನೋಡುತ್ತಿದ್ದುಬಿಟ್ಟ. "ಆಲ್‌ರೈಟ್! ನಿನ್ನೊಂದಿಗೆ ವಾದಿಸುತ್ತಾ ಕೂರಲಾರೆ! ಒಂದು ವಿಷಯ ಹೇಳು. ತಾರಕನಾಮಸಂತೂ ರಕ್ಷಣಾಮಂತ್ರಿಯಾದ ಸರಿ. ಅಂದಿನ ಪಾರ್ಟಿ ಸೆಕ್ರೆಟರಿ ಏನಾದ?"

ಮೇಖಲೆಯ ಮುಖ ಕ್ರೋಧದಿಂದ ಉಗ್ರವಾಯ್ತು. "ಅದೇ ದುರದೃಷ್ಟ! ಆ ದುರ್ಮಾರ್ಗ ನನ್ನ ಕೈಯಲ್ಲಿ ಸಿಕ್ಕಿ ಬೀಳದೆ ಶಾಶ್ವತವಾಗಿ ತಪ್ಪಿಸಿಕೊಂಡ."

"ಅಂದ್ರೆ?"

"ಆಯಸ್ಸು ತೀರಿಹೋಯ್ತು! ಒಂದು ಕಾರ್ ಆ್ಯಕ್ಸಿಡೆಂಟ್‌ನಲ್ಲಿ ಎರಡು ವರ್ಷಗಳ ಹಿಂದೆ ಸತ್ತ."

"ದಯಾಕರರಾವ್ ಏನಾದ?"

ಅವಳು ಅವನನ್ನು ನೇರವಾಗಿ ನೋಡಿದಳು. ಹಠಾತ್ತನೆ ಆ ಕಣ್ಣುಗಳು ವಿಚಿತ್ರವಾಗಿ ಹೊಳೆಯತೊಡಗಿದವು. "ದಯಾಕರರಾವ್ ಇದ್ದಾನೆ! ನೀವ್ಯಾರೂ ಊಹಿಸಲಾಗದ ಸ್ಥಳದಲ್ಲಿ ಇದ್ದಾನೆ. ಅವನ ಗುಟ್ಟು ನನ್ನೊಬ್ಬಳ ಕೈಯಲ್ಲೇ ಇದೆ. ಅತಿ ಬೇಗ ಅವನ ಕಥೆ ಸಮಾಪ್ತಿಯಾಗುತ್ತದೆ!"

ಜಾನಿವಾಕರ್ ನಿಟ್ಟುಸಿರಿಟ್ಟ. "ಆಲ್‌ರೈಟ್! ನಾನೀಗ ಹೋಗ್ತಿದೀನಿ. ಆದರೆ ಹೋಗೋ ಮುಂಚೆ ಒಂದು ಮಾತು ಹೇಳಿ ಹೋಗ್ತೀನಿ. ಹೌದು, ನಿನ್ನ ಜೀವನ ನಾಶವಾಗಿದೆ, ನಿನ್ನವರ ಜೀವನ ನಾಶವಾಗಿದೆ. ಮನಸ್ಸಿರದ ಗಂಡಸಿನ ಮುಂದೆ ಮೋಹ ನಟಿಸುತ್ತಾ ದಿನಕ್ಕೊಂದು ರಾತ್ರಿ ಕಳೆಯುವುದನ್ನು ಯಾವ ಸ್ತ್ರೀಯಾದರೂ ಸಹಿಸಳೆಂದು ನನಗೆ ಗೊತ್ತು. ಆ ಜೀವನ ಎಷ್ಟು ನರಕವೆಂದು ಕೂಡ ನನಗೆ ಗೊತ್ತು. ಆದರೆ ಅದರ ಕಾರಣವಾಗಿ ಇಡೀ ಮಾನವ ಜಾತಿಯ ಮೇಲೆಯೇ ಸೇಡು ಬೆಳೆಸಿಕೊಳ್ಳುವುದು ದಾರುಣ! ನಿನ್ನ ಬಗೆಗೆ ನನಗೆ ಯಾವಾಗಲೂ ಸಹಾನುಭೂತಿ ಇರುತ್ತದೆ ಮೇಖಲೆ! ಆದರೆ ನಿನ್ನ ಆಲೋಚನೆಗಳನ್ನು ನಾನು ಕೊಂಚವೂ ಅನುಮೋದಿಸುವುದಿಲ್ಲ. ಈಗ ನಾನು ಹೋಗ್ತಿದೀನಿ! ಆದರೆ ನೆನಪಿಟ್ಕೋ; ಇಲ್ಲಿಂದ ಹೊರ ಹೋದ ನಂತರ ಪ್ರತಿ

ಕ್ಷಣವೂ ನಿನ್ನ ವಿರುದ್ಧವಾಗಿ ಕೆಲಸ ಮಾಡುತ್ತಲೇ ಇರುತ್ತೇನೆ. ನೀನು ಸಾಮಾನ್ಯ ಹೆಣ್ಣಲ್ಲ! ಸಿಡಿಯಲು ಸಿದ್ಧವಾಗಿರುವ ಆಟಂಬಾಂಬ್! ಎಷ್ಟು ಶಕ್ತಿಯುಳ್ಳವಳೋ, ಅಷ್ಟೇ ಅಪಾಯಕಾರಿ. ಈ ಕ್ಷಣದಿಂದ ನಿನ್ನ ಶಕ್ತಿಗೂ, ನನ್ನ ಶಕ್ತಿಗೂ ಹೋರಾಟ! ನನ್ನ ಪ್ರಾಣ ಹೋದರೂ ಸರಿ, ನಿನ್ನನ್ನು ತಡೆಯಲು ಪ್ರಯತ್ನಿಸುತ್ತೇನೆ. ಬರ್ತೀನಿ ಗುಡ್ ಬೈ" ಅವನು ಬಾಗಿಲು ತೆರೆದುಕೊಂಡು ಹೊರಟುಹೋದ.

ಅವನು ಹೋಗುತ್ತಿದ್ದ ಕಡೆಯೇ ರೋಷದಿಂದ ನೋಡುತ್ತಿದ್ದ ಮೇಖಲೆ ಹಠಾತ್ತನೆ ಬೆಚ್ಚಿಬಿದ್ದು ತನ್ನ ಕಾಲುಗಳ ಕಡೆ ನೋಡಿಕೊಂಡಳು. ದೇವ! ಅಲ್ಲಿಯವರೆಗೂ ತುಟಿ ಬಿಚ್ಚದೆ ಅವಳು ಹೇಳುತ್ತಿರುವುದನ್ನೆಲ್ಲಾ ಕೇಳುತ್ತಿದ್ದ ದೇವ. ಜಾನಿವಾಕರ್ ಹಾಗೆ ಹೊರಗೆ ಹೋದೊಡನೆಯೇ ತಟಕ್ಕನೆ ಅವಳ ಕಾಲುಗಳ ಮೇಲೆ ಬಿದ್ದು ಚಿಕ್ಕ ಮಗುವಿನಂತೆ ಅಳತೊಡಗಿದ. ಆ ದೃಶ್ಯ ನೋಡುತ್ತಲೇ ಮೇಖಲೆ ಕರಗಿಬಿಟ್ಟಳು. ಅಲ್ಲಿವರೆಗೂ ಶಕ್ತಿ ಸ್ವರೂಪಿಣಿಯಂತೆ ಪ್ರಜ್ವಲಿಸಿದ ಅವಳ ಉಗ್ರರೂಪ ಕ್ಷಣಗಳಲ್ಲಿ ಉಪಶಮನಗೊಂಡಿತು. ಥಟ್ಟನೆ ಕೆಳಗೆ ಕುಳಿತು ಲಾಲನೆಯಿಂದ ಅವನ ತಲೆ ನೇವರಿಸುತ್ತಾ ನುಡಿದಳು: "ದೇವ! ಏನಿದು ಚಿಕ್ಕ ಹುಡುಗನಂತೆ. ತಪ್ಪಲ್ವಾ, ಏಳು!"

ಆದರೆ ದೇವ ಏಳಲಿಲ್ಲ. ನಿರ್ವಿರಾಮವಾಗಿ ಅವಳ ಪಾದಕ್ಕೆ ಮುತ್ತಿಡುತ್ತಾ ಹಾಗೆಯೇ ಬಿಕ್ಕಿಬಿಕ್ಕಿ ಅಳುತ್ತಿದ್ದುಬಿಟ್ಟ. ಕೆಲವು ಕ್ಷಣಗಳಲ್ಲಿಯೇ ಮೇಖಲೆಯ ಕಣ್ಣುಗಳಿಂದ ಕೂಡ ಎರಡು ಕಣ್ಣೀರ ಹನಿಗಳು ಜಾರಿ ಅವನ ಶಿರಸ್ಸನ್ನು ಅಭಿಷೇಕ ಮಾಡಿದವು.

## ೨೫

ನ್ಯೂ ಇಂಡಿಯಾದಲ್ಲಿನ ವಾರ್ತೆ ನೋಡುತ್ತಲೇ ದೇಶದಲ್ಲೆಲ್ಲಾ ಅಲ್ಲೋಲ-ಕಲ್ಲೋಲವೆದ್ದಿತು. ಕೆಲವು ಗಂಟೆಗಳ ಅವಧಿಯಲ್ಲಿಯೇ ಅಧಿಕಾರ ಪಕ್ಷ ಇಡೀ ದೇಶದಲ್ಲಿ ಪ್ರತಿಷ್ಠೆಯನ್ನು ಕಳೆದುಕೊಂಡಿತು. ನಂತರದ ಘಟನೆಗಳು ವೇಗವಾಗಿ ಜರುಗಿದವು. 1960 ರ ದಶಕದಲ್ಲಿ 'ಪ್ರೊಫ್ಯೂಮೋ ಅಫೇರ್' ಇಂಗ್ಲೆಂಡ್ ದೇಶವನ್ನು ಅಲುಗಾಡಿಸಿಬಿಟ್ಟಿತು. 1963 ರಲ್ಲಿ ಹೆರಾಲ್ಡ್ ಮ್ಯಾಕ್‌ಮಿಲನ್ ಸರಕಾರ ಹೆಚ್ಚು-ಕಡಿಮೆ ಕುಸಿದುಬೀಳುವ ಪರಿಸ್ಥಿತಿ ಉಂಟಾಗಿತ್ತು. ಕ್ರಿಸ್ಟೀನ್ ಕೀಲರ್ ಎನ್ನುವ ಸೌಂದರ್ಯ ರಾಶಿ ದಾರಿದ್ರ್ಯದಿಂದ ಮೇಲೆ ಬಂದು ಆ ದೇಶದ ರಕ್ಷಣಾ ಮಂತ್ರಿಯೊಂದಿಗೆ ಅಫೇರ್ ನಡೆಸುವ ಸ್ಥಿತಿಗೆ ಬಂದಿದ್ದಳು. ಆ ರಕ್ಷಣಾ ಮಂತ್ರಿಯ ಹೆಸರು ಜಾನ್ ಪ್ರೊಫ್ಯೂಮೋ!

ಸ್ಟೀಫನ್ ವಾರ್ಡ್ ಎನ್ನುವ ಸ್ನೇಹಿತ ಅವಳನ್ನು ಪ್ರೊಫ್ಯೂಮೋಗೆ ಪರಿಚಯ ಮಾಡಿಸಿದ್ದ. ಅದೇ ಸಮಯದಲ್ಲಿ ಸ್ಟೀಫನ್ ವಾರ್ಡ್ ಅವಳನ್ನು ರಷ್ಯನ್ ನೇವಲ್ ಅಟಾಚಿಯಾಗಿ ಲಂಡನ್‌ನಲ್ಲಿ ಕೆಲಸ ಮಾಡುತ್ತಿದ್ದ ತನ್ನ ಮತ್ತೊಬ್ಬ ಸ್ನೇಹಿತ ಎವ್‌ಜೆನಿ ಇವಾನೋವ್‌ಗೂ ಪರಿಚಯ ಮಾಡಿಸಿದ್ದ. ಕೀಲರ್ ಒಂದೇ ಬಾರಿಗೆ ಇಬ್ಬರಿಗೂ ಕೂಡ ಕೀಪ್ ಆಗಿದ್ದಳು. ಈ ವಿಷಯ ಹೊರಬಿದ್ದೊಡನೆಯೇ ದೇಶದಲ್ಲಿ ಎಂದೂ ಇಲ್ಲದಂತಹ ಗೊಂದಲವೆದ್ದಿತು. ಅದರೊಂದಿಗೆ ಕೀಲರ್ ಬ್ರಿಟನ್ ರಕ್ಷಣಾ ರಹಸ್ಯಗಳನ್ನು ಪ್ರೊಫ್ಯೂಮೋನಿಂದ ಪಡೆಯುತ್ತಿದ್ದಾಳೆಂಬ ಪುಕಾರು ಹಬ್ಬಿದ್ದರಿಂದ ಗೊಂದಲ ಪರಾಕಾಷ್ಠೆಯನ್ನು ತಲುಪಿತು.

ಅಂತಹ ಕೆಲವು ರಹಸ್ಯಗಳನ್ನು ಪ್ರೊಫ್ಯೂಮೋನಿಂದ ತಿಳಿದುಕೊಳ್ಳಲೆಂದೇ ಸ್ಟೀಫನ್ ವಾರ್ಡ್ ತನ್ನನ್ನು ನಿಯಮಿಸಿದ್ದಾನೆಂದು ಸ್ವತಃ ಕೀಲರ್‌ಳೇ ಒಪ್ಪಿಕೊಂಡಿದ್ದರಿಂದ ಬ್ರಿಟನ್‌ನ ಪ್ರಧಾನಮಂತ್ರಿ ಆಗಬಲ್ಲನೆಂದು ಭಾವಿಸುತ್ತಿದ್ದ ಪ್ರೊಫ್ಯೂಮೋ ತನ್ನ ಪದವಿಗೆ ರಾಜೀನಾಮೆ ಕೊಡಲೇಬೇಕಾಯ್ತು. ಗೂಢಚಾರ ಕೆಲಸ ಮಾಡಿದ್ದನೆನ್ನುವ ಆರೋಪದ ಮೇಲೆ ಸ್ಟೀಫನ್ ವಾರ್ಡ್‌ನನ್ನು ಸರಕಾರ ಕೋರ್ಟಿಗೆಳೆಯಿತು. ವಿಚಾರಣೆ ನಡೆಯುತ್ತಿರುವಾಗಲೇ ಅವನು ಆತ್ಮಹತ್ಯೆ ಮಾಡಿಕೊಂಡ. ರಷ್ಯಾ ಸರಕಾರ ಇವಾನೋವ್‌ನನ್ನು ಹಿಂದಕ್ಕೆ ಕರೆಸಿಕೊಂಡು ಅವನನ್ನು ಪಾರ್ಟಿಯ ಸದಸ್ಯತ್ವದಿಂದ ಹೊರಹಾಕಿತು.

ತನ್ನ ಕಥೆಯನ್ನು ಪ್ರಪಂಚಕ್ಕೆಲ್ಲಾ ಹೇಳಿ, ಕೀಲರ್ ಅನೇಕ ನ್ಯೂಸ್ ಪೇಪರ್‌ಗಳಿಂದ ಹಣ ಸಂಪಾದಿಸಿದಳು.

ಮತ್ತೊಂದು ಪ್ರೊಫ್ಯೂಮೋ ಅಫೇರ್ ಎಂದು ಹೆಸರಾದ ಮೋಖಲೆಯ ವೃತ್ತಾಂತ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿಯೇ ಗೊಂದಲವೆಬ್ಬಿಸಿತು. ವಿರೋಧ ಪಕ್ಷದವರು ಸರಕಾರವನ್ನು ತೀವ್ರವಾಗಿ ಖಂಡಿಸಿ, ಪಾರ್ಲಿಮೆಂಟನ್ನು ತಕ್ಷಣವೇ ರದ್ದುಗೊಳಿಸಿ, ಮತ್ತೆ ಚುನಾವಣೆ ನಡೆಸಬೇಕೆಂದು ಒತ್ತಾಯಿಸಿದವು. ದೇಶದಲ್ಲಿ ಪ್ರತಿಯೊಬ್ಬರೂ ತಾರಕನಾಮ ರಾಜೀನಾಮೆ ಕೊಡಬೇಕೆಂದು ಚಳವಳಿ ಪ್ರಾರಂಭಿಸಿದರು. ಯಾರ ಬಾಯಲ್ಲಿ ಕೇಳಿದರೂ ಮೋಖಲೆಯ ಹೆಸರೇ ಕೇಳಿಬರುತ್ತಿತ್ತು. ಪತ್ರಿಕಾ ವರದಿಗಾರರು ಮೋಖಲೆಯ ಗತಚರಿತ್ರೆಯ ಬಗೆಗೆ ತಿಳಿದುಕೊಳ್ಳುವುದಕ್ಕೋಸ್ಕರ ಆಗಲೇ ಬೇಟೆ ಪ್ರಾರಂಭಿಸಿದ್ದರು. ಕೆಲವು ಅಂತರರಾಷ್ಟ್ರೀಯ ಪತ್ರಿಕೆಗಳು ಈ ಸ್ಕ್ಯಾಂಡಲ್‌ನ ಹೆಚ್ಚು ವಿವರಗಳನ್ನು ಪಡೆಯಲು ತಮ್ಮ ವರದಿಗಾರರನ್ನು ಭಾರತಕ್ಕೆ ಕಳುಹಿಸಿದವು.

ಸರಕಾರದ ಮೇಲೆ ಒಂದೇ ಬಾರಿಗೆ ಎಷ್ಟು ಒತ್ತಡ ಬಂದು ಬಿದ್ದಿತೆಂದರೆ ತಾರಕನಾಮ ಅನಿವಾರ್ಯವಾಗಿ ರಾಜೀನಾಮೆ ನೀಡಬೇಕಾಗಿ ಬಂದಿತು. ಆ

ರಾಜೀನಾಮೆ ಕೇವಲ ಅವನ ಮಂತ್ರಿ ಪದವಿಗಷ್ಟೇ ಅಲ್ಲ, ಪಾರ್ಲಿಮೆಂಟ್ ಸದಸ್ಯತ್ವಕ್ಕೂ ನೀಡಿದ. "ನನ್ನ ಮೇಲೆ ಏನೋ ಸಂಚು ನಡೆಯುತ್ತಿದೆ. ತುಂಬಾ ದೊಡ್ಡ ಸಂಚು! ಇದೆಲ್ಲಾ ವಿರೋಧ ಪಕ್ಷದವರ ಕೈವಾಡ! ಆ ಮೇಖಲೆ ಎನ್ನುವ ಯುವತಿ ಯಾರೋ ನನಗೆ ಗೊತ್ತೇ ಇಲ್ಲ! ಅವಳೊಂದಿಗೆ ಹೌಸ್ ಬೋಟ್‌ನ ಮೇಲೆ ಒಂದು ರಾತ್ರಿ ಕಳೆಯೋದು ಒತ್ತಟ್ಟಿಗಿರಲಿ, ಅವಳ ಹೆಸರನ್ನೂ ನಾನು ಇಲ್ಲಿಯವರೆಗೆ ಕೇಳಿಲ್ಲ! ನ್ಯೂ ಇಂಡಿಯಾದಲ್ಲಿ ಬಂದ ವಾರ್ತೆ ಶುದ್ಧ ಸುಳ್ಳು! ಆ ಫೋಟೋಗಳೆಲ್ಲವೂ ಸುಳ್ಳು ಫೋಟೋಗಳು! ಮಿಸ್ಟರ್ ಜಾನಿ ಎನ್ನುವ ವ್ಯಕ್ತಿ ಯಾರೂ ಇಲ್ಲ! ನ್ಯೂ ಇಂಡಿಯಾ ಪತ್ರಿಕೆಯವರು ವಿರೋಧ ಪಕ್ಷಗಳಿಂದ ಲಂಚ ಪಡೆದುಕೊಂಡು ಮಿಸ್ಟರ್ ಜಾನಿ ಎನ್ನುವ ಒಂದು ಮಿಥ್ಯೆಯನ್ನು ಸೃಷ್ಟಿಸಿದ್ದಾರೆ! ದೇಶ ಸೇವೆಗೂ, ಪ್ರಜಾ ಸೇವೆಗೂ ಜೀವನವನ್ನು ಮುಡಿಪಾಗಿಟ್ಟ ನಾನು ದೇಶದ ರಹಸ್ಯಗಳನ್ನು ಮುಖ ಪರಿಚಯವಿಲ್ಲದ ಯುವತಿಯೊಬ್ಬಳ್ಯಾರಿಗೋ ಕೊಡುತ್ತೇನೆನ್ನುವುದು ನಂಬಲಾಗದ ವಿಷಯ! ನನ್ನ ಮೇಲೆ ಬಂದ ಪ್ರತಿ ಆರೋಪವನ್ನೂ ನಾನು ಖಂಡಿಸುತ್ತಿದ್ದೇನೆ!"

ತಾರಕನಾಮ ಪತ್ರಿಕೆಯವರಿಗೆ ಆ ಮಾತು ಹೇಳಿ, ಓಡುತ್ತಾ ಹೋಗಿ ತನ್ನ ಕಾರಿನಲ್ಲಿ ಕುಳಿತುಕೊಂಡ. ಕಾರಿನಲ್ಲಿ ಕುಳಿತುಕೊಳ್ಳುತ್ತಲೇ ಎರಡು ಕೈಗಳಿಂದ ತಲೆ ಹಿಡಿದುಕೊಂಡು, ನಂತರ ಒಂದು ಗ್ಲಾಸ್ ನೀರು ಗಟಗಟನೆ ಕುಡಿದ. ಕೆಲವು ಗಂಟೆಗಳ ಅವಧಿಯಲ್ಲಿ ಅವನ ಯೋಚನೆಗಳೆಲ್ಲ ತಲೆಕೆಳಗಾದುವು.

ತಾರಕನಾಮ ತನ್ನ ಬಂಗಲೆ ತಲುಪುವಷ್ಟರಲ್ಲಿ ಟೆಲಿಫೋನ್ ನಿರ್ವಿರಾಮವಾಗಿ ಮೊಳಗುತ್ತಿತ್ತು.

ತಾರಕನಾಮ ರಿಸೀವರ್ ಎತ್ತಿಕೊಂಡ. "ಹಲೋ ಯಾರು?" ಹೆಚ್ಚುಕಡಿಮೆ ಬೊಗಳುತ್ತಿರುವವನಂತೆ ಅರಚಿದ.

"ಮಿಸ್ಟರ್ ಜಾನಿ!" ಅತ್ತಲಿಂದ ಕೇಳಿಸಿತು.

ತಾರಕನಾಮ ಆ ಹೆಸರು ಕೇಳುತ್ತಲೇ ಪಕ್ಕದಲ್ಲಿ ಬಾಂಬ್ ಸಿಡಿದಂತೆ ಬೆಚ್ಚಿಬಿದ್ದ. "ಹಲೋ....ಹಲೋ....ಯಾರು?"

"ಮಿಸ್ಟರ್ ಜಾನಿ!" ಮತ್ತೊಂದು ಸಲ ಕೇಳಿಸಿತು.

"ಮಿಸ್ಟರ್ ಜಾನಿ?! ನೀನ್ಯಾರಯ್ಯ ನನಗೆ ಪ್ರಾಣಕಂಟಕವಾಗಿದೀಯಾ? ಯಾರು ನೀನು? ನಿನಗೇನು ಬೇಕು?"

"ಹುಶ್....! ಬೇಕಾದುದು ನನಗಲ್ಲ, ನಿನಗೆ!"

"ಏನು?"

"ನಿನ್ನ ಪ್ರಾಣಕ್ಕೆ ರಕ್ಷಣೆ!"

ಆ ಮಾತು ಕೇಳುತ್ತಲೇ ತಾರಕನಾಮನ ಮುಖ ಬಾಡಿಹೋಯ್ತು. "ಅಂದರೆ?" ಕಿರಚು ಧ್ವನಿಯಿಂದ ಕೇಳಿದ.

"ಒಬ್ಬ ಯುವತಿ ನಿನ್ನ ಪ್ರಾಣ ತೆಗೆಯುತ್ತೇನೆಂದು ಕಂಕಣ ಕಟ್ಟಿಕೊಂಡಿದ್ದಾಳೆ. ಯುವತಿಯೆಂದರೆ ಸಾಮಾನ್ಯ ಯುವತಿಯಲ್ಲ; ಆಟಂಬಾಂಬ್! ಎಚ್ಚರಿಕೆ!"

"ಯುವತೀನಾ? ಯಾವ ಯುವತಿ?"

"ಮೇ....ಖ....ಲೆ!"

"ಮೇಖಲೆ? ನಾನ್‌ಸೆನ್ಸ್! ಮೇಖಲೆ ಯಾರು? ಮೇಖಲೆ ನನ್ನ ಪ್ರಾಣ ಯಾಕೆ ತೆಗೀತಾಳೆ? ಮೇಖಲೆ ಯಾರೂಂತ ನನಗೆ ಗೊತ್ತೇ ಇಲ್ಲ!"

"ಸುಳ್ಳು ಹೇಳ್ಬೇಡ! ನೀವಿಬ್ಬರೂ ಕೂಡಿ ಇರುವಾಗ ಫೋಟೋ ತೆಗೆದವನು ನಾನೇ ಎಂಬುದನ್ನು ಮರೆಯಬೇಡ. ನಿನ್ನ ಚರಿತ್ರೆ ನನಗೆ ಸಂಪೂರ್ಣವಾಗಿ ಗೊತ್ತು! ದಯಾಕರರಾವ್ ನೆನಪಿದ್ದಾನಾ?"

ತಾರಕನಾಮ ಬೆಚ್ಚಿಬಿದ್ದ! "ದಯಾಕರರಾವ್‌ನಾ! ಆ ಸಂಗತಿ ಈಗ್ಯಾಕೆ?"

"ಹೇಳೋದು ಕೇಳು! ಏಳು ವರ್ಷಗಳ ಹಿಂದೆ ದಯಾಕರರಾವ್ ನಿಮಗೋಸ್ಕರ ಒಬ್ಬ ಯುವತಿಯನ್ನು ಸಪ್ಲೈ ಮಾಡಿದ್ದ, ನೆನಪಿದೆಯಾ?"

"ಏಳು ವರ್ಷಗಳ ಹಿಂದೇನಾ? ದಯಾಕರರಾವ್‌ನಾ? ಹುಡುಗೀನಾ? ನೀನು ಹೇಳ್ತಿರೋದೇನು?"

"ಮಾತು ಹಾರಿಸ್ಬೇಡ ಅಂತ ಹೇಳಿದ್ನಲ್ಲ! ನಿನ್ನ ಗತಚರಿತ್ರೆಯ ಬಗೆಗೆ ನನಗೆ ತುಂಬಾ ಚೆನ್ನಾಗಿ ಗೊತ್ತು. ಪಾರ್ಟಿ ಟಿಕೆಟ್‌ಗೋಸ್ಕರ ದಯಾಕರರಾವ್ ಒಬ್ಬ ಹದಿನೈದು ವರ್ಷದ ಹುಡುಗಿಯನ್ನು ಸಪ್ಲೈ ಮಾಡಿದ್ದ. ನೀವೆಲ್ಲಾ ಕೂಡಿ ರೇಪ್ ಮಾಡಿದಿರಿ. ಈಗಲಾದರೂ ಜ್ಞಾಪಕ ಬಂತಾ?" ತಾರಕನಾಮನ ಹೃದಯ ಡವಡವ ಎಂದಿತು. ಆ ಘಟನೆ ಅವನಿಗೆ ಚೆನ್ನಾಗಿ ನೆನಪಿತ್ತು.

"ಜ್ಞಾಪಕ ಇದೆಯಾ?" ಅತ್ತಲಿಂದ ಜಾನಿ ಮತ್ತೆ ಕೇಳಿದ.

"ಆಂ!" ಅನ್ಯಮನಸ್ಕನಾಗಿ ಹೇಳಿಬಿಟ್ಟು ತಾರಕನಾಮ ತಕ್ಷಣವೇ ನಾಲಿಗೆ ಕಚ್ಚಿಕೊಂಡ.

"ಗುಡ್! ಆ ದಿನ ನೀವು ರೇಪ್ ಮಾಡಿದ ಹುಡುಗಿಯೇ....ಇಂದಿನ ಸಮ್ಮೋಹನಾಸ್ತ್ರ! ಮಣಿಮೇಖಲೆ."

"ವ್ಹಾಟ್!?" ತಾರಕನಾಮ ಕೂಗಿದ. ತನ್ನನ್ನು ಕೆಣಕಲು ಹಾಗೆ

ಕೇಳುತ್ತಿದ್ದಾಳೆಂದುಕೊಂಡನೇ ಹೊರತು ನಿಜವಾಗ್ಲೂ ತಾನು ಅವಳನ್ನು ಹಿಂದೆ ನೋಡಿರುವಂತೆ ಅನಿಸಿರಲಿಲ್ಲ. ಅವನಿಗೆ ಏಳು ವರ್ಷಗಳ ಹಿಂದೆ ತಾವು ಮಂಚಕ್ಕೆ ಕಟ್ಟಿಹಾಕಿ ಅನುಭವಿಸಿದ ಹುಡುಗಿ ನೆನಪಾದಳು! ತಕ್ಷಣವೇ ಅವನ ಹೃದಯ ಅಪ್ರಯತ್ನವಾಗಿ ನಡುಗಿತು. ಆ ಹುಡುಗಿಗೂ ಈ ಯುವತಿಗೂ ಎಷ್ಟು ವ್ಯತ್ಯಾಸ! ಅವಳೇ ಇಂದಿನ ಮೇಖಲೆಯೆಂದರೆ ನಂಬಲಾಗುತ್ತಿಲ್ಲ. ಅತ್ತಲಿಂದ ಮಿಸ್ಟರ್ ಜಾನಿಯ ಧ್ವನಿ ಕೇಳಿಸಿದ್ದರಿಂದ ತಾರಕನಾಮ ಆಲೋಚನೆಯಿಂದ ಎಚ್ಚೆತ್ತ.

"ಏನು ಬೆಚ್ಚಿಬಿದ್ದೆಯಾ? ಏಳು ವರ್ಷಗಳ ಹಿಂದೆ ನೀನು ಮಾಡಿದ ಪಾಪ ಈ ದಿನ ನಿನ್ನ ವಿರುದ್ಧ ತಿರುಗಿ ಬಿದ್ದು ನಿನ್ನನ್ನು ಸಂಹರಿಸಲು ಸಿದ್ಧವಾಗುತ್ತಿದೆ. ಮೇಖಲೆ ಈಗ ಅಂದು ಅಸಹಾಯಕಳಾಗಿ ನಿಮ್ಮ ಕೈಯಲ್ಲಿ ಸಿಕ್ಕಿಕೊಂಡ ನಿಸ್ಸಹಾಯಕಳಲ್ಲ! ಪೆಟ್ಟು ತಿಂದ ಹುಲಿ! ಯಾವ ಕ್ಷಣದಲ್ಲಿಯಾದರೂ ನಿನ್ನ ಮೇಲೆ ಪಂಜ ಬೀಸುತ್ತಾಳೆ! ಸಾಧ್ಯವಾದರೆ ತಪ್ಪಿಸಿಕೋ!"

ತಾರಕನಾಮನಿಗೆ ಗಂಟಲೊಣಗಿತು. ಮಿಸ್ಟರ್ ಜಾನಿ ಹೇಳುತ್ತಿರುವ ಮಾತುಗಳಲ್ಲಿ ಅವನಿಗೆ ಎಲ್ಲಿಯೂ ಉತ್ಪ್ರೇಕ್ಷೆ ಕಾಣಿಸಲಿಲ್ಲ. ಹೌಸ್ ಬೋಟ್‌ನಲ್ಲಿ ಅವಳನ್ನು ಭೇಟಿಯಾದಾಗಲೇ ಅವಳ ಕಣ್ಣುಗಳಲ್ಲಿ ಅವನಿಗೆ ಯಾವುದೋ ಆಪತ್ತು ಕಾಣಿಸಿತ್ತು. ಆ ಸಮಯದಲ್ಲಿ ಅವಳ ಸಹವಾಸದಲ್ಲಿ ಅದನ್ನು ಲೆಕ್ಕಿಸಲಿಲ್ಲ. ಅದು ನೆನಪಾದೊಡನೆಯೇ ಬೆನ್ನಲ್ಲಿ ಚಳಿ ಹುಟ್ಟಿದಂತಾಯಿತು. ಇದು ಫೋನ್ ಕಾಲ್ ಒಂದು ದಿನ ಬಂದಿದ್ರೆ ಕೇರ್ ಮಾಡುತ್ತಿರಲಿಲ್ಲ. ಆದರೆ...., ಈಗ....ಈಗ ತನ್ನ ಪರಿಸ್ಥಿತಿ ಬದಲಾಗಿದೆ. ತಾನೀಗ ಮಿನಿಸ್ಟರ್ ಅಲ್ಲ. ಕೊನೇ ಪಕ್ಷ ಚಪ್ರಾಸಿಯಾದರೂ ಅಲ್ಲ. ಮೇಲಾಗಿ ದೇಶವೆಲ್ಲಾ ಒಂದುಗೂಡಿ ತನ್ನನ್ನು ದೋಷಿಯನ್ನಾಗಿ ನಿಲ್ಲಿಸಿದೆ. ನಿಸ್ಸಹಾಯಕ ಸ್ಥಿತಿಯಲ್ಲಿ ಯಾವ ಕಡೆಯಿಂದ ಯಾವ ಅಪಾಯವೋ ನುಗ್ಗಿ ಬಂದರೆ, ತಾನೇನು ಮಾಡಬಲ್ಲ ?

"ಏನು ತಾರಕನಾಮ ? ಮಾತಾಡ್ತಿಲ್ವಲ್ಲ ? ಧ್ವನಿ ಹೊರಬರ್ತಿಲ್ವಾ ?" ಕೇಳಿದ ಮಿಸ್ಟರ್ ಜಾನಿ.

ತಾರಕನಾಮ ಅತಿ ಕಷ್ಟದಿಂದ ಮಾತಾಡಿದ. "ಮೇಖಲೆ.... ಮೇಖಲೆ ಈಗೆಲ್ಲಿದ್ದಾಳೆ ?" ತಡಬಡಿಸುತ್ತಾ ಕೇಳಿದ.

"ಹಾಗೆ ದಾರಿಗೆ ಬಾ ! ಮೇಖಲೆ ಈಗೆಲ್ಲಿದ್ದಾಳೋ ನನ್ನೊಬ್ಬನಿಗೇ ಗೊತ್ತು! ಸಾಧ್ಯವಾದರೆ ಅವಳನ್ನು ತಡೆ! ಅಡ್ರೆಸ್ ಹೇಳ್ತೀನಿ ಬರ್ಕೋ !" ಎಂದ ಮಿಸ್ಟರ್ ಜಾನಿ.

ತಾರಕನಾಥನು ಆತುರದಿಂದ ಪಾಕೆಟ್ ಡೈರಿ ಹೊರತೆಗೆದ.

* * * *

ತಾರಕನಾಥನಿಗೆ ಅಡ್ರೆಸ್ ಹೇಳಿದ ನಂತರ ಜಾನಿವಾಕರ್ ರಿಸೀವರ್ ಕ್ರೆಡಿಲ್ ಮಾಡಿದ. ತಾನು ಮಾಡಿದ ಕೆಲಸ ಒಳ್ಳೆಯದೇನಾ ? ರಿಸೀವರ್ ಕೆಳಗಿಟ್ಟ ಆ ಅರೆ ಕ್ಷಣದಲ್ಲಿಯೇ ಆ ಪ್ರಶ್ನೆ ಕೆಲವು ನೂರು ಸಲ ಅವನ ಮಸ್ತಿಷ್ಕವನ್ನು ಸೂಜಿಯಂತೆ ಚುಚ್ಚಿತು. ತಾರಕನಾಥನಿಗೆ ಫೋನ್ ಮಾಡಿದ ಮೇಲೆ ಅಪರಾಧಿ ಮನೋಭಾವ ಅವನನ್ನು ಬಾಧಿಸತೊಡಗಿತು. ತಾರಕನಾಥನ ಮೇಲೆ ಸೇಡು ತೀರಿಸಿಕೊಳ್ಳಲು ಮೇಖಲೆಗಿರುವ ಕಾರಣ ನ್ಯಾಯವಾದುದೇ. ಆ ದೃಷ್ಟಿಯಿಂದ ಆಲೋಚಿಸಿದರೆ ತಾನು ತಾರಕನಾಥನಿಗೆ ಕೊಂಚವೂ ಸಹಾಯ ಮಾಡಕೂಡದು.

ಆದರೆ.... ಆದರೆ....ತಾನು ಮೇಖಲೆಯನ್ನು ತಡೆಯಬೇಕು ! ತಡೆಯಲೇ ಬೇಕು. ಜಾನಿವಾಕರ್ ವಿಷಾದದಿಂದ ನಿಟ್ಟುಸಿರಿಟ್ಟ. ಮೇಖಲೆಯನ್ನು ತಡೆಯಲು ಅವನಿಗೆ ತೋಚಿದ ಮಾರ್ಗ ಸದ್ಯಕ್ಕೆ ಅದೊಂದೇ !

## ೨೬

**ಪ್ಯಾ**ರಿಸ್‌ನಲ್ಲಿನ ತನ್ನ ಹೋಟೆಲ್ ಸೂಟ್‌ನಲ್ಲಿ ಜೇಕೇ ಅಸಹನೆಯಿಂದ ಕೈ ಕಟ್ಟಿಕೊಂಡು ಅತ್ತಿಂದಿತ್ತ ಶತಪಥ ಹಾಕುತ್ತಿದ್ದ. ಏನು ನಡೆಯುತ್ತಿದೆ ? ಹಠಾತ್ತನೆ ಮೇಖಲೆ ಎಲ್ಲಿ ಮಾಯವಾಗಿಬಿಟ್ಟಳು ? ಅದಿರಲಿ, ಭಾರತದಲ್ಲಿ ಏನು ನಡೆಯುತ್ತಿದೆ ? ಇಷ್ಟು ಸಾವಿರ ಮೈಲುಗಳ ದೂರದಿಂದ ಹೇಗೆ ತಿಳಿದು ಕೊಳ್ಳುವುದು ? ತಾರಕನಾಥನ ಬಳಿಯಿಂದ ಮೇಖಲೆ ಸೀಕ್ರೆಟ್ ಫೈಲ್ ಸಂಪಾದಿಸಿದ ನಂತರ ತನಗ್ಯಾಕೆ ಫೋನ್ ಮಾಡಲಿಲ್ಲ ? ಕಾಯುವಷ್ಟು ದಿನ ಕಾಯ್ದು ಕೊನೆಗೆ ತಾನೇ ಮೇಖಲೆಗೆ ಓವರ್‌ಸೀಸ್ ಕಾಲ್ ಮಾಡಿದ ಜೇಕೇ. ಆದರೆ ಅತ್ತಲಿಂದ ನೊ ರೆಸ್ಪಾನ್ಸ್ ! ಯಾರೂ ರಿಸೀವರ್ ಎತ್ತುತ್ತಿಲ್ಲ. ಮತ್ತೆ ಮತ್ತೆ ಪ್ರಯತ್ನಿಸಿದ. ಪ್ರತಿಸಲವೂ ಅದೇ ಪರಿಣಾಮ. 'ವ್ಹಾಟ್ ದ ಹೆಲ್ ಈಸ್ ಹ್ಯಾಪನಿಂಗ್ ಓವರ್ ದೇರ್ ?' ಶತಪಥ ಹಾಕುತ್ತಾ ತನ್ನಲ್ಲಿ ತಾನೇ ಗೊಣಗಿಕೊಂಡ ಜೇಕೇ. ಅಷ್ಟರಲ್ಲಿ ಕಾಲಿಂಗ್ ಬೆಲ್ ಮೊಳಗಿತ . "ಎಸ್ ಕಮಿನ್" ಎಂದ ಜೇಕೇ. ಬಾಗಿಲು ತೆರೆದುಕೊಂಡು ಮಾರ್ನಿಂಗ್ ಕಾಫಿಯೊಂದಿಗೆ ಸರ್ವಿಸ್ ಬಾಯ್ ಟ್ರಾಲಿ ತಳ್ಳುತ್ತಾ ಒಳಗೆ ಕಾಲಿಟ್ಟ. ಮಾರ್ನಿಂಗ್ ಕಾಫಿ ಯೊಂದಿಗೆ ಆ ಬೆಳಗಿನ ನ್ಯೂಸ್ ಪೇಪರ್ ಕೂಡ ಆ ಟ್ರಾಲಿಯಲ್ಲಿತ್ತು. ಜೇಕೇ ಶತಪಥ ಹಾಕುವುದನ್ನು ನಿಲ್ಲಿಸಿ ಬೇಸರದಿಂದ ಪೇಪರ್ ಎತ್ತಿಕೊಂಡು ಕುಳಿತ.

ಸರ್ವಿಸ್ ಬಾಯ್ ವಿನಯದಿಂದ ಕಾಫಿ ಬೆರಸುತ್ತಿದ್ದ. ಜೇಕೇ ಪೇಪರ್ ಬಿಡಿಸಿದ. ಫ್ರಂಟ್ ಪೇಜಿನಲ್ಲಿ ಕಾಣಿಸಿದ ವಾರ್ತೆಯನ್ನು ನೋಡುತ್ತಲೇ ಬೆಚ್ಚಿಬಿದ್ದ.

"ಹಗರಣದಲ್ಲಿಸಿಕ್ಕಿಬಿದ್ದು ಭಾರತೀಯ ರಕ್ಷಣಾಮಂತ್ರಿಯ ರಾಜೀನಾಮೆ!" ಆ ಹೆಡ್‌ಲೈನ್ ಓದುತ್ತಲೇ ಆತುರದಿಂದ ಅವನ ನೋಟ ಆ ವಾರ್ತೆಯ ಮೇಲೆ ಓಡಿತು. ಆ ವಾರ್ತೆ ಓದುತ್ತಿರುವಂತೇ ಅವನ ಕಣ್ಣುಗಳು ಆಶ್ಚರ್ಯದಿಂದ ಅರಳಿದವು. ಅಂದರೆ ಮೇಖಲೆ ತನ್ನ ಓವರ್‌ಸೀಸ್ ಕಾಲ್‌ಗೆ ರೆಸ್ಪಾನ್ಸ್ ನೀಡದಿರುವುದಕ್ಕೆ ಕಾರಣ ಇದು. ನ್ಯೂಸ್ ಬ್ರೇಕ್ ಆದೊಡನೆಯೇ ಪತ್ರಿಕೆಯವರ ದಾಳಿಯಿಂದ ತಪ್ಪಿಸಿಕೊಳ್ಳಲು ಆ ಅಪಾರ್ಟ್‌ಮೆಂಟ್ ಬಿಟ್ಟು ಎಲ್ಲಿಗೋ ಅಜ್ಞಾತವಾಸಕ್ಕೆ ಹೋಗಿರಬೇಕು. ಆ ಸುದ್ದಿಯಲ್ಲಿ ಕೊನೆಗೆ ತನ್ನ ಹೆಸರು ಕೂಡ ಇತ್ತು. ಮೇಖಲೆ ತನ್ನ ಪೋಷಣೆಯಲ್ಲಿಯೇ ಇರುವುದಾಗಿ ಆ ಪತ್ರಿಕೆ ಬರೆದಿತ್ತಲ್ಲದೆ ತನ್ನನ್ನೊಬ್ಬ ಗೂಢಚಾರಿ ಎಂದು ವರ್ಣಿಸಿತ್ತು.

'ಟು ಹೆಲ್ ವಿತ್ ನ್ಯೂಸ್ ಪೇಪರ್ಸ್!' ಜೇಕೇ ಕೋಪದಿಂದ ಪತ್ರಿಕೆಯನ್ನು ದೂರ ಎಸೆದ.

"ಮಾನ್‌ಶಿಯರ್! ಕಾಫಿ" ಸರ್ವೀಸ್‌ಬಾಯ್ ಬ್ಲಾಕ್ ಕಾಫಿ ಕೊಡುತ್ತಾ ನುಡಿದ. ಜೇಕೇ ಕಪ್ ಎತ್ತಿಕೊಂಡು ಒಂದೇ ಗುಟುಕಿನಲ್ಲಿ ಕುಡಿದು ಕಪ್ ತಿರುಗಿ ಕೊಟ್ಟ.

ಅಷ್ಟರಲ್ಲಿ ಮತ್ತೊಂದು ಸಲ ಕಾಲಿಂಗ್ ಬೆಲ್ ಮೊಳಗಿತು. ತನ್ನ ಆಲೋಚನೆಗಳಿಗೆ ಭಂಗ ಬಂದದ್ದರಿಂದ ಬೇಸರದಿಂದ ತಲೆ ತಿರುಗಿಸಿ ನೋಡುತ್ತಾ "ಎಸ್ ಕಮಿನ್" ಎಂದ. ತಕ್ಷಣವೇ ಬಾಗಿಲು ತೆರೆದುಕೊಂಡು ನಾಲ್ವರು ವ್ಯಕ್ತಿಗಳು ಒಳಗೆ ಅಡಿಯಿಟ್ಟರು. ನಾಲ್ವರೂ ಫುಲ್ ಸೂಟ್‌ನಲ್ಲಿದ್ದರು. ಜೇಕೇ ಅವರ ಕಡೆ ಆಶ್ಚರ್ಯದಿಂದ ನೋಡಿದ. "ಯಾರು ನೀವು? ನನ್ನೊಂದಿಗೆ ಅಪಾಯಿಂಟ್‌ಮೆಂಟ್ ಇದೆಯಾ ?" ಅಯೋಮಯದಿಂದ ಕೇಳಿದ.

ಅವರಲ್ಲಿ ಒಬ್ಬ ವ್ಯಕ್ತಿ ದೊಡ್ಡ ದೊಡ್ಡ ಹೆಜ್ಜೆಯಿಡುತ್ತಾ ಅವನನ್ನು ಸಮೀಪಿಸಿ ಜೇಬಿನಿಂದ ತನ್ನ ಐಡೆಂಟಿಟಿ ಕಾರ್ಡ್ ತೆಗೆದು ತೋರಿಸಿದ.

"ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್! ಯು ಆರ್ ಅಂಡರ್ ಅರೆಸ್ಟ್ !" ಎಂದನವನು.

ಜೇಕೇ ಧಿಗ್ಗನೆದ್ದು ನಿಂತು, "ವ್ಹಾಟ್ ! ಆದರೆ.... ಆದರೆ.... ನಾನು ಮಾಡಿದ ಅಪರಾಧವೇನು ?"

"ಪ್ರಪಂಚದಲ್ಲಿನ ವಿವಿಧ ಭಯೋತ್ಪಾದಕ ತಂಡಗಳ ಪರವಾಗಿ ಫ್ರಾನ್ಸ್‌ನ

ನೆಲದ ಮೇಲೆ ರಹಸ್ಯವಾಗಿ ಆಯುಧಗಳ ಡೀಲಿಂಗ್ಸ್ ನಡೆಸಿದ್ದು, ಕೆಲವು ದೇಶಗಳ ಗೂಢಚಾರಿ ಸಂಸ್ಥೆಗಳ ಪರವಾಗಿ ಕಾರ್ಯಕಲಾಪಗಳನ್ನು ನಿರ್ವಹಿಸಿದ್ದು, ಮೇಖಲೆ ಎನ್ನುವ ಇಂಡಿಯನ್ ಕಾಲ್‌ಗರ್ಲ್‌ನಿಂದ ಫ್ರಾನ್ಸ್‌ನಲ್ಲಿ ಅನೇಕ ಸಲ ಕಾನೂನಿಗೆ ವಿರುದ್ಧವಾಗಿ ವ್ಯಭಿಚಾರ ಮಾಡಿಸಿದ್ದು ! ಸದ್ಯಕ್ಕೆ ಕೆಲವು ಪ್ರಶ್ನೆಗಳನ್ನು ಕೇಳಲು ಮಾತ್ರವೇ ನಿಮ್ಮನ್ನು ಕಸ್ಟಡಿಯೊಳಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಅಗತ್ಯವೆನಿಸಿದರೆ ನಿಮ್ಮ ಮೇಲೆ ನಂತರ ಚಾರ್ಜ್‌ಷೀಟ್ ಹಾಕ್ತೀವಿ."

ಆಶ್ಚರ್ಯದಿಂದ ಜೇಕೇಯ ಬಾಯಿಂದ ಮಾತು ಹೊರಬೀಳಲಿಲ್ಲ. ಆ ಇಂಟಲಿಜೆನ್ಸ್ ಏಜೆಂಟ್ ಮತ್ತೊಂದು ಹೆಜ್ಜೆ ಮುಂದಿಟ್ಟ. "ಸಾರಿ ಮಿಸ್ಟರ್ ಜೇಕೇ ! ನಿಮ್ಮ ಮೇಲೆ ತುಂಬಾ ದಿನಗಳಿಂದ ನಮ್ಮ ಡಿಪಾರ್ಟ್‌ಮೆಂಟ್ ನಿಗಾ ಇಟ್ಟಿದೆ. ಆದರೆ ಇಷ್ಟು ಬೇಗ ನಿಮ್ಮನ್ನು ಅರೆಸ್ಟ್ ಮಾಡಬೇಕಾಗಿ ಬರುತ್ತದೆಂದು ಅಂದುಕೊಂಡಿರಲಿಲ್ಲ. ನಿಮ್ಮನ್ನು ತಕ್ಷಣವೇ ಅರೆಸ್ಟ್ ಮಾಡಬೇಕೆಂದು ಸರ್ಕಾರದಿಂದ ನಮ್ಮ ಡಿಪಾರ್ಟ್‌ಮೆಂಟ್‌ಗೆ ಒತ್ತಡ ಬಂದಿದೆ. ಭಾರತದಲ್ಲಿ ಈಗಾಗಲೇ ನಿಮ್ಮ ಹೆಸರಿನ ಮೇಲೆ ದೊಡ್ಡ ಸ್ಕ್ಯಾಂಡಲ್ ಎದ್ದಿದೆ. ನೀವು ಹೆಚ್ಚಾಗಿ ಫ್ರಾನ್ಸ್‌ನಲ್ಲಿಯೇ ಇರುತ್ತಿದ್ದೀರಾದ್ದರಿಂದ ಆ ಸ್ಕ್ಯಾಂಡಲ್‌ನ ಛಾಯೆಗಳು ಫ್ರಾನ್ಸ್‌ಗೆ ಕೂಡಾ ವ್ಯಾಪಿಸುವುದು ಸರ್ಕಾರಕ್ಕಿಷ್ಟವಿಲ್ಲ. ಅದಕ್ಕೇ ನಿಮ್ಮನ್ನು ಅರೆಸ್ಟ್ ಮಾಡಬೇಕೆಂದು ಆಜ್ಞೆ ಬಂದಿದೆ" ಸ್ನೇಹಪೂರ್ವಕವಾಗಿ ನುಡಿದ.

ಜೇಕೇ ಕೆಲವು ಕ್ಷಣ ಏನೂ ಮಾತಾಡಲಿಲ್ಲ. "ಥ್ಯಾಂಕ್ಯೂ ಫಾರ್ ಯುವರ್ ಟಿಪ್!" ಜೇಕೇಯ ಧ್ವನಿಯಲ್ಲಿ ಮಾಮೂಲಾಗಿ ಧ್ವನಿಸುವ ದರ್ಪ ಆ ಸಮಯದಲ್ಲಿ ಕೇಳಿಬರಲಿಲ್ಲ.

"ಆಲ್‌ರೈಟ್! ಲೆಟ್ಸ್ ಗೋ" ಎಂದ ಆ ಏಜೆಂಟ್.

ಜೇಕೇ ಒಂದು ಸಲ ಭುಜ ಕುಣಿಸಿದ. "ನಡೀರಿ!"

ಅವನಿಗೆ ಎರಡು ಕಡೆಯೂ ಇಬ್ಬಿಬ್ಬರು ವ್ಯಕ್ತಿಗಳು ನಿಂತುಕೊಂಡು ಹೊರಗೆ ನಡೆಸಿಕೊಂಡು ಕರೆದೊಯ್ದರು. ಅವರ ಹಿಂದೆ ಪೊಲೀಸ್ ಕಾರು ಹತ್ತುತ್ತಿರುವಾಗ ಅವನಿಗೆ ಮೇಖಲೆ ನೆನಪಾದಳು. "ಬ್ಯಾಡ್‌ಲಕ್ ಬೇಬಿ !" ಮನಸ್ಸಿನಲ್ಲೇ ಅಂದುಕೊಂಡ.

ಪೊಲೀಸ್ ಕಾರು ಮುಂದಕ್ಕೆ ಸಾಗಿತು.

## ೨೭

"ಸ್ವಾಮೀಜಿ, ಭಾರತದಿಂದ ನಿಮಗೆ ಓವರ್‌ಸೀಸ್ ಕಾಲ್!" ವಿಮಾನ ನಿಲ್ದಾಣದ ಒಬ್ಬ ಅಧಿಕಾರಿ ಹೇಳಿದ.

ಏನನ್ನೋ ಸುದೀರ್ಘವಾಗಿ ಆಲೋಚಿಸುತ್ತಿದ್ದ ಮುನೀಂದ್ರಸ್ವಾಮಿ ಬೆಚ್ಚಿಬಿದ್ದು, ತಲೆಯೆತ್ತಿ ನೋಡಿದ. ಮುನೀಂದ್ರಸ್ವಾಮಿ ಇನ್ನೂ ಕೋಪನ್ ಹೇಗನ್ ವಿಮಾನ ನಿಲ್ದಾಣದಲ್ಲಿಯೇ ಇದ್ದ. ಡೆನ್ಮಾರ್ಕ್ ಸರ್ಕಾರದೊಂದಿಗೆ ಅವನ ಸಂಧಾನವಿನ್ನೂ ಪೂರ್ತಿಯಾಗಿರಲಿಲ್ಲ. ಪ್ರಪಂಚದಲ್ಲಿನ ಇತರ ದೇಶದ ಸರ್ಕಾರಗಳಂತೆಯೇ ಡೆನ್ಮಾರ್ಕ್ ಸರ್ಕಾರ ಅವನನ್ನು ತಮ್ಮ ದೇಶದೊಳಕ್ಕೆ ಬಿಡಲು ಸಿದ್ಧವಿದ್ದಿಲ್ಲ. ಆದರೆ ವಲಸೆ ಅಧಿಕಾರಿಗಳು ದೇಶ ಬಿಟ್ಟು ಹೋಗೆಂದು ಇನ್ನೂ ಕಟ್ಟುನಿಟ್ಟಾಗಿ ಅವನಿಗೆ ಹೇಳಿರಲಿಲ್ಲ. ಹಾಗಾಗಿ ಅವನು ವಿಮಾನ ನಿಲ್ದಾಣದಲ್ಲಿಯೇ ಉಳಿದುಕೊಂಡಿದ್ದ. ವಲಸೆ ಅಧಿಕಾರಿಗಳು ತನ್ನನ್ನು ಅಲ್ಲಿಂದಲೂ ಹೋಗೆಂದು ಹೇಳಿದರೆ ಯಾವ ದೇಶಕ್ಕೆ ಹೋಗಬೇಕು ಎಂದು ಆಲೋಚಿಸುತ್ತಿದ್ದ. ಅಮೇರಿಕನ್ ಸರ್ಕಾರ ಅವನನ್ನು ಹೊರ ತಳ್ಳಿದ ನಂತರ ಅವನ ಆಶ್ರಮಗಳಿಗೆ ವಿಪರೀತ ನಷ್ಟ ಉಂಟಾಗುತ್ತಿತ್ತು. ಲಕ್ಷಗಟ್ಟಲೆ ಡಾಲರ್‌ಗಳ ಆದಾಯ ತಂದುಕೊಡುವ ಅವನ ಭಕ್ತರು ಹಠಾತ್ತನೆ ತಮ್ಮ ಸ್ವಾಮೀಜಿಯ ಮೇಲೆ ವಿಶ್ವಾಸ ಕಳೆದುಕೊಂಡು ಆಶ್ರಮಗಳನ್ನು ಬಿಟ್ಟು, ಒಬ್ಬೊಬ್ಬರಾಗಿ ಹೊರಟು ಹೋಗುತ್ತಿದ್ದರು. ಹೀಗೆಯೇ ಮುಂದುವರಿದರೆ ತನ್ನ ಆಶ್ರಮಗಳೆಲ್ಲವೂ ಪೂರ್ತಿಯಾಗಿ ದಿವಾಳಿಯಾಗಬಹುದು. ಆಗ ಆಕಾಶದಲ್ಲಿ ಬದುಕಲು ತನಗೆ ಅವಕಾಶವಿರುವುದಿಲ್ಲ. ಆದಾಯವಿಲ್ಲದೆ ಸ್ವಂತ ವಿಮಾನ ಮೈನ್‌ಟೇನ್ ಮಾಡುವುದೆಂದರೆ ಹುಡುಗಾಟವಲ್ಲ. ಸದ್ಯಕ್ಕೆ ಅವನು ಅದೇ ದಿಗಿಲಿನಲ್ಲಿದ್ದ.

"ನಿಮಗೆ ಇಂಡಿಯಾದಿಂದ ಓವರ್‌ಸೀಸ್ ಕಾಲ್ !" ಮತ್ತೊಂದು ಸಲ ಹೇಳಿದ ಆ ಅಧಿಕಾರಿ.

"ಓ! ರಿಸೀವ್ ಮಾಡ್ಕೊಳ್ತೀನಿ, ಥ್ಯಾಂಕ್ಯೂ" ಮುನೀಂದ್ರಸ್ವಾಮಿ ಭಾರವಾಗಿ ಕುರ್ಚಿಯಿಂದ ಎದ್ದು, ಬಾಗಿ ನಡೆಯುತ್ತಾ ಟೆಲಿಫೋನ್ ಇದ್ದ ಕಡೆ ನಡೆದ.

ಇತ್ತೀಚೆಗೆ ಭಯ ಅವನನ್ನು ತುಂಬಾ ಕುಗ್ಗಿಸಿತ್ತು. ಅದಕ್ಕೇ ಬಾಗಿ ನಡೆಯುತ್ತಿದ್ದ. "ಹಲೋ! ಮುನೀಂದ್ರಸ್ವಾಮಿ ಮಾತಾಡ್ತಿದೀನಿ" ಬಲ ಹೀನವಾಗಿ ನುಡಿದ.

"ನಾನು ಮೇಖಲೆ."

ಆ ಹೆಸರು ಕೇಳಿದೊಡನೆಯೇ ಮುನೀಂದ್ರಸ್ವಾಮಿಯ ಕಣ್ಣುಗಳು ಆಶ್ಚರ್ಯದಿಂದ ಅರಳಿದವು. "ನೀನಾ ? ಏನು ಫೋನ್ ಮಾಡಿದ್ದು ?"

"ನಿಮಗೆ ಸಹಾಯ ಮಾಡ್ಬೇಕೂಂತ!"

"ನೀನಾ! ನನಗೆ ಸಹಾಯ ಮಾಡ್ತೀಯಾ ?"

"ಯಾಕೆ ಮಾಡಬಾರದಾ ?"

"ಏನು ಮಾಡ್ತೀಯಾ ಹೇಳು ?"

"ಅಷ್ಟು ನಿರಾಶೆ ಯಾಕೆ? ನಾನು ನಿಮಗೊಂದು ಮಾಸ್ಟರ್ ಪ್ಲಾನ್ ಹೇಳ್ತೀನಿ. ಹಾಗೆ ಮಾಡಿದರೆ ನಿಮ್ಮನ್ನು ಹೊರ ತಳ್ಳಿದ ಅಮೆರಿಕಾ ಸರ್ಕಾರವೇ ತಿರುಗಿ ನಿಮಗೆ ಆಶ್ರಯ ಕೊಡುತ್ತದೆ."

ಮುನೀಂದ್ರಸ್ವಾಮಿಯ ಹೃದಯದಲ್ಲಿ ಆಸೆ ಚಿಗುರಿತು. "ಏನದು ಹೇಳು?" ಎಂದ.

"ಇಲ್ಲಿ ಇಂಡಿಯಾದಲ್ಲಿ ನನ್ನ ಹೆಸರಿನ ಮೇಲೆ ಎದ್ದಿರುವ ಸ್ಕ್ಯಾಂಡಲ್ ನಿಮಗೆ ಗೊತ್ತಾ?"

ಮುನೀಂದ್ರಸ್ವಾಮಿ ನಿಟ್ಟುಸಿರಿಟ್ಟ."ಗೊತ್ತು, ಈ ಬೆಳಿಗ್ಗೇನೇ ಡೆನ್ಮಾರ್ಕ್ ಪೇಪರ್‌ಗಳಲ್ಲಿ ಓದಿದೆ. ತಾರಕನಾಮ ರಿಸೈನ್ ಮಾಡಿದ!" ಎಂದ.

"ಹೌದು ತಾರಕನಾಮ ಯಾಕೆ ರಿಸೈನ್ ಮಾಡಬೇಕಾಗಿ ಬಂತು ಗೊತ್ತು ತಾನೆ ?"

"ಗೊತ್ತು, ಯಾವುದೋ ದೇಶದ ರಹಸ್ಯಗಳನ್ನು ನಿನಗೆ ಕೊಟ್ಟನೆಂದು."

"ಹೌದು, ತಾರಕನಾಮ ನನಗೊಂದು ಸೀಕ್ರೆಟ್ ಫೈಲ್ ಕೊಟ್ಟ ಮಾತು ನಿಜವೆ. ಅದು ನನ್ನ ಹತ್ತಿರವೇ ಇದೆ. ನಾನೀಗ ಅಜ್ಞಾತವಾಸದಲ್ಲಿದ್ದೇನೆ. ಆ ಫೈಲ್ ನನ್ನ ಹತ್ತಿರವಿರುವುದು ಅಪಾಯವೇ."

"ಅಂದ್ರೆ ?"

"ನೀವೊಂದು ಕೆಲಸ ಮಾಡಿ. ಕೋಪನ್ ಹೇಗನ್ ಬಿಟ್ಟು ತಕ್ಷಣವೇ ಭಾರತಕ್ಕೆ ಹೊರಡಿ. ರಿಫ್ಯೂಯೆಲಿಂಗ್ ನೆಪದ ಮೇಲೆ ಬೇಗಂಪೇಟ್ ಏರ್ ಪೋರ್ಟ್‌ನಲ್ಲಿ ವಿಮಾನ ಇಳಿಸಿ. ನಾನು ಅಲ್ಲಿ ನಿಮ್ಮನ್ನು ಭೇಟಿಯಾಗ್ತೀನಿ. ಆ ಸೀಕ್ರೆಟ್ ಫೈಲ್ ನಿಮಗೇ ಕೊಡ್ತೀನಿ."

"ನನಗಾ ? ಆ ಫೈಲ್ ನಾನೇನು ಮಾಡಿಕೊಳ್ಳಲಿ ?"

"ದೇಶ ಬಹಿಷ್ಕರಣೆಯಿಂದ ನಿಮಗೆ ಬುದ್ಧಿ ಮಂದವಾಗಿರುವಂತಿದೆ. ಆ ಫೈಲ್ ಎಷ್ಟು ಬೆಲೆ ಬಾಳುವುದೆಂದು ನಿಮಗೆ ಗೊತ್ತು. ಅದನ್ನು ಬಳಿಯಿಟ್ಟು

ಕೊಂಡು ಅಮೇರಿಕಾದೊಂದಿಗೆ ವ್ಯಾಪಾರ ಮಾಡಿ. ಭಾರತದ ರಕ್ಷಣಾ ರಹಸ್ಯಗಳಿಗೆ ಸಂಬಂಧಿಸಿದ ತುಂಬಾ ಬೆಲೆ ಬಾಳುವ ರಹಸ್ಯಗಳು ನಿಮ್ಮ ಬಳಿಯಿವೆಯೆಂದೂ, ನಿಮ್ಮನ್ನು ಮತ್ತೆ ಆ ದೇಶದಲ್ಲಿ ಬರಲು ಬಿಟ್ಟರೆ ಫೈಲ್ ಒಪ್ಪಿಸುತ್ತೇನೆಂದೂ ಹೇಳಿ."

ಮುನೀಂದ್ರಸ್ವಾಮಿಯ ಮುಖ ದೀವಟಿಗೆಯಂತೆ ಬೆಳಗಲಾರಂಭಿಸಿತು. "ಯು ಆರ್ ಎ ಜೀನಿಯಸ್ ಮೇಖಲೆ. ನೀನು ಹೇಳುವವರೆಗೂ ನನಗೆ ಹೊಳೆಯಲೇ ಇಲ್ಲ. ಆದರೆ ನನಗೆ ಸಹಾಯ ಮಾಡಿದರೆ ನಿನಗೇನು ಲಾಭ ?"

"ಅಮೇರಿಕನ್ ಪೌರತ್ವ!"

"ಅಂದ್ರೆ?"

"ಅಂದ್ರೆ, ಅಮೇರಿಕಾ ಸರ್ಕಾರಕ್ಕೆ ಎರಡು ಷರತ್ತುಗಳನ್ನು ಹಾಕಿ ಒಂದು—ಅಮೇರಿಕಾ ನಿಮ್ಮನ್ನು ಮತ್ತೆ ಆ ದೇಶದೊಳಕ್ಕೆ ಬರಲು ಬಿಡುವುದು, ಎರಡು-ನನಗೆ ಗ್ರೀನ್ ಕಾರ್ಡ್ ಕೊಡಿಸುವುದು. ಇಷ್ಟು ದೊಡ್ಡ ಸ್ಕ್ಯಾಂಡಲ್ ಎದ್ದ ನಂತರ ನಾನಿನ್ನು ಯಾವ ಮುಖ ಇಟ್ಕೊಂಡು ಭಾರತದಲ್ಲಿರಲಿ? ನಾನು ನಿಮ್ಮ ಹಿಂದೆ ಬಂದು ನಿಮ್ಮ ಆಶ್ರಮದಲ್ಲಿ ಸೇರಿಬಿಡ್ತೀನಿ."

"ಎಕ್ಸಲೆಂಟ್! ಹಾಗಿದ್ರೆ ನಾನು ತಕ್ಷಣವೇ ಭಾರತಕ್ಕೆಹೊರಟುಬರ್ತೀನಿ."

"ತಡಮಾಡಬೇಡಿ" ಅತ್ತಲಿನ ಲೈನ್ ಡಿಸ್ ಕನೆಕ್ಟ್ ಆಯ್ತು. ಮುನೀಂದ್ರಸ್ವಾಮಿ ಉಲ್ಲಾಸದಿಂದ ರಿಸೀವರ್ ಕ್ರೆಡಲ್ ಮಾಡಿ ಹಿಂದಕ್ಕೆ ತಿರುಗಿದ.

## ೨೮

ಜಾನಿವಾಕರ್ ಬೇಗದ ಕೈಯಿಂದ ತನ್ನ ಅಪಾರ್ಟ್‌ಮೆಂಟ್‌ನ ಬಾಗಿಲು ತೆರೆಯುತ್ತಾ, ಓರೆಯಾಗಿ ಭುಜದ ಮೇಲಿನಿಂದ ಹಿಂದಕ್ಕೆ ನೋಡಿದ.

ಸಂದೇಹವಿಲ್ಲ. ಯಾರೋ ತನ್ನನ್ನು ಹಿಂಬಾಲಿಸುತ್ತಿದ್ದಾರೆ!

ಆ ಬಿಲ್ಡಿಂಗ್ ಪಾರ್ಕಿಂಗ್ ಪ್ಲೇಸ್‌ನಲ್ಲಿ ತನ್ನ ಕಾರು ಪಾರ್ಕ್ ಮಾಡಿ ಇಳಿದ ತಕ್ಷಣವೇ ಅವನಿಗೆ ಅನುಮಾನ ಬಂದಿತು. ಈಗ ಆ ಅನುಮಾನ ದೃಢಪಟ್ಟಿತು. ತಾನು ಭುಜದ ಮೇಲಿನಿಂದ ಹಿಂದಿರುಗಿ ನೋಡಿದೊಡನೆಯೇ ಒಂದು ಆಕಾರ ಥಟ್ಟನೆ ಪಕ್ಕದ ಕಾರಿಡಾರ್‌ನಲ್ಲಿ ಸರಿದುಕೊಂಡಿತು. ಜಾನಿವಾಕರ್ ಏನೂ ನಡೆಯದಂತೆ, ಮಾಮೂಲಾಗಿ ಬಾಗಿಲು ತೆರೆದು ಒಳಹೋಗಿ ತಟಕ್ಕನೆ ಬಾಗಿಲ ಮರೆಗೆ ನಿಂತ. ಅವನ ಬಲಗೈ ಪ್ಯಾಂಟ್ ಜೇಬಿನಲ್ಲಿದ್ದ ರಿವಾಲ್ವರ್ ಮೇಲೆ ಸಿದ್ಧವಾಗಿತ್ತು.

ಬಾಗಿಲ ಹತ್ತಿರ ಯಾರದೋ ಹೆಜ್ಜೆಗಳ ಸಪ್ಪಳ ಕೇಳಿಸಿತು. ನೋಡುತ್ತಿರುವಂತೆಯೇ ಒಂದು ಆಕಾರ ಅವನ ಅಪಾರ್ಟ್‌ಮೆಂಟ್‌ನೊಳಗೆ ಪ್ರವೇಶಿಸಿತು.

ಜಾನಿವಾಕರ್ ಥಟ್ಟನೆ ರಿವಾಲ್ವರ್ ತೆಗೆದು ಮುಂದೆ ಬಂದ. "ಡೋಂಟ್ ಮೂವ್" ರಿವಾಲ್ವರ್ ಅನ್ನು ಆ ಆಕಾರದ ಕಡೆ ಗುರಿಯಿಡುತ್ತಾ, ನಿಶ್ಚೇಷ್ಟಿತನಾಗಿ ನಿಂತುಬಿಟ್ಟ. ಆ ಆಕಾರ ನಿಧಾನವಾಗಿ ಅವನ ಕಡೆ ತಿರುಗಿತು.

"ನೀನಾ?"

ಅವನ ಎದುರಿಗೆ ದೇವ ನಿಂತಿದ್ದ. ಅವನ ದೃಷ್ಟಿ ರಿವಾಲ್ವರ್ ಮೇಲೆ ನಿಂತಿತು. ತನ್ನ ಸಹಜ ಧೋರಣೆಯಲ್ಲಿ ಹುಚ್ಚನಂತೆ ನಗುತ್ತಾ, ಮುಂದೆ ಬಂದ. "ಪಿಸ್ತೂಲು ಚೆನ್ನಾಗಿದೆ ಬಾಸ್, ದೀಪಾವಳಿಗೋಸ್ಕರ ಕೊಂಡ್ಕೊಂಡ್ಯಾ?"

"ಶಟಪ್, ಕೆಲವು ಕ್ಷಣ ನನ್ನ ಹೆದರಿಸಿ ಬಿಟ್ಟೆ. ಏನು ಹೀಗ್ಬಂದೆ?" ರಿವಾಲ್ವರ್ ತಿರುಗಿ ಜೇಬಿನಲ್ಲಿಟ್ಟುಕೊಳ್ಳುತ್ತಾ ಗದರಿಸಿದ ಜಾನಿವಾಕರ್

ದೇವ ತಟಕ್ಕನೆ ಅವನ ಕೈಹಿಡಿದುಕೊಂಡು ಸೋಫಾದಕಡೆ ಎಳೆದೊಯ್ದ. ಜಾನಿವಾಕರ್ ಏನೋ ಹೇಳುವಷ್ಟರಲ್ಲಿಯೇ ಅವನನ್ನು ಬಲವಂತವಾಗಿ ಸೋಫಾದಲ್ಲಿ ತಳ್ಳಿ, ತಾನು ಅವನ ಕಾಲ ಹತ್ತಿರ ಕುಳಿತುಕೊಂಡ. "ಕೂತ್ಕೋ ಬಾಸ್! ಕೂತ್ಕೊಂಡ್ರೆ ನಾನು ಹೇಳೋದೆಲ್ಲಾ ನಿನ್ನ ತಲೆಗೇರುತ್ತೆ "

"ಊಂ. ಏನು ಹೇಳು."

ದೇವ ಅಕಸ್ಮಾತ್ತಾಗಿ ಅಳತೊಡಗಿದ.

"ಏಯ್! ಯಾಕೆ ಅಳ್ತಿದ್ದೀಯ ?" ಜಾನಿವಾಕರ್ ವಿಸ್ಮಯದಿಂದ ಕೇಳಿದ.

ದೇವ ಅಳುತ್ತಲೇ ಉತ್ತರವಿತ್ತ. "ಮೇಖಲೆ ಈಸ್ ಗ್ರೇಟ್ ಬಾಸ್. ನೀನು ಅವಳನ್ನು ತುಂಬಾ ತಪ್ಪು ತಿಳ್ಕೊಂಡಿದ್ದೀಯ."

"ಅಂದ್ರೆ ?"

"ಷಿ ಈಸ್ ಗ್ರೇಟ್–ಅಷ್ಟೆ."

"ನೀನು ಹೇಳಿದ್ರೆ ಸಾಕಾ ?"

"ಯಾಕೆ ಆಗೋದಿಲ್ಲ. ಕೆಲವು ಕಾಲದಿಂಗ ನಾವಿಬ್ರೂ ಫ್ರೆಂಡ್ಸ್, ಬೇಕಿದ್ದರೆ ನೋಡು ಬಾಸ್ ನನ್ನ ಹತ್ತಿರ ಸಾಕ್ಷ್ಯಕೂಡ ಇದೆ."

ಅವನು ಭುಜಕ್ಕಿದ್ದ ಚೀಲದೊಳಗಿಂದ ತನ್ನ ಪುಸ್ತಕ ಹೊರತೆಗೆದ. ತಮಾಷೆಯಾಗಿ ಕಾಣುತ್ತಿದ್ದ ಆ ಪುಸ್ತಕದ ಕಡೆ ಜಾನಿವಾಕರ್ ಕಣ್ಣರಳಿಸಿ ನೋಡಿದ. "ಇದು ದೇವನ ಡೈರಿ ಬಾಸ್. ದೇವರು ಮಾಡಲು ಮರೆತ ಕೆಲಸಗಳೆಲ್ಲವನ್ನೂ ಇದರಲ್ಲಿ ಬರ್ಕೊಂತೀನಿ. ಆ ಒಳ್ಳೆಯ ಕೆಲಸಗಳೆಲ್ಲವನ್ನೂ ಮೇಖಲೆ ತನ್ನ ಕೈಯಲ್ಲೇ ಮಾಡಿಸುತ್ತಾಳೆ."

ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ,
ಬೆಂಗಳೂರು.



"ಏನಿದು ಅರ್ಥವಿಲ್ಲದ ವಟವಟ?"

"ವಟವಟ ಅಲ್ಲ ಬಾಸ್, ಸತ್ಯ. ಸತ್ಯವಾಗ್ಲೂ ಸತ್ಯ. ಬೇಕಿದ್ರೆ ನೋಡು. ಈ ದೇವರ ಡೈರಿ ನಾನ್ಯಾರಿಗೂ ತೋರಿಸೋದಿಲ್ಲ. ಆದರೆ ಈಗ ನಿನಗೆ ತೋರಿಸುತ್ತಿದ್ದೇನೆ. ನೋಡು, ಈ ಪೇಜ್ ನೋಡು. ಈ ಪೇಜಿನಲ್ಲಿ ಐದು ಲಕ್ಷ ರೂಪಾಯಿ! ಈ ಪೇಜ್‌ನಲ್ಲಿ ನೋಡು–ಮೂರು ಲಕ್ಷ ರೂಪಾಯಿ! ಇದರಲ್ಲಿ ನಾಲ್ಕು ಲಕ್ಷ ರೂಪಾಯಿ–ಇಲ್ನೋಡು ಎರಡು ಲಕ್ಷ ರೂಪಾಯಿಗಳು! ಈ ಡೈರಿಯ ತುಂಬಾ ಇಂತಹ ಎಂಟ್ರಿಗಳು ಇನ್ನೂ ಸಾಕಷ್ಟಿವೆ. ಮೇಖಲೆ ಸಂಪಾದಿಸುವ ದುಡ್ಡನ್ನು ತನ್ನ ಬಳಿ ಇಟ್ಕೊಳ್ಳೋದಿಲ್ಲ ಬಾಸ್, ಎಲ್ಲರಿಗೂ ಹಂಚ್ತಾಳೆ. ಹಂಚೋದು ನಾನೇ!"

"ನೀನು ಹೇಳೋದು ನಿಜಾನಾ ?" ಜಾನಿವಾಕರ್ ಆಶ್ಚರ್ಯದಿಂದ ಕೇಳಿದ.

ದೇವ ತಲೆಯಾಡಿಸಿದ. ಕಣ್ಣುಗಳಲ್ಲಿ ಇನ್ನೂ ನೀರು ಜಿನುಗುತ್ತಿತ್ತು. "ಮೇಖಲೆಗೆ ಮನುಷ್ಯರ ಮೇಲೆ ದ್ವೇಷವಿಲ್ಲ ಬಾಸ್. ಮೇಖಲೆಗೆ ಮನುಷ್ಯರ ಮೇಲೆ ಪ್ರೇಮ. ಆಕಾಶದಷ್ಟು ಪ್ರೇಮ! ಮನುಷ್ಯರನ್ನು ಪ್ರೇಮಿಸುವ ವ್ಯಕ್ತಿ ಒಂದು ದೇಶವನ್ನೇ ನಾಶ ಮಾಡಬಲ್ಲಳೆ ಬಾಸ್ ?"

ಜಾನಿವಾಕರ್‌ಗೆ ಅವನು ಹೇಳುತ್ತಿರುವುದೇನೆಂದು ನಿಧಾನವಾಗಿ ಅರ್ಥವಾಗತೊಡಗಿತು. ಮೇಲೆ ಹುಚ್ಚನಂತೆ ಕಾಣಿಸುವ ಈ ದೇವ ಎಷ್ಟು ಚೆನ್ನಾಗಿ ಮಾತಾಡ್ತಿದ್ದಾನೆ.

"ನೀನು ಹೇಳೋದು ನಿಜವೇ ಆಗಿರಬಹುದು ದೇವರೆ. ಆದರೆ....!"

"ಪೂರ್ತಿಯಾಗಿ ಕೇಳು ಬಾಸ್. ಐದು ಲಕ್ಷ ರೂಪಾಯಿಗಳನ್ನು ಒಂದು ಸ್ಲಮ್ ಏರಿಯಾದಲ್ಲಿ ನೀರಿನ ಟ್ಯಾಂಕ್ ಒಡೆದು ಸತ್ತುಹೋದವರ ಕುಟುಂಬಗಳಿಗೆ ಕೊಟ್ಟಳು. ಇಲ್ಲಿ ಬರೆದಿರೋ ಈ ಐವತ್ತು ಸಾವಿರ ಒಬ್ಬ ರೋಗಿಷ್ಟ ಯುವತಿಯ ಆಪರೇಷನ್‌ಗೋಸ್ಕರ ಮೇಖಲೆ ಕೊಟ್ಟಳು. ಇಲ್ಲಿ ಬರೆದಿರೊ ಲಕ್ಷ...."

"ಆಲ್‌ರೈಟ್, ಆಲ್‌ರೈಟ್" ಜಾನಿವಾಕರ್ ನಡುವೆ ಬಾಯಿ ಹಾಕಿದ. "ಮೇಖಲೆ ಬೇಕಾದಷ್ಟು ರಹಸ್ಯವಾಗಿ ದಾನ ಮಾಡಿದ್ದಾಳೆ ಒಪ್ಕೋತೀನಿ. ಆದರೆ...."

"ಇದರಲ್ಲಿ ಆದ್ರೆ, ಗೀದ್ರೆ ಏನೂ ಇಲ್ಲ ಬಾಸ್. ಷಿ ಈಸ್ ಗ್ರೇಟ್ ಅಷ್ಟೆ."

ಜಾನಿವಾಕರ್ ಮತ್ತೆ ಏನೋ ಹೇಳಲು ಹೋದ. ದೇವ ಅವನನ್ನು ಮಾತಾಡಗೊಡಿಸಲಿಲ್ಲ. "ಅವಳನ್ನು ನಾನು ಮೊದಲ ಸಲ ಯಾವಾಗ

ಭೇಟಿಯಾದೆ ಗೊತ್ತಾ ಬಾಸ್? ಒಂದು ಸಲ ನಾನು ಅವಳ ಕಾರಿನ ಕೆಳಗೆ ಬಿದ್ದಾಗ, ತನ್ನ ಕಾರಿನಲ್ಲಿಯೆ ಅವಳು ನನ್ನನ್ನು ಹಾಸ್ಪಿಟಲ್‌ಗೆ ಕರೆದೊಯ್ದಳು ನಾನು ಹೇಳ್ತಿದೀನಿ ಬಾಸ್, ಅಂತಹವರು ತುಂಬಾ ಕಡಿಮೆ ಜನ. ಮನುಷ್ಯರ ಮೇಲೆ ಅವಳಿಗೆ ಕೋಪ ಇರುವ ಮಾತು ನಿಜವೇ ಬಾಸ್. ಆದರೆ ಮಾಡಬೇಕೆಂದರೂ ಅವಳು ಸಾಮಾನ್ಯ ಪ್ರಜೆಗಳಿಗೆ ಹಾನಿ ಮಾಡಲಾರಳು. ಇದನ್ನು ಅರ್ಥಮಾಡ್ಕೊಳ್ಳಿ ಬಾಸ್!"

ಜಾನಿವಾಕರ್ ಅವನ ವಿಷಾದಪೂರಿತವಾದ ಕಣ್ಣುಗಳೆಡೆಗೆ ತುಂಬಾ ಹೊತ್ತು ನೋಡುತ್ತಿದ್ದುಬಿಟ್ಟ. "ನಿನ್ನ ಮಾತು ನಂಬಬೇಕೆನಿಸುತ್ತದೆ ದೇವ ಆದರೆ...."

"ಮತ್ತೆ ಆದರೆ ಅನ್ಬೇಡ ಬಾಸ್. ನನ್ನ ಮಾತಿನ ಮೇಲೆ ನಿನಗೆ ವಿಶ್ವಾಸ ವಿಲ್ಲದಿದ್ದರೆ ಇದನ್ನು ನೋಡು!" ಅವನು ತನ್ನ ಚೀಲದಿಂದ ಇನ್ನೊಂದು ವಸ್ತುವನ್ನು ಹೊರತೆಗೆದ.

ಆ ವಸ್ತುವೇನೆಂದು ನೋಡಿದೊಡನೆಯೆ ಜಾನಿವಾಕರ್ ಬೆಚ್ಚಿಬಿದ್ದ. "ಮೈ ಗಾಡ್! ಇದು....ಇದು....ನಿನ್ನ ಕೈಗೆ ಹ್ಯಾಗ್ಬಂತು?"

"ನಾನೇ ಕದ್ದೆ ಬಾಸ್. ಅವಳು ಬಚ್ಚಿಟ್ಟ ಸ್ಥಳದಿಂದ ಅವಳಿಗೆ ತಿಳಿಯದಂತೆ ಕದ್ದೆ. ನೀನು ನನ್ನ ಮಾತು ನಂಬೋದಿಲ್ಲಾಂತ ನಿನಗೆ ಇದನ್ನು ತೋರಿಸಬೇಕೆಂದು ಕದ್ದೆ".

ಜಾನಿವಾಕರ್ ಥಟ್ಟನೆ ಆ ಫೈಲ್ ಇಸಿದುಕೊಂಡು ಸರಸರನೆ ಒಳಗಿನ ಪುಟಗಳನ್ನು ತಿರುವಿ ಹಾಕತೊಡಗಿದ. ಅವನಿಂದ ಇನ್ನೂ ನಂಬಲಾಗುತ್ತಿದ್ದಿಲ್ಲ. ಫೈಲ್ ಮುಚ್ಚಿಬಿಟ್ಟು, ಮೇಲೆ ಸ್ಪಷ್ಟವಾಗಿ ಬರೆದಿದ್ದ ಅಕ್ಷರಗಳ ಕಡೆ ಕಣ್ಣರಳಿಸಿ ನೋಡಿದ.

'ಟಾಪ್ ಸೀಕ್ರೆಟ್!'

"ಆದರೆ.... ಆದರೆ ಇದನ್ನು ಇಲ್ಲಿಗ್ಯಾಕೆ ತಂದೆ?"

"ಹೇಳಿದ್ನಲ್ಲ ಬಾಸ್! ನಿನಗೆ ತೋರಿಸೋಣಾಂತ ತಂದೆ. ಕಣ್ಣಿಂದ ನೋಡದ ಹೊರತು ನೀನು ನಂಬೋದಿಲ್ಲಾಂತ ತಂದೆ. ಇನ್ನೂ ಅರ್ಥವಾಗ್ಲಿಲ್ವಾ ಬಾಸ್? ಅವಳು ಈ ಫೈಲ್ ಸಂಪಾದಿಸಿ ಎಷ್ಟು ಕಾಲವಾಯ್ತು? ಬಯಸಿದ್ದರೆ ಅವಳು ಈ ಫೈಲ್ ಅನ್ನು ಯಾವಾಗಲೋ ಬೇರೊಬ್ಬರಿಗೆ ಕೊಟ್ಟಿರುತ್ತಿದ್ದಳು. ಆದರೆ ಅವಳು ಹಾಗೆ ಮಾಡಲಿಲ್ಲ. ಯಾರಿಗೂ ತಿಳಿಯದ ಸ್ಥಳದಲ್ಲಿ ಭದ್ರವಾಗಿ ಇದನ್ನು ಬಚ್ಚಿಟ್ಟಿದ್ದಳು. ಕಾರಣ? ಒಂದು ಸಲ ಈ ಫೈಲ್ ಕೈ ದಾಟಿದರೆ ಏನು ನಡೆಯುತ್ತದೆ ಎನ್ನುವುದು ಅವಳಿಗೆ ಗೊತ್ತಿದೆ. ಆದ್ದರಿಂದ

ಕೊಡಬೇಕೆಂದುಕೊಂಡರೂ ನೋಡಿ ನೋಡಿ ಈ ಫೈಲನ್ನು ಶತ್ರುಗಳಿಗೆ ಕೊಡಲು ಸಾಧ್ಯವಾಗಿಲ್ಲ. ಮನುಷ್ಯರ ಮೇಲೆ ಅವಳಿಗಿರುವ ಪ್ರೇಮದ ಮುಂದೆ ದ್ವೇಷ ಸೋತುಹೋಯ್ತು ಬಾಸ್!"

"ಅಷ್ಟು ಖಚಿತವಾಗಿ ಹೇಗೆ ಹೇಳಬಲ್ಲೆ"?

"ನಾನು ವರ್ಷಗಳ ಕಾಲದಿಂದ ಅವಳನ್ನು ಸ್ಟಡಿ ಮಾಡ್ತಿದೀನಿ ಬಾಸ್! ಅವಳ ಬಗೆಗೆ ಅವಳಿಗೆ ತಿಳಿದಿರುವುದಕ್ಕಿಂತ ನನಗೆ ಹೆಚ್ಚು ಗೊತ್ತು! ಅವಳಲ್ಲಿ ಎರಡು ಪ್ರವೃತ್ತಿಗಳಿವೆ ಬಾಸ್. ಒಂದು ಪ್ರವೃತ್ತಿ ಎಲ್ಲವನ್ನೂ ಸರ್ವನಾಶ ಮಾಡೆಂದು ಪ್ರೋತ್ಸಾಹಿಸುತ್ತದೆ. ಮತ್ತೊಂದು ಪ್ರವೃತ್ತಿ ಬೇಡ ಆಲೋಚಿಸು ಎನ್ನುತ್ತದೆ. ಆ ಎರಡೂ ಪ್ರವೃತ್ತಿಗಳ ನಡುವೆ ಅವಳು ಹೇಗೆ ನಲುಗಿ ಹೋಗು ತ್ತಿದ್ದಾಳೆಂದು ನಂಗೊತ್ತು. ಅವಳಲ್ಲಿ ಎರಡು ಪ್ರವೃತ್ತಿಗಳಿರುವುದು ಆಶ್ಚರ್ಯ ವಲ್ಲ ಬಾಸ್! ಈ ವ್ಯವಸ್ಥೆಯಲ್ಲಿ ಯಾವ ವ್ಯಕ್ತಿಗೂ ಒಂದೇ ಪ್ರವೃತ್ತಿಯಿರು ವುದು ಸಾಧ್ಯವಾಗದು! ಒಂದು ಕಡೆ ಮನುಷ್ಯರನ್ನು ದ್ವೇಷಿಸುತ್ತಾನೆ, ಮತ್ತೊಂದು ಕಡೆ ಮನುಷ್ಯರನ್ನು ಪ್ರೇಮಿಸುತ್ತಾನೆ! ಅವಳೂ ಕೂಡ ಅಷ್ಟೇ ಬಾಸ್! ಪಾಪ ಎಳೆತನದಲ್ಲಿ ಭಯಂಕರವಾದ ಅನುಭವಗಳ ರುಚಿ ನೋಡಿದ್ದಾಳೆ. ಅವಳಲ್ಲಿ ಅವಳ ತಂದೆಯ ರಕ್ತವೂ ಇದೆ. ಮನುಷ್ಯರು ತುಂಬಿದ ವಿಷವೂ ಇದೆ. ಈ ವಿಷವನ್ನು ಆ ರಕ್ತ ಆವಾಗಿಂದಾವಾಗ ಕೆಲಸ ಮಾಡದಂತೆ ನಿಷ್ಕ್ರಿ ಯಗೊಳಿಸುತ್ತಿರುತ್ತದೆ. ನಾನು ಕೋರುವುದು ಒಂದೇ ಬಾಸ್! ದಯವಿಟ್ಟು ಅವಳನ್ನು ದ್ವೇಷಿಸಬೇಡ! ಪ್ರೇಮಿಸು, ಅವಳಿಗೆ ಜೀವನದಲ್ಲಿ ಪ್ರೇಮ ತುಂಬಾ ಕಡಿಮೆ ಸಿಕ್ಕಿದೆ ಬಾಸ್. ನಾನು ಅವಳನ್ನು ಪ್ರೇಮಿಸುತ್ತಿದ್ದೇನೆ. ನೀನೂ ಅವಳನ್ನು ಪ್ರೇಮಿಸು. ಪ್ರೇಮ, ಪ್ರೇಮವನ್ನು ಹುಟ್ಟಿಸುತ್ತದೆ. ದ್ವೇಷ, ದ್ವೇಷವನ್ನು ಬೆಳೆಸುತ್ತದೆ. ಇದಕ್ಕಿಂತಲೂ ಹೆಚ್ಚು ನಾನೇನೂ ಹೇಳೋದಿಲ್ಲ ಬಾಸ್! ಇನ್ನು ಬರ್ತೀನಿ! ಈ ಫೈಲ್ ಎಲ್ಲಿಂದ ತೆಗೆದೆನೋ ಅಲ್ಲಿಯೇ ಇಡ್ತೀನಿ ಬರ್ತೀನಿ ಬಾಸ್. ಅವಳನ್ನು ಪ್ರೇಮಿಸುವುದು ಮಾತ್ರ ಮರೀಬೇಡ."

"ನಿಲ್ಲು, ಆ ಫೈಲ್ ಆ ರೀತಿ ಅಜಾಗ್ರತೆಯಿಂದ ಒಯ್ಯುವುದು ಅಪಾಯ."

"ಪರವಾಗಿಲ್ಲ ಬಾಸ್, ನನ್ನ ಶರೀರದಲ್ಲಿ ಪ್ರಾಣವಿರುವವರೆಗೆ ಅದನ್ನು ಯಾರೂ ಮುಟ್ಟಲಾರರು. ಒಂದು ವೇಳೆ ಪ್ರಾಣ ಹೋಗುವಂತಿದ್ದರೆ ಅದನ್ನು ನಾಶಮಾಡದ ಹೊರತು ಪ್ರಾಣ ಬಿಡಲಾರೆ. ಅದನ್ನು ಶತ್ರುಗಳ ಕೈಗೆ ಮಾತ್ರ ಒಪ್ಪಿಸಲಾರೆ ಬಾಸ್. ಬರ್ತೀನಿ ಗುಡ್‌ಬೈ" ಅವನು ಎದ್ದು ನಿಂತು ಜಾನಿವಾಕ ರ್‌ಗೆ ಮಿಲಿಟರಿ ಪದ್ಧತಿಯಲ್ಲಿ ಸೆಲ್ಯೂಟ್ ಮಾಡಿದ. ನಂತರ ಹೋದ.

ಅವನು ಹೋಗುತ್ತಲೇ ಜಾನಿವಾಕರ್ ಎರಡೂ ಕೈಗಳಲ್ಲಿ ತಲೆ ಹಿಡಿದುಕೊಂಡು ಕುಳಿತುಬಿಟ್ಟ. ತಾನು ಹುಚ್ಚನೆಂದುಕೊಂಡ ವ್ಯಕ್ತಿ ಮಹಾಮೇಧಾವಿಯಾಗಿ ಎದುರು ನಿಂತ. ಎಷ್ಟೋ ಬುದ್ಧಿವಂತನೆಂದುಕೊಂಡ ತಾನು ಮೂರ್ಖನಂತೆ ವರ್ತಿಸಿದೆ. ಓ ಮೈ ಗಾಡ್! ಎಂತಹ ತಪ್ಪು! ಎಂತಹ ದೊಡ್ಡ ತಪ್ಪು ಮಾಡಿದೆ ?

ಜಾನಿವಾಕರ್ ಥಟ್ಟನೆ ಎದ್ದು ನಿಂತ.

## ೨೯

ಟೆಲಿಫೋನ್ ಗಣಗಣವೆಂದು ಮೊಳಗಿತು. ತಾರಕನಾಮ ರಿಸೀವರ್ ಎತ್ತಿಕೊಂಡ.

"ಹಲೋ?"

"ಮಿಸ್ಟರ್ ಜಾನಿ"

"ನೀನಾ? ಈಗೇನು ಬೇಕು?"

"ನನಗೇನೂ ಬೇಕಿಲ್ಲ. ಅಗತ್ಯ ಇರೋದು ನಿನಗೇ ಅಂತ ಹೇಳಿದ್ನಲ್ಲ?"

"ನಿನಗೆ ನನ್ನ ಮೇಲೆ ಯಾಕಿಷ್ಟು ಕಾಳಜಿ?"

"ಕಾಳಜಿಯಲ್ಲ, ಅಸಹ್ಯ."

"ಅಸಹ್ಯದಿಂದಲೇ ನನ್ನ ಒಳ್ಳೆಯದನ್ನು ಬಯಸ್ತಿದೀಯಾ?"

"ಹೌದು! ಹೇಳಿದ್ರೂ ನಿನಗರ್ಥವಾಗೋದಿಲ್ಲ. ನಿನ್ನ ಪ್ರಾಣ ನನಗೆ ತುಂಬಾ ಅಗತ್ಯವಿದೆ!"

"ಏನದು?"

"ಹೇಳೋದಿಲ್ಲ. ನೀನು ನನಗೊಂದು ವಿಷಯ ಹೇಳು. ನಿನ್ನ ಪ್ರಾಣ ರಕ್ಷಿಸಿಕೊಳ್ಳೋ ಏರ್ಪಾಡು ಮಾಡ್ಕೊಂಡಿದೀಯಾ?!"

"ಓಹೋ! ನನ್ನ ಮೇಲೆ ಈಗ ನೊಣ ಕೂಡ ವಾಲುವಂತಿಲ್ಲ."

"ನೊಣ ವಾಲುವುದಲ್ಲ – ನಿನ್ನ ಎದೆಯಲ್ಲಿ ಹರಿತವಾದ ಕತ್ತಿ ಇಳಿಯುತ್ತದೆ. ತಪ್ಪಿಸಿಕೊಳ್ಳಲು ಏನು ಏರ್ಪಾಡು ಮಾಡ್ಕೊಂಡಿದೀಯೋ ಹೇಳು!"

"ಹೇಳದ ಹೊರತು ಸಮಾಧಾನವಾಗೋದಿಲ್ವ?"

"ಇಲ್ಲ."

"ಹಾಗಾದ್ರೆ ಕೇಳು–ಆ ಮೇಖಲೆಯನ್ನು ಮೇಲಕ್ಕೆ ಕಳಿಸೋ ಏರ್ಪಾಡು ಮಾಡಿದ್ದೀನಿ!"

"ಆ ಏರ್ಪಾಡು ಮಾಡಿದೀಯಾ ? ನಂಗೊತ್ತು, ನೀನು ಹಾಗೆ ಮಾಡ್ತೀ

ಯಾಂತ. ಆದರೆ ಮೇಖಲೆಯನ್ನು ಕೊಲ್ಲುವುದು ಅಷ್ಟು ಸುಲಭವಲ್ಲ. ಹೇಗೆ ಕೊಲ್ತೀಯಾ?"

"ತುಂಬಾ ಸಿಂಪಲ್! ಜೇಕೇಯ ಹೆಸರಿನ ಮೇಲೆ ಅವಳಿಗೊಂದು ಪತ್ರ ಹೋಗುತ್ತದೆ. ಆ ಪತ್ರದಲ್ಲಿ ಇಂತಹ ಸ್ಥಳದಲ್ಲಿ ತನ್ನ ಕಡೆಯ ವ್ಯಕ್ತಿಯನ್ನು ಭೇಟಿಯಾಗಬೇಕೆಂದು ಬರೆದಿರುತ್ತದೆ ಮೇಖಲೆ ಹೋಗುತ್ತಾಳೆ. ಆ ಪ್ರದೇಶ ದಲ್ಲಿರೋದು ಜೇಕೇಯ ಮನುಷ್ಯನಲ್ಲ – ನನ್ನ ಕಡೆಯವನು ಅಷ್ಟೇ! ಅಲ್ಲಿಯೇ ಅವಳ ಕಥೆ ಫಿನಿಷ್."

"ಜೇಕೇ ಪ್ಯಾರಿಸ್‌ನಲ್ಲಿ ಅರೆಸ್ಟ್ ಆಗಿದ್ದಾನೆ. ಅವನ ಹೆಸರಿನಲ್ಲಿ ಪತ್ರ ಹೋದರೆ ಅವಳು ನಂಬಬೇಕಲ್ಲ!"

"ಆ ಪತ್ರ ಅರೆಸ್ಟ್ 'ಆಗುವ ಮೊದಲು ಬರೆದಂತಿರುತ್ತದೆ!"

"ಗುಡ್! ಈಗ ನನಗೆ ತೃಪ್ತಿಯಾಯ್ತು! ಗುಡ್ ಬೈ" ಅತ್ತಲಿಂದ ಕ್ಲಿಕ್ ಎಂಬ ಶಬ್ದ ಕೇಳಿಸಿತು. ತಾರಕನಾಮ ರಿಸೀವರ್ ಕೆಳಗಿಟ್ಟು ತನ್ನಲ್ಲಿ ತಾನೇ ನಕ್ಕ. ಬ್ಲಡೀಫೂಲ್! ತಾರಕನಾಮ ತನಗೆ ತಿಳಿಯದೆಯೇ ಮಾಡಿದ ತಪ್ಪೊಂದು ಉಳಿದುಬಿಟ್ಟಿತ್ತು. ಮೇಖಲೆಯನ್ನು ಕೊಲ್ಲಲು ಪ್ಲಾನ್ ಮಾಡಿ ದ್ದಾನೆಂದು ಮಿಸ್ಟರ್ ಜಾನಿಯೊಂದಿಗೆ ಹೇಳಿಬಿಟ್ಟಿದ್ದ!

## ೩೦

"ಕಂಟ್ರೋಲ್ ರೂಮ್.... ಕಂಟ್ರೋಲ್ ರೂಮ್....?"

"ಎಸ್ ಕಂಟ್ರೋಲ್ ರೂಮ್!"

"ನಾನು ಮುನೀಂದ್ರಸ್ವಾಮಿಯ ಸ್ವಂತ ವಿಮಾನದಲ್ಲಿಯ ಪೈಲಟ್. ಫ್ಯೂಯಲ್ ಮುಗಿದು ಹೋಗಿದೆ. ಲ್ಯಾಂಡ್ ಮಾಡಲು ಅನುಮತಿಬೇಕು."

"ಸಾರಿ! ಕ್ಲಿಯರೆನ್ಸ್ ಕೊಡಲಾಗದು! ಪ್ರೈವೇಟ್ ವಿಮಾನಗಳು ಇಳಿಯಲು ಮೊದಲೇ ಅನುಮತಿ ಪಡೆದಿರಬೇಕು."

"ದಿಸೀಜ್ ಎಮರ್ಜೆನ್ಸಿ ಪ್ಲೀಸ್! ಪ್ಲೇನ್‌ನಲ್ಲಿ ಇಂಧನ ಮುಗಿಯುತ್ತಾ ಬಂದಿದೆ. ಕ್ಲಿಯರೆನ್ಸ್, ಕೊಡದಿದ್ದರೆ ವಿಮಾನ ನೆಲಕ್ಕಪ್ಪಳಿಸುತ್ತದೆ."

"ಆಲ್ ರೈಟ್! ಕ್ಲಿಯರೆನ್ಸ್ ಗ್ರ್ಯಾಂಟೆಡ್! ಯೂ ಮೇ ಲ್ಯಾಂಡ್!"

ಅಲ್ಲಿಯವರೆಗೆ ಬೇಗಂಪೇಟೆ ವಿಮಾನ ನಿಲ್ದಾಣದ ಸುತ್ತಲೂ ಚಕ್ಕರ್ ಹೊಡೆಯುತ್ತಿದ್ದ ಆ ಜೆಟ್ ವಿಮಾನ ಬೃಹತ್ತಾದ ಪಕ್ಷಿಯಂತೆ ರನ್‌ವೇ ಮೇಲೆ ಇಳಿದು ಏರೋಡ್ರಂ ಬಿಲ್ಡಿಂಗ್ ಮುಂದೆ ಬಂದು ನಿಂತಿತು. ರೇಲಿಂಗ್ಸ್ ಹೋದೊಡನೆಯೇ ವಿಮಾನದ ಬಾಗಿಲು ತೆರೆದುಕೊಂಡಿತು. ಮುನೀಂದ್ರ ಸ್ವಾಮಿ

ಸರಸರನೆ ವಿಮಾನದಿಂದಿಳಿದು ಮೇನ್ ಬಿಲ್ಡಿಂಗ್ ಕಡೆ ನಡೆದ. ಕಸ್ಟಮ್ಸ್ ಚೆಕಿಂಗ್ ಪೂರ್ತಿಗೊಳಿಸಿಕೊಂಡು ಮುನೀಂದ್ರಸ್ವಾಮಿ ವೆಯ್ಟಿಂಗ್ ಹಾಲ್‌ನಲ್ಲಿ ಹೋಗಿ ಕುಳಿತುಕೊಂಡ. ಮುನೀಂದ್ರಸ್ವಾಮಿಯನ್ನು ಗುರುತು ಹಿಡಿದೊಡನೆಯೇ ಏರೋಡ್ರೋಂನಲ್ಲಿನ ಜನ ಅವನನ್ನು ಮುತ್ತತೊಡಗಿದರು. ಇತ್ತೀಚೆಗೆ ಪತ್ರಿಕೆಗಳು ಅವನ ಬಗೆಗೆ ವಿಪರೀತವಾಗಿ ಬರೆದಿದ್ದರಿಂದಾಗಿ ದೇಶದಲ್ಲಿ ಎಲ್ಲರಿಗೂ ಸದ್ಯಕ್ಕೆ ಅವನಿರುವ ವಿಚಿತ್ರಾವಸ್ಥೆಯ ಬಗೆಗೆ ತಿಳಿದಿತ್ತು. ಅಷ್ಟು ಹೊತ್ತಿಗೆ ಕೆಲವು ಜನ ಅವನ ಪಾದಗಳಿಗೆ ಬೀಳತೊಡಗಿದ್ದರು. ಹಠಾತ್ತನೆ ಆ ವಿಮಾನ ನಿಲ್ದಾಣ ಮುನೀಂದ್ರಸ್ವಾಮಿಯ ಆಶ್ರಮದಂತೆ ಮಾರ್ಪಟ್ಟಿತು.

"ನಮ್ಮ ಹುಡುಗನನ್ನು ಆಶೀರ್ವದಿಸಿ ಸ್ವಾಮಿ!"

"ದೀರ್ಘಾಯುಷ್ಮಾನ್ ಭವ."

"ಸ್ವಾಮಿ! ನನ್ನ ಮಗಳಿಗೆ ಒಳ್ಳೇ ವರ ದೊರಕುವಂತೆ ಆಶೀರ್ವದಿಸಿ!"

"ಕಲ್ಯಾಣಮಸ್ತು!"

"ಸ್ವಾಮಿ ಹೊರ ವ್ಯಾಪಾರದಲ್ಲಿ ಲಕ್ಷಗಟ್ಟಲೆ ಬಂಡವಾಳ ತೊಡಗಿಸಿದೀನಿ ಲಾಭ ಬರುವಂತೆ ಆಶೀರ್ವದಿಸಿ!"

"ಲಕ್ಷ್ಮೀದೇವಿ ಪ್ರಸನ್ನಳಾಗುತ್ತಾಳೆ ಮಗೂ!"

ಹೀಗೆ ಕೇಳಿದ ಪ್ರತಿಯೊಬ್ಬರನ್ನೂ ಆಶೀರ್ವದಿಸುತ್ತಿದ್ದ ಮುನೀಂದ್ರ ಸ್ವಾಮಿಯ ಕಣ್ಣುಗಳು ಆತುರದಿಂದ ಮೇಖಲೆಗೋಸ್ಕರ ಆ ಜನಗಳಲ್ಲಿ ಹುಡುಕುತ್ತಲೇ ಇದ್ದುವು. ಅವನ ಕಣ್ಣುಗಳಿಗೆ ಎಲ್ಲಿಯೂ ಮೇಖಲೆ ಕಾಣಿಸಲಿಲ್ಲ.

ಹಠಾತ್ತನೆ ಒಬ್ಬ ರಾಜಸ್ಥಾನಿ ಯುವತಿ ಕೈಯಲ್ಲಿ ಚಿಕ್ಕ ಬ್ರೀಫ್‌ಕೇಸ್‌ನೊಂದಿಗೆ ಅವನ ಮುಂದೆ ಬಂದು ನಿಂತಳು. ಸೆರಗನ್ನು ಹಿಂದಿನಿಂದ ಮುಂದಕ್ಕೆ ತಂದುಕೊಂಡು ಮುಖ ಕಾಣದಂತೆ ತಲೆಯ ತುಂಬಾ ಮುಸುಕಿನಂತೆ ಹೊದ್ದುಕೊಂಡಿದ್ದಳು. ಬರುತ್ತಿರುವಂತೆಯೇ ಕೈಯಲ್ಲಿನ ಬ್ರೀಫ್ ಕೇಸ್ ಅನ್ನು ಅವನ ಕೈಯಲ್ಲಿಟ್ಟಳು. "ಇದರಲ್ಲಿ ಮಣಿಮೇಖಲೆಗಳಿವೆ ಸ್ವಾಮಿ! ಕಾಣಿಕೆ ಸ್ವೀಕರಿಸಿ!"

ಮುನೀಂದ್ರಸ್ವಾಮಿ ಬೆಚ್ಚಿಬಿದ್ದು ಅವಳಕಡೆ ನೋಡಿದ. ಆದರೆ ಅಷ್ಟು ಹೊತ್ತಿಗೆ ಆ ಯುವತಿ ಅವನ ಪಾದಗಳಿಗೆ ನಮಸ್ಕರಿಸಿ ಅಲ್ಲಿ ಸೇರಿದ್ದ ಜನರೊಳಗಿಂದ ಸರಸರನೆ ಹೊರಗೆ ಹೋಗುತ್ತಿದ್ದಳು. ಮುನೀಂದ್ರಸ್ವಾಮಿ ಮನಸ್ಸಿನಲ್ಲಿಯೇ ಮೇಖಲೆಯ ಬುದ್ಧಿವಂತಿಕೆಯನ್ನು ಪ್ರಶಂಸಿಸಿದ.

* * * *

ಏರೋಡ್ರಮ್‌ನಿಂದ ಹೊರಬರುತ್ತಲೇ ಮೇಖಲೆ ಮುಖದ ಮೇಲಿನ ಮುಸುಕನ್ನು ಸರಿಪಡಿಸಿಕೊಳ್ಳುತ್ತಾ ನೇರವಾಗಿ ಪಬ್ಲಿಕ್ ಟೆಲಿಫೋನ್ ಬೂತ್

ನೊಳಗೆ ನಡೆದಳು. ರಿಸೀವರ್ ಎತ್ತಿ ಸರಸರನೆ ಒಂದು ನಂಬರ್ ಡಯಲ್ ಮಾಡತೊಡಗಿದಳು. ಕನೆಕ್ಷನ್ ಬಂದೊಡನೆಯೇ ಕಾಯಿನ್ ಹಾಕಿದಳು.

"ಎಸ್! ರಾಜ್‌ಭವನ್!" ಕೇಳಿಸಿತು.

"ಗವರ್ನರ್ ಅವರು ಬೇಕು!"

"ನೀವ್ಯಾರು?"

"ನನ್ನ ಹೆಸರು ಮೇಖಲೆ – ಮಣಿ ಮೇಖಲೆ!"

"ಯಾವ ಮಣಿ ಮೇಖಲೆ?"

"ನೀವು ದಿನವೂ ಪೇಪರ್‌ನಲ್ಲಿ ನೋಡುತ್ತಿರುವ ಮಣಿ ಮೇಖಲೆಯೇ! ದಯವಿಟ್ಟು ಗವರ್ನರ್ ಅವರಿಗೆ ಫೋನ್ ಕೊಡಿ! ದಿಸೀಜ್ ಎಮರ್ಜೆನ್ಸಿ!"

"ನಾನು ಅವರ ಸೆಕ್ರೆಟರಿ! ಏನು ಹೇಳಬೇಕೋ ನನಗೆ ಹೇಳಿ!"

"ಪ್ಲೀಸ್! ಇದು ದೇಶ ರಕ್ಷಣೆಗೆ ಸಂಬಂಧಿಸಿದ ವಿಷಯ. ಫೋನ್ ಅವರಿಗೇ ಕೊಡಿ! ತಡವಾದರೆ ಅನರ್ಥ ಉಂಟಾಗುತ್ತದೆ."

ಕೆಲವು ಕ್ಷಣಗಳು ನಿಶ್ಶಬ್ದ.

"ಆಲ್‌ರೈಟ್! ಗವರ್ನರ್ ಜೊತೆ ಮಾತಾಡಿ!"

ಮತ್ತೆ ಕೆಲವು ಕ್ಷಣಗಳು ನಿಶ್ಶಬ್ದ.

"ಹಲೊ!"

"ಹಲೋ! ನನ್ನ ಹೆಸರು ಮಣಿ ಮೇಖಲೆ!"

"ಆ ಮಾತು ನನ್ನ ಸೆಕ್ರೆಟರಿ ಹೇಳಿದ. ಏನು ಬೇಕೊ ಹೇಳಮ್ಮ!"

"ಮುನೀಂದ್ರಸ್ವಾಮಿಯ ಪ್ರೈವೇಟ್ ವಿಮಾನ ರೀಫ್ಯೂಯೆಲಿಂಗ್‌ಗೋಸ್ಕರ ಬೇಗಂಪೇಟ್ ವಿಮಾನ ನಿಲ್ದಾಣದಲ್ಲಿ ಇಳಿದಿದೆ."

"ಇಳಿದಿದ್ರೇನು?"

"ನೀವೆಲ್ಲಾ ನನ್ನ ಬಳಿಯಿವೆ ಎಂದು ಭಾವಿಸುತ್ತಿರುವ ದೇಶದ ರಕ್ಷಣಾ ರಹಸ್ಯಗಳು ದೇಶ ದಾಟಿ ಹೊರಟುಹೋಗುತ್ತಿವೆ. ಮುನೀಂದ್ರಸ್ವಾಮಿ ಆ ಸೀಕ್ರೆಟ್ ಫೈಲನ್ನು ಅಮೆರಿಕನ್ ಸಿ.ಐ.ಎ.ಗೆ ಕೊಡಲಿದ್ದಾನೆ. ನೀವು ತ್ವರೆ ಮಾಡಿ! ತಡವಾದರೆ ಅನರ್ಥ ನಡೆದು ಹೋಗುತ್ತದೆ."

"ತಡಿಯಮ್ಮಾ! ನೀನು ಫೈಲ್ ಆತನಿಗೆ ಕೊಟ್ಟೆಯಾ?"

"ಇಲ್ಲ! ತಾರಕನಾಮ ತನ್ನ ಕಡೆಯವನಿಂದ ಆತನಿಗೆ ಕೊಡಿಸಿದ."

"ಆ ವಿಷಯ ನಿನಗೆ ಹೇಗೆ ಗೊತ್ತು?"

"ಮುನೀಂದ್ರಸ್ವಾಮಿ ತಾರಕನಾಮನಿಗೆ ಬೆಸ್ಟ್ ಫ್ರೆಂಡ್! ಮುನೀಂದ್ರಸ್ವಾಮಿಯ ನಿಜವಾದ ಹೆಸರೇನೆಂದು ನನಗೆ ಗೊತ್ತಿದೆ!"

"ಆ ಹೆಸರು ಯಾವುದು?"

"ದಯಾಕರರಾವ್!" ಮೇಖಲೆ ಹೇಳಿದಳು.

## ೩೧

"ಸಾರಿ ಸರ್! ಮುನೀಂದ್ರಸ್ವಾಮಿಯ ವಿಮಾನ ಹೊರಡಲುಸಿದ್ಧವಾಗಿದೆ!"

"ಸ್ಟಾಪ್ ದಿ ಪ್ಲೇನ್! ಇದು ಗವರ್ನರ್ ಆರ್ಡರ್!"

"ಎಸ್ ಸರ್!"

"....!"

"ಹಲೋ, ಹಲೋ! ದಿಸೀಜ್ ಕಂಟ್ರೋಲ್ ರೂಮ್! ಪೈಲಟ್ ಸ್ಟಾಪ್ ದಿ ಪ್ಲೇನ್ ಬೈ ಆರ್ಡರ್ ಫ್ರಮ್ ದಿ ಗವರ್ನರ್! ಸ್ಟಾಪ್ ದಿ ಪ್ಲೇನ್? ನೋ ಟೇಕಾಫ್!"

* * * *

"ಏನಾಯ್ತು? ನಾವಿನ್ನೂ ಯಾಕೆ ಹೊರಡ್ತಿಲ್ಲ?" ಮುನೀಂದ್ರಸ್ವಾಮಿ ಕಾಕ್‌ಪಿಟ್‌ನೊಳಗೆ ಬಂದು ಕೇಳಿದ.

"ನೋ ಟೇಕ್ ಆಫ್ ಆರ್ಡರ್ಸ್ ಫ್ರಮ್ ದಿ ಕಂಟ್ರೋಲ್ ರೂಮ್!"

"ನೋ ಟೇಕ್ ಆಫ್ ಆರ್ಡರ್ಸ್?! ಯಾಕೆ?"

"ಏನೋ?! ಬೈ ಆರ್ಡರ್ ಫ್ರಮ್ ದಿ ಗವರ್ನರ್ ಅಂತಿದಾನೆ."

ಆ ಮಾತು ಕೇಳುತ್ತಲೇ ಮುನೀಂದ್ರಸ್ವಾಮಿಯ ಮುಖ ಬಾಡಿ ಹೋಯ್ತು. ತಕ್ಷಣವೇ ಕೈಯಲ್ಲಿರುವ ಬ್ರೀಫ್‌ಕೇಸ್ ಅನ್ನು ಯಾರೋ ಎಳೆದುಕೊಂಡು ಹೋಗುತ್ತಿರುವಂತೆ ಗಟ್ಟಿಯಾಗಿ ಹಿಡಿದುಕೊಂಡ. "ನೋ.... ನೋ....ನಾವು ಒಂದು ಕ್ಷಣ ಕೂಡ ಇಲ್ಲಿ ನಿಲ್ಲೋದಕ್ಕೆ ಸಾಧ್ಯವಿಲ್ಲ. ಟೇಕಾಫ್!" ಎಂದ.

"ಆದರೆ ಸರ್....!"

"ಐ ಸೆ ಟೇಕಾಫ್ !"

"ಎಸ್ ಸರ್ !"

ಆ ಮರುಕ್ಷಣ ವಿಮಾನದ ಪ್ರೊಪೆಲ್ಲರ್‌ಗಳು ಜೀವಪಡೆದುಕೊಂಡವು. ವಿಷ್ಣು ಚಕ್ರಗಳಂತೆ ಗಿರಗಿರನೆ ತಿರುಗತೊಡಗಿದವು. ವಿಮಾನ ಮುಂದಕ್ಕೆ ಚಲಿಸಿತು.

"ವಾಟೀಸ್ ದಿಸ್! ಅನುಮತಿ ಇಲ್ಲದೆಯೇ ವಿಮಾನ ಹೊರಡುತ್ತಿದೆ" ಕಂಟ್ರೋಲ್ ರೂಮಿನಿಂದ ಏರ್ ಟ್ರಾಫಿಕ್ ಕಂಟ್ರೋಲರ್ ಅರಚಿದ.

"ಹಲೋ, ಹಲೋ! ದಿಸೀಸ್ ಕಂಟ್ರೋಲ್ ರೂಮ್, ದಿಸೀಸ್ ಕಂಟ್ರೋಲ್ ರೂಮ್! ಪೈಲಟ್! ನೋ ಟೇಕಾಫ್ ಪ್ಲೀಸ್! ನೋ ಟೇಕಾಫ್ ಪ್ಲೀಸ್!"

ಪೈಲಟ್ ಹಲ್ಲುಕಚ್ಚಿ ವಿಮಾನ ಮುಂದಕ್ಕೆ ಓಡಿಸುತ್ತಿದ್ದ. ಕಂಟ್ರೋಲ್ ರೂಮಿಗೆ ಉತ್ತರಿಸಲಿಲ್ಲ.

"ಹಲೋ, ಹಲೋ! ನೋ ಟೇಕಾಫ್ ಪ್ಲೀಸ್!" ಏರ್ ಟ್ರಾಫಿಕ್ ಕಂಟ್ರೋಲರ್ ಕೂಗುತ್ತಲೇ ಇದ್ದ.

ವಿಮಾನ ರನ್‌ವೇಯ ಮೇಲೆ ವೇಗ ಪಡೆದುಕೊಂಡಿತು.

ಹಠಾತ್ತನೆ ಪೈಲಟ್‌ನ ಕಣ್ಣುಗಳರಳಿದವು.

"ಮೈ ಗಾಡ್! ಮಿಲಿಟರಿ ಟ್ರಕ್ಸ್! ಎಂಟ್ಹತ್ತು ಮಿಲಿಟರಿ ಟ್ರಕ್‌ಗಳು ರನ್‌ವೇಯ ಮೇಲೆ ಬರುತ್ತಿವೆ." ಅವನು ಕೂಗಿದ. "ನಾವು ಟೇಕಾಫ್ ಮಾಡಲಾರೆವು. ವಿಮಾನ ನಿಲ್ಲಿಸಬೇಕಾದ್ದೇ!"

"ಸಾಧ್ಯವಿಲ್ಲ! ಏನಾದರೂ ಸರಿ, ವಿಮಾನ ಹಾರಬೇಕಾದದ್ದೇ! ನನ್ನ ಕೈಯಲ್ಲಿ ಈ ಬ್ರೀಫ್‌ಕೇಸ್ ಇರುವಾಗ ಅವರು ನಮ್ಮನ್ನು ಹಿಡಿಯಲು ಸಾಧ್ಯವಿಲ್ಲ. ಕಮಾನ್ ಟೇಕಾಫ್!"

"ಸಾರಿ ಸರ್! ಮಿಲಿಟರಿ ಟ್ರಕ್ಸ್ ಪೂರ್ತಿಯಾಗಿ ಅಡ್ಡಬಂದಿವೆ. ವಿಮಾನ ನಿಲ್ಲಿಸಬೇಕಾದ್ದು ಅನಿವಾರ್ಯ."

"ನಥಿಂಗ್ ಡೂಯಿಂಗ್! ಟೇಕಾಫ್!"

"ಸಾಧ್ಯವಾಗದು ಸರ್! ವಿಮಾನ ನಿಲ್ಲಿಸ್ತಿದೀನಿ."

"ನಿಂತ್ಕೋ" ಮುನೀಂದ್ರಸ್ವಾಮಿ ಗರ್ಜಿಸಿದ. "ನಿನಗೆ ಯಜಮಾನ ನಾನಾ, ಆ ಕಂಟ್ರೋಲರ್‌ನಾ? ನಾನು ಆಜ್ಞಾಪಿಸ್ತಿದೀನಿ ಟೇಕಾಫ್!"

"ಆದರೆ ಸರ್....

"ಟೇಕಾಫ್"

"ನನ್ನ ಕೈಲಾಗೊಲ್ಲ ಸರ್. ಅದು ಆತ್ಮಹತ್ಯೆಯೇ ಆಗುತ್ತದೆ."

"ಹಾಗೇನು? ಹಾಗಿದ್ರೆ ನೀನು ಪಕ್ಕಕ್ಕೆ ಸರಿ. ವಿಮಾನ ನಾನು ನಡೆಸ್ತೀನಿ."

"ಸರ್...."

"ಮೊದಲು ಪಕ್ಕಕ್ಕೆ ಸರಿ" ಮುನೀಂದ್ರಸ್ವಾಮಿ ಅರಚಿದ.

ಗಾಬರಿಯಿಂದ ಅವನು ಹುಚ್ಚನಂತಾಗಿದ್ದ. ಮಿಲಿಟರಿ ಟ್ರಕ್ಸ್ ಕ್ಷಣ ಕ್ಷಣಕ್ಕೆ ಮುಂದೆ ಬರುತ್ತಲೇ ಇದ್ದವು.

"ಪಕ್ಕಕ್ಕೆ ಸರಿ" ಮತ್ತೊಂದು ಸಲ ಅರಚಿದ ಮುನೀಂದ್ರಸ್ವಾಮಿ.

"ಇಲ್ಲ ಸರ್. ಈ ವಿಮಾನಕ್ಕೆ ನಾನು ಪೈಲಟ್. ನಾನೇ ಮೇಲೊಯ್ಯಲು ಪ್ರಯತ್ನಿಸ್ತೀನಿ."

ಅಷ್ಟೇ. ಆ ಮರುಕ್ಷಣ ವಿಮಾನ ಒಂದು ಜರ್ಕ್‌ನೊಂದಿಗೆ ಮೇಲೆದ್ದಿತು. ಮಿಲಿಟರಿ ಟ್ರಕ್ಸ್‌ನೊಳಗಿಂದ ಆ ವಿಮಾನದ ಮೇಲೆ ಬುಲೆಟ್‌ಗಳ ಮಳೆ ಸುರಿಯ ತೊಡಗಿತು. ಪೈಲಟ್ ಹಲ್ಲು ಕಚ್ಚಿ ವಿಮಾನವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದ. ಒಂದು ಕೂದಲೆಳೆಯಷ್ಟು, ಆ ಕೂದಲೆಳೆಯಷ್ಟರಲ್ಲಿ ತಪ್ಪಿಸಿಕೊಳ್ಳಲಾದರೆ ವಿಮಾನ ಎಂತಹುದೇ ಅಪಾಯಕ್ಕೆ ಗುರಿಯಾಗದೆ ಯಶಸ್ವಿಯಾಗಿ ಮೇಲೇರುತ್ತದೆ. "ಹಲೋ, ಹಲೋ....ನೋ ಟೇಕಾಫ್, ನೋ ಟೇಕಾಫ್" ಕಂಟ್ರೋಲರ್‌ನ ಧ್ವನಿ ನಿರ್ವಿರಾಮವಾಗಿ ಕೇಳಿಸುತ್ತಲೇ ಇತ್ತು. ಪೈಲಟ್ ಮತ್ತಷ್ಟು ಬಿಗಿಯಾಗಿ ಹಲ್ಲು ಕಚ್ಚಿ ವಿಮಾನವನ್ನು ನಿಯಂತ್ರಿಸಲು ಪ್ರಯತ್ನಿಸಿದ ಆದರೆ ಅಷ್ಟು ಹೊತ್ತಿಗೆ ತಡವಾಗಿತ್ತು. ಹುಚ್ಚು ಹಿಡಿದ ಗರುಡ ಪಕ್ಷಿಯಂತೆ ಇದ್ದಕ್ಕಿದ್ದಂತೆ ಮೇಲೆದ್ದ ಆ ವಿಮಾನದ ಬಲ ರೆಕ್ಕೆ ಸರಿಯಾಗಿ ಒಂದು ಮಿಲಿಟರಿ ಟ್ರಕ್‌ಗೆ ತಗುಲಿತು. ಅಷ್ಟೇ! ಅದರ ಪ್ರೊಪೆಲ್ಲರ್ ಒಂದು ಫಟ್ ಎನ್ನುತ್ತಾ ಮುರಿಯಿತು. ಆ ಮರುಕ್ಷಣ ವಿಮಾನ ನಿಯಂತ್ರಣ ತಪ್ಪಿ ನೆಲಕ್ಕಪ್ಪಳಿಸಿತು. ತಕ್ಷಣವೇ ವಿಮಾನ ರನ್‌ವೇ ಬಿಟ್ಟು ದಡದಡನೆ ಶಬ್ದ ಮಾಡುತ್ತಾ ರನ್‌ವೇ ಫೆನ್ಸಿಂಗ್‌ನ್ನು ತುಂಡುಗೊಳಿಸಿ ಹೋಗಿ ಒಂದು ಬೃಹತ್ತಾದ ಆಲದ ಮರಕ್ಕೆ ಗುದ್ದಿತು. ಆ ಘರ್ಷಣೆಗೆ ಅಷ್ಟು ದೊಡ್ಡ ಆಲದ ಮರವೂ ಸರಿಯಾಗಿ ಅರ್ಧಕ್ಕೆ ಮುರಿದು ಆ ವಿಮಾನದ ಮೇಲೆಯೇ ಕಡಿದು ಬಿತ್ತು. ತಕ್ಷಣವೇ ಭಯಂಕರವಾದ ಆಸ್ಫೋಟನೆ ಉಂಟಾಯ್ತು. ಅಷ್ಟು ದೊಡ್ಡ ವಿಮಾನವೂ ಒಂದೇ ಬಾರಿಗೆ ಢಮಾರೆಂದು ಸಿಡಿದುಹೋಯ್ತು. ಪೈಲಟ್‌ನೊಂದಿಗೇ ಮುನೀಂದ್ರಸ್ವಾಮಿಯ ಶರೀರ ಕೂಡ ತುಂಡುತುಂಡಾಗಿ ಗಾಳಿಯಲ್ಲಿ ಹಾರಿತು. ಏರ್‌ಪೋರ್ಟಿನಲ್ಲಿನ ಜನ ಹಾಹಾಕಾರ ಮಾಡುತ್ತಾ ಆ ಭಯಂಕರ ದೃಶ್ಯ ನೋಡುತ್ತಿದ್ದರು.

## ೩೨

ಮುನೀಂದ್ರಸ್ವಾಮಿಯ ವಿಷಯ ದೇಶದಲ್ಲೆಲ್ಲಾ ಚರ್ಚೆಯಾಗತೊಡಗಿತು. ಮತ್ತೊಂದು ಪ್ರೊಫ್ಯೂಮೋ ಅಫೇರ್ ಎಂದು ಆಗಲೇ ಎಲ್ಲರ ಬಾಯಲ್ಲೂ ಸುಳಿದಾಡುತ್ತಿದ್ದ ಮೇಖಲೆಯ ಕಥೆ ಹಠಾತ್ತನೆ ಮತ್ತೊಂದು ತಿರುವು ಪಡೆಯಿತು. ಮೇಖಲೆ ಎನ್ನುವ ಹೆಸರಿನಿಂದ ಯಾರೋ ಒಬ್ಬ ಯುವತಿ ರಾಜ್ ಭವನವನ್ನು ಸಂಪರ್ಕಿಸಿ ಮುನೀಂದ್ರಸ್ವಾಮಿ ದೇಶದ ರಕ್ಷಣಾ ರಹಸ್ಯಗಳನ್ನು

ಹೊರಗೆ ಕಳಿಸುತ್ತಿದ್ದಾನೆಂದು ತಿಳಿಸಿದ್ದು ಪ್ರತಿಯೊಬ್ಬರನ್ನೂ ಆಶ್ಚರ್ಯದಲ್ಲಿ ಮುಳುಗಿಸಿತ್ತು. ಸಿ.ಬಿ.ಐ.ನೊಂದಿಗೆ ಪ್ರತಿಯೊಬ್ಬರೂ ಅಲ್ಲಿಯವರೆಗೆ ಮೇಖಲೆಯನ್ನೇ ಅನುಮಾನಿಸುತ್ತಿದ್ದರು. ಈಗ ಆ ಹಠಾತ್ ಘಟನೆ ಪ್ರತಿಯೊಬ್ಬರನ್ನೂ ದಿಗ್ಭ್ರಾಂತಿಗೀಡು ಮಾಡಿತ್ತು. ಆ ರಹಸ್ಯ ಫೈಲ್ ಫೈರ್ ಪ್ರೂಫ್ ಆದುದರಿಂದ ಸಿಡಿದು ಹೋದ ಪ್ಲೇನ್‌ನಲ್ಲಿ ಪೂರ್ತಿಯಾಗಿ ಸುಟ್ಟು ಹೋದ ಮುನೀಂದ್ರಸ್ವಾಮಿಯ ಕೈಯಲ್ಲಿ ಸುರಕ್ಷಿತವಾಗಿ ಅಧಿಕಾರಿಗಳಿಗೆ ದೊರಕಿತು. ತಾರಕನಾಮ ಬಳಿಯಿಂದ ವಿದೇಶಗಳಿಗೆ ಕೊಡಲು ಮೇಖಲೆ ಆ ಫೈಲು ಸಂಪಾದಿಸಿದ್ದರೆ ಮತ್ತೆ ಅವಳೇ ಆ ಫೈಲು ದೇಶ ದಾಟಿ ಹೋಗುತ್ತಿರುವ ವಿಷಯವನ್ನು ರಾಜ್‌ಭವನ್‌ಗೆ ಏಕೆ ತಿಳಿಸಿದಳು? ಮುನೀಂದ್ರಸ್ವಾಮಿಯ ಶವದ ಕೈಯಲ್ಲಿ ಸೀಕ್ರೆಟ್ ಫೈಲ್ ದೊರೆತ ನಂತರ ಘಟನೆಗಳು ಮತ್ತಷ್ಟು ವೇಗವಾಗಿ ನಡೆದವು. ಆಡಳಿತ ಪಕ್ಷ ತಾರಕನಾಮನೊಂದಿಗೆ ಪೂರ್ತಿಯಾಗಿ ಸಂಬಂಧ ಕಡಿದುಕೊಂಡಿತು. ಇದು ನಡೆದ ಒಂದು ಗಂಟೆಯ ನಂತರ ಸಿ.ಬಿ ಐ. ಅಧಿಕಾರಿಗಳು ತಾರಕನಾಮನ ಬಂಗಲೆಯ ಮೇಲೆ ದಾಳಿ ಮಾಡಿದರು. ಆದರೆ ತಾರಕನಾಮ ಅವರಿಗೆ ಸಿಗಲಿಲ್ಲ. ಹಠಾತ್ತನೆ ತಾರಕನಾಮ ದೇಶದಿಂದಲೇ ಫರಾರಿಯಾದ ಎನ್ನುವ ಪುಕಾರು ದೇಶದಲ್ಲೆಲ್ಲಾ ವ್ಯಾಪಿಸಿತು. ಯಾರ ಬಾಯಲ್ಲಿ ಕೇಳಿದರೂ ಇದೇ ಚರ್ಚೆ.

ಎಲ್ಲರ ಮನಸ್ಸಿನಲ್ಲೂ ಒಂದೇ ಪ್ರಶ್ನೆ. ಮೇಖಲೆ ಏನಾದಳು? ರಾಜ್ ಭವನವನ್ನು ಸಂಪರ್ಕಿಸಿದ ಮೇಲೆ ಮೇಖಲೆ ಇನ್ನೂ ಏಕೆ ಅಜ್ಞಾತದಿಂದ ಹೊರ ಬಂದಿಲ್ಲ?

ಆ ಪ್ರಶ್ನೆಗೆ ಉತ್ತರ ಪತ್ರಿಕೆಗಳವರಿಗೆ ಬೇಗನೇ ಸಿಕ್ಕಿತು. ಪತ್ರಕರ್ತರೆಲ್ಲರೂ ತಾವೇ ಮೊದಲು ಮೇಖಲೆಯನ್ನು ಸಂಪರ್ಕಿಸಿ ಇಂಟರ್‌ವ್ಯೂ ಮಾಡಬೇಕೆಂದು ಪ್ರಯತ್ನಿಸುತ್ತಿದ್ದ ಸಮಯದಲ್ಲಿ ಜಂಟಿ ನಗರಗಳಲ್ಲಿನ ಪತ್ರಿಕೆಯ ಆಫೀಸುಗಳೆಲ್ಲವಕ್ಕೂ ಒಂದು ಟೆಲಿಫೋನ್ ಕಾಲ್ ಬಂತು. "ನಾನು ಮೇಖಲೆ ಮಾತಾಡ್ತಿದೀನಿ. ಸರಿಯಾಗಿ ಸಾಯಂಕಾಲ ಆರು ಗಂಟೆಗೆ ನನ್ನ ಅಪಾರ್ಟ್‌ಮೆಂಟ್‌ನಲ್ಲಿ ಪತ್ರಿಕಾ ಗೋಷ್ಠಿಯಿದೆ ಬನ್ನಿ." ಅಷ್ಟೇ ಆ ಒಂದು ಟೆಲಿಫೋನ್ ಕರೆಯಿಂದ ಪತ್ರಿಕಾ ಪ್ರಪಂಚದಲ್ಲೆಲ್ಲಾ ವಿದ್ಯುತ್ ಚಾಲನೆಯುಂಟಾಯಿತು.

ಸಾಯಂಕಾಲ ಆರು ಗಂಟೆಗಳಿಗೆಲ್ಲಾ ಪತ್ರಿಕಾ ವರದಿಗಾರರೆಲ್ಲರೂ ಮಣಿ ಮೇಖಲೆಯ ಅಪಾರ್ಟ್‌ಮೆಂಟ್ ಸೇರಿಕೊಂಡರು. ಹೋದೊಡನೆಯೆ ಅವರೆಲ್ಲರಿಗೂ ಸ್ವಾಗತ ಹೇಳುತ್ತಿರುವಂತೆ ಅಪಾರ್ಟ್‌ಮೆಂಟ್‌ನ ಬಾಗಿಲುಗಳು ತೆರೆದಿದ್ದವು. ಕೆಲ ಕ್ಷಣಗಳಲ್ಲಿಯೇ ಆ ಅಪಾರ್ಟ್‌ಮೆಂಟ್ ಪತ್ರಿಕಾ ವರದಿಗಾರರಿಂದ

ತುಂಬಿಹೋಯಿತು. ಆದರೆ ಅಪಾರ್ಟ್‌ಮೆಂಟ್‌ನಲ್ಲಿ ಯಾರೂ ಇರಲಿಲ್ಲ ಮಣಿಮೇಖಲೆಯ ಸುಳಿವೇ ಇಲ್ಲ. ಆಶ್ಚರ್ಯದಿಂದ ವರದಿಗಾರರೆಲ್ಲರೂ ಪಿಸುಗುಟ್ಟಿಕೊಳ್ಳುತ್ತಿರುವಂತೆಯೇ ಆ ಕಟ್ಟಡದ ಎದುರಿಗೆ ಒಂದು ಕಾರು ಬಂದು ನಿಂತಿತು. ಡ್ರೈವಿಂಗ್ ಸೀಟ್ ನಿಂದ ಬಾಗಿಲು ತೆರೆದುಕೊಂಡು ಮಣಿಮೇಖಲೆ ಕೆಳಗಿಳಿದಳು. ಅವಳಲ್ಲಿ ಎಲ್ಲಿಯೂ ಆಡಂಬರದ ಚಿಹ್ನೆಗಳೇ ಕಾಣಿಸಲಿಲ್ಲ. ಫ್ಯಾಷನೆಬಲ್ ಉಡುಪುಗಳನ್ನು ಧರಿಸಿರಲಿಲ್ಲ. ಕಣ್ಣು ಕುಕ್ಕುವಂತೆ ಅಲಂಕರಿಸಿಕೊಂಡಿರಲಿಲ್ಲ. ತುಂಬಾ ಸಾಧಾರಣವಾದ ಸೀರೆ ಉಟ್ಟುಕೊಂಡು ಸಾದಾ ರೀತಿಯಲ್ಲಿ ಕಾರಿನಿಂದಿಳಿದಳು. ಆದರೇನು? ಆ ಸಾಧಾರಣವಾದ ಸೀರೆಯಲ್ಲಿಯೇ ಅವಳ ಸೌಂದರ್ಯ ನೂರು ಪಟ್ಟು ಹೆಚ್ಚಿದಂತೆ ಕಾಣುತ್ತಿತ್ತು. ಆಹ್ಲಾದಕರವಾದ ಆ ಸಹಜ ಸೌಂದರ್ಯ ಪ್ರತಿಯೊಬ್ಬರ ದೃಷ್ಟಿಯನ್ನೂ ತನ್ನ ಕಡೆ ಆಕರ್ಷಿಸುತ್ತಿತ್ತು.

ಕೆಲವು ದಿನಗಳ ಅಜ್ಞಾತವಾಸದ ನಂತರ ಮೇಖಲೆ ತಿರುಗಿ ತನ್ನ ಅಪಾರ್ಟ್‌ಮೆಂಟಿಗೆ ಪ್ರವೇಶಿಸಿದಳು. ಎಲ್ಲರ ಕಣ್ಣುಗಳಲ್ಲಿಯೂ ಆಶ್ಚರ್ಯ, ವಿಸ್ಮಯ.

ಇವಳೇನಾ ಪ್ರಪಂಚದಲ್ಲಿ ನಂಬರ್ ಒನ್ ಕಾಲ್‌ಗರ್ಲ್! ಇವಳನ್ನೇನಾ ಜೇಕೇ ತನ್ನ ಕಸ್ಟಮರ್‌ಗಳ ಮೇಲೆ ಸಮ್ಮೋಹನಾಸ್ತ್ರದಂತೆ ಪ್ರಯೋಗಿಸುತ್ತಿದ್ದುದು! ಥೇಟ್ ಭಾರತೀಯ ನಾರಿಯಂತೆ ಕಾಣಿಸುತ್ತಿರುವ ಇವಳೇನಾ? ಅವಳಲ್ಲಿರುವ ಸರಳತೆ! ಆ ಮುಖದಲ್ಲಿ ಕಾಣಿಸುತ್ತಿರುವ ಅಮಾಯಕತೆ! ಆದರೆ....ಇವಳು ಮೇಲೆ ಕಾಣಿಸುತ್ತಿರುವಷ್ಟು ಅಮಾಯಕಳೆ?

ತನ್ನ ಅಪಾರ್ಟ್‌ಮೆಂಟಿಗೆ ಪ್ರವೇಶಿಸುತ್ತಲೇ ಅವಳು ಒಂದು ಸೋಫಾದಲ್ಲಿ ಕುಳಿತುಕೊಂಡಳು. ಮರುಕ್ಷಣ ವರದಿಗಾರರೆಲ್ಲರೂ ಪ್ರಶ್ನೆಗಳ ಮಳೆ ಸುರಿಸತೊಡಗಿದರು.

"ಮೇಖಲೆ ನಿಮ್ಮ ಅಸಲು ಹೆಸರೇನಾ?"

"ಜೇಕೇಯೊಂದಿಗೆ ನಿಮ್ಮ ಪರಿಚಯ ಹೇಗೆ?"

"ತಾರಕನಾಮರೊಂದಿಗಿರುವ ನಿಮ್ಮ ಫೋಟೋಗಳಲ್ಲಿ ನಿಜ ಎಷ್ಟು?"

"ಮುನೀಂದ್ರಸ್ವಾಮಿ ನಿಮಗೆ ಹೇಗೆ ಗೊತ್ತು?"

"ತಾರಕನಾಮ ಆ ಸೀಕ್ರೆಟ್ ಫೈಲ್ ನಿಮಗೆ ಕೊಟ್ಟಿದ್ದು ಎಷ್ಟರಮಟ್ಟಿಗೆ ನಿಜ?"

"ಆ ಸೀಕ್ರೆಟ್ ಫೈಲ್ ಮುನೀಂದ್ರಸ್ವಾಮಿಯ ಕೈಯಲ್ಲಿ ಹೇಗೆ ಹೋಯಿತು?"

ಅವಳು ಅವರೆಲ್ಲರ ಪ್ರಶ್ನೆಗಳಿಗೂ ತನ್ನ ಕೈ ಅಡ್ಡ ಹಿಡಿದು, "ಒಂದ್ನಿಮಿಷ ತಡೀರಿ. ನಿಮ್ಮ ಪ್ರಶ್ನೆಗಳೆಲ್ಲವಕ್ಕೂ ಉತ್ತರ ಹೇಳ್ತೀನಿ. ಮುನೀಂದ್ರಸ್ವಾಮಿ ನನಗೆ ಹೇಗೆ ಗೊತ್ತು? ತಾರಕನಾಮನೊಂದಿಗೆ ನನ್ನ ಪರಿಚಯ ಎಲ್ಲಿಯವರೆಗೆ? ಜೇಕೇಯನ್ನು ನಾನು ಹೇಗೆ ಭೇಟಿಯಾದೆ? ಎನ್ನುವುದನ್ನೆಲ್ಲಾ ಹೇಳ್ತೀನಿ. ಆ ಸೀಕ್ರೆಟ್ ಫೈಲ್ ಬಗೆಗೆ ಕೂಡ ಹೇಳ್ತೀನಿ. ಆದರೆ ಅವೆಲ್ಲಾ ನಿಮಗೆ ಅರ್ಥ ವಾಗುವಂತೆ ಹೇಳಬೇಕೆಂದರೆ ಮೊದಲು ನಿಮಗೆ ನನ್ನ ಕಥೆ ಹೇಳಬೇಕು. ಮೊದಲಿನಿಂದ ಕೊನೆಯವರೆಗೆ ಎಲ್ಲಾ ವಿವರವಾಗಿ ಹೇಳ್ತೀನಿ. ನಿಮ್ಮಿಂದ ನಾನೇನೂ ಬಚ್ಚಿಡಬೇಕೆಂದುಕೊಂಡಿಲ್ಲ. ಎಲ್ಲಾ ಹೇಳ್ತೀನಿ."

ಅವಳು ಆ ಮಾತು ಹೇಳಿದೊಡನೆಯೇ ಆ ಕೋಣೆಯಲ್ಲಿ ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ದ ಉಂಟಾಯ್ತು.

ಅವಳು ಹೇಳುತ್ತಿದ್ದ ಮಾತುಗಳನ್ನು ಅವರೆಲ್ಲರೂ ಕಿವಿ ನಿಮಿರಿಸಿ ಕೇಳಿದರು. ಕೇಳುತ್ತಿರುವಂತೆ ಪ್ರತಿಯೊಬ್ಬರ ಕಣ್ಣುಗಳೂ ಆಶ್ಚರ್ಯದಿಂದ ಅರಳುತ್ತಿದ್ದವು. ಆಶ್ಚರ್ಯದಿಂದ ಅರಳುತ್ತಿದ್ದ ಆ ಕಣ್ಣುಗಳಲ್ಲಿ ಮೇಖಲೆಯ ಬಗೆಗೆ ಸಹಾನುಭೂತಿ ವ್ಯಕ್ತವಾಗುತ್ತಿತ್ತು. ರೈಲು ಇಂಜಿನ್ ಚಕ್ರಗಳಂತೆ ನಿಮಿಷಗಳು ಉರುಳುತ್ತಿದ್ದವು. ಅವಳು ಹೇಳುತ್ತಲೇ ಇದ್ದಳು. ಪ್ರತಿಯೊಬ್ಬರೂ ಉಸಿರು ಬಿಗಿಹಿಡಿದು ಕೇಳುತ್ತಲೇ ಇದ್ದರು. ಒಂದು ಕ್ಷಣ ಮೈಮರೆತರೆ ಅವಳು ಹೇಳುತ್ತಿರುವುದರಲ್ಲಿ ಯಾವ ಅಂಶ ತಪ್ಪಿ ಹೋಗುತ್ತದೆಯೋ ಎಂದು ಶ್ರದ್ಧೆ ಯಿಂದ ಕೇಳುತ್ತಿದ್ದರು. ಅವಳು ತನ್ನ ಕಥೆ ಹೇಳುವುದನ್ನು ಪೂರ್ತಿ ಮಾಡಿ ದೊಡನೆಯೇ ಅಲ್ಲಿದ್ದವರೆಲ್ಲಾ ಬಿಗಿ ಹಿಡಿದಿದ್ದ ಉಸಿರನ್ನು ಬಿಟ್ಟರು.

"ದಯಾಕರರಾವ್ ಮುನೀಂದ್ರಸ್ವಾಮಿ ಹೇಗಾದ?" ಒಬ್ಬ ವರದಿಗಾರ ಪ್ರಶ್ನಿಸಿದ.

"ಮುನೀಂದ್ರಸ್ವಾಮಿಯ ಅವತಾರ ಎತ್ತುವ ಮೊದಲು ದಯಾಕರರಾವ್ ತುಂಬಾ ಪಾತ್ರಗಳನ್ನು ಧರಿಸಿದ್ದ. ಅವುಗಳಲ್ಲಿ ಮೊದಲನೆಯದು ಸಮಾಜ ಸೇವಕನ ಪಾತ್ರ— ಎರಡನೇ ಪಾತ್ರ ರಾಜಕೀಯ ನಾಯಕನದು. ನನ್ನನ್ನು ಉಪಯೋಗಿಸಿಕೊಂಡು ಪಾರ್ಟಿ ಟಿಕೆಟ್ ಸಂಪಾದಿಸಿದ ಮೇಲೆ ದಯಾಕರರಾವ್ ಎಂ.ಪಿ. ಸೀಟು ಗೆದ್ದುಕೊಂಡ. ಪಾರ್ಟಿಯಲ್ಲಿ ತನ್ನ ಪ್ರಭಾವ ಬೆಳೆಸಿಕೊಳ್ಳಲು ತುಂಬಾ ಪ್ರಯತ್ನಿಸಿದ. ತಾರಕನಾಮ ಅವನಿಗೆ ಆ ವಿಷಯದಲ್ಲಿ ತುಂಬಾ ಸಹಾಯ ಮಾಡುತ್ತಿದ್ದ. ಆದರೆ ಇವೆಲ್ಲಾ ಪ್ರಜೆಗಳನ್ನಾಗಲಿ, ಪತ್ರಿಕೆಗಳವ ನ್ನಾಗಲಿ ಅಷ್ಟಾಗಿ ಆಕರ್ಷಿಸಲಿಲ್ಲ. ನಿಜಕ್ಕೂ ದಯಾಕರರಾವ್ ರಾಜಕೀಯ

ನಾಯಕನಾಗಿದ್ದುದು ಕೇವಲ ಎರಡು–ಮೂರು ವರ್ಷ ಮಾತ್ರ. ಬೇಕಿದ್ದರೆ ನೀವು ಚೆಕ್ ಮಾಡಿಕೊಳ್ಳಬಹುದು. ಆ ನಂತರ ಮಧ್ಯಂತರ ಚುನಾವಣೆಗಳು ಬಂದುವು. ಆ ಚುನಾವಣೆಯಲ್ಲಿ ದಯಾಕರರಾವ್ ತನ್ನ ಪಾರ್ಲಿಮೆಂಟ್ ಸೀಟು ಉಳಿಸಿಕೊಳ್ಳದೇ ಹೋದ. ಆ ಪರಾಜಯದ ನಂತರ ಆತನೇನಾದನೆಂದು ಯಾರೂ ಯೋಚಿಸಲಿಲ್ಲ. ಅಂತೂ ಮಧ್ಯಂತರ ಚುನಾವಣೆಗಳ ನಂತರ ದಯಾಕರ ರಾವ್ ಹಠಾತ್ತನೆ ರಾಜಕೀಯ ಜೀವನದಿಂದ ನಿಷ್ಕ್ರಮಿಸಿದ. ಅವನ ಕುಟುಂಬ ನಿಜವಾಗಿಯೂ ಅಮೆರಿಕಾದಲ್ಲಿ ಸೆಟಲ್ ಆದುದರಿಂದ ಅವನು ಅಮೆರಿಕಾಗೆ ಹೋದನೆಂದು ಜನ ಭಾವಿಸಿದರು.

"ಕೆಲಕಾಲದ ನಂತರ ಬೊಂಬಾಯಿಯಲ್ಲಿ ಮುನೀಂದ್ರಸ್ವಾಮಿ ಹಠಾತ್ತನೆ ಅವತರಿಸಿದ. ದಯಾಕರರಾವ್ ಮುನೀಂದ್ರಸ್ವಾಮಿಯಾಗಲು ಯಾವ ಪರಿಸ್ಥಿತಿಗಳು ಪ್ರೇರೇಪಿಸಿದವೋ ನನಗೂ ತಿಳಿಯದು. ಆದರೆ ಮುನೀಂದ್ರಸ್ವಾಮಿಯೇ ದಯಾಕರರಾವ್ ಎನ್ನುವುದು ಮಾತ್ರ ನಿಜ. ಈ ಹೊಸ ಅವತಾರದಲ್ಲಿ ದಯಾಕರರಾವ್‌ನನ್ನು ಯಾರೂ ಗುರುತು ಹಿಡಿಯಲಿಲ್ಲ. ಮುನೀಂದ್ರ ಸ್ವಾಮಿಯ ಪೂರ್ವಾಪರಗಳೇನೆಂದು ಇಲ್ಲಿಯವರೆಗೆ ಯಾರೂ ಯೋಚಿಸದಿದ್ದದ್ದು ಆಶ್ಚರ್ಯ. ತಾನು ಹಿಮಾಲಯದಿಂದ ಬಂದೆನೆಂದು ಮುನೀಂದ್ರಸ್ವಾಮಿ ಎಲ್ಲರಿಗೂ ಹೇಳುತ್ತಿದ್ದ. ಅಮಾಯಕರಾದ ಜನ ಅವನ ಮಾತು ನಂಬಿದರು.

"ಮುನೀಂದ್ರಸ್ವಾಮಿಗೆ ವಿಪರೀತವಾದ ಪ್ರಚಾರ ಬರುವವರೆಗೆ ಪತ್ರಿಕೆಗಳವರು ಅವನ ಬಗೆಗೆ ಕೊಂಚವೂ ತಲೆ ಕೆಡಿಸಿಕೊಂಡಿರಲಿಲ್ಲ. ಅಮೆರಿಕಾದಲ್ಲಿ ಆಶ್ರಮ ಸ್ಥಾಪಿಸಿದ ಮೇಲೆಯೇ ಪತ್ರಿಕೆಯವರ ದೃಷ್ಟಿ ಅವನ ಕಡೆ ಹೊರಳಿತು. ಸ್ವಾಮೀಜಿಯಾಗಿ ಅವತಾರವೆತ್ತಿದಾಗಲೂ ಮುನೀಂದ್ರಸ್ವಾಮಿಗೆ ರಾಜಕೀಯಗಳ ಮೇಲೆ ವ್ಯಾಮೋಹ ಸಾಯದಿರುವುದನ್ನು ನೀವೆಲ್ಲರೂ ನೋಡಿದ್ದೀರಿ. ಅಧಿಕಾರದಲ್ಲಿರುವ ಪಾರ್ಟಿಯನ್ನು ಬಯ್ಯುವುದು, ವಿರೋಧ ಪಕ್ಷದ ನಾಯಕರೊಂದಿಗೆ ಆಗಾಗ ಒಂದೇ ಪ್ಲಾಟ್‌ಫಾರ್ಮ್ ಮೇಲೆ ಕಾಣಿಸಿಕೊಳ್ಳುವುದು, ಈ ದೇಶಕ್ಕೊಬ್ಬ ಸನ್ಯಾಸಿಯ ನಾಯಕತ್ವ ಬೇಕೆಂದು ಉಪನ್ಯಾಸ ಕೊಟ್ಟಿದ್ದು ಎಲ್ಲಾ ನಿಮಗೆ ಗೊತ್ತು. ಪ್ರಜೆಗಳಲ್ಲಿ ತನ್ನ ಪ್ರಭಾವ ಬೆಳೆದಂತೆಲ್ಲಾ ಮುನೀಂದ್ರಸ್ವಾಮಿಯ ಆಸೆ ಆಕಾಶದೆತ್ತರಕ್ಕೇರಿತು. ಆಗಿನಿಂದಲೇ ತಾನು ಭಾರತ ದೇಶಕ್ಕೆ ಅಧ್ಯಕ್ಷನೋ, ಪ್ರಧಾನಿಯೋ ಆಗಬೇಕೆಂದು ಕನಸು ಕಾಣತೊಡಗಿದ. ಮುನೀಂದ್ರಸ್ವಾಮಿಯನ್ನು ನಾನು ಬೊಂಬಾಯಿಯಲ್ಲಿ ಭೇಟಿಯಾದೆ. ಆಗ ನಾನು ಬೊಂಬಾಯಿ ಫ್ಯಾಷನ್ ಪ್ರಪಂಚದಲ್ಲಿ ಮಾಡೆಲ್ ಆಗಿ ಕೆಲಸ ಮಾಡುತ್ತಿದ್ದೆ.

"ಅವನ ರೂಪ ಎಷ್ಟು ಬದಲಾಗಿದ್ದರೂ ನಾನು ಅವನನ್ನು ಗುರುತು ಹಿಡಿದೆ. ಮುನೀಂದ್ರಸ್ವಾಮಿ ಕೂಡ ನನ್ನನ್ನು ಗುರುತು ಹಿಡಿದ. ಅದರಿಂದಾಗಿ ನಾನು ಅವನ ನಿಜಸ್ವರೂಪವನ್ನು ಎಲ್ಲಿ ಹೊರಹಾಕುತ್ತೇನೋ ಎಂದು ಅವನಿಗೆ ಭಯ ಉಂಟಾಯ್ತು. ತಾನು ನಿಜವಾಗಿಯೂ ಸ್ವಾಮೀಜಿಯಲ್ಲವೆಂದೂ, ಹಿಮಾಲಯದಿಂದ ಬಂದಿಲ್ಲವೆಂದೂ, ಒಬ್ಬ ಮಾಜಿ ರಾಜಕೀಯ ನಾಯಕ ನೆಂದೂ ನಾನು ಎಲ್ಲರಿಗೂ ಹೇಳಿಬಿಡಬಹುದೆಂದು ಹೆದರಿದ. ಒಂದು ಸಲ ನಿಜ ಹೊರಗೆ ಬಂದರೆ ತನ್ನ ಅವತಾರ ಹೊರಬೀಳುವುದು ಖಾತ್ರಿಯೆಂದು ತಿಳಿದು ಕೊಂಡ. ಅದರಿಂದಾಗಿ ನನ್ನ ಜೊತೆ ಸಲಿಗೆಯಿಂದಿರಲು ಪ್ರಯತ್ನಿಸಿದ. ಅವನೇ ನನ್ನನ್ನು ಜೇಕೇಗೆ ಪರಿಚಯ ಮಾಡಿಸಿದ." ವಿವರಿಸಿದಳು ಮೇಖಲೆ.

"ತಾರಕನಾಮ ನಿಮಗೆ ಕೊಟ್ಟ ಸೀಕ್ರೆಟ್ ಫೈಲ್ ಮುನೀಂದ್ರಸ್ವಾಮಿಯ ಹತ್ತಿರ ಹೇಗೆ ಹೋಯಿತು?" ವರದಿಗಾರನೊಬ್ಬ ಕೇಳಿದ.

ಮೇಖಲೆ ಕೆಲವು ಕ್ಷಣ ಮೌನವಾಗಿದ್ದು ಆ ವರದಿಗಾರನನ್ನು ದಿಟ್ಟಿಸಿ ನೋಡಿದಳು. ನಂತರ ನಿಧಾನವಾಗಿ ಹೇಳಿದಳು, "ನಿಜಕ್ಕೂ ತಾರಕನಾಮ ಆ ಸೀಕ್ರೆಟ್ ಫೈಲ್ ನನಗೆ ಕೊಡಲಿಲ್ಲ."

"ಅಂದ್ರೆ ನ್ಯೂ ಇಂಡಿಯಾದಲ್ಲಿ ಪ್ರಕಟಿಸಿದ ನಿಮ್ಮ ಫೋಟೋಗಳನ್ನು ಸುಳ್ಳೆನ್ನುತ್ತೀರಾ?"

"ಅಲ್ಲ, ಆ ಫೋಟೋಗಳು ಸುಳ್ಳಲ್ಲ!"

"ಅಂದರೆ ತಾರಕನಾಮ ನಿಮ್ಮನ್ನು ಡಾಲ್‌ಲೇಕ್ ಹೌಸ್ ಬೋಟ್‌ನಲ್ಲಿ ಭೇಟಿಯಾದ ಮಾತು ನಿಜ."

"ನೂರಕ್ಕೆ ನೂರರಷ್ಟು ನಿಜ. ಜೇಕೇ ಆ ಸೀಕ್ರೆಟ್ ಫೈಲ್‌ಗೋಸ್ಕರ ನನ್ನನ್ನು ತಾರಕನಾಮನ ಹತ್ತಿರ ಕಳಿಸಿದ ಮಾತು ನಿಜವೇ. ನಾನು ತಾರಕ ನಾಮನನ್ನು ಹೌಸ್‌ಬೋಟಿನಲ್ಲಿ ಭೇಟಿಯಾದ ಮಾತೂ ನಿಜವೇ. ಆದರೆ ತಾರಕನಾಮ ಆ ಸೀಕ್ರೆಟ್ ಫೈಲ್ ನನಗೆ ಕೊಡಲಿಲ್ಲ."

"ಆದರೆ ನ್ಯೂ ಇಂಡಿಯಾದಲ್ಲಿ ಪ್ರಕಟಿಸಿದ ಫೋಟೋ...."

"ನನ್ನನ್ನು ಪೂರ್ತಿಯಾಗಿ ಹೇಳಲು ಬಿಡಿ. ನಾನು ಹೌಸ್ ಬೋಟಿನಲ್ಲಿ ತಾರಕನಾಮನನ್ನು ಭೇಟಿಯಾಗಲು ಹೋದಾಗ ಅವನು ಮುನೀಂದ್ರಸ್ವಾಮಿ ಯಂತೆ ನನ್ನನ್ನು ಗುರುತು ಹಿಡಿಯದೇ ಹೋದ. ಒಂದು ವೇಳೆ ಗುರುತಿಸಿದ್ದರೆ ನನ್ನನ್ನು ನಂಬಿ ಆ ಫೈಲ್ ನನ್ನ ಕೈಗೆ ಕೊಟ್ಟಿರುತ್ತಿದ್ದನೋ, ಇಲ್ಲವೋ ನನಗೆ ತಿಳಿಯದು. ಆದರೆ ತಾರಕನಾಮ ಆ ರಾತ್ರಿ ಪೂರ್ತಿಯಾಗಿ ನನ್ನನ್ನು ನಂಬಿರಲಿಲ್ಲ. ತಾರಕನಾಮ ಆ ಫೈಲ್‌ಅನ್ನು ನನಗೆ ಕೊಡುವುದು ಜೇಕೇಯ

ಪ್ಲಾನ್ ಅಲ್ಲವೇ ಅಲ್ಲ."

"ನಾನು ಹೌಸ್‌ಬೋಟಿನಲ್ಲಿ ಹೋಗುವಾಗಲೇ ಆ ಫೈಲ್ ತನ್ನ ಹತ್ತಿರ ರೆಡಿಯಾಗಿ ಇಟ್ಟುಕೊಂಡಿದ್ದ. ಕುಡಿದ ಅಮಲಿನಲ್ಲಿ ತೆಗೆದು ನನಗೆ ತೋರಿಸಿದ. ಅದೇ ನ್ಯೂ ಇಂಡಿಯಾದಲ್ಲಿ ಬಂದ ಫೋಟೋ. ಆ ಫೋಟೋ ಸುಳ್ಳೆಂದು ನಾನು ಖಂಡಿಸುತ್ತಿಲ್ಲ."

"ನಿಜವಾದ ಪ್ಲಾನ್ ಏನೆಂದರೆ ಅದೇ ರಾತ್ರಿ, ಅದೇ ಬೋಟಿನಲ್ಲಿ ಮುನೀಂದ್ರಸ್ವಾಮಿ ತಾರಕನಾಮನನ್ನು ಭೇಟಿಯಾಗಬೇಕು. ತಾರಕನಾಮ ಮುನೀಂದ್ರಸ್ವಾಮಿಗೆ ಆ ಫೈಲ್ ಕೊಡಬೇಕು. ಮುನೀಂದ್ರಸ್ವಾಮಿ ಆ ಫೈಲ್ ತೆಗೆದುಕೊಂಡು ಹೋಗಿ ಅಮೆರಿಕನ್ ಸಿ.ಐ.ಎ.ಗೆ ಕೊಡಬೇಕು. ಸಿ.ಐ.ಎ. ನೊಂದಿಗೆ ನೇರವಾಗಿ ಸಂಬಂಧ ಹೊಂದಿದ್ದವನು ಮುನೀಂದ್ರಸ್ವಾಮಿಯೇ: ಅದಕ್ಕೇ ಈ ಏರ್ಪಾಡು. ತಾರಕನಾಮ ಮುನೀಂದ್ರಸ್ವಾಮಿಗೆ ಆ ಫೈಲು ಕೊಟ್ಟಿದ್ದಕ್ಕೆ ಪ್ರತಿಫಲವಾಗಿ ನಾನು ತಾರಕನಾಮನ ಹತ್ತಿರ ಹೋಗಬೇಕು ಅಷ್ಟೇ ನನ್ನ ಪಾತ್ರ. ಆದರೆ ಏಕೋ ಮುನೀಂದ್ರಸ್ವಾಮಿ ಆ ರಾತ್ರಿ ಬರಲಿಲ್ಲ: ನಂತರ ಏನು ನಡೆಯಿತೆಂದು ನನಗೆ ತಿಳಿಯದು."

"ಸಿ.ಐ.ಎ.ನೊಂದಿಗೆ ಮುನೀಂದ್ರಸ್ವಾಮಿಗೆ ಸಂಬಂಧ ಇತ್ತೆನ್ನುತ್ತೀರಿ. ಅಂತಹ ಸಂಬಂಧವೇ ಇದ್ದಿದ್ದರೆ ಅಮೆರಿಕಾ ಸರಕಾರ ಮುನೀಂದ್ರಸ್ವಾಮಿಯನ್ನು ತಮ್ಮ ದೇಶದಿಂದ ಕಳುಹಿಸಿದ್ದು ಏಕೆ?"

"ಈ ಪ್ರಶ್ನೆಗೆ ನನ್ನ ಹತ್ತಿರ ಉತ್ತರವಿಲ್ಲ. ಅದು ನೀವು ಸಿ.ಐ.ಎ.ನ ಕೇಳಬೇಕಾದ ಪ್ರಶ್ನೆ" ಎಂದು ನಕ್ಕಳು ಮೋಹಿನಿ. ಅಷ್ಟರಲ್ಲಿಯೇ ಗಂಭೀರಳಾಗಿ ಮತ್ತೆ ನುಡಿದಳು....

"ಏಕೋ, ಸಿ.ಐ.ಎ.ನೊಂದಿಗೆ ಮುನೀಂದ್ರಸ್ವಾಮಿಗೆ ವಿರಸ ಉಂಟಾಗಿರಬೇಕು. ಸಿ.ಐ.ಎ.ಗೆ ಯಾರೂ ಶಾಶ್ವತ ಮಿತ್ರರಲ್ಲವೆಂಬ ವಿಷಯ ನಿಮಗೆ ನಾನು ವಿವರಿಸಬೇಕಾಗಿಲ್ಲ."

"ಮುನೀಂದ್ರಸ್ವಾಮಿಯ ಹತ್ತಿರ ಆ ಫೈಲು ಮತ್ತೆ ಯಾವಾಗ ಹೋಯಿತು?"

"ಬಹುಶಃ ಅವನು ಬೇಗಂಪೇಟೆಯಲ್ಲಿ ಶಿಫ್ಯಾಯಲಿಂಗ್‌ಗೋಸ್ಕರ ಇಳಿದಾಗ ಇರಬೇಕು."

"ಅವನ ಹತ್ತಿರ ಆ ಫೈಲ್ ಇದೆಯೆಂದು ನೀವು ರಾಜ್‌ಭವನ್‌ಗೆ ಫೋನ್ ಮಾಡಿದಿರಲ್ವೆ; ನಿಮಗೆ ಅಷ್ಟು ಖಚಿತವಾಗಿ ಹೇಗೆ ಗೊತ್ತಿತ್ತು?"

"ಮುನೀಂದ್ರಸ್ವಾಮಿ ಎಂತಹವನೆಂದು ನನಗೆ ತಿಳಿದಿದ್ದರಿಂದ ಅಮೆರಿಕಾ

ದೇಶ ಅವನನ್ನು ಓಡಿಸಿದ ನಂತರ ಯಾವ ದೇಶವೂ ಅವನಿಗೆ ಪ್ರವೇಶ ಕೊಡಲಿಲ್ಲ. ಇನ್ನು ಮುನೀಂದ್ರಸ್ವಾಮಿಗೆ ಉಳಿದದ್ದು ಒಂದೇ ಒಂದು ದಾರಿ. ಸಿ.ಐ.ಎ.ನೊಂದಿಗೆ ಚೌಕಾಶಿ ಮಾಡುವುದು; ಸಿ.ಐ.ಎ.ಗೆ ಫೈಲು ಬೇಕೆಂದರೆ ತನಗೆ ಆ ದೇಶದಲ್ಲಿ ಮತ್ತೆ ಪ್ರವೇಶ ಕೊಡಬೇಕೆಂದು ಷರತ್ತು ಹಾಕುವುದು! ಮುನೀಂದ್ರಸ್ವಾಮಿ ಆ ಫೈಲ್‌ಗೋಸ್ಕರ ಭಾರತ ದೇಶಕ್ಕೆ ಬರುವನೆನ್ನುವುದು ನನಗೆ ಖಂಡಿತವಾಗಿ ತಿಳಿದಿತ್ತು. ಆ ಫೈಲ್ ಅನ್ನು ಅಮೆರಿಕಾಗೆ ಕೊಡುತ್ತಾನೆಂದೂ ನನಗೆ ಖಂಡಿತವಾಗಿ ತಿಳಿದಿತ್ತು."

"ಅಷ್ಟೇ ಹೊರತು, ಆ ಫೈಲ್ ಮುನೀಂದ್ರಸ್ವಾಮಿಯ ಹತ್ತಿರ ಹೇಗೆ ಹೋಯಿತೆಂದು ನಿಮಗೆ ಪ್ರತ್ಯಕ್ಷವಾಗಿ ತಿಳಿಯದೆನ್ನುತ್ತೀರಾ?"

"ಗೊತ್ತಿಲ್ಲ."

"ಕೇವಲ ಊಹೆಯಿಂದ ರಾಜ್‌ಭವನ್‌ಗೆ ಫೋನ್ ಮಾಡಿದಿರಾ?"

ಮೇಖಲೆ ಆ ವರದಿಗಾರನನ್ನು ದೃಷ್ಟಿಸಿ ನೋಡಿದಳು. "ಕೆಲವು ವಿಷಯಗಳನ್ನು ತುಂಬಾ ಖಚಿತವಾಗಿ ಊಹಿಸಬಹುದು. ಅದು ಊಹಿಸುವುದಲ್ಲ, ಗ್ರಹಿಸುವುದು. ಉದಾಹರಣೆಗೆ ನಾನು ಇಂಟರ್‌ವ್ಯೂ ಕೊಡುತ್ತೇನೆಂದು ಫೋನ್ ಮಾಡಿದರೆ ನೀವೆಲ್ಲಾ ಓಡಿಬರುತ್ತೀರೆಂದು ನನಗೆ ಗೊತ್ತು. ಅದನ್ನು ನೀವು ಊಹೆ ಅನ್ನಬಲ್ಲಿರಾ?"

ಎಲ್ಲರೂ ನಕ್ಕರು.

"ಆ ಫೈಲ್ ಮುನೀಂದ್ರಸ್ವಾಮಿಗೆ ನೀವೇ ಕೊಟ್ಟರೆಂದು ಏಕೆ ಭಾವಿಸಬಾರದು?"

"ಚೆನ್ನಾಗಿದೆ! ನಾನೇ ಆ ಫೈಲ್ ಮುನೀಂದ್ರಸ್ವಾಮಿಗೆ ಕೊಟ್ಟಿದ್ದರೆ ರಾಜ್‌ಭವನ್‌ಗೆ ಏಕೆ ಫೋನ್ ಮಾಡ್ತೀನಿ?" ನೇರವಾಗಿ ಕೇಳಿದಳು.

"ಆ ಫೈಲು ದೇಶ ದಾಟಿ ಹೋಗುತ್ತಿದೆಯೆಂದು ನೀವು ರಾಜ್‌ಭವನ್‌ಗೆ ಫೋನ್ ಮಾಡಲು ಕಾರಣ? ನೀವು ಜೇಕೇ ಕಡೆಯವರಲ್ವೆ?" ಮತ್ತೊಬ್ಬರ ಪ್ರಶ್ನೆ.

"ನೋಡಿ, ನಿಮ್ಮ ಪತ್ರಿಕೆಯ ಹೆಸರೇನು?" ಕೇಳಿದಳು ಮೇಖಲೆ.

"ಪರಿಪಾಲನೆ."

" 'ಪರಿಪಾಲನೆ'ಗೆ ವರದಿಗಾರರಾಗಿ ನಿಮಗೆ ಕೆಲವು ದೇಶ ರಹಸ್ಯಗಳು ತಿಳಿಯುತ್ತವೆ. ನೀವು ಪತ್ರಿಕೆಗೆ ಸಂಬಂಧಿಸಿದವರೇ ಅಲ್ವೆ; ನಿಮ್ಮ ಪತ್ರಿಕೆಯ ಮಾಲೀಕ ಆ ರಹಸ್ಯಗಳನ್ನು ಅಮೆರಿಕಾಕ್ಕೋ, ಪಾಕಿಸ್ತಾನಕ್ಕೋ ಕೊಡಬೇಕೆಂದುಕೊಂಡಿದ್ದಾನೆಂದುಕೊಳ್ಳಿ; ನೀವು ಕೊಟ್ಟುಬಿಡ್ತೀರಾ? ದೇಶಕ್ಕೆ

ವ್ಯತಿರಿಕ್ತವಾಗಿ ಕೆಲಸ ಮಾಡ್ತೀರಾ?"

"ಮಾಡೋದಿಲ್ಲ" ಎಂದ ಆ ವರದಿಗಾರ.

"ಅದೇ ನಿಮ್ಮ ಪ್ರಶ್ನೆಗೆ ನನ್ನ ಉತ್ತರ!" ಇಂಟರ್‌ವ್ಯೂ ಅಲ್ಲಿಗೆ ಮುಗಿಯಿತೆಂಬುದಕ್ಕೆ ಸೂಚನೆಯಾಗಿ ಎದ್ದು ನಿಂತಳು.

ಪತ್ರಿಕಾ ವರದಿಗಾರರೆಲ್ಲರೂ ಚುರುಕಿನಿಂದ ಎದ್ದರು. ಮೇಖಲೆ ಕೊಟ್ಟ ಇಂಟರ್‌ವ್ಯೂ ಆ ಮರುದಿನ ದೇಶದ ಎಲ್ಲ ಪತ್ರಿಕೆಗಳು ಪ್ರಮುಖವಾಗಿ ಪ್ರಕಟಿಸಿದವು.

## ೩೩

ಜಾನಿವಾಕರ್ ತುಂಬಾ ತೀವ್ರವಾಗಿ ಆಲೋಚಿಸುತ್ತಿದ್ದ. ಅಕಸ್ಮಾತ್ತಾಗಿ ತಾರಕನಾಮ ಅದೃಶ್ಯನಾಗಿಬಿಟ್ಟನೆಂಬ ಸಮಾಚಾರ ಅವನಿಗೆ ಚಿಂತೆಯುಂಟು ಮಾಡಿತ್ತು.

ತಾರಕನಾಮನಂತಹ ವ್ಯಕ್ತಿ ದೇಶ ಬಿಟ್ಟು ಓಡಿಹೋದರೂ ಇಲ್ಲಿ ತನಗೆ ಹಾನಿಯುಂಟು ಮಾಡಿದವರೆಲ್ಲರನ್ನೂ ಮಣ್ಣುಗೂಡಿಸುವ ಪ್ರಯತ್ನ ಮಾಡದೇ ಹೋಗಿರುವುದಿಲ್ಲ. ಮೇಖಲೆಯನ್ನು ಮುಗಿಸಲು ಅವನು ಈಗ ಯಾವ ಸಂಚು ಮಾಡಿದ್ದಾನೋ ತಿಳಿಯದು. ಇದೆಲ್ಲಾ ತನ್ನಿಂದಲೇ ಆದದ್ದು. ಮೂರ್ಖತನದಿಂದ ಆವೇಶದಲ್ಲಿ ಮೇಖಲೆಯ ವಿಷಯ ತಾರಕನಾಮನ ಮುಂದೆ ಹೇಳಿಬಿಟ್ಟಿದ್ದ. ತಾರಕನಾಮ ಕೈಕಟ್ಟಿಕೊಂಡು ಕುಳಿತಿರುವುದಿಲ್ಲ. ಎರಡಕ್ಕೆ ಎರಡು ಜೋಡಿಸಿ ನಾಲ್ಕೆಂದು ಲೆಕ್ಕ ಹಾಕಿಯೇ ಇರುತ್ತಾನೆ. ಮೇಖಲೆ ತನ್ನನ್ನು ಪತನಗೊಳಿಸಲು ಪ್ರಯತ್ನಿಸುತ್ತಾಳೆಂದು ಊಹಿಸುವುದು ಅವನಿಗೀಗ ದೊಡ್ಡ ವಿಷಯವಲ್ಲ. ನ್ಯೂ ಇಂಡಿಯಾ ಪತ್ರಿಕೆಗೆ ಡಾಲ್ ಲೇಕ್‌ನಲ್ಲಿ ಆ ದಿನ ರಾತ್ರಿ ನಡೆದುದೇನೆಂದು ತಿಳಿದು ಹೋಗಿದ್ದರಲ್ಲಿ ಮೇಖಲೆಯ ಪಾತ್ರ ಕೂಡ ಇದ್ದಿರಬೇಕೆಂದು ತಾರಕನಾಮ ಭಾವಿಸಿದರೂ ಆಶ್ಚರ್ಯವಿಲ್ಲ.

ಮುನೀಂದ್ರಸ್ವಾಮಿ ಕಥೆ ಮೇಖಲೆಯಿಂದಾಗಿ ಹೇಗೆ ಸಮಾಪ್ತಿಯಾಯಿತೆಂದು ತಿಳಿದೊಡನೆಯೇ ತಾರಕನಾಮ ತನ್ನ ಬತ್ತಳಿಕೆಯಲ್ಲಿರುವ ಬಾಣಗಳೆಲ್ಲವನ್ನೂ ಮೇಖಲೆಯ ಮೇಲೆ ಸಂಧಿಸಲು ಸಿದ್ಧವಾಗಿರುತ್ತಾನೆ. ಮಿಸ್ಟರ್ ಜಾನಿಯ ಹೆಸರಿನಲ್ಲಿ ತಾರಕನಾಮನಿಗೆ ಫೋನ್ ಮಾಡಿದಾಗ ತಾರಕನಾಮ ಹೇಳಿದ ಪ್ಲಾನ್ ನಿಜವೆಂದು ನಂಬಲು ಜಾನಿವಾಕರ್ ಚಿಕ್ಕ ಹುಡುಗನಲ್ಲ. ಆದರೆ ಅದರಿಂದ ಅವನಿಗೆ ಒಂದು ವಿಷಯ ಸ್ಪಷ್ಟವಾಗಿ ತಿಳಿಯಿತು. ತಾರಕನಾಮ ಮೇಖಲೆಯನ್ನು ಮುಗಿಸಲು ಪ್ರಯತ್ನ ಮಾಡುತ್ತಿದ್ದಾನೆ. ಅಷ್ಟರ

ಮಟ್ಟಿಗೆ ನಿಜ. ಅದನ್ನು ನಡೆಯಗೊಡಕೂಡದು. ತಾನು ಮೇಖಲೆಯನ್ನು ರಕ್ಷಿಸಬೇಕು. ತಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು.

ಜಾನಿವಾಕರ್‌ಗೆ ಹಠಾತ್ತನೆ ದೇವ ಹೇಳಿದ ಮಾತು ನೆನಪಾಯಿತು.

"ನಾನು ಅವಳನ್ನು ಪ್ರೇಮಿಸ್ತಿದೀನಿ ಬಾಸ್! ನೀನೂ ಪ್ರೇಮಿಸು!" ಆ ಮಾತು ನೆನಪಾದೊಡನೆಯೇ ಜಾನಿವಾಕರ್ ತುಟಿಗಳ ಮೇಲೆ ಮುಗುಳ್ನಗೆ ಮೂಡಿತು. ಕ್ಷಣದಲ್ಲಿ ಒಂದು ನಿರ್ಣಯಕ್ಕೆ ಬಂದ. ರಿಸೀವರ್ ಕೈಗೆತ್ತಿಕೊಂಡು ಒಂದು ನಂಬರ್‌ಗೆ ಡಯಲ್ ಮಾಡಿದ.

"ಹಲೋ?" ಅತ್ತಲಿಂದ ಕೇಳಿಸಿತು.

"ಲೋಟಸ್" ಎಂದ ಜಾನಿವಾಕರ್.

## ೩೪

ವರದಿಗಾರರೆಲ್ಲಾ ಹೊರಟುಹೋದ ನಂತರ ಮೇಖಲೆ ತನ್ನ ಅಪಾರ್ಟ್‌ಮೆಂಟಿನಲ್ಲಿ ಒಂದು ಕಿಟಕಿಯ ಹತ್ತಿರ ಹೋಗಿ ಅನ್ಯಮನಸ್ಕಳಾಗಿ ದೂರದಲ್ಲಿ ಕಾಣಿಸುತ್ತಿದ್ದ ಆಕಾಶದ ಕಡೆ ನೋಡುತ್ತಾ ನಿಂತಳು.

ಈಗ ಅವಳ ಹೃದಯ ಶೂನ್ಯವಾಗಿತ್ತು. ಏನು ಮಾಡಬೇಕೆಂದುಕೊಂಡಿದ್ದಳು? ಏನು ಮಾಡಿದಳು? ನೆನಪಿಸಿಕೊಂಡರೆ ಅವಳಿಗೇ ಆಶ್ಚರ್ಯವಾಗಿತ್ತು. ಜೀವನದಲ್ಲಿ ಇಷ್ಟು ವೈವಿಧ್ಯ ಏಕಿರಬೇಕು? ಒಂದು ದಾರಿಯಲ್ಲಿ ಹೋಗುತ್ತಲೇ ಮನುಷ್ಯ ಮತ್ತೊಂದು ದಾರಿಯಲ್ಲಿ ಏಕೆ ಹೊರಳಬೇಕು? ಅದೆಷ್ಟು ಸಹಜವೋ, ಇದೂ ಅಷ್ಟೇ ಸಹಜವೆ? ಮನುಷ್ಯ ತಾನು ನಿರ್ದೇಶಿಸಿಕೊಂಡ ಜೀವನದ ಮೌಲ್ಯಗಳು ಮಧ್ಯದಲ್ಲಿ ಹೀಗೆ ಬದಲಾಗಬೇಕೆ ? ಬದಲಾವಣೆ ಜೀವನ ಸತ್ಯ. ಬದಲಾವಣೆಯಿಲ್ಲದ ಜೀವನವೇ ಇಲ್ಲ. ತಾನು ಬದಲಾಗಿದ್ದೇನೆಯೇ?....ಅಥವಾ ತನಗೆತಿಳಿಯದ ಯಾವುದೋ ದೌರ್ಬಲ್ಯಕ್ಕೆ ಶರಣಾದೆನೆ? ಅವಳು ಇದ ಮಿತ್ಥಂ ಎಂದು ಯಾವುದನ್ನೂ ನಿರ್ಣಯಿಸಲು ಸಾಧ್ಯವಾಗಲಿಲ್ಲ.

ಅವಳು ಆ ರೀತಿ ಆಲೋಚನೆಯಲ್ಲಿರುವಂತೆಯೇ ದೇವ ಹಿಂದಿನಿಂದ ನಿಶ್ಶಬ್ದವಾಗಿ ಅಪಾರ್ಟ್‌ಮೆಂಟಿನಲ್ಲಿ ಪ್ರವೇಶಿಸಿದ. ಪಕ್ಕಕ್ಕೆ ಬಂದು ನಿಂತರೂ ಅವಳು ಅವನನ್ನು ಗಮನಿಸಲಿಲ್ಲ. ದೇವ ಎರಡು ಕೈಗಳೂ ಕಟ್ಟಿಕೊಂಡು ಅವಳ ಆಲೋಚನೆಗೆ ಭಂಗತರದಂತೆ ಅವಳ ಮುಖವನ್ನೇ ಹುಚ್ಚನಂತೆ ತದೇಕವಾಗಿ ನೋಡುತ್ತಾ ನಿಂತ. ಅವಳು ಆಲೋಚನೆಯಿಂದ ಎಚ್ಚೆತ್ತು ಪಕ್ಕಕ್ಕೆ ನೋಡಿ ಬೆಚ್ಚಿಬಿದ್ದಳು. "ಅರೆ! ನೀನು ಯಾವಾಗ ಬಂದೆ?" ಕೇಳಿದಳು.

"ಯಾವಾಗ ಬಂದ್ರೆ ಏನು ಬಿಡು ಬಾಸ್! ನಿಂಜೊತೆ ಸ್ವಲ್ಪ ಕೆಲಸ ಇತ್ತು."

"ಏನದು? ದೇವರು ಮತ್ತೆ ಏನಾದರೂ ತಪ್ಪು ಮಾಡಿದ್ನಾ?" ನಗುತ್ತಾ ಪ್ರಶ್ನಿಸಿದಳು.

ದೇವನನ್ನು ನೋಡುತ್ತಲೇ ಅವಳ ಮನಸ್ಸಿನಲ್ಲಿನ ಶೂನ್ಯವೆಲ್ಲಾ ದೂರವಾಗಿ ಮತ್ತೆ ಚೈತನ್ಯ ಉಂಟಾಗುತ್ತಿತ್ತು.

ದೇವ ಸರ ಸರ ತಲೆಯಾಡಿಸಿದ. "ಹೌದು ಬಾಸ್! ಈ ಸಲ ದೇವರು ತುಂಬಾ ದೊಡ್ಡ ತಪ್ಪು ಮಾಡಿದ್ದಾನೆ" ತನ್ನ ಪುಸ್ತಕ ತೆರೆಯುತ್ತಾ ನುಡಿದ.

"ಬೇಡ ಬೇಡ ಲೆಕ್ಕ ಹೇಳ್ಬೇಡ. ನಿನಗೆ ಬೇಕಾದಷ್ಟು ತಗೊಂಡು ಹೋಗು."

ಅವನು ತನ್ನ ಪುಸ್ತಕ ಮುಚ್ಚಿ ತಲೆ ಅಡ್ಡವಾಗಿ ಆಡಿಸಿದ. "ಈ ಸಲ ದೇವರು ಮಾಡಿದ ತಪ್ಪು ಸರಿಪಡಿಸಬೇಕಾದರೆ ದುಡ್ಡಲ್ಲ ಬಾಸ್–ನೀನೇ ನನ್ನ ಹಿಂದೆ ಬರಬೇಕು."

"ನಾನಾ?"

"ಹೌದು, ಹೇಳಿದ್ನಲ್ಲ. ಈ ಸಲ ದೇವರು ತುಂಬಾ ದೊಡ್ಡ ತಪ್ಪು ಮಾಡಿದ್ದಾನೆ ಅಂತ."

"ಏನು ಆ ತಪ್ಪು ?"

"ಒಬ್ಬ ದಡ್ಡನಿಗೆ ಕ್ಯಾನ್ಸರ್ ಕೊಟ್ಟಿದ್ದಾನೆ. ರೋಗ ತುಂಬಾ ಉಲ್ಬಣಿಸಿಬಿಟ್ಟಿದೆ.

"ಹಾಗಾ! ಯಾರು ಆ ದಡ್ಡ ?"

"ಈ ಲೋಕದಲ್ಲಿ ದಡ್ಡ ಯಾರಿದಾರೆ ಬಾಸ್? ನಾನೇ!"

"ಏಯ್? ಜೋಕ್ ಮಾಡಲು ಇದು ಸಮಯವಲ್ಲ."

ದೇವ ಅದೊಂದು ರೀತಿ ನಕ್ಕ. "ಜೋಕ್ ಮಾಡುವಷ್ಟು ಬುದ್ಧಿ ನನಗೆ ಲ್ಲಿದೆ ಬಾಸ್ ? ಡಾಕ್ಟರ್ ಈ ದಿನಾನೇ ಕನ್‌ಫರ್ಮ್ ಮಾಡಿದ–ಹೆಚ್ಚು ದಿನ ಬದುಕೋದಿಲ್ಲಾಂತ!"

"ದೇವ!"

ಅವನು ಅದನ್ನೇನೂ ಹಚ್ಚಿಕೊಳ್ಳಲಿಲ್ಲ. ಯಾರಿಗೋ ರೋಗವೆನ್ನುವಂತೆ ತನ್ನ ಧೋರಣೆಯಲ್ಲಿ ತಾನು ಹೇಳಿಕೊಂಡು ಹೋಗುತ್ತಿದ್ದ. "ದೇವರು ಕೂಡ ತುಂಬಾ ದಡ್ಡ ಬಾಸ್! ನನ್ನ ಹಾಗೆಯೆ! ಇಲ್ದಿದ್ರೆ ಇಷ್ಟು ಬೇಗ ನನಗೆ ಸಾವು ತರುತ್ತಿದ್ದನಾ? ಅವನು ಮಾಡಿದ ತಪ್ಪುಗಳನ್ನು ನಾನಿನ್ನೂ ಪೂರ್ತಿಯಾಗಿ ಸರಿಪಡಿಸದೆಯೇ, ಈ ಭೂಮಿಯ ಮೇಲೆ ನನ್ನ ಮಿಷನ್ ಇನ್ನೂ ಪೂರ್ತಿ

ಯಾಗದೆಯೇ ನನ್ನನ್ನು ತನ್ನಲ್ಲಿಗೆ ಕರೆಸಿಕೊಳ್ಳುತ್ತಿದಾನೆ."

ಅವನು ಹೇಳುತ್ತಿರುವ ಮಾತುಗಳ್ಯಾವುವೂ ಮೇಖಲೆಗೆ ಕೇಳಿಸಲಿಲ್ಲ. ತಲೆ ಗಿರ್ರನೆ ತಿರುಗುತ್ತಿರುವಂತೆ ಭಾಸವಾಯ್ತು.

ಆಸರೆಗೋಸ್ಕರ ಎನ್ನುವಂತೆ ಅವನ ಭುಜ ಹಿಡಿದುಕೊಳ್ಳುತ್ತಾ ಅವನ ಕಣ್ಣುಗಳಲ್ಲಿ ಅರ್ಥರಹಿತವಾಗಿ ನೋಡಿದಳು. "ನೀನು.... ನೀನು ಹೇಳ್ತಿರೋದು ನಿಜಾನಾ ?"

ದೇವ ತಲೆಯಾಡಿಸಿದ. ಅವನ ತುಟಿಗಳು ಯಥಾಪ್ರಕಾರ ನಗುತ್ತಲೇ ಇದ್ದವು. ಅವಳು ಅವನ ಭುಜ ಹಿಡಿದು ಅಲುಗಾಡಿಸಿದಳು. "ಯಾವಾಗಿನಿಂದ ನಿನಗೆ ಈ ರೋಗ? ನನಗೆ ಮೊದಲೇ ಯಾಕೆ ಹೇಳಲಿಲ್ಲ ?"

"ರೋಗವೇನೋ ತುಂಬಾ ದಿನಗಳಿಂದ ಇದೆ. ಡಾಕ್ಟರ್‌ಗೆ ತೋರಿಸಿದ್ದು ಮಾತ್ರ ಮೊನ್ನೆನೇ. ಕನ್‌ಫರ್ಮ್ ಮಾಡಿದ್ದು ಈ ದಿನ! ಅದಕ್ಕೇ ನಿನಗೆ ಹೇಳಲಿಲ್ಲ! ಸತ್ತು ಹೋಗ್ತಿದೀನಂದ ಮೇಲೆ ನಿನಗೆ ಹೇಳದೆ ಸಾಯುವುದು ಇಷ್ಟವಿಲ್ಲದೆ ಹೇಳ್ತಿದೀನಿ."

"ನಿನಗೆ ಆ ಮಾತು ಹೇಳಿದ ಡಾಕ್ಟರ್ ಯಾರು ?"

"ನನಗ್ಯಾವ ಡಾಕ್ಟರ್ ಹೇಳ್ತಾನೆ? ಜನರಲ್ ಹಾಸ್ಪಿಟಲ್‌ನಲ್ಲಿ ಸರ್ಕಾರಿ ಡಾಕ್ಟರ್! ಹಾಸ್ಪಿಟಲ್‌ನಲ್ಲಿ ಸೇರ್ಕೋ ಅಂದ. ಹೇಗೂ ಸಾಯ್ತೀನಲ್ಲ ಅಂತ ಬೇಕಿಲ್ಲ ಅಂದೆ! ಟ್ರೀಟ್‌ಮೆಂಟ್ ಪಡೆದರೆ ಕೆಲ ದಿನ ಹೆಚ್ಚು ಬದುಕಬಹುದೆಂದು ಆಸೆ ತೋರಿಸಿದ. ನಾನು ಕೊಂಚ ಆಲೋಚಿಸಿದೆ. ಸಾಯುವುದರಿಂದ ಏನು ಸಾಧಿಸ್ತೀನಿ? ಕೆಲ ಕಾಲ ಹೆಚ್ಚು ಬದುಕಿದರೆ ದೇವರು ಮಾಡಿದ ತಪ್ಪುಗಳಲ್ಲಿ ಮತ್ತಷ್ಟನ್ನು ಸರಿಪಡಿಸಬಹುದು! ಅದಕ್ಕೇ ಒಪ್ಕೊಂಡೆ! ಆದರೆ...." ಹಠಾತ್ತನೆ ಅವನ ಮಾತು ತಡಬಡಿಸಿತು.

"ನೀನು ನನ್ನ ಹಿಂದೆ ಬರಬೇಕು ಬಾಸ್! ನೀನೇ ನನ್ನನ್ನು ಹಾಸ್ಪಿಟಲ್‌ಗೆ ಸೇರಿಸಬೇಕು. ಒಂದು ವೇಳೆ ನಾನು ಸತ್ತುಹೋದರೆ, ಸಾಯುವಾಗ ಕಣ್ಣೆದುರು ಇರಬೇಕು. ಬರ್ತೀಯಲ್ಲ ಬಾಸ್!"

ಅವಳು ಅವನನ್ನು ಒಂದು ಸಲ ಹುಚ್ಚಿಯಂತೆ ನೋಡಿದಳು. ತಟಕ್ಕನೆ ಅವನ ಭುಜ ಬಿಟ್ಟು ಕೈ ಹಿಡಿದುಕೊಂಡಳು. "ಬಾ ನಂಜೊತೆ!"

"ಎಲ್ಲಿಗೆ ಬಾಸ್ ?"

"ಈ ದಿನಗಳಲ್ಲಿ ಕ್ಯಾನ್ಸರ್ ಅಷ್ಟು ಘೋರವಾದ ರೋಗವೇನೂ ಅಲ್ಲ. ನೀನು ಯಾವ ಡಾಕ್ಟರ್‌ಗೆ ತೋರಿಸಿದೆಯೋ ಏನೋ! ನಡೆ, ನಿನ್ನನ್ನು ಬೆಸ್ಟ್ ಡಾಕ್ಟರ್‌ಗಳ ಹತ್ತಿರ ನಾನು ಕರೆದೊಯ್ತೀನಿ."

"ಉಪಯೋಗವಿಲ್ಲ ಬಾಸ್!" ತುಂಬಾ ಮೃದುವಾಗಿ ನುಡಿದ. "ನೀನು ತಾಪತ್ರಯ ಪಟ್ಟು ಉಪಯೋಗವಿಲ್ಲ. ನನ್ನ ಪರಿಸ್ಥಿತಿ ನನಗೆ ಗೊತ್ತು. ಟ್ರೀಟ್‌ಮೆಂಟ್‌ನಿಂದ ಇನ್ನು ಕೆಲವು ದಿನ ಹೆಚ್ಚು ಬದುಕಬಹುದೇನೋ ಅಷ್ಟೇ."

ಅವಳು ಅಲ್ಲಿಯೇ ಇದ್ದ ಒಂದು ಕುರ್ಚಿಯಲ್ಲಿ ಶಕ್ತಿಯಿಲ್ಲದವಳಂತೆ ಕುಸಿದು ಕುಳಿತು ಅವನನ್ನು ಆರ್ತಳಾಗಿ ನೋಡಿದಳು.

"ದೇವ........ ಹುಚ್ಚು ದೇವ........!" ಹಠಾತ್ತನೆ ಅವಳಲ್ಲಿ ಆವೇಶ ಉಂಟಾಯಿತು.

"ಇಲ್ಲ, ನಿನ್ನನ್ನು ಸಾಯಲು ಬಿಡುವುದಿಲ್ಲ! ನೀನು ಸಾಯಬಾರದು! ಬಾ ನಂಜೊತೆ!"

ಅವನ ಅನುಮತಿಗೋಸ್ಕರ ಎದುರು ನೋಡದೆ ಮೇಕೆಮರಿಯನ್ನು ಎಳೆದುಕೊಂಡು ಹೋದಂತೆ ಎಳೆದುಕೊಂಡು ಹೋಗಿ ಕಾರಿನ ಬಾಗಿಲು ತೆರೆದು ಅವನನ್ನು ಸೀಟಿಗೆ ತಳ್ಳಿದಳು. ತಾನು ಡ್ರೈವಿಂಗ್ ಸೀಟಿನಲ್ಲಿ ಕುಳಿತುಕೊಂಡು ಕಾರು ಸ್ಟಾರ್ಟ್ ಮಾಡಿದಳು.

ಕಾರು ರಸ್ತೆಯ ಮೇಲೆ ತಿರುವಿನಲ್ಲಿ ಹೊರಳಿದ ನಂತರ ಆ್ಯಕ್ಸಿಲರೇಟರ್ ಬಲವಾಗಿ ಒತ್ತುತ್ತಾ ಹಲ್ಲು ಕಚ್ಚಿ ಅವನ ಕಡೆ ನೋಡಿದಳು.

"ಡಾಕ್ಟರ್ ಪರಾಂಕುಶ ಸಿಟಿಯಲ್ಲೇ ಬೆಸ್ಟ್ ಕ್ಯಾನ್ಸರ್ ಸ್ಪೆಷಲಿಸ್ಟ್! ನಿನ್ನನ್ನು ಆತನ ಹತ್ತಿರ ಕರೆದೊಯ್ತೀನಿ."

ಅವನು ಮಾತಾಡಲಿಲ್ಲ. ಎರಡೂ ಕೈ ಕಟ್ಟಿಕೊಂಡು ತಲೆ ಹಿಂದಕ್ಕೆ ವಾಲಿಸಿ ಕುಳಿತುಕೊಂಡ. ಅವನ ಕಣ್ಣುಗಳು ಎಲ್ಲಿಯೋ ನೋಡುತ್ತಿದ್ದವು. ತುಟಿಗಳು ಎಂದಿನಂತೆ ನಗುತ್ತಿರಲಿಲ್ಲ. ಮುಖ ಅವಳು ಎಂದೂ ನೋಡದಷ್ಟು ಗಂಭೀರವಾಗಿತ್ತು. ಆ ಕ್ಷಣದಲ್ಲಿ ಅವಳಿಗೆ ಯಾರೋ ಹೊಸ ವ್ಯಕ್ತಿಯನ್ನು ನೋಡುತ್ತಿರುವಂತೆ ಅನಿಸಿತು.

"ಇಷ್ಟು ಕಾಲ ರೋಗದಿಂದ ನರಳುತ್ತಿದ್ದೂ, ಒಮ್ಮೆಯಾದರೂ ನನಗೆ ಒಂದು ಮಾತು ಹೇಳಲಿಲ್ಲವಲ್ಲ-ನಿನಗೇನನ್ನಬೇಕು?" ತೀಕ್ಷ್ಣವಾಗಿ ಕೇಳಿದಳು.

ಆಗಲೂ ಅವನು ಮಾತಾಡಲಿಲ್ಲ.

"ಏನೂ ಮಾತಾಡ್ತಿಲ್ವಲ್ಲ ? ಮಾತಾಡು" ಗದರಿಸಿದಳು.

ಅವನು ಇದ್ದಕ್ಕಿದ್ದಂತೆ ನೇರವಾಗಿ ಕುಳಿತುಕೊಳ್ಳುತ್ತಾ ಅವಳ ಮುಖ ನೋಡಿದ. "ನನಗೆ ಮತ್ತೊಂದು ಸಹಾಯ ಮಾಡ್ತೀಯಾ ಬಾಸ್ ?"

"ಏನು ಆ ಸಹಾಯ? ಡಾಕ್ಟರ್ ಹತ್ತಿರ ಕರೆದೊಯ್ಯೋದು ಬೇಡ-ನಿನ್ನಷ್ಟಕ್ಕೆ ನಿನ್ನನ್ನು ಬಿಡ್ಬೇಕು ಅಂತೀಯಾ? ಅಷ್ಟೇ ತಾನೆ?"

ಅವನು ಅಡ್ಡವಾಗಿ ತಲೆಯಾಡಿಸಿದ."ಅಲ್ಲ ಬಾಸ್! ನಾನು ಸತ್ತುಹೋದ್ರೆ ನೀನು....ನೀನು ಒಬ್ಬ ವ್ಯಕ್ತಿಗೆ ನನ್ನ ಸಾವಿನ ಸುದ್ದಿ ತಿಳಿಸ್ತೀಯಾ?"

"ಯಾರಿಗೆ?"

"ಒಬ್ಬ ಯುವತಿಗೆ."

"ಯಾರಾ ಯುವತಿ?"

"ಒಬ್ಬ ಯುವತಿ-ಅಷ್ಟೇ!"

"ಒಬ್ಬ ಯುವತಿ ಅಂದ್ರೆ?"

"ನನ್ನನ್ನು ಪ್ರೇಮಿಸಿದ ಯುವತಿ-ಒಂದೊಮ್ಮೆ!"

ಅವಳಿಗೆ ಆಶ್ಚರ್ಯವಾಯಿತು.

"ಯಾರಂದೆ?"

"ಒಂದೊಮ್ಮೆ ನನ್ನನ್ನು ಪ್ರೇಮಿಸಿದ ಯುವತಿ."

"ಈಗೇನಾಗಿದ್ದಾಳೆ?"

"ಮದುವೆ ಮಾಡಿಕೊಂಡು ಹೊರಟು ಹೋದಳು."

"ಕಾರಣ?"

"ಕುಲ-ಮತ ದುಡ್ಡು."

"ಕುಲ ಮತ ಸರಿ! ದುಡ್ಡು ಯಾರದು ?"

"ನನ್ನದು-ನಮ್ಮ ತಂದೆಯದು!"

"ನಿನಗೆ....ನಿನಗೆ ತಂದೆ ಇದ್ದಾರ?"

ಅವನು ಮೌನವಾಗಿ ತಲೆಯಾಡಿಸಿದ.

"ಊಂ, ಆಗಿನಿಂದ್ಲೇ ನೀನು ಹುಚ್ಚನಂತಾದೆಯಾ?"

"ಹುಚ್ಚನಂತಾಗಿದ್ದಲ್ಲ! ಲೋಕಕ್ಕೋಸ್ಕರ ಬಾಳುವುದನ್ನು ಕಲಿತುಕೊಂಡೆ.

"ನಿನ್ನ ಕಥೆ ಅರ್ಥವಾಗುವಂತೆ ಹೇಳ್ತೀಯಾ?"

"ಅರ್ಥವಾಗುವಂತೆ ಹೇಳೋದಿಕ್ಕೆ ಏನೂ ಇಲ್ಲ. ಆ ಹುಡುಗಿ ಕ್ರಿಶ್ಚಿಯನ್. ನಮ್ಮ ಮದುವೆಗೆ ನಮ್ಮಪ್ಪ ಒಪ್ಪಿಕೊಳ್ಳಲಿಲ್ಲ. ಅವರಪ್ಪನೂ ಒಪ್ಪಿಕೊಳ್ಳಲಿಲ್ಲ. ಅವರು ಅವಳಿಗೆ ಬಲವಂತದಿಂದ ಮದುವೆ ಮಾಡಿದರು. ನಾನು ಮನೆ ಬಿಟ್ಟು ಬಂದೆ. ಮೊದಲಲ್ಲಿ ದೇವರು ನನಗೊಬ್ಬನಿಗೇ ಅನ್ಯಾಯ ಮಾಡಿದ್ದಾನೆಂದು ಕೊಳ್ಳುತ್ತಿದ್ದೆ. ಆದರೆ ಮನೆ ಬಿಟ್ಟು ಬಂದ ಮೇಲೆ ತಿಳಿಯಿತು-ಈ ಲೋಕದಲ್ಲಿ ಇನ್ನೂ ತುಂಬಾ ತುಂಬಾ ಜನ ನೊಂದವರಿದ್ದಾರೆ. ದೇವರು ನನ್ನೊಬ್ಬನ ವಿಷಯದಲ್ಲೇ ತಪ್ಪು ಮಾಡಿಲ್ಲ. ಎಷ್ಟೋ ಜನರ ವಿಷಯದಲ್ಲಿ ತಪ್ಪು ಮಾಡಿದ್ದಾನೆ. ದೇವರು ಮಾಡಿದ ತಪ್ಪುಗಳೆಲ್ಲವನ್ನೂ ಸರಿಪಡಿಸಬೇಕೆನಿಸಿತು.

ನನ್ನ ಹಾಗೆಯೇ ಅಶಾಂತಿಗೀಡಾದವರೆಷ್ಟೋ ಜನಕ್ಕೆ ಮನಃಶ್ಯಾಂತಿ ನೀಡಬೇಕೆನಿಸಿತು. ಆಗಿನಿಂದಲೇ ನನ್ನ ಜೀವನ ಬದಲಾಯ್ತು."

ಅವಳು ಆಶ್ಚರ್ಯದಿಂದ ಅವನನ್ನು ನೋಡುತ್ತಿದ್ದಳು. ಹಠಾತ್ತನೆ ಅವಳ ಕಣ್ಣೆದುರಿಗೆ ಅವನು ಉನ್ನತವಾಗಿ ಬೆಳೆದಂತೆ ಭಾಸವಾಯ್ತು. ವ್ಯಕ್ತಿಯನ್ನು ಪ್ರೇಮಿಸುವುದು ದೊಡ್ಡದೇನೂ ಅಲ್ಲ. ವ್ಯಕ್ತಿ ಪ್ರೇಮವನ್ನು ವಿಶ್ವ ಪ್ರೇಮವನ್ನಾಗಿಸುವುದು ದೊಡ್ಡದು. ವ್ಯಕ್ತಿ ಪ್ರೇಮವನ್ನು ವಿಶ್ವ ಪ್ರೇಮವನ್ನಾಗಿಸಿದ ಆ ಮಹಾನುಭಾವನಿಗೆ ಅವಳ ಹೃದಯ: ವಂದನೆಗಳನ್ನರ್ಪಿಸಿತು. ಅಪ್ರಯತ್ನವಾಗಿ ಅವಳ ಮನಸ್ಸು ತನ್ನೊಂದಿಗೆ ಅವನನ್ನು ಹೋಲಿಸಿಕೊಂಡು ನೋಡಿದಂತಾಯ್ತು. ತಾನೂ ಅವನಂತೆಯೇ ಅಶಾಂತಿಗೊಳಗಾಗಿದ್ದಳು. ಅಶಾಂತಿಗೊಳಗಾಗಿ ತಾನೇನು ಮಾಡಿದಳು? ಇಡೀ ಲೋಕದ ಮೇಲೆ ಹಗೆ ತೊಟ್ಟಳು. ಪ್ರತೀಕಾರದಲ್ಲಿ ಶಾಂತಿಯನ್ನು ಹುಡುಕಬೇಕೆಂದುಕೊಂಡಳು. ಅವನು ಹಾಗಲ್ಲ. ಲೋಕ ಏರ್ಪಡಿಸಿದ ಅರ್ಥವಿಲ್ಲದ ಅಡ್ಡಗೋಡೆಗಳ ಕೆಳಗೆ ಅವನ ಜೀವನ ಸಮಾಧಿಯಾಗಿಬಿಟ್ಟಿತು. ಆದರೂ ಅವನು ಲೋಕದ ಮೇಲೆ ಹಗೆ ತೊಡಲಿಲ್ಲ. ವಿಶ್ವಶಾಂತಿಯಲ್ಲಿ ತನ್ನ ಶಾಂತಿಯನ್ನು ಹುಡುಕಿಕೊಂಡ. ಲೋಕವನ್ನು ದಗ್ಧಗೊಳಿಸಬೇಕೆಂದು ತಾನು ಕಂಕಣ ಕಟ್ಟಿಕೊಂಡರೆ ಲೋಕವನ್ನು ಸುಧಾರಿಸಬೇಕೆಂದು ಅವನು ಸಂಕಲ್ಪಿಸಿಕೊಂಡ. ಅವನು ಋಷಿ, ತಾನು ಸಾಧಾರಣ ವ್ಯಕ್ತಿ.

"ಅಂದರೆ ಉಳ್ಳವರ ಮಗನೆಂದಾಯಿತು."

ಅವನು ವಿಷಾದದಿಂದ ನಕ್ಕ. "ಮನಸ್ಸು ಬಿಟ್ಟು, ಉಳಿದೆಲ್ಲಾ ಉಳ್ಳವರ ಮಗ."

"ನಿನ್ನ ಹೆಸರೇನು? ದೇವ ಅನ್ನೋದು ನಿನ್ನ ನಿಜವಾದ ಹೆಸರಾ?"

"ನನ್ನ ಹೆಸರು ದೇವವ್ರತ."

"ನಿನಗೆ ನಿಮ್ಮ ತಂದೆ ಒಬ್ಬನೇನಾ? ಇನ್ಯಾರೂ ಇಲ್ವಾ?"

"ಅಮ್ಮ ಇದ್ಲು. ಆದರೆ ಈಗಿಲ್ಲ. ಸತ್ತುಹೋದ್ಲು. ನಮ್ಮಮ್ಮನಿಗೆ ನಾನೊಬ್ಬನೇ."

"ಇನ್ಯಾರೂ ಇಲ್ವಾ?"

"ಇದ್ದಾರೆ."

"ಯಾರು?"

"ನೀನು!" ಅವನ ಕಣ್ಣುಗಳಲ್ಲಿ ಕೃತಜ್ಞತೆ. ಆ ಉತ್ತರಕ್ಕೆ ಅವಳ ಹೃದಯ ಬಾಣ ನಾಟಿಕೊಂಡಂತೆ ವಿಲಿ ವಿಲಿ ಒದ್ದಾಡಿತು. ಎಷ್ಟು ವರ್ಷಗಳ

ನಂತರ....ಎಷ್ಟು ಯುಗಗಳ ನಂತರ....! "ನನಗೆ ನೀನಿರುವೆ" ಎನ್ನುವ ಮಾತು ಕೇಳುತ್ತಿದ್ದಾಳೆ. ಅವಳು ಬಾಯಿ ತೆರೆದು ಏನೋ ಹೇಳಬೇಕೆನ್ನುತ್ತಿದ್ದವಳು ಬೆಚ್ಚಿಬಿದ್ದಳು. ಅಲ್ಲಿಯವರೆಗೂ ಅವನ ಮಾತು ಕೇಳುತ್ತಿದ್ದ ಅವಳ ದೃಷ್ಟಿ ಅಪ್ರಯತ್ನವಾಗಿ ಪಕ್ಕಕ್ಕೆ ಸರಿದಿತ್ತು. ಕೈಗಳು ಯಾಂತ್ರಿಕವಾಗಿ ಸ್ಟೀರಿಂಗ್ ಕಂಟ್ರೋಲ್ ಮಾಡುತ್ತಿದ್ದರೂ, ಧ್ಯಾನ ಅವನ ಕಡೆಗಿತ್ತು. ಅದೇ ಅವಳ ತಪ್ಪು. ಹಠಾತ್ತನೆ ಯಾರೋ ಹುಡುಗ ಕಾರಿಗಡ್ಡ ಬಂದುಬಿಟ್ಟ. ಅಪ್ರಯತ್ನವಾಗಿ ಅವಳ ಬಾಯಿಂದ ಕೂಗು ಹೊರಬಿತ್ತು. ಸೆಕೆಂಡ್‌ನಲ್ಲಿ ಸ್ಟೀರಿಂಗ್ ಗಿರ್ರನೆ ಎಡಗಡೆ ತಿರುವಿ ಬ್ರೇಕ್ ಹಾಕಿದಳು. ಅಪಾಯ ತೃಣಮಾತ್ರದಷ್ಟು ವ್ಯತ್ಯಾಸದಲ್ಲಿ ತಪ್ಪಿತು. ಹೆಚ್ಚು-ಕಡಿಮೆ ಆ ಕಾರು ಆ ಹುಡುಗನನ್ನು ತಾಕುತ್ತಾ ಹೋಯಿತು. ಆದರೆ ಅವಳ ಆತಂಕ ಕಡಿಮೆಯಾಗಲಿಲ್ಲ. ರಸ್ತೆಯ ಪಕ್ಕದ ತಗ್ಗಿನಲ್ಲಿ ಹೋಗುತ್ತಿದ್ದ ಕಾರನ್ನು ಗಿರಗಿರನೆ ಸ್ಟೀರಿಂಗ್ ತಿರುಗಿಸುತ್ತಾ ಮತ್ತೆ ರಸ್ತೆ ಮೇಲೆ ತಂದಳು. ಅವಳ ಕಾಲು ಬ್ರೇಕ್ ಅನ್ನು ಒತ್ತುತ್ತಲೇ ಇತ್ತು.

"ಮೈ ಗಾಡ ....!"

"ಏನಾಯ್ತು ?" ಅವನು ಕೇಳಿದ.

"ಬ್ರೇಕ್ ಬೀಳ್ತಾ ಇಲ್ಲ" ಗಾಬರಿಯಿಂದ ಮತ್ತೊಂದು ಸಲ ಬ್ರೇಕ್ ಹಾಕಲು ಪ್ರಯತ್ನಿಸುತ್ತಾ ನುಡಿದಳು. ಸರಿಯಾಗಿ ಅದೇ ಸಮಯದಲ್ಲಿ ಆ ಕಾರಿನ ಹಿಂದೆಯೇ ಮತ್ತೊಂದು ಕಾರು ಶರವೇಗದಿಂದ ಬರತೊಡಗಿತು.

## ೩೫

ಟೆಲಿಫೋನ್ ಗಣಗಣವೆಂದು ಮೊಳಗಿತು. ಏನೋ ಯೋಚಿಸುತ್ತಾ ಅತ್ತ-ಇತ್ತ ಶತಪಥ ಹಾಕುತ್ತಿದ್ದ ಜಾನಿವಾಕರ್ ಥಟ್ಟನೆ ರಿಸೀವರ್ ಎತ್ತಿಕೊಂಡ. ಮೇಖಲೆಯ ವಿಷಯ ಪೇಪರ್‌ಗಳಲ್ಲಿ ಬಂದ ಮೇಲೆ ತಾರಕನಾಮನ ಮೇಲೆ ತಮ್ಮವರು ಒಂದು ಕಣ್ಣಿಟ್ಟೇ ಇರುತ್ತಾರೆಂದು ಅವನಿಗೆ ಗೊತ್ತು. ಅದೃಷ್ಟ ಚೆನ್ನಾಗಿದ್ದರೆ ತಾರಕನಾಮ ಅಕಸ್ಮಾತ್ತಾಗಿ ಎಲ್ಲಿಗೆ ಓಡಿಹೋಗಿದ್ದಾನೆಂದು ತಮ್ಮವರು ಹೇಳಬಲ್ಲರೆಂಬ ಆಸೆಯಿಂದ ಅವನು ಲೋಟಸ್ ಅನ್ನು ಸಂಪರ್ಕಿಸಿದ್ದ. ಲೋಟಸ್ ಕೊಂಚ ಹೊತ್ತಿನಲ್ಲಿ ತಿರುಗಿ ಫೋನ್ ಮಾಡುತ್ತೇನೆಂದು ಹೇಳಿದ್ದ. ಈ ಕಾಲ್ ಅವನಿಂದಲೇ ಆಗಿರಬೇಕು. ಅವನು ಊಹಿಸಿದಂತೆ ಆ ಕಾಲ್ ಲೋಟಸ್‌ನಿಂದಲೇ!

"ತಾರಕನಾಮ ಹೈದರಾಬಾದಿಗೆ ಹೋಗುತ್ತಿದ್ದಾನೆ. ಇಷ್ಟೊತ್ತಿಗೆ ಹೈದರಾಬಾದ್ ತಲುಪಿರಬಹುದು" ಎಂದ ಲೋಟಸ್.

ಜಾನಿವಾಕರ್ ಅಪ್ರಯತ್ನವಾಗಿ ಮುಷ್ಟಿ ಬಿಗಿಸಿದ. ಎಲ್ಲರೂ ಊಹಿಸುತ್ತಿರುವಂತೆ ತಾರಕನಾಮ ವಿದೇಶಕ್ಕೆ ಓಡಿಹೋಗಿಲ್ಲ. ಹೈದರಾಬಾದ್‌ಗೆ ಬರುತ್ತಿದ್ದಾನೆ. ಅಂದ್ರೆ....? ಅಂದ್ರೆ....? ಜಾನಿವಾಕರ್ ಹೃದಯ ಡವಗುಟ್ಟಿತು

## ೩೬

"ಇಗ್ನೀಷನ್ ಕೀ ತಿರುವಿದರೆ....?" ಅವನು ಸಲಹೆ ಕೊಟ್ಟ.

ಮೇಖಲೆ ಆತಂಕದಿಂದ ನೋಡಿದಳು. "ಈ ಸ್ಪೀಡ್‌ನಲ್ಲಿ ಅಪಾಯವಲ್ವೆ?" ಎಂದಳು. ಅವಳು ಆ ಮಾತು ಪೂರ್ತಿಗೊಳಿಸಿದಳೋ, ಇಲ್ಲವೋ ಹಿಂದಿನಿಂದ ಅವರನ್ನು ಹಿಂಬಾಲಿಸುತ್ತಿದ್ದ ಕಾರಿನ ವೇಗ ಏರಿತು. ಮುಂದೆ ನುಗ್ಗಿ ಬಂದು ಅವರ ಕಾರಿನೊಂದಿಗೆ ಸಮಾನವಾಗಿ ಓಡುತ್ತಿತ್ತು. ಪ್ರಶ್ನಾರ್ಥಕವಾಗಿ ಅವಳ ಕಡೆ ತಲೆ ತಿರುಗಿಸಿದ ದೇವ, ಅಕಸ್ಮಾತ್ತಾಗಿ ಬೆಚ್ಚಿಬಿದ್ದ.

"ಡಕ್!" ಎಂದು ಕೂಗುತ್ತಾ ಅವಳ ತಲೆಯನ್ನು ಬಲವಂತವಾಗಿ ಸ್ಟೀರಿಂಗ್‌ನ ಮೇಲೆ ಬಾಗಿಸಿದ. ಕೂದಲೆಳೆಯಷ್ಟರಲ್ಲಿ ಬುಲೆಟ್ ತಪ್ಪಿ ಹೋಯಿತು. ಕಿಟಕಿಯಿಂದ ತೂರಿ ಬಂದು ಅರ್ಧ ಮೇಲೆತ್ತಿದ್ದ ಕಿಟಕಿಯ ಗಾಜನ್ನು ಚೂರು ಚೂರು ಮಾಡಿ ಹೊರಬಿದ್ದಿತು. ಸೈಲೆನ್ಸರ್ ಜೋಡಿಸಿದ ರಿವಾಲ್ವರ್ ಹೆಚ್ಚು ಶಬ್ದ ಮಾಡಲಿಲ್ಲ. ಮೇಖಲೆ ಬರಲಿರುವ ಅಪಾಯವನ್ನು ಗ್ರಹಿಸಿದಳು. ತಲೆ ಪಕ್ಕಕ್ಕೆ ತಿರುಗಿಸಿ ಆ ಕಾರಿನಲ್ಲಿ ಯಾರಿದ್ದಾರೋ ನೋಡಲು ಸಮಯವಿರಲಿಲ್ಲ. ಅಷ್ಟರಲ್ಲಿ ಮತ್ತೊಂದು ಬುಲೆಟ್ ತಮ್ಮ ಕಡೆಗೆ ನುಗ್ಗಿ ಬರಬಹುದು. ಈ ಬಾರಿ ಅವರ ಗುರಿ ತಪ್ಪುತ್ತದೆಂದು ಗ್ಯಾರಂಟಿ ಇಲ್ಲ. ಸ್ಪೀಡ್! ವೇಗವಾಗಿ ಹೋಗುವುದೊಂದೇ ತಪ್ಪಿಸಿಕೊಳ್ಳುವ ಮಾರ್ಗ. ಮೇಖಲೆಯ ಪರಿಸ್ಥಿತಿ ಅಡಕೆ ಕತ್ತರಿಯಲ್ಲಿ ಸಿಕ್ಕಿಬಿದ್ದಂತಾಯಿತು. ಬ್ರೇಕ್ ಬೀಳುತ್ತಿಲ್ಲ. ಸ್ಪೀಡ್ ಏರಿಸಿದರೆ ಅಪಘಾತವಾಗುವ ಅಪಾಯ. ವೇಗ ಹೆಚ್ಚಿಸದಿದ್ದರೆ ಪಕ್ಕದಿಂದ ಬುಲೆಟ್‌ಗಳ ಸುರಿಮಳೆ. ಅಂದರೆ ತನ್ನ ಕಾರಿನ ಬ್ರೇಕ್ ಆಕಸ್ಮಿಕವಾಗಿ ವಿಫಲವಾಗಿಲ್ಲ. ಯಾರೋ ಬೇಕೆಂದೇ ಫೇಲ್ ಮಾಡಿರಬೇಕು. ಮೇಖಲೆ ಮುಂದೆ ದೃಷ್ಟಿ ನೆಟ್ಟಳು. ಅದೃಷ್ಟವಶಾತ್ ಆ ರಸ್ತೆಯ ಮೇಲೆ ಟ್ರಾಫಿಕ್ ಹೆಚ್ಚಿರಲಿಲ್ಲ. ಉಸಿರು ಬಿಗಿ ಹಿಡಿದು, ಹಲ್ಲು ಕಚ್ಚಿ ಆಕ್ಸಿಲರೇಟರ್ ಒತ್ತಿದಳು. ಮರುಕ್ಷಣ ಕಾರು ಗಾಳಿಯೊಂದಿಗೆ ಸ್ಪರ್ಧಿಸುತ್ತಿರುವಂತೆ ಮುಂದೆ ನುಗ್ಗಿತು. ನೋಡುತ್ತಿರುವಂತೆಯೇ ಪಕ್ಕದ ಕಾರು ಹಿಂದೆ ಬಿತ್ತು. "ಉಪಯೋಗವಿಲ್ಲ. ಅವರೂ ಸ್ಪೀಡ್ ಏರಿಸ್ತಿದಾರೆ!" ರಿಯರ್‌ವ್ಯೂ ಮಿರರ್‌ನಲ್ಲಿ ನೋಡುತ್ತಾ ನುಡಿದಳು. ಅವಳ ಹಣೆಯ ಮೇಲೆ ಬೆವರು ಮೂಡಿತು. ಅವನು ಹಿಂದಿರುಗಿ ನೋಡಿದ.

ನಿಜವೇ ಆ ಕಾರಿನ ವೇಗ ಕ್ರಮೇಣ ಏರುತ್ತಿತ್ತು. ಮೇಖಲೆ ಏನಾದರಾಗಲೆಂದು ಆ್ಯಕ್ಸಿಲರೇಟರ್ ಅನ್ನು ಪೂರ್ತಿಯಾಗಿ ತುಳಿದಳು. ಎರಡು ಕಡೆಗಳಿಂದ ಪ್ರಾಣಾ ಪಾಯ ಸುತ್ತುವರಿದಾಗ ಯಾವ ಅಪಾಯದ ದಿಕ್ಕಿಗೆ ಹೋದರೆ ತಪ್ಪಿಸಿ ಕೊಳ್ಳುವ ಅವಕಾಶ ಕೊಂಚವಾದರೂ ಇರುತ್ತದೋ ಆ ಅಪಾಯವನ್ನೇ ಆರಿಸಿ ಕೊಳ್ಳಬೇಕಾಗಿ ಬರುತ್ತದೆ. ಮೇಖಲೆ ಸದ್ಯಕ್ಕೆ ಅದೇ ಕೆಲಸ ಮಾಡುತ್ತಿದ್ದಳು. ಹಿಂದೆ ಬಿದ್ದ ಕಾರನ್ನು ಮತ್ತೆ ಮುಂದೆ ಬರಲು ಬಿಟ್ಟರೆ ಪ್ರಾಣಾಪಾಯ ತಪ್ಪಿ ದ್ದಲ್ಲ. ಅದಕ್ಕಿಂತಲೂ ರಿಸ್ಕ್ ತೆಗೆದುಕೊಂಡು ವೇಗವಾಗಿ ಮುಂದಕ್ಕೆ ಹೋಗು ವುದೇ ಉತ್ತಮ. ಸ್ಪೀಡೋ ಮೀಟರ್ ಗಿರ್ರನೆ ತಿರುಗಿತು ಕಾರಿನ ಟೈರ್‌ಗಳು ಕಣ್ಣಿಗೆ ಕಾಣದಷ್ಟು ವೇಗವಾಗಿ ಉರುಳತೊಡಗಿದವು. ರಸ್ತೆಯ ಎರಡೂ ಪಕ್ಕ ಕ್ಕಿದ್ದ ವಸ್ತುಗಳು ಲಿಪ್ತ ಕಾಲದಲ್ಲಿ ಹಿಂದಕ್ಕೆ ಹಾರಿ ಹೋಗುತ್ತಿದ್ದವು. ರಸ್ತೆಯ ಮೇಲೆ ಹೋಗುತ್ತಿದ್ದ ಜನ ತಮ್ಮ ಪಕ್ಕದಿಂದ ರಾಕೆಟ್‌ಗಳಂತೆ ನುಗ್ಗಿ ಹೋಗು ತ್ತಿದ್ದ ಆ ಕಾರುಗಳನ್ನು ನೋಡಿ ಬೆಚ್ಚಿಬಿದ್ದು ಪಕ್ಕಕ್ಕೆ ಹಾರುತ್ತಿದ್ದರು. ಯಾವ ಕ್ಷಣದಲ್ಲಿಯಾದರೂ ಅಪಘಾತ ಸಂಭವಿಸಬಹುದು. ದೇವ ಮತ್ತೊಂದು ಸಲ ಹಿಂದಿರುಗಿ ನೋಡಿದ. ಆ ಕಾರಿನ ಡ್ರೈವರ್‌ನೇನೂ ಕಡಿಮೆಯಿಲ್ಲ. ಕ್ಷಣ ಕ್ಷಣಕ್ಕೆ ವೇಗ ಹೆಚ್ಚಿಸುತ್ತಲೇ ಇದ್ದ. ಕ್ಷಣಗಳಲ್ಲಿ ದೇವ ಒಂದು ನಿರ್ಣಯಕ್ಕೆ ಬಂದ. ಅವನ ಕೈ ತನ್ನ ಭುಜದ ಮೇಲೆ ಬಿದ್ದುದರಿಂದ ಅವಳು ಬೆಚ್ಚಿಬಿದ್ದು, ಅತ್ತ ನೋಡಿದಳು. "ಸ್ಟೇರಿಂಗ್ ನನ್ನ ಕೈಗೆ ಕೊಡು" ಎಂದ. ಅವಳು ಆಶ್ಚರ್ಯ ದಿಂದ ನೋಡಿದಳು. "ಸ್ಟೇರಿಂಗ್ ನನ್ನ ಕೈಗೆ ಕೊಟ್ಟು, ನೀನು ಈ ಕಡೆ ಬಾ. ತಡಮಾಡ್ಬೇಡ" ಅವನ ಧ್ವನಿಯಲ್ಲಿ ಯಾವುದೋ ಅಧಿಕಾರವಿತ್ತು. ಅವಳು ಆ ಅಧಿಕಾರಕ್ಕೆ ಕಟ್ಟುಬಿದ್ದಳು. "ಎಚ್ಚರಿಕೆ!" ಸ್ಟೇರಿಂಗ್ ಅವನ ಕೈಗೆ ಕೊಡುತ್ತಾ ಹೇಳಿದಳು. ಅವನು ಸ್ಟೇರಿಂಗ್ ಒಂದು ಕೈನಿಂದ ಹಿಡಿದುಕೊಂಡು ಕಂಟ್ರೋಲ್ ಮಾಡುತ್ತಾ, ಎರಡನೇ ಕೈಯಿಂದ ಅವಳನ್ನು ಇತ್ತ ಎಳೆದ. ಆ ಮರುಕ್ಷಣ ತಾನು ಡ್ರೈವಿಂಗ್ ಸೀಟಿನಲ್ಲಿ ಕುಳಿತುಕೊಂಡ.

"ನಾನು ಹೇಳುವುದನ್ನು ಎಚ್ಚರಿಕೆಯಿಂದ ಕೇಳು...." ಸರ್ರನೆ ಕಾರನ್ನು ಬಲಗಡೆ ತಿರುಗಿಸುತ್ತಾ ಹೇಳಿದ. "ಇಲ್ಲಿಂದ ಕೊಂಚ ದೂರದಲ್ಲಿ ರಸ್ತೆಯ ಪಕ್ಕ ದಲ್ಲಿ ಒಂದು ದೊಡ್ಡ ನಾಲೆ ಇರುತ್ತದೆ. ಈ ಸಮಯದಲ್ಲಿ ಅದರಲ್ಲಿ ಅಷ್ಟಾಗಿ ನೀರಿರದೇ ಇದ್ದರೂ, ನಮಗೆ ಈಗ ಅದೇ ದಾರಿ. ಸರಿಯಾಗಿ ಆ ನಾಲೆ ಬಂದೊ ಡನೆಯೇ ಬಾಗಿಲು ತೆರೆದುಕೊಂಡು ಹಾರಿಬಿಡು. ಧೈರ್ಯಮಾಡಬಲ್ಲೆಯಾ?"

ಅವಳು ತಲೆಯಾಡಿಸಿದಳು.

"ಆದರೆ ನೀನು....?"

"ನನ್ನ ಬಗೆಗೆ ನೀನೇನೂ ದಿಗಿಲುಪಡಬೇಡ. ನಾನು ಹೇಗೋ ತಪ್ಪಿಸಿ ಕೊಳ್ತೀನಿ. ಮೊದಲು ನೀನು ಆ ನಾಲೆಯಲ್ಲಿ ಹಾರಿಬಿಡು. ಅದಕ್ಕೆ ಈಗೇನೂ ಅಡ್ಡಿ ಹೇಳ್ಬೇಡ. ನಾನು ಹೇಳಿದಂತೆ ಮಾಡು. ಅದೋ ನಾಲೆ ಬರ್ತಿದೆ. ಡೋರ್ ತೆರೆದುಕೊಂಡು ರೆಡಿಯಾಗಿರು. ರೈಟ್....ಒನ್....ಟೂ....ಕಮಾನ್ ಹಾರು....ತ್ರೀ....!"

ಅವನು ತ್ರೀ ಹೇಳಿದೊಡನೆಯೇ ಅವಳು ಉಸಿರು ಬಿಗಿ ಹಿಡಿದಳು. ಆ ಕಡೆ ನಾಲೆಗೆ ಗೋಡೆಯಂತಹುದು ಯಾವುದೂ ಇಲ್ಲದ್ದರಿಂದ ಅವಳು ಚೆಂಡಿನಂತೆ ನೀರಿನಲ್ಲಿ ಬಿದ್ದುಬಿಟ್ಟಳು. ಕಣ್ಣು ಮುಚ್ಚಿ ತೆರೆಯುವುದರೊಳಗೆ ತಣ್ಣನೆಯ ನೀರು ಅವಳನ್ನು ಸುತ್ತುವರಿಯಿತು. ಅಷ್ಟು ವೇಗದಿಂದ ಹೋಗಿ ಬಿದ್ದುದರಿಂದ ಅವಳು ಒಂದೇ ಬಾರಿಗೆ ನೀರಿನ ಕೆಳಗೆ ಹೋಗಿಬಿಟ್ಟಳು. ಆ ಸ್ಥಿತಿಯಲ್ಲಿ ಕೂಡ ಅವಳಿಗೆ ಒಂದೇ ಆಲೋಚನೆ– ದೇವ ತಪ್ಪಿಸಿಕೊಳ್ಳಬಲ್ಲನೆ?

ಮೇಖಲೆ ಸೇಫ್ ಆಗಿ ನಾಲೆಯಲ್ಲಿ ಹಾರಿದೊಡನೆಯೇ, ದೇವ ಒಂದು ಕ್ಷಣ ಹಗುರವಾಗಿ ಉಸಿರೆಳೆದುಕೊಂಡ. ಆದರೆ ಅವನು ಸಮಾಧಾನದಿಂದಿರು ವಂತಿರಲಿಲ್ಲ. ಹಿಂದಿನಿಂದ ಫಾಲೋ ಮಾಡುತ್ತಿದ್ದ ಶತ್ರುಗಳು ಮೇಖಲೆ ನಾಲೆ ಯಲ್ಲಿ ಹಾರಿದ್ದನ್ನು ದೂರದಿಂದಲಾದರೂ ನೋಡಿಯೇ ಇರುತ್ತಾರೆ. ಈಗ ಮೇಖಲೆ ಯಾವ ಸ್ಥಿತಿಯಲ್ಲಿದ್ದಾಳೆಂದು ತಿಳಿಯದು. ಕಾರು ನಿಲ್ಲಿಸಿ ಅವರು ನಾಲೆಯಲ್ಲಿ ಇಳಿದರೆ....ಆ ಆಲೋಚನೆಗಳಿಂದ ಅವನ ಹೃದಯ ಒಂದು ಕ್ಷಣ ಲಯ ತಪ್ಪಿ ಸ್ಪಂದಿಸತೊಡಗಿತು. ಅವನು ತಕ್ಷಣವೇ ಒಂದು ನಿರ್ಣಯಕ್ಕೆ ಬಂದ. ಹೌದು....ಮೇಖಲೆಯನ್ನು ರಕ್ಷಿಸಬೇಕೆಂದರೆ ಇದೊಂದೇ ಮಾರ್ಗ! ನಾಲೆ ದಾಟಿ ಹೋಗಿ ಶರವೇಗದಿಂದ ಮುಂದಕ್ಕೆ ಹೋಗುತ್ತಿದ್ದ ತನ್ನ ಕಾರನ್ನು ಸರ್ರನೆ ಪಕ್ಕಕ್ಕೆ ತಿರುಗಿಸಿ, ವಿಷ್ಣು ಚಕ್ರದಂತೆ ಸ್ಟೇರಿಂಗ್ ಅನ್ನು ಸರಸರನೆ ತಿರು ಗಿಸಿದ. ಚಕ್ರಗಳು ಕೀಚೆನ್ನುತ್ತಾ ಶಬ್ದ ಮಾಡಿದುವು. ಕಾರು ರಸ್ತೆಯ ಪಕ್ಕ ದಲ್ಲಿದ್ದ ಮೈದಾನದೊಳಕ್ಕೆ ಹೋಗಿ, ಗಂಡೆಗೆ ತಿರುಗಿ ಮತ್ತೆ ರಸ್ತೆಯ ಮೇಲೆ ಬಂದು ತಾನು ಬಂದ ದಿಕ್ಕಿಗೇ ಹಿಂದಕ್ಕೆ ತಿರುಗಿ ಮುಂದೆ ಹೋಗತೊಡಗಿತು. ಅವನು ಅನುಮಾನಿಸಿದ್ದೇ ನಿಜವಾಯ್ತು. ಶತ್ರುಗಳ ಕಾರು ನಾಲೆಯನ್ನು ಸಮೀ ಪಿಸುತ್ತಾ, ವೇಗ ಕಡಿಮೆ ಮಾಡುತ್ತಿತ್ತು. ದೇವ ಸಂದೇಹಿಸಲಿಲ್ಲ. ಆ್ಯಕ್ಸಿಲ ರೇಟರ್ ಅನ್ನು ಪೂರ್ತಿಯಾಗಿ ತುಳಿದ. ಸ್ಪೀಡೋ ಮೀಟರ್‌ನ ಮುಳ್ಳು ಗಿರ್ರೆಂದು ತಿರುಗಿ ಬಲ ಪಕ್ಕಕ್ಕೆ ಕೊನೆಗೆ ಬಂದು ನಿಂತಿತು. ಕಾರು ಪೂರ್ಣ ವೇಗ ಪಡೆದುಕೊಂಡಿದ್ದರಿಂದ ಒಂದೇ ಸಲಕ್ಕೆ ಯಮದೂತನಂತೆ ನೇರವಾಗಿ ಮುಂದಕ್ಕೆ ನುಗ್ಗಿಹೋಯ್ತು. ಕಣ್ಣು ಮುಚ್ಚಿ ತೆರೆಯುವುದರೊಳಗೆ ಕಾರು

ಮತ್ತೇ ನಾಲೆಯನ್ನು ಸಮೀಪಿಸಿತು. ಮೃತ್ಯುದೇವತೆಯಂತೆ ನುಗ್ಗಿ ಬರುತ್ತಿದ್ದ ಆ ಕಾರಿನಿಂದ ಶತ್ರುಗಳು ತಪ್ಪಿಸಿಕೊಳ್ಳಲಾಗಲಿಲ್ಲ. ಸರಿಯಾಗಿ ನಾಲೆಯ ಪಕ್ಕ ದಲ್ಲಿ ನಿಂತಿದ್ದ ಅವರ ಕಾರನ್ನು ಅವನ ಕಾರು ಶರವೇಗದಿಂದ ಬಂದು ಢಿಕ್ಕಿ ಹೊಡೆಯಿತು. ಅಷ್ಟೇ! ಆ ಪ್ರದೇಶದಲ್ಲಿ ಕಿವಿ ಕಿವುಡಾಗುವಂತೆ ಭಯಂಕರ ಆಸ್ಫೋಟ ಸಂಭವಿಸಿತು.

## ೩೭

"ಅವನೆಲ್ಲಿದ್ದಾನೆ?" ಹೃದಯ ವೇಗವಾಗಿ ಬಡಿದುಕೊಳ್ಳುತ್ತಿರುವಂತೆ ಕೇಳಿದಳು ಮೇಖಲೆ. ವಾರ್ಡ್‌ಬಾಯ್ ಬೆರಳು ಮಾಡಿ ತೋರಿಸಿದ. ಮೇಖಲೆ ಆತುರದಿಂದ ಓಡಿದಳು. ಅವನನ್ನು ಹಾಸ್ಪಿಟಲ್‌ನಲ್ಲಿ ಎಮರ್ಜೆನ್ಸಿ ವಾರ್ಡ್‌ನಲ್ಲಿ ಟ್ಟಿದ್ದರು. ಕೆಲವು ಕ್ಷಣಗಳ ಹಿಂದೆಯಷ್ಟೇ ಅವನಿಗೆ ಜ್ಞಾನ ಬಂದಿತ್ತು. ತಲೆ, ಕಾಲುಗಳ ತುಂಬಾ ಬ್ಯಾಂಡೇಜುಗಳು. ಮುಖದ ಮೇಲೆ ಸುಟ್ಟ ಗಾಯಗಳ ಮೇಲೆ ಪ್ಲಾಸ್ಟರಿಂಗ್, ಒಂದು ಕಣ್ಣು ಮಾತ್ರ ತೆರೆದಿತ್ತು. ಎರಡನೇ ಕಡೆ ಅವನಿಟ್ಟುಕೊಂಡಿದ್ದ ಗಾಜಿನ ಕಣ್ಣು ಪುಡಿಯಾಗಿತ್ತು! ಅತ್ಯಂತ ದಯನೀಯ ಸ್ಥಿತಿಯಲ್ಲಿದ್ದ ಅವನನ್ನು ನೋಡಿದೊಡನೆಯೇ ಅವಳ ಹೃದಯ ಕಂಪಿಸಿತು. ಕಣ್ಣಿಂದ ಧಾರಾಕಾರವಾಗಿ ಅವಳಿಗೆ ತಿಳಿಯದಂತೆಯೇ ಕಣ್ಣೀರು ಜಾರುತ್ತಿತ್ತು. ಅವನ ಬಳಿ ತಲುಪುತ್ತಲೇ ಬೆಡ್ ಪಕ್ಕದಲ್ಲಿ ಮೊಣಕಾಲುಗಳ ಮೇಲೆ ಒರಗಿ ಕುಳಿತಳು. ಜ್ಞಾನ ಬರುತ್ತಲೇ ಅವನು ನೋಡಬೇಕೆಂದು ಕೋರಿದ ವ್ಯಕ್ತಿ ಅವಳೊಬ್ಬಳೇ. ಅವನಿನ್ನೂ ಬದುಕಿರುವುದೇ ಆಶ್ಚರ್ಯ. ಅವಳಿಗೋಸ್ಕರ ಬದುಕಿದ್ದನೇನೋ! ಕೊನೆಯ ಬಾರಿಗೆ ಅವಳನ್ನು ನೋಡಬೇಕೆಂದು ಬದುಕಿದ್ದ ನೇನೋ! ಅವಳನ್ನು ನೋಡುತ್ತಾ ಅವನ ಒಂದೇ ಒಂದು ಕಣ್ಣು ಹೊಳೆಯಿತು

"ನನ್ನನ್ನು ರಕ್ಷಿಸಿ, ನೀನು ಬಲಿಯಾದೆಯಾ ದೇವ? ಕೊನೆಗೆ ನಿನ್ನ ಪ್ರಾಣ ವನ್ನು ಮತ್ತೊಬ್ಬರಿಗೋಸ್ಕರ ದಾನ ಮಾಡಿದೆಯಲ್ಲ! ಕೊನೆಗೆ ಅಗತ್ಯವಾದರೆ ನಿನ್ನ ಪ್ರಾಣವನ್ನೂ ಯಾರಿಗಾದರೂ ಕೊಡುತ್ತೇನೆಂದು ಆ ದಿನ ಹೇಳಿದ ಮಾತು ಉಳಿಸಿಕೊಂಡೆಯಲ್ಲ!"

ಅವನ ತುಟಿಗಳು ವಿಕೃತವಾಗಿ ಚಲಿಸಿದುವು. "ನಿನಗೆ....ನಿನಗೆ...." ಅತಿ ಕಷ್ಟದಿಂದ ಅವನ್ಯಧ್ವನಿ ಹೊರಬಂತು.

"ನನಗೇನೂ ಆಗಿಲ್ಲ ದೇವ! ಇಲ್ಲಿ ನೋಡು, ನನಗೇನೂ ಆಗಿಲ್ಲ! ನಿನ್ನ ತ್ಯಾಗ ವ್ಯರ್ಥವಾಗಲಿಲ್ಲ. ನಿನ್ನ ಪ್ರಾಣ ಪಡೆದುಕೊಂಡು ಹಾಯಾಗಿ ಬದುಕಿ ದ್ದೀನಿ" ಅವಳು ರೋದಿಸಿದಳು.

"ನೀ....ನು ನ....ನ....ಗೋ....ಸ್ಕ....ರ ಚಿಂತೆ ಮಾಡ್ಬೇಡ ಬಾಸ್!.... ನಾನು ಹೇಗೂ ಸಾಯುತ್ತಿದ್ದವನು" ದೇವ ಅತಿ ಕಷ್ಟದಿಂದ ಒಂದೊಂದೇ ಅಕ್ಷರ ನುಡಿದ.

"ಇಲ್ಲ ದೇವ, ನಿನಗೇನೂ ಆಗೋದಿಲ್ಲ. ನೀನು ಸಾಯೋದಿಲ್ಲ. ನೀನು ಬದುಕ್ತೀಯ, ನನಗೋಸ್ಕರ ಬದುಕ್ತೀಯ. ದೇವರು ಮಾಡಿದ ತಪ್ಪುಗಳನ್ನು ಸರಿಪಡಿಸಲು ತುಂಬಾ ಕಾಲ ಬದುಕುತ್ತೀ."

"ಇ....ಲ್ಲ.... ಬಾ....ಸ್! ದೇವರು ಮಾಡಿದ ತಪ್ಪುಗಳನ್ನು ಸರಿಪಡಿಸಲಾರೆ. ಇದೇ ಕೊನೆಯ ಸ....ಲ!"

"ಬೇಡ ದೇವ ಹಾಗೆ ಮಾತಾಡ್ಬೇಡ!"

"ನಿನ್ನೆದುರಿಗೆ ಪ್ರಾಣ ಬಿಡಬೇಕೆಂದು ಬಯಸಿದ್ದೆ. ಇದೇ ಸಾಕು. ನನ್ನ ಕೊನೆಯ ಆಸೆ ಈಡೇರಿಸ್ತೀಯಾ ಬಾಸ್?"

"ಆ ಯುವತಿಗೆ ನಿನ್ನ ಬಗೆಗೆ ತಿಳಿಸೋದು ತಾನೆ? ಸರಿ....ಖಂಡಿತಾ ತಿಳಿಸ್ತೀನಿ."

"ಅಡ್ರೆಸ್ ದೇವನ ಡೈರಿಯಲ್ಲಿರುತ್ತದೆ."

"ಸರಿ ದೇವ! ನಿನ್ನ ಬಯಕೆಯನ್ನು ಖಂಡಿತಾ ಪೂರೈಸ್ತೀನಿ."

ಅವನು ಅತೀವ ಪ್ರಯತ್ನದಿಂದ ಧ್ವನಿಯನ್ನು ಸ್ವಲ್ಪ ಏರಿಸಿದ. ಈಗ ಮಾತುಗಳು ಮತ್ತಷ್ಟು ಸ್ಪಷ್ಟವಾಗಿ ಕೇಳಿಸುತ್ತಿದ್ದವು. "ದೇವನ ಡೈರಿ ನಿನ್ನ ಹತ್ತಿರವೇ ಇಟ್ಕೋ ಬಾಸ್. ನನ್ನ ಜ್ಞಾಪಿಸ್ಕೊಳ್ತಿರ್ತೀಯಲ್ಲ?"

"ಜ್ಞಾಪಿಸಿಕೊಳ್ತೀನಿ ದೇವ! ನನ್ನ ಕೊನೇ ಉಸಿರಿರೋವರೆಗೂ ನಿನ್ನನ್ನು ಜ್ಞಾಪಿಸಿಕೊಳ್ಳುತ್ತಲೇ ಇರ್ತೀನಿ."

"ಇನ್ನೊಂದು ಕೋರಿಕೆ ಈಡೇರಿಸ್ತೀಯಾ ಬಾಸ್?"

"ಹೇಳು ದೇವ! ನನ್ನ ಪ್ರಾಣ ಕೊಡೂಂತ ಕೇಳಿದ್ರೂ ಕೊಡ್ತೀನಿ."

"ಒಂದು ಸಲ....ಒಂದು ಸಲ....ಒಂದು ಚಿಕ್ಕ....ಒಂದು ಚಿಕ್ಕ ಮುತ್ತು ಕೊಡ್ತೀಯಾ?" ಅಷ್ಟೇ! ಅವಳ ಸುತ್ತಲೂ ಇರುವ ಪ್ರಪಂಚ ಆ ಒಂದು ಮಾತಿನಿಂದ ಒಂದೇ ಬಾರಿಗೆ ಕುಪ್ಪೆಯಂತೆ ಕುಸಿಯುತ್ತಿರುವಂತೆ ಭಾಸವಾಯ್ತು. ಒಂದು ಚಿಕ್ಕ ಮುತ್ತು! ಒಂದೇ ಒಂದು ಚಿಕ್ಕ ಮುತ್ತು?! ಎಷ್ಟು ಅಲ್ಪ ಕೋರಿಕೆ! ಎಷ್ಟು ಅಮಾಯಕವಾಗಿ....ಎಷ್ಟು ಪವಿತ್ರವಾಗಿ ಕೇಳುತ್ತಿದ್ದಾನೆ! ಒಂದು ಮುತ್ತು! ಎಷ್ಟೋ ಜನ ಧೂರ್ತರು....ಇನ್ನೆಷ್ಟೋ ಜನ ಕಾಮಪಿಶಾಚಿಗಳು....ಅಂತಹ ಎಷ್ಟೋ ಜನ ಗಂಡಸರಿಗೆ ತಾನು ಮುತ್ತಿಟ್ಟಿದ್ದಾಳೆ! ಎಷ್ಟು ಜನ ಆಸೆಯಿಂದ, ಆತುರದಿಂದ ಅಸಹ್ಯದಿಂದ ತನ್ನ ತುಟಿ ಹೀರಿದ್ದಾರೆ. ಆ

ಮುದ್ದಾಡುವುದರ ಹಿಂದೆ ಎಷ್ಟು ಅಪವಿತ್ರತೆ, ಎಷ್ಟು ಅಶ್ಲೀಲತೆ! ಒಂದು ಚಿಕ್ಕ ಮುತ್ತು! ಒಂದೇ ಒಂದು ಚಿಕ್ಕ ಮುತ್ತು ಕೇಳುತ್ತಿದ್ದಾನೆ. ಅವಳ ಕಣ್ಣುಗಳ ಮುಂದೆ ಎಷ್ಟೋ ದೃಶ್ಯಗಳು ಒಂದೇ ಬಾರಿಗೆ ಸುಳಿದಾಡತೊಡಗಿದವು.

ಅವನ ಮುಂದೆ ತಾನೆಷ್ಟು ಬಾರಿ ನಗ್ನಳಾಗಿ ನಿಂತಿದ್ದಳು! ಎಷ್ಟು ಸಲ ಅವನನ್ನು ಪರೀಕ್ಷಿಸಬೇಕೆಂದು ಪ್ರಯತ್ನಿಸಿದ್ದಳು! ಒಂದು ಸಲ ಕನಿಷ್ಟ ಒಂದು ಸಲವಾದರೂ ತನ್ನ ಕಡೆ ಅಪವಿತ್ರವಾಗಿ.... ಅಶ್ಲೀಲವಾಗಿ.... ಆಕಾಂಕ್ಷೆಯಿಂದ ನೋಡಿದ್ದನೆ? ತನ್ನನ್ನು ಈಗ ಕೇವಲ ಒಂದು ಮುತ್ತು ಕೇಳುತ್ತಿದ್ದಾನೆ! ಎಷ್ಟೋ ಜನರ ಮಲಗುವ ಕೋಣೆಗಳನ್ನು ಪಾವನಗೊಳಿಸಿ.... ಎಷ್ಟೋ ಜನರ ಹಾಸಿಗೆಗಳನ್ನು ಬಿಸಿಯೇರಿಸಿ.... ಎಷ್ಟೋ ಜನರಿಗೆ ಮುತ್ತು ಕೊಟ್ಟು.... ಎಷ್ಟೋ ಜನರ ಅಪ್ಪುಗೆಯಲ್ಲಿ ನಲುಗಿಹೋದ ತನಗೆ ಒಂದು ಸಲವೂ ಈ ಮಾನವತಾ ಮೂರ್ತಿಗೆ ಮುತ್ತು ಕೊಡಬೇಕೆಂದು ಅನಿಸಲಿಲ್ಲವೇಕೆ? ಒಂದು ಸಲವೂ ಅವನನ್ನು ತನ್ನ ಅಪ್ಪುಗೆಯಲ್ಲಿ ಬಂಧಿಸಬೇಕೆಂದು ಅನಿಸಲಿಲ್ಲವೇಕೆ? ಧೂಳು ಹಿಡಿದ ಅವನ ಶರೀರವನ್ನು ನೋಡಿ ತನ್ನ ಮನಸ್ಸು ಅಸಹ್ಯಪಟ್ಟುಕೊಂಡಿತೆ? ಇನ್ನೊಬ್ಬರಿಗೋಸ್ಕರ ತನ್ನ ಪ್ರಾಣವನ್ನೂ ಮುಗುಳ್ನಗೆಯಿಂದ ಅರ್ಪಿಸಬಲ್ಲ ಈ ಮಹಾ ವ್ಯಕ್ತಿಗಿಂತಲೂ ತನ್ನ ಮುತ್ತಿಗೆ ಅರ್ಹರಾದವರು ಯಾರು? ಅವಳ ಹೃದಯ ಬಿರಿಯುತ್ತಿರುವಂತಿತ್ತು. "ಕೊಡ್ತೀನಿ ದೇವ, ತಪ್ಪದೇ ಕೊಡ್ತೀನಿ! ನಿನಗಿಂತಲೂ ಉತ್ತಮ ವ್ಯಕ್ತಿ ನನಗೆಲ್ಲಿ ಸಿಗುತ್ತಾನೆ? ನಿನಗೆ ಮುತ್ತು ಕೊಡುವುದು ಈ ತುಟಿಗಳ ಭಾಗ್ಯ! ತಗೋ...."

ಅವಳು ತಲೆ ಮುಂದೆ ಬಾಗಿಸಿ ಅವನ ತುಟಿಗಳನ್ನು ತನ್ನ ತುಟಿಗಳಿಂದ ಮೃದುವಾಗಿ ಸ್ಪರ್ಶಿಸಿದಳು. ಈ ಮುತ್ತಿನಲ್ಲಿ ಎಷ್ಟು ಆನಂದವಿದೆ! ಅದೆಷ್ಟು ಪ್ರಶಾಂತ! ಅವನ ತುಟಿಗಳಿಗೆ ಮುತ್ತು ಕೊಟ್ಟು ಸ್ವಲ್ಪಹೊತ್ತು ಹಾಗೆಯೇ ಇದ್ದು, ನಿಧಾನವಾಗಿ ಹಿಂದಕ್ಕೆ ಒರಗಿದಳು." ಥ್ಯಾಂಕ್ಯೂ ಬಾಸ್! ಥ್ಯಾಂಕ್ಯೂ ವೆರಿ ಮಚ್!" ಅವನು ತೃಪ್ತಿಯಿಂದ ನುಡಿದ. "ಒಂದು ಮಾತು ಹೇಳ್ಲಾ ಬಾಸ್?"

"ಹೇಳು, ಒಂದಲ್ಲ....ಸಾವಿರ ಹೇಳು....ಲಕ್ಷ ಹೇಳು....! ನಿನ್ನ ಮಾತು ಕೇಳುತ್ತಾ ಹೀಗೆಯೇ ಇದ್ದುಬಿಡ್ತೀನಿ."

"ನಾನು....ನಿನ್ನನ್ನ....ಪ್ರೇಮಿಸ್ತಿದೀನಂದ್ರೆ ನೀನೇನೂ ಅಂದ್ಕೊಳ್ಳೋದಿಲ್ವಲ್ಲ?"

"ಅಂದ್ಕೊಳ್ಳೋದಿಲ್ಲ, ಏನೂ ಅಂದ್ಕೊಳ್ಳೋದಿಲ್ಲ! ಪ್ರೇಮ....ಇಲ್ಲಿಯವರೆಗೆ ಅದೊಂದೇ ಸಿಗದೆ ಪರಿತಪಿಸಿದೆ. ನಿನ್ನ ಪ್ರೇಮ ಪಡೆದಿದ್ದೇ ನನ್ನ ಅದೃಷ್ಟ."

"ಇಬ್ಬರು ಯುವತಿಯರನ್ನು ಪ್ರೀತಿಸುವುದು ನಿನಗೆ ವಿಚಿತ್ರವೆನಿಸು ತ್ತಿಲ್ಲವೆ ಬಾಸ್?"

"ಇಲ್ಲ, ಅನಿಸುತ್ತಿಲ್ಲ. ಪ್ರೇಮ ವಿಶ್ವಜನೀನವಾದುದು. ಅದನ್ನು ಎಷ್ಟು ಜನರಿಗಾದರೂ ಹಂಚಬಹುದು. ಅಮಲಿನವಾಗಿರುವವರೆಗೂ ಪ್ರೇಮಕ್ಕಿಂತಲೂ ಅಪೂರ್ವವಾದುದು ಪ್ರಪಂಚದಲ್ಲಿ ಮತ್ತೊಂದಿಲ್ಲ!"

"ಮೊದಲಲ್ಲಿ ಆ ಯುವತಿಯನ್ನು ಪ್ರೇಮಿಸಿದಾಗ ನನ್ನ ಪ್ರೇಮ ಸಂಕು ಚಿತವಾಗಿತ್ತು. ಹೊರ ಪ್ರಪಂಚಕ್ಕೆ ಬಂದ ಮೇಲೆ ನಿಜವಾದ ಪ್ರೇಮವೆಂದರೆ ಏನು, ಅದೆಷ್ಟು ಮಧುರವಾಗಿರುತ್ತದೆ ಎಂಬುದನ್ನು ತಿಳಿದುಕೊಂಡೆ. ಮನುಷ್ಯ ನನ್ನು ಮನುಷ್ಯನಂತೆ ಪ್ರೀತಿಸುವುದಕ್ಕಿಂತಲೂ ಮಿಗಿಲಾದ ಪ್ರೇಮವಿಲ್ಲ. ಈ ಸತ್ಯ ಅರಿತ ನಂತರ ನನ್ನ ಹೃದಯ ವಿಶಾಲವಾದಂತೆನಿಸಿತು. ನಿನ್ನ ಮುತ್ತು ಕೇಳಿದ್ದರಲ್ಲಿ ಎಂತಹ ದುರುದ್ದೇಶವೂ ಇಲ್ಲ ಬಾಸ್! ಪ್ರಪಂಚದಲ್ಲಿ ನಿಜವಾದ ಮನುಷ್ಯರು ತುಂಬಾ ಕಡಿಮೆ ಇದ್ದಾರೆ. ಅವರೆಲ್ಲರಲ್ಲೂ ನೀನು ವಿಶಿಷ್ಟವಾದ ವ್ಯಕ್ತಿ. ಒಬ್ಬ ಮಗುವನ್ನು ಮುತ್ತಿಡುವುದರಲ್ಲಿರುವಂತಹ ಆನಂದ ನಿನ್ನ ಮುತ್ತಿನಲ್ಲಿ ನನಗೆ ಸಿಕ್ಕಿತು. ಸಾಕು ಬಾಸ್! ಈ ಜನ್ಮಕ್ಕಿಷ್ಟು ಸಾಕು!"

"ಮುತ್ತಿಗೇ ಪ್ರಾಣ ತುಂಬಬಲ್ಲ ಶಕ್ತಿ ಇದ್ದರೆ ನೀನು ಬದುಕಬೇಕು ದೇವ! ನೀನು ಬದುಕುತ್ತೀ" ಅವಳು ಮತ್ತೊಂದು ಸಲ ಅವನ ತುಟಿಗೆ ಮುತ್ತಿ ಟ್ಟಳು. ಮುತ್ತಿಡುತ್ತಾ ಹಾಗೆಯೇ ಉಳಿದಳು. ಹಾಗೆ ಎಷ್ಟು ಹೊತ್ತು ಇದ್ದಳೋ ಅವಳಿಗೇ ತಿಳಿಯದು. ಅವನ ಪ್ರಾಣ ಹೋಗಿತ್ತು. ಬಹುಶಃ ಆ ಮುತ್ತಿನ ಮಾಧುರ್ಯವೇ ಅವನ ಪ್ರಾಣ ಹೀರಿತ್ತೇನೋ!

## ೩೮

**ತೆ**ಲೆ ಸಿಡಿಯುತ್ತಿತ್ತು. ನಿದ್ದೆ ಹತ್ತಿರ ಕೂಡ ಸುಳಿಯಲು ನಿರಾಕರಿಸು ತ್ತಿತ್ತು. ದಿನಕ್ಕೆ ಲಕ್ಷ ರಾತ್ರಿಗಳಷ್ಟು ದೀರ್ಘವೆನ್ನಿಸುವಂತಹ ಬದುಕು. ಅವಳು ತನ್ನ ಅಪಾರ್ಟ್‌ಮೆಂಟ್‌ನಲ್ಲಿ ಒಂಟಿಯಾಗಿ ಮಲಗಿಕೊಂಡು ದೇವನ ಡೈರಿ ತಿರುವಿ ಹಾಕುತ್ತಿದ್ದಳು. ದೇವನ ಅಂತ್ಯಕ್ರಿಯೆ ಮುಗಿದುಹೋಗಿತ್ತು. ದೇವನ ಅಂತ್ಯಕ್ರಿಯೆ! ಅದು ನಿಜವಾಗಿಯೂ ದೇವರ ಅಂತ್ಯಕ್ರಿಯೆ! ದೇವರಿನ್ನು ನವನು ನಿಜವಾಗಿಯೂ ಇದ್ದಿದ್ದರೆ ಎಲ್ಲದರಲ್ಲೂ, ಎಲ್ಲ ಕಡೆಯೂ ಇದ್ದರೆ; ಅಲ್ಲ....ಇದ್ದಿದ್ದರೆ, ಇವತ್ತಿಗೆ ದೇವರ ಹೆಸರು ಭೂಮಿಯ ಮೇಲೆ ಅಳಿಸಿ ಹೋಯ್ತು. ದೇವನೊಂದಿಗೆ ದೇವರೂ ಭೂಮಿಯ ಮೇಲೆ ನಿಷ್ಕ್ರಮಿಸಿದ. ಇನ್ನು ಈ ಭೂಮಿಯ ಮೇಲೆ ಉಳಿದದ್ದು ಅಮಾನುಷತೆ! ಒಳ್ಳೆಯತನಕ್ಕಿಲ್ಲಿ

ಸ್ಥಳವಿಲ್ಲ, ಮಾನವತೆಗಿಲ್ಲಿ ಜಾಗವಿಲ್ಲ. ಎಲ್ಲವೂ ದೇವನೊಂದಿಗೇ ಹೋದುವು. ದೇವ ಹೋಗುವುದರೊಂದಿಗೆ ತನ್ನ ಜೀವನದಲ್ಲಿ ಒಂದು ಭಾಗ ತುಂಡಾಗಿ ಎಲ್ಲೋ ಹೋಗಿ ಬಿದ್ದುಬಿಟ್ಟಿತು. ದೇವನ ಸಾವಿನ ಸುದ್ದಿ ಅವನು ಅಪೇಕ್ಷಿಸಿದಂತೆ ಅವನ ಪ್ರೇಮವನ್ನು ಪಡೆದಿದ್ದ ಆ ಅದೃಷ್ಟವಂತೆಗೆ– ಅವನಂತಹ ವ್ಯಕ್ತಿಯನ್ನು ಕಳೆದುಕೊಂಡ ಆ ದುರದೃಷ್ಟವಂತೆಗೆ ತಿಳಿಸಿದಳು. ಅವಳು ಬರಲಿಲ್ಲ. ಬರುತ್ತಾಳೆಂದುಕೊಂಡಿರಲೂ ಇಲ್ಲ. ಕನಿಷ್ಟ ಅವನ ತಂದೆಯಾದರೂ ಬರುತ್ತಾನೆಂದುಕೊಂಡಿದ್ದಳು. ಆತನೂ ಬರಲಿಲ್ಲ. ದೇವನ ಅಂತ್ಯಕ್ರಿಯೆಗಳು ನಡೆದು ಹೋದವು. ಆ್ಯಕ್ಸಿಡೆಂಟ್ ಬಗೆಗೆ ಪೋಲೀಸ್ ವಿಚಾರಣೆ ನಡೆಯಿತು. ಸಿ.ಬಿ.ಐ. ಆಫೀಸರ್‌ಗಳು ಕೆಲವು ಜನ ಅವಳನ್ನು ಭೇಟಿಯಾಗಿ, ಮುನೀಂದ್ರಸ್ವಾಮಿಯ ಮರಣದ ಬಗೆಗೆ ವಿಚಾರಣೆ ನಡೆಸಿದರು. ದೇವ ಹೋದ ನೋವಿನಲ್ಲಿ ಅವಳು ಏನೇನು ಉತ್ತರಿಸಿದಳೆಂದು ಅವಳಿಗೇ ತಿಳಿಯದು. ಸಿ.ಬಿ.ಐ. ಆಫೀಸರ್‌ಗಳು ತೃಪ್ತಿಪಟ್ಟು ಹೊರಟುಹೋದರು. ಆ ಸೀಕ್ರೆಟ್ ಫೈಲ್‌ನ ವಿಷಯ ತಾನೇ ಗವರ್ನರ್‌ಗೆ ಫೋನ್ ಮಾಡಿ ಹೇಳಿದ್ದರಿಂದ, ಸರ್ಕಾರಕ್ಕೆ ಅವಳ ಮೇಲಿದ್ದ ಅನುಮಾನಗಳೆಲ್ಲವೂ ತೊಲಗಿಹೋದವು.

ಫ್ರಾನ್ಸ್‌ನಲ್ಲಿ ಜೇಕೇ ಅರೆಸ್ಟ್ ಆದನೆಂಬ ವಾರ್ತೆ ಎಲ್ಲಾ ಪತ್ರಿಕೆಗಳಲ್ಲೂ ಬಂತು. ಅವಳು ಕೊಟ್ಟ ಇಂಟರ್‌ವ್ಯೂ ಊಹಿಸಿದಂತೆಯೇ ದೇಶದಲ್ಲಿ ಜಾಗೃತಿಯನ್ನುಂಟು ಮಾಡಿತು. ಅವಳಿಗೆ ಯಾವುದರ ಮೇಲೂ ಆಸಕ್ತಿಯಿರಲಿಲ್ಲ. ಎಲ್ಲ ಸಮಾಚಾರವನ್ನೂ ನಿರ್ಲಿಪ್ತನಾಗಿ ತಿಳಿದುಕೊಂಡು ಸುಮ್ಮನಿದ್ದಳು. ಜೇಕೇ ಅರೆಸ್ಟ್ ಆದ, ಮುನೀಂದ್ರಸ್ವಾಮಿ ಸತ್ತ, ತಾರಕನಾಮ ಅದೃಶ್ಯನಾದ, ದೇವ ಲೋಕದಿಂದಲೇ ಹೊರಟುಹೋದ. ಅವಳಿಗಿರುವ ಸಂಬಂಧಗಳೆಲ್ಲವೂ ಒಂದೇ ಸಲಕ್ಕೆ ಕಡಿದುಬಿದ್ದಂತೆನಿಸಿತು. ದಯಾಕರರಾವ್‌ನ ಮೇಲೆ ಸೇಡು ತೀರಿಸಿಕೊಂಡಳು. ತಾರಕನಾಮನ ಮೇಲೆ ಸೇಡು ತೀರಿಸಿಕೊಂಡಳು, ಆದರೂ ಅವಳಿಗೆ ಸಂತೋಷವಾಗಿರಲಿಲ್ಲ. ಸೇಡು, ಪ್ರತೀಕಾರಗಳು ಮನುಷ್ಯರಿಗೆ ಸಂತೋಷ ಕೊಡುವುದಿಲ್ಲ.

ಮನುಷ್ಯನಿಗೆ ಸಂತೋಷ ಕೊಡುವುದು ಯಾವುದು ಎನ್ನುವದನ್ನು ದೇವ ತನಗೆ ಕಲಿಸಿದ್ದ. ವೈಯಕ್ತಿಕವಾದ ಸೇಡು ತೀರಿದ್ದರಿಂದ ಜೀವನ ಒಂದು ತಿರುವಿನ ಹತ್ತಿರ ಬಂದು ನಿಂತಂತಾಗಿತ್ತು. ಮತ್ತೆ ಜೀವನವನ್ನು ಹೊಸದಾಗಿ ಪ್ರಾರಂಭಿಸಬೇಕು. ಆದರೆ ಹೊಸದಾಗಿ ಪ್ರಾರಂಭಿಸಲು ಜೀವನದಲ್ಲಿ ಏನಿದೆ? ದೇವನಿಲ್ಲದ ಜೀವನ! ನಿಸ್ಸಾರವಾದ, ನಿಸ್ತೇಜವಾದ ಜೀವನ! ಹೇಗೆ ಪ್ರಾರಂಭಿಸುತ್ತಾಳೆ? ಏನು ಸಾಧಿಸಬೇಕೆಂದು ಪ್ರಾರಂಭಿಸುತ್ತಾಳೆ? ತಾನು ಸೃಷ್ಟಿಸಿಕೊಂಡ ಮೌಲ್ಯ

ಗಳೆಲ್ಲವೂ ದೇವನ ಮರಣದಿಂದ ಪೂರ್ತಿಯಾಗಿ ಮುಚ್ಚಿಹೋದುವು. ಜೀವನದಲ್ಲಿ ಹಳೆಯ ಮೌಲ್ಯಗಳು ಹೋದುವು. ಹೊಸ ಮೌಲ್ಯಗಳು ಏರ್ಪಡಲಿಲ್ಲ. ಜೀವನ ಒಂದು ಯುಗ ಸಂಧಿಯಲ್ಲಿ ನಿಂತಿತ್ತು. ಆಲೋಚಿಸುತ್ತಲೇ ಅವಳು ದೇವನ ಡೈರಿಯಲ್ಲಿ ಒಂದೊಂದೇ ಪುಟ ತಿರುಗಿಸುತ್ತಿದ್ದಳು. ದೇವರ ತಪ್ಪುಗಳನ್ನು ಬರೆಯುವುದಷ್ಟೇ ಅಲ್ಲದೆ, ದೇವ ಆ ಪುಸ್ತಕದ ತುಂಬಾ ಬಹಳಷ್ಟು ಕವಿತೆ ಗಳನ್ನೂ ಬರೆದಿದ್ದ. ಜೀವನವನ್ನು ಪ್ರತಿಬಿಂಬಿಸುವ ಕವಿತೆಗಳು. ಆ ಕವಿತೆ ಗಳನ್ನು ನೋಡುತ್ತಿದ್ದರೆ ದೇವನನ್ನು ತಿರುಗಿ ಕಂಡುಕೊಂಡಂತಿತ್ತು. ದೇವ ಇಷ್ಟು ಒಳ್ಳೆಯ ಕವಿತೆಗಳನ್ನು ಬರೆಯುತ್ತಿದ್ದನೆಂದು ಅವಳಿಗೆ ಗೊತ್ತೇ ಇರಲಿಲ್ಲ. ಒಂದು ಕಡೆ ಬರೆದಿದ್ದ:

"ಆಗ....
ಸ್ವಪ್ನ ಸಿಂಹಾಸನ ಶಿಖರಗಳ ಮೇಲೆ
ಮಾತೃ ಗರ್ಭವೆನ್ನುವ ಸಾಮ್ರಾಜ್ಯದಲ್ಲಿ
ಒಬ್ಬನೇ ಒಬ್ಬ ಸಾಮ್ರಾಟ ನಾನು.
ಈಗ....
ತಾಯಿ ಕರುಳು ಹರಿದುಕೊಂಡ ಮೊದಲ ದಿನವೇ
ಮಣ್ಣುವಾಸನೆ!
ಮೊದಲ ದಿನವೇ ಎಲ್ಲಾ ನೆತ್ತರು ಮಣ್ಣುವಾಸನೆ!"

ಮತ್ತೊಂದು ಕಡೆ ಬರೆದಿದ್ದ:

"ನೀನಿನ್ನೂ ಜ್ಞಾಪಕವಿರುವೆಯೆಂಬ ವಿಷಯ
ನನಗೆ ತುಂಬಾ ತುಂಬಾ ಜ್ಞಾಪಕ ಇದೆ.
ಹೃದಯದ ಅಂಗಳದಲ್ಲಿ ರಂಗೋಲಿಯಿಟ್ಟು
ಹೊರಟು ಹೋದೆಯಲ್ಲ!
ಒಳಹೋಗಬೇಕೆಂದರೆ ನನಗೇಕೆ ಹಿಂಜರಿಕೆ?
ಕೋಣೆಯೊಳಗೆ ನಮ್ಮಿಬ್ಬರಿಗೂ
ಸ್ಪರ್ಶಭಂಗವಾಗುತ್ತದೆಂದು
ಹೊರಗೇ ಉಳಿದುಬಿಡುತ್ತೇನೆ."

ಆ ಕವಿತೆ ಓದುತ್ತಿದ್ದರೆ ಅವಳ ಹೃದಯ ಭಾರವಾಯ್ತು. ಬಹುಶಃ ತನ್ನ ಮೊದಲ ದಿನಗಳ ಆ ಪ್ರೇಯಸಿಯನ್ನು ನೆನೆಸಿಕೊಳ್ಳುತ್ತಾ ಬರೆದನೇನೋ! ಈಗ ತಾನಿರುವ ಸ್ಥಿತಿಗೆ ಈ ಕವಿತೆ ಎಷ್ಟು ಚೆನ್ನಾಗಿ ಸರಿ ಹೊಂದುತ್ತದೆ! ಅವಳ ಕಣ್ಣುಗಳಿಂದ ನಿಶ್ಶಬ್ದವಾಗಿ ಅಶ್ರುಧಾರೆ ಹರಿಯುತ್ತಿತ್ತು. ಅಕಸ್ಮಾತ್ತಾಗಿ

ಅವಳ ಕಿವಿಗಳಿಗೆ ಯಾವುದೋ ವರ್ಣನಾತೀತವಾದ ಶಬ್ದ ಕೇಳಿಸಿದಂತಾಯ್ತು. ಬೆಚ್ಚಿಬಿದ್ದು ಎದ್ದು ಕುಳಿತು ಕಣ್ಣೊರೆಸಿಕೊಂಡಳು. "ಯಾರು?" ಮತ್ತೆ ಅದೇ ಶಬ್ದ. "ಯಾರು?" ಮತ್ತೊಂದು ಸಲ ಕೂಗು ಹಾಕಿದಳು. ಇದ್ದಕ್ಕಿದ್ದಂತೆ ಮೆಲ್ಲಗೆ ನಗು ಕೇಳಿಸಿತು. ಆ ನಗು ಕೇಳುತ್ತಲೇ ಅವಳ ಹೃದಯ ಕಂಪಿಸಿತು. "ಯಾರದು? ಮುಂದೆ ಬರ್ತಿಲ್ವಲ್ಲ!" ಮತ್ತೆ ನಗು ಕೇಳಿಸಿತು. "ಮರೆಯಲ್ಲಿ ನಿಂತು ನಗೋದ್ಯಾಕೆ? ಯಾರದು ಮುಂದೆ ಬನ್ನಿ." ಎದುರಿಗೆ ಕಿಟಕಿ ಪರದೆಗಳಲ್ಲಿ ಮರೆಯಾಗಿದ್ದ ನೆರಳೊಂದು ನಿಧಾನವಾಗಿ ಬೆಳಕಿನಲ್ಲಿ ಬಂದಿತು. ಆ ಆಕಾರವನ್ನು ನೋಡುತ್ತಲೇ ಆಶ್ಚರ್ಯದಿಂದ ಕಣ್ಣರಳಿಸಿದಳು. "ನೀನಾ?" ಅವಳ ಬಾಯಿಂದ ಅಪ್ರಯತ್ನವಾಗಿ ಮಾತು ಹೊರಬಿತ್ತು.

ತಾರಕನಾಮ ವಿಕೃತವಾಗಿ ನಗುತ್ತಾ ಹೊರಬಂದ. "ಹೌದು, ನಾನೇ! ಆಶ್ಚರ್ಯವಾಗಿದೆಯಾ?"

ಅವಳು ಅವನ ಕಡೆ ಅಸಹ್ಯದಿಂದ ನೋಡಿದಳು. "ಇಲ್ಲಿಗ್ಯಾಕೆ ಬಂದೆ?"

"ಹಳೇ ಲೆಕ್ಕ ಚುಕ್ತಾ ಮಾಡದೆ ಹೋಗೋದು ನನಗೆ ರೂಢಿಯಿಲ್ಲ."

"ಅಂದ್ರೆ?"

"ನನ್ನ ಪತನಕ್ಕೆ ನೀನೇ ಕಾರಣ! ನಿನ್ನ ಕಥೆ ಮುಗಿಸಲೆಂದೇ ಬಂದಿದೀನಿ. ಒಂದ್ಸಲ ತಪ್ಪಿಸಿಕೊಂಡೆ. ಈ ಸಲ ತಪ್ಪಿಸಿಕೊಳ್ಳಲಾರೆ." ಅವನ ಕೈಯಲ್ಲಿನ ರಿವಾಲ್ವರ್ ಮಿಂಚಿತು.

"ನನ್ನನ್ನು ಕೊಂದು, ನೀನು ತಪ್ಪಿಸಿಕೊಳ್ತೀಯಾ? ಇದು ತುಂಬಾ ಜನ ಇರೋ ಬಿಲ್ಡಿಂಗ್!" ಎಂದಳು.

"ಆ ಚಿಂತೆ ನಿನಗೆ ಬೇಡ. ಒಳಗೆ ಹೇಗೆ ಬಂದೆನೊ, ಹೊರಗೂ ಹಾಗೆಯೇ ಹೋಗಬಲ್ಲೆ. ಒಟ್ಟಿನಲ್ಲಿ ನೋಗುಗಾತಿಯೆನಿಸಿಕೊಂಡೆ! ಬಣ್ಣದ ಚಿಟ್ಟೆಯೆಂದು ನಿನಗಿರುವ ಹೆಸರು ಸಾರ್ಥಕಪಡಿಸಿಕೊಂಡೆ! ನಾನು ನಿನಗೆ ಆ ಸೀಕ್ರೆಟ್ ಫೈಲ್ ಕೊಡಲಿಲ್ವಾ? ಮುನೀಂದ್ರಸ್ವಾಮಿಗೆ ಕೊಟ್ಟೆನಾ? ವಹವ್ವಾ! ಒಂದು ಟೆಲಿಫೋನ್ ಕಾಲ್‌ನಿಂದ ನಿನ್ನ ಮೇಲಿನ ಅನುಮಾನಗಳೆಲ್ಲವನ್ನೂ ತೊಲಗಿಸಿಕೊಂಡು ತುಂಬಾ ಬುದ್ಧಿವಂತಿಕೆಯಿಂದ ಅಪರಾಧವನ್ನು ಪೂರ್ತಿಯಾಗಿ ನನ್ನ ಮೇಲೆ ಹೊರಿಸಿ ತಪ್ಪಿಸಿಕೊಂಡೆ. ಮುನೀಂದ್ರಸ್ವಾಮಿಯನ್ನು ಚಾಣಾಕ್ಷತನದಿಂದ ನಾಶಮಾಡಿದೆ. ನಿನ್ನನ್ನು ಏಳು ವರ್ಷಗಳ ಹಿಂದೆ ಯಾವಾಗ ನೋಡಿದ್ದೆನೆಂದು ನನಗೆ ಆ ದಿನ ಹೌಸ್‌ಬೋಟ್‌ನಲ್ಲಿ ಎಷ್ಟು ತಲೆ ಹೊಡೆದುಕೊಂಡರೂ ನೆನಪಿಗೆ ಬರಲಿಲ್ಲ. ಬಂದಿದ್ದರೆ ಕಥೆ ಇಲ್ಲಿಯವರೆಗೆ ಬರುತ್ತಿರಲಿಲ್ಲ. ನೀನು ನಾಗರಹಾವೆಂದು ಗುರುತಿಸಿ, ನಿನ್ನನ್ನು ಅಲ್ಲಿಯೇ ಹೊಸಕಿ ಹಾಕಿರುತ್ತಿದ್ದೆ."

"ಮಾಡಿದ ಪಾಪ ಅಷ್ಟು ಸುಲಭವಾಗಿ ನಿನ್ನನ್ನು ಬಿಟ್ಟುಕೋಗೋದಿಲ್ಲ ತಾರಕನಾಮ! ಆ ದಿನ ಒಬ್ಬ ಹದಿನೈದು ವರ್ಷದ ನಿಸ್ಸಹಾಯಕಳಾಗಿದ್ದ ಹುಡುಗಿ ಏನು ಮಾಡಬಲ್ಲಳೆಂದು ಪರಮ ನೀಚವಾಗಿ ನಿಮ್ಮ ಕಾಮವಾಂಛೆ ತೀರಿಸಿಕೊಂಡಿರಿ. ಆ ದಿನದ ಆ ನಿಸ್ಸಹಾಯಕಳೇ ಪೆಟ್ಟು ತಿಂದ ಹುಲಿಯಾಗಿ ನಿಮ್ಮ ಪಾಲಿಗೆ ಮೃತ್ಯುದೇವತೆಯಾಗಿ ಪರಿಣಮಿಸಿದಳು ದಯಾಕರರಾವ್‌ನ ಕಥೆ ಆ ರೀತಿ ಮುಗಿಯಿತು, ನಿನ್ನ ಕಥೆ ಈ ರೀತಿ ಕೊನೆಗೊಂಡಿತು. ನಿನಗಿನ್ನು ಭವಿಷ್ಯವಿಲ್ಲ ತಾರಕನಾಮ. ನನ್ನನ್ನು ಕೊಂದು ವಿದೇಶಗಳಿಗೆ ಓಡಿಹೋದರೂ, ಈದಿ ಅಮೀನ್‌ನಂತೆಯೋ, ಜನರಲ್ ಮಾರ್ಕೋಸ್‌ನಂತೆಯೋ ಭಿಕ್ಷೆಯೆತ್ತಿ ಬದುಕುವುದೇ ನಿನ್ನ ಗತಿ. ನೀನು ನನ್ನನ್ನು ಕೊಂದರೂ ಅಂತಿಮ ವಿಜಯ ನನ್ನದೇ. ಕೊಲ್ಲು, ಹಾಯಾಗಿ ಕೊಲ್ಲು. ನಿಮ್ಮ ಮೇಲೆ ಸೇಡು ತೀರಿಸಿಕೊಂಡ ನಂತರ ನನ್ನ ಜೀವನದಲ್ಲಿ ಶೂನ್ಯ ಏರ್ಪಟ್ಟಿದೆ. ಈ ಅರ್ಥಹೀನ ಜೀವನವನ್ನು ಇನ್ನು ಮುಂದುವರಿಸುವುದಕ್ಕಿಂತಲೂ ಸಾಯುವುದೇ ಉತ್ತಮ. ಕೊಲ್ಲು ತಾರಕನಾಮ, ಕೊಲ್ಲು!"

ತಾರಕನಾಮ ಕಟಕಟನೆ ಹಲ್ಲು ಕಡಿದ. "ಕೊಲ್ತೀನಿ! ಕೊಲ್ಲದೆ ಬಿಡ್ತೀನಿ ಅಂದ್ಕೊಂಡಿದೀಯಾ? ನಿನ್ನ ಪ್ರಾಣ ತೆಗೆಯುವವರೆಗೆ ನನಗೆ ಶಾಂತಿಯಿರುವುದಿಲ್ಲ! ಸಮ್ಮೋಹನಾಸ್ತ್ರದಂತೆ ಆ ದಿನ ನನ್ನ ಹೃದಯ ನೀನು ಸೀಳಿದೆ. ಈ ದಿನ ಬುಲೆಟ್‌ನಿಂದ ನಾನು ನಿನ್ನ ಹೃದಯ ಸೀಳ್ತೀನಿ."

ಸೈಲೆನ್ಸರ್ ಹೊಂದಿಸಿದ ರಿವಾಲ್ವರ್ ಅನ್ನು ಅವಳ ಕಡೆ ಗುರಿ ಇಟ್ಟ.

ಅವಳು ನಿರ್ಭಯವಾಗಿ ನಿಂತಿದ್ದಳು. ದೇವ ಹೋದ ಮೇಲೆ ಈ ಜೀವನದಲ್ಲಿ ಏನು ಉಳಿದಿದೆ? ತನ್ನನ್ನು ಕೊಂದರೆ ತಾರಕನಾಮ ಉಪಕಾರ ಮಾಡಿದಂತಾಗುತ್ತದೆ. ಏನು ಉಳಿದಿದೆಯೆಂದು ಜೀವಿಸಬೇಕು? ಹದಿನೈದನೆಯ ವಯಸ್ಸಿನಲ್ಲಿ ಈ ದುರ್ಮಾರ್ಗರ ಕೈಯಲ್ಲಿ ಸರ್ವಸ್ವವನ್ನೂ ಕಳೆದುಕೊಂಡಿದ್ದಳು. ಅವಳಿಗೆ ಅಂದೇ ಜೀವನದ ಮೇಲಿನ ಆಸೆ ನಶಿಸಿಹೋಗಿತ್ತು. ತಾರಕನಾಮನ ತೋರುಬೆರಳು ಟ್ರಿಗರ್ ಮೇಲೆ ಬಿಗಿದುಕೊಂಡಿತು. 'ಟಪ್' ಎನ್ನುವ ಶಬ್ದ ಕೇಳಿಸಿತು. ಸೈಲೆನ್ಸರ್‌ನಿಂದ ಕೂಡಿದ ರಿವಾಲ್ವರ್ ಮಾಡಿದ ಶಬ್ದವದು. ಬುಲೆಟ್ ಸಿಡಿದು, ಹೃದಯವನ್ನು ಸೀಳಿತು. ಆದರೆ ನೆಲಕ್ಕುರುಳಿದ ವ್ಯಕ್ತಿ ಮಾತ್ರ ಮೇಖಲೆಯಲ್ಲ! ತಾರಕನಾಮ! ಅಂದುಕೊಂಡಿರದೆಯೇ ನಡೆದುಹೋದ ಈ ಘಟನೆಯಿಂದ ನಿಶ್ಚೇಷ್ಟಿತಳಾಗಿ ನೋಡುತ್ತಿದ್ದುಬಿಟ್ಟಳು ಮೇಖಲೆ. ತಾರಕನಾಮನ ಪ್ರಾಣ ಆಗಲೇ ಗಾಳಿಯಲ್ಲಿ ಬೆರೆತುಹೋಗಿತ್ತು.

"ಹಲೋ, ಹೌ ಡು ಯು ಡೂ?" ಮೇಖಲೆ ಥಟ್ಟನೆ ಆ ಧ್ವನಿ ಕೇಳಿಸಿದ

ಕಡೆ ನೋಡಿದಳು.

ಬಾಗಿಲಿಗೆ ಆತುಕೊಂಡು ರಿವಾಲ್ವರ್‌ನಿಂದ ಇನ್ನೂ ಹೊರಬರುತ್ತಿದ್ದ ಹೊಗೆಯನ್ನು ಊದುತ್ತಿದ್ದ ಜಾನಿವಾಕರ್ ಕಣ್ಣಿಗೆಬಿದ್ದ. ಮೇಖಲೆ ವಿಸ್ಮಯ ದಿಂದ ಅವನನ್ನು ಕಣ್ಣರಳಿಸಿ ನೋಡುತ್ತಾ ನಿಂತುಬಿಟ್ಟಳು.

"ತಾರಕನಾಮ ನಿನ್ನನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದಾನೆಂದು ನನಗೆ ಮೊದಲೇ ಗೊತ್ತು. ಅದಕ್ಕೇ ಅವನ ಮೇಲೆ ಕಣ್ಣಿಟ್ಟಿದ್ದೆ." ಅವನು ಮುಂದೆ ಬರುತ್ತಾ ನುಡಿದ. "ಬೈ ದಿ ಬೈ! ತಪ್ಪಾಗಿ ತಿಳಿದುಕೊಂಡಿದ್ದಕ್ಕೆ ಕ್ಷಮಿಸು. ದೇವ ನಿನ್ನ ಬಗೆಗೆ ಹೇಳುವವರೆಗೂ ನಿನ್ನ ವ್ಯಕ್ತಿತ್ವವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾರದೆ ಹೋದೆ. ಈ ತಾರಕನಾಮನನ್ನು ನಿನ್ನ ಮೇಲೆ ಛೂ ಬಿಟ್ಟಿದ್ದು ನಾನೇ. ಆ ತಪ್ಪನ್ನು ನಾನೇ ಸರಿಪಡಿಸಿದೆ."

ಅವನು ಹೇಳುತ್ತಿರುವ ಮಾತುಗಳು ಯಾವುವೂ ಅವಳಿಗೆ ಕೇಳಿಸಲಿಲ್ಲ. ಅವಳು ಥಟ್ಟನೆ ಮುಂದೆ ಹೆಜ್ಜೆ ಇಟ್ಟು, ಅವನ ಕೈ ಹಿಡಿದುಕೊಂಡಳು.

"ದೇವ ನನ್ನ ಬಗೆಗೆ ಏನು ಹೇಳಿದ?" ನೇರವಾಗಿ ಕೇಳಿದಳು.

"ನಿನ್ನ ಬಗೆಗೆ ನಾನು ತಿಳಿದುಕೊಂಡಿದ್ದೆಲ್ಲವೂ ತಪ್ಪೆಂದು ಹೇಳಿದ. ಒಂದು ವೇಳೆ ಬೇಕೆಂದುಕೊಂಡರೂ ನೀನು ದೇಶದ್ರೋಹ ಮಾಡಲಾರೆಯೆಂದು ಹೇಳಿದ. ಮನುಷ್ಯರ ಮೇಲೆ ನಿನಗಿರುವುದು ಪ್ರೇಮವೇ ಹೊರತು ಹಗೆಯಲ್ಲವೆಂದು ಹೇಳಿದ."

ಅವಳು ಅವನ ಕಣ್ಣುಗಳಲ್ಲಿ ಏನೋ ಹುಡುಕುತ್ತಿರುವವಳಂತೆ ನೋಡು ತ್ತಿದ್ದಳು. ನಂತರ "ದೇವ ಹಾಗೆ ಹೇಳಿದನಾ?" ಎಂದು ಗೊಣಗುತ್ತಿರುವವ ಳಂತೆ ಕೇಳಿದಳು.

ಅವನು ಹೌದೆನ್ನುವಂತೆ ತಲೆಯಾಡಿಸಿ "ಯಾಕೆ? ದೇವನೇನಾದ್ರೂ ತಪ್ಪು ಹೇಳಿದನಾ?" ಎಂದು ಕೇಳಿದ.

"ಇಲ್ಲ. ನನ್ನ ಬಗೆಗೆ ನನಗೆ ತಿಳಿಯದ ನಿಜವನ್ನು ದೇವ ತಿಳಿದುಕೊಂಡ" ಅವಳು ವಿಷಾದದಿಂದ ನುಡಿದಳು. "ಹೌದು, ಅವನು ಹೇಳಿದ್ದು ನಿಜವೇ! ನನ್ನನ್ನು ಸರ್ವನಾಶ ಮಾಡಿದ ಈ ವ್ಯವಸ್ಥೆಯ ಮೇಲೆ ದಂಗೆಯೆದ್ದೆ. ಈ ದೇಶ ವನ್ನು ಬೂದಿಯ ರಾಶಿಯನ್ನಾಗಿ ಮಾಡಿ ಆ ರಾಶಿಯ ಮೇಲೆ ಮತ್ತೊಂದು ಪ್ರಪಂಚವನ್ನು ನಿರ್ಮಿಸಬೇಕೆಂದುಕೊಂಡೆ. ಅದಕ್ಕೆ ಪ್ಲಾನ್ ಕೂಡ ಸಿದ್ಧ ಮಾಡಿಟ್ಟುಕೊಂಡಿದ್ದೆ. ತಾರಕನಾಮ ಹೌಸ್‌ಬೋಟ್‌ನಲ್ಲಿ ನನಗೆ ಕೊಟ್ಟ ದೇಶ ರಕ್ಷಣಾ ರಹಸ್ಯಗಳನ್ನು ಡಜನ್‌ಗಟ್ಟಲೆ ಪ್ರತಿ ಮಾಡಿಸಿ, ಶತ್ರು ದೇಶಗಳಿಗೆ ಮಾರಬೇಕೆಂದುಕೊಂಡಿದ್ದೆ! ಆದರೆ, ಹಾಗೆ ಮಾಡಲಾರದೆ ಹೋದೆ.

ಯಾವುದೋ ದೌರ್ಬಲ್ಯ ನನ್ನನ್ನು ಆವರಿಸಿದಂತಾಯ್ತು. ಅದೇ ಫೈಲನ್ನು ಮುನೀಂದ್ರಸ್ವಾಮಿಗೆ ಕೊಟ್ಟು, ಅವನ ಕಥೆಗೆ ಮುಕ್ತಾಯ ಹಾಡಿದೆ. ಕೊನೆಗೆ....ಕೊನೆಗೆ....ಸುಳ್ಳು ಹೇಳಿ, ಸರ್ಕಾರಕ್ಕೆ ನನ್ನ ಮೇಲೆ ಅನುಮಾನ ಇಲ್ಲದಂತೆ ಮಾಡಿಕೊಂಡೆ. ನನ್ನ ಕಥೆ ಪತ್ರಿಕೆಗಳವರಿಗೆ ಹೇಳಿ, ದೇಶದಾದ್ಯಂತ ಸಹಾನುಭೂತಿ ಸಂಪಾದಿಸಿಕೊಂಡೆ. ಆದರೆ....ಏನು ಸಾಧಿಸಿದೆ? ಮುನೀಂದ್ರ ಸ್ವಾಮಿ ಹೋದ, ಈಗ ತಾರಕನಾಮನೂ ಹೋದ. ಆದರೆ, ಕೊಳೆತುಹೋದ ಈ ಸಮಾಜ ಇನ್ನೂ ಹಾಗೆಯೇ ಇದೆ. ಈ ಸಮಾಜದಲ್ಲಿ ಇನ್ನೂ ಸಾಕಷ್ಟು ಜನ ದಯಾಕರರಾವ್, ತಾರಕನಾಮ ಇದ್ದಾರೆ. ಇವರೆಲ್ಲರನ್ನೂ ನಿರ್ನಾಮ ಮಾಡಿ ಹೊಸ ಸಮಾಜ ನಿರ್ಮಿಸಬೇಕೆಂಬ ನನ್ನ ಕನಸನ್ನು ನನಸು ಮಾಡಿ ಕೊಳ್ಳದೇ ಹೋದೆ. ಈಗ ನನ್ನ ಜೀವನ ಒಂದು ಯುಗಸಂಧಿಯಲ್ಲಿ ನಿಂತಿದೆ. ಅತ್ತ ಈ ಜೀವನವನ್ನು ಸಮಾಪ್ತಿಗೊಳಿಸಿಕೊಳ್ಳಲಾರೆ, ಇತ್ತ ಮತ್ತೆ ಜೀವನ ವನ್ನು ಪ್ರಾರಂಭಿಸಲಾರೆ. ದೇವ ನನ್ನ ದೌರ್ಬಲ್ಯವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ."

ಜಾನಿವಾಕರ್ ಅವಳ ಭುಜದ ಮೇಲೆ ಕೈ ಹಾಕಿದ.

"ಅದು ದೌರ್ಬಲ್ಯವಲ್ಲ ಮೇಖಲೆ! ನಿನ್ನ ವ್ಯಕ್ತಿತ್ವ ಬಲ! ವೈಯಕ್ತಿಕ ವಾಗಿ ನಿನಗಾದ ಅನ್ಯಾಯದಿಂದಾಗಿ ದೇಶಕ್ಕೇ ಅಪಕಾರ ಮಾಡಬೇಕೆಂದು ಕೊಂಡಿದ್ದೆ ನೋಡು, ಅದು ದೌರ್ಬಲ್ಯ. ನಿನಗಿರುವ ಮಾನಸಿಕ ಬಲದಿಂದ ಆ ದೌರ್ಬಲ್ಯವನ್ನು ಮೀರಲು ಶಕ್ತಳಾದೆ. ದೇವ ನಿನ್ನ ಹಿರಿಮೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದ. ಈ ಸಮಾಜದಲ್ಲಿ ದಯಾಕರರಾವ್ ನಂತಹವರೇ ಅಲ್ಲ, ದೇವನಂತಹವರೂ ಇದ್ದಾರೆ. ಅದನ್ನು ನೆನಪಿಟ್ಕೋ."

"ದೇವ ಹೋದ ನಂತರ ಇನ್ನೂ ಅಂತಹವರಿದ್ದಾರೆಂದುಕೊಳ್ಳುವುದು ಭ್ರಮೆ. ಈ ಸಮಾಜ ಪೂರ್ತಿಯಾಗಿ ದಯಾಕರರಾವ್‌ನಂತಹವರಿಂದ ತುಂಬಿ ಹೋಗಿದೆ."

"ಅದೇ ತಪ್ಪು. ಪ್ರತಿ ವ್ಯಕ್ತಿಯ ಮನಸ್ಸಿನಲ್ಲೂ ಎರಡು ಗುಣಗಳು ಅಡಗಿರುತ್ತವೆ. ಒಳ್ಳೆಯದು, ಕೆಟ್ಟದ್ದು! ಪರಿಸ್ಥಿತಿಗಳ ಪ್ರಭಾವದಿಂದ ಅವು ಗಳಲ್ಲಿ ಯಾವುದೋ ಒಂದು ಮಾತ್ರವೇ ಆ ವ್ಯಕ್ತಿಯಲ್ಲಿ ಸ್ಫುಟವಾಗಿ ಹೊರಗೆ ಕಾಣಿಸುತ್ತದೆ. ದೇವ ಹೋದ ನಿಜವೇ. ಆದರೆ ಅವನೊಂದಿಗೆ ಒಳ್ಳೆಯತನ, ಮಾನವತೆ ಲೋಕದಲ್ಲಿ ನಶಿಸಿದವೆಂದುಕೊಳ್ಳುವುದು ತಪ್ಪು."

"ಅದು ನಿನ್ನ ಮನಸ್ಸಿಗೆ ತೋಚಿದ ಮಾತು. ಆ ಮಾತು ನಿಜವಲ್ಲ. ನಾನು ಹೇಳಿದ್ದೇ ನಿಜ. ಲೋಕದಲ್ಲಿ ಅನ್ಯಾಯಕ್ಕೂ, ದುರ್ಮಾರ್ಗಕ್ಕೂ

ಬಿಟ್ಟರೆ, ಒಳ್ಳೆಯತನಕ್ಕೆ, ಮಾನವತ್ವಕ್ಕೆ ಸ್ಥಳವಿಲ್ಲ. ನನ್ನ ಅನುಭವಗಳು ನಿನಗೂ ಆಗಿದ್ದರೆ ನೀನೂ ಇದೇ ಮಾತು ಅನ್ನುತ್ತಿದ್ದೆ."

ಜಾನಿನಾಕರ್ ನೇರವಾಗಿ ಅವಳನ್ನು ದಿಟ್ಟಿಸಿ ನೋಡಿದ. "ನಿನ್ನ ಅನುಭವ ನನಗಿಲ್ಲವೆ? ನನ್ನ ಜೀವನದ ಕಥೆ ತಿಳಿದರೆ ಹಾಗೆ ಮಾತಾಡಲಾರೆ."

"ನಿನ್ನ ಕಥೆ ನನಗೆ ತಿಳಿದಿಲ್ಲವೆಂದರೇನು? ಸಂಪೂರ್ಣವಾಗಿ ನಿನ್ನ ಕಥೆ ನನಗೆ ಗೊತ್ತು."

"ಇಲ್ಲ. ನಿನಗೆ ತಿಳಿದದ್ದು ಕೊಂಚವೇ. ನಿಜಕ್ಕೂ ಪಾಕಿಸ್ತಾನದಲ್ಲಿ ನನ್ನ ಮೇಲಧಿಕಾರಿಗಳಿಗೆ ತಿಳಿದದ್ದು ಕೂಡ ಕೊಂಚವೇ. ನಿಜವಾದ ಕಥೆ ನನ್ನ ಹೃದಯದಲ್ಲಿಯೇ ನಿಕ್ಷಿಪ್ತವಾಗಿದೆ. ಈ ಕಥೆಯನ್ನು ನನ್ನ ಬಾಯಿಯಿಂದ ಕೇಳುತ್ತಿರುವ ಮೊಟ್ಟಮೊದಲ ವ್ಯಕ್ತಿ ನೀನೇ."

"ಏನು ಆ ಕಥೆ?"

"ನೀನು ಯಾವಾಗಲಾದರೂ ಶಹೆಜಾದಾ ನೂರುಲ್ ಶರೀಫ್‌ನ ಕಥೆ ಕೇಳಿದ್ದೀಯಾ?"

"ನಿನ್ನ ತಂದೆ! ಪಾಕಿಸ್ತಾನ್ ರೈಲ್ವೆನಲ್ಲಿ ಕೆಲಸ ಮಾಡುತ್ತಿದ್ದ!"

"ಅದು ಕೊಂಚ ಮಟ್ಟಿಗೆ ನಿಜ! ನನ್ನ ತಂದೆ ಭಾರತೀಯ!"

"ಈ ದಿನ ಮೂರು ತುಣುಕಾದ ಭಾರತದ ಉಪಖಂಡದಲ್ಲಿ ನಿವಾಸ ಮಾಡುವವರೆಲ್ಲಾ ಭಾರತೀಯರೇ!"

"ಹಾಗಲ್ಲ, ನನ್ನ ತಂದೆ ಇಲ್ಲಿಯೇ ಹುಟ್ಟಿದವನು ಇಲ್ಲಿಯೇ ಬೆಳೆದವನು. ಈ ನಾಡಿನ ಮೇಲೆ ಮಮಕಾರ ಬೆಳೆಸಿಕೊಂಡವನು. ನಿಜಾಂ ರಾಜವಂಶಕ್ಕೆ ಸೇರಿದವನು. ನಿಜ ಕಥೆ ಹೇಳ್ತೀನಿ ಕೇಳು. ನನ್ನ ತಂದೆ ದೇಶ ವಿಭಜನೆಯನ್ನು ತೀವ್ರವಾಗಿ ವಿರೋಧಿಸಿದ. ಅದರಿಂದ ರಜಾಕಾರರು ಆತನ ಮೇಲೆ ಹಗೆ ತೊಟ್ಟರು. ಆಗ ಆತ ನಮ್ಮ ತಾಯಿಯನ್ನು ಹಿಂದಿಟ್ಟುಕೊಂಡು ಹೈದರಾಬಾದ್ ಸಂಸ್ಥಾನ ಬಿಟ್ಟು ಭಾರತದ ಭೂಭಾಗದೊಳಕ್ಕೆ ಓಡಿಹೋದ. ರಜಾಕಾರರು ಅಲ್ಲಿಯೂ ಆತನನ್ನು ಬಿಡಲಿಲ್ಲ. ತಮ್ಮ ಸಹಾನುಭೂತಿಪರರ ಮೂಲಕ ಆತನನ್ನು ರಜಾಕಾರರ ಏಜೆಂಟ್ ಎಂದು ಚಿತ್ರಿಸಿ, ಭಾರತ ಸರಕಾರವನ್ನು ನಂಬಿಸಿದರು. ಅದರಿಂದಾಗಿ ಆತ ಭಾರತ ದೇಶವನ್ನೇ ಬಿಟ್ಟು, ಪಾಕಿಸ್ತಾನಕ್ಕೆ ಹೋಗಬೇಕಾಗಿ ಬಂತು. ಪಾಕಿಸ್ತಾನದಲ್ಲಿ ಆತ ತುಂಬಾ ಕಷ್ಟಗಳನ್ನು ಅನುಭವಿಸಿದ. ಭಾರತದಿಂದ ಪಾಕಿಸ್ತಾನಕ್ಕೆ ಹೋದವರನ್ನು ಅಲ್ಲಿಯ ಸರ್ಕಾರವಾಗಲಿ, ಪ್ರಜೆಗಳಾಗಲಿ ನಂಬುತ್ತಿರಲಿಲ್ಲ. ಅದರಿಂದಾಗಿ ಅಜ್ಞಾತ ವಾಸಕ್ಕೆ ಹೋಗಿ, ಒಬ್ಬ ಸ್ನೇಹಿತನ ಮೂಲಕ ತಾನು ಪಾಕಿಸ್ತಾನದಲ್ಲಿಯೇ

ಹುಟ್ಟಿ-ಬೆಳೆದವನೆಂದು ರುಜುವಾತು ಮಾಡುವ ಕಳ್ಳ ಕಾಗದ ಪತ್ರಗಳನ್ನು ತಯಾರು ಮಾಡಿಸಿಕೊಂಡ. ಪಾಕಿಸ್ತಾನಿಯೆಂದೇ ಚಲಾವಣೆಯಾದ. ಅಲ್ಲಿಯೇ ನಾನು ಹುಟ್ಟಿದೆ. ಪಾಕಿಸ್ತಾನಿಯಾಗಿ ಬದಲಾದರೂ ನಮ್ಮ ತಂದೆಗೆ ಭಾರತ ದೇಶದ ಮೇಲೆಯೇ ಹೆಚ್ಚು ಇಷ್ಟ. ಎಂದಿಗಾದರೂ ಭಾರತಕ್ಕೆ ಮರಳಬೇಕೆಂದು ಕನಸು ಕಾಣುತ್ತಿದ್ದ. ಆದರೆ ಆತನ ಕನಸು ನನಸಾಗುವ ಮುಂಚೆಯೇ ಆತ ಈ ಲೋಕದಿಂದ ಪ್ರಯಾಣ ಮಾಡಿದ. ಚಿಕ್ಕಂದಿನಲ್ಲೇ ಆತ ನನಗೆ ಭಾರತ ದೇಶದ ಮೇಲಿನ ಪ್ರೇಮವನ್ನು ಧಾರೆಯೆರೆದ. ಮತದ ಆಧಾರದ ಮೇಲೆ ದೇಶ ತುಂಡಾಗಿದ್ದು, ಆತನನ್ನು ಕೊನೆಯವರೆಗೂ ನೋವಿಗೀಡುಮಾಡುತ್ತಿತ್ತು. ಆತ ತೆಲುಗು ಭಾಷೆಯ ಅಭಿಮಾನಿ. ಆತನೇ ನನಗೆ ತೆಲುಗು ಕಲಿಸಿದ. ಭಾರತೀಯ ಭಾಷೆಗಳಲ್ಲಿ ನನಗೆ ತೆಲುಗು ಚೆನ್ನಾಗಿ ಬರುತ್ತಿರುವುದಕ್ಕೆ ಕಾರಣ ಅದೇ. ನನ್ನ ತಂದೆ ತೀರಿಕೊಂಡ ಮೇಲೆ ನಾನು ಆತನಂತೆಯೇ ಅಂತ್ಯವಿಲ್ಲದ ಕಷ್ಟ ಅನುಭವಿಸಿದೆ. ನಮ್ಮ ತಂದೆಗೆ ಪಾಕಿಸ್ತಾನೀ ಕಾಗದ ಪತ್ರಗಳನ್ನು ತಯಾರು ಮಾಡಿಸಿಕೊಟ್ಟ ಸ್ನೇಹಿತನೇ ನನಗೆ ಸಹಾಯ ಮಾಡಿ ಓದಿಸಿದ. ಕೊನೆಗೆ ನಾನು ಪಾಕಿಸ್ತಾನ್ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸೇರಿದೆ. ಪಾಕಿಸ್ತಾನದ ಪರವಾಗಿ ಭಾರತ ದೇಶಕ್ಕೆ ಗೂಢಚಾರಿಯಾಗಿ ಬಂದರೂ, ಈ ದೇಶದ ಮೇಲಿನ ಮಮತೆಯನ್ನು ಕಳೆದುಕೊಳ್ಳಲಾಗದೆ, ಈ ದೇಶಕ್ಕೆ ವಿರುದ್ಧವಾಗಿ ಕೆಲಸ ಮಾಡದೇ ಉಳಿದುಬಿಟ್ಟೆ. ವೃತ್ತಿಯ ದೃಷ್ಟಿಯಿಂದ ನೋಡಿದರೆ ಅದು ಅಪರಾಧವೇ! ಆದರೆ.... ಆದರೆ.... ನನ್ನಲ್ಲಿ ಪ್ರವಹಿಸುತ್ತಿರುವ ನನ್ನ ತಂದೆಯ ರಕ್ತ ಈ ದೇಶಕ್ಕೆ ಹಾನಿ ಮಾಡಲು ಬಿಡಲಿಲ್ಲ. ಹುಟ್ಟಿನಿಂದ ನಾನು ಪಾಕಿಸ್ತಾನಿಯಾದರೂ, ಮಾನಸಿಕವಾಗಿ ನಾನು ಭಾರತೀಯನೇ!

"ಈಗ ಹೇಳು ಮೇಖಲೆ, ರಜಾಕಾರರು ಮಾಡಿದ ದ್ರೋಹಕ್ಕೆ, ಭಾರತ ಸರ್ಕಾರ ಮಾಡಿದ ತಪ್ಪಿಗೆ ನನ್ನ ತಂದೆ ನಿನ್ನಂತೆಯೇ ಭಾವನೆಗಳನ್ನು ಬೆಳೆಸಿಕೊಂಡಿದ್ದರೆ ಏನಾಗುತ್ತಿತ್ತು ? ನನ್ನಲ್ಲಿ ಈ ದೇಶಾಭಿಮಾನ ಇರುತ್ತಿರಲಿಲ್ಲ. ನೀನು ಅಪೇಕ್ಷಿಸಿದಂತೆ ಈ ದೇಶ ನಿಜವಾಗಿಯೂ ಬೂದಿಯ ರಾಶಿಯಾಗಿರುತ್ತಿತ್ತು. ನಿನ್ನಂತಹ ಸಮ್ಮೋಹನಾಸ್ತ್ರವನ್ನು ಆಯುಧವಾಗಿ ಉಪಯೋಗಿಸಿ, ಈ ದೇಶದ ರಹಸ್ಯಗಳೆಲ್ಲವನ್ನೂ ತಿಳಿದುಕೊಂಡಿರುತ್ತಿದ್ದೆ. ಒಂದು ಕಡೆಯಿಂದ ಪಾಕಿಸ್ತಾನ, ಹಿಂದೂ ಮಹಾ ಸಾಗರದ ಕಡೆಯಿಂದ ಅಮೆರಿಕಾ, ಮತ್ತೊಂದು ಕಡೆಯಿಂದ ಚೀನಾ ಒಂದೇ ಬಾರಿಗೆ ಈ ದೇಶದ ಮೇಲೆ ದಾಳಿ ಮಾಡಿರುತ್ತಿದ್ದವು. ಯುದ್ಧದಲ್ಲಿ ಸಿಕ್ಕಿಬಿದ್ದು ಈ ದೇಶದ ಆರ್ಥಿಕ ವ್ಯವಸ್ಥೆ ಛಿದ್ರಛಿದ್ರವಾಗಿರುತ್ತಿತ್ತು ಅದನ್ನು ತಿಳಿದೇ ನಾನು ನಿನ್ನೊಂದಿಗೆ ಕೈ ಮಿಲಾಯಿಸಲಿಲ್ಲ. ಮೇಲಾಗಿ,

ನಿನಗೆ ವಿರುದ್ಧವಾಗಿ ಕೆಲಸ ಮಾಡಿದೆ. ನಿನ್ನ ಶಕ್ತಿ, ಸಾಮರ್ಥ್ಯಗಳ ಬಗೆಗೆ ನಾನು ಕಡಿಮೆ ಅಂದಾಜು ಮಾಡಲಿಲ್ಲ. ನಿನ್ನನ್ನು ತಡೆಯುವುದಕ್ಕಾಗಿ ತಾರಕನಾಮನನ್ನು ನಿನ್ನ ಮೇಲೆ ಛೂ ಬಿಟ್ಟೆ. ಕೊನೆಗೆ ದೇವನಿಂದಾಗಿ ನಿನ್ನ ನಿಜವಾದ ವ್ಯಕ್ತಿತ್ವವನ್ನು ತಿಳಿದುಕೊಂಡೆ.

"ಒಂದು ದೇಶದ ವ್ಯವಸ್ಥೆಯಾಗಲೀ, ಒಂದು ಸಮಾಜದ ವ್ಯವಸ್ಥೆಯಾಗಲೀ ಕೆಟ್ಟುಹೋದಾಗ ಆ ದೇಶದ ಮೇಲೆಯೇ, ಆ ಸಮಾಜದ ಮೇಲೆಯೇ ಕೋಪಗೊಂಡು, ನಾಶಗೊಳಿಸಬೇಕೆಂದು ಪ್ರಯತ್ನಿಸಿದರೆ, ವ್ಯವಸ್ಥೆ ಮತ್ತಷ್ಟು ಹಾಳಾಗುತ್ತದೆಯೇ ಹೊರತು ಸುಧಾರಿಸುವುದಿಲ್ಲ. ಬೂದಿಯ ರಾಶಿಯಿಂದ ಮಾನವೀಯತೆ ಹೊಸದಾಗಿ ಹುಟ್ಟಿಬರದು. ಅದಕ್ಕೆ ಸಮಾಜ ಕೆಟ್ಟುಹೋದಾಗ ಸುಧಾರಣೆ ಮಾಡಬೇಕೇ ಹೊರತು, ನಿರ್ಮೂಲ ಮಾಡಲು ಕಂಕಣ ಕಟ್ಟಬಾರದು."

ಅವಳು ಅವನನ್ನು ವಿಸ್ಮಯದಿಂದ ಕಣ್ಣರಳಿಸಿ ನೋಡುತ್ತಿದ್ದಳು. ಮೊದಲು ದೇವ–ಈಗ ಇವನು! ತನ್ನಲ್ಲಿ ಗಡ್ಡೆ ಕಟ್ಟಿಹೋಗಿ ಶಿಲೆಗಳಂತಾದ ಯಾವುದೋ ಮಂಜು ಪರ್ವತಗಳನ್ನು ಕರಗಿಸುತ್ತಿದ್ದರು. ಅವಳು ಆಶ್ಚರ್ಯದಿಂದ ಬಾಯಿ ತೆರೆದು ಅವನಿಗೇನೋ ಹೇಳಲು ಹೋದಳು. ಅಷ್ಟರಲ್ಲಿ ಹಠಾತ್ತನೆ ಯಾರದೋ ಚಪ್ಪಾಳೆ ಕೇಳಿಸಿದ್ದರಿಂದ ಇಬ್ಬರೂ ಬೆಚ್ಚಿಬಿದ್ದು, ಅತ್ತ ನೋಡಿದರು.

"ಎಕ್ಸಲೆಂಟ್! ಮಾರ್ವಲೆಸ್! ಈ ಉಪನ್ಯಾಸ ಸ್ಟೇಜ್ ಮೇಲೆ ಕೊಟ್ಟಿದ್ದರೆ ಇದಕ್ಕಿಂತಲೂ ಜೋರಾಗಿ ಚಪ್ಪಾಳೆ ಬೀಳುತ್ತಿದ್ದವು."

"ಲೋ....ಟ....ಸ್!" ಜಾನಿವಾಕರ್ ಅಪ್ರಯತ್ನವಾಗಿ ನುಡಿದ. ಆ ವ್ಯಕ್ತಿಯ ಕೈಯಲ್ಲಿ ಶಕ್ತಿಯುತವಾದ ಮಿನಿ ರಿವಾಲ್ವರ್ ಥಳಥಳನೆ ಹೊಳೆಯುತ್ತಿತ್ತು.

"ಹೌದು ಲೋಟಸ್‌ನೇ! ಅಲುಗಾಡಬೇಡ ಜಾನಿವಾಕರ್, ಅಲುಗಾಡಿದೆಯೆಂದರೆ ನಿರ್ದಾಕ್ಷಿಣ್ಯವಾಗಿ ಗುಂಡು ಹಾರಿಸ್ತೀನಿ. ಮರ್ಯಾದೆಯಾಗಿ ನಿನ್ನ ಕೈಯಲ್ಲಿನ ರಿವಾಲ್ವರ್ ಪಕ್ಕಕ್ಕೆ ಬಿಸಾಕು. ಬೈ ದಿ ಬೈ ನಾನು ಒಂಟಿಯಾಗಿ ಬಂದಿಲ್ಲ. ಮತ್ತೊಬ್ಬ ಮಿತ್ರನನ್ನು ಕರೆದುಕೊಂಡೇ ಬಂದಿದೀನಿ....909!"

ಲೋಟಸ್ ಆ ರೀತಿ ಕರೆದೊಡನೆಯೇ ಮುಂದಿನ ಕೋಣೆಯ ಬಾಗಿಲ ಮರೆಯಿಂದ 909 ನಗುತ್ತಾ ಹೊರಬಂದ. ಅವನ ಕೈಯಲ್ಲಿ ಮತ್ತೊಂದು ರಿವಾಲ್ವರ್ ಹೊಳೆಯುತ್ತಿತ್ತು.

"ಸಾರಿ ಜಾನಿವಾಕರ್, ನಿನ್ನ ಬುದ್ಧಿಶಕ್ತಿಗೆ ವಂದನೆ ಅರ್ಪಿಸಿ, ನಿನಗೆ

ಶಿಷ್ಯನಾಗಬೇಕೆಂದುಕೊಂಡಿದ್ದೆ. ನಿನ್ನ ಜೊತೆ ಸೇರಿ ತುಂಬಾ ಕಾಲ ಕೆಲಸ ಮಾಡಬಹುದೆಂದು ಆಸೆಪಟ್ಟಿದ್ದೆ. ಇಂತಹ ಪರಿಸ್ಥಿತಿಯಲ್ಲಿ ನಿನ್ನನ್ನು ಮತ್ತೆ ಭೇಟಿಯಾಗಬಹುದೆಂದುಕೊಂಡಿರಲಿಲ್ಲ.

ತಮ್ಮಿಬ್ಬರ ಕಡೆಯೂ ಅರಳಿದ ಕಣ್ಣುಗಳಿಂದ ಬಿಟ್ಟ ಬಿಟ್ಟು ನೋಡುತ್ತಿದ್ದ ಜಾನಿವಾಕರ್‌ನನ್ನು ನೋಡಿ ಲೋಟಸ್ ಮತ್ತೊಂದು ಸಲ ನಕ್ಕ.

"ಇಲ್ಲಿಗೆ ಬಂದಾಗಿನಿಂದ ನಿನ್ನ ಧೋರಣೆ ನನಗೆ ಅನುಮಾನಾಸ್ಪದವಾಗಿಯೇ ಇತ್ತು. ಭಾರತಕ್ಕೆ ಬಂದ ಮೇಲೆ ನೀನು ಮಾಡಿದ್ದೇನೂ ಇಲ್ಲ. ಮೇಲಾಗಿ ಎಷ್ಟೋ ಸಾರಿ ಅವಕಾಶಗಳು ಬಂದರೂ ನಿನ್ನ ಆಪರೇಷನ್ ಸಕ್ಸೆಸ್ ಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ. ಈ ಸಂಗತಿ ಒತ್ತಟ್ಟಿಗಿರಲಿ, ಈ ಸಮ್ಮೋಹನಾಸ್ತ್ರದ ಹಿಂದೆ ಬಿದ್ದೆ. ಇವಳು ಮಾಡುವ ಕೆಲಸಗಳಿಗೆ ಅಡ್ಡವಾಗುತ್ತಾ, ಇವಳನ್ನು ಹಿಂಬಾಲಿಸುವುದರಲ್ಲಿಯೇ ನಿನ್ನೆಲ್ಲ ಸಮಯ ವ್ಯಯ ಮಾಡಿದೆ.ನೀನು ಕೇಳಿದೊಡನೆಯೇ ಮದೀನಾದಲ್ಲಿನ ಆ ಮುದುಕಿಯ ಅಡ್ರೆಸ್ ಸಂಪಾದಿಸಿ ಆ ದಿನ ನಿನಗೆ ಕೊಟ್ಟೆ. ನಿನ್ನ ಮಿಷನ್‌ನೊಂದಿಗೆ ಅವಳಿಗೇನೋ ಸಂಬಂಧವಿದೆಯೇನೋ ಎಂದು ಭ್ರಾಂತಿಪಟ್ಟೆನೇ ಹೊರತು, ನೀನು ನಿನ್ನ ತಂದೆಯ ವಿವರಗಳನ್ನು ಪಡೆಯಲು ಅವಳ ಹತ್ತಿರ ಹೋಗುತ್ತಿರುವೆಯೆಂದು ಊಹಿಸಲಿಲ್ಲ. ನೀನು ಡಬಲ್ ಕ್ರಾಸ್ ಮಾಡುತ್ತಿದ್ದೀಯೆಂದು ಗ್ರಹಿಸದೇ ಹೋದೆ. ಕೊನೆಗೆ ನಿನ್ನ ಮೇಲೆ ಅನುಮಾನ ಬೆಳೆಯುತ್ತಾ ಬಂದುದರಿಂದ ಪಾಕಿಸ್ತಾನವನ್ನು ಸಂಪರ್ಕಿಸಿ, ಆದೇಶಗಳನ್ನು ಪಡೆದುಕೊಂಡೆ. ನಿನ್ನ ನಿಜಸ್ವರೂಪ ಈಗ ತಿಳಿಯಿತು. ನಿನ್ನಂತಹವನು ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿರುವುದು ನಾಚಿಕೆಗೇಡು, ಡ್ರಾಪ್ ದಿ ಗನ್ ಪ್ಲೀಸ್! ಈಗ ನೀನು ನನಗಲ್ಲ....ನಾನು ನಿನಗೆ ಆಜ್ಞೆ ಕೊಡ್ತೀನಿ! ಡ್ರಾಪ್ ದಿ ಗನ್."

ಜಾನಿವಾಕರ್ ನಿಧಾನವಾಗಿ ಕೈಯಲ್ಲಿನ ರಿವಾಲ್ವರ್ ಅನ್ನು ನೆಲದ ಮೇಲೆ ಜಾರಿಬಿಟ್ಟ. ಅವನಿಗೆ ಆಶ್ಚರ್ಯವಾಗಿತ್ತು. ಲೋಟಸ್ ತನಗೆ ಎದುರು ಬೀಳುತ್ತಾನೆಂದು ಅವನು ಕನಸಿನಲ್ಲೂ ಎಣಿಸಿರಲಿಲ್ಲ.

"ದಟ್ಸ್ ಗುಡ್! ಇನ್ನು, ನಾವು ಬಂದ ಕೆಲಸವೇನೆಂದು ಹೇಳಿ ಬೇಗ ಮುಗಿಸಿ ಹೊರಟು ಹೋಗುತ್ತೇವೆ. ಪಾಕಿಸ್ತಾನದಿಂದ ನಮಗೆ ಬಂದ ಆದೇಶ ಏನು ಗೊತ್ತಾ ? ನಿನ್ನ ಮೇಲಿನ ಅನುಮಾನ ಖಚಿತವಾದೊಡನೆ ನಿನಗೆ ಶಿಕ್ಷೆ ವಿಧಿಸುವುದು. ಆ ಶಿಕ್ಷೆಯೇನೆಂದು ನಿನಗೆ ತಿಳಿದೇ ಇರುತ್ತದೆ. ದ್ರೋಹಿಗಳಾಗಿ ಬದಲಾದ ಇಂಟೆಲಿಜೆನ್ಸ್ ಏಜೆಂಟ್ಸ್ ಎಲ್ಲರಿಗೂ ವಿಧಿಸುವ ಶಿಕ್ಷೆ-ಮರಣದಂಡನೆ!"

ಲೋಟಸ್ ರಿವಾಲ್ವರ್ ಮೇಲೆತ್ತಿದ. ಟ್ರಿಗ್ಗರ್ ಇನ್ನೇನು ಒತ್ತಲಿದ್ದ. ಸರಿಯಾಗಿ ಅದೇ ಸಮಯದಲ್ಲಿ ಜಾನಿವಾಕರ್ ಮಿಂಚಿನಂತೆ ಚಲಿಸಿದ. ಅವನು

ಆ ರೀತಿ ಮಾಡುತ್ತಾನೆಂದು ಲೋಟಸ್ ಊಹಿಸಿರಲಿಲ್ಲ.

ಟ್ರಿಗ್ಗರ್ ಒತ್ತಿ, ರಿವಾಲ್ವರ್‌ನಲ್ಲಿನ ಬುಲೆಟ್ ರಿಲೀಸ್ ಆಗುತ್ತಿರುವಂತೆಯೇ ಜಾನಿವಾಕರ್ ಬೊಂಬೆಯಂತೆ ಜರ್ರನೆ ನೆಲದ ಮೇಲೆ ಜಾರಿದ. ನೆಲದ ಮೇಲೆ ಜಾರುತ್ತಲೇ, ಬಲಗಾಲು ಮುಂದೆ ಚಾಚಿ ಲೋಟಸ್‌ನ ಕಾಲಿಗೆ ಮಿಂಚಿನಂತೆ ಪೆಟ್ಟು ಕೊಟ್ಟ. ಬುಲೆಟ್ ಗುರಿ ತಪ್ಪಿ ತಲೆಯ ಮೇಲಿನಿಂದ ರೊಯ್ಯೆಂದು ನುಗ್ಗಿ ಹೋಗಿ ಗೋಡೆಯಲ್ಲಿಳಿಯಿತು. ಜಾನಿವಾಕರ್ ಆ ಮರುಕ್ಷಣ ಪಕ್ಕಕ್ಕೆ ಜಿಗಿದ. ಅದಕ್ಕೆ ಮುಂಚೆ ತಾನು ನೆಲದ ಮೇಲೆ ಜಾರಿಬಿಟ್ಟ ರಿವಾಲ್ವರ್‌ನ ಕಡೆ ಡೈವ್ ಮಾಡಿದ. ಆದರೆ ಅಷ್ಟು ಹೊತ್ತಿಗೆ ತಡವಾಗಿತ್ತು. 909ನ ಕೈಯಲ್ಲಿದ್ದ ಆಟೋಮ್ಯಾಟಿಕ್ ಟಪ್ ಎನ್ನುವ ಶಬ್ದದೊಂದಿಗೆ ಗುಂಡು ಸಿಡಿಸಿತು. ಮೇಖಲೆ ಕಿಟಾರನೆ ಕಿರುಚಿದಳು. ಅವಳ ಕೂಗಿನಲ್ಲಿ ಅವನ ಕೂಗು ಬೆರೆತು ಹೋಯಿತು. ಬುಲೆಟ್ ತಗುಲಿದ ಸ್ಥಳದಲ್ಲಿ ಅವನ ಬೆನ್ನ ಮೇಲಿನ ಅಂಗಿ ಕೆಂಪು ರಕ್ತದಿಂದ ತೊಯ್ಯತೊಡಗಿತು. 909 ಮತ್ತೊಂದು ಸಲ ಟ್ರಿಗ್ಗರ್ ಒತ್ತಿದ. ಬುಲೆಟ್ ತಗುಲಿದೊಡನೆಯೇ ಜಾನಿವಾಕರ್ ಹಾರಿ, ಅತ್ತ ಬಿದ್ದ. ಆದರೆ ಈ ಸಲ ಅವನ ಪ್ರಯತ್ನ ಫಲಿಸಿತು. ನೆಲದ ಮೇಲೆ ಬಿದ್ದಿದ್ದ ರಿವಾಲ್ವರ್, ಅವನ ಕೈಗೆ ಸಿಕ್ಕಿತು. ಪೆಟ್ಟು ತಿಂದ ಹುಲಿಯಂತೆ ಅವನು ಹಿಂದಕ್ಕೆ ತಿರುಗಿ ಮತ್ತೊಂದು ಬಾರಿ ತನ್ನ ಕಡೆ ಗುರಿ ನೋಡುತ್ತಿದ್ದ 909ನ ಕಡೆ ಷೂಟ್ ಮಾಡಿದ.

ಜಾನಿವಾಕರ್ ರಿವಾಲ್ವರ್ ಪ್ರಯೋಗಿಸಿದರೆ ಎಂತಹ ಪರಿಸ್ಥಿತಿಯಲ್ಲೂ ಬುಲೆಟ್ ವೇಸ್ಟ್ ಆಗುವುದಿಲ್ಲ. ನೇರವಾಗಿ ಹೋಗಿ 909ನ ಹೃದಯದಲ್ಲಿಳಿಯಿತು. ಕೂಗಲು ಕೂಡ 909ಗೆ ಸಮಯ ಸಿಗಲಿಲ್ಲ. ತತ್ತರಿಸಿಕೊಂಡು ಕೆಳಗೆ ಬಿದ್ದ. ಕೆಳಗೆ ಬೀಳುವ ಮೊದಲೇ ಅವನ ಪ್ರಾಣ ಹೋಗಿತ್ತು.

ಆ ಮರುಕ್ಷಣ ಜಾನಿವಾಕರ್ ಲೋಟಸ್ ಕಡೆ ಗುರಿಯಿಟ್ಟು ಷೂಟ್ ಮಾಡಿದ. ಬುಲೆಟ್ ಅವನ ತಲೆಯನ್ನು ಬ್ಲಾಸ್ಟ್ ಮಾಡಿತು. ಕೆಳಗೆ ಬಿದ್ದ ರಿವಾಲ್ವರ್ ಎತ್ತಿಕೊಳ್ಳುತ್ತಿದ್ದವನು ಹಾಗೆಯೇ ಪಕ್ಕಕ್ಕೆ ಉರುಳಿ ಬಿದ್ದ. ಜಾನಿವಾಕರ್ ನೋವಿನಿಂದ ರಿವಾಲ್ವರ್ ಎಸೆದು, ಎದ್ದು ನಿಲ್ಲಲು ಪ್ರಯತ್ನಿಸಿದ. ಸಾಧ್ಯವಾಗಲಿಲ್ಲ. ರಕ್ತ ಧಾರಾಕಾರವಾಗಿ ಸುರಿಯುತ್ತಿತ್ತು. ಮೇಲೇಳಲು ಹೋದವನಿಗೆ ಕಾಲುಗಳು ಸಹಕರಿಸದೆ, ಕುಪ್ಪೆಯಂತೆ ಕುಸಿದುಬಿದ್ದ.

"ಜಾನಿ!" ಎಂದು ಕೂಗುತ್ತಾ, ಮೇಖಲೆ ಅವನ ಬಳಿ ಹೋಗಿ ಅವನನ್ನು ತನ್ನ ಮಡಿಲಲ್ಲಿ ಮಲಗಿಸಿಕೊಂಡಳು. ಜಾನಿವಾಕರ್ ಹಲ್ಲು ಕಚ್ಚಿ ನೋವು ಸಹಿಸುತ್ತಾ, ಅವಳನ್ನೇ ನೋಡಿದ. "ಟೆಲಿಫೋನ್, ಕ್ವಿಕ್ ಪೋಲೀಸರಿಗೆ ಟೆಲಿಫೋನ್ ಮಾಡು. ನನ್ನ ಪ್ರಾಣ ಹೋಗುವುದರೊಳಗೆ ಪೋಲೀಸರು ಬರಬೇಕು!

ಐ ಸೇ ಕ್ವಿಕ್!"

"ಆದರೆ.... ಮೊದಲು ನಿನಗೆ ಫಸ್ಟ್ ಏಡ್...."

"ಯೂ ಫೂಲ್....ಅಲ್ಲಿಯತನಕ ನಾನು ಬದುಕಿರುವುದಿಲ್ಲ. ಕಮಾನ್ ಗೆಟ್ ದಿ ಪೊಲೀಸ್. ನಿನ್ನ ಅಪಾರ್ಟ್‌ಮೆಂಟ್‌ನಲ್ಲಿ ನಾಲ್ಕು ಶವಗಳು ಸಿಕ್ಕರೆ ಪೊಲೀಸರಿಗೆ ನೀನೇನೆಂದು ಉತ್ತರ ಹೇಳ್ತೀಯ? ಪೊಲೀಸರಿಗೆ ನಾನು ಸ್ಟೇಟ್‌ಮೆಂಟ್ ಕೊಡ್ತೀನಿ. ಹಾಗೆ ನೋಡ್ತಿದೀಯಲ್ಲ? ಹೋಗು....ಬೇಗ!"

ಅವಳು ಉಕ್ಕಿಬರುತ್ತಿದ್ದ ದುಃಖವನ್ನು ತಡೆದುಕೊಳ್ಳುತ್ತಾ, ಒಂದು ಹೆಜ್ಜೆಯಲ್ಲಿ ಹೋಗಿ ಪೊಲೀಸರಿಗೆ ಫೋನ್ ಮಾಡಿ ಬಂದಳು. "ನೀನು ಏಳಬಲ್ಲೆಯಾ? ಬೆಡ್‌ರೂಮಿನಲ್ಲಿ ಹಾಸಿಗೆ ಮೇಲೆ ಮಲಗಿಸ್ತೀನಿ" ಎಂದಳು.

"ಬೇಕಿಲ್ಲ, ಇಲ್ಲಿಯೇ ಚೆನ್ನಾಗಿದೆ. ನಿನ್ನ ನಿನ್ನ ಮಡಿಲಲ್ಲಿ ನನ್ನ ತಲೆಯಿಡಲು ಬಿಡು! ಬೇಡ, ನೀನು ಹೋಗಬೇಡ. ಹತ್ತಿ ಖರ್ಚಾಗುವುದರ ಹೊರತು ರಕ್ತ ನಿಲ್ಲುವದಿಲ್ಲ. ಒಂದು ಬುಲೆಟ್ ಪ್ಯಾಂಕ್ರಿಯಾಸ್ ಅನ್ನು ರಪ್ಚರ್ ಮಾಡಿದೆಯೊ, ಲಿವರ್‌ನಲ್ಲಿ ಇಳಿದಿದೆಯೊ....! ಎರಡನೇ ಬುಲೆಟ್ ಶ್ವಾಸಕೋಶಗಳ ಹತ್ತಿರದಲ್ಲಿ ಎಲ್ಲಿಯೋ ತಗುಲಿದೆ. ನೋ–ನಾನು ಬದುಕುವ ಅವಕಾಶ ತುಂಬಾ ಕಡಿಮೆ. ನನಗಿರುವ ಸಮಯ ಕೂಡ ತುಂಬಾ ಕಡಿಮೆ! ನನ್ನನ್ನು ನಿನ್ನ ಮಡಿಲಲ್ಲಿ ತೆಗೆದುಕೋ! ಕನಿಷ್ಠ ನಿನ್ನ ಮಡಿಲಲ್ಲಾದರೂ ನನ್ನ ಪ್ರಾಣ ಹೋಗದೆ, ಪೊಲೀಸರು ಬರುವವರೆಗೆ ಕೊಂಚ ಹೊತ್ತು ಇರುತ್ತದೇನೋ!"

ಅವಳು ತಟಕ್ಕನೆ ಕೆಳಗೆ ಕುಳಿತುಕೊಂಡಳು, ಅವನ ತಲೆಯನ್ನು ಮತ್ತೆ ತನ್ನ ಮಡಿಲಲ್ಲಿಟ್ಟುಕೊಂಡಳು.. ಜಾನಿವಾಕರ್ ತೃಪ್ತಿಯಿಂದ ನೋಡಿದ. "ನಾನು ನಿನ್ನನ್ನು ಕೊಂಚ ಮೊದಲೇ ಭೇಟಿಯಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಬಹುಶಃ ನಿನ್ನನ್ನು ಕಾಲ್‌ಗರ್ಲ್ ಜೀವನದಿಂದ ಎಲ್ಲಿಗಾದರೂ ಕರೆದುಕೊಂಡು ಹೋಗಿರುತ್ತಿದ್ದೆನೇನೊ! ನಿನ್ನನ್ನು ಒಂದು ಮಾತು ಕೇಳಲೆ?"

"ಏನು?"

"ಒಂದು ವೇಳೆ.... ಒಂದು ವೇಳೆ ನಾನು ಸಾಯದೇ ಬದುಕಿದರೆ, ನೀನು ನನ್ನನ್ನು ಮದುವೆಯಾಗ್ತೀಯಾ?"

ಅವಳು ಬೆಚ್ಚಿಬಿದ್ದಳು. ಅವನು ನೋವಿನಲ್ಲೂ ನಕ್ಕ. "ಪರವಾಗಿಲ್ಲ. ಬಿಡು. ಮಾತು ಕೊಡುವುದರಿಂದ ನಿನ್ನದೇನೂ ಹೋಗುವುದಿಲ್ಲ. ನಾನು ಹೇಗೂ ಬದುಕುವುದಿಲ್ಲ. ನನ್ನ ತೃಪ್ತಿಗೋಸ್ಕರ ಮಾಡ್ಕೋತೀನಿಂತ ಹೇಳು!"

"ಆದರೆ....ನನಗೆ ಆ ಮಾತು ಕೊಡುವ ಅರ್ಹತೆ ಕೂಡ ಇಲ್ಲ!" ಅವಳು ವಿಷಾದದಿಂದ ನುಡಿದಳು.

"ಅದೇನು!"

"ನಾನು ಪೂರ್ತಿಯಾಗಿ ಮಲಿನವಾಗಿದ್ದೇನೆ. ನಾನು ಯಾರಿಗೂ ತಕ್ಕವಳಲ್ಲ."

"ಆಶ್ಚರ್ಯ, ನಿನ್ನಂತಹ ಧೈರ್ಯವುಳ್ಳ ಯುವತಿ ಹೇಳಬೇಕಾದ ಮಾತೆ ಅದು? ಹುಚ್ಚಿ, ಏನು ಮಲಿನವಾಗಿದ್ದು? ಎಷ್ಟು ದುಂಬಿಗಳು ಬಂದು ಮಕರಂದ ಹೀರಿಹೋದರೂ ಹೂವು ಮಲಿನವಾಗುತ್ತದೆಯೆ? ಮಾಲಿನ್ಯ ಶರೀರಕ್ಕೆ ಹೊರತು, ಮನಸ್ಸಿಗಲ್ಲವಲ್ಲ!"

"ನಿನ್ನ ಮಾತು ಕೇಳುತ್ತಿದ್ದರೆ ಮಾತು ಕೊಡಬೇಕೆನಿಸುತ್ತಿದೆ."

"ಪರವಾಗಿಲ್ಲ-ಕೊಟ್ಟುಬಿಡು."

"ಬೇಡ! ನಾನೊಂದು ಅಗ್ನಿಕುಂಡ. ನನ್ನನ್ನು ಅಪೇಕ್ಷಿಸಿ ಸಮೀಪಿಸಿದವರೆಲ್ಲರೂ ಸುಟ್ಟು ಭಸ್ಮವಾಗಿಬಿಟ್ಟಿದ್ದಾರೆ. ಇಲ್ಲಿಯವರೆಗೆ ಹಾಗೆಯೇ ನಡೆದಿದೆ. ನಮ್ಮ ತಾಯಿ, ತಂದೆ, ತಮ್ಮ, ದೇವ ಎಲ್ಲರೂ ನನ್ನನ್ನು ಪ್ರೀಮಿಸಿ, ನನಗೆ ದಕ್ಕದಂತೆ ಹೋಗಿದ್ದಾರೆ. ನನ್ನನ್ನು ಕೋರಿದವರೆಲ್ಲಾ ಭಸ್ಮವಾಗಿ ಹೋಗಬೇಕೆಂದು ಯಾವುದೋ ಶಾಪವಿದೆ."

ಜಾನಿವಾಕರ್ ನೋವು ತಡೆದುಕೊಂಡು ನಗಲು ಮತ್ತೊಂದು ಸಲ ಪ್ರಯತ್ನಿಸಿದ. "ಪರವಾಗಿಲ್ಲ, ಈ ಸಲ ಶಾಪವೇ ತಗಲುತ್ತದೋ, ನಿನ್ನನ್ನು ಬಯಸುವುದು ವರವಾಗಿ ಪರಿಣಮಿಸುತ್ತದೋ! ನಮ್ಮ ಕಥೆಯ ಮುಕ್ತಾಯವನ್ನು ಕಾಲಕ್ಕೆ ಬಿಡೋಣ! ನೀನು ನನಗೆ ಮಾತುಕೊಡು!"

ಅವಳು ಅಸ್ಪಷ್ಟವಾಗಿ ತಲೆಯಾಡಿಸಿ ಅವನ ಕೈಯಲ್ಲಿ ಕೈ ಹಾಕಿದಳು. ಅವನ ಕಣ್ಣುಗಳಲ್ಲಿ ಕಾಂತಿ ಮೂಡಿತು.

"ಹೇಗೆ ಭೇಟಿಯಾದೆವು! ಹೇಗೆ ಒಬ್ಬರನ್ನೊಬ್ಬರು ಅಪಾರ್ಥ ಮಾಡಿಕೊಂಡೆವು! ಈಗ ಹೇಗೆ ಒಂದಾದೆವು! ನೀನು ಆ ಮಾತು ಕೊಟ್ಟ ನಂತರ ನನಗೆ ಬದುಕಬೇಕೆನಿಸುತ್ತಿದೆ. ಆದರೆ ಈ ಹಾಳು ಪ್ರಾಣ ಈಗ ಕೃತಘ್ನತೆ ತೋರಿಸಿ ಹೊರಟುಹೋಗುತ್ತೇನೆನ್ನುತ್ತಿದೆ. ಕಣ್ಣಿಗೆ ಕತ್ತಲು ಕವಿಯುತ್ತಿದೆ."

ಅವಳು ಮಾತಾಡಲಿಲ್ಲ.

"ದೇವ ನನ್ನೊಂದಿಗೆ ಒಂದು ಮಾತು ಹೇಳಿದ. ಏನೆಂದು ಗೊತ್ತೆ? ನಾನು ನಿನ್ನನ್ನು ಪ್ರೇಮಿಸುತ್ತಿದ್ದೇನೆ ಎಂದಿದ್ದ. ನನ್ನನ್ನೂ ಪ್ರೇಮಿಸೆಂದ. ಆ ಕ್ಷಣದಲ್ಲಿ ನಾನು ನಿನ್ನನ್ನು ಪ್ರೇಮಿಸುತ್ತಿದ್ದೆನೆಂಬ ವಿಷಯ ನನಗರ್ಥವಾಯ್ತು." ಅವಳು ಮತ್ತೆ ಮಾತನಾಡಲಿಲ್ಲ. ಮೌನವಾಗಿದ್ದಳು.

"ನಾನು ನಿನಗೊಂದು ಬಹುಮಾನ ಕೊಡಬೇಕೆಂದುಕೊಂಡಿದ್ದೇನೆ.

ಏನದು ಹೇಳು ನೋಡೋಣ?"

ಅವಳು ಸಿಥಾನವಾಗಿ ನುಡಿದಳು, "ನನ್ನ ಪ್ರಾಣ ರಕ್ಷಿಸಿದೆ. ಅದಕ್ಕಿಂತಲೂ ಏನು ಬಹುಮಾನ ಬೇಕು?"

"ಹಾಗಲ್ಲ, ಆ ವಸ್ತು ನಿನ್ನ ಪ್ರಾಣದಂತೆ ಕಾಪಾಡಿಕೊಳ್ಳಬೇಕಾದುದು. ಏನದು ಹೇಳಬಲ್ಲೆಯಾ?"

"ನೀನೇ ಹೇಳು!"

ಅವನು ಕಷ್ಟದಿಂದ ಜೇಬಿನಲ್ಲಿ ಕೈ ಹಾಕಿ ಒಂದು ವಸ್ತುವನ್ನು ಹೊರತೆಗೆದ.

"ಇದೇ, ನಾನು ನಿನಗೆ ಬಹುಮಾನವಾಗಿ ಕೊಡಬೇಕೆಂದುಕೊಂಡ ವಸ್ತು!"

ಅವಳಿಗೆ ಆ ವಸ್ತುವನ್ನು ನೋಡುತ್ತಿರುವಂತೆಯೇ ಷಾಕ್ ತಗುಲಿದಂತಾಯ್ತು. ಕಣ್ಣರಳಿಸಿ ಹುಚ್ಚಳಂತೆ ನೋಡುತ್ತಿದ್ದುಬಿಟ್ಟಳು. ಅವನು ತಲೆಯಾಡಿಸಿ ಮುಂದುವರಿಸಿದ. "ಹೌದು. ಇದು ನಿಮ್ಮ ತಂದೆಯವರ ಮೆಡಲ್! ಒಬ್ಬ ಹಳೆಯ ವಸ್ತುಗಳನ್ನು ಮಾರುವವನ ಹತ್ತಿರ ನನಗೆ ಸಿಕ್ಕಿತು. ನೋಡಿದೊಡನೆಯೇ ಆಶ್ಚರ್ಯವಾಯಿತು. ಈ ದೇಶಕ್ಕೆ ವಿಶಿಷ್ಟವಾದ ಸೇವೆ ಮಾಡಿದ ಯಾವನೋ ವೀರ ಯೋಧ ಪಡೆದ ಮೆಡಲ್ ಎನ್ನಿಸಿ, ಉತ್ಸಾಹದಿಂದ ಕೊಂಡುಕೊಂಡು ನನ್ನ ಹತ್ತಿರ ಇಟ್ಟುಕೊಂಡೆ. ಅದರ ಮೇಲೆ ನಿನ್ನ ತಂದೆಯುವರ ಹೆಸರಿದೆ. ಅದಕ್ಕೇ ನೀನು ಅವರ ಹೆಸರು ಹೇಳಿದಾಗ ನನಗೆ ಆಶ್ಚರ್ಯವಾಯಿತು. ಆ ಮೆಡಲ್ ಆ ಹಳೇ ವಸ್ತು ಮಾರುವವನ ಹತ್ತಿರ ಹೇಗೆ ಹೋಯಿತೊ, ಗೊತ್ತಿಲ್ಲ."

ಅವಳು ಉಕ್ಕಿಬರುತ್ತಿದ್ದ ದುಃಖವನ್ನು ತಡೆದುಕೊಳ್ಳುತ್ತಾ ಆ ಮೆಡಲ್ ಅನ್ನು ತನ್ನ ಕೈಗೆತ್ತಿಕೊಂಡಳು. "ಎಷ್ಟು ವಿಚಿತ್ರ!" ಎಂದಳು.

"ಏನು ವಿಚಿತ್ರ?" ಅವನು ಕೇಳಿದ.

"ಈ ಮೆಡಲ್ ಮತ್ತೆ ನನ್ನ ಕೈಗೆ ಬಂದಿದ್ದು. ಏಳು ವರ್ಷಗಳ ಹಿಂದೆ ಸರಿಯಾಗಿ ನನ್ನ ಜೀವನ ನಾಶವಾದ ದಿನ. ಅದಕ್ಕೆ ಕೊಂಚ ಹೊತ್ತು ಮುಂಚೆ ನಾನೇ ನನ್ನ ಕೈಯಾರೆ ಕೋಪದಿಂದ ಈ ಮೆಡಲ್ ಅನ್ನು ಹೊರಗೆಸೆದಿದ್ದೆ. ಅದೇ ನಮ್ಮ ತಾಯಿಯ ಮರಣಕ್ಕೆ ಕಾರಣವಾಯಿತು. ನಾನು ಈ ಮೆಡಲ್ ಎಸೆದೊಡನೆಯೇ ನಮ್ಮ ತಾಯಿಗೆ ಹಿಸ್ಟೀರಿಯಾ ಬಂತು. ಅನಂತರ ಫಿಟ್ಸ್ ಬಂತು. ಈಗ ಈ ಮೆಡಲ್ ನೋಡುತ್ತಿದ್ದರೆ, ಅಂದಿನ ಘಟನೆ ಕಣ್ಣ ಮುಂದೆ ನಡೆಯುತ್ತಿರುವಂತಿದೆ."

"ಈ ಸಲ ಇದನ್ನು ಎಸೆಯಬೇಡ ಮೇಖಲೆ, ದೇಶಕ್ಕೋಸ್ಕರ ಸರ್ವಸ್ವವನ್ನೂ ತ್ಯಾಗ ಮಾಡಿದ ಒಬ್ಬ ವೀರ ಯೋಧನ ಸೇವೆಗೆ ಗುರುತಾಗಿ ಲಭಿಸಿದ ಮೆಡಲ್ ಇದು. ಈ ಮೆಡಲ್ ಮೂಲಕ ನಿಮ್ಮ ತಂದೆ ನಿನಗೆ ಜೀವನದಲ್ಲಿ ಮಾರ್ಗವನ್ನು ನಿರ್ದೇಶಿಸಬೇಕು. ಈ ಮೆಡಲ್ ನಿನಗೆ ಅನುಕ್ಷಣ ಸ್ಫೂರ್ತಿ ಕೊಡಬೇಕು. ನನ್ನನ್ನು ಕೇಳಿದರೆ, ಆ ದಿನ ನೀನು ಈ ಮೆಡಲ್ ಎಸೆದಿದ್ದರಿಂದಲೇ ನಿನ್ನ ದಾರಿ ತಪ್ಪಿತು ಎನಿಸುತ್ತಿದೆ.

"ಇದಕ್ಕೆ ಮುಂಚೆ ತಾರಕನಾಮನೊಂದಿಗೆ ನೀನೇನು ಹೇಳಿದೆ? ಸೇಡು ತೀರಿದೊಡನೆಯೇ ನಿನ್ನ ಜೀವನ ಶೂನ್ಯವಾಯಿತಂದೆಯಲ್ಲ! ಬದುಕಲು ಏನೂ ಉಳಿದಿಲ್ಲವೆಂದೆ. ಎಷ್ಟು ತಪ್ಪು! ಮನುಷ್ಯ ಕರ್ಮ ಮಾಡುತ್ತಲೇ ಇರುತ್ತಾನೆ. ಒಂದು ಕೆಲಸ ಪೂರ್ತಿಯಾದರೆ, ಮತ್ತೊಂದು ಕೆಲಸ ಮಾಡುತ್ತಾನೆ. ಕರ್ಮ ಜೀವಿಗೆ ಜೀವನ ಯಾವಾಗಲೂ ನಿಸ್ಸಾರವಾಗುವುದಿಲ್ಲ. ನಿನ್ನ ಜೀವನ ಈಗೊಂದು ಹೊಸ ತಿರುವಿನ ಹತ್ತಿರ ನಿಂತಿದೆ. ಇಲ್ಲಿಂದಲೇ ನಿನ್ನ ಹೊಸ ಜೀವನವನ್ನು ಪ್ರಾರಂಭಿಸು. ಈ ಮೆಡಲ್‌ನಿಂದಲೇ ಜೀವನಕ್ಕೆ ಸ್ಫೂರ್ತಿಯನ್ನು ಪಡೆ. ನಿನಗಿರುವ ಮೇಧಾಶಕ್ತಿಯನ್ನೆಲ್ಲಾ ಮಾನವ ಕಲ್ಯಾಣಕ್ಕೆ, ದೇಶದ ಸೌಭಾಗ್ಯಕ್ಕೆ ವಿನಿಯೋಗಿಸು. ಆಗ ಈ ದೇಶ ನಿಜವಾಗಿಯೂ ನಿನಗೆ ಋಣಿಯಾಗಿರುತ್ತದೆ. ನೀನು ಕನಸು ಕಂಡ ಮತ್ತೊಂದು ಪ್ರಪಂಚವನ್ನು ನಿರ್ಮಿಸಲು ಆಗಲೇ ಸಾಧ್ಯವಾಗುತ್ತದೆ. ನೀನಿದನ್ನು ಸಾಧಿಸಿದ ದಿನ ನಾನು ಸತ್ತುಹೋಗಿದ್ದರೂ, ನನ್ನ ಆತ್ಮ ನಿಜವಾಗಿ ಸಂತೋಷಪಡುತ್ತದೆ. ಈ ದೇಶಕ್ಕೆ ಹಾನಿಯುಂಟು ಮಾಡುವ ಉದ್ದೇಶದಿಂದ ಗೂಢಚಾರಿಯಾಗಿ ಇಲ್ಲಿಗೆ ಪ್ರವೇಶಿಸಿದವನು ಈ ದೇಶದ ಕಲ್ಯಾಣಕ್ಕೆ ಚರಮವಾಕ್ಯ ಹೇಳಿ, ಕೊನೇ ಶ್ವಾಸ ಎಳೆದ ತೃಪ್ತಿ ನನಗುಳಿಯುತ್ತದೆ."

ಅವನ ಮಾತುಗಳನ್ನು ಕೇಳುತ್ತಿದ್ದ ಅವಳ ಮನಸ್ಸು ಇದ್ದಕ್ಕಿದ್ದಂತೆ ಉದ್ವೇಗಪೂರಿತವಾಯಿತು. ಹೊಸ ಜೀವನ, ಹೊಸ ದಾರಿ, ತನ್ನನ್ನು ಆಹ್ವಾನಿಸುತ್ತಿರುವಂತೆ ಭಾಸವಾಯ್ತು. ಹಠಾತ್ತನೆ ಅವಳಿಗೆ ದೇವ ಬರೆದ ಒಂದು ಕವಿತೆ ನೆನಪಾಯ್ತು:

"ನಾನು–
ದಾರಿಯನ್ನು ಆತುರದಿಂದ ಹೆಣೆದುಕೊಂಡ ರೈಲು ಕಂಬಿ!
ಅಂಗಿಯನ್ನು ತೆರೆ ಚಾಪೆಯಾಗಿ ಕಟ್ಟೆ,
ಕಾಲಿನ ಗುರುತುಗಳಲ್ಲಿಂದ ಕರುಕಾಗಿ ತಲೆಯೆತ್ತುವ
ಉಕ್ಕಿನ ಹಡಗು!

ಕಾಲುಗಳ ಬೆಳಕಿನಲ್ಲಿಯೇ ದಾರಿಗಳ ಕತ್ತಲನ್ನು ಓಡಿಸುತ್ತೇನೆ!
ಕಾಲುಗಳನ್ನೇ ಹಡಗುಗಳಾಗಿ ಮಾಡಿಕೊಂಡು
ಸ್ವೇದ ಸಮುದ್ರವನ್ನು ಅಧಿಗಮಿಸುತ್ತೇನೆ!
ಮೈಲುಗಲ್ಲುಗಳನ್ನು ತಿಂದು ಬದುಕುತ್ತಾ
ಅಂತಿಮ ಶ್ವಾಸವನ್ನಾದರೂ
ಅಖಂಡ ವಿಜಯ ಪ್ರಾಂಗಣದಲ್ಲಿ ಬಿಟ್ಟುಹೋಗುತ್ತೇನೆ!"

ಸರಿಯಾಗಿ ಅದೇ ಸಮಯದಲ್ಲಿ ಪೋಲೀಸರು ಬರುತ್ತಿರುವ ಶಬ್ದ ಕೇಳಿಸಿತು.

ಅವಳು ಅವನನ್ನು ಎಚ್ಚರಿಕೆಯಿಂದ ನೆಲದ ಮೇಲೆ ಮಲಗಿಸಿ, ನಿಧಾನವಾಗಿ ಎದ್ದು ನಿಂತಳು.

ಹಾಗೆ ಎದ್ದು ನಿಂತ ಅವಳ ಕಣ್ಣುಗಳಲ್ಲಿ ಶತಕೋಟಿ ಕಾಂತಿರೇಖೆಗಳು ಹೊಳೆಯುತ್ತಿದ್ದವು.

ಕೈಯಲ್ಲಿದ್ದ ಮೆಡಲ್ ಮೇಲೆ ಅಪ್ರಯತ್ನವಾಗಿ ಅವಳ ಮುಷ್ಟಿ ಬಿಗಿದುಕೊಂಡಿತು.

ಬಿಗಿದುಕೊಂಡ ಆ ಮುಷ್ಟಿ, ಬರಲಿರುವ ಹೊಸ ಜೀವನಕ್ಕೆ ಮಾರ್ಗ ನಿರ್ದೇಶಿಸುತ್ತಿರುವಂತಿತ್ತು. ಇನ್ನು ಮೇಲೆ ಅವಳು ಸಮ್ಮೋಹನಾಸ್ತ್ರವಲ್ಲ, ಆಗ್ನೇಯಾಸ್ತ್ರ!

ಇಲ್ಲಿಗೆ ಒಂದು ಕಥೆ ಮುಕ್ತಾಯ.

ಹೊಸ ಕಥೆ ಪ್ರಾರಂಭ

ಓದುಗ ಮಹಾಶಯರೆ, ದಯವಿಟ್ಟು ಮಣಿ ಮೇಖಲೆಯನ್ನು ಮರೆತು ಬಿಡಬೇಡಿ.

ಜಾನಿವಾಕರ್‌ನನ್ನು ವಿಸ್ಮರಿಸಬೇಡಿ.

ಮತ್ತೆ "ದೇವ!!!!!"

←→

ಅಣ್ವಸ್ತ್ರ, ರಾಸಾಯನಿಕ ಅಸ್ತ್ರ, ಕ್ಷಿಪಣಿ,
ಬಾಂಬ್ ಮುಂತಾದ ಎಲ್ಲ ಅಸ್ತ್ರಗಳಿಗಿಂತ;

ಅಪಾರ ಸೌಂದರ್ಯರಾಶಿ ಒಂದೆಡೆ ಸೇರಿದಾಗ
ಉದ್ಭವಿಸುವ ಈ:

## ಸಮ್ಮೋಹನಾಸ್ತ್ರ

ಮಾತ್ರ ಜಗತ್ತನ್ನು ನಿಮಿಷಾರ್ಧದಲ್ಲಿ ನಡುಗಿಸುತ್ತದೆಯೆ!.